# ಅವಸ್ಥಾ

**ಡಾ.॥ ಸಾ.ಶಿ. ಮರುಳಯ್ಯ**

**ಪ್ರಕಾಶನ**

**ರಾಗಿಣಿ ಪ್ರತಿಷ್ಠಾನ, ವಿಜಯನಗರ ೨ನೇ ಹಂತ**

**ಬೆಂಗಳೂರು ೫೬೦ ೦೪೦**

# ಮುನ್ನುಡಿ

ಇಲ್ಲಿನ ಹಲವು ಲೇಖನಗಳು ತುಂಬಾ ಹಳೆಯವು. ಸುಮಾರು ಎರಡು ದಶಕಗಳೇ ಉರುಳಿವೆ. ಕಣ್ ತಪ್ಪಿಸಿಕೊಂಡು ಕೊಳೆಯುತ್ತಿದ್ದ ಇವುಗಳನ್ನು ಆಯ್ದು ಅಣಿಮಾಡಿದವರು ಸೋದರಿ ನಾಗರತ್ನಾ ಶಾಂತಮಲ್ಲಪ್ಪ ಇವರು. ಇವುಗಳಿಗೆ ಪುಸ್ತಕದ ರೂಪ ಕೊಟ್ಟವರು ಮಿತ್ರರಾದ ಡಾ॥ ಎಸ್. ವಿದ್ಯಾಶಂಕರ್ ಮತ್ತು ಬಿ.ಎಸ್. ಶಿವಶಂಕರ್ ಇವರುಗಳು. ಪ್ರಕಟಿಸಿದವರು ರಾಗಿಣಿ ಪ್ರತಿಷ್ಠಾನದ ಪದಾಧಿಕಾರಿಗಳು. ಮುದ್ರಿಸಿದವರು ಬೂದನೂರು ಪ್ರಿಂಟರ್ಸ್‌ರವರು.  ಇವರೆಲ್ಲರಿಗೂ ಋಣಿ.

'ರಾಗಿಣಿ'

ಬೆಂಗಳೂರು ಸಾ.ಶಿ. ಮರುಳಯ್ಯ

## ಪರಿವಿಡಿ


| | |
|---|---|
| ೧. ಕನಕದಾಸರ ಸಮಗ್ರ ಜೀವನ ಚರಿತ್ರೆ | ೧ |
| ೨. ಕನಕ ಸಾಹಿತ್ಯ: ಒಂದು ವಿವೇಚನೆ | ೨೨ |
| ೩. ಪಟ್ಟ ಮಹಾದೇವಿ ಶಾನ್ತಲದೇವಿ | ೩೫ |
| ೪. ಬಿಂದಲಿ: ಬೆಡಗು | ೪೦ |
| ೫. ಸಮ್ಯಕ್ತ ಕೌಮುದಿ: ಒಂದು ವಿವೇಚನೆ | ೪೮ |
| ೬. ಕನ್ನಡ ಕಥನಕವನ: ಸ್ಥಿತಿ–ಗತಿ | ೫೨ |
| ೭. ಕೆಲವರು ವಿಶ್ವಕರ್ಮ ವಚನಕಾರರು | ೫೭ |
| ೮. ಕೆಳದಿ ರಾಜಾಭ್ಯುದಯಮ್: ಐತಿಹಾಸಿಕ ವಿವೇಚನೆ | ೬೨ |
| ೯. ಕನ್ನಡ ಸಾಹಿತ್ಯದ ಒಲವು–ನಿಲವುಗಳು | ೭೦ |
| ೧೦.ಷಡಕ್ಷರದೇವನ ಕೃತಿಗಳಲ್ಲಿ ಗುಣದೋಷಗಳು | ೭೭ |
| ೧೧.ಕೃತಿ ನನ್ನ ದರ್ಶನಂ | ೧೦೮ |
| ೧೨. ಮೇದಾರ ಕೇತಯ್ಯನ ವಚನಗಳಲ್ಲಿ ಕಾವ್ಯಾಂಶ | ೧೧೭ |
| ೧೩ ಶ್ರೀ ಕುವೆಂಪು ಒಲವು–ನಿಲವು: ಭಾವಗೀತೆಗಳಲ್ಲಿ | ೧೨೧ |
| ೧೪. ಸುಬೋಧ ಸೌರಭ; ಜೀವನ ಚರಿತ್ರೆಗಳು | ೧೨೯ |
| ೧೫. ಬಣಕಾರರ ವಚನಗಳಲ್ಲಿ ಪಡೆನುಡಿಗಳು | ೧೩೪ |
| ೧೬. ಕಳೆದ ಎರಡು ವರ್ಷಗಳ ಸಾಹಿತ್ಯ ಸಮೀಕ್ಷೆ: ಕಾವ್ಯ | ೧೪೨ |
| ೧೭. ತರಾಸುರವರ ಎರಡು ಕಾದಂಬರಿಗಳು | ೧೫೩ |
| ೧೮. ವಚನಸಾಹಿತ್ಯದಲ್ಲಿ ಅದ್ವೈತ | ೧೫೮ |
| ೧೯. ಚಾರ್ವಾಕರು | ೧೬೫ |
| ೨೦. ಕನ್ನಡದಲ್ಲಿ ಸಣ್ಣಕತೆ ಮತ್ತು ಅದರ ಭವಿಷ್ಯ | ೧೭೦ |
| ೨೧. ಕಾನೂನು, ಭಾಷೆ ಮತ್ತು ನಾವು | ೧೭೪ |
| ೨೨. ವೇದ ಋಷಿ ದರ್ಶನ | ೧೭೭ |
| ೨೩. ಕನ್ನಡ ಕಿಂಕಿಣಿ | ೧೮೨ |
| ೨೪. ಪ್ರವಾಸ ಸಾಹಿತ್ಯ (Travalogue) | ೧೯೨ |
| ೨೫. ಕೆಲವರು ಕಿರು ವಚನಕಾರ್ತಿಯರು: ಒಂದು ಸಮೀಕ್ಷೆ | ೨೦೧ |

# ಕನಕದಾಸರ ಸಮಗ್ರ ಜೀವನ ಚರಿತ್ರೆ

॥ ೧ ॥

ಪರ್ಷಿಯಾ ದೇಶದ ಓರ್ವ ದಾರ್ಶನಿಕ ಕವಿ ಒಂದೆಡೆಯಲ್ಲಿ ಹೀಗೆ ಹೇಳಿದ್ದಾನೆ:

ಮಾ ಜಿ ಅಫಜ್ ಓ ಜಿ
ಅಂಜಾಮಿ ಜಹಾನ್–ಬಿ–ಖಬರ್–ಈಮಾ
ಅವ್ವಾಲ್–ಓ–ಚಿಖರೀ ಇನ್
ಕುಹ್ನಾ ಕಿತಾಬ್ ಉಷ್ತಾದ್ ಅಸ್ತ್

ಅಂದರೆ, ಮೊದಲ ಹಾಗೂ ಕಡೆಯ ಪುಟಗಳನ್ನು ಕಳೆದುಕೊಂಡ ಪುಸ್ತಕ ಈ ವಿಶ್ವ. ಈ ಪುಸ್ತಕ ಹೇಗೆ ಪ್ರಾರಂಭವಾಯಿತು ಗೊತ್ತಿಲ್ಲ; ಹೇಗೆ ಮುಕ್ತಾಯ ಆಗಿದೆ ತಿಳಿದಿಲ್ಲ. ಮಾನವ ತನಗೆ ಬುದ್ಧಿ ಬಂದಾಗಿನಿಂದಲೂ ಕಳೆದುಹೋದ ಆ ಪುಟಗಳನ್ನು ಹುಡುಕುತ್ತಿದ್ದಾನೆ. ಈ ಹುಡುಕುವಿಕೆ ಮತ್ತು ಅದರ ಪರಿಣಾಮ ಇವುಗಳನ್ನು ತತ್ವ ಜಿಜ್ಞಾಸೆ ಎಂದು ಕರೆಯುತ್ತಾರೆ. ಇಂಥದೇ ಅನ್ವೇಷಣೆ ಸಂತಕವಿ ಕನಕದಾಸರ ಬಗೆಗೆ ಇತ್ತೀಚಿನ ದಿನಗಳಲ್ಲಿ ನಡೆದಿದೆ. ಈ ಕಾರ್ಯ ಇನ್ನೂ ಮುಗಿದಿಲ್ಲ, ಮುಗಿಯುವಂತೆ ಕಾಣುವುದೂ ಇಲ್ಲ. ಹಾಗಂದುಕೊಂಡು ಕೈಚೆಲ್ಲಿ ಕೂರುವಂತೆಯೂ ಇಲ್ಲ. ಕನಕದಸರ ಜೀವನ ಚರಿತ್ರೆಯು ಮೊದಲ ಮತ್ತು ಕಡೆಯ ಪುಟಗಳನ್ನು ಕಳೆದುಕೊಂಡ ಸಂಪುಟವಾದರೂ ಅವರೇ ರಚಿಸಿದರೆನ್ನಲಾದ ಕೀರ್ತನೆಗಳು ಮತ್ತು ಕಾವ್ಯಗಳು ಎಂಬ ಪಠ್ಯಭಾಗ ಲಭ್ಯವಿದೆ. ಈ ಉಪಲಬಧಿಯನ್ನು ಹೆಕ್ಕಿ ನೋಡಿ, ಇಲ್ಲವೆ ಹಲವು ಸ್ಥಳೀಯ ಐತಿಹ್ಯಗಳನ್ನು ಆಧ ರಿಸಿ, ಇಲ್ಲವೆ ಕೆಲವು ಉಲ್ಲೇಖ ಉದ್ಧರಣೆಗಳನ್ನು ಮಾನ್ಯಮಾಡಿ, ಕಳೆದುಹೋಗಿರುವ ಪುಟಗಳನ್ನು ಪುನಾರಚಿಸಬಹುದಾಗಿದೆ. ಪುಸ್ತಕ ರಚನೆ ಆ ಸಂಬಂಧದ ಅಧಿಕೃತ ಮಾಹಿತಿ ದೊರೆಯುವವರೆಗೆ ಮಾನ್ಯ. ಜನಹೇಳಿಕೆಗೆ ಬೆಲೆ ಕೊಡುವುದಾದರೆ ಕನಕ ಬಾಡ ನಾಡಿನ ದಣ್ಣಾಯಕ. ತಂದೆ ಬೀರಪ್ಪ, ತಾಯಿ ಬಚ್ಚಮ್ಮ. ತನ್ನು ಹುಟ್ಟು ಹೆಸರು ಕನಕದಾಸನೆಂದಲ್ಲ, ತಿಮ್ಮಪ್ಪನೆಂದು. ತಿಮ್ಮಪ್ಪ ಕನಕದಾಸನಾದದ್ದಕ್ಕೆ ಭೂಗರ್ಭದಲ್ಲಿದ್ದ ನಿಧಿ ದೊರೆತುದು ಕಾರಣವೆಂದು ಐತಿಹ್ಯ ಹೇಳಿದರೂ ತಿರುಪತಿ ತಿಮ್ಮಪ್ಪನಿಗೆ ಕನಕದಾಸನೆಂಬ ಪರ್ಯಾಯ ನಾಮವೂ ಇದೆ ಎಂಬುದನ್ನು ಮರೆಯುವಂತಿಲ್ಲ. ಏನೇ ಇರಲಿ ಭೂತಿಯೊಂದು ವಿಭೂತಿ ತ್ವವನ್ನು ಪಡೆದುದು ಇಲ್ಲಿನ ವೈಶಿಷ್ಟ್ಯ. ಭೂತಿ ಎಂದರೆ ಸಹಜ ಸ್ಥಿತಿಯಲ್ಲಿ ಇರುವುದು, ವಿಭೂತಿ ಎಂದರೆ ವಿಶೇಷ ರೀತಿಯಲ್ಲಿ ಆದದ್ದು. ಕಲ್ಲು ಭೂತಿ, ಅದರಿಂದಾದ ಕಲಾಕೃತಿ ವಿಭೂತಿ; ಮಣ್ಣು ಭೂತಿ. ಅದರಿಂದ ಮಾಡಿದ ಗಣೇಶ ಪ್ರತಿಮೆ ವಿಭೂತಿ. ಅಂತೆಯೇ ಗದಾಧರ ಭೂತಿಯಾದರೆ, ಶ್ರೀ ರಾಮಕೃಷ್ಣ ಪರಮಹಂಸ ವಿಭೂತಿ; ನರೇಂದ್ರ ಭೂತಿಯಾದರೆ, ಶ್ರೀ ವಿವೇಕಾನಂದ ವಿಭೂತಿ; ತಿಮ್ಮಪ್ಪ ಭೂತಿಯಾದರೆ, ಕನಕದಾಸ ಶ್ರೀಮದ್ವಿಭೂತಿ! ಈ ವಿಭೂತಿ ಪುರುಷನು ಸಂತನಾಗುವ ಮುನ್ನ ದಣ್ಣಾಯಕನಾಗಿದ್ದ. ಆತನದೇ ಒಂದುಕ್ತಿ ಹೇಳುತ್ತದೆ.

ದೊರೆತನವ ಬಿಡಿಸಿ ಸುಸ್ಥಿರ ಮಾರ್ಗ ತೋರಿಸಿದೆ
ನರಮಾತ್ರದವನೆನದೆ ಹರಿಯೆ!

ಎಂದು, ಈ 'ದೊರೆತನ' ಬೇರಾವುದೂ ಅಲ್ಲ. ವಿಜಯನಗರ ಸಾಮ್ರಾಜ್ಯದ ಸಾಮಂತಾಧಿಕಾರ. ಬಾಡವು ವಿಜಯನಗರ ಚಕ್ರಾಧಿ ಪತ್ಯದ ಉತ್ತರ ಗಡಿನಾಡು: ಮೇಲಿಂದ ಮೇಲೆ ದಾಳಿ ಬರುತ್ತಿದ್ದ ಷಾಹೀ ರಾಜ್ಯವೊಂದರ ಮೇರೆ. ಸಾಮ್ರಾಜ್ಯದ ಕೀರ್ತಿಗೆ ಕಳಂಕ ತರದಂತಹ ಸಾಹಸಾಭರಣನಿದ್ದಿರಬೇಕು ಆತ. ಆದ್ದರಿಂದಲೇ ಹೇಳಿಕೊಂಡಿದ್ದಾನೆ:

ಕನಕ ದಳದಲಿ ಬಂದು ಕಲೆತನೆಂದರೆ ಪೌಜು
ಕನಕು ಮನಕಾಗುವುದು ಹರಿಯೆ
ಧುರದಲ್ಲಿ ನಾಲ್ಕು ಸಾವಿರನಿಲ್ಲಲದನು ದೆಸೆಗೆ
ಪರಿಹರಿಸುತಿಹೆ ಎಲೊ ಹರಿಯೆ
ಪರಬಲವ ನೋಡಿದರೆ ಉರಿದು ಬೀಳುವ ಮನ
ಸೆರೆ ಹಾಕಿ ನಿಲ್ಲಿಸಿದೆಯೊ ಹರಿಯೆ

ಮೊನೆಗಾರ ಧಣಿಯೆಂಬ ಧೈರ್ಯವ ಬಿಡಿಸಿ ಸೇವ
ಕನ ಮಾಡಿದೆ ಹರಿಯೆ![೨]

ಎಂದು.

ಈ ಮೊನೆಗಾರ ಧಣಿ ಸವಾರಿ ಹೊರಟರೆ ಛತ್ರ ಭೇರಿ ನಗಾರಿಗಳು ಭೋರೆಂದು ಪೊಂಗಹಳೆ ಮೊರೆಯುತ್ತಿದ್ದುವಂತೆ! ಇವನ ಶಸ್ತ್ರ ಶಾಸ್ತ್ರಾಭ್ಯಾಸಗಳೆರಡೂ ಆನೆಗೊಂದಿಯಲ್ಲಿ ನಡೆದಿದ್ದಿರಬೇಕು. ಕ್ಷತ್ರಿಯೋಚಿತ ಶಸ್ತ್ರಾಭ್ಯಾಸದೆಡೆ ಗೊತ್ತಿಲ್ಲವಾದರೂ, ಶಾಸ್ತ್ರಾಧ್ಯಯನದ ನೆಲೆ ಗೊತ್ತಿದೆ. ಅದು ಶ್ರೀ ವೈಷ್ಣವ ಮಹಾಮತಸ್ಥಾಪನಾಚಾರ್ಯ ಶ್ರೀ ರಾಮಾನುಜ್ ಶಿಷ್ಯ ಪರಂಪರೆಯ ಶ್ರೀ ತಾತಾಚಾರ್ಯರ ಶ್ರೀಮಠವಿದೆ ಆನೆಗೊಂದಿಯಲ್ಲಿ. ತಾತಾಚಾರ್ಯರು ಕನ್ನಡ ರಮಾರಮಣ ಶ್ರೀಕೃಷ್ಣದೇವರಾಯನ ಆಸ್ಥಾನ ದಲ್ಲಿದ್ದರೆಂಬುದಕ್ಕೆ ಸಾಕಷ್ಟು ಸಾಕ್ಷಾಧಾರಗಳಿವೆ. ಆದರೆ ಕನಕದಾಸನಿಗೆ ದಾಸದೀಕ್ಷೆ ತೊರೆತದ್ದು, ಅವನ ದಾಸ ಜೀವನ ಸಾಗಿದ್ದು ಅದೇ ವಿಜಯನಗರ ಶ್ರೀ ಮಠದಲ್ಲಿ. ದ್ವೈತಮತ ಸಂಸ್ಥಾಪಕರಾದ ಮಧ್ವಾಚಾರ್ಯರ ಶಿಷ್ಯ ಪ್ರಶಿಷ್ಯ ಪರಂಪರೆಯ ನರಹರಿತೀರ್ಥ, ಶ್ರೀ ಪಾದರಾಜ, ಮತ್ತು ಅವನ ಶಿಷ್ಯ ವ್ಯಾಸರಾಯ. ಈ ವ್ಯಾಸರಾಯರು 'ಶೇಷಾಶೇಷ ಪ್ರಹ್ಲಾದನ ಅವತಾರವೆಂದು ಪ್ರಸಿದ್ಧನಾಗಿ ದ್ದಾರೆ. ವಾದಿರಾಜ, ವಿಜಯೀಂದ್ರ, ಪುರಂದರದಾಸ, ವೈಕುಂಠದಾಸ ಈ ಮೊದಲಾದ ಅವರ ಶಿಷ್ಯರಲ್ಲಿ ಕನಕದಾಸನೂ ಒಬ್ಬ. ಆದ್ದರಿಂದಲೇ ಆತ ಪರಮ ಪುರುಷೋತ್ತಮನ ಕೃಪಾಪಾತ್ರನಾದ ಪ್ರಹ್ಲಾದಕುಮಾರನನ್ನು ಕುರಿತ ಒಂದು ಪ್ರಶಂಸಾ ಪದ್ಯದಲ್ಲಿ– 'ಕೂಸನು ಕಂಡೀರಾ ಸುಪ್ರ!ಹ್ಲಾದನ ಕಮಡೀರಾ ನಮ್ಮ! ಕೂಸನು ಕಂಡೀರಾ' ಎಂಬ ಪಲ್ಲವಿ ಹಾಡಿ, ಎರಡು ಚರಣಗಳಲ್ಲಿ ಅವನು ಹಿರಣ್ಯಕಶುಪಿವಿನ ಮಗನಾಗಿ ಜನಿಸಿ, ನರಸಿಂಹನನ್ನು ಕಂಬದಲ್ಲಿ ತೋರಿದ ಮಹಾತ್ಮೆಯನ್ನು ಹೊಗಳಿ, ಮೂರನೆಯ ಹಾಗೂ ಕಡೆಯ ಚರಣದಲ್ಲಿ–

ಪ್ರಸಿದ್ಧ ವ್ಯಾಸರಾಯರೆಂಬ ಕೂಸು
ಪ್ರವೀಣ ವಿದ್ಯೆಯೊಳ್ ಎನಿಸಿದ ಕೂಸು
ಪ್ರಹ್ಲಾದನೆಂಬ ಆಹ್ಲಾದದ ಕೂಸು
ಪ್ರಸನ್ನ ಕಾಗಿನೆಲೆಯಾದಿ ಕೇಶವನ ಕೂಸು।

ಎಂದು ಸ್ಪಷ್ಟವಾಗಿ ತನ್ನ ಗುರು ವ್ಯಾಸರಾಯರನ್ನು ಪ್ರಹ್ಲಾದನೊಡನೆ ಸಮೀಕರಿಸಿದ್ದಾನೆ; ತನ್ನ ಗುರುಭಕ್ತಿಯನ್ನು ಆ ಮೂಲಕ ಪ್ರಕಟಿಸಿ ಧನ್ಯನಾಗಿದ್ದಾನೆ. ವ್ಯಾಸರಾಯರದು ತುಂಬಾ ಉದಾತ್ತ ವ್ಯಕ್ತಿತ್ವ. ಅದಕ್ಕೆ ಕೀಳು–ಕಿಲುಬು ತಿಳಿದಿರಲಿಲ್ಲ. ಸ್ವಾರ್ಥ–ಸಂಕುಚಿತತೆಗಳು ಗೊತ್ತಿರಲಿಲ್ಲ. ಜಾತಿಗಿಂತಲೂ ಮಿಗಿಲಾದ ಜ್ಯೋತಿ ಒಂದಿದೆ. ಆ ಜ್ಯೋತಿ ಇದ್ದೆಡೆಯಲ್ಲಿ ದೈವತ್ವವಿದೆ ಎಂದು ಎಲ್ಲರಲ್ಲೂ ದೇವನನ್ನು ಕಂಡ, ಎಲ್ಲೆಡೆಯೂ ಮಂಗಳವನ್ನೇ ಗುರುತಿಸಿದ ಋಜು ಬುದ್ಧಿ ಅವರದು. ತಮ್ಮ ಶ್ರೀ ಮಠದಲ್ಲಿ ಆಗಾಗ ನಡೆಯುತ್ತಿದ್ದ ವ್ಯಾಸಕೂಟ ದಾಸಕೂಟಗಳ ತಿಕ್ಕಾಟದಲ್ಲಿ ವ್ಯಾರಾಯರು ತುಂಬು ಎಚ್ಚರಿಕೆಯಿಂದ ತಮ್ಮ ಪಾತ್ರವನ್ನು ನಿರ್ವಹಿಸುತ್ತಿದ್ದುದುಂಟು.

ಒಂದು ನಿದರ್ಶನ:

ಕನಕದಾಸನ ಮೇಲೆ ದಯಮಾಡಲು ವ್ಯಾಸ।
ಮುನಿ ಮಠದವರೆಲ್ಲ ದೂರಿಕೊಂಬುವರೊ ॥ಪ॥

ತೀರ್ಥವನು ಕೊಡುವಾಗ ಕನಕನ್ನ ಕರೆಯೆನಲು
ಧೂರ್ತರಾಗಿದ್ದ ವಿದ್ವಾಂಸರೆಲ್ಲ ॥
ಸಾರ್ಥಕವಾಯ್ತು ಇವರ ಸಂನ್ಯಾಸಿತನವೆಲ್ಲ
ಪೂರ್ತ್ಯಾಗಲೆಂತೆನಲು ಯತಿಯು ನಗುತ್ತಿದ್ದನು ॥೧॥

ಮರುದಿನ ಅವರವರ ಪರೀಕ್ಷಿಸಬೇಕೆಂದು
ಕರೆದು ವಿದ್ವಾಂಸರಾ ಕನಕ ಸಹಿತ
ಕರದಲ್ಲಿ ಕದಳಿಯ ಫಲಗಳನೆ ಕೊಟ್ಟು ಯಾ
ರಿರದ ಸ್ಥಳದಲ್ಲಿ ಮೆದ್ದು ಬನ್ನಿರೆನಲು ॥೨॥

ಊರ ಹೊರಗೆ ಹೋಗಿ ಬೇರೆ ಬೇರೆ ಕುಳಿತು
ತೋರದಲೆ ಎಲ್ಲರೂ ಮೆದ್ದು ಬರಲು
ತೋರಲಿಲ್ಲವು ಎನಗೆ ಏಕಾಂತಸ್ಥಳವೆನುತ
ಸಾರಿ ಕದಳೀ ಫಲವ ತಂದು ಮುಂದಿಟ್ಟ ॥೩॥

ಡಿಂಭದೊಳು ಶಬ್ದ ವಾಗಾದಿ ಶ್ರೋತ್ರಗಳಲ್ಲಿ
ಇಂಬಾಗಿ ತತ್ವೇಶ್ವರೆಲ್ಲ ತುಂಬಿಹರೊ
ತಿಂಬುವುದು ಹೇಗೆನುತ ವ್ಯಾಸರಾಯರ ಕೇಳೆ
ಸಂಭ್ರಮದಲವರೆಲ್ಲ ಕುಳಿತು ಕೇಳಿದರು ॥೪॥

ಆಗ ವ್ಯಾಸರಾಯರು

ನೋಡಿದಿರೆ ಈ ಕನಕನಾಡುವ ಮಾತುಗಳ
ಮೂಢಜನರರಿಯಬಲ್ಲರೆ ಮಹಿಮೆಯ
ನಾಡಾಡಿಯಂತೆಯೇ ಮಾಢಿಬಿಟ್ಟರು ಇವಗೆ
ನಾಡೆಲ್ಲ ಹುಡುಕಿದರು ಈಡಾರ ಕಾಣೆ ॥೫॥

ಎಂದು ಮುಕ್ತಕಂಠದಿಂದ ಹೊಗಳುತ್ತಾರೆ[೪]. ಪ್ರತಿಭೆಯನ್ನು ಗುರುತಿಸುವ ಗೌರವಿಸುವ ದೊಡ್ಡಗುಣ ಅವರದು. ಪುರಂದರದಾಸರ ಈ ಹಾಡಿನ ಆಂತರ್ಯದಲ್ಲಿ ಅಡಗಿರುವ ಅಂಶ ಕನಕದಾಸನ ಪವಾಡ ಅಲ್ಲ, ಅವನ ಮೇಧಾವಿತನವೂ ಅಲ್ಲ; ಅಲ್ಲಿ ಸುವೇದ್ಯವಾಗುವುದು ಕನಕದರ್ಶನ! ದೇವನು ಎಲ್ಲೆಡೆಯೂ ಇದ್ದಾನೆ, ಅವನು ಅಣುವಿನಲ್ಲಿ ಅಣುವಾಗಿದ್ದಾನೆ, ಘನದಲ್ಲಿ ಘನವಾಗಿದ್ದಾನೆ; ನೀರಿನಲ್ಲಿ ತಂಪಾಗಿದ್ದಾನೆ, ಗಾಳಿಯಲ್ಲಿ ವೇಗವಾಗಿದ್ದಾನೆ, ಸೂರ್ಯನಲ್ಲಿ ತೇಜಸ್ಸಾಗಿದ್ದಾನೆ, ಚಂದ್ರನಲ್ಲಿ ಕಾಂತಿಯಾಗಿದ್ದಾನೆ, ನಕ್ಷತ್ರದಲ್ಲಿ ನಗೆಯಾಗಿದ್ದಾನೆ, ಹಕ್ಕಿಯ ಕಂಠದಲ್ಲಿ ಹಾಡಾಗಿದ್ದಾನೆ, ಹೂವಿನಲ್ಲಿ ಪರಿಮಳವಾಗಿ ದ್ದಾನೆ, ಕಲ್ಲಿನಲ್ಲಿ ಘನೀಭೂತವಾಗಿ ಕುಳಿತಿದ್ದಾನೆ. ಎಲ್ಲ ಸಚರಾಚರ ಚೇತನಗಳಲ್ಲೂ ಸುಪ್ತಶಕ್ತಿಯಾಗಿದ್ದು, ಗುಪ್ತಗಾಮಿಯಾಗಿ ಸದಾ ಸ್ಪಂದಿಸುತ್ತಾ ವಿನೂತನ ಸೃಷ್ಟಿಯ ಕ್ರತುಶಕ್ತಿ ತಾನಾಗಿದ್ದಾನೆ, ಆ ಜಗತ್‌ಶಕ್ತಿ, ಆದಿಶಕ್ತಿ ಪರಾತ್ಪರ ಶಕ್ತಿಯ ಅಸ್ತಿತ್ವವು ವ್ಯಾಸ ಕೂಟದ ಜಡರಿಗೆ ತಾತ್ವಿಕ ತಿಳಿವಾಗಿದ್ದರೆ, ಕನಕದಾಸನಿಗೆ ಅದೊಂದು ಸಹಜಾ ಶುಭವವೇ ಆಗಿದ್ದಿತು. ಈ ಹಿರಿಮೆಯನ್ನು ಜಗಜ್ಜಾಹೀರು ಮಾಡಿದ ಕೀರ್ತಿ ವ್ಯಾಸರಾಯರದು. ಅವರ ಶ್ರೀಮಠದಲ್ಲಿ ಸಂಸ್ಕೃತವನ್ನಾಸ್ರಯಿಸಿದ ವ್ಯಾಸಕೂಟದವರೂ, ಕನ್ನಡ ವನ್ನು ದುಡಿಸಿಕೊಂಡ ದಾಸಕೂಟದವರೂ ಇದ್ದರಷ್ಟೆ. ಅವರು ಯಾರು ಏನೇ ಆಗಿರಲಿ; ವ್ಯಾಸರಾಯರ ದೃಷ್ಟಿಯಲ್ಲಿ ಪುರಂದರ ದಾಸ ಕನ್ನಡದ ಹೇಮಕೂಟ; ಕನಕದಾಸ ಆ ಹೇಮಕೂಟದ ನೆತ್ತಿಯ ಮೇಲೆ ಹಾರಾಡುವ ಕನ್ನಡದ ಬಾವುಟ![೫]

॥ ೨ ॥

ಮೇಲೆ ಉದ್ಧರಿಸಿದ ದಾಸವರೇಣ್ಯರ ಧ್ವನಿಪೂರ್ಣ, ಅರ್ಥಪೂರ್ಣ ಕೀರ್ತನ ಕನಕದಾಸನ ಕಾಲನಿರ್ಧಾರಕ್ಕೆ ತುಂಬಾ ಸಹಕಾರಿಯಾಗಿದೆ. ವ್ಯಾಸರಾಯ, ಪುರಂದರದಾಸ ಮತ್ತು ಕನಕದಾಸ ಇವರು ಸಮಕಾಲೀನರು. ಈ ಮೂವರೂ ಜಗತ್ಪಸಿದ್ಧ ಚಕ್ರವರ್ತಿಗಳಲ್ಲೊಬ್ಬನಾದ ವಿಜಯನಗರದ ಶ್ರೀಕೃಷ್ಣದೇವರಾಯನ (ಕ್ರಿ.ಶ. ೧೫೦೯–೧೫೨೯) ವೈಭವದ ದಿನಗಳಲ್ಲಿ ಬದುಕು ಮಾಡಿದವರು. ಅವನ ಆಸ್ಥಾನದ ಭಕ್ತಿ, ಗೌರವ, ಮನ್ನಣೆಗಳಿಗೆ ಪಾತ್ರರಾಗಿದ್ದವರು, ವ್ಯಸರಾಯರು ಅಂದು ಇದ್ದುದಕ್ಕೆ ಅವರಿಗೆ ಸಂಬಂಧಿಸಿದ ಅಂದರೆ ಆಳುವ ಪ್ರಭುವಿನಿಂದ ಅವರಿಗೆ ವ್ಯಾಸ ಸಮುದ್ರವನ್ನು ನಿರ್ಮಿಸುವುದಕ್ಕಾಗಿ ದೊರೆತ ಉಂಬಳಿ ವಿಷಯ ಹೊತ್ತ ೧೫೨೬ನೆಯ ಇಸವಿಯದೆಂದು ಹೇಳಲಾದ ಶಿವಮೊಗ್ಗೆಯ ಒಂದು ಶಾಸನ ಸಾಕ್ಷಿ ಹೇಳೂತ್ತದೆ[೬]. ಕನಕದಾಸನು ವಿಜ ಯನಗರದಲ್ಲಿದ್ದುದಕ್ಕೆ, ಅವನು ಶ್ರೀಕೃಷ್ಣದೇವರಾಯನ ಅಭಿಮಾನೀ ಆಶ್ರಿತನಾಗಿದ್ದುದಕ್ಕೆ, ಶ್ರೀಕೃಷ್ಣದೇವರಾಯನನ್ನೂ, ಅವನ ಆಸ್ಥಾನ ವೈಭವವನ್ನೂ ಕಂಡುಂಡುದಕ್ಕೆ ಮೋಹನ ತರಂಗಿಣೀಯ ದ್ವಾರಕಾಪುರ ವರ್ಣನ ಹಾಗೂ ಶ್ರೀಕೃಷ್ಣನ ಗುಣ ಸಂಕೀರ್ತನ ಗಳು ಪುರಾವೆಯನ್ನೊದಗಿಸುತ್ತವೆ. 'ದಾಸರೆಂದರೆ ಪುರಂದರ ದಾಸರಯ್ಯ' ಎಂಬ ವ್ಯಾಸರಾಯರ ಪ್ರಶಂಸೆಗೆ ಪುರಂದರ ದಾಸರು ಪಾತ್ರಾಗಿದ್ದಾರಷ್ಟೆ ಹಾಗೆ ಶಿಷ್ಯರೆಂದರೆ ಕನಕದಾಸರಯ್ಯಾ ಎಂಬ ಪ್ರಶಸ್ತಿಗೆ ಕನಕದಾಸರು ಪಾತ್ರರಾಗಿದ್ದರೆ ಅತಿಶಯೋಕ್ತಿ ಯಲ್ಲ. ಕನಕಣ್ಣನ ಗುಣಗಳನ್ನು ಗಣಿಸಿದ

ಆ ಮಹಾತ್ಮರು ಅದನ್ನು ಪ್ರಕಟಪಡಿಸಲು ಅನೇಕ ಯತ್ನಗಳನ್ನು ಮಾಡಿದ್ದಾರೆ. ಅವುಗ ಳಲ್ಲಿ ಮೇಲೆ ಹಾಡಿದ ಅವರದೇ ರಚನೆ ಪ್ರತ್ಯಕ್ಷ ಸಾಕ್ಷಿಯಾಗಿದೆ. ಅದಕ್ಕೆ ಪ್ರತಿಯಾಗಿ ಕನಕದಾಸರೂ ಸಹ ಆನಂದತೀರ್ಥ ಮಧ್ವಾ ಚಾರ್ಯರನ್ನೂ ವ್ಯಾಸರಾಯರಾಯರನ್ನೂ ತುಂಬು ಹೃದಯದಿಂದ ಸ್ಮರಿಸಿದ್ದಾರೆ.[೭] ಕನಕದಾಸರೂ, ಪುರಂದರದಾಸರೂ ವ್ಯಾಸ ರಾಯರ ಸಮಕಾಲೀನರೂ ಶಿಷ್ಯರೂ ಆಗಿದ್ದುದಕ್ಕೆ ಸಾಕಷ್ಟು ಅನ್ಯಾಧಾರಗಳಿವೆ; ಪ್ರತೀತಿಯೂ ಇದೆ; ಇರಲಿ. ಅಂತೆಯೇ ಕನಕ ದಾಸನ ಮೋಹನ ತರಂಗಿಣಿಯ ಒಂದು ಪದ್ಯ ಹೀಗೆ ಹೇಳುತ್ತದೆ:

ಉರಗಾಲಯದ ಪೆಸರ್ವಡೆದನ ಮತ್ಸ್ಯೋ। ದರಜಾತೆಯಾತ್ಮ ಸಂಭವನ
ವರಪುರಾಣಂಗಳ ಕನ್ನಡಿಸಿದ ಕವೀ। ಶ್ವರರ ಕೊಂಡಾಡುವೆ ಮುದದಿ ॥

(–ಮೋಹನ ತರಂಗಿಣಿ ೧–೧೭)

ಅಂದರೆ,

ಹುತ್ತದ ಹೆಸರು ಪಡೆದ ವಾಲ್ಮೀಕಿಯ ಮತ್ತು ಮತ್ಸ್ಯಗಂಧಿಯ ಮಗನಾದ ವ್ಯಾಸನು ಪ್ರಸಿದ್ಧ ಪುರಾಣಗಳನ್ನು ಕನ್ನಡಿಸಿದ ಕವಿ ಶ್ರೇಷ್ಠರಾದ ಕುಮಾರ ವಾಲ್ಮೀಕಿ (ಕ್ರಿ.ಶ. ೧೫೦೦) ಮತ್ತು ಕುಮಾರವ್ಯಾಸ (ಕ್ರಿ.ಶ. ೧೪೩೦) ಇವರನ್ನು ಆತ್ಮಾನಂದದಿಂದ ಕೊಂಡಾಡುತ್ತೇನೆ ಎಂದಿದ್ದಾನೆ. ಇದರಿಂದ ಕನಕ ಈ ಕವಿದ್ವಯರಿಗಿಂತ ಈಚಿನವನು. ಮತ್ತು ಕಾಖಂಡಿಕಿ ಮಹೀಪತಿರಾಯನ ಮಗ ಕಾಖಂಸಿಕಿ ಕೃಷ್ಣರಾಯನು ಹರಿಪದ ವನಜ ಮಧುಪರಾದ ಶ್ರೀಪಾದರೇ ಮೊದಲಾದ ಅನೇಕ ಜನ ದಾಸಪುಂಗವರುಗ ಳನ್ನು ಅನುದಿನೂ ಸ್ಮರಿಸುತ್ತೇನೆಂದು ಹೇಳುತ್ತಾ, 'ನೆರೆ ತಾಳಪಾಕರ ಸಂತಮತಿ ಕನಕರ ಹರಿಭಕ್ತಿ ಉಲ್ಲಾಸಕರ' ಎಂದು ಏಡುಕುಂ ಡಲವಾಸ ತಿರುಪತಿಯ ವೆಂಟರಮಣನನ್ನು ಅಂಕಿತವಾಗುಳ್ಳ ಪ್ರಸಿದ್ದ ತೆಲಗು ಕೀರ್ತನಕಾರ, ವಾಗ್ಗೇಯನಿಧಿ ತಾಳಪಾಕ ಅನ್ನಮಾ ರ್ಯನನ್ನೂ, ಕಾಗಿನೆಲೆ ಆದಿಕೇಶವನ ಅಂಕಿತವುಳ್ಳ ಕನ್ನಡದ ಕವಿ–ಕೀರ್ತನಾಚಾರ್ಯ ಕನಕದಾಸನನ್ನೂ ಜೊತೆ ಜೊತೆಯ ಲ್ಲಿಯೇ ಕೊಂಡಾಡಿದ್ದಾನೆ.[೮] ಪುರಂದರ ದಾಸರು ವಿಶ್ವವಿಖ್ಯಾತ ಸಂಗೀತಗಾರ ತ್ಯಾಗರಾಜ ನಿಗೆ ಅಪ್ರತ್ಯಕ್ಷ ಗುರುವಾಗಿದ್ದಾರೆ. ಅನ್ನ ಮಾರ್ಯನಿಗೆ ಪ್ರತ್ಯಕ್ಷ ಸಂಗೀತ ಶಿಕ್ಷಾಗುರು ಆಗಿದ್ದರು. ಇಂತಹ ಪುರಂದರರ ಶಿಷ್ಯ ಅನ್ನಮಾರ್ಯರನ್ನೂ ಪುರಂದರ ದಾಸರ ಆತ್ಮೀಯ ಗೆಳೆಯ ಕನಕದಾಸರನ್ನೂ ಅನನ್ಯ ಭಕ್ತಿಯಿಂದ ಸ್ಮರಿಸಿರುವ ಕಾಖಂಡಿಕಿ ಕೃಷ್ಣರಾಯ ಕ್ರಿಸ್ತಶಕ ಹದಿನೇಳನೆಯ ಶತಮಾ ನದವನು. ಆದ್ದರಿಂದ ಕನಕ ಕಾಖಂಡಿಕಿ ಕೃಷ್ಣದೇವರಾಯನಿಗಿಂತ ಹಿಂದಿನವನು. ಇದರ ಕೂಡೆ ಸಿಗುವ ಮತ್ತೊಂದು ಪೋಷಕ ಧಾರವೆಂದರೆ ಕನಕ ದಾಸನೇ ತನ್ನ ಮೋಹನ ತರಂಗಿಣಿಯಲ್ಲಿ ಬಳಸಿರುವ 'ಪೆಟಲಂಬಿನವರು' ಎಂಬ ಶಬ್ದ[೯] ಪೆಟಲಂಬು ಎಂಬುದು ಪಿಸ್ತೂಲು, ತುಪಾಕಿ ಅಥವಾ ಬಂದೂಕು, ಈ ಪೆಟಲಂಬು ಅಥವಾ ಬಂದೂಕುಧಾರಿಗಳ ದರ್ಶನ ಕನ್ನಡಿಗರಿ ಗಾದುದು ೧೫೨೦ರಲ್ಲಿ ನಡೆದ ರಾಯಚೂರು ಯುದ್ಧದಲ್ಲಿ. ವ್ಯಾಸರಾಯರೂ (ಕ್ರಿ.ಶ. ೧೪೪೭–೩೯) ಪುರಂದರದಾಸರೂ (ಕ್ರಿ.ಶ. ೧೪೮೦–೧೫೪೦) ಬೃಂದಾವನಸ್ಥರಾದಮೇಲೂ ಕನಕ ದಾಸರು ಬದುಕಿದ್ದರೆಂದು ತಿಳಿಯುವುದರಿಂದ ಕ್ರಿಸ್ತಶಕ ಹದಿನಾರನೆಯ ಶತಮಾನದ ಮಧ್ಯಭಾಗವನ್ನು ಅಂದರೆ ಕ್ರಿ.ಶ. ೧೫೫೦ನ್ನು ಕನಕದಾಸರಿದ್ದ ಕಾಲವೆಂದು ನಿರ್ಧರಿಸಿ ಹೇಳ ಬಹುದು.

॥ ೩ ॥

ಕನಕದಾಸರ ಕುಲವನ್ನು ಗುರುತಿಸಲು ಅನೇಕ ವ್ಯರ್ಥ ಪ್ರಯತ್ನಗಳು ನಡೆದಿವೆ. ಅಂಥವುಗಳಲ್ಲಿ ನಮ್ಮದೂ ಒಂದು. ಮೊದಲನೆಯದು, ರಾ. ನರಸಿಂಹಾಚಾರ್ಯರು (ಕ್ರಿ.ಶ. ೧೯೧೯) ಇವನು ಬೇಡರವನೆಂದೂ, ಅಂಡೆಯ ಕುರುಬ ಜಾತಿಯವನೆಂದೂ ಅವರಿವರು ಹೇಳುತ್ತಾರೆ ಎಂದು ಜನಹೇಳಿಕೆಯನ್ನಿತ್ತಿದ್ದಾರೆ.[೧೦] ಆದರೆ ಕನಕನ ಕುಲದ ಬಗೆಗೆ ಇವರದು ಯಾವ ವಿಧದ ಕಮಿಟ್‌ಮೆಂಟೂ ಇಲ್ಲ. ಎರಡನೆಯವರು ಕಟ್ಟಿ ಶೇಷಾಚಾರ್ಯರು. ಇವರು ಕನಕದಾಸನು ತನ್ನ ಮೋಹನತರಂಗಿಣಿಯ ಪೀಠಿ ಕಾಭಾಗದಲ್ಲಿ ಶ್ರೀರಾಮಾನುಜರನ್ನೂ, ಆವರ ಶಿಷ್ಯ ಪರಂಪರೆಯ ತಾತಾಚಾರ್ಯರನ್ನೂ ಸ್ಮರಿಸಿರುವುದರಿಂದ ಶ್ರೀ ವೈಷ್ಣವ ಮತದ ಬಗೆಗೆ ಒಲವುಳ್ಳವನೆಂತಲೂ, ಅದೇ ಕೃತಿಯಲ್ಲಿ ತ್ರಿವಿಕ್ರಮ ದಾಸಸ್ಯದಾಸರನ್ನು ಅಂದರೆ ವಾದಿರಾಜರನ್ನು ಸ್ಮರಿಸಿರುವುದ ರಿಂದ ಮತ್ತು ಹರಿಭಕ್ತಿಸಾರದ ಆಂತರಿಕ ಪ್ರಮಾಣಗಳಿಂದ ಕನಕದಾಸನು ಮಾಧ್ವಮತ ನಂಬಿಕೆಯವನೆಂದೂ, ಕೀರ್ತನೆಯೊಂದ ರಲ್ಲಿ 'ಮುಟ್ಟಲಮ್ಮರು ಎನ್ನ ಬಂಧುಗಳು ಕಂಡರೆ ಅಟ್ಟಿ ಬಿಡುವುತಲಿಹರೊ ಕೃಷ್ಣ' ಎಂಬ ಸಾಲಿನ ಆಧಾರದ ಮೇಲೆ 'ಕನಕದಾ ಸರು ಯಾವ ಕುಲದವರೆಂಬುದು ಗೊತ್ತಾಗುವುದಿಲ್ಲ. ಆದರೆ ಮುಟ್ಟಿಸಿಕೊಳ್ಳದಂತಹ ಒಂದು ಜಾತಿಯಾಗಿದ್ದರೆಂದು ಹೇಳಬ ಹುದು'[೧೧] ಎಂತಲೂ ಹೇಳುತ್ತಾರೆ. ಅಂತೆಯೇ, 'ನಾವು ಕುರು ನಮ್ಮ ಬರು ದೇವರೊ ಬೀರಯ್ಯ. . .' ಎಂಬ ಕೀರ್ತನೆಯ ಆಧಾರದ ಮೇಲೆ ಕನಕದಾಸರನ್ನು ಕುರುಬ

ಕುಲದವರೆಂದು ನಿರ್ಧರಿಸಲಾಗದು ಎಂದು ಎಚ್ಚರಿಸಿದ್ದಾರೆ.[೧೨]. ಒಟ್ಟಿನಲ್ಲಿ ಕಟ್ಟಿಯ ವರ ದೃಷ್ಟಿಯಲ್ಲಿ ಕನಕದಾಸ ಓರ್ವ ಅಸ್ಪೃಶ್ಯ; ಆದರೆ ಯಾವ ಕುಲಜ ತಿಳಿಯದು.

ಮೂರನೆಯವರು ಬೆಟಗೇರಿ ಕೃಷ್ಣಶರ್ಮ ಮತ್ತು ಬೆಂಗೇರಿ ಹುಚ್ಚುರಾವ್‌ರವರು. ಇವರು 'ಶ್ರೀ ಕನಕದಾಸರ ಭಕ್ತಿಗೀತೆ ಗಳು' ಎಂಬ ತಮ್ಮ ಸಂಪಾದನ ಕೃತಿಯ ಮುನ್ನುಡಿಯಲ್ಲಿ. 'ಕನಕದಾಸರು ಹುಟ್ಟಿದ ಜಾತಿ ಯಾವುದೆಂಬುದೂ ಒಂದು ಒಡೆ ಯಲಾಗದ ಒಗಟೇ ಆಗಿದೆ. ಅವರನ್ನು ಕುರುಬ ಜಾತಿಯವರೆಂದು ಹೇಳುವ ಪರಂಪರೆಯೂ ಇದೆ. ನಾಯಕ (ಬೇಡ) ಜಾತಿ ಯವರೆಂದು ಹೇಳುವ ಪರಂಪರೆಯೂ ಇದೆ. . .' ಎಂದು ಹೇಳಿ, ಎಲ್. ಜಿ. ಹಾವನೂರರ ಅಭಿಪ್ರಾಯವನ್ನು ಎತ್ತಿಹಿಡಿದಿ ದ್ದಾರೆ. ಹಾವನೂರರ ಪ್ರಕಾರ ಕನಕದಾಸರು 'ದಾಸಪಂಗಡ' ಎಂಬ ಒಂದು ದಾಸವರ್ಗಕ್ಕೆ ಸೇರಿದವರು. ಇವರ ವಂಶೀಕರು ಕಾಗಿನೆಲೆಯ ಸಮೀಪದ ಕುಮ್ಮೂರು ಗ್ರಾಮ ದಲ್ಲಿ ಈಗಲೂ ಇದ್ದಾರೆ. ಇವರಿಗೆ ೬೬ ಗ್ರಾಮಗಳ ವಾಲ್ಮೀಕಿ ಅಥವಾ ನಾಯಕರ ಜಗಳವನ್ನು ತೀರಿಸುವ ಹಕ್ಕು ಇದೆ. ಆ ಹಕ್ಕು ಆನೆಗೊಂದಿಯ ತಾತಾಚಾರ್ಯರು ಕೊಟ್ಟ 'ಶ್ರೀಮುಖ'ದಿಂದ ಪ್ರಾಪ್ತವಾದದ್ದು. ಕುರಿಸಾಕಣೆ ಈ ದಾಸರ ಕಸುಬು. ಪ್ರತಿಯೊಬ್ಬನ ಮನೆಯಲ್ಲೂ ಡೊಳ್ಳು ಇದೆ– ಎಂಬಂಶಗಳನ್ನು ಆಧರಿಸಿ, ರಾಮಾನುಜರನ್ನೂ ತಾತಾಚಾರ್ಯ ಗುರುಗಳನ್ನೂ ಭಕ್ತಿಯಿಂದ ಕೊಂಡಾಡಿದ ಕನಕದಾಸರು ನಾಯಕ ಜಾತಿಯನವಾಗಿಯೆ ಇರಬಹುದೆಂದು ಹೇಳುವುದು ಯುಕ್ತವೆನಿಸುತ್ತದೆ. ಕುರುಬರೆಂದು ಹೇಳುವುದಕ್ಕೆ ಯಾವ ಅನುಮಾನದ ಆಧಾರಗಳೂ ನಮಗೆ ಸಿಕ್ಕುವುದಿಲ್ಲ. ಏಕೆಂದರೆ ಬೀರನ ಭಕ್ತರಾಗಿರುವ ನಮ್ಮ ಉತ್ತರ ಕರ್ನಾಟಕದ ಕುರುಬರೆಲ್ಲರೂ ಸಿದ್ಧರ ಉಪಾಸನಾ ಪರಂಪರೆಗೆ ಸೇರಿದವರಾ ಗಿದ್ದಾರೆ. . .ರಾಮಾನುಜೀಯ ವೈಷ್ಣವ ಮತದ ಸಂಬಂಧ ಅವರಿಗೆ ಸ್ವಲ್ಪವೂ ಇಲ್ಲ. 'ಒಡೆಯರು' ಎಂಬ ಹೆಸರಿನ ಪುರೊಹಿತ ವರ್ಗ ಕುರುಬರಲ್ಲಿದೆ. ಅವರಂತೂ ಸಂಪೂರ್ಣವಾಗಿ ವೀರಶೈವ ಆಚಾರಗಳ ಪ್ರಭಾವಕ್ಕೆ ಒಳಗಾಗಿರುವರು ಎಂದಿದ್ದಾರೆ[೧೩]. ಇದು ವಿಚಾರ ಪ್ರಚೋದಕವೂ ಹೆಚ್ಚು ಅರ್ಥಪೂರ್ಣವೂ ಆದ ಹೇಳಿಕೆ. ಏಕೆಂದರೆ ಕುರುಬರು ಅಥವಾ ಹಾಲುಮತ ಸ್ಥರು ಕರ್ನಾಟಕದ ಮೂಲ ನಿವಾಸಿಗಳು. ಫಾದರ್ ಹೆರಾಸ್‌ರವರು ಹರಪ್ಪಾ ಮತ್ತು ಮೊಹೆಂಜೊದಾರೊ ಉತ್ಖನನದ ಸಂದ ರ್ಭದಲ್ಲಿ ದೊರೆತ ಚಿತ್ರಲಿಪಿಯ ಆಧಾರದ ಮೇಲೆ ಈ ಭೂಪ್ರದೇಶದ ಮೂಲನಿವಾಸಿಗಳು 'ಕಳ್‌ಅರು' ಅಂದರೆ ಹಾಲು (ಕಳ್) ಉತ್ಪಾದಕ್ರು; ಹಾಲುಮತಸ್ಥರು. ಕೃಷಿ ಮತ್ತು ಪಶುಪಾಲನೆ ಅವರ ಮೂಲಕಸುಬು. ಈ ಕಳ್ ಅರ ನಾಡು ಕನ್ನರ ನಾಡು ಕನ್ನಡ ನಾಡು ಎಂದಾಯಿತು ಎಂದು. ಕನ್ನಡನಾಡು ಜನಾಂಗವಾಚಿ ಶಬ್ದವೆಂದು ಊಹಿಸುತ್ತಾರೆ.[೧೪] ಆದರೆ ಹೆರಾಸ್‌ರವರನ್ನು ಒಪ್ಪದ ವರೂ ಇದ್ದಾರೆ. ಏನೇ ಇರಲಿ ಆರ್ಯರ ಆಗಮನಕ್ಕಿಂತಲೂ ಮುಂಚೆ ಈ ನಾಡಿನಲ್ಲಿದ್ದ ಮೂಲ ನಿವಾಸಿಗಳು ದ್ರಾವಿಡರು: ಅವರ ಔಪಾಸನಾ ದೇವತೆ ಶಿವ. ಈ ಶಿವನನ್ನು ತಮ್ಮ ವೇದದಲ್ಲಿ ಸೇರಿಸಿಕೊಂಡು ಉಪಾಸಿಸುವಾಗ ಕಳ್‌ಅರು ಅನ್ನುವುದು ಕಳ್ಳರು (The Thieves) ಎಂಬ ತಪ್ಪು ಅರ್ಥದಲ್ಲಿ ಗ್ರಹಿಕೆಯಾದ್ದರಿಂದ ಋಗ್ವೇದದ ರುದ್ರಾಧ್ಯಾಯದಲ್ಲಿ, ನಮಕ–ಚಮಕ ಸಂದರ್ಭದಲ್ಲಿ ರುದ್ರನನ್ನು ಕುರಿತ ಅನುವಾಕದ ಋಕ್ಕು 'ತಸ್ಕರಾಣಾಂ ತೇ ನಮೋ ನಮಃ' ಎಂದು ಪ್ರಯೋಗಗೊಂಡಿದೆ. ಇಲ್ಲಿ ಹಾಲು ಉತ್ಪಾ ದಕರ ಕುಲದೇವತೆಯೇ ನಿನಗೆ ನಮಸ್ಕಾರ ಎನ್ನುವುದರ ಬದಲು, ಕಳ್ಳನೇ ನಿನಗೆ ನಮಸ್ಕಾರ ಎಂದಾಗಿದೆ. ಅಂದಿನಿಂದಲೂ ಈ ಕುರುಬ ಜನಾಂಗದವರು ಶಿವಾರಾಧಕರು ಎಂದು ತಿಳಿಯುತ್ತದೆ. ಅಂತೆಯೆ ಇವರು ರೇವಣಸಿದ್ದ ಸಂಪ್ರದಾಯ ದವರು. ವೀರಶೈವವನ್ನು ಒಪ್ಪಿಕೊಂಡ ಇಷ್ಟಲಿಂಗಧಾರಿ 'ಒಡೆಯ' ಕುಲದವರು. ಇವರು ಕರ್ನಾಟಕದಲ್ಲಿ, ವಿಶೇಷವಾಗಿ ತುಮ ಕೂರು ಜಿಲ್ಲಾ ಚಿಕ್ಕನಾಯಕನಹಳ್ಳಿ ಮೊದಲಾದಡೆಗಳಲ್ಲಿ ಇಂದಿಗೂ ಇದ್ದಾರೆ. ಇವರೆಲ್ಲರೂ ಶಿವಾರಾಧಕರು. ಹನ್ನೆರಡನೆಯ ಶತಮಾನ ಒಂದು ಸಂಕ್ರಮಣ ಕಾಲವಷ್ಟೆ. ಅಂದು, ಬಹುಶಃ ಕೆಲವರು ರೇವಣಸಿದ್ದ ಸಂಪ್ರದಾಯಕ್ಕೂ, ಮತ್ತೆ ಕೆಲವರು ವೈಷ್ಣವ ಸಂಪ್ರದಾಯಕ್ಕೂ ಸೇರಿರಬಹುದು. ಈ ಹೇಳಿಕೆಗೆ ಬೇಲೂರು ಕೇಶವದಾಸರಲ್ಲಿ ಸಮರ್ಥನೆ ಹುಡುಕಬಹುದು. ಅವರು ಹೇಳುತ್ತಾರೆ. 'ಕರ್ನಾಟಕದಲ್ಲಿ ಶೈವಮತವು ತಲೆಯೆತಿದಾಗಿನಿಂದ ಕುರುಬರು ಶಿವನನ್ನು ಕುಲದೈವವೆಂದು ಪೂಜಿಸುತ್ತಿದ್ದರು. ಮಹಾದೇವನನ್ನು ಬೀರಪ್ಪ (ವೀರಪ್ಪ)ನೆಂದು ಕರೆದಾಗಿನಿಂದ ಕುರುಬ ದೇವರಿಗೆ ಬೀರದೇವರೆಂದು ಹೆಸರಾಯಿತು. ರಾಮಾನುಜಾಚಾರ್ಯರು ಹೊಯ್ಸಳ ನಾಡಿನಲ್ಲಿ ನೆಲೆಸಿ ವಿಷ್ಣು ಭಕ್ತಿಯನ್ನು ಉಪದೇಶಿಸಿದ ಮೇಲೆ, ಕುರುಬರಲ್ಲಿ ಅನೇಕರು ತಿರುಪತಿಯ ವೆಂಕ ಟೇಶನನ್ನು ಪೂಜಿಲಾರಂಭಿಸಿದ್ದರು. ಭಸ್ಮಕ್ಕೆ ಬದಲಾಗಿ ಕುಂಕುಮತಿಲಕವು ಆ ಜನರ ಮತಚಿಹ್ನೆಯಾಯಿತು'.[೧೫] ಎಂದು. ಎಸ್. ಕೆ. ರಾಮಚಂದ್ರರವರೂ, 'ಮೊದಲಿಗೆ ಇವರೆಲ್ಲ ಶೈವರು. ಕಾಳಹಸ್ತೀಶ್ವರನ (ತಿರುಕಾಳತ್ತಿ ದೇವರ) ಒಕ್ಕಲು. . .ಆದರೆ, ಒಂದು ಕಾಲಕೆ ಕುರುಬರೆಲ್ಲ ತಿರುಪತಿಯ ದೇವರ ಒಕ್ಕಲಾದರು' ಎನ್ನುತ್ತಾರೆ. ಇವರ ಮೊದಲ ಮಾತು ದಿಟವೆನಿಸಿದರೂ ಕುರುಬರೆ ಲ್ಲರೂ ಆದರು ಎಂಬ ಮಾತು ಪೂರ್ಣ ಸತ್ಯ ಅಲ್ಲ. ಕಾಳಹಸ್ತೀಶನಿಗೇ ನಡೆದುಕೊಳ್ಳುವ ಕುಳಗಳೂ ಜೀವಂತವಿವೆ ಇಂದಿಗೂ. ಮತ್ತೊಂದು ನಿದರ್ಶನ: ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲೂಕು ಮೈಲಾರದಲ್ಲಿರುವ ಮೈಲಾರಲಿಂಗನು ಶಿವನ ಅವ

ತಾರಿಯೆ. ಮಲ್ಲಾಸುರ ಮಣಿಕಾಸುರನನ್ನು ಕೊಂದು ಲೋಕ ಕಂಟಕ ಮಾಡಿದನೆಂಬ ನಂಬಿಕೆ ಇದೆ. ತುಂಬಾ ಭಯ ಭಕ್ತಿಯಿಂದ ಪವಾಡ ರೂಪದಲ್ಲಿ ಇಂದಿಗೂ ಮೈಲಾರಲಿಂಗನ ಜಾತ್ರೆ ಪ್ರತಿವರ್ಷವೂ ನಡೆಯುತ್ತದೆ. ಬೆಂಗಳೂರು, ಕೋಲಾರ ಪ್ರದೇಶಗಳಲ್ಲಿರುವವರು ತಿರುಪತಿ ತಿಮ್ಮಪ್ಪನಿಗೆ ನಡೆದುಕೊಳ್ಳುತ್ತಿದ್ದರೂ ಇವರು ಶಿವೌಪಾಸಕರೆ. ಬಹುಶಃ ಕುರುಬ ಕುಲದ ಕನಕದಾಸನ ಪೂರ್ವಜರು ವೀರಶೈವ ಧರ್ಮೀಯರಾದ ವಿಜಯನಗರದ ಸಂಗಮವಂಶದವರ ಅವನತಿಯ ನಂತರ ಪ್ರಾಬ ಲ್ಯಕ್ಕೆ ಬಂದ ವೈಷ್ಣವ ಪಾರಮ್ಯವನ್ನೊಪ್ಪಿದ ತುಳುವ ಮನೆತನದ ಅರಸರ ಕಾಲದಲ್ಲಿ ವಿಷ್ಣು ಉಪಾಸಕರಾಗಿದ್ದಿರಬೇಕು. ರಾಜಕಾ ರಣ ಮತಧರ್ಮದ ಬೆನ್ನೆಲುಬು. ಯಾವುದೇ ಕಾಲದ ಯಾವುದೇ ದೇಶದ ಯಾವುದೇ ಮತಧರ್ಮವಿರಲಿ ಅದು ಆಳ್ವವನ ಮರ್ಜಿಯಿಂದ ಬದುಕುತ್ತದೆ ಎಂಬುದು ಕಟುವಾದರೂ ಸತ್ಯ. ಆದ್ದರಿಂದ ಕನಕದಾಸರು ಕಾಲಧರ್ಮಕ್ಕೆ ಮಣಿದು ನಡೆದಿದ್ದರೆ ಆಶ್ಚರ್ಯವೇನಲ್ಲ. ಅಲ್ಲದೆ ಕುರುಬರಲ್ಲಿ ನೂರಾರು ಬೆಡಗುಗಳು; ಕಟ್ಟೆಗಳು ಇಂದಿಗೂ ಜೀವಂತ ಇವೆ. ಇವುಗಳಲ್ಲಿ ತಿರುಪತಿಗೆ ನಡೆದುಕೊಳ್ಳುವ ವರ್ಗವೂ ಇದೆ. ಅಂಥವುಗಳಲ್ಲಿ ಒಂದಾಗಿದ್ದಿರಬಹುದು ಕನಕದಾಸರ ಕುಲ. ಇಲ್ಲಿ ಹಾವನೂರರು ಒಡ್ಡುವ ಜಾನಾಂಗಿಕ ಆಧಾರ ನಿಜಕ್ಕೂ ವಿಚಾರಣೀಯ. ಇದಕ್ಕೆ ಪೋಷಕವಾಗಿ ಕನದಾಸನ ಹೆಸರಿಗೆ ಸಂಬಂಧಿಸಿದ ಮತ್ತೊಂದು ಅಂಶ ವನ್ನು ಇಲ್ಲಿ ಚರ್ಚಿಸಬಹುದು. ಕನಕ ದಾಸ ದೀಕ್ಷೆ ಪಡೆದಮೇಲೆ 'ಕನಕದಾಸ' ಎಂದಾದ ಎಂದು ಕೆಲವರು ಹೇಳುತ್ತಾರೆ. ಇದು ವಾಸ್ತ ಸ್ತಯ ಆಗಿರಲಾರದು. ಕಾಳಿದಾಸ, ದೇವದಾಸ ಇದ್ದಹಾಗೆ ಕನಕದಾಸ ಇದ್ದಾನೆ. ರಾಮಧ್ಯಾನ ಚರಿತ್ರೆ, ಹರಿಭಕ್ತಿಸಾರ, ನಳಚರಿತ್ರೆಗಳಲ್ಲಿ ಅಂಕಿತ ಹೊರತು ಕನಕದಾಸನ ಹೆಸರಿಲ್ಲ. ಆದರೆ ಮೋಹನ ತರಂಗಿಣಿಯಲ್ಲಿ 'ನೆಟ್ಟನೆ ಕನಕದಾಸನ ಕಾವ್ಯ ದೊಳ್ ದೋಷ ತಟ್ಟದು' 'ಮೆಲ್ಲನೆ ಪೇಳು ಕನಕದಾಸೋತ್ತಮ ತನಗೆ', 'ಕೃತಿವೇಳ್ದ ಕನಕದಾಸೋತ್ತಮ ಕೇಳ್ದವಳತಿ ಸುಜ್ಞಾನವತಿ' ಎಂತಲೂ, ಕೀರ್ತನೆಗಳಲ್ಲಿ 'ಕ್ಷೋಣಿಯೊಳು ಕನಕದಾಸನ' 'ತಪ್ಪದ ಕನಕಗೆ ವರಗಳ ಕೊಡುವಂಥ ಭೀಮರಾಯ', 'ಕಾಗಿನೆಲೆ ಯಾದಿನಿಲಯಾ ಕನಕಪ್ಪಗೊಲಿಯಾ', 'ಕನಕಪ್ರಿಯ ತಿರುಪತಿಯ ಗಿರಿಯಾದಿ ಕೇಶವನೆ ಒಲಿದು ನಿಲ್ಲಿಸಿದ' ಎಂತಲೂ, ಮುಂಡಿ ಗೆಗಳಲ್ಲಿ– 'ಕನಕನಾಡಿದ ಗುಟ್ಟು ಆದಿಕೇಶವ ಬಲ್ಲ ಚಂದಮಾಮ' 'ಕಾಗಿನೆಲೆಯ ಕನಕದಾಸ ಹೇಳಿದಂಥ ಮುಂಡಿಗೆಯ ಬಲ್ಲನು ಆದಿಕೇಶವನೊಬ್ಬನು', ಹರಿದಾಸರ ಕನಕ ಹಾಕಿದ ನುಡಿಕೆಯ ಆದಿಕೇಶವನಾಣೆ ಬಲ್ಲವರು ಹೇಳಿ', ಬೆಡಗ ಬಲ್ಲರೆ ಪೇಳಿ ದೇವ ಕನಕದಾಸ ಎನ್ನೊಡೆಯಾದಿಕೇಶವ ಬಲ್ಲನೀ ಬೆಡಗ', 'ಎಲ್ಲರೂ ಹೇಳಿರಿ ಕನಕ ಹೇಳಿದ ಮಾತ ಎಲ್ಲಾರು ಗ್ರಹಿಸಿಕೊಳ್ಳಿ', 'ಕನಕನು ಹೇಳಿದ ಬೆಡಗು ಕಂಡವರು ನೀವ್ ಕೇಳಿ ತಿಳಿದು ನಿಮ್ಮ ಮನದಲ್ಲಿ ನೋಡಿ' ಎಂದೆಲ್ಲ ಇದೆ. ಕನಕ, ಕನಕಪ್ಪ, ಕನಕ ದಾಸ, ಕನಕ ದಾಸೋತ್ತಮ ಎಂಬ ಹೆಸರಿನಲ್ಲಿ ಉಲ್ಲೇಖಗಳಲ್ಲಿ 'ಕನಕ, ಕನಕಪ್ಪ' ಎಂಬುವು ಕೇವಲ ಛಂದಸ್ಸಿನ ಸೌಕರ್ಯಕ್ಕಾಗಿ ಬಂದವುಗಳು. ಆದರೆ 'ಕನಕದಾಸ' ಎಂಬುದೇ ಬಹಳೆಡೆಗಳಲ್ಲಿ ಪ್ರಯೋಗಗೊಂಡಿದೆ. ಅಲ್ಲದೆ ನಾವು ಹಿಂದೆ ನೋಡಿದಂತೆ ಕನಕದಾಸ ದಾಸದೀಕ್ಷೆ ಪಡೆದು ದಾಸನಾಗುವ ಮುನ್ನ, ತನ್ನ ಅರಮನೆಯಲ್ಲಿದ್ದ ಆಮೋದದ ದಿನಗಳಲ್ಲಿ ಮೋಹನ ತರಂಗಿಣಿ ಯನ್ನು ಬರದಿದ್ದಾನೆ. ಅದರಲ್ಲಿ 'ಕನದಾಸ' ಎಂದಿದೆಯಾದ್ದರಿಂದ ಕನಕನಿಗೆ 'ದಾಸ' ಎಂಬುದು ಉಪಸರ್ಗವಾಗಿ ಬಂದದ್ದಲ್ಲ. ಜನ್ಮತಃ ಜೊತೆಗೂಡಿ ಬಂದ ಹೆಸರು ಎನ್ನಿಸುತ್ತದೆ. ಅಲ್ಲದೆ ಈ ದಾಸ ಪಂಗಡದವರು ಕುರುಬಕುಲದ ಒಂದು ವರ್ಗಕ್ಕೆ ಸೇರಿದ ವರೆಂದು ಇತ್ತೀಚಿನ ಅಧ್ಯಯನದಿಂದ ತಿಳಿದುಬರುವುದರಿಂದ ಕನಕದಾಸನು ದಾಸವರ್ಗದ ಕುರುಬರವನೆಂದು ನಿರ್ಧರಿಸಿ ಹೇಳಬಹುದು.

'ಆತ್ಮ ಯಾವಕುಲ, ಜೀವ ಯಾವಕುಲ. . .ಆತನೊಲಿದ ಮೇಲೆ ಯಾತರ ಕುಲವಯ್ಯ'[೧೭] ಎಂದಾತನಿಗೆ ಕುಲವೆಂಬುದಿಲ್ಲ ಮಾನವ ಕುಲವಲ್ಲದೆ! ಆದ್ದರಿಂದಲೆ ಕನಕದಾಸರು ತಮ್ಮನ್ನು ಪ್ರಶ್ನಿಸಿದವರಿಗೆ ಹೇಳಿದರು, 'ಯಾತರವನೆಂದುಸಿರಲಿ, ಜಗ ನ್ನಾಥ ಮಾಡಿದನೊಂದ ನರರೂಪವಯ್ಯ'[೧೮] ಎಂದು. ಅಂದರೆ, ಅವನು ಮಾಡಿದ ನರರೂಪಕ್ಕೆ ಜಾತಿಯಾವುದೆಂದು ಹೇಳಲಿ? ಎಂದು ಪ್ರತಿಯಾಗಿ ಪ್ರಶ್ನಿಸಿದರು; 'ರಂಗನಾಥನೆ ನಿನ್ನ ಡಿಂಗರಿಗನೋ ನಾನು, ಡಂಗುರವ ಹೊಯಿಸಯ್ಯ ದಾಸ ನೆಂದು'[೧೯] ಎಂದು ಸೆರಗೊಡ್ಡಿ ಬೇಡಿದರು; 'ಹರಿದಾಸರು ಎನ್ನ ಬಂಧು, ಬಳಗಾದರು, ಹರಿಯ ಶ್ರೀಮುದ್ರೆ ಆಭರಣವಾಯಿತು'[೨೦] ಎಂದು ಸಾರಿ ಹೇಳಿದರು. 'ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ?'[೨೧] ಎಂದು ಪ್ರಶ್ನಿನಿಸಿ ನಕ್ಕಿದ್ದರು ಕೂಡ. ಇಷ್ಟಾದರೂ ಕುಲದ ವ್ಯಾಕುಲದಲ್ಲಿ ತೊಳಲಿ ಬಳಲುವ ಸಮಾಜಕ್ಕೆ ಅವನ ಹೃದಯದಾ ಶಯ ಹಿಡಿಸಲಿಲ್ಲ. ಬುದ್ಧ, ಬಸವ, ಕನಕ, ಕಬೀರ ಮೊದಲಾದವರು ವಿಶ್ವಮಾನ್ಯರು. ಅಂಥವರನ್ನು ಕುಲದ ಸಂಕುಚಿತ ಸಂಕೋಲೆಯಲ್ಲಿ ಸ್ಥಗಿತರಾ ಗುವಂತೆ ಮಾಡಬಾರದು. ಆದರೂ ಮೋಹಭರಿತ ಮಾನವಕುಲ ತನ್ನ ಕಕ್ಕುಲತೆಯನ್ನು ವ್ಯಕ್ತಪಡಿಸಿ, ಕನಕದಾಸರು, 'ಹುಟ್ಟಿನಿಂದ ಶೂದ್ರರಾಗಿ, ನಿಷ್ಠೆಯಿಂದ ಬ್ರಾಹ್ಮಣರಾಗಿ, ಇಷ್ಟದಿಂದ ಭಾಗವತರಾಗಿ, ಕಟ್ಟಕಡೆಗೆ ದೇವರನ್ನು ಕಂಡವರಾಗಿ ಪುಣ್ಯಶ್ಲೋಕರೆನಿಸಿದರು.'[೨೨] ಎಂದಂದುಕೊಂಡು ತೃಪ್ತವಾಗುತ್ತದೆ.

‖ ೪ ‖

ಕನಕದಾಸರ ಬಾಳು ವಿಕಾಸಗೊಂಡಿರುವದು ಮೂರು ಮಜಲುಗಳಲ್ಲಿ; ಅವರ ಜನ್ಮಸ್ಥಳ ಬಾಡ, ವಿಹಾರಸ್ಥಳ ವಿಜಯನ ಗರ ಮತ್ತು ವಾಸಸ್ಥಳ ಕಾಗಿನೆಲೆ. ಅವರ ಕೃತಿಗಳನ್ನು ಅನುಲಕ್ಷಿಸಿಯೇ ಅದನ್ನು ಗುರುತಿಸಬೇಕಾಗುತ್ತದೆ. ಅವರ ಕೃತಿಗಳ ಸಂಖ್ಯೆ ಆರು ಎಂದಿದ್ದಾರಷ್ಟೆ. ಅವುಗಳಲ್ಲಿ ರಾಮಾಯಣ, ಮಹಾಭಾರತ ಮತ್ತು ಭಾಗವತಗಳಲ್ಲಿ ತಮ್ಮ ವಸ್ತುಗಳನ್ನು ಹುಡುಕಿಕೊಂಡ ರಾಮಧಾನ್ಯ ಚರಿತ್ರೆ, ನಳಚರಿತ್ರೆ ಮತ್ತು ಮೋಹನ ತರಂಗಿಣಿ ಕಾವ್ಯಗಳೂ, ನೃಸಿಂಹಸ್ತವ, ಹರಿಭಕ್ತಿಸಾರ ಎಂಬ ಭಕ್ತಿ ರಚನೆಗಳೂ, ಕೀರ್ತನೆಗಳೆಂಬ ಗೇಯಚಿತ್ರಗಳೂ ಮೇಲಿನ ಮೂರೂ ಭೂಮಿಕೆಗಳಲ್ಲಿ ಅರಳಿವೆ ಎನ್ನಿಸುತ್ತದೆ.

ಕನಕದಾಸನ ಬಾಲ್ಯ ಮತ್ತು ಯೌವನದ ದಿನಗಳು ವಿಜಯನಗರ ಸಾಮ್ರಾಜ್ಯದ ಗಡಿನಾಡ ಕೋಟೆಯಾದ ಬಾಡದಲ್ಲಿ ಕಳೆದಿದೆ. ಶಿಕ್ಷಣ ಮಾತ್ರ ನಾವು ಹಿಂದೆಯೇ ಹೇಳಿದಂತೆ ಆನೆಗೊಂದಿಯಲ್ಲಿ, ತಾತಾಚಾರ್ಯರ ಶ್ರೀಮಠದಲ್ಲಿ. ಕೀಳು ಕುಲದವ ನಾದರೂ ದಣಾಯಕನ ಪುತ್ರನಾದ ಕನಕನಿಗೆ ಶಿಷ್ಯಸ್ಥಾನ ಗಿಟ್ಟಿಸಿಕೊಳ್ಳುವುದು ಕಷ್ಟವಾಗಿದ್ದಿರಲಿಕ್ಕಿಲ್ಲ. ಅಂತೂ ಉತ್ತಮ ರೀತಿಯ ಆಧ್ಯಾತ್ಮ ಶಿಕ್ಷಣ ಅಲ್ಲಿ ಲಭಿಸಿದೆ. ಸ್ವಭಾವತಃ ಆಧ್ಯಾತ್ಮ ಚಿಂತಕನಾದ ಆತ ಅಲ್ಲಿ ಕಲಿತದ್ದನ್ನು ಬಾಡದಲ್ಲಿ ಬೆಳಗಿದ್ದಾನೆ ನೃಸಿಂಹಸ್ತವ ಮತ್ತು ಮೋಹನ ತರಂಗಿಣಿ ಕಾವ್ಯಗಳನ್ನು ರಚಿಸುವ ಮೂಲಕ ಇವ ೆರಡೂ ಕೃತಿಗಳನ್ನು ಕವಿ ಕನಕದಾಸ ತಾನು ನಾಡೊಡೆಯನಾಗಿದ್ದ ಅವಧಿಯಲ್ಲಿ ರಚಿಸಿದ್ದಿರಬೇಕು. ಈ ಸೂಕ್ಷ್ಮವನ್ನು ಅವನ ಕೃತಿಗಳಲ್ಲಿಯೇ ಹುಡುಕೋಣ. ಮೊದಲನೆಯದಾಗಿ ಈ ಎರಡೂ ಕೃತಿಗಳಲ್ಲಿ ಅನೇಕ ಅಂಶ ಸಾಮ್ಯತೆ ಇದೆ. ನೃಸಿಂಹಸ್ತವ ಎಂಬ ಒಂದು ಸಣ್ಣ ಸಾಂಗತ್ಯ ಗ್ರಂಥದಲ್ಲಿ (೯೭ ಪದ್ಯ) ಮೊದಲು ಕಾಗಿನೆಲೆಯ ಮೇಲೆ ಮಂಗಳವೂ ಅನಂತರ ರಾಮಾನುಜ ಸ್ತುತಿಯೂ ಇರುವುದರಿಂದ ಇದೂ ಏಕತೃತವಾಗಿರಬಹುದೆಂದು ತೋರುತ್ತದೆ.[೨೩] ಎಂದಿದ್ದಾರೆ. ರಾ. ನರಸಿಂಹಾಚಾರ್ಯರು, ಇವೆರಡೂ ಏತತೃತವಷ್ಟೇ ಅಲ್ಲ, ಏಕಕರ್ತೃ ಕೃತಿಗಳೂ ಹೌದು. ಏಕಭಾವ ಪ್ರಕಾಶಗಳೂ ಹೌದು. ತರಂಗಿಣಿಯಲ್ಲಿ ಮುಂದುವರಿದ ಕನಕದಾಸರು ಶ್ರೀವೈಷ್ಣವಧರ್ಮ ಸಂಸ್ಥಾಪನಾಚಾರ್ಯ, ವಿಶಿ ಷ್ಟಾದ್ವೈತ ದ್ಯುಮಣಿ ಶ್ರೀರಾಮಾನುಜಾಚಾರ್ಯರ ಶಿಷ್ಯ ಪರಂಪರೆಯಲ್ಲಿ ಬಂದ ತಮ್ಮ ಶಿಕ್ಷಾಗುರು ಶ್ರೀ ತಾತಾಚಾರ್ಯರನ್ನು ಸ್ಮರಿಸಿ, 'ಎಲೆ ವಿಶಾಲಾಕ್ಷಿಯೆ, ಹರಿಶರಣರ ಪಾದಧೂಳಿಯನ್ನು ನೆತ್ತಿಯಲ್ಲಿ ಅಂತು ಶ್ರೀ ರಾಮಾನುಜರ ಸಿದ್ಧಾಂತವನ್ನು ನೆನೆದು, ಅತ್ಯಂತ ಪ್ರೀತಿಯಿಂದ ಕತೆ ಹೇಳುತ್ತೇನೆ ಕೇಳು ಎಂದು ಶ್ರೀಕೃಷ್ಣನ ದ್ವಾರಕಾಪುರದ ಬ್ರಾಹ್ಮಣೋತ್ತಮರ ಮಂದಿರಗಳಲ್ಲಿ ನಿತ್ಯವೂ 'ರಾಮಾನುಜ ವ್ಯಾಖ್ಯಾನ'ದ ಒಳ್ಳೊಳ್ಳೆಯ ತತ್ವ, ಸಾಮವೇದ ಘೋಷಣೆ ಕೇಳುತ್ತಿದ್ದವೆಂದು ಹೇಳುತ್ತಾರೆ.[೨೪] ಇಲ್ಲಿ ಕಾಲವಿಪರ್ಯ ಯದ ಪರಿವೆ ಇಲ್ಲ ಕನಕದಾಸರಿಗೆ ದ್ವಾಪರಯುಗದ ಕೃಷ್ಣನ ದ್ವಾರಕಾಪುರದಲ್ಲಿ. ಅಲಿಯುಗದ ಅದರಲ್ಲೂ ಕ್ರಿಸ್ತಶಕ ಹನ್ನೆರಡ ನೆಯ ಶತಮಾನದ ಶ್ರೀರಾಮಾನುಜರ ವ್ಯಾಖ್ಯಾನಪಠಣ ನಡೆಯುತ್ತಿತ್ತು ಎಂಬಲ್ಲಿ ಕವಿಯ ಗುರುಭಕ್ತಿ ವೇದ್ಯವಾಗುತ್ತದೆ ಅಥವಾ ಸಮಕಾಲೀನನ ಪ್ರಜ್ಞೆ ಹೇಗೆ ಜಾಗ್ರತವಾಗಿ ಕೃತಿಯು ಅವತರಿಸಿದೆ ಎಂಬುದು ತಿಳಿಯುತ್ತದೆ. ತರಂಗಿಣಿಯಲ್ಲಿ ಎಲ್ಲಿಯೂ ವ್ಯಾಸರಾಯರನ್ನಾಗಲಿ ಪುರಂದರದಾಸರನ್ನಾಗಲಿ ಕನಕದಾಸರು ಸ್ಮರಿಸದೆ ಇರುವುದರಿಂದ ತಮಗೆ ವ್ಯಾಸರಾಯರ ಸಾನಿಧ್ಯ, ಪುರಂದರದಾಸರ ಸಖ್ಯ ದೊರೆಯುವ ಮೊದಲೇ ಇವುಗಳನ್ನು ರಚಿಸಿದ್ದಿರಬೇಕು ಎನ್ನಿಸುತ್ತದೆ. ರಚಿಸಿದ್ದರೂ ತಮ್ಮ ಶಿಕ್ಷಣ ಮುಗಿದ ಅನಂತರದಲ್ಲಿ ಬಾಡದ ಕೋಟೆಯ ದಣಾಯಕ ಪದವಿಯನ್ನು ಸ್ವೀಕರಿಸಿದ ತಮ್ಮ ತಾರು ಣ್ಯದ ದಿನಗಳಲ್ಲಿ ಪ್ರಕಾಶ ಗೊಳಿಸಿದ್ದಿರಬೇಕು. ಕೃತಿಯಲ್ಲಿ ಬರುವ ಶೃಂಗಾರ, ಆಸ್ಥಾನ ವೈಭವ ಮತ್ತು ಪಾಂಡಿತ್ಯದ ಆರ್ಭಟ ಇವೇ ಮೊದಲಾದ ಆಂತರಿಕ ಪ್ರಮಾಣಗಳಿಂದ ನಿರ್ಧರಿಸಬಹುದು. ಮೋಹನ ತರಂಗಿಣಿ ಒಂದು ಮಹಾಕಾವ್ಯ. ಶೃಂಗಾರ ಮತ್ತು ಸೌಂದರ್ಯಗಳು ಅದರ ಮೂಲದ್ರವ್ಯ. ಬಳುಕು ಛಂದಸ್ಸಾದ ಸಾಂಗತ್ಯದಲ್ಲಿ ರಚಿಸಿದ್ದರೂ ಈ ಮಹಾಕವಿ ವೈವಿಧ್ಯವನ್ನು ಮೆರೆದಿದ್ದಾನೆ. ಅದು ಅವನ ಕವಿತಾಶಕ್ತಿಯ ಹೆಗ್ಗಳಿಕೆ. ಅವನೇ ಹೇಳುವಂತೆ 'ಗಣ್ಣುಗೊಳ್ಳದ ಬೆಳ್ಳಬ್ಬಿನ ರಸದಂತೆ ಬಣ್ಣಿತವಾದ ಕಥಾಮೃತ!'[೨೫] ದಣಾಯಕ ಪದವಿಯನ್ನು ಸ್ವೀಕರಿಸಿದ ತರುಣದಲ್ಲಿ, ತನ್ನ ತುಂಬು ತಾರುಣ್ಯದ ದಿನಗಳಲ್ಲಿ, ಮೋಹದ ಮಡದಿಯ ಪ್ರಣಯ ಪ್ರಪಂಚದಲ್ಲಿ ಮೋಹಕ ಸಾಮ್ರಾಟನಾಗಿ ಮೆರೆದಿದ್ದಾನೆ. ಅದರಿಂದಾಗಿ ತನ್ನ ಪ್ರೇಯಸಿಗೆ ಕಥೆ ಹೇಳಿದಂತೆ ಕಲ್ಪಿಸಿಕೊಂಡು, ಸರಸ ಸಂಭಾಷಣೆ, ರಸಿಕಸಂಬೋಧನೆ, ರಸಶೃಂಗಾರ ವರ್ಣ ನೆಗಳನ್ನು ತುಂಬಿ ಕಾವ್ಯ ರಚನೆ ಮಾಡಿದ್ದಾನೆ. ಅವನ ರಸಿಕತೆಯಲ್ಲಿ ತಾರುಣ್ಯದ ಒಗರು, ಹುಳಿ ತುಂಬಿವೆ. ಕಂಡು ಹಾಡಿದ, ಕೇಳಿ ಮೆಚ್ಚಿದ ಹೇಣ್ಣು ಅವನ ಮೋಹಮದಿರೆ 'ಸುಜ್ಞಾನ ವಧೂಟಿ', ಅವಳು ಆಮಶಾಸ್ತ್ರದ "ಶ್ರೀ' ಕಾರವೆಂಬ ಅಕ್ಷರದ ಆಕಾರ ದಂತೆ ಮುದ್ದಾಗಿ ಮುರುಟಿಕೊಂಡಿರುವ ಕಿವಿಯುಳ್ಳವಳು. ಬಡನಡುವಿನ ಬೆಡಗಿ, ಭಾಮಿನಿಯರನ್ನೆ, ಕೂಡುಮೊಲೆಯ ಹೆಣ್ಣು, ವಿಶಾಲನೇತ್ರೆ ಏನೆಲ್ಲ ಆಗಿದ್ದಾಳೆ! ಕನಕದಾಸರ ರಸಿಕತೆ ಇಲ್ಲಿ ಓತಪ್ರೋತವಾ ಗಿದೆ. ರುಕ್ಮಿಣಿ ಕೃಷ್ಣನನ್ನು ಕುರಿತು ತನಗೊಂದು ಮಗುಬೇಕು ಎಂದಳಂತೆ, ಆಗ

ನಕ್ಕನು ಕೃಷ್ಣನಲ್ಲೆಯ ಮಾತು ಕೇಳ್ದು ನೀ। ಮಕ್ಕಳ ಪಡೆದ ಮಾತ್ರದಲಿ
ಕಕ್ಕಸಮೊಲೆ ಜಜಿಂದಪುದೆಂದು ಕಟಕಿಯ। ನೊಕ್ಕಣಿಸಿದನು ವಲ್ಲಭೆಯ॥[೨೬]

ಈ ರಸಿಕ ಚಕ್ರಿಗೆ –

ಮಗುವುಂಡು ಬಲ್ಮೊಲೆ ತೊರೆದರೆ ಮತ್ತಿಷ್ಟು। ಬಿಗುಹುದೋಜಿಂವುದರಸ್ಥಳದಿ
ಲಗುಗೆಯ್ಯದೆನ್ನ ಬಿನ್ನಪವ ಲಾಲಿಪುದೆಂದು। ಸುಗುಣಂಗೆ ಬಿನ್ನಯಿಸಿದಳು.[೨೭]

ಇಂತಹ ಸಂಭೋಗ ಶೃಂಗಾರದ ಪೂರ್ಣಾನುಭವಿ ಎಂದಿಗೂ ದಾಸದೀಕ್ಷೆಯನ್ನು ಪಡೆದ ಸಂತನಾಗಿದ್ದಿರಲಾರ.

ಮತ್ತೊಂದು ಮಾತು–

ವಿಜಯನಗರದ ಅರಸು, ತನ್ನ ಸ್ವಾಮಿ, ಒಡೆಯ, ಸಾರ್ವಭೌಮ ಶ್ರೀಕೃಷ್ಣದೇವರಾಯನನ್ನು ತನ್ನ ಕಾವ್ಯನಾಯಕ ಶ್ರೀಕೃಷ್ಣನೊಡನೆ ಸಮೀಕರಿಸಿ ಹೇಳುವುದು, ಪಂಪ, ರನ್ನರಂತೆ ಸಮೀಕರಣ ನೇರವಾಗಿಲ್ಲದಿದ್ದರೂ ಕೃಷ್ಣನ ವ್ಯಾಜ್ಯದಲ್ಲಿ ಕೃಷ್ಣದೇವರಾಯನ ಬಹು ವಿಧ ಬಣ್ಣನೆ ಬಿತ್ತರಗೊಂಡಿರುವುದು ಸತ್ಯ. 'ಸುಖಾಢ್ಯಪಾಲಕ ಕೃಷ್ಣ ಸುಖ ಸಾಮ್ರಾಜ್ಯ ವಾಳಿದ ಮುದದ' ಎನ್ನವೆಡೆಯಲ್ಲಿ ನಮ್ಮ ಕಣ್ಣೆದುರು ಧುತ್ತನೆ ಬಂದು ನಿಲ್ಲುತ್ತಾನೆ ವಿಜಯನಗರದರಸು ಶ್ರೀಕೃಷ್ಣ ದೇವರಾಯ! ಇಂಥೆಡೆಗಳಲ್ಲಿ ಶ್ರೀಹರಿಯ ಅನನ್ಯಸ್ಮರಣೆ ಗಿಂತ, ಮನುಕುಲತಿಲಕ ಶ್ರೀಕೃಷ್ಣ ದೇವರಾಯನ ವೈಭವೀಕರಣ ಎದ್ದುಕಾಣುತ್ತದೆ. ದೈವಭಕ್ತಿಗೆ ಮಿಗಿಲಾದ ರಾಜಭಕ್ತಿ ಸ್ಫುಟಗೊಳ್ಳು ತ್ತದೆ. ಇದನ್ನೆಲ್ಲ ಗಮನಿಸಿದರೆ ಲೌಕಿಕಾಪೇಕ್ಷೆಯನ್ನೊಲ್ಲದ ಯಾವನೇ ಅಪರೋಕ್ಷ ಜ್ಞಾನಿ. ಆಧ್ಯಾತ್ಮಶುಕಿ ಇಂದಿದ್ದು ನಾಳೆ ಅಳಿ ಯುವ ಹಲುಮಾನವನ ಹೊಗಳಿಕೆಗಾಗಿ ತನ್ನ ತಪಸ್ಸನ್ನು ವ್ಯಯಮಾಡಲಾರ. ಅವನಿಗೆ ನರಸ್ತುತಿಗಿಂತ ಹರಸ್ತುತಿ ಮಿಗಿಲಾಗು ತ್ತದೆ. ಆತ ಆತ್ಮರತನಾಗುತ್ತಾನೆ. ಇಲ್ಲವೆ ಆತ್ಮಾನಂದ ಸಾಧಕ ಚೈತನ್ಯ ಚಿಂತಕನಾಗು ತ್ತಾನೆ. ಮಾನವ ಮಟ್ಟದಿಂದ ಮೇಲೆ ನಿಂತ ಆತ ಮಾನವನಿಗಿಂತಲೂ ಕೆಳಗಿಳಿದು ಅವನ ಬಣ್ಣನೆಗೆ ತೊಡಗಲಾರ. ಲೋಕಕವಿ ಯಾಗಿದ್ದರೆ ಆ ಮಾತು ಬೇರೆ. ಆದರೆ ಕನಕದಾಸ ನಂಥ ಸಿದ್ಧಪುರುಷನನ್ನು, ಋಷಿಕವಿಯನ್ನು ರಾಜನಾದವನಿಂದ ಪೂರ್ಣಗೊಳಿಸಿಕೊಳ್ಳಬೇಕಾದ ಲೌಕಿಕಾಪೇಕ್ಷೆಗಳು ಯಾವುವೂ ಕಾಡುವುದಿಲ್ಲ; ಕಾಡಬಾರದು, ಕಾಡಿದರೆ ಅವನು ಕವಿಯಾಗಬಹುದು, ಋಷಿಯಾಗಲಾರ, ಆದ್ದರಿಂದ ಕನಕದಾಸನು ತನ್ನಾಳ್ದವ ನನ್ನು ಅಂತೆಲ್ಲ ಬಣ್ಣಿಸಬೇಕಾಗಿದ್ದರೆ ಅವನಿನ್ನೂ ಕೃಷ್ಣದೇವರಾಯನ ಅಧೀನ ರಾಜನಾಗಿ, ಆಸ್ಥಾನಿಕನಾಗಿ, ಗಡಿರಕ್ಷಣೆಯ ದಣಾ ಯಕನಾಗಿ, ಇಲ್ಲವೆ ನೆಚ್ಚಿನ ಸೇನಾನಿಯಾಗಿ ಬದುಕು ಮಾಡುತ್ತಿದ್ದಿರ ಬೇಕು. ಆ ಜೋಳವಾಳಿಯ ಕಾರಣದಿಂದಾಗಿ ತನ್ನ ಕೃತಜ್ಞ ತೆಯ ಸಮೀಕರಣ ಸಾಧ್ಯವಾಗಿದೆ ಎನ್ನಿಸುತ್ತದೆ. ಒಟ್ಟಿನಲ್ಲಿ, ಮೋಹನ ತರಂಗಿಣಿ ಕನಕದಾಸನ ಚೊಚ್ಚಲ ಕೃತಿಯಾಗಿದ್ದು, ತನ್ನ ಅಧೀನ ಆಢಲಿತಾಧಿಕಾರದ ಅವಧಿಯಲ್ಲಿ, ತನ್ನ ಭೋಗ ಭೂಮಿ ಬಾಡದಲ್ಲಿ ರಚಿತವಾದದ್ದು ಎಂದು ಹೇಳಬಹುದು. ಕನಕದಾಸರ ಬದುಕಿಗೊಂದು ತಿರುವುಕೊಟ್ಟ ಸ್ಥಳ ವಿಜಯನಗರದ ವ್ಯಾಸರಾ ಯರ ಶ್ರೀಮಠ. ಅವರು ದಾಸದೀಕ್ಷೆಯನ್ನು ಪಡೆದದ್ದು ಅಲ್ಲಿಯೇ. ಅಲ್ಲಿ ಪುರಂದರದಾಸರ ಸಖ್ಯ ವ್ಯಾಸರಾಯರ ವಾತ್ಸಲ್ಯಗಳು ಲಭಿಸಿದವು. ಕುಲದ ಕಹಿ ಉಣಿಸು ದೊರೆ ತದ್ದು ಅಲ್ಲಿಯೇ. ಆಶುಕವಿಯಾಗಿ ಅನೇಕ ಕೀರ್ತನೆಗಳನ್ನು ಕರ್ನಾಟಕ ಸಂಗೀತ ಪದ್ಧಾತಿಯಲ್ಲಿ ಹಾಡಿದರು. ಉಪಲಬ್ಧವಿರುವ ನೂರಾರು ಕೀರ್ತನೆಗಳು ಜನ್ಮತಳೆದದ್ದು ಹಂಪೆಯಲ್ಲಿ ರಾಯರ ಆಶ್ರಮದಲ್ಲಿ. ತುಂಗಭದ್ರಾ ತರಂಗಿಣಿಯ ತೀರದಲ್ಲಿ, ನಿಸರ್ಗದ ಪರಿಶುದ್ಧ ಹಾಗೂ ಪ್ರಶಾಂತ ಪರಿಸರದಲ್ಲಿ. ಒಟ್ಟಿನಲ್ಲಿ ಅವರ ಕೀರ್ತನೆಗಳ ಕಂಡರಣೆ ವ್ಯಾಸದೇಗುಲದಲ್ಲಿ.

ನಳಚರಿತ್ರೆ, ಹರಿಭಕ್ತಿಸಾರ ಮತ್ತು ರಾಮಧಾನ್ಯ ಚರಿತ್ರೆಗಳನ್ನು ದಾಸರು ಬಹುಶಃ ಎಲ್ಲಾ ತ್ಯಾಗ ಭೋಗಗಳನ್ನೂ ಮುಗಿಸಿ ಕಾವ್ಯಯೋಗದಲ್ಲಿ ಮಗ್ನರಾದಾಗ; ಕಾಗಿನೆಲೆಯಲ್ಲಿ ಅಚಿತಿಮಕರೆಯ ನಿರೀಕ್ಷೆಯಲ್ಲಿದ್ದಾಗ ರಚಿಸಿದ್ದಿರ ಬಹುದು. ಈ ಕೃತಿಗಳಲ್ಲಿ ಶ್ರೀ ವೈಷ್ಣವ ಅಥವಾ ಮಾಧ್ವ ಪಂಥಗಳ ಪ್ರಸ್ತಾವವಿಲ್ಲ; ಆಗಿಹೋದ ಗುರುಗಳ ಸ್ಮರಣವಿಲ್ಲ; ಆಳಿ ಬಾಳಿದ ಪ್ರಭುವಿನ ಪ್ರಶಂಸೆ ಪ್ರಶ ಸ್ತಿಗಳಿಲ್ಲ. ಇಲ್ಲಿರುವುದು ಪ್ರಾಂಜ್ವಲ ಮನಸ್ಸಿನ ಶುದ್ಧ ಸಾಹಿತ್ಯ. ಇಲ್ಲಿನದು ಅಪ್ರತಿಹ ಶಕ್ತಿಯೆನಿ ಸಿದ ದೈವದ ಪ್ರಭಾವ ಪ್ರಾಚುರ್ಯ ಗಳ ಬಿತ್ತರಣೆ. ಈಮೂರೂ ಕೃತಿಗಳಲ್ಲಿ ಆದಿಕೇಶವನ ಅಂಕಿತ ಸಾಮಾನ್ಯವಿದೆ. ಆದರೆ ನಳಚರಿತ್ರೆ ಮತ್ತು ರಾಮಧಾನ್ಯ ಚರಿತ್ರೆಗ ಳಲ್ಲಿ ವರಪುರದರಸ, ವರಪುರದರಸ ಚೆನ್ನಿಗರಾಯ, ವರಪುರದ ಚೆನ್ನಿಗ, ಚೆನ್ನಿಗ ರಾಯ, ವರಪೌರ ಚೆನ್ನಿಗರಾಯ, ವರಪುರಾ ಧಿಪ ಚೆನ್ನಕೇಶವ ಎಂದಿದ್ದರೆ, ಹರಿಭಕ್ತಿಸಾರದಲ್ಲಿ 'ಸುರಪುರ ನಿಲಯ ಚೆನ್ನಿಗ ರಾಯ'

ಎಂದಿದೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕ ಟಿಸಿದ ಹರಿಭಕ್ತಿಸಾರಕ್ಕೆ ಸರಳಭಾವ ವಿವರಣೆ ಇತ್ತ ಎನ್. ರಂಗನಾಥ ಶರ್ಮರು ಇದಕ್ಕೆ 'ಬೇಲೂರು ನಿವಾಸ ಚೆನ್ನಕೇಶವ' ಎಂದು ಅರ್ಥೈಸಿದ್ದಾರೆ[೨೮]. ಆದರೆ 'ಸುರಪುರ' ಎಂಬುದಕ್ಕೆ 'ಬೇಲೂರು' ಎಂಬರ್ಥ ಹೇಗೆ ಬಂತೋ ತಿಳಿಯದು. ಬಹುಶಃ ಇಲ್ಲಿನ 'ಸುರಪುರ' 'ವರಪುರ' ಎಂದೇ ಇದ್ದಿರಬೇಕು. ಆದ್ದರಿಂದ 'ವರಪುರ ಬಿಲಯ ಚೆನ್ನಿಗರಾಯ' ಎಂದರೆ, ಕನಕನ ಕುಲ ದೇವತೆ ಬಾಡದ ಚೆನ್ನಕೇಶವನಲ್ಲದೆ ಬೇರಲ್ಲ. ಹರಿಭಕ್ತಿಸಾರದ ಒಂದು ಪದ್ಯ ಹೀಗಿದೆ–

ಬಾದರಾಯಣ ಪೇಳ್ದ ಭಾರತ । ಕಾಧಿ ಕರ್ತನುದಾರ ಶ್ರೀಪುರ
ದಾದಿ ಕೇಶವಮೂರ್ತಿಗಂಕಿತವಾದ ಚರಿತೆಯನು ॥
ಮೇದಿನಯೊಳಿದನಾರು । ಹೃದಯದೊಳಾದರಿಸಿ ಕೇಳ್ದಪರು ಮುದದಲಿ
ಯಾದಿ ಮೂರುತಿ ವರಪುರಾಧಿಪನೊಲಿವನನವ ರತ॥[೨೯]

ಇಲ್ಲಿ 'ಪುರಾದಾದಿಕೇಶವ', 'ವರಪುರಾದಾದಿಕೇಶವ' ಎಂಬ ಇಬ್ಬರು ಕೇಶವರಿದ್ದಾರೆ. ಇವರಲ್ಲಿ ಮೊದಲನೆಯವನು ಕಾಗಿನೆಲೆಯ ಆದಿಕೇಶವಸ್ವಾಮಿ, ಎರಡನೆಯವನು ಬಾಡದ ಆದಿಕೇಶವಸ್ವಾಮಿ. ಇದಕ್ಕೆ ಪೂರಕವಾಗಿ:

ಲೋಕದೊಳಗತ್ಯಧಿಕನೆನಿಸುವ । ಕಾಗಿನೆಲೆ ಸಿರಿಯಾದಿಕೇಶವ
ತಾ ಕೃಪೆಯೊಳಗೆ ನುಡಿಸಿದನು ಈ ಭಕ್ತಿಸಾರವನು॥
ಜೋಕೆಯಲಿ ಬರೆದೋದಿ ಕೇಳ್ದರ । ನಾಕುಲದಿ ಮಾಧವನು ಕರುಣಿಪ ।
ಶ್ರೀಕಮಲವಲ್ಲಭನು ಮಿಗೆ ಬಿಡದಾದಿಕೇಶವನು ॥[೩೦]

ಎಂಬ ಪದ್ಯದಲಿ ಈ ಕೃತಿಯನ್ನು ನುಡಿಸಿದವನು ಕಾಗಿನೆಲೆಯ ಶ್ರೀ ಅಥವಾ ಸಿರಿಯಾದಿಕೇಶವ. ಇದನ್ನು ಶ್ರದ್ಧಾಭಕ್ತಿಯಿಂದ ಬರೆದು, ಓದಿ, ಕೇಳಿದವರನ್ನು, ಅನಾಕುಲದಿಂದ ಕರುಣಿಸುವವನು ಬಾಡದಾದಿಕೇಶವ । ಬಾಡ ಅಥವಾ ವಾಡ ಎಂಬುದಕ್ಕೆ 'ಪುರ' ಎಂದರ್ಥ; ರಂಗನಾಥರು ಹೇಳುವ 'ಬೇಲೂರು' ಎಂದಲ್ಲ. ಬೇಲೂರು ಚೆನ್ನಕೇಶವನಿಗೂ ಇಲ್ಲ ಬಡದಾದಿ ಕೇಶವನಿಗೂ ಯಾವ ಸಂಬಧವೂ ಇಲ್ಲ.

ಗಮನಿಸಬೇಕಾದ ಮತ್ತೊಂದು ಮಾತಿದೆ !

ಹರಿಭಕ್ತಿಸಾರ ಪೂರ್ಣಗೊಂಡ ಮೇಲೆ ಭಿನ್ನ ಛಂದಸ್ಸಿನ ಹೊಸದೊಂದು 'ಮಂಗಳ' ಪದ ಇದೆ. ಇದು ಬಹುಶಃ ಕನಕದಾಸರ ರಚನೆ ಆಗಿರಲಾರದು. ಒಂದು ವೇಳೆ ಆಗಿದ್ದರೆ 'ಹರಿಭಕ್ತ ಸಾರಕ್ಕಾಗಿ, ಅದರ ರಚನಾ ಸಂದರ್ಭದಲ್ಲಿ ಬರೆದ್ದಲ್ಲ. ಬೇರೆಡೆ ಹಾಡಿಕೊಂಡದ್ದನ್ನು ಇಲ್ಲಿ ತಂದು ಸೇರಿಸಿ ದ್ದಾರೆ.ಇಷ್ಟಾದರೂ ಇದು ಪ್ರಕ್ಷಿಪ್ತವೆಂಬ ಗುಮಾನಿ ಪ್ರಬಲವಾಗಿ ಉಳಿಯುತ್ತದೆ. ಏಕೋ ಏನೊ ಕೆಲವರಿಗೆ 'ವರಪುರ ನಿಲಯ ಚೆನ್ನಿಗರಾಯ', 'ವರಪೌರ ಚೆನ್ನಿಗರಾಯ' ಎಂದಕೂಡಲೆ ಥಟ್ಟನೆ ಬೇಲೂರು ಚೆನ್ನಕೇಶವ ಅವರ ಕಣ್ಣೆದುರಲ್ಲಿ ಬಂದು ನಿಲ್ಲು ತ್ತಾನೆ. ಆದರೆ ಬೇಲೂರ ವಿಜಯನಾರಾಯಣನು ಚೆನ್ನಕೇಶವ ಎಂದು ಕರೆಸಿಕೊಂಡಿದ್ದು ಇತ್ತೀಚೆಗೆ. ವಿಷ್ಣುವರ್ಧನನು ಚೋಳ ರಿಂದ ತಲಕಾಡನು ಗೆದ್ದುದರ ಅಗ್ಗಳಿಕೆಗಾಗಿ, 'ತಲಕಾಡುಗೊಂಡ' ಎಂಬ ಬಿರುದನ್ನಾಂತುದಲ್ಲದೆ, ತಾನು ಸಾಧಿಸಿದ ವಿಜಯದ ಸಂಕೇತವಾಗಿ ಬೇಲೂರು, ತಲಕಾಡು, ಮೇಲುಕೋಟೆ, ತೊಣ್ಣೂರು ಮತ್ತು ಗದಗ–ಈ ಐದೆಡೆಗಳಲ್ಲಿ ಹೇವಿಳಂಬಿ ಚೈತ್ರಶುದ್ಧ ಪಂಚಮೀ ಶನಿವಾರ (೨೦ ಮಾರ್ಚ್ ೧೧೧೭)ದಂದು ವಿಜಯನಾರಾಯಣ ರನ್ನು ಸಂಸ್ಥಾಪಿಸಿದನೆಂದು ಅವನೇ ಹಾಕಿಸಿದ ಶಾಸನವು ಸಾರುತ್ತಿದೆ. ಆದ್ದರಿಂದ ಬೇಲೂರಲ್ಲಿರುವಾತ 'ವಿಜಯನಾರಾಯಣ' 'ಚೆನ್ನಕೇಶವ' ಅಲ್ಲ; ಕಾಗಿನೆಲೆ ಮತ್ತು ಬಾಡಗಳಲ್ಲಿ ರುವ 'ಆದಿಕೇಶವ ! '. ಇಂತಿಷ್ಟು ವಿಚಾರಮಂಥನದ ಅಂತ್ಯದಲ್ಲಿ ಕನಕದಾಸರ ಕೃತಿಗಳ (ಕಾವ್ಯವಾಗಲಿ, ಕೀರ್ತನೆ ಆಗಲಿ) ಅಂಕಿತ 'ಆದಿಕೇಶವ' ಎಂದು ತಿಳಿಯುತ್ತದೆ. ಮಿಕ್ಕಂತೆ ಬೇರೆ ಯಾವುದೇ ಅಂಕಿತವಿದ್ದರೂ ಅದು ಕನಕದಾಸರದ್ದಲ್ಲ ಎಂದು ಸ್ಪಷ್ಟೀಕರಣ ನೀಡಬೇಕಾಗು ತ್ತದೆ. ಏಕೆಂದರೆ 'ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಪುಸ್ತಕಾಲಯದಲ್ಲಿ 'ದಾಸರ ಪದಗಳು ಅಥವಾ ದಾಸರಸ ಹಾಡು ಗಳು' ಎಂಬ ಕಟ್ಟುಗಳಿವೆ. ಅದರಲ್ಲಿ ಎಲ್ಲ ದಾಸರ ಹಾಡುಗಳೂ ಇವೆ. ಕನಕದಾಸರ ಹಾಡುಗಳು ಪ್ರತ್ಯೇಕ ಇದ್ದಂತೆ ಕಾಣುವುದಿಲ್ಲ ಕಾಲಕ್ರಮದಲ್ಲಿ ಕನಕದಾಸರ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದಂತೆ ತೋರುತ್ತದೆ. ಇತರರ ಕೃತಿಗಳೂ ಇವರ ಹಾಡುಗಳೊಂ ದಿಗೆ ಬೆರೆತಿರುವುದೂ ಉಂಟು. ಉದಾಹರಣೆಗೆ ಮುಪ್ಪಿನ ಷಡಕ್ಷರಿಯ 'ತಿರುಕನೊರ್ವ ನೂರಮುಂದೆ' ಎಂಬುದು ಕನಕದಾಸರ ಹಾಡುಗಳಲ್ಲಿ ಸೇರಿಹೋಗಿದೆ. ಕನಕದಾಸರ ವಾಕ್ಚಿತ್ರದಲ್ಲಿ ಕೂಡ ಬಳಕೆಯಾಗಿದೆ.

ಹಾಗೆಯೇ ಕನಕದಾಸರ ಕೃತಿಯೊಂದು ಪುರಂ ದರದಾಸರ (ದ್ರೌಪತಿ ವಸ್ತ್ರಾಪಹರಣ) ಸೇರಿಹೋದುದೂ ಉಂಟು. ಕನಕದಾಸರ ಕೃತಿಗಳ ಬಗೆಗೆ ಇನ್ನೂ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ ಎನ್ನಿಸುತ್ತದೆ.'[೩೩] ಅದಕ್ಕೆ ಮೊದಲು ಸಮಗ್ರ ಸಂಕಲನ, ಶುದ್ಧ ಸಂಪಾದನ, ಪ್ರಬುದ್ಧ ಪರಿಷ್ಕರಣಗಳ ಅಗತ್ಯ ಇದೆ. ಕಾಗದದ ಮೇಲಿರುವ–ಓಲೆಗರಿಗಳ ಮೇಲಲ್ಲ– ಕೀರ್ತನೆಗಳ ತೊಳಸಂಬಟ್ಟೆಯನ್ನು ತೊಡೆದುಹಾಕಿ, ಕೂಲಂಕುಶವಾಗಿ ಪರಿಶೀಲಿಸಿ, ಶುದ್ಧ ಪಾಠಾಂತರಗಳೊಡನೆ ಶುದ್ಧ ಪ್ರತಿಯನ್ನು ಹೊರತರುವ ಅಗತ್ಯ ಇದೆ ಎಂಬುದಕ್ಕೆ ಯಾವ ವಿರೋಧವೂ ಇರಲಾರದು !

॥ ೫ ॥

ಕನಕದಾಸರು ತಮ್ಮ ಕಡೆಯ ದಿನಗಳನ್ನು ಕಾಗಿನೆಲೆಯಲ್ಲಿ ಕಳೆದಿರಬಹುದು. ಮೇಲಿನ ಕೃತಿತ್ರಯಗಳು ಆ ವೇಳೆಯಲ್ಲಿ ರಚಿತವಾದುವೆಂದು ಗುರುತಿಸಿದ್ದಾಯಿತು. ಆದರೆ ಅವರ ಬದುಕಿನಲ್ಲಾದ ಬದಲಾವಣೆಗೆ ಅವರ ಮನಃಪರಿವರ್ತನೆಗೆ, ವೀರ ವೈರಾಗ್ಯಕ್ಕೆ ಒದಗಿಬಂದ ಸಂದರ್ಭ ಸ್ಪಷ್ಟವಾಗಿ ತಿಳಿಯುತ್ತಿಲ್ಲ. ಕಲಿ ಇದ್ದವನು ಕವಿ ಆಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಅದು ಸಹಜ, ಅದಕ್ಕೆ ಪಂಪಾದಿಗಳು ಪ್ರಮಾಣಭೂತರಾಗಿದ್ದಾರೆ. ಆದರೆ ಸಾಮಂತನು ಸಂತನಾದದ್ದು ಸುದ್ದಿ ! ಬಹುಶಃ 'ನೀನು ನನ್ನ ದಾಸನಾಗು. . .ದಾಸನಾಗು' ಎಂಬ ಯಾವುದೇ ಅವ್ಯಕ್ತದ ಕರೆ ಅಥವಾ 'ಚಿಕ್ಕಂದು ಮೊದಲೆ ನಾನು ರಂಗಯ್ಯ ನೀನೇ ದಿಕ್ಕೆಂದು ನಂಬಿದೆನೊ ರಂಗಯ್ಯ'[೩೪] ಎಂಬ ಅಂತರಂಗದ ಅಚಲ ನಂಬಿಕೆ ಇದ್ದಿರಬೇಕು. ಇವೆರಡಕ್ಕೂ ಮಿಗಿಲಾದ ಕಾರಣ ತನಗಾದ ರಣರಂಗದ ಸೋಲು ಎನ್ನಿಸುತ್ತದೆ. ಕನಕದಾಸರೇ ಬರೆದ ಕೀರ್ತನೆಯೊಂದು ಇದಕ್ಕೆ ಸಾಕಷ್ಟು ಮಾಹಿತಿ ಒದಗಿಸು ತ್ತದೆ.[೩೫] ಆರಂಭದ ಪಲ್ಲವಿ, ಅನುಪಲ್ಲವಿ ಹಾಗೂ ಮೊದಲ ಚರಣಗಳಲ್ಲಿ ಶ್ರೀಹರಿಯ ವಾತ್ಸಲ್ಯ ಅಭಿವ್ಯಕ್ತವಾಗಿದೆ: ಶ್ರೀಹರಿಯೆ, ಮೂಲ ಸದ್ಗುರು ನೀನಾಗಿ ನನಗೆ ಮಂತ್ರೋಪದೇಶ ಮಾಡಿದೆ. ನಿನ್ನ ಸೇವಾಸಾನಿಧ್ಯ ತೊರೆತದ್ದೂ ನಿನ್ನ ಕಾರುಣ್ಯದಿಂದ. ಮೊದಮೊದಲು ನಿನ್ನ ಉಪದೇಶವನ್ನು ಪ್ರತಿಭಟಿಸಿ ಮೆರೆದೆ. ಅದನ್ನೆಲ್ಲ ನೀನು ಕ್ಷಮಿಸಿಬಿಟ್ಟೆ' ಎಂದು ಅವನ ಗುಣಗಾನಗೈದು, 'ಸುದತಿ ಮಕ್ಕಳ ಮೋಹ ಮದವೇರಿ ನಾನಿರಲು ಪದುಮಾಕ್ಷ ನೀ ಬಂದು ಪದೇಪದೇ ಸಾರಿದೆಯೊ' ಎಂದು ಅವನ ಔದಾರ್ಯವನ್ನು ಹೊಗಳುತ್ತದೆ. ಇಲ್ಲಿ ಕನಕದಾಸ ಹುಟ್ಟು ಸಂನ್ಯಾಸಿಯೊ ಸಂತನೊ ಆಗಿರಲಿಲ್ಲ. ಎಲ್ಲರಂತೆ ಓರ್ವ ಸಂ ಸಾರಿಯಾಗಿದ್ದ ತನ್ನ ಹೆಂಡತಿ ಮಕ್ಕಳ ವಿಶೇಷ ಪ್ರೇಮ ಪ್ರೀತಿ ಉಳ್ಳವನೂ ಆಗಿದ್ದ ಎಂಬುದು ವೇದ್ಯವಾಗುತ್ತದೆ. ಆದರೆ ಅವನ ಮಡದಿ ಮಕ್ಕಳ ಬಗೆಗೆ ಹೆಚ್ಚು ಮಾಹಿತಿ ಇಲ್ಲ. ಇರಲಿ, ಕನಕದಾಸನು ತನ್ನ ಯೌವನದ ದಿನಗಳಲ್ಲಿ ಮೋಹಕ್ಕೆ ವಶನಾಗಿ, ಮದ ವೇರಿ ಮೆರೆಯುತ್ತಿದ್ದಾಗ ಪದೇ ಪದೇ ಹತ್ತಿರ ಬಂದು 'ಇದು ಸಲ್ಲ, ಇದು ಸಲ್ಲ' ಎಂದು ಉಸುರುತ್ತಿದ್ದುದುಂಟಂತೆ! ಆದರೂ ಅದು ಅವನ ಕಾಮಭಿರಿತ ಕಿವಿಗಳೊಳಗೆ ಪ್ರವೇಶಿಸಲೇ ಇಲ್ಲ. ಬಯಸಿದ ಕಾಮವನ್ನು ತಣಿಸುವುದರಲ್ಲೆ ದಿನಗಳನ್ನು ಕಳೆದದ್ದಾ ಯಿತು. ಉಂಡಷ್ಟೂ ಹಸಿವು, ಕುಡಿದಷ್ಟೂ ದಾಹ ಎಂಬಂತಹ ಕಾಮವು ಕಡೆಯವರೆಗೂ ತೃಪ್ತಿಗೊಳ್ಳಲಿಲ್ಲ. ಆಗ ಭಕ್ತೋ ದ್ಧಾರಕ ಮತ್ತೊಂದು ಮಾರ್ಗ ಉಡುಕಿದ. ಅಂದರೆ ವಿಜಯನಗರದ ಸಾಮ್ರಾಟನ ಪರವಾಗಿ, ಗಡಿ ಪ್ರದೇಶದಲ್ಲಿ ತನ್ನ ಆಡಳಿತ ವ್ಯಾಪ್ತಿ ಯ ವಲಯಕ್ಕೆ ದಾಳಿ ಬಂದ ಶತ್ರುಗಳನ್ನು ಪ್ರತಿಭಟಿಸಿ ಕನಕದಾಸನು ಯುದ್ಧ ಮಾಡುವಂತೆ ಮಾಡಿ, ಆ ಘೋರ ಸಂಗ್ರಾಮ ದಲ್ಲಿ ಸೋಲು ಸಂಭವಿಸುವಂತೆಸಗಿ, ಕಡೆಗೆ ರಣಾಂಗಣದಲ್ಲಿ ತನ್ನ ಬೆನ್ನು ಹತ್ತಿ ಬಂದ ವೀರರಾಹುತರ ಬಲವಾದ ಹೊಡೆತಕ್ಕೆ ಪ್ರಜ್ಞಾಶೂನ್ಯನಾಗಿ ಬೀಳುವಂತೆ ಮಾಡಿದನಂತೆ ! ಹೇಳುತ್ತಾನೆ –

ಅರಿಗಳು ದಂಡೆತ್ತಿ ಬರಲು ನಾನವರೊಡನೆ
ಪರಿಪರೀ ಹೋರುತಿರಲು
ದುರುಳರೆನ್ನನು ಜೈಸಿ ಹರಿದಟ್ಟಿ ಬಂದೆನ್ನ
ಧರೆಗುರುಳಿಸಿದರೊ ಹರಿಯೆ

ಎಂದು.
ಆ ಮಹತ್ವದ ಘಟನೆ ಅವನ ಬದುಕಿಗೊಂದು ಹೊಸ ತಿರುವು ಕೊಟ್ಟಿತು. ಅವನ ವೀರತ್ವ ವೈರಾಗ್ಯಕ್ಕೆ ಒಲಿಯಿತು; ಮಣಿಯಿತು. ಆಗ–

ಸಾರಿ ಹೊರಡುವ ಛತ್ರಿ ಭೇರಿ ತಮ್ಮಟೆಗಳು
ಭೋರೆಂಬ ವಾದ್ಯಗಳು ಹರಿಯೆ

ವೀರ ರಾಹುತ ಬಲದ ಭಾರವನು ತರಿದಹಂ
ಕಾರವನು ಮುರಿದೆ ಹರಿಯೆ !

ಎಂದು ಅವನ ಒಳಗಿನೊಳಗು ನುಡಿಯಿತು ! ಆ ನುಡಿಗೆ ಮಣಿದು ಮಹಾತ್ಮನಾದ. 'ನಾನು ಇಲ್ಲ, ನೀನೆ ಎಲ್ಲ' ಎಂಬುದನ್ನು ಸಾರಿ ಸಂತನಾದ. ಅಂದಾದ ಅರಿವು ಇದು–

ದೊರೆತನವ ಬಿಡಿಸಿ ಸುಸ್ಥಿರ ಮಾರ್ಗವನೆ ತೋರಿ
ಪರಿಪಾಲಿಸಿದೆಯೆನ್ನ ಹರಿಯೆ
ದುರಳತನದಲಿ ಜನರು ಪರೀ ಬಾಧಿಸಿ
ಸೂರೆಗೊಂಬುದು ಪರಿಹಾರವಾಯಿತು ಹರಿಯೆ

ರಾಜನೆಂಬವನೊಬ್ಬ ಹಗಲು ದರೋಡೆಕೋರ. ಕಳ್ಳನ ಮನೆಯನ್ನೆ ಕೊಳ್ಳೆ ಹೊಡೆಯುವ ಬಹುದೊಡ್ಡ ಕಳ್ಳ. ಅವನೆಂತು ಪ್ರಜಾ ಪಾಲಕನೊ ಅಂತೆಯೇ ಪ್ರಜಾಪೀಡಕನೂ ಆಗಿದ್ದಾನೆ. ಸಿಕ್ಕಿ ಶತ್ರುವರ್ಗವನ್ನು ಸುಲಿದು, ಸೂರೆಗೈವ ಲೂಟಿಕಾರ. ಕಗ್ಗೊ ಲೆಯ ಕಟುಕ. ಇಂತಹ ಕಲುಷಿತವಾದ ದೊರೆತನದಿಂದ ದೂರಮಡಿ, ಶ್ರೀಹರಿಯ ಪದಭಕ್ತನೆನಿಸುವ ಭಾಗ್ಯವನ್ನು ಕರುಣಿಸಿದ ನಂತೆ ಆ ಕಾಗಿನೆಲೆಯಾದಿ ಕೇಶವ. ಆಗ ಭಕ್ತ ಬೇಡುತ್ತಾನೆ–

ನೀರು ಮುಕ್ತಿಯ ಸೇರಿ ತೋರ ಮುತ್ತಾದ ಪರಿ
ಸೇರಿಸೊ ನಿನ್ನಂಘ್ರಿಯ ಹರಿಯೆ
ಅರಿಗಂಜುವನಲ್ಲ ಅಧಿಕಪುರಿ ಕಾಗಿ
ನೆಲೆಯಾದಿ ಕೇಶವನದ ಶ್ರೀ ಹರಿಯೆ

ಎಂದು.
ಅಂದರೆ ಕಪ್ಪೆಚಿಪ್ಪಿನಲ್ಲಿ ಬಿದ್ದ ಸ್ವಾತಿಮಳೆಯ ಒಂದು ಹನಿ ತೋರ ಮುತ್ತಾದಂತೆ ಪರಮಾತ್ಮನ ಪದಶೂಕ್ತಿ ಸೇರಿದ ಜೀವಾತ್ಮ ಮೌಲಿಕರ ಮತ್ತಾಗುತ್ತದೆ; ಬೆಳಗು ಬೆಳಗಲಿ ಬೆರೆದು ವಿಶ್ವಜ್ಯೋತಿಯಾಗುತ್ತದೆ. ಸಾಗರವನ್ನು ಸೇರಿದ ಹನಿ ಸಾಗರದ ಸಾಮರ್ಥ್ಯ ಪಡೆದಂತೆ ಸಾಗರವೆ ತಾನಾದಂತೆ ಅಮರತ್ವವನ್ನು ಪಡೆಯುತ್ತದೆ. ಆಗ ಅದರಲ್ಲಿ ರವಿಯ ತಾಪವೂ ಇಲ್ಲ, ಶಶಿಯ ಶೈತ್ಯವೂ ಇಲ್ಲ. ಯಾವುದೇ ಬಗೆಯ ತಿರೋಹಿತತ್ವವಿಲ್ಲದ ತೀರ್ಥವಾಗುತ್ತದೆ. ಕನಕದಾಸ ಅಂತಾದವನು, ಕನ್ನಡಾಂಬೆಯ ಕೀರ್ತಿಗೆ ಕುಡಿಯಾಗಿ ಮೂಡಿದವನು.

ಕನಕದಾಸ ಋಷಿಕವಿ, ಸಂತಕವಿ, ಮಹಾಕವಿ; ಖ್ಯಾತಕೀರ್ತನಕಾರನೂ ಅಹುದು, ಗಂಗೆಯಂತೆ ನಿರ್ಮಲ, ಅಗ್ನಿಯಂತೆ ಪರಿಶುದ್ಧ ಆದ ಆತನ ಪ್ರಾಂಜಲ ಮನಸ್ಸು ಆನಂದದಿಂದ ಹಾಡಿಕೊಂಡಿತು :

ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು ॥ಪ॥[೩೬]
ಪದುಮನಾಭನ ಪಾದದೊಲುಮೆ ಎನಗಾಯಿತು ॥ಅನು–ಪ॥

ಹರಿತೀರ್ಥಪ್ರಸಾದ ಎನ್ನ ಜಿಹ್ವೆಗೊದಗಿತು
ಹರಿಯ ನಾಮಾಮೃತ ಕಿವಿಗೊದಗಿತು
ಹರಿಯದಾಸರು ಎನ್ನ ಬಂಧುಬಳಗಾದರು
ಹರಿಯ ಶ್ರೀಮುದ್ರೆ ಆಭರಣವಾಯಿತು ॥೧॥

ಮುಕುತರಾದರು ಎನ್ನ ನೂರೊಂದು ಕುಲದವರು
ಮುಕುತಿ ಮಾರ್ಗಕ್ಕೆ ಯೋಗ್ಯ ನಾನಾದೆನೊ
ಅಕಳಂಕ ಶ್ರೀಹರಿ ಭಕುತಿಗೆ ಮನ ಬೆಳೆದು
ರುಕುಮಿಣಿಯರಸ ಕೈವಶವಾದನೆನಗೆ ॥೨॥

ಇಂದೆನ್ನ ಜೀವಕ್ಕು ಸಕಲ ಸಂಪದವಾಯಿತು
ಮುಂದೆನ್ನ ಜನ್ಮ ಸಫಲವಾಯ್ತು
ತಂದೆ ಶ್ರೀ ಕಾಗಿನೆಲೆಯಾದಿಕೇಶವರಾಯ
ಬಂದೆನ್ನ ಹೃದಯದಲಿ ನೆಲೆಯಾಗಿ ನಿಂತ ॥೩॥

## ಟಿಪ್ಪಣಿಗಳು

೧. ಬೆಟಗೇರಿ ಕೃಷ್ಣಶರ್ಮ, ಕನಕದಾಸರ ಹಾಡುಗಳು (೧೯೬೫) ಪು. ೨೦೧
೨. ಅದೇ.
೩ .ಕನಕದಾಸರ ಪದಗಳು, ಪದ–೫೧, ಕೂಸನು ಕಂಡೀರಾ, ಲಲಿತ ಪ್ರಕಾಶನ, ಹುಬ್ಬಳ್ಳಿ
೪.ಪುರಂದರದಾಸರ ಕೀರ್ತನೆ, ಮೊದಲನೆಯ ಭಾಗ. ಪದ–೨೧೫, ಉಡುಪಿ ಪಾವಂಜೆ ಗುರುರಾವ್ ಅಂಡ್ ಸನ್ಸ್ ಪ್ರಕಟಣೆ
೫. ಸಾ.ಶಿ. ಮರುಳಯ್ಯ, ಹೇಮಕೂಟ (ಕಾದಂಬರಿ) ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೬೬
೬. ಶಿವಮೊಗ್ಗ ೮೫ನೆಯ ಶಾಸನ, ರೈಸ್ ಸಂಗ್ರಹಣೆ
೭. ಕನಕದಾಸರ ಪದಗಳು, ಪದ–೫೦ ಮುತ್ತು ಬಂದಿದೆ ಕೇರಿಗೆ ಮತ್ತು ಪದ–೫೧ ಕೂಸನು ಕಂಡೀರಾ.
೮.ಜಿ. ವರದರಾಜರಾವ್, ಕನಕದಾಸರ ಕಾಲ, ದೇಶ ಮತ್ತು ಜೀವನ, ಕನಕಕಿರಣ ಪು.೩ (ಸಂ) ಕಾ.ತ. ಚಿಕ್ಕಣ್ಣ
೯.ಮೋಹನ ತರಂಗಿಣಿ, ಗರುಡನ ಸಂಧಿ (೩೬) ಪದ್ಯ–೪೨, (ಸಂ) ಎಸ್.ಎಸ್. ಕೋತಿನ.
೧೦.ರಾ. ನರಸಿಂಹಾಚಾರ್ಯ, ಕರ್ನಾಟಕ ಕವಿಚರಿತೆ, ದ್ವಿತೀಯ ಸಂಪುಟ (೧೯೧೯) ಪು. ೨೩೭–೩೮.
೧೧.ಕಟ್ಟೆ ಶೇಷಾಚಾರ್ಯ, ಕವಿ ಕನಕದಾಸರು (೧೯೩೮)
೧೨. ಅದೇ. ಪು. ೨೩೨–೩೩
೧೩. ಬೆಟಗೇರಿ ಕೃಷ್ಣಶರ್ಮ ಮತ್ತು ಬೆಟಗೇರಿ ಹುಚ್ಚರಾವ್, ಶ್ರೀಕನಕದಾಸರ ಭಕ್ತಿ ಗೀತೆಗಳು. ಪು. ೩೬೭–೬೮.
೧೪. ಡಾ.॥ ಸಾ.ಶಿ. ಮರುಳಯ್ಯ, ನಮ್ಮ ನಾಡಿಗೆ ನಾಮಕರಣ ಮಾಡಿದವರು ಯಾರು? (ಲೇಖನ)
೧೫. ಕರ್ನಾಟಕ ಭಕ್ತಿ ವಿಜಯ (೧೯೬೩), ಪು. ೨೯–೭೦ ೧೬. ಸುಧಾ, ಸಂಪುಟ ೧, ಸಂಚಿಕೆ ೧೬, (೧೮–೪–೧೯೬೫) ಪು. ೯
೧೭. ಜನಪ್ರಿಯ ಕನಕ ಸಂಪುಟ, ಕುಲಕುಲವೆನ್ನುತಿಹರು, ಪು. ೨೫ (ಸಂ). ದೇ. ಜವರೇಗೌಡ, ಎಲ್. ಎಸ್. ಶೇಷಗಿರಿರಾವ್, ದೇವೇಂದ್ರಕುಮಾರ ಹಕಾರಿ, ಎಚ್. ಜಿ. ಲಕ್ಕಪ್ಪಗೌಡ.
೧೮. ಅದೇ. ಯಾತರವನೆಂದುಸಿರಲಿ, ಪು. ೫೫
೧೯. ಅದೇ. ಹೂವತರುವರ ಮನೆಗೆ. ಪು. ೧೯
೨೦. ಅದೇ. ಬದುಕಿದೆನು ಬದುಕಿದೆನು. ಪು. ೮೧
೨೧. ಅದೇ. ಕುಲಕುಲವೆಂದು ಹೊಡೆದಾಡದಿರಿ
೨೨. ಬಿ. ಶಿವಮೂರ್ತಿ ಶಾಸ್ತ್ರೀ, ಕನಕದಾಸರ ಕೀರ್ತನೆಗಳು, ಪು.೧೩
೨೩. ರಾ. ನರಸಿಂಹಾಚಾರ್ಯ, ಕರ್ನಾಟಕ ಕವಿಚರಿತೆ (೧೯೧೯), ಪು. ೨೩೭–೩೮
೨೪. ಮೋಹನತರಂಗಿಣಿ, ದ್ವಾರಕಾಪುರ ವರ್ಣನೆ, ಪದ್ಯ ೩೬ (ಸಂ) ಡಾ.॥ ಎಸ್.ಎಸ್. ಕೋತಿನ.
೨೫. ಅದೇ. ೪ ಕಂದರ್ಪ ಜನನ. ಪದ್ಯ. ೨
೨೬. ಅದೇ. ಪದ್ಯ ೨೨
೨೭. ಅದೇ. ಪದ್ಯ ೨೩
೨೮. ಹರಿಭಕ್ತಿಸಾರ (೧೯೭೨) ಪದ್ಯ ೧, ಪುಟ. ೩
೨೯. ಅದೇ. ಪದ್ಯ. ೧೦೪, ಪುಟ ೫೨
೩೦. ಅದೇ. ಪದ್ಯ. ೧೦೮, ಪುಟ ೫೪
೩೧. ಬಿ. ಶಿವಮೂರ್ತಿ ಶಾಸ್ತ್ರೀ, ಕನಕದಾಸರ ಕೀರ್ತನೆಗಳು, ಪುಟ ॥೧೫–೧೬॥

೩೨. ಅದೇ. ಪದ. ೮೩. ಪುಟ ೭೨
೩೩. ಅದೇ. ಪದ. ೬೨, ಪುಟ ೨೯
೩೪. ಅದೇ. ಪದ. ೬೭.ಪುಟ ೮೩

# ಕನಕಸಾಹಿತ್ಯ : ಒಂದು ವಿವೇಚನೆ

ಶಿವಗಂಗೆ ಬೆಟ್ಟ ನಾಲ್ಕು ದಿಕ್ಕುಗಳಲ್ಲೂ ನಾಲ್ಕು ರೂಪವಾಗಿ ಕಾಣಿಸಿಕೊಳ್ಳುತ್ತದೆ: ಪೂರ್ವ ಮುಖದಲ್ಲಿ ಕಾಲೂರಿ ಮಲಗಿ ರುವ ಬಸವನಾಕಾರವಾಗಿ, ಪಶ್ಚಿಮದಲ್ಲಿ ಶಿವಲಿಂಗಾಕಾರವಾಗಿ, ಉತ್ತರದಲ್ಲಿ ಇಳಿಬಿಟ್ಟ ಸೊಂಡಲಿನ ಆನೆಯಾಕಾರವಾಗಿ, ದಕ್ಷಿಣ ದಲ್ಲಿ ಹೆಡೆ ತೆರೆದ ಸರ್ಪಾಕಾರವಾಗಿ. ಬೆಟ್ಟ ಒಂದೇ ಆದರೂ ನೋಟ ನಾಲ್ಕು! ವ್ಯಕ್ತಿಯ ವ್ಯಕ್ತಿತ್ವ ಅಂಥದು. ವ್ಯಕ್ತಿಗೆ ಒಂದು ಮುಖವಾದರೆ, ವ್ಯಕ್ತಿತ್ವಕ್ಕೆ ನಾನಾ ಮುಖಗಳು: ಹರಿಯುವ ನೀರಿನಂತೆ, ಉರಿಯುವ ಜ್ಯೋತಿಯಂತೆ! ಒಂದು ವ್ಯಷ್ಟಿ, ಮತ್ತೊಂ ದು ಸಮಷ್ಟಿ: ಒಂದು ಪುರುಷ, ಮತ್ತೊಂದು ಪುರುಷಾಕಾರ (Personality): ಒಂದು ಸ್ಥಾವರ, ಮತ್ತೊಂದು ಜಂಗಮ; ಇದು ಮೃಣ್ಮಯದ ಮೂರ್ತಿ ಮತ್ತೊಂದು ಚಿನ್ಮಯದ ಚೇತನ; ಇದು ಮಾನವ, ಅದು ವಿಶ್ವಮಾನವ: ಒಂದರಲ್ಲಿ ವ್ಯಕ್ತಿಗತ ವೈಪರೀತ್ಯಗಳಿದ್ದರೆ, ಮತ್ತೊಂದರಲ್ಲಿ ವಿಶ್ವಯುತ ವೈಶಿಷ್ಟ್ಯಗಳು ಮೆರೆದಿರುತ್ತವೆ. ವಸ್ತುಸ್ಥಿತಿ ಹೀಗಿದ್ದರೂ, ಅದು ಅಪ್ರಸ್ತುತ (Irrelevent) ಕ್ಕೇ ಆದ್ಯತೆ ಸಿಗುತ್ತಿರುವುದು ಒಂದು ವಿಪರ್ಯಾಸ ! ರಾಘ ವಾಂಕ ದಲಿತ ಸಮಸ್ಯೆಯನ್ನು ಕೈಗೆತ್ತಿಕೊಂಡು, ದಲಿತೋದಯ ಅಥವಾ ದಲಿತೋದ್ಧಾರವನ್ನು ವೈಭವೀಕರಿಸಿದ್ದಿದ್ದರೆ ಹರಿಶ್ಚಂದ್ರ ಕಾವ್ಯ ವಿಶ್ವ ಸಾಹಿತ್ಯದಲ್ಲಿ ದಾಖಲೆ ನಿರ್ಮಿಸಿದ ಒಂದು ಮಹಾಕಾವ್ಯವಾಗುತ್ತಿತ್ತು ಎಂದು ಇಪ್ಪತ್ತನೆಯ ಶತಮಾನದ ವೇದಿಕೆಯ ಮೇಲೆ ನಿಂತು ಹದಿಮೂರನೆಯ ಶತಮಾನಕ್ಕೆ ಸಲಹೆ ಸೂಚಿಸಿದ ಮೇಧಾವಿ ವಿಮರ್ಶಕರಿದ್ದಾರೆ ನಮ್ಮಲ್ಲಿ. ಇದು ಕಣ್ಣಿನ ದೋಷ ವೋ ಅಥವಾ ಕನ್ನಡಕದ ದೋಷವೋ, ಒಟ್ಟಿನಲ್ಲಿ ವಸ್ತುವಿನ ಸ್ಪಷ್ಟ ಚಿತ್ರ ಗೋಚರಿಸದೆ ಅಭಾಸ ಮೆರೆದಾಡಿರುವುದುಂಟು.

ಇಷ್ಟೆಲ್ಲ ಪ್ರವರದ ಹಿನ್ನಲೆಯಲ್ಲಿ ನನಗಿರುವುದು ಕನಕದಾಸನಂತಹ ಮಹಾ ಮಾನವನಲ್ಲಿ ದೋಷವನ್ನು ಅಧ್ಯಾಹರಿಸಿ, ಅದನ್ನು ಗುಣವನ್ನು ಮಾನ್ಯ ಮಾಡುವಂತೆ ಮಾಡುತ್ತಿದ್ದೇವೆ ಎಂಬ ಸಂದೇಹ. ಇದಕ್ಕೆ ನೇರ ಗುರಿ ಕನಕದಾಸರ ರಾಮಧಾನ್ಯ ಚರಿತ್ರೆ. ಇದುಹೇಳಿ ಕೇಳಿ ರಾಮಾಯಣಕ್ಕೆ ಸಂಬಂಧಿಸಿದ, ಕವಿಯ ಸ್ವಕೋಪಕಲ ಕಲ್ಪಿತ ಖಂಡಕಾವ್ಯ. ಇಲ್ಲಿ ಕವಿಯ ಮೂಲೋ ದ್ದೇಶ 'ರಾಗಿ' ಎಂಬ ಶಬ್ದಕ್ಕೆ ನಿಷ್ಪತ್ತಿ ಹೇಳುವುದು: ಅದೂ ಅಪನಿಷ್ಪತ್ತಿ. ರಾಘವ ಶಬ್ದದಿಂದ ರಾಗಿ ಬಂತೆಂದು ಹೇಳುವ ಚಮ ತ್ಕಾರ. ಅದಷ್ಟೇ ಈ ಕಥಾನಕದ ಮೂಲಧಾತು. ಇದರ ಗರ್ಭದಲ್ಲಿರುವುದು ರಾಮನಾಮ ಮಹಿಮೆಯನ್ನು ಸಾರುವ ಭಕ್ತಿಭಾವನೆ: ಇದು ಅದರ ಮೂಲದ್ರವ್ಯ. ಇದನ್ನುಳಿದು ಬೇರೆ ಏನನ್ನೇ ಹೇಳಿದರೂ ಅದು ನಮ್ಮ ನಮ್ಮ ಊಹೆಯಾಗುತ್ತದೆಯೇ ಹೊರತು ಕನಕದಾಸರ ನೈಜಕಲ್ಪನೆ ಆಗುವುದಿಲ್ಲ. ಕೃತಿಯಲ್ಲಿ ಬರುವ ವ್ರೀಹೀ (ಬತ್ತ) ಮತ್ತು ನರೆದಲೆಗ (ರಾಗಿ)ರ ಸಂವಾದ ಪ್ರೊ॥ ದೇಜಗೌರವರಿಗೆ ಸ್ಪೃಶ್ಯ ಮತ್ತು ಅಸ್ಪೃಶ್ಯರ ನಡುವಣ ವರ್ಗ ಹೋರಾಟವಾಗಿ ಕಂಡಿದ್ದರೆ ಡಾ॥ ಹಿ.ಶಿ. ರಾಮಚಂದ್ರೇಗೌಡರಿಗೆ ಅದು ಬಂಡಾಯದ ದನಿಯಾಗಿ ಕೇಳಿಸಿದೆ. ಅದೇ ಪ್ರಸಂಗ ಡಾ॥ಎಂ. ಚಿದಾನಂದಮೂರ್ತಿಯವರಿಗೆ ಶ್ರೀಮಂತ ಮತ್ತು ಬಡವರ ಕುರಿತ ಒಂದು ಅಲಿಗರಿಯಾಗಿ ಗೋಚರಿಸಿದ್ದರೆ, ನನಗೆ ಸಂಸ್ಕೃತ ಮತ್ತು ಕನ್ನಡ ನಡುವಣ ಭಾಷೆಯ ವಿವಾದವಾಗಿ ಕಂಡಿದೆ. ಮೊದಲ ಮೂವರ ಅಭಿಪ್ರಾಯಗಳನ್ನು ಓದಿಕೊಂಡ ಮೇಲೆ ನಾಲ್ಕನೆಯದಾಗಿ ನನಗೆ ಹೊಳೆದದ್ದು ಹಾಗೆ. ಅದಕ್ಕೆ ಪೋಷಕವಾಗಿ ದೊರೆತ ಆಧಾರ ವಿಜಯನಗರದ ವ್ಯಾರಾಯರ ಮಠದಲ್ಲಿತ್ತೆಂದು ಹೇಳಲಾದ ವ್ಯಾಸಕೂಟ ಮತ್ತು ದಾಸಕೂಟ ಎಂಬ ಎರಡು ಪಕ್ಷಗಳನ್ನು ಕುರಿತ ಐತಿಹ್ಯ. ವ್ಯಾಸರಾಯರ ಮಠದಲ್ಲಿ ಸಂಸ್ಕೃತವನ್ನಾಡುತ್ತಿದ್ದ ಮಡಿವಂತರ ವರ್ಗ ಒಂದು: ಅದು ವ್ಯಾಸಕೂಟ: ಕನ್ನಡವನ್ನಾಡುತ್ತಿದ್ದ ಸಾಮಾನ್ಯ ವರ್ಗ ಮತ್ತೊಂದು: ಅದು ದಾಸಕೂಟ. ಪುರಂದರದಾಸ, ಕನಕದಾಸ ಮೊದಲಾ ದವರು ದಾಸಕೂಟಕ್ಕೆ ಸೇರಿದ್ದ ವರು. ಅವರನ್ನು ಸಂಸ್ಕೃತವನ್ನಾಡುತ್ತಿದ್ದ ಮಡಿಜನ ಅಸ್ಪೃಶ್ಯರನ್ನು ಕಂಡಂತೆ ಕಾಣುತ್ತಿದ್ದರು. ಇದಕ್ಕೆ ಕನಕ ಜೀವನದ ಘಟನೆಗ ಳೆಂದು ಹೇಳುವ 'ಬಾಳೆಹಣ್ಣಿನ ಪ್ರಸಂಗ', 'ನಾನು ಹೋದರೆ ಹೋಗಬಹುದು' ಎಂಬ ಪ್ರಕರಣಗಳು ಸಾಕ್ಷಿ. ವಿಜಯನಗರದ ಕಾಲಕ್ಕಾಗಲೇ ಸಂಸ್ಕೃತ ಮಾತೃಭಾಷೆಯಾಗುತ್ತು. ಕನ್ನಡ ಜನಸಾಮಾನ್ಯರ ಜೀವಂತ ಭಾಷೆಯಾಗಿತ್ತು. ಮಾತೃಭಾಷೆಯೇ ಶ್ರೇಷ್ಠವೆಂದು ಘೋಷಿಸಿದ ವ್ಯಾಸಕೂಟದವರಿಗೆ ಜೀವಂತ ಭಾಷೆಯೇ ಶ್ರೇಷ್ಠವೆಂದು ಸಾರಿದ ದಾಸಕೂಟದವರಿಗೂ ವಾಗ್ವಾದ ನಡೆದಿದ್ದಿರಬೇಕು. ಅದರಲ್ಲಿ ಕನ್ನಡದ ಹೇಮಕೂಟರೆನಿಸಿದ ಕನಕಪುರರು ಗೆದ್ದಿರಬೇಕು. ಆ ತೆರದಿತಿಹಾಸವೇ ಭೂಮಿಗಚ್ಚರಿಯಾಗಿ ಹೇಳಿದ 'ರಾಮಧಾನ್ಯ ಚರಿತ್ರೆ' ಎಂಬಬಿಧಾನದ ಪರಿಣಾಮ ಪಡೆದಿರಬೇಕು ಎಂದೆಲ್ಲ ಊಹಿಸಿದೆ. ಊಹೆ ಕುರುಡಲ್ಲ ಎನ್ನಿಸಿತು, ಅದಕ್ಕೆ ಕಾವ್ಯದಲ್ಲಿಯೇ ಸಾಕಷ್ಟು ಪುಷ್ಟಿ ದೊರೆಯಿತು. ಗೌತಮ ಹೇಳುವ 'ದಾಶರಥಿ ಚಿತ್ತೈಸು ನಮ್ಮಯ ದೇಶಕತಿಶಯ ನರದಲೆಗನೇ ವಾಸಿ' ಎಂಬ ಮಾತುಗಳಲ್ಲಿ ರಾಗಿ ಬೆಳೆಯುವ ನಾಡಿಗರಿಗೇ ಕನ್ನಡವೇ ಶ್ರೇಷ್ಠ ಎಂಬ ಧ್ವನಿಯೂ, 'ಲೋಕದಲಧಿಕ ಭೋಜನವಿದೆಂದಾಕೆವಾಳರು ಬುಧರು ಜರೆದು ನಿರಾಕರಿಸಿ ಬಿಡಲಂತು ನೀ ಶೂದ್ರಾನ್ನವಾದೆಯಲ. . .ನೀನಾವ ಮಾನ್ಯನು' ಎಂಬ ಮಾತುಗಳಲ್ಲಿ ಕನ್ನಡ ಶೂದ್ರರು ಮತ್ತು

ಸ್ತ್ರೀಯರಾಡುವ ಭಾಷೆಯೇ ಹೊರತು ಆಕೆವಾಳರು ಬುಧರು ಅಂದ ರೆ ಪ್ರಬುದ್ಧ ವಿದ್ವನ್ಮಣಿಗಳು ನುಡಿವ ನುಡಿಯಲ್ಲ ಎಂಬ ವ್ಯಂಗ್ಯವೂ ಅಡಗಿರುವಂತೆ ಕಂಡಿತು. 'ನೆಲ್ಲು ನಾನಿರೆ ಗೋದಿ ಮೊದ ಲಾದೆಲ್ಲ ಧಾನ್ಯಗಳಿರಲು ಇದರಲಿ ಬಲ್ಲಿದನು ನರೆದಲೆಗನೆಂಬುದಿದಾವ ಮತವೆಂದ' ವ್ರಿಹಿಗನ ನುಡಿಗಳಲ್ಲಿ ಸಂಸ್ಕೃತ ಬಲ್ಲ ಪ್ರಕಾಂಡ ಪಂಡಿತರೆದುರಿನಲ್ಲಿ ಬಡಕನ್ನಡದ ಕವಿಗಳಿಗೇಕೆ ಮಾನ್ಯತೆ' ಎಂಬ ಕಿಡಿಗಳು ಕಾಣಿಸಿಕೊಂಡವು. ಅದೇ ರೀತಿ, ಕಡು ಜಡನಲಾ ಸತ್ತವರ ಪ್ರತಿಬಿಂಬರೂಪನು' ಎಂಬ ನರೆದಲೆಗನ ಪ್ರತ್ಯುತ್ತರದ ಮಾತುಗಳಲ್ಲಿ ಸಂಸ್ಕೃತ ಮಾತೃಭಾಷೆ, ನಿತ್ಯ ವ್ಯವ ಹರಣೆಯಲ್ಲಿ ಅದು ಒಳಕೊಳ್ಳದ ಭಾಷೆ ಎಂಬಂಶ ಹೊಳೆಯಿತು. ಕಡೆಯಲ್ಲಿ ಖಿನ್ನಮನಸ್ಕನಾಗಿ ನಿಂತಿದ್ದ ವ್ರಿಹಿಯನ್ನು ದಾಶ ರಥಿ ಸನಿಹಕ್ಕೆ ಕರೆದು, ತಲೆದಡವಿ ಹೇಳುವ 'ದೀನರಲಿ ದಾರಿದ್ರ್ಯ ಜನರಲಿ ನೀನು ನಿರ್ದಯನೆಂದಲ್ಲದೆ ಹೀನಗಳೆದವರಲ್ಲ ನೀ ಸುರಧೇನು ವಿನ ಸಮ' ಎಂಬ ಮಾತುಗಳಲ್ಲಿ ಸಂಸ್ಕೃತವನ್ನು ಉಚ್ಚರಿಸುವ ಹಕ್ಕು ಶೂದ್ರರಿಗೆ ಸ್ತ್ರೀಯರಿಗೆ ಇಲ್ಲದ್ದರಿಂದ ಶ್ರೀ ಸಾಮಾನ್ಯನನ ಬಗ್ಗೆ ಸಂಸ್ಕೃತ ತುಂಬಾ ನಿರ್ದಯಿಯಾಗಿತ್ತು; ಆದರೆ ಕನ್ನಡವೇ ಮೊದಲಾದ ದೇಶಭಾಷೆಗಳಿಗೆ ಅದು ಸುರ ಧೇನುವಿನಂತೆ ಅಮೃತ ಧಾರೆಯನೆರೆದು ಪೋಷಿಸಿದ್ದುಂಟು ಎಂಬ ಅಂಶ ಅಡಗಿರುವುದು ವೇದ್ಯವಾಯಿತು. ಅಂತೆಯೇ 'ದೇವರಿಗೆ ಪರಮಾನ್ನ ನೀ ಮನುಜಾವಳಿಗೆ ಪಕ್ವಾನ್ನವೀತನು' ಎಂಬಲ್ಲಿ ಬದುಕಿನ ಲೋಕ ವ್ಯವಹರಣೆಗೆ ಕನ್ನಡ, ಆಧ್ಯಾತ್ಮ ವಿಚಾರವರಿಯಲು ಸಂಸ್ಕೃತ ಎರಡೂ ಬೇಕೆನ್ನುವ ಭಾವನೆ ಇತ್ತೆಂದೂ ಅದು ವ್ಯಾಸಕೂಟ ದಾಸಕೂಟದವರ ಚರ್ಚೆಯ ಅಂ ತ್ಯದಲ್ಲಿ ನೀಡಿದ ಗುರು ವ್ಯಾಸರಾಯರ ಸಮನ್ವಯ ಭಾವನೆಯ ನುಡಿಗಳೆಂದೂ ಊಹಿಸಿದೆ. ಬತ್ತಕ್ಕೆ 'ವ್ರೀಹಿ' ಎಂದು ಸಂಸ್ಕೃತ ದಲ್ಲೂ, ರಾಗಿಗೆ 'ನೆರೆದಲಗ' ಎಂದು ಶುದ್ಧ ಕನ್ನಡದಲ್ಲೂ ಕರೆದಿದೆ. ವ್ರೀಹಿ ರೋಗಿ, ನರೆದಲಗ ನರೆತ ತಲೆಯ ವಯೋವೃದ್ಧ, ಜ್ಞಾನವೃದ್ಧ ಅಂದರೆ ಅಕ್ಕಿ ರಕ್ತಹೀನ ರೋಗಿಯ ಮುಖದಂತೆ ಬಿಳಿಚಿಕೊಂಡಿದ್ದರೆ, ರಾಗಿ ಬಲಿತು ಹಣ್ಣಾಗಿ ಕೊಯ್ಲಿಗೆ ಬಂದಾಗ ಅದರ ತೆನೆ ಬೆಳ್ಳಗಾಗುತ್ತೆ. ಆದ್ದರಿಂದಲೇ ನರೆತ ತಲೆಯವನು ಎಂದು ಕರೆದಿರುವುದು. ಅಕ್ಕಿಯ ಅನ್ನ ಒಂದು ಹೊತ್ತಿಗೆ ಹಳಸುತ್ತೆ, ಹಳಸಿದ ಮೇಲೆ ಹುಳು ತುಂಬಿ ಕೊಳೆಯುತ್ತೆ. ರಾಗಿ ಮುದ್ದೆ ಹಾಗಲ್ಲ; ಹಳಸುವುದೂ ತಡ, ಹಳಸಿದರೆ ಹುಳುವಾಗುವುದೂ ಇಲ್ಲ. ನೀರೊಡೆದು ಪೀಕಲು ಪಿಸಕಲಾಗುತ್ತೆ; ಅಷ್ಟೆ. ಅಲ್ಲದೆ ಬತ್ತ ಬೆಳೆದು ನಿಂತಾಗ ತಲೆ ಬಾಗಿಸಿಕೊಂಡರೆ, ರಾಗಿ ನರೆದಿದ್ದರೂ ತಲೆ ಎತ್ತಿ ಮೆರೆಯುತ್ತದೆ. ಅದು ಮೃತಭಾಷೆಗೆ ಸಿಗ್ಗು, ಜೀವಂತ ಭಾಷೆಗೆ ಹಿಗ್ಗು ಎಂಬಂಶವೂ ಧ್ವನಿತವಾಗುತ್ತದೆ. ಇದು ಒಂದು ಕುತೂಹಲಕಾರಿ ಕಲ್ಪನೆಯೇ ಹೊರತು ವಾಸ್ತವಿಕ ಸತ್ಯ ಅಲ್ಲ. ಹೀಗೆ ಕನಕದಾಸರು ನಮಗೆ ನಾಲ್ವರಿಗೆ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ರೂಪಗಳಲ್ಲಿ ಕಾಣಿಸಿಕೊಂಡಾಗ ಶಿವಗಂಗೆ ಬೆಟ್ಟ! ಆದರೆ ಈ ನಾಲ್ವರನ್ನೂ ಬಿಟ್ಟಿದ್ದು 'ಕನಕ ಶಿಖರಿ' ಎಂಬುದು ಅಂತ್ಯದಲ್ಲಿ ಉಳಿಯುವ ಸತ್ಯ. ಬತ್ತ ಮತ್ತು ರಾಗಿಯರ ವಾದ ಮೇಲು ನೋಟಕ್ಕೆ ಮತೀಯ ಸಂಘರ್ಷ ಅಥವಾ ದಲಿತ ಧೋರಣೆಯಾಗಿ ಕಂಡರೂ ಕನಕದಾಸರಂತಹ ಸಂತ ಶ್ರೇಷ್ಠರಲ್ಲಿ, ಆ ಸಮಷ್ಟಿ ಚೈತನ್ಯದಲ್ಲಿ ವ್ಯಷ್ಟಿಗತ ಅಲ್ಪತ್ವ ಇದ್ದಿರ ಲಾರದು ಎಂಬುದು ನನ್ನ ಅನಿಸಿಕೆ. ಅವರಿಗೆ ವ್ಯಾಸರಾಯರು, ಪುರಂದರ ದಾಸರು, ತಾತಾಚಾರ್ಯರು, ಆನಂದತೀರ್ಥರು, ವಾದಿ ರಾಜರು, ವಿಜಯೇಂದ್ರರು– ಇವರೆಲ್ಲರೂ ಪರಮ ಪೂಜ್ಯರು. ಅವರ ಬಗೆಗೆ ಅನನ್ಯಭಕ್ತಿ ಕನಕದಾಸರಿಗೆ. ಅವರೇ ಅವರ ಶಿಕ್ಷಾಗುರುಗಳು ದೀಕ್ಷಾಗುರುಗಳು ಮತ್ತು ಮೋಕ್ಷಗುರುಗಳು. ಅವರ ಬಗೆಗೆ ಅಪಚಾ ರದ ಅಥವಾ ನಿಂದನೆಯ ನುಡಿ ನುಡಿ ದಿರಲಾರರು. ಅಂತೆಯೇ ಅವರೇ ರಚಿಸಿದ ಹರಿಭಕ್ತಿಸಾರ, ನಳಚರಿತ್ರೆ, ಮೋಹನ ತರಂಗಿಣಿ, ಕೀರ್ತನೆಗಳು– ಎಲ್ಲ ಕೃತಿಗಳಲ್ಲೂ ಬ್ರಾಹ್ಮಣರನ್ನು ಭಕ್ತಿಯಿಂದಲೇ ಕಂಡು ಗೌರವಿಸಿದ್ದಾರೆ. ಅಷ್ಟೇ ವಾದಗ್ರಸ್ತ ಕೃತಿಯಾದ ರಾಮಧಾನ್ಯ ಚರಿತ್ರೆಯಲ್ಲೂ ಬ್ರಾಹಣ ರನ್ನು ಭುಸುರವರರೆಂದೇ ಸಂಬೋಧಿಸಿ ಮಾನ್ಯ ಮಾಡಿದ್ದಾರೆ. ಅಂದಮೇಲೆ ಬ್ರಾಹ್ಮಣ ಅಥವಾ ಬ್ರಾಹ್ಮಣ್ಯದ ಖಂಡನೆ ಕನಕ ದಾಸರಿಂದ ಬಹುದೂರ ಉಳಿಯಿತು. ದಲಿತ ಅಥವಾ ಬಂಡಾಯದ ಅರ್ಥ ಕನಕದಾಸರ ಕನಸಿನಲ್ಲೂ ಸುಳಿದಿರಲಿಕ್ಕಿಲ್ಲ. ಅಂದರೆ ನೋವನ್ನನುಭವಿಸಿ ಕಿಂಡಿಯ ಮೂಲಕವಾದರೂ ಅಖಂಡನನ್ನು ದರ್ಶಿಸುವುದು ಗೊತ್ತಿತ್ತೇ ಹೊರತು ಯಾರನ್ನೂ, ಯಾವುದನ್ನೂ ಪ್ರತಿಭಟಿಸುವ ಇಲ್ಲವೇ ಭರ್ತ್ಸನೆ ಗೈಯುವ ಮನೋಧರ್ಮ ಅವರದ್ದಾಗಿರಲಿಲ್ಲ. ಅನ್ಯಾಯದ ಬಗ್ಗೆ ಸಾತ್ವಿಕ ವಿರೋಧವನ್ನೂ ಅವರಲ್ಲಿ ನಾವು ಕಾಣಲಾರೆವು. ಆದ್ದರಿಂದ ಬಂಡಾಯ ಭಾವನೆ ಅವರಲ್ಲಿ ಖಂಡಿತ ಮೂಡಿರಲಾರದು. ಸಿರಿತನದ ನಿಸ್ಸಾರವನ್ನೂ ಬಡತನದ ನಿಸ್ಸಂಗತ್ವವನ್ನೂ ಕಂಡುಕೊಂಡಿದ್ದ ಆ ಪೂರ್ಣಾ ನುಭವಿಗೆ ಹಣದ ಬಣ್ಣವೇ ಮರೆತು ಹೋಗಿತ್ತು ಎಂದ ಮೇಲೆ ಧನಿಕ ದರಿದ್ರ ಎಂಬ ಪ್ರಶ್ನೆ ಅವರನ್ನು ಕಾಡಿರಲಿಕ್ಕಿಲ್ಲ. ಸಮಸ್ತವೂ ಅವನ ಕರುಣಾಪ್ರಸಾದವೆಂದು ಭಾವಿಸಿದ್ದ ಸಮದರ್ಶಿಯ ಬಳಿಗೆ ಭಾಷೆ ಬಂದು ತನ್ನ ಸಮಸ್ಯೆಗೆ ಪರಿಹಾರವನ್ನು ಬೇಡಿರಲಿಕ್ಕಿಲ್ಲ. ಆ ಕಾರಣ ಸಂತಕವಿ, ಭಕ್ತಕವಿ, ದಿವ್ಯದ್ರಷ್ಟಾರ, ದಾರ್ಶನಿಕ, ಅನುಭಾವಿ, ಅಪರೋಕ್ಷಜ್ಞಾನಿ, ಆದಿಕೇಶವನ ಅವಿಚ್ಛಿನ್ನ ಭಕ್ತ, ವಿಶ್ವಮಾನವ ಕನಕದಾಸ ಇವೆಲ್ಲವುಗಳಿಗೂ ಅತೀತನಾದವನು: ಅನ್ಯಾದೃಶ ಅಮೇಯ ವ್ಯಕ್ತಿ–ಶಕ್ತಿ ಆತ. ಅವನು ತನ್ನ ಮನೋವಲಯದಲ್ಲಿ ಪುಟಿದೆದ್ದ ಭಕ್ತಿಯ ಕಾರಂಜಿಗೆ ರಾಮಧಾನ್ಯಚರಿತ್ರೆ ಎಂಬ ಒಂದು ಪ್ರಣಾಳಿಯನ್ನು ನಿರ್ಮಿಸಿದ್ದಾನೆ ಎಂದು ಹೇಳಬಹುದು. ಇಷ್ಟಾದರೂ ರಾಮಧಾನ್ಯ ಚರಿತ್ರೆಯ ಅಸ್ತಿತ್ವ ಅಡಗಿರುವುದು ಅದರಲ್ಲಿದೆ ಎನ್ನಲಾದ ಮತೀಯ ವಿಡಂಬನೆಯಲ್ಲಲ್ಲ.

ಬಂಡಾಯ ಪ್ರಜ್ಞೆಯಿಂದಲ್ಲ, ಭಾಷೆಯ ಕ್ಲೀಷೆಯಿಂದಲ್ಲ, ಅಥವಾ ಬೃಹತ್ ರಾಮಾಯಣ ಸಂಗ್ರಹಗೊಂಡಿದೆ ಎಂಬುದರಿಂದಲೂ ಅಲ್ಲ; ಅದರಲ್ಲಿ ಎದ್ದು ಕಾಣುವ ಸಂಭಾಷಣೆಯ ಶ್ರೀಮಂತಿಕೆಯಲ್ಲಿ; ಅಲ್ಲಿನ ನಾಟಕೀಯತೆಯಲ್ಲಿರುವ ಗಂಡುಗುಣದಲ್ಲಿ. ಆದರೆ ಒಂದು ಮಾತು! ಕನಕದಾಸರು ಪಂಪನಂತೆ ಭಾಷಣಾರರು. ರನ್ನನಂತೆ ಅಥವಾ ರಾಘವಾಂಕನಂತೆ ಚಕಮಕಿಯಂತೆ ಮಾತಿನ ಕಿಡಿಕಾರಿಸುವ ಚಾತುರ್ಯ ಇಲ್ಲ ಅವರಲ್ಲಿ. ಆದರೆ ಅವರ ಗ್ರಾಮೀಣ ಸೊಗಡು ತುಂಬಿದ ಬನಿಯುಳ್ಳ ಭಾಷೆ ಅವರ ವಸ್ತು ವಿನ್ಯಾಸದ ವಿಶಿಷ್ಟತೆಗೆ ಸಮಸ್ಪರ್ಧಿಯಾಗಿ ನಿಂತಿದೆ ಎನ್ನಬಹುದು. ಗೌತಮ ಮಹಾಮುನಿಯು ಶ್ರೀರಾಮನಿಗೆ 'ನಮ್ಮಯ ದೇಶಕತಿಶಯ ನರದಲೆಗನೇ ವಾಸಿ' ಎಂದಕೂಡಲೇ ಸಿಡಿದೆದ್ದ ವ್ರೀಹಿ, 'ಎಲ್ಲ ಧರ್ಮದ ಸಾರವನ್ನೂ ಬಲ್ಲ ನೀವು ಅಜ್ಞರಂತೆ ನುಡಿವುದು ಉಚಿತವಲ್ಲ. ನೆಲ್ಲು ನಾನಿರೆ, ಗೋಧಿ ಮೊದಲಾದೆಲ್ಲಾ ಧಾನ್ಯಗಳಿರಲು ಇದರಲಿ ಬಲ್ಲಿದನು ನರದಲೆಗನೆಂಬುದಿದಾವ ಮತ?' ಎಂದು ದಟ್ಟಿಸಿ ನುಡಿಯುತ್ತಾನೆ. ಅನಂತರ ನರದಲೆಗ ನನ್ನು ತರಾಟೆಗೆ ತೆಗೆದುಕೊಳ್ಳುತ್ತಾನೆ: 'ಏನೆಲವೊ ನರದಲೆಗ ನೀನು ಸಮಾನನೇ ಎನಗೆ? ಕುಲಹೀನ, ಮತಿಹೀನ, ಬುಧರು ಜರೆದು ನಿರಾಕರಿಸಿ ಬಿಡಲಂತು ನೀ ಶೂದ್ರಾನ್ನವಾದೆಯಲ! ಬಾಹಿರ, ನಡೆ ಸಾಕು ನೀನಾವ ಮಾನ್ಯನು' ಎಂದು ಜರೆದು ಜಂಕಿಸಿ ನುಡಿದು, ಮುಂದೆ ತನ್ನ ಮಹಿಮ ಯನ್ನು ಕೊಚ್ಚಿಕೊಳ್ಳುತ್ತಾನೆ: 'ಕ್ಷಿತಿಯಮರರುಪನಯನದಲಿ, ಸುವ್ರತ, ಸುಭೋಜನ, ಪರಮ ಮಂತ್ರಾಕ್ಷತೆಗಳಲಿ, ಶುಭಶೋಭನದಲಾರ ತಿಯಲಿ, ಕ್ರತುಗ ಳೆಡೆಯಲಿ, ಅರಮನೆಯಲಿ ಪ್ರತಿದಿನವು ರಂಜಿಸುತ ದೇವರಿಗತಿಶಯದ ನೈವೇದ್ಯದಲಿ, ಬ್ರಹ್ಮರ ಸಮಾರಾಧನೆ ಯಲಿ, ವಿದ್ಯಾರಂಭ ಕಾಲದಲಿ, ಹರಿದಿವರದೌಪಾಸನೆಗಳಲಿ, ಹೊಸಮನೆಯ ಪುಣ್ಯಾರ್ಚನೆಯಲಿ, ಮದುಮಕ್ಕಳಿಗೆ ಸೇಸೆಯಿಡು ವೆಡೆಯಲ್ಲಿ, ಗಂಧಾಕ್ಷ ತೆಯಿಂದೆಸೆವ ವಿಪ್ರರ ಪಾಲಲ್ಲಿ ನಾನು ಮೆರೆಯುತ್ತೇನೆ. ಅಲ್ಲದೆ, ಪರಿಮಳದ ಚಂದನದ ತರುವಿಗೆ ಸರಿಯೆ ಒಣಗಿದ ಕಾಷ್ಠ? ಗೋವಧು ಕರೆದ ಹಾಲಿಗೆ ಕುರಿಯ ಹಾಲಂತರವೆ? ಪರಮ ಸಾಹಸಿ ವೀರ ಹನುಮಗೆ ಮರದ ಮೇಲಣ ಕಪಿಯು ಸಮನೆ? ಸುರನದಿಗೆ ಕಾಡ ಹಳ್ಳ ಸರಿಯೆ? ಗರುಡನ ಮರಿಗೆ ಹದ್ದಂತರವೆ? ಹಂಸೆಗೆ ಬಕನು ಹೋಲುವುದೆ? ಮರಿ ಕೋಗಿಲೆ ವಾಯಸ ಜೋಡಿಯೆ? ನರೆದಲೆಗನ ಸಾಕಿನ್ನು ನೀನಾವ ಮಾನ್ಯನು? ವ್ರೀಹಿಯ ಭಾಷಣದ ನಂತರ ನರೆದಲೆಗನ ಸರದಿ. ಸಭೇಮಧ್ಯದಲ್ಲಿ ಎದ್ದುನಿಂತ ನರದಲೆಗ ತನ್ನ ಮಾತಿನ ಬಾಣಗಳನ್ನು ಪುಂಖಾನುಪುಂಖವಾಗಿ ಬಿಟ್ಟ. 'ನುಡಿಗೆ ಹೇಸದ ಭಂಡ ನಿನ್ನೊಳು ಕೊಡುವುದೇ ಮಾರುತ್ತರವೆ ! ಕಡು ಜಡನಲಾ, ಸತ್ಯಹೀನನು ನೀನು. ಬಡವರ ಕಣ್ಣೆತ್ತಿ ನೋಡೆ, ಧನಾಢ್ಯರನು ಬೆಂಬತ್ತಿ ನಡೆವುದಪೇಕ್ಷೆ ನಿನ್ನದು: ಬಾಣಂತಿಯರಿಗೆ ರೋಗಿಗೆ ಪಥ್ಯ ನೀನಹೆ: ಹೆಣದ ಬಾಯಿಗೆ ತುತ್ತು. ಇಂಥವನಾದ ನಿನ್ನ ಜನ್ಮ ನಿರರ್ಥಕ. ಸತ್ತದಿನದಾರಭ್ಯ ಮನುಜರು ಕರ್ಮವಹೊತ್ತು ಪಿಂಡವನಿತ್ತು– ತಪ್ಪದೆ ಮತ್ತೆ ವಾಯಸಕುಲವ ಕರಕರದು ತುತ್ತನಿಡುವರು. ಎಳ್ಳು ದರ್ಭೆಗೆ ತೆತ್ತಿಗನು ನೀನು. ಮಳೆದೆಗದು ಬೆಳೆಯಡಗಿ ಕ್ಷಾಮದವಿಳೆಯಕಾಲ ದೊಳನ್ನವಿಲ್ಲದೆ ಅಳಿವ ಪ್ರಾಣಿಗಳನಾದರಿಸಿ ಸಲಹಿದವನು ನಾನು; ನೀನಲ್ಲ. ಬಡವಬಲ್ಲಿದ ಎಂಬ ಪಕ್ಷಪಾತ ನಿನ್ನಲ್ಲಿದೆ, ನನ್ನಲ್ಲಿಲ್ಲ ನಾನು ಸಮದರ್ಶಿ. ನೀನು ಸತ್ತವರ ಪ್ರತಿಬಿಂಬ ರೂಪನಿದ್ದೀಯೆ. ಹೆಚ್ಚೇನು ನಪುಂಸಕನಾದ ನಿನ್ನೊಡನೆ ವಾದ ಮಾಡುವುದೇ ಉಚಿತವಲ್ಲ! ಇತ್ತಂಡದಲ್ಲೂ ವಿದ್ವೇಷ ಹೆಚ್ಚಿ, ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ಕಂಡು ಶ್ರೀರಾಮನು ಇಬ್ಬರನ್ನೂ ಸೆರೆಯಲ್ಲಿಡು ವಂತೆ ಆಜ್ಞೆಮಾಡುತ್ತಾನೆ. ಏಳು ತಿಂಗಳ ಸೆರೆಮನೆ ವಾಸದ ಅನಂತರದಲ್ಲಿ ಸಾರ್ವಭೌಮ ಶ್ರೀರಾಮನು ಅಯೋಧ್ಯೆಗೆ ಕರಸಿ, ಇಬ್ಬ ರನ್ನೂ ವಿಚಾರಣೆಗೆ ಒಳಗುಮಾಡಿದಾಗ ಸಾರಹೃದಯದ ನರೆದಲೆಗ ಗಟ್ಟಿಯಾಗಿದ್ದ; ಆದರೆ ನಿಸ್ಸಾರಗೊಂಡ ವ್ರೀಹಿ ಕಾಂತಿ ಹೀನನಾಗಿ ಕರಗಿಹೋಗಿದ್ದ. ನರೆದಲೆಗನ ಗಟ್ಟಿತನವನ್ನು ಕಂಡು ರಾಘವನು ಅವನಿಗೆ ತನ್ನ ಹೆಸರಿಟ್ಟ. ಅಂದಿನಿಂದ ನರೆದಲೆಗನಿಗೆ 'ರಾಗಿ' ಎಂದು ಹೆಸರಾಯಿತು! ವಸ್ತುವಿನ್ಯಾಸ ಕುರಿತ ಕವಿಯ ಚಮತ್ಕೃತಿ ಏನೇ ಇರಲಿ, ಕಸವುಳ್ಳ ಮಾತಿನ ವಾದದಿಂದಾಗಿ ಕೃತಿಯ ಸಮಗ್ರಶಿಲ್ಪಕ್ಕೊಂದು ಮೆರಗು ಬಂದಿದೆ ಎಂದು ಹೇಳಬಹುದು. ಹೆಸರೇ ಸೂಚಿಸುವಂತೆ ಹರಿಭಕ್ತಸಾರ ಹರಿನಾಮ ಸಂಕೀರ್ತನೆಯ ತುಲಸೀ ಹಾರ; ವಿಷ್ಣು ಪಾರಮ್ಯದ ಪುಣ್ಯಕೃತಿ; ಭಕ್ತಿಯೆ ಭಾಗೀರಥಿಯಾಗಿ ಕನ್ನಡಕ್ಕೊದಗಿಬಂದ ತೀರ್ಥ ಸಾಹಿತ್ಯ. ಜಗನ್ನಾಟಕ ಸೂತ್ರಧಾರಿಯಾದ ಶ್ರೀಹರಿಯ ದಶಾವತಾರಗಳ ನೆನಹಿನ ಹಿನ್ನಲೆಯಲ್ಲಿ ಅವನ ಉರಿತ ಪ್ರಾಂಜಲ ಮನದ ಪರಿಶುದ್ಧ ಭಾವನೆಯ ಭಕ್ತಿ ಓತಪ್ರೋತವಾಗಿ ಹರಿದಿದೆ ಇಲ್ಲಿ. ಪ್ರತಿ ಪದ್ಯವೂ ಮುಕ್ತಾಯವಾಗುವ 'ರಕ್ಷಿಸು ನಮ್ಮನನವರತ' ಎಂಬ ಬೇಡಿಕೆ ಭಕ್ತಿಭಾವದ ಅನನ್ಯತೆಯ ಪ್ರತೀಕ.

ಗತಿ ವಿಹಿನರಿಗಾಗಿ ನೀನೇ
ಗತಿಕಣಾ ಪತಿಕರಿಸಿಕೊಡು ಸ
ದ್ಗತಿಯ ನೀನೆಲೆ ದೇವ ನಿನಗಪರಾಧಿ ನಾನಲ್ಲ

ಶ್ರುತಿ ವಚನವಾಡುವುದು ನಿನ್ನನು
ಮತವಿಡಿದು ನಂಬಿದೆನು ರಕ್ಷಿಸು ನಮ್ಮನನವರತ

ಇಲ್ಲಿ ಅಭಿವ್ಯಕ್ತವಾಗುವ ಭಕ್ತಕವಿಯ ಆರ್ತತೆ, ಅನನ್ಯ ಶರಣತೆ ಮತ್ತು ನೈಷ್ಠಿಕಾ ಭಕ್ತಿಯ ಅನುಮೋದನೆ ನಿಜಕ್ಕೂ ಶ್ಲಾಘನೀಯ. ಇಲ್ಲಿನ ಎಲ್ಲ ಭಾಮಿನಿಗಳಲ್ಲೂ ಭಕ್ತಿ ರಸತುಂಬಿ ತುಳುಕಿರುವುದು ಕಂಡುಬರುತ್ತದೆ. ಈ ಬಗೆಯ ವೈಷ್ಣವ ಭಕ್ತಿಯ ವೈಭವದ ಜೊತೆಯಲ್ಲಿ ಕಾವ್ಯವೈಖರಿಯೂ ತೆಕ್ಕೆ ಬಿದ್ದಿರುವುದು ಕಂಡುಬರುತ್ತದೆ. ದೀನ ನಾನು ಸಮಸ್ತ ಲೋಕಕೆ ದಾನಿ ನೀನು; ವಿಚಾರಿಸಲು ಮತಿಹೀನ ನಾನು ಮಹಾಮಹಿಮ ಕೈವಲ್ಯ ಪತಿ ನೀನು; ಏನು ಬಲ್ಲೆನೊ ನಾನು, ನೆರೆ ಸುಜ್ಞಾನ ಮೂರುತಿ ನೀನು ಎಂಬ ಅನು–ಘನಗಳ ವಿಶ್ಲೇಷಣೆಯಲ್ಲಿ ' ವರುಷ ನೂರಾಯುಷ್ಯ ಅದರೊಳಗೆ ಇರುಳು ಕಳದೈವತ್ತು. ಐವತ್ತರಲಿ ವಾರ್ಧಿಕ, ಬಾಲ್ಯ, ಕೌಮಾರ್ಯದಲಿ ಮೂವತ್ತು ಇರದೆ ಸಂದುದು ಬಳಿಕ ಇಪ್ಪತ್ತು ವರುಷ' ಎಂಬ ಆರ್ಯುಮಾನದ ಶೇಷನಿರ್ಷ್ಕೆಯಲ್ಲಿ 'ಎಂಜಲೆಂಜಲು ಎಂಬರಾ ನುಡಿ, ಎಂಜಲಲ್ಲವೆ' ಎಂಬ ಸಾರಳ್ವದಲ್ಲಿ 'ಸತ್ತವರಿ ಗಳಲೇಕೆ ತನ್ನನು ಹೆತ್ತವರು ಹೊತ್ತವರುಗಳು ತಾವ್ ಸತ್ತು ಹೋಗುವರಲ್ಲದುಳಿವರೆ?' ಎಂಬ ಕಟುಸತ್ಯ ಘೋಷಣೆಯಲ್ಲಿ, 'ಹಸಿವರಿತು ತಾಯ್ ತನ್ನ ಶಿಶುವಿಗೆ ಒಸೆದು ಮೊಲೆ ಕೊಡುವಂತೆ'. ಗಿಳಿಯು ಮರಿಯನು ತಂದು ಪಂಜರದೊಳಗೆ ಪೋಷಿಸಿ ಕಲಿಸಿ ಮೃದು ನುಡಿಗಳನು ಲಾಲಿಸಿ ಕೇಳ್ವ ಪರಿಣತರಂತೆ– ಇವೇ ಮೊದಲಾದ ಔಚಿತ್ಯಪೂರ್ಣ ಉಪಮೆಗಳ ಅಳವಡಿಕೆಯಲ್ಲಿ. 'ಎಂಟು ಗೇಣಿನ ದೇಹ ರೋಮಗಳೆಂಟು ಕೋಟಿಯು ಕೀಲ್ಗಳರವತ್ತೆಂಟು ಮಾಂಸಗಳಿಂದ ಮಾಡಿದ ಮನೆಯ ಎಂಬ ನೈಜ ರೂಪಕ ಅಥವಾ ಕಾವ್ಯಪ್ರತಿಮೆಯ ನಿರ್ಮಾ ಣದೆಡೆಯಲ್ಲಿ. 'ತಾಮರಸದಳ ನಯನ ಭಾರ್ಗವ ರಾಮ ಹಲಧರ ಧಾಮ ದಶ ರಥ ರಾಮ ಮೇಘಶ್ಯಾಮ ಸದ್ಗುಣಧಾಮ ನಿಸ್ಸೀಮ ಎಂಬಲ್ಲಿನ ಪ್ರಾಸಾನು ಪ್ರಾಸಯುಕ್ತ ನಾದಲೋಲುಪತೆಯಲ್ಲಿ ಪ್ರತಿ ಪದ್ಯದಲ್ಲೂ ಅಭಿವ್ಯಕ್ತಿಗೊಳ್ಳುವ ಭಾವ ಸ್ಪಷ್ಟತೆಯಲ್ಲಿ ಅದಕ್ಕನುಗುಣವಾದ ಶೈಲಿಯ ಸುಬಗ ಸೌಂದರ್ಯದಲ್ಲಿ ಭಾವ ಮಾಧುರ್ಯದಲ್ಲಿ ಭಾಷೆಯ ಬಂಧುರತೆಯಲ್ಲಿ ಭಾಮಿನಿಯ ಓಘ ವೈಭವಗಳಲ್ಲಿ ಕವಿ ಕನಕದಾಸರ ಕಮನೀಯ ಕಾವ್ಯಗುಣ ದ್ಯುತಿ ಪಡೆದಿದೆ. ಶಿಷ್ಟ ಸಾಹಿತ್ಯದ ಸೃಷ್ಟಿಗೆ ಜನಪದವೇ ಮಾತೃ ಗರ್ಭವಷ್ಟೆ. ನಳನಕತೆ ಇದಕ್ಕೆ ಅಪವಾದವಾಗಿಲ್ಲ. ಅದರ ತಾಯಿ ಬೇರಿರುವುದು ಜಾನಪದದಲ್ಲಿಯೇ–ಪ್ರಾಚೀನ ಯುಗದ ಚಾಋಣ ಗೀತೆ, ಅರ್ವಾಚೀನದಲ್ಲಿ ಕಾವ್ಯ ಮಹಾಕಾವ್ಯ ಆದಂತೆ ನಳನ ಕತೆ ಒಂದು ಖಂಡಕಾವ್ಯವಾಗಿ ರೂಪಗೊಂಡಿದೆ. ವ್ಯಾಸಮುನಿ ತನ್ನ ಮಹಾಕಾವ್ಯಕ್ಕೊಂದು ಆಯಾಮ ಒದಗಿಸಲು ನಳ, ಹರಿಶ್ಚಂದ್ರ ಮೊದಲಾದ ಕಥಾನಕಗಳನ್ನು ಜನಪದ ದಿಂದಲೇ ಆಯ್ದುಕೊಂಡಿದ್ದಾನೆ. ಉಪಾಖ್ಯಾನಗಳಾಗಿ ರೂಪಿಸಿ ಅಳವಡಿಸಿದ್ದಾನೆ. ಹರಿ ಶ್ಚಂದ್ರ ಸತ್ಯಕ್ಕೆ ಸಂಕೇತವಾದರೆ, ನಳ ಆದರ್ಶ ಪ್ರೇಮದ ಪ್ರತೀಕವಾಗಿದ್ದಾನೆ. ಜಾನಪದೀಯವೂ ಜನಪ್ರಿಯವೂ ಆದ ನಳನ ಕಥೆ ವೇದ, ಬ್ರಾಹ್ಮಣ ಅರಣ್ಯಕ ಇತಿಹಾಸ ಗಳಿಗಿಂತಲೂ ಪ್ರಾಚೀನತಮವಾದುದು. ರಾಮಾಯಣದಲ್ಲಿ ಪ್ರಾಸಂಗಿಕವಾಗಿ ಒಂದೆಡೆ ನಳ ದಮಯಂತೀವ ಎಂಬ ಉಲೇಖ ದೊರೆತರೆ ಮಹಾಭಾರತ ವನಪರ್ವದಲ್ಲಿ ಇಪ್ಪತ್ತೆಂಟು ಅಧ್ಯಾಯಗಳಷ್ಟು ವ್ಯಾಪ್ತಿಯುಳ್ಳ ಒಂದು ಕಾವ್ಯಕಾಸಾರವೇ ಆಗಿ ರೂಪು ಗೊಂಡಿದೆ. ವ್ಯಾಸರ ಅನಂತರದಲ್ಲಿ ಇದು ಅನೇಕ ಕವಿ ನಾಟಕಕಾರರಿಗೆ ಆಕರವಾಯಿತು. ಮುಂದಿನವರು ಕರ್ಮನಿಷ್ಠೆಯ ಕಷ್ಟಸಹಿಷ್ಣುತೆಯ ನೀತಿಬೋಧಕ ಕತೆಯಾಗಿ, ಇಲ್ಲವೇ ದೈವ ಎನ್ನುವುದು ಒಂದು ಅಪ್ರತಿಹತ ಶಕ್ತಿ ಎಂದು ಸಾರುವ ವಿಧಿವಾದ ಪ್ರತಿಪಾದಕ ಕಾವ್ಯವಾಗಿ, ಇಲ್ಲವೇ ಅಳಿಕಾಮ ಕರಗಿ ಪರಿಶುದ್ಧವಾಗಿ ಪರಿಣಮಿಸಿದ ಪುಣ್ಯ ಹೇತುವಾಗಿ ಮಾರ್ಪಡಿಸಿ ರೂಪಿಸಿ ಕೊಂಡರು. ಸಂಸ್ಕೃತದ ಪಂಚ ಮಹಾಕಾವ್ಯಗಲ್ಲಿ ಒಂದಾದ ನೈಷಧಂವದ್ವದೌಷಧಂ' ಎಂಬ ಭಾವನಾ ವಿಮರ್ಶೆಗೆ ಪಾತ್ರವಾದ ಶ್ರೀಹರ್ಷನ ನಯಷಧೀಯ ಚರಿತ. ಘ್ರಾವಿಕ್ರಮಭಟ್ಟನ 'ನಲಚಂಪು', ವಾಮನ ಭಟ್ಟನ 'ನಲಾಭ್ಯುದಯ' ಮೊದಲಾದ ಕಾವ್ಯಗಳು. ಆರ್ಯಕ್ಷೇಮೇಂದ್ರನ 'ನೈಷಧಾನಂದ', ರಾಮಚಂದ್ರ ಸೂರಿಯ 'ನಲವಿಲಾಸ', ನೀಲ ಕಂಠ ದೀಕ್ಷಿತನ ನಳಚರಿತ, ವೆಂಕಟಾ ರ್ಯನ 'ಭೈಮೀ ಪರಿಣಯ' ಮೊದಲಾದ ನಾಟಕಗಳು ಪ್ರಸಿದ್ಧವಾಗಿವೆ. ಕನ್ನಡದಲ್ಲಿ ಸುಮಾರು ಹದಿಮೂರನೆಯ ಶತಮಾನ ದವನೆನ್ನಲಾದ ಚೌಂಡರಸನ ನಳಚಂಪು ಉಪಲಬ್ಧವಿರುವ ಮೊತ್ತ ಮೊದಲ ನಳನೃಪ ಕಾವ್ಯ. ಕುಮಾರವ್ಯಾಸ ಭಾರತದಲ್ಲಿ ಕ್ವಚಿತ್ತಾಗಿ, ಯಕ್ಷಗಾನ ಬಯಲಾಟಗಳಲ್ಲಿ ಬೃಹತ್ತಾಗಿ ಬೆಳೆದು ನಿಂತಿದೆ. ಇವರೆಲ್ಲರ ಕೃತಿಗಳ ವಸ್ತು ಹೆಚ್ಚು ಕಡಿಮೆ ಪವಿತ್ರಪ್ರೇಮ ಮತ್ತು ಪಾತಿವ್ರತ್ಯ ಮಹಿಮೆ ಆಗಿದೆ. ಅದಕ್ಕೂ ಹೆಚ್ಚಾಗಿ ವಿಧಿವಾದವನ್ನು ವೈಭವೀಕರಿಸುವುದು. ಅದರೆ ಈ ಬಗ್ಗೆ ನಲವಿಲಾಸ ನಾಟಕದ ಕರ್ತೃ ರಾಮಚಂದ್ರ ಸೂರಿ ಮಾತ್ರ ಅಪವಾದವಾಗಿದ್ದಾನೆ. ಅವನು ದೈವಶಕ್ತಿಗೆ ಬದ ಲಾಗಿ ಮಾನವಶಕ್ತಿಯನ್ನೇ ಬಳಸಿ ಕೊಂಡಿದ್ದಾನೆ. ಕಲಿಪುರಷಬ ಬದಲು ನಾಟಕದಲ್ಲಿ ಚಿತ್ರಸೇನನೆಂಬ ಮಾನವ ಪಾತ್ರವನ್ನು ತಂದು ಒಂದು ಹೊಡ ತಿರುವು ಕೊಟ್ಟಿದ್ದಾನೆ. ಕನಕದಾಸರ ನಳಚರಿತ್ರೆಗೆ ಕನ್ನಡದಲ್ಲಿ ಒಂದು ಗೌರವ ಸ್ಥಾನ ಮೀಸಲಿದೆ. ಕೇವಲ ಒಂಬತ್ತು ಸಂಧಿಗಳುಳ್ಳ ಒಂದು ಖಂಡಕಾವ್ಯವಾದರೂ ಓದುಗನಿಗೆ ಮಹಾಕಾವ್ಯದಷ್ಟು ತೃಪ್ತಿಕೊಡುವ ಸತ್ವಶಾಲೀ ಕೃತಿಯಾಗಿದೆ. ಅದಕ್ಕೆ ಮೂಲಕಾರಣ ಕನಕ ದಾಸರ ಕಥಾಗಾರಿಕೆ; ಅವರ

ಹೃದ್ಯಶೈಲಿ, ಭಾಮಿನಿಯ ಸುಭಗತೆ, ವರ್ಣನೆಗಳ ಸಹಜತೆ. ಕೆಲವೆಡೆಗಳಲ್ಲಿ ಕನಕದಾಸರು ವಾಗ್ಗೇ ಯಕಾರರೊ ಅಥವಾ ಕಾವ್ಯಪ್ರವಚನಕಾರರೊ ಅಥವಾ ಹರಿಕಥ ದಾಸರೊ ಆಗಿಬಿಡುತ್ತಾರೆ.ಕಥೆಯನ್ನು ಪದೇಪದೇ ಹಾಡಿ ಹೇಳಿ ರೂಢಿಯಾಗಿರುವಂತೆ ನಿರರ್ಗಳವಾದ ತಮ್ಮದೇ ಆದ ಧಾಟಿಯಲ್ಲಿ ನಿರೂಪಿಸಿಕೊಂಡು ಹೋಗುತ್ತಾರೆ. ಅದರಿಂದಾಗಿ ಅವರ ಅಭಿವ್ಯಕ್ತಿಜಾನಪದೀಯ ಸೊಗಡಿನಿಂದ ತುಭಿದೆ. ಕೃತಿ ಅವರ ನಿತ್ಯಾನುಷ್ಠಾನದ ಪುರಾಣ ಕಾವ್ಯವಾದ್ದರಿಂದ ಅದರ ಒಲತಿರುಳು ದೈವಭಕ್ತಿಯಾಗಿ ದೈವಶಕ್ತಿಯ ಪ್ರತಿಪಾದಕ ವಸ್ತುವಾಗಿ ಮೆರೆದಿದೆ. ವ್ಯಾಸರಿತ್ತ ಕಥಾವಸ್ತುವಿನ ವಿನ್ಯಾಸದಲ್ಲಿ ಹೆಚ್ಚು ಬದಲಾವಣೆ ಮಾಡಲು ಹೋಗಿಲ್ಲವಾದರೂ ಸಾಂದರ್ಭಿಕವಾಗಿ ತಮ್ಮ ಸೋಪಜ್ಞತೆಯನ್ನು ಮೆರೆಯದೆ ಬಿಟ್ಟಿಲ್ಲ. ಉದಾಹರಣೆಗೆ ಹಂಸದರ್ಶನ್ಕೆ ಮುಂಚೆ ನಳನ ಬೇಂಟೆಯ ಬಣ್ಣನೆ ಬರುತ್ತದೆ. ಇಲ್ಲಿ ಬೇಂಟೆಗೆ ಹೋಗಲು ಒದಗಿದ ಸಂದರ್ಭವಂತೂ ತುಂಬಾ ಅರ್ಥಪೂ ರ್ಣವಾದದ್ದು. ಏಕೆಂದರೆ ವಿದರ್ಭದೇಶದ ಅರಸುಗುವರಿ ಭೈಮಿಯ ರೂಪಲಾವಣ್ಯಗಳ ಬಣ್ಣನೆಯನ್ನು ಬ್ರಾಹ್ಮಣೋತ್ತಮರಿಂದ ಕೇಳಿ ಮಾರುಹೋದ ನಳನ ಮನ ಅನ್ಯಕ್ಕೆಳಸದಿದ್ದಾಗ, ವಿಪ್ರಲಂಬದ ವಿರಹಾವಸ್ಥೆಯಲ್ಲಿದ್ದಾಗ ಆ ತಾಪಕ್ಕೆ ಕೊಟ್ಟ ತಿರುವಾಗಿ ಬರುತ್ತದೆ ಬೇಂಡೆ. ಬೇಂಟೆಯಿಂದ ಆಯಾಸಗೊಂಡ ನಳ ಬಹಿರುದ್ಯಾನದ ಕೊಳದ ತಡಿಯಲ್ಲಿ ವಿಶ್ರಾಂತಿ ಪಡೆವ ಸಂದರ್ಭದಲ್ಲಿ ರಾಜಹಂಸೆ ಕಾಣಿಸಿಕೊಳ್ಳುತ್ತದೆ. ಅಲ್ಲಿ ಹಂಸದೌತ್ಯದ ಸುಂದರ ಕಲ್ಪನೆ ಬಂದಿದೆ. ಇದೇ ರೀತಿ ದೇವೇಂದ್ರನ ಆಜ್ಞೆಯಂತೆ ದಮ ಯಂತಿಯ ಅಂತಃಪುರಕ್ಕೆ ಬಂದ ನಳನು ತಾನಾರೆಂಬುದನ್ನು ಮೊದಲು ತಿಳಿಸುವುದೇ ಇಲ್ಲ. ಅವಳು ಕೇಳಿದರೂ, 'ನಾನು ದೇವೇಂದ್ರನ ಕಡೆಯ ದೂತ; ಅಗ್ನಿ, ಯಮ, ವರುಣರಿಂದ ಆಜ್ಞಪ್ತನಾಗಿ ಬಂದಿದ್ದೇನೆ' ಎಂದಷ್ಟೇ ಹೇಳಿ ಆ ನಾಲ್ವರಲ್ಲಿ ಅವಳು ಯಾರನ್ನಾದರೂ ಒಲಿಯಬೇಕೆಂದು ಒತ್ತಾಯಿಸುತ್ತಾನೆ. ಆಗ ಸಿಟ್ಟಿಗೆದ್ದ ದಮಯಂತಿ, 'ನಳನೇ ನನ್ನ ಪತಿ. ಅವನುಳಿದರೆ ನನಗೆ ಮರಣವೇ ಗತಿ' ಎಂಬ ನಿರ್ಧಾರದ ನುಡಿ ನುಡಿಯುತ್ತಾಳೆ. ಅಪ್ರತ್ಯಕ್ಷವಾಗಿ ನಳನು ದಮಯಂತಿಯ ಮನದ ಪ್ರೇಮದಾಳವನ್ನು ಅಳೆದಂತಹ ಸುಂದರ ಸನ್ನಿವೇಶ ನಿರ್ಮಾಣ ಕನಕದಾಸರದು; ಮತ್ತು ಅವರಿಗಿಂತಲೂ ಹಿಂದಿನವನಾದ ಚೌಂಡರಸನ ಕಲ್ಪನೆ. ಆದರೆ ಮಹಾಭಾರತದಲ್ಲಿ ಅಂತಃಪುರಕ್ಕೆ ಆಗಮಿಸಿದ ನಳನನ್ನು ನೀನಾರೆಂದು ಕೇಳಿದಾಗ 'ನಲಂ ಮಾಂ ವಿಧಿ ಕಲ್ಯಾಣಿ ದೇವ ದೂತಮಿಹಾಗತಂ' ಎಂದು ನೇರವಾಗಿ ತನ್ನ ಹೆಸರು ಹೇಳಿಕೊಂಡು ತಾನಲ್ಲಿಗೆ ಬಂದ ಉದ್ದೇಶವನ್ನು ಹೇಳುತ್ತಾನೆ. ಮೂಲಕ್ಕಿಂ ತಲೂ ಮಾರ್ಪಾಟು ಅರ್ಥಪೂರ್ಣವಾಗಿದೆ. ಮುಂದೆ ಅಡವಿಯಲ್ಲಿ ಹೆಬ್ಬಾವಿಗೆ ಬಲಿಯಾಗುತ್ತಿದ್ದ ದಮಯಂತಿಯನ್ನು ಬದುಕಿಸಿದ ಬೇಡನು ಅವಳ ರೂಪರಾಶಿಗೆ ಮಾರುಹೋಗಿ, ಅವಳನ್ನು ಕಾಮಿಸಲು ಹೋದಾಗ ವ್ಯಾಸರ ಭೈಮಿ ಬೇಡನನ್ನು ತನ್ನ ಪಾತಿವ್ರತ್ಯದ ಪ್ರಭಾವದಿಂದ ಸುಟ್ಟುಹಾಕಿದ. ಕನಕದಾಸರ ದಯಾಪೂರ್ಣೆ ದಮಯಂತಿ, 'ಪ್ರಾಣ ಉಳಿಸಿದ ನೀನು ತಂದೆಗೆ ಸಮಾನ' ಎಂದು ವಿವೇಕದ ಮಾತುಗಳನ್ನು ಹೇಳಿ, ಬೇಡನಲ್ಲಿ ಕಾಮ ಪ್ರೇಮವಾಗುವಂತೆ, ಪ್ರೇಮ ಭಕ್ತಿಯಾಗಿ ಪರಿಣಮಿಸು ವಂತಾಗುತ್ತದೆ. ಈ ಸನ್ನಿವೇಶದ ಪರಿವರ್ತನೆಯಿಂದಾಗು ದಮಯಂತಿ ಬೆಳಗಿದ ಮಾನವೀಯ ಮೌಲ್ಯ ವೇದ್ಯವಾಗುತ್ತದೆ. ಇಂತಹ ಕೆಲವು ಮಾರ್ಪಾಟುಗಳಲ್ಲಿ ಕನಕದಾಸರ ಹೆಗ್ಗಳಿಕೆ ಇದೆ. ಆದರೆ ದೈವದ ಉತ್ಕರ್ಷಾವಹತ್ವವನ್ನು ಬಿತ್ತರಿಸುವಲ್ಲಿ ಮೂಲ ಬಿಂದುವನ್ನು ವ್ಯತ್ಯಸ್ತಗೊಳಿಸಿಲ್ಲ. ಎಲ್ಲ ನಳನೃಪಕಾವ್ಯ, ಕಥೆ, ನಾಟಕಗಳು ಹೇಳುವುದನ್ನೇ ಇವರೂ ಹೇಳಿದ್ದಾರೆ. ಇವರೆಲ್ಲ ರಿಗೆ ಅಪವಾದವಾಗಿ ನಿಲ್ಲುವವನು ಸಂಸ್ಕೃತದ 'ನಲವಿಲಾಸ' ನಾಟಕದ ಕರ್ತೃ ರಾಮಚಂದ್ರ ಸೂರಿ ಒಬ್ಬನೇ. ಅವನು ದೈವವಾದ ವನ್ನು ದೂರ ಮಾಡಿ ಪುರುಷವಾದವನ್ನು ಎತ್ತಿಹಿಡಿದಿದ್ದಾನೆ. 'ಕಲಿ' ಎಂಬ ಅತಿಮಾನುಷ, ಅಲೌಕಿಕ ದೈವೀಶಕ್ತಿಗೆ ಬದಲು ಅಲ್ಲಿ ಪುಷ್ಕರನನು ಬರುತ್ತಾನೆ. ಅವನೇ ನಳ ದುಃಖ ಕೋಟಿಗೆ ಕಾರಣನಾಗುತ್ತಾನೆ. ನಳನು ಜೂಜಾಡುವಂತಹ ಸಹಜ ದೌರ್ಬಲ್ಯ ದಿಂದ ಕೂಡಿದ ಮಾನವನಾಗಿ ಚಿತ್ರಿತನಾಗಿದ್ದಾನೆ. ಅವನನ್ನು ಸೋಲಿಸಿದ ಪುಷ್ಕರನೂ ಮಾನವನೇ! ಇಂತಹ ಗುರುತಿಸಬಹು ದಂತಹ ಪ್ರಮುಖ ಬದಲಾವಣೆಗಳಿಲ್ಲದಿದ್ದರೂ ಕಾವ್ಯ ಗಾಂಭೀರ್ಯಕ್ಕೆ, ಸನ್ನಿವೇಶದ ನೈಜತೆಗೆ ಔಚಿತ್ಯವರಿತ ಬದಲಾವಣೆ ಮಾಡಿಕೊಂಡಿದ್ದಾರೆ. ಅದರಿಂದಾಗಿ ಕನಕದಾಸರಲ್ಲಿ ಸ್ವೀಕರಣವೆಷ್ಟು ಮುಖ್ಯವೊ ಮಾರ್ಪಾಟು ಅಷ್ಟೇ ಮುಖ್ಯವೆನಿಸಿದೆ. ಮಹಾಭಾರತದ ವನಪರ್ವ ಭಾಗದಲ್ಲಿ ಬರುವ ಇಪ್ಪತ್ತೆಂಟು ಅಧ್ಯಾಯಗಳ ಸುವಿಸ್ತಾರವಾದ ನಳೋಪಾಖ್ಯಾನವು ಕನಕ ದಾಸರ ನಳಚರಿತ್ರೆಯಲ್ಲಿ ಕೇವಲ ಒಂಬತ್ತು ಸಂಧಿಗಳ ಖಂಡಕಾವ್ಯವಾಗಿ ರೂಪುಗೊಂಡಿರುವುದನ್ನು ನೋಡಿದರೆ ಕನಕ ದಾಸರ ಸಂಗ್ರಹಶಕ್ತಿ, ವರ್ಣನೆಗೆ ಮನಗೊಡದ ಸಂಯಮಶೀಲಗಳು ಮೆಚ್ಚುವಂಥವುಗಳಾಗಿವೆ. ಕನಕದಾಸರಿಗೆ ಕಥೆ ಮುಖ್ಯವೇ ಹೊರತು ಶ್ರೀಹರ್ಷನಂತೆ ವರ್ಣನೆಗಳಲ್ಲ. ಪಂಚಮಹಾಕಾವ್ಯಗಳಲ್ಲೊಂದಾದ ಶ್ರೀಹರ್ಷನ (ಕ್ರಿ.ಶ. ೧೨ನೆಯ ಶತಮಾನ) 'ನೈಷಧೀಯ ಚರಿತೆ' ವರ್ಣನಾಪ್ರಧಾನ ಕಾವ್ಯ. ಕಥೆಯೇ ಇಲ್ಲದ ಕಾವ್ಯರಚನೆ ಹೇಗಿರುತ್ತದೆಂಬುದನ್ನು ತನ್ನ ಕೃತಿಯ ಮೂಲಕ ತೋರಿಸಿಕೊಟ್ಟಿ ದ್ದಾನೆ. ಅದನ್ನೇ ಒಂದು ಸವಾಲಾಗಿ ಸ್ವೀಕರಿಸಿರುವಂತಿದೆ ಹರ್ಷ. ಕೇವಲ ದಮಯಂತಿಯ ಸ್ವಯಂವರ, ಸ್ವಯಂವರದ ನಂತರದಲ್ಲಿ ಕಲಿಪುರುಷನಿಗೂ ಇಂದ್ರಾದಿ ದೇವತೆಗಳಿಗೂ ನಡೆಯುವ ವಾಗ್ವಾದ ಮತ್ತು ಕವಿಯ ನಾಸ್ತಿಕವಾದದ ಖಂಡನೆ, ಅಂತ್ಯದಲ್ಲಿ ನಳದಮಯಂತಿಯರ ಪ್ರಥಮಮಿಲನದ ಜೇನಿರುಳ

ಬಣ್ಣನೆ– ಇದಿಷ್ಟೇ ಅಲ್ಲಿನ ಕಥಾಭಿತ್ತಿ. ಆದರೆ ಪ್ರಕಾಂಡ ಪಂಡಿ ತನೂ ಪ್ರಚಂಡ ತರ್ಕಪ್ರಿಯನೂಅಪ್ರತಿಮ ಪ್ರತಿಭಾಶಾಲಿಯೂ ಆದ ಶ್ರೀಹರ್ಷನು ಆ ಭಿತ್ತಿಯ ಮೇಲೆ ಅನ್ಯಾದೃಶ ವರ್ಣಚಿತ್ರ ಗಳನ್ನು ಬಿಡಿಸಿದ್ದಾನೆ. ಇಂದುಮತಿ ಸ್ವಯಂವರವು ಕಾಳಿದಾಸನಲ್ಲಿ ಒಂದು ಸರ್ಗದಲ್ಲಿ ಬಣ್ಣಿತವಾಗಿದ್ದರೆ, ಹರ್ಷನಲ್ಲಿ ದಮ ಯಂತೀ ಸ್ವಯಂವರವು ನಾಲ್ಕು ಸರ್ಗಗಳಷ್ಟು ವ್ಯಾಪ್ತಿ ಹೊಂದಿದೆ; ನಾರಿಯರ ರೂಪಲಾವಣ್ಯಗಳ ವರ್ಣನೆಯಲ್ಲಂತೂ ಹರ್ಷ ಅದ್ವಿತೀಯ. ದಮಯಂತಿಯ ಚಿತ್ರವನ್ನಂತೂ ನಾನಾ ಬಣ್ಣಗಳಿಂದ ಬಿಡಿಸಿದ್ದಾನೆ. ವಿಪ್ರಲಂಬ ಶೃಮಗಾರದ ವರ್ಣನೆಯಲ್ಲಿ, ಮೈ ಹಾಸಿ ಮಲಗಿರುವ ನಿಸರ್ಗ ಸೌಂದರ್ಯದ ಬಣ್ಣನೆಯಲ್ಲಿ ಹರ್ಷ ಯಾರಿಗೂ ಎರಡನೆಯವನಲ್ಲ. ಅದರಿಂದಾಗಿ ನೈಷಧ ಇಪ್ಪತ್ತೆರಡು ಸರ್ಗಗಳ ಎರಡು ಸಾವಿರದ ಎಂಟುನೂರ ಮೂವತ್ತು ಶ್ಲೋಕಗಳ ಗಾತ್ರ ಪಾತ್ರವೈಭವವುಳ್ಳದ್ದಾಗಿದೆ. ಶ್ರೀಹರ್ಷ ಓರ್ವ ದಾರ್ಶನಿಕ. ಆದಿ ಜಗದ್ಗುರು ಶ್ರೀ ಶಂಕರರ ಅದ್ವೈತ ದರ್ಶನದ ಪಾರಮ್ಯವನ್ನು ಅಭಿವ್ಯಕ್ತಿಸುವುದೇ ಅವನ ಮೂಲ ಉದ್ದೇಶವಾಗಿದೆ ನೈಷಧದಲ್ಲಿ. ಅದರಿಂದಾಗಿ ಅನ್ಯ ಧರ್ಮ ದರ್ಶನಗಳನ್ನು ಖಂಡಿಸುತ್ತಾನೆ. 'ಖಂಡನ ಖಂಡ ಖಾದ್ಯ'ದಂತಹ ಅದ್ವೈತ ಪ್ರಾತಿಭ ಸೂರ್ಯನನ್ನು ಸೃಷಸ್ಟಿಸಿದ ಈ ನೈಯಾಯಿಕನಿಗೆ ನೈಷಧ ಕಾವ್ಯ ಸಂದರ್ಭದ ತರ್ಕ ಕಷ್ಟ ವೆನಿಸಲಿಲ್ಲ. ಹೀಗೆ ವರ್ಣನಾಪ್ರಧಾನವೂ ತರ್ಕಭೂಯಿಷ್ಠವೂ ಅದ್ವೈತದರ್ಶನ ಪ್ರತಿಷ್ಠಾಪನೋದ್ದೇಶಿತವೂ ಆದ ಅಮೋಘ, ಅಪ್ರ ತಿಮವಾದ ಹರ್ಷನ ಆಚಾರ್ಯ ಕೃತಿಯ ಜೊತೆಯಲ್ಲಿ ಕನಕದಾಸರ ನಳಚರಿತ್ರೆಯನ್ನು ನಿಲ್ಲಿಸಿ ನೋಡಲಾಗದು. ಆದರೂ ಹರ್ಷನಿಗೆ ದರ್ಶನ–ವರ್ಣನಗಳು ಮುಖ್ಯವಾದಂತೆ, ಕನಕದಾಸರಿಗೆ ದೈವ–ಕಥನಗಳು ಮುಖ್ಯ ಎಂಬುದನ್ನು ಮರೆಯಲೂ ಆಗದು. ಕನಕದಾಸರು ತಮ್ಮ ಮೋಹನ ತರಂಗಿಣಿ'ಯಲ್ಲಿ ವಹಿಸಿದಷ್ಟು ಸ್ವಾತಂತ್ರ್ಯವನ್ನು ನಳಚರಿತ್ರೆಯಲ್ಲಿ ವಹಿಸಿಲ್ಲ ಎಂದು ಹೇಳಬಹುದು. ಮೋಹನ ತರಂಗಿಣಿ'ಯ ಕಥೆ (Story) ಪುರಾಣ, ಭಾರತ, ಭಾಗವತ ಹರಿವಂಶಾದಿಗಳಿಗೆ ಸೇರಿದ್ದು. ಆದರೆ ವಸ್ತು (Theme) ಅವರ ಸ್ವಂತದ್ದು. ವಿಶ್ವಾಂತರಾಳದಲ್ಲಿ ಯಾವಜ್ಜೀವವೂ ನೂತನ ಚೇತನವಾಗಿ ಪ್ರವಹಿಸುತ್ತಿರುವ 'ಪ್ರೇಮ' ಎಂಬ ಅದಮ್ಯ ಅವ್ಯಕ್ತ ಅಸಮಾನ್ಯ ಕ್ರಿಯಾಶಕ್ತಿಯೇ ಕಾವ್ಯದ ಕಥಾವಸ್ತು ಮತ್ತು ಕಥಾನಾಯಕ! ಅಲ್ಲಿ ಬರುವ ಕೃಷ್ಣ–ರುಕ್ಮಿಣಿ, ಪ್ರದ್ಯುಮ್ನ–ರತಿ, ಅನಿರುದ್ಧ–ಉಷೆ ಎಲ್ಲರೂ ಆ ಶಕ್ತಿಯೊಡನೆ ಸ್ಪಂಧಿಸುವ ಅಂಸಮಾತ್ರು. ಅಂತೆಯೇ ಕನಕದಾಸರಲ್ಲಿ ಮತ್ತೊಂದು ಗುಣ ಎಂದರೆ ಆದ್ಯತನವನ್ನು ಅನಾದಿಗಳೆಂದು ಹೊಂದಿಸಿ ಹೇಳುವುದು. ಉದಾಹರಣೆಗೆ ದ್ವಾರಕಾವತಿಯ ವರ್ಣನೆಯಲ್ಲಿ ಮೂಡಿರುವ ವಿಜತನಗರ ವೈಭವದ ಸಮೀಕರಣ. ಇದು ನಳಚರಿತ್ರೆಯಲ್ಲಿ ಅಲ್ಲಿ–ಇಲ್ಲಿ ಕಾಣಿಸಿಕೊಂಡಿದೆ. ಒಟ್ಟಿನಲ್ಲಿ ಪ್ರಾಚೀನ ಪುರಾಣ ಮಂಗಳ ಕಾವ್ಯಗಳಲ್ಲಿ ಸಮಕಾಲೀನ ಬದುಕನ್ನು ಬೆಸೆಯುವಲ್ಲಿ ಕನಕದಾಸರು ಯಶಸ್ವಿಯಾಗಿದ್ದಾರೆ. ಕನಕದಾಸರ ಶೈಲಿಯಲ್ಲಿ ಪ್ರಸಾದ ಗುಣವಿದೆ. ಅದು ಎಲ್ಲೆಡೆಯಲ್ಲೂ ಅಕ್ಲಿಷ್ಟ, ಆದರೆ ಪ್ರಭಾವಶಾಲಿ. ಜಲಪಾತದ ನಿರ್ಘೋಷವಿಲ್ಲದಿದ್ದರೂ ಸಮತಟ್ಟಿನಲ್ಲಿ ಹರಿಯುವ ತಿಳಿ ತರಂಗಿಣಿ'ಯ ಜುಳು ಜುಳು ಗೈವ ಮಧುರ ಮಂಜುಳ ನಿನಾದ ಕೇಳಿ ಸದರಿದು. ಕವಿಯ ಭಾವ ಗುರುತಿಸುವಷ್ಟು ಸ್ಪಷ್ಟ. ಅವರು ಬಳಸಿದ ಭಾಷೆ ತೆರೆದಿಡುವಷ್ಟು ಸರಳ. ಹೆಚ್ಚು ಅಥವಾ ಹುಚ್ಚು ವರ್ಣನೆಗಳಿಲ್ಲವದರೂ ಬಣ್ಣಿತ ವಾದವು ಮನ ಮುಟ್ಟುವಂಥವು. ಒಂದೆರಡು ಉದಾಹರಣೆಗಳು:

ಯೌವನವತಿಯಾದ ದಮಯಂತಿ–

ನಿರಿಗುರುಳ ಪವಳಾಧರದ ಉರು<br>
ತರದ ತೋಳ್ಗಳ ಕಂಬು ಕಂಠದ<br>
ತರಳನತನದ ಸಂಪಗೆಯ ನಸಿಕದ ಪೆರೆನೊಸಲ<br>
ಹರಿಯ ಮಧ್ಯದ ಹಂಸಗಮನದ<br>
ಗುರು ಕುಚದ ಕರಪಲ್ಲವದ ಸರ<br>
ಸಿರುಹ ಮುಖಿ ನಲಿದಾಡುತ್ತಿದ್ದಳು ರಾಜಭವನದಲಿ

ಅಲೆ ಏರಿ ಅಲೆ ಇಳಿಯುವಂತಿರುವ ಗುಂಗುರುಗೂದಲಿನ ಅಂಗನೆ, ಹವಳದಂಥಾ ಚೆಂದುಟಿಯ ಚೆಲುವೆ, ಶ್ರೇಷ್ಠ ನಳದೋಳು ಗಳ ನಲ್ಲೆ, ಶಂಖ ವಿನ್ಯಾಸದ ವಂಕವಕ್ರದ ಬೆಡಗಿ, ಚಿಗರಿಗಂಗಳ ಚದುರೆ, ಸಂಪಗೆಯ ಸೊಂಪಾದ ಮೂಗಿನ ಮೋಹನಾಂಗಿ, ಬೆಳುದಿಂಗಳ ತೊರೆ ಹರಿಸುವ ವಿಶಾಲವಾದ ಹಣೆಯ ಸುಮಂಗಲೆ, ಸಿಂಹದಂಥಾ ಬಡನಡುವುಳ್ಳ ಬೆಡಗಿ, ಹಂಸಗಮನ ನಿಸ್ತ್ರಿಂಶೆ, ತುಂಬಿದೆದೆಯ ದುಂಡು ರಂಭೆ, ಚಿಗುರು ಕೈಗಳ ಚೆನ್ನೆ, ತಾವರೆಯ ಚೆಲುವಾಂತ ಕಾಂತಿಲಕ್ಷ್ಮಿ– ಇಂತೆಲ್ಲ ವರ್ಣನೆಗಳಲ್ಲಿ ಹೆಣ್ಣಿನ ಅಂಗಾಂಗಗಳಲ್ಲಿ ಸಮೀಕೃತವಾದ ನಿಸರ್ಗದ ಸೊಬಗು ತುಂಬಾ ಸಹಜ ಹಾಗೂ

ಸ್ವಾಭಾವಿಕ.        ಕಾರ್ಕೋಟಕನು ಕಚ್ಚಿದಾಗ ನಳನಲ್ಲಾದ ದೈಹಿಕ ಬದಲಾವಣೆ ಹಾಗೂ ರೂಪ ವಿರೂಪದ ಬಣ್ಣನೆ ಹೀಗಿದೆ:

ದೊಡ್ಡ ಹೊಟ್ಟೆಯ ಗೂನುಬೆನ್ನಿನ
ಅಡ್ಡ ಮೋರೆಯ ಗಂಟುಮೂಗಿನ
ದೊಡ್ಡ ಕೈಕಾಲುಗಳ ಉದುರಿದ ರೋಮ ಮೀಸೆಗಳ
ಜಡ್ಡು ದೇಹದ ಗುಜ್ಜು ಗೊರಲಿನ
ಗಿಡ್ಡ ರೂಪಿನ ಹರುಕು ಗಡ್ಡದ
ಹೆಡ್ಡನಾದ ಕುರೂಪಿತನದಲಿ ನೃಪತಿ ವಿಷದಿಂದ

ಇದಕ್ಕೆ ವಿವರಣೆಯೇ ಬೇಕಿಲ್ಲ. ಅಷ್ಟು ಸರಳ, ಅಷ್ಟು ಸಹಜ.

ಕನಕದಾಸರ ಸುಭಗ ಶೈಲಿಗೆ ಸಖಿಯೊಡನೆ ವಿವಾಹ ಮಂಟಪಕ್ಕೆ ಬಂದ ದಮಯಂತಿಯ ರೂಪರಾಜಿಯ ಬಣ್ಣನೆಯನ್ನು ಹೆಸರಿಸಬಹುದು. ದಮಯಂತಿ:

ಕುಡಿತೆಗಂಗಳ ಸಿರಿಮುಡಿಯ ಬಡ
ನಡುವ ಸೆಳೆವತಿ ಬೆಡಗಿನಲಿ ಹೊಂ
ಗೊಡದ ಮೊಲೆ ವೈಯಾರದುಡುಗೆಯ ಸಿರಿಯ ಸಡಗರದ
ತೊಡರ ಝುಣಝುಣ ರವದ ಮೆಲ್ಲಡಿ
ಯಿಡುವ ಗಮನದ ಭರದಿ ಕಿರು ಬೆಮ
ರಿಡುತ ಬಂದಳು ಸಖಿಯರೊಡನೆ ವಿವಾಹಮಂಟಪಕೆ

ಕನಕದಾಸರ ಕವಿತಾ ಶಕ್ತಿಗೆ ಇವು ಕೆಲವು ಸಾಕು !

# “ಪಟ್ಟಮಹಾದೇವಿ ಶಾನ್ತಲದೇವಿ”

ಈ ದಶಕದ ಮಹತ್ವಪೂರ್ಣ ಕಲಾಕೃತಿಗಳಲ್ಲೊಂದು. ಆಚಾರ್ಯ ಕೃತಿ ‘ಪ್ರಾಚೀನ ಮಹಾಕಾವ್ಯಗಳ ಸ್ಥಾನದಲ್ಲಿ ಇಂದು ಮಹಾ ಕಾದಂಬರಿಗಳು ನಿಂತಿವೆ’ ಎಂದು ಶ್ರೀ ಕುವೆಂಪುರವರು ನಮಗೆ ಬಿ.ಎ. ಆನರ್ಸ್ ಮತ್ತು ಎಂ.ಎ. ತರಗತಿಗಳಲ್ಲಿ ಪಾಠ ಮಾಡುವಾಗ ಹೇಳುತ್ತಿದ್ದರು. ಆ ಮಾತು ಅಕ್ಷರಶಃ ಸತ್ಯ ಎಂಬುದು ಶ್ರೀಯುತ ಸಿಕೆ. ನಾಗರಾಜ್‌ರವರ ‘ಪಟ್ಟ ಮಹಾದೇವಿ ಶಾನ್ತಲ ದೇವಿ’ ಎಂಬ ಕಾದಂಬರಿಯನ್ನು ಓದಿದ ಮೇಲೆ ವೇದ್ಯವಾ ಯಿತು. ಬದುಕಿನ ಎತ್ತರ–ಬಿತ್ತರ ಆಳ–ಅಗಲಗಳ ನಗ್ನ ದರ್ಶನ ನಮಗಾಗುತ್ತದೆ ಅಲ್ಲಿ. ಭೂಮಿ ಆಕಾಶಗಳನ್ನು ತುಂಬಿ ನಿಂತಿ ರುವ ಗೊಮ್ಮಟಸ್ವಾಮಿಯಂತೆ ಇಂದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸುಮಾರು ಎರಡು ಸಾವಿರದ ಇನ್ನೂರು ಪುಟಗಳಷ್ಟು ಪ್ರಮಾಣದಲ್ಲಿ, ಐದು ಬೃಹತ್ ಸಂಪುಟಗಳಲ್ಲಿ ಹಮ್ಮಿಕೊಂಡು ನಿಂತಿವೆ ಈ ಕಲಾ ಗೊಮ್ಮಟ. ಶ್ರೀ ಪುಟ್ಟಸ್ವಾಮಯ್ಯನವರ ‘ಕ್ರಾಂತಿ ಕಲ್ಯಾಣ’ ಕಾದಂಬರೀ ಸರಣಿಯ ನಂತರ ಬಂದ ! ಕನ್ನಡಿ ಗರು ಕಂಡ–ಅಷ್ಟೇಕೆ– ಈ ದಶಕದ ಭಾರತೀಯ ಸಾಹಿತ್ಯದಲ್ಲೇ ಅತ್ಯಂತ ಬೃಹತ್ ಪ್ರಮಾಣದ ಕಾದಂಬರಿಯೆಂದರೆ ‘ಪಟ್ಟ ಮಹಾದೇವಿ ಶಾನ್ತಲದೇವಿ’– ಇದು ಸಿಕೆ. ನಾಗರಾಜರಾಯರ ಅರ್ಧ ಶತಮಾನದ ಅವಿಶ್ರಾಂತ ದುಡಿಮೆಯ ಫಲ. ಅವರ ಆಚಾರ್ಯ ಕೃತಿಯೂ (Master piece) ಹೌದು. ಆದರೆ ಹಲವು ಅನುಭಾವಿಗಳಿಗೆ ಅದೊಂದು ಆರಾಧ್ಯ ಕೃತಿ. ರೂಪದಲ್ಲಿ ಬೃಹತ್ತಾದ, ಸ್ವರೂಪದಲ್ಲಿ ಮಹತ್ತಾದ ಈ ಕೃತಿರತ್ನಕ್ಕೆ ಹಾರ್ದಿಕ ಸ್ವಾಗತ. ಕಾದಂಬರಿಯ ವಸ್ತು ಹೊಸದೇನಲ್ಲ; ಆದರೆ ರಚನೆ ಹೊಸದು. ಇತಿಹಾಸ ಪ್ರಸಿದ್ಧವಾದ ಇದೇ ವಸ್ತುವನ್ನು ಹಲವರು ಬಳಸಿಕೊಂಡಿರುವುದುಂಟು ಕಥೆಯಾಗಿ, ಕಾದಂಬರಿಯಾಗಿ, ನಾಟಕವಾಗಿ ಹಲವು ರೂಪು ತಳೆದಿದೆ ಹಲವರ ಲೇಖಣಿಯ ಮೊನೆಯಲ್ಲಿ. ಒಬ್ಬರಿಗೆ ಶಾಂತಲೆ ಸೂಳೆಯಾಗಿ ಕಂಡಿದ್ದಾಳೆ. ಮತ್ತೊಬ್ಬರಿಗೆ ಸಂಯಮರಹಿತ ಆತ್ಮಹತ್ಯಾಪಾತಕಿಯಾಗಿ ಗೋಚರಿಸಿದ್ದಾಳೆ; ಮಗುದೊಬ್ಬರಿಗೆ ಕೇವಲ ಕಲ್ಪನೆಯ ಕಲಾಕುಸುಮವಾಗಿ ಕಾಣಿಸಿಕೊಂಡಿದ್ದಾಳೆ. ಆದರೆ ಪಟ್ಟ ಮಹಾದೇವಿಯ ಕಾದಂಬರಿಕಾರರಿಗೆ ಶಾಂತಲೆ ಭಾರತೀಯ ಸಂಸ್ಕೃತಿಯ ಸಾಕಾರರೂಪಿಯಾಗಿ ದರ್ಶನವಿತ್ತಿದ್ದಾಳೆ. ಅವಳು ಸಾಮಾನ್ಯ ಹೆಗ್ಗಡೆಯ ಮಗಳಾದರೂ ಸಾಮ್ರಾಜ್ಞಿಯಾಗಿ ಮೆರೆದವಳು: ಆದರೆ ಎಲ್ಲಿಯೂ ಸೊಕ್ಕಿನ ಶಾರ್ದುಲವಾಗಿ ಹೂಂಕರಿಸಿದವಳಲ್ಲ. ಸದ್ಗುಣಗಳ ಗಣಿಯಾದ ಈಕೆ ಸರ್ವರ ಪ್ರಶಂಸೆಗೆ ಪಾತ್ರಳಾಗಿದ್ದಾಳೆ. ಅವಳ ಗುಣ ಗಣನೆಗೆ ಸಂಖ್ಯೆಗಳು ಸಾಲದಾಗುತ್ತವೆ, ಋತುಗಳು ಬಳಲುತ್ತವೆ. ನುಡಿವ ನಾಲಗೆಯಂತೂ ತನ್ನ ಸೋಲು ಒಪ್ಪಿಕೊಳ್ಳುತ್ತದೆ. ಅವಳ “ಸಕಳ ಕಳಾಗಮಾನೂನೆ, ಅಭಿನವ ರುಕ್ಮಿಣೀದೇವಿ, ಪತಿ ಹಿತ ಸತ್ಯಭಾಮೆ, ವಿವೇಕೈಕ–ಬೃಹಸ್ಪತಿ, ಪ್ರತ್ಯುತ್ಪನ್ನ ವಾಚಸ್ಪತಿ, ಮುನಿಜನ ವಿನೇಯ ಜನವಿನೀತೆ, ಪತಿವ್ರತಾ ಪ್ರಭಾವ ಸಿದ್ಧಸೀತೆ, ಶುದ್ಧ ಚರಿತ್ರೆ, ಚತುಸ್ಸಮಯ ಸಮುದ್ಧರಣಕಾರಣೆ, ಮನೋಜರಾಜ ವಿಜಯಪತಾಕೆ, ನಿಜಕಳಾಭ್ಯುದಯ ದೀಪಿಕೆ, ಗೀತವಾದ್ಯ ನೃತ್ಯ ಸೂತ್ರಧಾರೆ, ಜಿನಸಮಯ ಸಮುದಿತ ಪ್ರಕಾರೆ, ಮಹಾರಾಭಯ ಬೇಷಜ ಶಾಸ್ತ್ರದಾನ ವಿನೋದೆ, ಸಕಳಗಣಗಣಾನೂನ, ಬ್ರತಗುಣಶೀಳೆ, ಲೋಕೈಕೆ ವಿಖ್ಯಾತೆ, ಪುಣ್ಯೋಪಾರ್ಜನಕರಣ ಕಾರಣೆ, ಸವತಿಗಂಧ ಹಸ್ತಿ, ಜಿನಧರ್ಮ ಕಥಾಕಥನ ಪ್ರಮೋದೆ, ಜಿನಧರ್ಮ ನಿರ್ಮಳೆ, ಭವ್ಯಜಿನವಚ್ಛಳೆ, ಅಗಣ್ಯ ಲಾವಣ್ಯ ಸಂಪನ್ನೆ, ಜಿನಗಂಧೋದಕ ಪವಿತ್ರೀ ಕ್ರೀತೋತ್ತಮಾಂಗೆ, ಮೃದು ಮಧುರ ವಚನ ಪ್ರಸನ್ನೆ, ಪಂಚಲಕಾರ (ವಸ್ತು, ಶಿಲ್ಪ, ಸಾಹಿತ್ಯ, ಚಿತ್ರ, ಸಂಗೀತ ಇವು ಲಲಿತಕಲಾ ಪಂಚಕ) ಪಂಚರತ್ನೆ ಯುಕ್ತೆ, ಸಂಗೀತವಿದ್ಯಾ ಸರಸ್ವತಿ, ಅಭಿನವಾರುಂಧತಿ, ಪತಿಹಿತಬ್ರತೆ, ಸರ್ವಕಳಾನ್ವಿತೆ, ಸರ್ವಮಂಗಳ ಸ್ಥಿತಿಯುತೆ, ಸರ್ವ ಲೋಕನುತೆ, ಸರ್ವಜೀವಹಿತೆ, ಭರತಾಗಮದ ತಿರುಳೆನಿಸಲು ಭಯಕ್ರಮ ನೃತ್ಯ ಪರಿಣತೆ, ಲಾವಣ್ಯಸಿಂಧು, ಭರತಾಗಮಭವನ ನಿಹಿತ ಮಹನೀ ಯಮತಿ ಪ್ರದೀಪೆ, ದಯಾರಿಸಾಮೃತಪೂರ್ಣೆ, ಅನೂನದಾನಾಭಿಮಾನಿ, ವಿಚಿತ್ರ ನರ್ತನ ಪ್ರವರ್ತನ ಪಾತ್ರಶಿಖಾಮಣಿ, ಸಕಳ ಸಮಯ ರಕ್ಷಾಮಣಿ, ಸಂಗೀತ ಸಂಗತ ಸರಸ್ವತಿ, ಸೌಭಾಗ್ಯ ಸೀಮೆ, ವಿಶುದ್ಧಾಚಾರ ವಿಮಳೆ, ವಿನಯವಿನ ಮದ್ವಿಳಾಸಿನಿ, ಸದರ್ಥ ಸರಸ ಸಮಯೋಚಿತ ವಚನ ಮಧುರ ಸ್ಯಂದಿ ವದನಾರವಿಂದೆ, ಸಮ್ಯಕ್ತ್ವ ಚೂಡಾಮಣಿ, ವಿಷ್ಣು ನೃಪಮನೋನಯನ ಪ್ರಿಯೆ, ವಿದ್ದೆಯ ಮೂರ್ತಿ, ಪರಿವಾರ ಫಳಿತ ಕಲ್ಪಿತ ಕುಜ ಶಾಖೆ, ಕದಂಬಲಂಬಾಲ ಕಾಲಂಬಿಕ ಚರಣ ನಖಕಿರಣಕಲಾಪೆ, ಬಣ್ಣಿಂದೆಮೆ ಭೂಮಿದೇವತೆ, ರಣವ್ಯಾಪಾರದೊಳ್ ಬಳ್ಗದೇವತೆ, ಜನಕೆಲ್ಲಂ ಪುಣ್ಯದೇವತೆ, ಸಕಳಕಾರ್ಯೋದ್ಯೋಗದೊಳ್ ಮಂತ್ರದೇವತೆ”– ಹತ್ತಾರು ಶಾಸನಗಳ ಈ ಸ್ತುತಿ ಮಹಾರಾಣಿಯ ಹೊನ್ನು ತಿಂದ ಹೊಗಳು ಭಟನ ನುಡಿಗಳಲ್ಲ. ಪ್ರಾಜ್ಞಳೂ, ಪರಿಣತಳೂ ಆದ ಪಟ್ಟಮಹಾದೇವಿಯ ಅರ್ಹತೆಯ ವಾಸ್ತವಾಂಶಗಳು. ಅವಳು ಸ್ತ್ರೀತ್ವದ ಪ್ರತೀಕವಾಗಿದ್ದಾಳೆ, ತಾಯ್ತನದ ತೌರಾಗಿದ್ದಾಳೆ; ಹಸಿ ದವರಿಗೆ ಅನ್ನವಾಗಿದ್ದಾಳೆ. ದಾಹಗೊಂಡವರಿಗೆ ಅರವಂಟಿಗೆ ಯಾಗಿದ್ದಾಳೆ; ಮೂಕರಿಗೆ ಮಾತಾಗಿ, ಕುರುಡರಿಗೆ ಕಣ್ಣಾಗಿ, ಹೆಳವ ರಿಗೆ ತೆಮರಾಗಿ, ರಾಷ್ಟ್ರಹಿತ ಸಾಧನೆಯ ಹೊಂದೇರು ತಾನಾಗಿ ಹರಿದಿದ್ದಾಳೆ. ಈ ಆದರ್ಶದ ಹಿನ್ನಲೆಯಲ್ಲಿ ಅವಳ ಆಕರ್ಷಕ ನಿಲುವು ಬೆರಗುಗೊಳಿಸುವಂಥದು. ಆದರೆ ಅದು ಮರಳಿನ ಮೇಲೆ ಕಟ್ಟಿದ ಕಲಾ ಗೋಪುರವಲ್ಲ. ಇತಿಹಾಸದ

ಭದ್ರಬುನಾದಿಯ ಮೇಲೆ ನಿಂತ ಭವ್ಯವಾದ ಕಟ್ಟಡ. ಹೊಯ್ಸಳ ಸಾಮ್ರಾಜ್ಯದ ಹೆಗ್ಗಡೆ ಮಾರಸಿಂಗ ಮಯ್ಯ ಮತ್ತು ಮಾಚಿಕಬ್ಬೆಯರ ಏಕಮಾತ್ರ ಪುತ್ರಿ; ಹೊಯ್ಸಳೇಶ್ವರ ವಿಷ್ಣುವರ್ಧನನ ಕೈ ಹಿಡಿದು ಧರ್ಮ–ದೈವ, ಕಲೆ–ಶಾಸ್ತ್ರ, ಸಂಸ್ಕೃತಿ–ನಾಗರಿಕತೆ, ಶಿಲ್ಪ–ವಾಸ್ತು ಶಿಲ್ಪ– ಇವು ಗಳನ್ನು ಬೆಳಗಿಸಿದವಳು; ಕುಮಾರ ಬಲ್ಲಾಳ, ಕುಮಾರಿ ಹರಿಯಲ, ಚಿಕ್ಕ ಬಿಟ್ಟಿ ದೇವ ಮತ್ತು ಕುಮಾರ ವಿನಯಾದಿತ್ಯ– ಎಂಬ ಅಕ್ಕರೆಯ ಮಕ್ಕಳಿಗೆ ಸಕ್ಕರೆಯ ತಾಯಿಯಾದವಳು. ಒಂದು ಮಾತಿನಲ್ಲಿ ಹೇಳು ವುದಾದರೆ ಹೊಯ್ಸಳ ಸ್ವರ್ಣಯುಗಕ್ಕೆ ಕಾರಣಳಾದವಳು. "ನನಗೆ ಐತಿಕಾಂಶಗಳು ಕಲ್ಪಾನಂಶಗಳಿಗಿಂತ ಮುಖ್ಯ. ನಿಜವಾದ ಐತಿಹಾಸಿಕ ಕಾದಂಬರಿಯನ್ನು ರಚಿಸಿದರೆ ಸತ್ಯ ದೂರವಲ್ಲದೆ ಒಂದು ಭವ್ಯ ಕಲ್ಪನೆ ಮೂಡಿಸಲು ಅದರಿಂದ ಸಾಧ್ಯ ಎಂಬುದು ನನ್ನ ನಂಬಿಕೆ"– ಲೇಖಕರ ಈ ನಂಬಿಕೆಗೆ ಸಹಜಸಾಕ್ಷಿಯಾಗಿದೆ ಈ ಐತಿಹಾಸಿಕ ಕಾದಂಬರಿ. ಸುಮಾರು ಒಂಬತ್ತು ವರ್ಷಗಳ ಸಂತತ ಸತ್ಯನಿಷ್ಠ ಸಂಶೋಧನೆಯ ಕಾವುಂಡು, ಪ್ರಾತಿಭಗರ್ಭದಿಂದ ಹೊರಬಂದ ಈ ಕಲಾದಿಗ್ಗಜ ರಸಿಕವೃಂದದ ಭಾಗವತ !

**ಮನೋವಿಜ್ಞಾನದ ವಿಶ್ವಕೋಶ**

ಶ್ರೀ ಸಿ.ಕೆ. ನಾಗರಾಜರಾಯರ 'ಪಟ್ಟಮಹಾದೇವಿ ಶಾನ್ತಲದೇವಿ' ಕೇವಲ ಶಾಂತಲೆ ಮತ್ತು ಬಿಟ್ಟಿದೇವರ ಪ್ರಣಯಕಥೆ ಅಲ್ಲ. ಇದು ಮಾನವಸಹಜವಾದ ಮನೋವಿಕಾರಗಳ ವಸ್ತುಕೋಶ. ಸಾವಿರ ಮನೋಧರ್ಮದ ನೂರಾರು ಪಾತ್ರಗಳು ಇಲ್ಲಿ ಸುಳಿ ದಾಡುತ್ತವೆ. ಎಲ್ಲವೂ ವಿಶಿಷ್ಟ ಗುಣಗುಳುಳ್ಳವುಗಳೇ. ಎಲ್ಲವರಲ್ಲೂ ವೈವಿಧ್ಯತೆ ಇದ್ದೇ ಇದೆ. ಆದರೆ ಆ ವೈವಿಧ್ಯತೆಯ ಅಂತರಾಳ ದಲ್ಲಿ ಏಕತೆಯ ಸೂತ್ರವಿದೆ. ಬಲಿಪುರದ ಡಣಾಯಕ ಮರಿಯಾನೆ, ಡಣಾಯಕಿತಿ ಚಾಮವ್ವೆ ಇವರ ಕಲ್ಯಾಣಗುಣಗಳನ್ನು ಹೊತ್ತ ವರೆಂದರೆ ಅವರ ಮಕ್ಕಳು, ಪದ್ಮಲೆ, ಚಾಮಲೆ ಮತ್ತು ಬೊಪ್ಪದೇವಿಯರು. ತಾಯಿಯಂತೆಯೇ ಇವರೂ ಕ್ಷುದ್ರ ಮನಸ್ಸಿನವರು, ಆದರೂ ಈ ಮೂವರನ್ನು ಮದುವೆಯಾದ ಬಲ್ಲಾಳ ಬಿಟ್ಟಿ (ವಿಷ್ಣುವರ್ಧನನ ಅಣ್ಣ) ಎಲ್ಲೆಡೆಯೂ ತಾಳತಪ್ಪದಂತೆ ನರ್ತಿಸಿದ್ದಾನೆ. ವಿಧವೆಯರಾದ ಮೇಲೆ ಇವನ ಮೂವರು ಪತ್ನಿಯರಲ್ಲೂ ಸ್ತ್ರೀ ಸಹಜವಾದ ಅಸೂಯೆ, ಅತೃಪ್ತಿಗಳು ಅಡಗಿದ್ದು ಆಗಾಗ ಪ್ರಕಟ ವಾಗುತ್ತವೆ. ಇದು ಮನೋವಿಜ್ಞಾನದ ರೀತಿಯಲ್ಲಿ ಸಹಜ, ಸತ್ಯ ಆಗಿದೆ. ಇದೇ ರೀತಿ ತಂದೆ ವಿನಯಾದಿತ್ಯನು ಎಷ್ಟು ಹೇಳಿ ದರೂ ಅವನು ಬದುಕಿರುವವರೆಗೂ ಸಿಂಹಾಸನವನ್ನೇರಲು ಒಪ್ಪದಿರುವ ಎರೆಯಂಗನ ದೊಡ್ಡತನ, ತನ್ನ ಸಾಕುಮಗಳಾದ, ಅತ್ಯಂತ ಸ್ಫುರದ್ರೂಪಿಣಿಯಾದ ಲಕ್ಷ್ಮಯನ್ನು ಹೇಗೋ ಮಾಡಿ ವಿಷ್ಣುವರ್ಧನನ ಕೊರಳಿಗೆ ಕಟ್ಟಿ, ರಾಣಿಯಾಗಿ ಅರಮನೆಯನ್ನು ಸೇರಿದ ಮೇಲೆ, ಅವಳ ಮೂಲಕ ತನ್ನ ಸ್ವಾರ್ಥವನ್ನು ಸಾಧಿಸಿಕೊಂಡು, ಹೊಯ್ಸಳ ಸಾಮ್ರಾಜ್ಯದ ಅವನತಿಗೆ ಕಾರಣನಾದ ಕ್ಷುಲ್ಲಕ ಬುದ್ಧಿಯ ತಿರುವರಂಗದಾಸನ ಸಣ್ಣತನ, ವಶೀಕರಣ ವಿದ್ಯೆಯಲ್ಲಿ ಪರಿಣತನಾಗಿದ್ದ ವಾಮಶಕ್ತಿ ಪಂಡಿತನ ವಾಮಾಚಾರ, ದಾಸೋಜ, ಚಾವುಣ ಮೊದಲಾದ ಚತುರ ರೂವಾರಿಗಳ ಸ್ವಾಭಿಮಾನ, ಅಮರಶಿಲ್ಪಿ ಜಕಣಾಚಾರಿಯ ರಹಸ್ಯಪೂರ್ಣ ಜೀವನ, ಸೇವಕನಾದರೂ ಸಿಂಹಾಸನದ ನಿಷ್ಠಾವಂತ ಭಕ್ತನಾದ ರೇವಿಮಯ್ಯನ ಮುತ್ಸದ್ದಿತನ, ಆಚಾರ್ಯರ ಶಿಷ್ಯನಾದ ಎಂಬಾರ್‌ನ ಜಾಣತನ, ಅಭಿನವ ಪಂಪನೆಂದು ಕರೆದುಕೊಳ್ಳುವಲ್ಲಿ ಹೆಮ್ಮೆಪಟ್ಟುಕೊಳ್ಳುವ ಕವಿ ನಗಚಂದ್ರ, ಕಂತಿ, ಬೋಕಿಮಯ್ಯ– ಇವರು ಗಳು ಅರಸುಮನೆತನಕ್ಕೆತ್ತ ಶಿಕ್ಷಣ, ಅವರ ಸಂಧಿವಿಗ್ರಹಕಾರ್ಯ, ಸೌಹಾರ್ದ ರಾಯಭಾರ ಹಾಗೂ ಆಳುವವನಿಗೆ ಆಗಾಗ ಕೊಡು ತ್ತಿದ್ದ ಸಮಯೋಚಿತ ಸಲಹೆ, ಮಾರ್ಗದರ್ಶನ, ಚಟ್ಟಲೆ ಮತ್ತು ರಾಯಣರ ಆದರ್ಶಮಯವಾದ ಜೀವನ, ಕಲ್ಯಾಣಿಯ ಚಾಳು ಕ್ಯವಂಶ, ದೋರಸಮುದ್ರದ ಹೊಯ್ಸಳವಂಶ, ಬಲಿಪುರದ (ಬಳ್ಳಿಗಾವಿಯ) ಡಣಾಯಕವಂಶ, ತಲಕಾಡಿನ ಗಂಗವಂಶ, ಗದು ಗಿನ ರೂವಾರಿಗಳ ವಂಶ– ಹಲವು ವಂಶಗಳ ಇತಿಹಾಸದರ್ಶನ, ಹುಟ್ಟಿನಲ್ಲಿ ಮುಸಲ್ಮಾನಳಾದರೂ ಭಾವನೆಯಲ್ಲಿ ಭಾರತೀಯ ಭಕ್ತೆಯಾದ ದೆಹಲಿಯ ಸುಲ್ತಾನನ ಮಗಳು ತನ್ನಲ್ಲಿದ್ದ ಚೆಲುವನಾರಾಯಣಸ್ವಾಮಿಯ ವಿಗ್ರಹವನ್ನು ಕಳೆದುಕೊಂಡ ಮೇಲೆ, ಅದನ್ನು ಹುಡುಕಿಕೊಂಡು ಬರುತ್ತಾಳೆ ದಕ್ಷಿಣಕ್ಕೆ. ಅದನ್ನು ಬಾದಶಹನಿಂದ ಗುಟ್ಟಾಗಿ ಪಡೆದು, ತಂದು ವೇಲಾಪುರಿಯಲ್ಲಿ ಶ್ರೀ ಮದ್ವಾಚಾರ್ಯರು ಪ್ರತಿಷ್ಠಾಪಿಸುವ ವೇಳೆಯಲ್ಲಿ ವಿಚಾರ ತಿಳಿದು ದೆಹಲಿಯಿಂದ ವೇಲಾಪುರಿಗೆ ಬಂದು ಪರಮಾತ್ಮನ ಪಾದಾರ ವಿಂದಗಳನ್ನು ಸೇರಿದ ಸಾಧ್ವೀಶಿರೋಮಣಿ ಬಾದಶಹನ ಪುತ್ರಿಯ ಆತ್ಮಯಜ್ಞ, ಧಾರಾನಗರದ ಧಾಳಿಯ ವೇಳೆಯಲ್ಲಿ ಬಲಿಪುರ ದಲ್ಲಿ ನ್ಯಾಸವಾಗಿದ್ದ ಚಾಲುಕ್ಯ ಪಿರಿಯರಸಿ ಚಂದಲೆಯ ಚಾತುರ್ಯ, ಕೇತಮಲ್ಲನ ಶಿವನಿಷ್ಠೆ, ರಾಜನಿಷ್ಠೆಗಳು ಹೊಯ್ಸಳೇಶ್ವರ, ಶಾಂತಲೇಶ್ವರ– ಎಂಬ ಯಮಳದೇಗುಲಗಳಾಗಿ ರೂಪುಗೊಂಡಿದ್ದು, ಬೀರಸೆಟ್ಟಿಯ ಸಂಚು, ರತನ್‌ವ್ಯಾಸನ ಗೂಢಚರ್ಯ, ಗೊಂಕಲೆಂಕ, ಗಾಳಬ್ಬೆ, ಡಾಕರಸ, ಏಚಿಯಕ್ಕ, ವೈಜರಸ, ಚಿಣ್ಣಮದಂಡನಾಥ, ಬೂತುಗ, ದಾಸವ್ವೆ, ತ್ಯಾರಪ್ಪ, ಗೊಲ್ಲರಮಲ್ಲಿ, ಅಲ್ಲಿಗಾರರ ಚೆನ್ನಿ, ರೂವಾರಿ ರಂಗಾಚಾರಿ, ಪಟ್ಟಿ–ಪೊಂಬುಚ್ಚಪುರದ ಜಗದ್ದೇವ– ಬಗೆ ಬಗೆಯ ಧರ್ಮ, ಮನೋಧರ್ಮ, ಅಭಿರುಚಿ, ಆಸಕ್ತಿಗಳಿಂದ ಕೂಡಿದ ಜನಜಂಗುಳಿಯ ಒಂದು ವಿಶಿಷ್ಟ ವಿಶ್ವವನ್ನೇ ಪ್ರವೇಶಿಸಿದಂತಾಗುತ್ತದೆ

**ಸಂಸ್ಕೃತಿಯ ಕೈಪಿಡಿ**

ಶೈವನಿಗೆ ಶಿವನಾಗಿ, ಜೈನನಿಗೆ ಜಿನನಾಗಿ, ವೈಷ್ಣವನಿಗೆ ವಿಷ್ಣುವಾಗಿ, ಬೌದ್ಧನಿಗೆ ಬುದ್ಧನಾಗಿ ದರ್ಶನವನ್ನಿತು ಅಲಹುವ ಸ್ವಾಮಿ ಬಹಿರಂಗದಲ್ಲಿ ಬಹುರೂಪಿಯಾಗಿ ಕಂಡರೂ, ಅಂತರಂಗದಲ್ಲಿ ಏಕನಾಗಿದ್ದಾನೆ. ಮರ ಒಂದು ಎಲೆ ಹಲವು; ಕೆರೆ ಒಂದು ತೆರೆ ಹಲವು. ಅದನ್ನರಿತು ಸರ್ವಧರ್ಮಗಳಿಗೂ ಸಮಾನತೆಯನ್ನಿತ್ತ ಸಮನ್ವಯ ವೇದಿಕೆ ಎಂದರೆ ಹೊಯ್ಸಳ ಸಾಮ್ರಾಜ್ಯ. ಅಲ್ಲಿ ಜನ–ಜಾತಿ, ಕುಲ–ಕೋಮುಗಳಿಗಿಂತ ಮಾನವಧರ್ಮದ ಮಹತ್ವವನ್ನು ಮೆರೆಸಿದ ಮಹಾಮಾನವಳೆಂದರೆ ಶಾಂತಲಾ ದೇವಿ. ಚೆನ್ನಕೇಶವ ದೇವಾಲಯದ ಚರ್ಮದ ಪಾದುಕೆಗಳ ಬಗೆಗೆ ಬಂದ ವಿವಾದದ ವೇಳೆಯಲ್ಲಿ ಶಾಂತಲೆ ತಾನೇ ಆ ಚಪ್ಪಲಿಗಳನ್ನು ತಲೆಯ ಮೇಲೆ ಹೊತ್ತು ನಡೆಯುತ್ತಾಳೆ. ಉಚ್ಚ–ನೀಚ ಭಾವನೆಯನ್ನು ತೊಡೆದು ಹರಿಜನ, ಗಿರಿಜನ ಯಾವುದೇ ಜನವಿರಲಿ– ಅವರು ಮಾನವರು, ಭಗವಂತನ ಮಕ್ಕಳು ಎಂಬುದನ್ನು ತೋರಿಸಿಕೊಡುತ್ತಾಳೆ. ಸಮಾಜ ಸುಧಾರಣೆ, ಸ್ತ್ರೀ ವಿದ್ಯಾಭ್ಯಾಸದ ಬಗೆಗಿನ ಕಳಕಳಿ ಇವುಗಳು ಅಭಿನವ ಪಂಪ ನಾಗಚಂದ್ರನ ಮೂಲಕ ಅಭಿವ್ಯಕ್ತವಾಗಿವೆ. ಅವುಗಳ ಸಾಧನೆಗಾಗಿ ಶಿವಕೋಟಿ, ಪಂಪ, ರನ್ನ, ಚಾವುಂಡರಾಯ, ನಾಗವರ್ಮ ಮೊದಲಾದ ಕನ್ನಡದ ಉದ್ದಾಮ ಕವಿಗಳ ಕಾವ್ಯ ಪರಿಚಯವೂ ನಮಗಾಗುತ್ತದೆ. ಝಳಿ, ತಾವಾಡದ ಪದಕ, ನೇವಳ, ಪಿಲ್ಲಿ–ಒಡ್ಯಾಣ, ಹತ್ತು ಕಡಕು ಮೊದಲಾದ ಆಭರಣಗಳ, ಕಂಸಾಳ, ಕರಡೆ ಮೊದಲಾದ ಬಳಕೆಯ ವಸ್ತುವಿಶೇಷಗಳ, ಹಲವು ಆಯುಧಗಳ ಮಾಹಿತಿ ನಮಗಿಲ್ಲಿ ದೊರೆಯುತ್ತದೆ. 'ಪಟ್ಟ ಮಹಾದೇವಿ ಶಾನ್ತಲ' ಪರಿಪಕ್ವ ಚೇತನದ ಅಮೃತಫಲ. ಇದು ಕಲಾಪೂರ್ಣ ಕಾದಂಬರಿಯೂ ಹೌದು, ಇತಿ ಹಾಸವೂ ಹೌದು: ಭಾರತೀಯ ಸಂಸ್ಕೃತಿಯ ಕೈಪಿಡಯೂ ಹೌದು, ಸನಾತನ ಸಂಸ್ಕೃತಿಯ ಕೇಂದ್ರವೂ ಹೌದು. ಇಂತಹ ಅಮರ ಕಲಾಕಾಣಿಕೆಯನ್ನಿತ್ತ ಸಿಕೆ. ನಾಗರಾಜರಾಯರು ಅಭಿನಂದನೀಯರು.

# ಬಿಂದಲಿ : ಬೆಡಗು

ಅಧ್ಯಕ್ಷರೆ ಹಾಗೂ ಆತ್ಮೀಯರೆ,

ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಉನ್ನತಿಗೆ ಕೊಂಡೊಯ್ದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ. ಅವರ ಆಧ್ಯಾತ್ಮದ ಹಸಿವು, ಧರ್ಮದ ಮೇಲಣ ಮೋಹ, ಏಕದೇವೋಪಾಸನೆಯ ನಿಷ್ಠೆ, ಸಮಾಜ ಸುಧಾರಣೆಯ ಕಳಕಳಿ–ಇವೆಲ್ಲವೂ ಸಂಗಮಿ ಸಿದ ಸಂಕೀರ್ಣ ಭಾವಗಳು ಸರಳವಾದ ನುಡಿಯಲ್ಲಿ ಸಹಜವಾಗಿ ಮೂಡಲು ಯತ್ನಿಸಿದವು. ಅವು ವಚನಗಳು ಎಂದಾದವು. ಸೇಂದ್ರಿಯ ಅನುಭವಗಳನ್ನೂ ಅತೀಂದ್ರಿಯ ಅನುಭವವನ್ನೂ ಅರ್ಥಪೂರ್ಣವಾಗಿ ಅಭಿವ್ಯಕ್ತಪಡಿಸಲು ಸಮರ್ಥ ಸಾಧನವನ್ನಾಗಿ ಮಾಡಿಕೊಂಡಿರುವ ವಚನಕಾರರು, ಪದ್ಯವನ್ನು ಗದ್ಯದ ಮಟ್ಟಕ್ಕಿಳಿಸಲಿಲ್ಲ; ಗದ್ಯವನ್ನೇ ಪದ್ಯದ ಮಟ್ಟಕ್ಕೇರಿಸಿದರು. ಅದರ ಲಯ ದಲ್ಲಿ ಹೊಸತನವನ್ನು ತಂದರು. ಅದಕ್ಕೆ ಭಾವಗೀತಾತ್ಮಕ ಚಾಲನೆ ಕೊಟ್ಟರು. ಅವರು ಬಳಸಿದ್ದು ಭಾಷ್ಯದ ಭಾಷೆಯಲ್ಲ, ಭಾವದ ಭಾಷೆ. ರೂಪ–ಸ್ವರೂಪಗಳೆರಡರಲ್ಲೂ ತಮ್ಮತನವನ್ನು ಮೆರೆದ ವಚನಗಳು ಬಿಡಿ ಮುಕ್ತಕಗಳಾಗಿ ಅನುಭವ ಹಾಗೂ ಅನುಭಾವ ಗಳಿಂದ ಕನ್ನಡ ಸಾಹಿತ್ಯ ಶರಧಿಯಲ್ಲಿ ತುಂಬಿತುಳುಕಿದವು. ಇಂತಹ ವೈಶಿಷ್ಟ್ಯಪೂರ್ಣವಾದ ವಚನಗಳ ಅವತಾರಕ್ಕೆ ಅಂದಿನ ಸಾಮಾಜಿಕ ಅಸಮಾನತೆ ಒಂದು ಪ್ರಬಲ ಕಾರಣ. ವಚನಕಾರರು ತಮ್ಮ ಪರಿಸರಕ್ಕೆ ಸ್ಪಂದಿಸಿದರು. ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. ಅವರು ಹೇಳಹೊರಟದ್ದು ಘಟಿಕಾ ಸ್ಥಾನಗಳಲ್ಲಿ ಓದಿದ ವಿದ್ಯಾವಂತರಿಗಲ್ಲ, ನಿರಕ್ಷರಕುಕ್ಷಿಗಳಿಗೆ. ಮತ್ತೆ ತಮ್ಮ ತಮ್ಮ ಅನಿಸಿಕೆಗಳನ್ನು ಅನುವಾದಿಸಿಲು ಯತ್ನಿಸಿದ ಶ್ರೀ ಸಾಮಾನ್ಯ ಅಕ್ಷರದ್ವೇಷಿಗಳೇ! ಹೀಗಾಗಿ ಅವರಿಗೆ ಅಗತ್ಯ ಅಥವಾ ಅನಿವಾರ್ಯ ಅನ್ನಿಸಲಿಲ್ಲ. ತಮಗೆ ತಿಳಿದಿದ್ದ ತಿಳಿಗನ್ನಡದ ನುಡಿಯ ಮೂಲಕ ಮಿಡಿದ ಭಾವಗಳನ್ನು ಸಂವಹಿಸಿಬಿಟ್ಟರು. ಕಸುವುಳ್ಳ ಆಡುನುಡಿಯ ಬನಿಯನ್ನು ಬಳಸಿಕೊಳ್ಳುವ ಯತ್ನ ದಲ್ಲಿ ವಚನಸಾಹಿತ್ಯವು ಯಶಸ್ವಿಯಾಯಿತು. ಭಾವ, ಭಾಷೆ ಬಂಧ– ಇವುಗಳ ಮಧುರ ಬಾಂಧವ್ಯದ ಹೆಪ್ಪು ಒಡೆಯದಂತೆ ಎಚ್ಚರಿಕೆ ವಹಿಸಿತು. ಇವೆಲ್ಲದರ ಪರಿಣಾಮವಾಗಿ ವಚನ ಸಾಹಿತ್ಯ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಹೊಸ ಪ್ರಸ್ಥಾನವನ್ನೇ ಸ್ಥಾಪಿಸಿತು. ವಚನ ವಾಙ್ಮಯಕ್ಕೆ ಸುಮಾರು ಒಂದು ಸಾವಿರ ವರ್ಷಗಳ ಇತಿಹಾಸ ಇದೆ. ಹನ್ನೆರಡನೆಯ ಶತಮಾನದಲ್ಲಿ ಅದರ ಸೃಷ್ಟಿ ಸಂವೃದ್ಧವಾಗಿದ್ದರೂ ಆ ಸುಗ್ಗಿಗೆ ಹಿನ್ನಲೆಯಾಗಿ ನೂರಿನ್ನೂರು ವರ್ಷಗಳ ಕೃಷಿಕಾರ್ಯ ನಡೆದಿದೆ. ಹೀಗೆ ವಚನ ಸುಮಾರು ಹತ್ತನೆಯ ಶತಮಾನದಿಂದ ಆರಂಭವಾಗಿ, ಹನ್ನೆರಡನೆಯ ಶತಮಾನದಲ್ಲಿ ಪ್ರಬುದ್ಧತೆಯ ಪ್ರಸ್ಥಾನವೆನಿಸಿ, ಅನಂತರ ಹದಿನೈದ ನೆಯ ಶತಮಾನದಲ್ಲಿ ಪುನರುತ್ಥಾನ ಪಡೆದು, ಹದಿನೆಂಟನೆಯ ಶತಮಾನದವರೆಗೂ ಹರಿದು ಬಂದು, ಇಪ್ಪತ್ತನೆಯ ಶತಮಾ ನದ ಈ ಆಧುನಿಕ ಯುಗದಲ್ಲಿಹೊಸ ರೂಪು, ಹೊಸ ಹುರುಪು ಇವುಗಳಿಂದ ಮುಂದುವರಿಯುತ್ತಿದೆ. ಏನೇ ಇರಲಿ ಹೊಸ ಮಧುವನ್ನು ಹಳೆಯ ಪಾತ್ರೆಯಲ್ಲಿ ತುಂಬಿ ನೋಡಿದ ಆಧುನಿಕ ವಚನಕಾರರಲ್ಲಿ ಎಸ್.ವಿ. ರಂಗಣ್ಣನವರು ಮೊದಲಿಗರು. ಅವ ರಾದ ಮೇಲೆ ತೀನಂಶ್ರೀ, ಜಚನಿ, ಗು.ಶಂಕರಮ್ಮ, ಓಂಕಾರಮ್ಮ, ಟಿ.ಎನ್. ಮಹಾದೇವಯ್ಯ, ಸುಧಾಕರ, ಜೋಳದ ರಾಶಿ ದೊಡ್ಡ ನಗೌಡ, ಎಸ್.ವಿ. ಪರಮೇಶ್ವರ ಭಟ್ಟ, ಶಿವಕವಿ (ಸಂಗಮೇಶ ಹೊಸಮನಿ, ಹುನಗುಂದ), ಮಾತೆ ಮಹಾದೇವಿ, ಮೂಜಗಂ (ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಶ್ರೀ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು, ಮೂರು ಸಾವಿರ ಮಠ, ಹುಬ್ಬಳ್ಳಿ), ಬಸವಕುಮಾರ, ಸಿದ್ಧಯ್ಯ ಪುರಾಣಿಕ, ಮಹಾದೇವ ಬಣಕಾರ, ನಾ.ಚೆ. ರಾಯಚೂರ, ಮಹಾಂತಪ್ರಿಯ (ಬಿ. ಶೇಖರಪ್ಪ, ಹುಲುಗೇರಿ), ವಾಣಿ ಮೊದಲಾದವರು ವಚನಗಳನ್ನು ರಚಿಸಿದ್ದಾರೆ. ಈ ಪರಂಪರೆಯಲ್ಲೇ ಬರುತ್ತಾರೆ ಸೋದರಿ ಕಮಲಾ ಹಂಪನಾ. ಕಮಲಾ ಹಂಪ ನಾರವರ 'ಬಿಂದಲಿ' ಹೆಸರಿನಷ್ಟೇ ಮುದ್ದಾದ ಒಂದು ವಚನ ಸಂಕಲನ. ಅದರಲ್ಲಿ ವಸ್ತು ವೈವಿಧ್ಯವನ್ನೂ ರಚನಾ ವೈಶಿಷ್ಟ್ಯವನ್ನೂ ಕಾಣುತ್ತೇವೆ. ವಚನ ಪರಂಪರೆಯಲ್ಲಿ ಬೆಳೆದಿದ್ದರೂ ಇಲ್ಲಿನ ಭಾವಗೀತಾತ್ಮಕ ರಚನೆಗಳಲ್ಲಿ ಅದ್ಯತನ ಬದುಕಿನ ಅರ್ಥಪೂರ್ಣ ವಿಶ್ಲೇಷಣೆ ಇದೆ; ಸಮಕಾಲೀನ ಜೀವನವನ್ನು ಕುರಿತ ಕವಯಿತ್ರಿಯ ಸೂಕ್ಷ್ಮ ಸಂವೇದನೆ ಇದೆ. ಇಲ್ಲಿ ಬಂಡಾಯದ ತೊಂಡು, ಕನ್ನಡಾಭಿಮಾನದ ಗಂಡು ಹೃದಯ ಹೀನ ಸಮಾಜ ಖಂಡನೆಯ ಮೊಂಡು, ಮೊನಚು ಎಲ್ಲ ಇವೆ. ನಾನು ಮೆಚ್ಚಿದ್ದು ಇವರ ನಿಭಿಡೆಯ ನಿಲುವನ್ನು, ಹೇಳುವುದರಲ್ಲಿನ ಸ್ಪಷ್ಟತೆ ಅಥವಾ 'ತಿಳಿ'ಯನ್ನು, ಇವರ ಭಾವ ಗುರುತಿರು ವಷ್ಟು ಸ್ಪಷ್ಟ, ಭಾಷೆ ಪಾರದ ರ್ಶಕ. ಬರಹ ಶುದ್ಧ ಸಲಿಲ! ಇಲ್ಲಿ ವಿವೇಚನೆಯ ವಚನಗಳಿವೆ; ವೈಚಾರಿಕ ನಿಲವುಗಳಿವೆ. ಇಲ್ಲಿನ ಕೆಲವು ಒಳ್ಳೆಯ ಭಾವ ಗೀತೆಗಳು, ಹಲವು ವಿಡಂಬನಾತ್ಮಕವಾದ ಹೊಸ ಬಗೆಯ ರಚನೆಗಳು. ಇವರು ಎತ್ತಿಕೊಂಡ ವಸ್ತು ದಿನ ನಿತ್ಯದು, ದುಡಿಸಿ ಕೊಂಡ ಭಾಷೆ ಜನರ ಬಾಯಿನದು, ಮೂಡಿಸಿದ ಪ್ರತಿಮೆಗಳು ನಮ್ಮ ಪರಿಸರದವು. ಅವುಗಳಾವುವೂ ಅಲೌಕಿ ಕಗಳಲ್ಲ, ಅಗ್ರಾಹ್ಯಗಳಲ್ಲ; ಸಹಜ ಸುಂದರ ಹಾಗೂ ಸಮರ್ಥ ಸಂವಹನ ಸಾಧನಗಳು. 'ಕಮಲಾಪ್ರಿಯ' ಎಂಬ ಅಂಕಿತದಲ್ಲಿ ಲೌಕಿಕ ಪಾರಮಾರ್ಥಗಳೆರಡನ್ನೂ ಸಮೀಕರಿಸಿದ

ಸಮನ್ವಯದೃಷ್ಟಿ ಅಡಗಿದೆ. ಅದರಲ್ಲಿ ಕವಿಯಿತ್ರಿಯ ದರ್ಶನವೂ ಬೆಳಗಿ ಒಟ್ಟಾರೆ ಕವಯಿತ್ರಿ ಕಮಲಾ ಹಂಪನಾ ರವರ 'ಬಿಂದಲಿ'ಯಲ್ಲಿ ಅಂದ ಇದೆ, ಅಚ್ಚುಕಟ್ಟು ಇದೆ. ಅದನ್ನು ಓದಲಿ ಅಥವಾ ಹಾಡಲಿ ಎರಡೂ ಮೆಚ್ಚು. ಹೆಣ್ಣು ಪುರುಷನ ನಿರಂತರ ಶೋಷಣೆಗೆ ಸಿಕ್ಕ ವಸ್ತು. ಅದಕ್ಕೆ ತನ್ನ ಆತ್ಮಪ್ರತ್ಯಯವನ್ನು ಬೆಳಸಿಕೊಳ್ಳುವ ಅವಕಾಶವನ್ನೇ ಕೊಟ್ಟಿಲ್ಲ ಈ ಗಂಡು ಕುಲ. ಅವಳಿರುವುದು ಶರಪಂಜರದಲ್ಲಿ. ಅವಳಿಗೆ 'ಗಂಡನೊಂದು ಶೂಲ, ಮಗಳೋಂದು ದ್ವಿಶೂಲ, ಮಗನೊಂದು ತ್ರಿಶೂಲ, ಬಂಧುಗಳೋ ಬಹು ಶೂಲಗಳು !' ಇವಳ ಸೇವೆ, ಸಾಂತ್ವನ, ಸಂಧಾನ ಕಾರ್ಯಗಳಲ್ಲಿ ನಿರತಳಾದ ಇವಳಿಗೆ ಸ್ವತಂತ್ರವಾದ ಕೆಲಸ ಮಾಡಿಕೊಳ್ಳಲು ಸವುಡೇ ಸಿಕ್ಕಿಲ್ಲ. ಹೇಳುತ್ತಾಳೆ–

ನಾನೊಬ್ಬ ನಿರ್ಗತಿಕಳು ನೋಡಾ
ಎನ್ನ ಬದುಕಿನ ಕಾಲುಭಾಗ
ಕಾಲೇಜಿನಲಿ ಕಳೆಯಿತಯ್ಯ
ಎನ್ನ ಬದುಕಿನ ಕಾಲುಭಾಗ
ಅಡಿಗೆ ಮನೆಯಲಿ ಕಳೆಯಿತಯ್ಯ
ಇನ್ನು ಕಾಲುಭಾಗ ಗಂಡ–ಮಕ್ಕಳ ಸೇವೆಯಲಿ
ಉಳಿದ ಭಾಗ ಸಮಾಜ ಸೇವೆಯಲಿ
ಸೋರಿ ಹೋಯಿತಯ್ಯ.
ಎನಗಾಗಿ, ಎನ್ನ ಸಾಹಿತ್ಯಕ್ಕಾಗಿ
ಏನೂ ಉಳಿಯಲಿಲ್ಲ ನೋಡಾ ಕಮಲಾಪ್ರಿಯ. (ಬಿಂದಲಿ/೬೦)

ಆದದ್ದಾಯಿತು, ಗಂಡನಿಗಾಗಿ ಮಕ್ಕಿಗಾಗಿ ಕರ್ಪೂರದಂತೆ ಉರಿದು, ಶ್ರೀಗಂಧದಂತೆ ಸವೆದು ಏನಿಲ್ಲವಾಗಿರುವ ಹೆಣ್ಣಿಗೆ ದೊರೆತ ಬಹುಮಾನವಾದರೂ ಏನು?

ಅಕ್ಷತೆ ಸುರಿದ ಕೈಯಲೇ
ಸೀಮೆಎಣ್ಣೆ ಸುರಿವರಯ್ಯಾ
ಅರಿಸಿನ ಹಚ್ಚಿದ ಕೈಯಲೇ
ಬೆಂಕಿ ಹಚ್ಚಿ ಸುಡುವರಯ್ಯಾ
ವಧು ಮಾಡಿ ಮನೆ ತುಂಬಿಸಿಕೊಂಡವರೇ
ಹೆಣ ಮಾಡಿ ಆಚೆ ಸಾಗಿಸುವರಯ್ಯಾ
ಕಮಲಾಪ್ರಿಯ. (–ಬಿಂದಲಿ/೭೦)

ಕೇಳುಗರ ಕರುಳು ಹಿಂಡುವ ಈ ನುಡಿಗಳಲ್ಲಿ ಎಂತಹ ಕವಿತೆ ಅಡಗಿದೆ ಎಂಬುದನ್ನು ಸಹೃದಯರು ಮನಗಾಣದಿರರು. 'ಪುರುಷನ ಮುಂದೆ ಸ್ತ್ರೀ ಎಂಬುದೊಂದು ಮಾಯೆ' ಎಂದರು ಶರಣರು. ಆದರೆ 'ಬಿಂದಲಿ'ಯ ಕವಿಯಿತ್ರಿಗೆ ಪುರುಷನೂ ಮತ್ತೆ ಪರಮಾತ್ಮನೂ ಬಿಡಿಸಲಾಗದ, ಅರ್ಥೈಸಲಾಗದ ಎರಡು ಒಗಟುಗಳಾಗಿದ್ದಾರೆ. ಹೇಳುತ್ತಾರೆ:

ನಿನ್ನ ಸುಪ್ಪತ್ತಿಗೆಯ ಸುಖವೂ ಬೇಡ
ನಿನ್ನ ವಿಪತ್ತಿನ ಸರಪಣಿಯೂ ಬೇಡ
ನಿನ್ನ ಮುದ್ದಾಟದ ಒದ್ದಾಟವಂತೂ ಬೇಡ
ನಿನ್ನ ಪಾಪ–ಪುಣ್ಯಗಳ ಕಳೆವ ಕೂಡುವ
ಗಣಿತವಂತೂ ಬೇಡವೇ ಬೇಡ
ನಿನ್ನಕಾಣದ ಮೋಸದ ಆಟ
ಕಂಡಾಗ ಕರುಣೆಯ ನೋಟ
ಅಗೆದಷ್ಟು ಉಸುಕನ್ನೇ ನೀಡುವ
ನೀನು ನನಗೊಂದು ದೊಡ್ಡ ಒಗಟು ಕಮಲಾಪ್ರಿಯ. (–ಬಿಂದಲಿ/೨)

ಮತ್ತು,

ಸಾಗರದ ತಳವ ಕಂಡವರ ಬಲ್ಲೆ
ಆಗಸದ ಬಯಲ ಅಳೆದವರ ಬಲ್ಲೆ
ನಕ್ಷತ್ರಗಳ ಎಣಿಸಿ ಗುಣಿಸಿದವರ ಬಲ್ಲೆ
ಪಾತಾಳ ಹೊಕ್ಕು ಬದುಕಿ ಉಳಿದವರ ಬಲ್ಲೆ
ನನ್ನ ತನು–ಮನದಲ್ಲೆ ನೆಲಸಿದ ನಿನ್ನ
ನಾ ಬಲ್ಲೆನೇ ಕಮಲಾಪ್ರಿಯ (–ಬಿಂದಲಿ/೩)

ಒಬ್ಬ ಸುಗೋಚರ, ಮತ್ತೊಬ್ಬ ಸಗೋಚರ; ಇವನು ಭವಕ್ಕೆ ಸಾಧ್ಯನಾದವನು, ಅವನು ಅನುಭಾವಕ್ಕೆ ವೇದ್ಯನಾದವನು. ಇವರಿಬ್ಬರನ್ನೂ ಅರಿಯಲು ಹೆಣ್ಣು ಜೀವ ಹೆಣಗಿ ವಿಫಲವಾಗಿದೆ. ಆದರೆ,

ನಿನ್ನ ಸನಿಹವೆ ನನಗೊಂದು ಸಮ್ಮೋಹನ
ನಿನ್ನ ಸ್ಪರ್ಶವೆ ನನಗೊಂದು ಸಂಜೀವನ
ನೀ ಬೆರಳೊತ್ತಿದಲ್ಲಿ ಅರಳಿದೆ ಉತ್ಪಲ
ನೀ ಕೈಯಿಟ್ಟಲ್ಲಿ ಬಿರಿದಿದೆ ಕಮಲ
ಮುಡಿಸಿರುವ ತುಟಿಯಿಂದ ಒಲವಿನಾ ಹೂವ
ಬಿಡಿಸಿರುವೆ ಮೈತುಂಬಾ ರಾಗರಂಗವಲಿಯ
ಬರೆದಿರುವೆ ಮನದ ತುಂಬೆಲ್ಲ
ಪ್ರಣಯ ಭಾವಗೀತೆಯ ಕಮಲಾಪ್ರಿಯ (–ಬಿಂದಲಿ/೧೮)

ಇಂಥ ಸ್ಪರ್ಶ ಸುಖದ ಸವಿಯನ್ನನುಭವಿಸಿದ ಈ ಚೇತನ ಸಕಲವನ್ನೂ ಅರ್ಪಿಸುತ್ತಾ ಹೀಗೆ ಹೇಳುತ್ತದೆ–

ನೀನಿತ್ತ ಮುತ್ತು
ತನು ತುಂಬಿ ಮುಡಿದಿದೆ
ನಿನ್ನಪ್ಪುಗೆಯ ಮತ್ತು
ಮೈತುಂಬಿ ಹೊದ್ದಿದೆ
ಅಡಿಯಿಂದ ಮುಡಿಗೆ
ಛಾಪಿಸಿದೆ ಪ್ರೇಮ ಮುದ್ರೆ
ತನು ಮನದೆ ಪಸರಿಸಿದೆ
ಶೃಂಗಾರ ಪ್ರಣಯ ನಿದ್ರೆ
ಹರಿದಾಡಿದೆ ತುದಿ ಬೆರಳು
ನಿಸ್ಸಂಕೋಚದೆ
ಮೂಡಿದೆ ರೋಮಾಂಚದ
ಕಚಗುಳಿ ಮುದದೆ
ನಿನ್ನ ಹೆಸರನ ಕೇಳಿದಲ್ಲೆ
ನಿಂತ ನಾ ಮಂತ್ರ ಮುಗ್ಧೆ
ನನ್ನದೇನು ಉಳಿಯಲಿಲ್ಲ
ನಿನ್ನದೆ ಆಯಿತಲ್ಲ ಎಲ್ಲ
ಕಮಲಾಪ್ರಿಯ (–ಬಿಂದಲಿ/೨೧)

ಇಂತಹ ಸರ್ವ ಸಮರ್ಪಣಭಾವ ಅಭಿವ್ಯಕ್ತವಾದರೂ ಈ ಚೇತನಕ್ಕೆ ಸಕಲ ಸ್ವಾತಂತ್ರ್ಯದ ಹಂಬಲ ಇದೆ. ಬೇಡುತ್ತದೆ:

ನನ್ನನೇಕೆ ಬಂಧಿಸುವೆಯಯ್ಯಾ
ಕತ್ತಲೆಯ ಗರ್ಭಗುಡಿಯಲಿ
ನನ್ನನೇಕೆ ಪೂಜಿಸುವೆಯಯ್ಯಾ
ದೇವತೆ ಮಾಡಿ ಸ್ತುತಿಯಲಿ
ಬಿಡು ನನ್ನ ಹೊರಗೆ
ಮೆರವಣಿಗೆಯ ದೇವತೆಯಾಗಿ
ಬೀದಿ ಬೀದಿಯಲಿ ಚರಿಸಿ ಬರುವೆ
ಬಸವಿಯಾಗಲ್ಲ, ಜಂಗಮ ದೇವತೆಯಾಗಿ
ಬಿಡು ನನ್ನ ಹೊರಗೆ, ತುಡಿದು ಬರುವ
ಮಾನವಳಾಗಿ ಬರುವೆ ಕಮಲಾಪ್ರಿಯ (–ಬಿಂದಲಿ/೧೯)

ಎಂದು,

ಇಲ್ಲಿನ ಭಾವ ಎಷ್ಟು ನವಿರು, ಎಷ್ಟು ತಿಳಿ ಅದೆಷ್ಟು ಧೃಢ. ಇಲ್ಲಿ ಕವಿತೆ ಇದೆ. ಅದರ ಕಮನೀಯ ಕಾಂತಿ ಇದೆ. 'ಬಿಂದಲಿ'ಯ ವಚನಕಾರ್ತಿ ಇನ್ನಡದ ಕಟ್ಟಾಭಿಮಾನಿ, ಆದ್ದರಿಂದಲೇ ವಚನವನ್ನು ಒಲಿದರೆಂದು ತೋರುತ್ತದೆ. ಒಂದೆಡೆ ಹೇಳುತ್ತಾರೆ–

ಮಾನಕೆ ಅಂಜೆ
ಅಭಿಮಾನಕೆ ಅಳುಕೆ
ಹಣ, ಅಧಿಕಾರಕೆ ಸೋಲೆ
ನಿಂದಿಸಲು ಕೆರಳೆ ನಾ
ವಂದಿಸಲು ಉಬ್ಬೆನಾ
ಕೆಣಕೆ ಕನ್ನಡತನವ
ಆಗ ನಾ ಕಾಳಿ ಮಹಾಕಾಳಿ
ನೋಡಾ ಕಮಲಾಪ್ರಿಯ. (–ಬಿಂದಲಿ/೫೮)

ಇದೇ ರೀತಿ ಈ ಕವಯಿತ್ರಿ ತಮ್ಮ ಪರಿಸರಕ್ಕೆ ವಿಶೇಷವಾಗಿ ಸ್ಪಂದಿಸಿದ್ದಾರೆ. ಆದ್ಯತನದ ಆಗುಹೋಗುಗಳನ್ನು ಕಂಡು ವಿಡಂಬಿಸಿದ್ದಾರೆ; ವಿಚಾರಿಸಿಕೊಂಡೂ ಇದ್ದಾರೆ! ಅವರಲ್ಲಿ ಬಂಡಾಯ ಗುಡುಗಾಡಿದೆ. ಉತ್ತಮ ಕುಲದವರೆನಿಸಿಕೊಂಡ ವೀರಶೈವ ಬ್ರಾಹ್ಮಣ ಹಾಗೂ ಒಕ್ಕಲಿಗರನ್ನು ಕುರಿತು ತುಂಬಾ ತರಾಟೆಗೆ ತೆಗೆದುಕೊಂಡಿದ್ದಾರೆ:

ಎನ್ನ ರುಂಡವನೊಯ್ದಿತ್ತು
ಜನಿವಾರ ಒಂದು ಬಂದು
ಎನ್ನ ಮುಂಡವನೊಯ್ದಿತ್ತು
ಶಿವದಾರ ಒಂದು ಬಂದು
ಎನ್ನ ಕೈಕಾಲ ಕೊಂಡೊಯ್ದಿತ್ತು
ನೇಗಿಲೊಂದು ಬಂದು
ಎನ್ನ ತನು ಅಕ್ಕಟಾ
ಮೂರಾ ಬಟ್ಟೆಯಾಯಿತು ನೋಡಾ (ಬಿಂದಲಿ/೧೪)

ಇಂತವಲ್ಲದೆ ಕೆಲವು ಅಪಕ್ವ ವಚನಗಳೂ ಇವೆ ಈ ಸಂಕಲನದಲ್ಲಿ. ಅವು ಬರಿಯ ಆವೇಶದ ರಚನೆಗಳು. ಭಾವ ಭುಗಿ ಲೆದ್ದು ಭಾಷೆಯನ್ನಾಶ್ರಯಿಸಿದರೆ ಖಂಡಿತಾ ಕಾವ್ಯವಾಗದು. ಅದು ಕವಿಯ ರಸಕೋಶದಲ್ಲಿ ರಸಾರ್ದ್ರವಾಗಿ,

ರಸವಸ್ತುವಾಗಿ ಪಕ್ವಾ ನುಭವದ ಸಹಜಾವ್ಯಕ್ತಿ ಪಡೆಯಬೇಕು. ಆಗಲೇ ಅದು ಒಂದು ಉತ್ತಮ ಗೀತೆ ಅನ್ನಿಸಿಕೊಳ್ಳುವುದು ಇಲ್ಲವಾದರೆ–

ಬಿಗುಮಾನ ಬೇಡ
ಬಿಂಕ ಬೇಡ
ಬದಿಗೊತ್ತು ಅಭಿಮಾನ
ಮಾನಾಪಮಮಾನ
ಅಧಿಕಾರ ಮರೆ
ಅಂತಸ್ತ ತೂರೆ
ಮದಮೋಹ ಎಲ್ಲ ಮರೆ
ಕೈಗೂಡಲು ಕಾರ್ಯ
ಕಟ್ಟು ಕತ್ತೆಯ ಕಾಲ ಕಮಲಾಪ್ರಿಯ (–ಬಿಂದಲಿ/೪೧)

ಎಂಬಂತಹ ಬುಡಭದ್ರವಿಲ್ಲದ ಗಿಡವಾಗುತ್ತದೆ. ಆದರೆ ಈ ಕವಿಯಿತ್ರಿಯ ಹಿರಿಮೆ ಇರುವುದು ಈ ವಚನದಲ್ಲಿ–

ಬಿಂದಲಿ ನಾನಾಗುವೆ
ಕಿರೀಟ ನಾನಾಗುವುದು ಬೇಡ
ಕಾಲುಂಗರ ನಾನಾಗುವೆ
ಕಂಠಿಹಾರ ನಾನಾಗಲಾರೆ
ಮೂಗುತಿ ನಾನಾಗುವೆ
ವಡ್ಯಾಣ ನಾನಾಗಲಾರೆ
ಅಭಿಮಾನಿ ನಾನಾಗುವೆ
ದುರಭಿಮಾನಿ ನಾನಾಗಲಾರೆ
ಕಮಲಾಪ್ರಿಯ (ಬಿಂದಲಿ/೪೯)

ಪ್ರಾಚೀನ ವಚನಕಾರರು ನೆರಳು ನೇರವಾಗಿ ಬಿದ್ದಿದೆ ಕೆಲವು ವಚನಗಳಲ್ಲಿ. ಉದಾಹರಣೆಗೆ: 'ಅಧಿಕಾರಕ್ಕೆ ಆಸೆಪಟ್ಟವರ ಕಂಡೆ. ಅಂತಸ್ತಿಗೆ ಮಾರುಹೋದವರ ಕಂಡೆ. ಅಹಂಕಾರಕ್ಕೆ ಬೀಗಿದವರ ಕಂಡೆ, ಪ್ರಶಂಸೆಗೆ ಬಡಿದಾಡಿದವರ ಕಂಡೆ, ಪ್ರಸಿದ್ಧಿಗೆ ಹೊಡೆದಾಡಿದವರ ಕಂಡೆ, ಪ್ರಚಾರಕ್ಕೆ ಹೊಡೆದಾಡಿದವರ ಕಂಡೆ, ನಿಗಾಗಿ ಬದುಕಿದವರನೂ ಕಾಣೆ' ಎಂಬ ವಚನ. ಹೆಣ್ಣಿಗಾಗಿ, ಹೊನ್ನಿಗಾಗಿ, ಮಣ್ಣಿಗಾಗಿ ಸತ್ತವರುಂಟು, ಆದರೆ ನಿನಗಾಗಿ ಸತ್ತವರನೂ ಕಾಣೆ' ಎಂಬ ಅಲ್ಲಮಪ್ರಭುವಿನ ವಚನವನ್ನು ನೆನಪಿಗೆ ತಂದರೆ, 'ನಗುವಾಗ ಬಂದವರು ಅಳುವಾಗ ಇರಲಿಲ್ಲ. ನಲಿದಾಗ ಬಂದವರು ಕೊರಗಿನಲಿ ನಿಲ್ಲಲಿಲ್ಲ, ಸಿರಿತನಕ್ಕೆ ಬಂದವರು ಬಡತನಕ್ಕೆ ಬರಲಿಲ್ಲ. ಎಲ್ಲರಿಗೂ ಎಲ್ಲರೂ ಇರಲೊಲ್ಲರು ಯಾವಾಗಲೂ' ಎಂಬುದರಲ್ಲಿ, 'ಆರಿಗಾರೂ ಇಲ್ಲ ಕೆಟ್ಟವಂಗೆ ಕೆಳೆ ಯಿಲ್ಲ' ಎಂಬ ಅಣ್ಣನ ನುಡಿಯ ಮರುಧ್ವನಿ ಕೇಳಿಬರುತ್ತದೆ. ಈ ಉಪನ್ಯಾಸಕ್ಕೆ ವಿದಾಯ ಹೇಳುವ ಮುನ್ನ ನಾನು ಸ್ಪಷ್ಟವಾಗಿ ಕವಯಿತ್ರಿ ಕಮಲರವರನ್ನು ಕಂಡದ್ದು ಒಂದು ವಚನದಲ್ಲಿ: ಕೇಳಿ–

ಇರುಳು ಉರುಳಲೇ ಬೇಕು
ಹಗಲು ಮೂಡಲೇಬೇಕು
ಹಬೆಯಾಗಿ ಮೇಲೇರಿ
ಇಳಿಯಲೇ ಬೇಕು ಇಳೆಗೆ ಮಳೆಯಾಗಿ
ಹೊರಟಲ್ಲೆ ಬಂದು ನಿಲಬೇಕು
ವಿಶ್ವಪರ್ಯಟನದೆ
ಬದುಕ ಪರಿಭ್ರಮಿಸುವ ಗಾಲಿ
ಸಹಿಸಿಕೊ ದುಃಖವ
ಸುಖದ ಬರುವಿಕೆಗಾಗಿ ಕಮಲಾಪ್ರಿಯ (–ಬಿಂದಲಿ/೪೫)

# ಸಮ್ಯಕ್ತ್ವ ಕೌಮುದಿ: ಒಂದು ವಿವೇಚನೆ

ವಿಘ್ನೌಘಾಃ ಪ್ರಲಯಂ ಯಾಂತಿ ಶೌಕಿನೀ ಭೂತ ಪನ್ನಗಾಃ ।

ವಿಷಂ ನಿರ್ವಿಷಕಾಂ ಯಾತಿ ಸ್ತೂಯಮಾನೇ ಜಿನೇಶ್ವರೇ ॥

[ಜಿನೇಶ್ವರನನ್ನು ಸ್ತೋತ್ರ ಮಾಡಿದರೆ ವಿಘ್ನ ಪರಂಪರೆಗಳೂ ಶಾಕಿನಿಭೂತ ಸರ್ಪ ಮೊದಲಾದವುಗಳೂ ದೂರವಾಗುತ್ತವೆ. ವಿಷವು ನಿರ್ವಿಷವಾಗುವುದು]
ಕೊಲಲಾಗದೆಂಬ ಜೈನಮತವೆನ್ನ
ತಲೆಯ ಮೇಲಿರಲಿ ಸರ್ವಜ್ಞ

ಸಮುದಾಯವನ್ನು ಸನ್ಮಾರ್ಗಕ್ಕೆ ತರುವಲ್ಲಿ ಮತಧರ್ಮದ್ದು ಅತ್ಯಂತ ಮಹತ್ವದ ಪಾತ್ರ. ಅದು ವ್ಯಕ್ತಿಯ ವ್ಯಕ್ತಿತ್ವದ ವಿಕಾಸಕ್ಕೆ ಯೋಗ್ಯ ಆವರಣವನ್ನು ನಿರ್ಮಿಸುತ್ತದೆ. ಅವನ ಹರಿವ ಮನಕ್ಕೆ ಸಂಯಮದ ಕಡಿವಾಣ ಹಾಕುವುದಲ್ಲದೆ, ಅವನ ಆತ್ಮಾನುಭೂತಿಗೂ ಅದು ಅನುವಾಗುತ್ತದೆ. ಸಂಸಾರ ಸಾಗರದಲ್ಲಿ ಮುಳುಗುತ್ತಿರುವ ಜೀವಿಯನ್ನು ಕಡೆ ಹಾಯಿಸುವ ದೋಣಿ' ಯಾಗುತ್ತದೆ. ಸಂಸಾರ ಸಾಗರದಲ್ಲಿ ಮುಳುಗುತ್ತಿರುವ ಜೀವಿಯನ್ನು ಕಡೆ ಹಾಯಿಸುವ ದೋಣಿ'ಯಾಗುತ್ತದೆ. ಅವನನ್ನು ಕತ್ತಲೆ ಯಿಂದ ಬೆಳಕಿನೆಡೆಗೆ ಕೊಂಡೊಯ್ಯಲು ಸಮೆದ ಸುಂದರ ಹಾಗೂ ಬಂಧುರ ಸೋಪಾನವೂ ಆಗುತ್ತದೆ. ಆದ್ದರಿಂದ ಧರ್ಮ ದೊಡ್ಡದು. ಅದರಲ್ಲೂ ಜೀವದಯೆಯನ್ನು ತನ್ನ ಜೀವ ಜೀವಾಳವಾಗಿಸಿಕೊಂಡಿರುವ ವಿಶ್ವಶಾಂತಿ, ವಿಶ್ವಸಾಮರಸ್ಯ ವಿಶ್ವಕಲ್ಯಾಣ ಸಾಧನವೆನಿಸಿದ 'ಜಿನಧರ್ಮ' ಧರ್ಮಗಳಲ್ಲಿ ಧರ್ಮ, ಶ್ರೇಷ್ಠಧರ್ಮ, ಅದು ಜಾತಿ ಎಂಬ ಸುಂಕುಚಿತಾರ್ಥದಲ್ಲಿ ನಿಂತಿಲ್ಲ, ಮಾನ ವೀಯ ಮೌಲ್ಯಗಳನ್ನೊಳಗೊಂಡ ವಿಶ್ವಮಾನವ ಧರ್ಮವಾಗಿದೆ. ದೇವತ್ವಕ್ಕೂ ಮೀರಿದ, ಕಲ್ಪದಾಚೆಗೂ ವ್ಯಾಪಕವಾದ ಸಮವಸ ರಣದ ಮಹಾಮಂಟಪದ ಮಧ್ಯದಲ್ಲಿ, ಗಂಧಕುಟಿಯ ಸಹಸ್ರದಲ ಪದ್ಮಪೀಠದ ಮೇಲೆ ನಾಲ್ವೆರಳೆತ್ತರದಲ್ಲಿ ಮಂಡಿಸುವ ತಪೋ ಮುದ್ರಿತ ಮಹಾಮೂರ್ತಿ ಜಿನಸ್ವಾಮಿಯ ಆದಿಬ್ರಹ್ಮತ್ವವನ್ನು ಸಿದ್ಧಿಸಿಕೊಳ್ಳುವ ಮಹದ್ದರ್ಶನವನ್ನು ಬೆಳಗುತ್ತದೆ ಜೈನಧರ್ಮ. ಜೀವ ಅಜೀವದ ಹಲವಾರು ಆವರಣಗಳಲ್ಲಿ ಅಥವಾ ಸಂಸಾರದ ಮಿಥ್ಯಾಜ್ಞಾನ ಮೊದಲಾದ ಸುವರ್ಣ ಸಂಕೋಲೆಗಳಲ್ಲಿ ಸಿಕ್ಕಿಬಿದ್ದು, ನಾಯಾಗಿ, ನರಿಯಾಗಿ, ಹುಳುವಾಗಿ, ಉಡವಾಗಿ, ದೇವಮಾನವ, ತಿರ್ಯಕ್, ನಾರಕಿ ಎಂಬ ಚತುರ್ಗತಿಯಲ್ಲಿ ಸುತ್ತಿಸುತ್ತಿ ತೊಳಲಿ, ಬಳಲಿ, ಯಾವುದೋ ಒಂದು ಭವ, ಮತ್ತಾವುದೋ ಒಂದು ಕಲ್ಪ ಹೇಗೆಲ್ಲ ಅಲೆದಲೆದು ಭವಭವಕ್ಕೂ ತನ್ನನ್ನಾವರಿ ಸಿರುವ ಕಾಮಾದಿ ಕಲ್ಮಶಗಳನ್ನು ಪದರ ಪದರವಾಗಿ ಹಾವು ಪೊರೆಬಿಟ್ಟಂತೆ ಕಳೆದುಕೊಂಡು, ಕಡೆಗೆ ಪರಿಶುದ್ಧ ಪರಂಜ್ಯೋತಿ ಯಾಗಿ ಪರತತ್ವವನ್ನು ಪ್ರಚುರಪಡಿಸುತ್ತಾ ಮುಕ್ತಿದಾಯಿಯೂ, ಮಹಾಶಕ್ತಿಯೂ, ದಿವ್ಯವಿಭೂತಿಯೂ ತಾನಾಗುತ್ತದೆ. ಜ್ಯೋತಿಗೆ ಎಣ್ಣೆ ಮತ್ತು ಬತ್ತಿಗಳ ಅಗತ್ಯ ಇದ್ದರೆ, ಈ ಪರಂಜ್ಯೋತಿಗೆ ಅವುಗಳ ನೆರವು ಬೇಕಾಗುವುದಿಲ್ಲ. ಸ್ವಯಂಜ್ಯೋತಿಯಾದ ತಾನು ತನಗೆ ತಾನೇ ಬೆಳಗುತ್ತದೆ. ಹೀಗಾಗುವ ಜೀವಕ್ಕೆ ಪಾಪ ಪುಣ್ಯಗಳ ಲೇಪ ಇರಕೂಡದು. ಅವೆರಡರಲ್ಲಿ ಯಾವುದಿದ್ದರೂ ಜೀವನಿಗೆ ಮುಕ್ತಿ ಇಲ್ಲ. ಮೋಕ್ಷದ ಮಹಾಫಲದಿಚ್ಚೆ ಇದ್ದರೆ ಜೀವ ಅವೆರಡರಿಂದಲೂ ದೂರವಾಗಬೇಕು. ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ ಮತ್ತು ಸಮ್ಯಕ್‌ಚಾರಿತ್ರ ಎಂಬ ರತ್ನತ್ರಯಗಳನ್ನು ಸಾಧಿಸಿ, ಶುಕ್ಲಧ್ಯಾನದಲ್ಲಿ ಪರಿಣಾಮ ಪಡೆಯಬೇಕು. ಕಾಲಲಬ್ದಿ ಪ್ರಾಪ್ತವಾದಾಗ ಪಕ್ವವಾಗಿ ಹಣ್ಣು ತಾನಾಗಿಯೇ ತೊಟ್ಟು ಕಳಚಿ ಬೀಳುವಂತೆ, ಆ ಭವ್ಯಾತ್ಮ, ತನ್ನ ಸಹಜ ಸ್ವರೂಪವನ್ನು ಪಡೆದು, ಅನಂತ ಜ್ಞಾನಾದಿಗಳಿಂದ ಬೆಳಗುತ್ತ ಶಾಶ್ವತಮೋಕ್ಷ ಸುಖದಲ್ಲಿ ನೆಲೆಗೊಳ್ಳುತ್ತದೆ. ಈರುಳ್ಳಿಯ ಸಿಪ್ಪೆಗಳನ್ನು ಒಂದಾದಮೇಲೊಂ ದರಂತೆ ಬಿಚ್ಚುತ್ತಾ ಹೋದರೆ ಕಡೆಯಲ್ಲಿ ಏನೂ ಉಳಿಯುವುದಿಲ್ಲ. ಅಂತಾಗುವುದೇ ಜೈನಧರ್ಮದ ಚರಮಸ್ಥಿತಿ. ಆದಿಯಲ್ಲಿ ಚೈತ್ನನ್ಯ ಸ್ವರೂಪದ, ಚಿರಂತನವಾದ ಆತ್ಮವು ಅನಂತಜ್ಞಾನ, ಅನಂತ ದರ್ಶನ, ಅನಂತ ವೀರ್ಯ, ಅನಂತ ಸುಖಗಳಿಂದ ಕೂಡಿದ್ದು, ವಿಶ್ವವೆಲ್ಲಾ ತಾನಾಗಿದ್ದು, ಆ ಜೀವದ ಸಂಪರ್ಕದಿಂದ ಕರ್ಮಶೃಂಖಲೆಗಳಲ್ಲಿ ಸಿಕ್ಕಿದ್ದು ಮತ್ತೆ ಭವ ಭವಗಳಲ್ಲಿ ಬಿಡುಗಡೆ ಹೊಂದುತ್ತಾ ಕಡೆಯಲ್ಲಿ ತನ್ನ ಮೊದಲಿನ ನಿರ್ವಿಕಾರ ಸ್ವರೂಪದಿಂದ ಅರ್ಹತ್ ಪದವಿಯನ್ನು ಪಡೆದು ಜಿನನಾ ಗುತ್ತದೆ. ಚತು ರ್ಗತಿಯಲ್ಲಿ ತೊಳಲುವ ಜೀವ ಜನ್ಮಜನ್ಮಕ್ಕೂ ತನ್ನನ್ನಾವರಿಸಿರುವ ಕಾಮದ ಕಾಳಿಕೆಯನ್ನು ನೀಗಿಕೊಂಡು ಪರಿಶು ದ್ಧವಾಗುತ್ತಾ ಅಸನ್ನಭವ್ಯ ಅಥವಾ ಭವ್ಯತ್ವಕ್ಕೇರಿದ ಕೂಡಲೆ ಒಂದು ಗ್ರಹದ ಪಥವನ್ನು ದಾಟಿ ಮತ್ತೊಂದು ಗ್ರಹವನ್ನು ಸಮೀ ಪಿಸಿದಂತೆಲ್ಲಾ ಆ ಗ್ರಹದ ಆಕರ್ಷಣೆ ಹೆಚ್ಚುವಂತೆ ಕಾಮಭ್ರಮೆ ಕಡಿಮೆಯಾಗಿ, ಮೋಕ್ಷದ ಹಂಬಲ ಪ್ರಬಲವಾಗುತ್ತದೆ. ಹೀಗೆ ಅನರ್ಹ ಅರ್ಹಂತನಾಗುವ,

ಜೀವ–ಜಿನನಾಗುವ ಆತ್ಮದ ಅದ್ಭುತ ಅಮೋಘ ವಿಕಾಸ ಸ್ವರೂಪವುಳ್ಳದ್ದು ಜೈನ ಧರ್ಮ. ಈ ಧರ್ಮದಲ್ಲಿ ಹಿಂದೆಯೇ ಹೇಳಿದಂತೆ ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ ಮತ್ತು ಸಮ್ಯಕ್‌ಚಾರಿತ್ರವೆಂಬ ರತ್ನತ್ರಯಗಳು ಅತ್ಯಂತ ಮಹತ್ವದವುಗಳು. ಅವುಗಳಲ್ಲಿ ಸಮ್ಯಕ್ ದರ್ಶನಕ್ಕೆ ಪೂಜ್ಯ ಪೀಠ ಮೀಸಲಿದೆ. ಇದರ ಮೂಲ ಅರ್ಥ ನಂಬಿಕೆ, ಧರ್ಮ ದಲ್ಲಿ ನಂಬಿಕೆ, ದೈವದಲ್ಲಿ ನಂಬಿಕೆ, ಜೀವನದಲ್ಲಿ ನಂಬಿಕೆ, ಬಾವದಲ್ಲಿ ನಂಬಿಕೆ, ಇಹ–ಪರಗಳಲ್ಲಿ, ಬಂಧನ ಮೋಕ್ಷಗಳಲ್ಲಿ, ಆಮು ಷ್ಮಿಕ ಆಧ್ಯಾತ್ಮಗಳಲ್ಲಿ. ಒಟ್ಟಿನಲ್ಲಿ ಸೃಷ್ಟಿಯ ಸಕಲ ಚರಾಚರಗಳಲ್ಲಿ ವಿಶೇಷ ನಂಬಿಕೆ, ವಿಶ್ವಾಸ, ಮೈತ್ರಿ ಮೊದಲಾದುವುಗಳನ್ನು ಬೆಳೆ ಸಿಕೊಳ್ಳುವ ಆಸ್ತಿಕ ಮನೋಧರ್ಮವೇ ಸಮ್ಯಕ್‌ದರ್ಶನ. ಈ ದರ್ಶನಶುದ್ಧಿಯನ್ನು ಜೈನಾಗಮಗಳೂ 'ಸಮ್ಯಕ್ತ್ವ' ಎಂದು ಕರೆ ಯುತ್ತವೆ. ಈ ಸಮ್ಯಕ್ತ್ವವನ್ನು ಪ್ರತಿಪಾದಿಸುವ ಅಕ್ಷರರೂಪೀ ಅಭಿವ್ಯಕ್ತಿಯೇ 'ಸಮ್ಯಕ್ತ್ವ ಕೌಮುದಿ'. ಶುಕ್ಲಪಕ್ಷದ ಕೌಮುದಿ ಕಣ್ ಮನಗಳಿಗೆ ಅಣಂದ ಆಹ್ಲಾದಗಳನ್ನು ಉಂಟುಮಾಡಿದರೆ ಜಗತ್ಪ್ರಸಿದ್ದ ಸಮ್ಯಕ್ತ್ವ ಕೌಮುದಿ ಮುಮುಕ್ಷುಗಳ ಮನೋಭೂಮಿಕೆ ಯನ್ನು ಸುಪ್ರಸನ್ನಗೊಳಿಸುತ್ತದೆ. ಇದು ಭವರೋಗ ಭೈಷಜ, ಆತ್ಮಾನುಬೋಧಿ. ಇಂತಹ ದರ್ಶನದ್ಯುತಿಯನ್ನು ಮಾತಿನ ಮಧ್ಯ ಮದಲ್ಲಿ ಸೆರೆಹಿಡಿದು, ಮೋಕ್ಷಾನುವರ್ತಿಗಳ ಮಡಿಲಿಗೇರಿಸಿದ್ದಾರೆ ಶ್ರೀ ಶಾಂತರಾಜ ಶಾಸ್ತ್ರಿಗಳು. 'ಸಮ್ಯುಕ್ತ್ವ ಕೌಮುದಿ' ಎಂಬ ಅಜ್ಞಾತ ಕವಿಯ ರಚನೆಯೊಂದಿದೆ ಸಂಸ್ಕೃತದಲ್ಲಿ. ಕನ್ನಡದಲ್ಲೂ ಸುಮಾರು ಹದಿನೈದನೆಯ ಶತಮಾನದ್ದೆಂದು ಹೇಳುವ ಮಂಗರಸನ ಷಟ್ಪದಿ ರಚನೆಯೊಂದಿದೆ. ಆದರೆ ಪ್ರಸ್ತುತದಲ್ಲಿ ಶಾಸ್ತ್ರಿಗಳು ಸುಭಗ, ಸುಂದರ, ಸುಲ ಲಿತ, ಮನೋಹರ, ಹೃದ್ಯ ಗದ್ಯದಲ್ಲಿ ಸಮ್ಯಕ್ತ್ವ ಕೌಮುದಿಯನ್ನು ಹರಹಿದ್ದಾರೆ. ಅಲ್ಲಲ್ಲಿ ನೂರಾರು ಸಂಸ್ಕೃತ ಶ್ಲೋಕಗಳೂ ಅವು ಗಳ ಕನ್ನಡ ಗದ್ಯಾನು ವಾದವೂ ಇದ್ದು ಓದುಗರಿಗೆ ಒಂದು ಬಗೆಯ ರುಚಿಕೊಡುತ್ತದೆ. ಇಲ್ಲಿನ ತತ್ವ ಎಲ್ಲಿಯೂ ತತ್ವವಾಗಿ ಬರೆದ ಕಾವ್ಯಾಂಸಗಳ ನ್ನೊಳಗೊಂಡು ಕಮನೀಯವಾಗಿ ಕಂಡರಿಸಲ್ಪಟ್ಟಿದೆ ಹಲವಾರು ನೀತಿವಾಕ್ಯಗಳೂ, ತತ್ವಶ್ಲೋಕಗಳೂ, ಸಂಗ್ರಹಯೋ ಗ್ಯವೂ ಅಧ್ಯಯನ–ಅನುಷ್ಠಾನಯುಕ್ತವೂ ಆದವುಗಳಾಗಿವೆ. ಉದಾಹರಣೆಗೆ:

ನಕ್ರೋಧಿನೋ ವಾಜ್ಞಶಠಸ್ಯಮಿತ್ರಂ ಕ್ರೂರಸ್ಯ ನಸ್ತ್ರೀ ಸುಖಿನೋನವಿದ್ಯಾ ।

ನ ಕಾಮಿನೋ ಹ್ರೀರಲಸಸ್ಯ ನಶ್ರೀಃ ಸರ್ವಂತು  ನ ಸ್ಯಾದನವಸ್ಥಿತಸ್ಯ ॥

ಕ್ರೋಧಿಗೆ ಒಳ್ಳೆಯ ಮಾತಿಲ್ಲ. ದುಷ್ಟನಿಗೆ ಮಿತ್ರನಿಲ್ಲ, ಕ್ರೂರನಿಗೆ ಸ್ತ್ರೀಯು ಸಲ್ಲಳು. ಸುಖಿಗೆ ವಿದ್ಯೆಯು ಬಾರದು. ಕಾಮು ಕನಿಗೆ ಲಜ್ಜೆಯಿಲ್ಲ, ಸೋಮಾರಿಗೆ ಸಂಪತ್ತಿಲ್ಲ. ಅವ್ಯವಸ್ಥಿತ ಚಪಲಚಿತ್ತವುಳ್ಳವನಿಗೆ ಯಾವುದೂ ಇಲ್ಲ. ಇಂತಹ ನಿತ್ಯ ಸತ್ಯ ಪ್ರತಿಪಾದಕ ವಾಕ್ಯಗಳ ತಾತ್ವಿಕಬೋಧನೆಯ ಗಣಿಯಾಗಿದೆ ಕನ್ನಡ ಸಮ್ಯಕ್ತ್ವ ಕೌಮುದಿ. ಅಂತೆಯೇ ಇದು ಮೂಲ ಸಂಸ್ಕೃತ ಕೃತಿಯ ಕನ್ನಡೀಕರಣವೂ ಅಲ್ಲ. ಕನ್ನಡ ಭಾಮಿನೀ ಕೃತಿಯ ಗದ್ಯಾನುವಾದವೂ ಅಲ್ಲ. ಅವೆರಡನ್ನೂ ಗರ್ಭೀಕರಿಸಿಕೊಂಡು ಆವಿರ್ಭವಿಸಿದ ವಿನೂತನ ಗದ್ಯರಚನೆ. ಇದು ಒಂದು ಕಥಾಗುಚ್ಛ. ಒಂದು ಮೂಲಥೆಗೆ ಹತ್ತಾರು ಉಪ ಕಥೆಗಳು ಹೆಣೆದು ಕೊಂಡಿವೆ. ಎಲ್ಲ ಕಡೆಗಳಲ್ಲೂ ಕಾವ್ಯ ಇದೆ; ತತ್ವ ಇದೆ, ದರ್ಶನದ ದ್ಯುತಿಯೂ ಬೆಳಗಿದೆ. ಕೃತಿಕಾರರ ಕಲೆಗಾರಿಕೆ ಮೆಚ್ಚು ವಂಥದು. ಅವರ ಶೈಲಿಯಷ್ಟೆ ಚೆಲುವುಳ್ಳದ್ದು. ಮೂಲಕಥೆಯ ಕಥಾಕಲ್ಪನೆ ಇಲ್ಲಿ ಬದಲಾಗಿಲ್ಲ. ಗವತಮ ಗಣಧರರೇ ಶ್ರೇಣಿಕ ಮಹಾರಾಜನಿಗೆ ಕೌಮುದೀ ಕಥೆಹೇಳಿದರೆಂದು ಆರಂಭವಾಗುವ ಈ ಕೃತಿಗೆ ನೂರಾರು ಬಳ್ಳಿಗಳು., ಕುಡಿಗಳು ಮೂಡಿ ಬೆಳೆದಿವೆ. ಅಲ್ಲಲ್ಲಿ ಒಂದರೊಳಗೊಂದು ಹೆಣೆದುಕೊಂಡಿವೆ. ಉದಿಶೋದಯ ಮಹಾರಾಜನ ಕಥೆಯ ಜೊತೆಯಲ್ಲಿ ಯಮದಂಡನ ನಿಷ್ಠೆಯ ಕಥೆ, ಅವನ ಕಥೆಯೊಡನೆ ಕಥನವಾಗುವ ಉಪಕಥೆಗಳು, ಮುಖ್ಯವಾಗಿ ಅರ್ಹದ್ದಾಸನ ಪತ್ನಿಯರಾದ ಮಿತ್ರಶ್ರೀ, ಚಂದನಶ್ರೀ, ವಿಷ್ಣುಶ್ರೀ, ನಾಗಶ್ರೀ, ಪದ್ಮಲತೆ, ಕನಕಲತೆ, ವಿದ್ಯುಲ್ಲತೆಯರು ಹೇಳುವ ಕಥೆಗಳು ಮನೋಜ್ಞವಾಗಿವೆ. ಧರ್ಮೋಪ ದೇಶ ಶುಷ್ಕಧರ್ಮ ಪಠಣವಾಗದೆ, ಕಥಾರೂಪದಲ್ಲಿ ಪ್ರತಿಪಾದಿತವಾಗಿದೆ. ಓದುಗರನ್ನು ಆಕರ್ಷಿಸಿ, ಒಲಿಸಿ, ನಲಿಸಿ, ತತ್ತ್ವೋಪ ದೇಶ ಮಾಡುತ್ತದೆ. ಅಂತ್ಯದಲ್ಲಿ ಕುಂದಲತೆಯ ವೈರಾಗ್ಯ ಮತ್ತು ಸ್ವರ್ಗಪ್ರಾಪ್ತಿ ಧರ್ಮಾಶ್ರಯೀ ಮರಷರಿಗೆ ಪ್ರಾಪ್ತವಾದ ಸವಾರ್ಥ ಸಿದ್ದಿಯೆಂಬ ಸ್ವರ್ಗ ಎಲ್ಲವೂ ಹೃದಯಂಗಮವಾಗಿ ಚಿತ್ರಿತವಾಗಿವೆ. ಇಂತಹ ಕಥನರೂಪೀ ಕೈವಲ್ಯ ಕೃತಿಗೆ ಎಂದೆಂದಿಗೂ ಆಸ್ತಿಕ ಲೋಕದಲ್ಲಿ ಸದಾ ಸ್ವಾಗತವಿದೆ. ಬಾಳು ಎಂಬುದು ಭಗವಂತನ ಒಂದು ಅಮೂಲ್ಯ ಕೊಡುಗೆ. ಅದನ್ನು ಧರ್ಮ ಪರಾಯಣ ತೆಯ ಮೂಲಕ ಸಾರ್ಥಕಪ ಡಿಸಿಕೊಂಡ ಮಣುಜೀವ ಶ್ರೀ ಶಾಂತರಾಜ ಶಾಸ್ತ್ರಿಗಳವರದು. ಅವರು ಜಿನಧರ್ಮ ದೀಪಕರಾಗಿ ಬೆಳಗಿದ ಭವ್ಯಾತ್ಮರು. ಯೋಗಿ ಪ್ರವರರೂ ಹೌದು. ಅವರ ವಾಙ್ಮಯ ತಪಸ್ಸು ಫಲಿಸಿ 'ಸಮ್ಯಕ್ತ ಕೌಮುದಿ'ಯಂತಹ ಸಾರ್ಥಕ ಸಾಹಿತ್ಯವನ್ನಿತ್ತುದರಿಂದಾಗಿ ಅವರ ಬಾಳು ಧನ್ಯ; ಮಾನ್ಯ !

# ಕನ್ನಡ ಕಥನಕವನ: ಸ್ಥಿತಿ-ಗತಿ

ನವೋದಯ ಕಾಲದ ರಮ್ಯರಚನೆಯ ಒಂದಂಗವಾಗಿ ಭಾವಗೀತ ಪ್ರಕಾರದೊಡನೆ ತೆಕ್ಕೆ ಬಿದ್ದು, ಹಲವರ ಅವಜ್ಞತೆಗೆ ಪಾತ್ರವಾಗಿದ್ದರೂ ಬಹುದಿನಗಳ ತನಕ ಬದುಕಿ ಬಂದ ಕಥನ ಕವನ ಪ್ರಕಾರವು ಅನಂತರದ ನ್ಯದೊಡನೆ ಒಳ್ಳೆಯ ರೀತಿಯಲ್ಲಿ ಒಕ್ಕತನ ಮಾಡಲಿಲ್ಲ. ಅಥವಾ ನವ್ಯವೇ ಕಥನ ಕವನವನ್ನು ತನ್ನ ಹತ್ತಿರ ಸುಳಿಯಗೊಡಲಿಲ್ಲ. 'ಸೋಡಚೀಟಿ' ಕೊಟ್ಟಿತೆಂದೇ ಎಲ್ಲ ರ ಭಾವನೆಯಾಗಿತ್ತು. ಆದರೆ ಇತ್ತಿಚೆಗೆ ಪರಸ್ಪರ ರಾಜಿ ಮಾಡಿಕೊಂಡು ಜೊತೆಯಲ್ಲೇ ಬದುಕು ಮಾಡುತ್ತಿರುವುದು ಹರ್ಷದ ಸುದ್ದಿ. ಕಾವ್ಯದ ವಿಶಿಷ್ಟ ಪ್ರಕಾರವೆನಿಸಿದ ಕನ್ನಡ ಕಥನಕವನದ ಬಿದ್ದೆದ್ದ ಕಥೆ ಪ್ರಸ್ತುತ ಪಬಂಧದ ವಸ್ತು. ಇಂಗ್ಲಿಷ್ ಕಾವ್ಯ ಕಣ್ತೆರದದ್ದೇ ಕಥನಕವನದ ಮೂಲಕ. ಹದಿನಾಲ್ಕನೆಯ ಶತಮಾನದ ಛಾಸರ್ ತನ್ನ 'ಕ್ಯಾಂಟರ್ಬರಿಟೇಲ್ಸ್' ಎಂಬ ಸರಣಿ ಕಥನಕವನಗಳನ್ನು ಕೊಟ್ಟ ಅನಂತರ ಎಲಿಜಿಬೆತನ್ ಯುಗದಲ್ಲಿ ಅಜ್ಞಾತವಾಸಗೈದ ಕಥನ ಕವನ ಪ್ರಕಾರ ರೊಮ್ಯಾಂಟಿಕ್ ಯುಗದಲ್ಲಿ ತನ್ನನ್ನು ತಾನು ಪ್ರಕಟಿಸಿಕೊಂಡಿತು. ಅದರ ಆಗಮನದ ಹಿನ್ನಲೆಯಲ್ಲಿ ಪ್ರಬಲ ಉದ್ದೇಶ ಒಂದಿತ್ತು. ಅದು ಮಹಾಕಾವ್ಯದ ವಿರುದ್ಧ ಬಂಡೆದ್ದು ಅದನ್ನು ಧಿಕ್ಕರಿಸಿ ತನ್ನದೇ ಸವಾಲುಹಾಕಿ ತಾನು ಪ್ರಾಚುರ್ಯಕ್ಕೆ ಬರುವುದು. ಕನ್ನಡ ಕಥನ ಕವನದ ಅವತಾರಕ್ಕೆ ಇಂತಹ ಅನಿವಾರ್ಯತೆ ಒದಗಿ ಬರಲಿಲ್ಲ. ಪ್ರಾಚೀನ ಮಹಾಕಾವ್ಯಗಳನ್ನು ಧಿಕ್ಕರಿಸು ವಷ್ಟು ಧಾರ್ಷ್ಟ್ಯ ಅದಕ್ಕಿರಲಿಲ್ಲ. ಲಕ್ಷ್ಮೀಶ, ಷಡಕ್ಷರಿಯವರ ಕಾವ್ಯಗಳನ್ನು ಕೂಲಿಮಠದ ಓಚಯ್ಯಗಳಿಂದ ಓದಿಸಿ ಕೇಳುವ ವ್ಯಾಖ್ಯಾ ನಗಳನ್ನು ಆಲಿಸಿ ಆನಂದಿಸುವ ಹವ್ಯಾಸ ಜೀವಂತವಾಗಿತ್ತು. ವಾಗಿತ್ತು. ಆದರೆ ಕೇಳಿದ್ದನ್ನೇ ಕೇಳಿ ಸಾಕಷ್ಟು ತೂಕಡಿಕೆ ಬಂದಿತ್ತು. ಅವರಿಗೆ ಹೊಸದೊಂದು ರೂಪ ಬೇಕಿತ್ತು. ಆ ಸಮಯಕ್ಕೆ ಸರಿಯಾಗಿ ಹೊಸಗಾಳಿ ಪಾಶ್ಚಾತ್ಯ ರಾಷ್ಟ್ರಗಳಿಂದ ಬೀಸಿ ಬಂತು. ಕನ್ನಡ ಅದಕ್ಕೆ ತನ್ನ ಮೈಯೊಡ್ಡಿತು. ಹೊಸ ನೀರಿಗೆ ಮೀನು ಹತ್ತುವುದು ಬಹಳ. ಅದೇ ರೀತಿ ಹೊಸ ಆಕೃತಿಯಿಂದ ಆಕರ್ಷಿ ತವಾದ ಕನ್ನಡ 'ಅವಳ ತೊಡುಗೆ ಇವಳಿಗಿತ್ತು ನೋಡತೊಡಗಿತು'. ಅಂಥವುಗಳಲ್ಲಿ ಕಥನಕವನವೂ ಒಂದು ಒಡವೆಯಾಗಿ ಬಂತು. ಬದುಕು ಸಂಕೀರ್ಣವಾದಂತೆಲ್ಲಾ ಸಮಯಕ್ಕೆ ತುಂಬಾ ಮಹತ್ವ ದೊರೆಯುತ್ತದೆ. ಹೋಮರ್, ಡಾಂಟೆ, ಮಿಲ್ಟನ್ ಮೊದ ಲಾದವರ ಮಹತ್ತು ಬೃಹತ್ತುಗಳಿಂದ ಕೂಡಿದ ಕಾವ್ಯಗಳನ್ನು ಓದಿ ತಿಳಿಯುವ ಮನಸ್ಸಾಗಲೀ ವ್ಯವಧಾನವಾಗಲೀ ಇಲ್ಲದಿದ್ದ ಕಾರಣ ರಸಿಕವೃಂದ ಕಾವ್ಯ ಖಂಡಗಳ ಆಸರೆ ಬೇಡಿತು. ರೊಮ್ಯಾಂಟಿಕ್ ಕವಿಗಳು ಕಥನ ಕವನಗಳ ಮೂಲಕ ಅವರಿಗೆ ತುಸು ತೃಪ್ತಿ ತಂದರು. ಇಂಗ್ಲಿಷ್‌ನ ಕಥನಕವನ ಎಲಿಜಿಬೆತ್‌ನ ಯುಗದಲ್ಲಿ ಕಾಣೆಯಾಗಿದ್ದರೂ ವಿಕ್ಟೋರಿಯನ್ ಯುಗದಲ್ಲಿ ದರ್ಪದಿಂದ ಮೆರೆ ಯಿತು. ರಾಜಕುಮಾರನ ಕೈಗೆ ರಾಜ್ಯ ಕೊಟ್ಟು ಆಡಳಿತ ಸೂತ್ರವನ್ನು ತಾನು ಹಿಡಿದು ರಾಜಕಾರಣ ನಡೆಸುತ್ತಿರುವ ಶ್ರೀಮಂತ ವಿಧವೆ (Dowager Woman)ಯಂತೆ ಭಾವಗೀತಕ್ಕೆ ಪ್ರಾಚುರ್ಯವಿತ್ತು ಕಥನಕವನ ತನ್ನ ಬದುಕು ಸಾಗಿಸಿತು. ಕನ್ನಡ ಕಥನಕವನ ಅದಕ್ಕೆ ಪ್ರತಿಯಾಗಿ ರಾಗಿ ಹೊಲದ 'ಅಕ್ಕಡಿ ಬೆಳೆ' ಆಗಿ ಬೆಳೆಯಿತು. ಮಹಾಕಾವ್ಯಗಳನ್ನು ನಿತ್ಯ ಪಾರಾಯಣಕ್ಕೆ ಮತ್ತು ನೋಂಪಿ ಗಳಿಗೆ ಮೀಸಲಿಟ್ಟು ಲಹರಿ ಬಂದಾಗ ಓದಿ ಆನಂದಿಸಲು ಕಥನ ಕವನ ಬಳಕೆಯಾಯಿತು. ರಮ್ಯ ಯುಗದ ಸೃಜನಶೀಲ ಕವಿಗಳ ಕೈಯಲ್ಲಿ ಕಥನ ಕವನ ಹೆಚ್ಚು ಪ್ರಾಚುರ್ಯಕ್ಕೆ ಬರಲು ಮುಖ್ಯ ಕಾರಣ. ಅದು ಜನಜೀವ ನದ ಜಾಹೀರಾತು ಹಿಡಿದದ್ದು. ಬಾಳಿನ ಬೆಳಕಿಗಾಗಿ ಅಥವಾ ಬದುಕಿನ ಸೈತಿಗಾಗಿ, ಸಂಸ್ಕೃತಿಯ ಸಂವರ್ಧನೆಗಾಗಿ ಅಥವಾ ಮಾನವತೆಯನ್ನು ಎತ್ತಿ ಹಿಡಿಯುವುದಕ್ಕಾಗಿ ಸಾಹಿತ್ಯವನ್ನು ದುಡಿಸಿಕೊಳ್ಳುವುದು ಸಾಮಾನ್ಯವಾಯಿತು. ಅದೇ ನವೋ ದಯ ಕಾಲದ ಕಾವ್ಯ ಮೌಲ್ಯವೂ ಆಯಿತು. ರಮ್ಯ ಕವಿಗಳು ಸಂಸ್ಕೃತಿಯೊಂದಿಗೆ ಕಾವ್ಯವನ್ನು ಬೆಸೆದರು. ಶ್ರುತಿ ಬದಲಾವಣೆ ಯೊಂದಿಗೆ ಧೃತಿ-ಧೋರಣೆಗಳನ್ನು ತೋರಿ, ಹಾಡುಗಾರಿಕೆಯಲ್ಲಿ ಗತ್ತು ಗಮ್ಮತ್ತು ಬೀರಿದ ಕೀರ್ತಿ ನವೋದಯ ಕಾಲದ ಕಥನ ಕವನಕ್ಕೆ ಸಲ್ಲುತ್ತದೆ. ನವ್ಯಯುಗದ ಆರಂಭದಲ್ಲಿ ಕಥನ ಕವನದ ಸಮಾಧಿಯಾಯಿತು. ನವ್ಯ ಕವಿಗಳೇ ಅದರ ಚರಮ ಗೀತೆ ಹಾಡಿ ಮುಗಿಸಿ ಬಿಟ್ಟರು. ನವ್ಯವು ರಮ್ಯ ಕವಿಗಳಂತಹ ಕನಸುಣಿಗಳ ಕೈಕೂಸಾಗಲಿಲ್ಲ. ವಿವೇಚನಾಪರರ ನೇಹಿಗನಾಯಿತು. ವೈಚಾರಿ ಕತೆಯನ್ನೇ ತನ್ನ ಮೂಲಧಾತುವಾಗಿಸಿಕೊಂಡಿತು. ಜೀವನದ ಸಂಕೀರ್ಣಾನುಭವಗಳನ್ನು ಸಾಂಕೇತಿಸಿತು. ತನ್ನದಾದ ಪ್ರತಿಮಾ ಜಗತ್ತನ್ನೇ ಸೃಷ್ಟಿಸಿತು. ಆಡು ಭಾಷೆಯ ಮೂಲಕ ಅನುಭವವನ್ನು ಅನುವದಿಸಿತು. ಅಭಿವ್ಯಕ್ತಿಯಲ್ಲಿ ಹೊಸತನ ಸಾಧಿಸಿತು. ನಿಯತ ಛಂದಸ್ಸು ಮಾಯವಾಗಿ ಭಾವಕ್ಕೆ ತಕ್ಕಂತೆ ಬಗ್ಗಿ ಒಗ್ಗುವ ಸ್ವಾಚ್ಛಂದ್ಯ ಮೈಗೂಡಿತು. ಬದುಕಿನ ಒಳಗನ್ನು ತಲಸ್ಪರ್ಶಿ ಯಾಗಿ ಸಂಶೋಧಿಸಿ, ಅದಕ್ಕೆ ಸಾಂದರ್ಭಿಕ ಸಮಾಧಾನ ಹೇಳಿತು. ರಮ್ಯದವರಿಗೂ ಮೋಹ ಹುಟ್ಟಿಸಿತು. ಅವರು ಕೂಡಲೆ ಪಕ್ಷಾಂತರ ಮಾಡಿದರು. ಹೊಸಪಕ್ಷದ ಬಗೆಗೆ ಪಕ್ಷಾಂತರಿಗಳ ನಿಷ್ಠೆ ಪ್ರಬಲವಾಗಿದ್ದುದರಿಂದ ತಮ್ಮ ಪೂರ್ವಾಶ್ರಮದ ಸೊಗಡನ್ನು ಮರೆತುಬಿಟ್ಟರು. ಕಥನ ಕಾವ್ಯ ಕಾಣೆಯಾಯಿತು. ಕಥನ ಕವನದ ಪತನದಲ್ಲಿ ನವ್ಯ ಸಂಪ್ರದಾಯದ ಕಾಣಿಕೆ ಗಣನೀಯವಾದದ್ದು. ಅದನ್ನು ಹೀಗೆ ಸಂಗ್ರಹಿಸಬಹುದು.

೧. ನವೋದಯ ಪರಿಸರದಲ್ಲಿ ಕಾವ್ಯ, ಕಥೆ, ಕಾದಂಬರಿ, ನಾಟಕ, ವಿಮರ್ಶೆ ಎಲ್ಲವನ್ನೂ ಬರೆಯುವ ಹೊಣೆಗಾರಿಕೆ ಕೆಲ ವೇ ಕೆಲವು ಹಿರಿಯ ಸಾಹಿತಿಗಳ ಮೇಲೆ ಬಿತ್ತು. ಅವರು ಎಲ್ಲ ಪ್ರಕಾರಗಳಲ್ಲೂ ಕೈಯಾಡಿಸಿದರು. ಆದರೆ ನವ್ಯ ಪರಿ ಸರದಲ್ಲಿ ಕಥೆಯನ್ನು ಹೇಳುವ ಜವಾಬ್ದಾರಿಯನ್ನು ಕಾವ್ಯ ಹೊರಬೇಕಾಗಲಿಲ್ಲ. ಕಥಾ ಸಾಹಿತ್ಯವೇ ಆ ಕೆಲಸ ಮಾಡಿತು. ಕಾವ್ಯವು ಕಥನೇತರ ಕಾರ್ಯಗಳಲ್ಲಿ ನಿರತವಾಯಿತು.

೨. ನವ್ಯಕಾವ್ಯ ವ್ಯಕ್ತಿನಿಷ್ಠ ಸೃಷ್ಟಿ (Subjective) ಕಥನ ಕವನ ವಸ್ತು ನಿಷ್ಠ ರಚನೆ (Objective). ರೂಪ–ಸ್ವರೂಪಗಳಲ್ಲಿ ಎರಡರ ನಡುವೆ ಎರಡು ಧ್ರುವಗಳಷ್ಟು ಅಂತರ. ವ್ಯಕ್ತಿನಿಷ್ಠವಾದುದು. ವಿಶೇಷವಾಗಿ ವೈಯುಕ್ತಿಕತೆಗೆ ಬದ್ಧವಾಗಿ ಸಾರ್ವ ತ್ರಿಕತೆಯನ್ನೂ, ಸಾರ್ವಕಾಲಿಕತೆಯನ್ನೂ ಮರೆಯುತ್ತದೆ. ಕ್ಷಣವೊಂದರ ಸ್ಮಾರಕ (Monument of a Moment) ಆಗಿ ಉಳಿಯುತ್ತದೆ. ತಮ್ಮ ಅನಿಸಿಕೆಯನ್ನೋ, ಅನುಭವವನ್ನೋ, ವೈಭವೀಕರಿಸಿಕೊಳ್ಳುವುದರಲ್ಲಿ ನಿರತರಾದ ನವ್ಯ ಕವಿಗಳು ತಮ್ಮ ಸಮಸ್ಯೆಗಳಿಗಷ್ಟೇ ಉತ್ತರ ವಕೊಟ್ಟು ಕೊಳ್ಳುವ ಕಾಲಜಿ ತಳೆದರು; ಇದರಿಂದಾಗಿ ಕಾವ್ಯವನ್ನು ವಸ್ತು ನಿಷ್ಠವಾಗಿ ನೋಡುವ ದೃಷ್ಟಿ ಮಾಯವಾಗಿ ಕಥನ ಕಾವ್ಯ ಕಣ್ಮರೆಯಾಯಿತು.

೩. ಕಾಲಗತಿಯಲ್ಲಿ ಜೀವನ ಮೌಲ್ಯ ಬದಲಾದಂತೆ ಕಾವ್ಯಮೌಲ್ಯವೂ ಬೇರೆಯಾಗುತ್ತಾ ಹೋಗುತ್ತದೆ. ರಮ್ಯದವರ ಹಾಗೆ ನವ್ಯದವರನ್ನು ಧರ್ಮ ಕಾಡಲಿಲ್ಲ, ಸಂಸ್ಕೃತಿ ಬೇಡಲಿಲ್ಲ. ಅದರ ಆದರ್ಶಗಳನ್ನು ಇವರು ಗಾಳಿಯಲ್ಲಿ ತೇಲಿಬಿಟ್ಟರು. ಒಟ್ಟಿನಲ್ಲಿ ಕಥನ ಕಾವ್ಯ ನವ್ಯದ ಜಾಯಮಾನಕ್ಕೆ ಹೊಂದಿಕೆಯಾಗಲಿಲ್ಲ.

೪. ನವ್ಯಕಾವ್ಯ ಶಿಲ್ಪಿಗಳು 'ಪ್ರತಿಮಾ ಗೃಹ' ನಿರ್ಮಾಪಕರು. ದಿವ್ಯ ದೇಗುಲಗಳ ರೂವಾರಿಗಲಲ್ಲ. ಭಾವ ಸಂಕೀರ್ಣವಾದಂತೆ ಸಂವಹನ ಮಾಧ್ಯಮವಾದ ಭಾಷೆ ತೆಳ್ಳಗಾಗುತ್ತದೆ. ಅದರ ಅಸಮರ್ಥತೆಯನ್ನು ಕಂಡುಕೊಂಡ ನವ್ಯ ಕವಿಗಳು ಸಂಕೇ ತಗಳ ಮೂಲಕ ಸಂಭಾಷಿಸತೊಡಗಿದರು. ಪ್ರತಿ ಸಂಕೇತವೂ ವಡಚಿಸಿಕೊಳ್ಳುವ ಒಗಟೆಯಾಯಿತು. ಗಟ್ಟಿಗೊಂಡ ಅನು ಭವ ಅವುಗಳ ಪರಿಮಿತ ವ್ಯಾಪ್ತಿಯಲ್ಲಿ ಅಡಕಗೊಳ್ಳುತ್ತಾ ಹೋಯಿತು. ಹತ್ತು ಮಾತುಗಳನ್ನು ಒಂದು ಪ್ರತಿಮೆ ಅಥವಾ ಒಂದು ಸಂಕೇತ ತುಂಬಿತು; ವರ್ಣನಾ ಪ್ರಧಾನವಾದ ಕಥನ ಕಾವ್ಯಕ್ಕೆ ಅಲ್ಲಿ ಪ್ರವೇಶ ದೊರೆಯಲಿಲ್ಲ.

೫. ನವ್ಯ ಕವಿಗಳಲ್ಲಿ (Specialisation) ಜಾಸತಿಯಾಯಿತು. ಅಮೂರ್ತವಾದ ಚಿಂತನೆಯ ಕಡೆ ಒಲವಿರುವ ಅಡಿಗರಂ ಥವರು ಕಾವ್ಯ ಮಾಧ್ಯಮಕ್ಕೆ ಅಂಟಿಕೊಂಡರೆ, ಮೂರ್ತ ಚಿಂತನೆಯನ್ನು ಇಷ್ಟಪಟ್ಟ ಲಂಕೇಶ, ಚಿತ್ತಾಲರಂಥವರು ಕಥೆ ಕಾದಂಬರಿಗಳನ್ನು ಆಸ್ರಯಿಸಿದರು. ಇವರಿಬ್ಬರ ನಡುವೆ ಸೇತುವೆಯಾಗಬಲ್ಲ ಕಥನಕಾವ್ಯ ಬರಲಿಲ್ಲ.

೬. ಕಥನ ಕಾವ್ಯಕ್ಕೆ ನಿಯತ ಹಾಗೂ ನಿರ್ದಿಷ್ಟ ಛಂದಸ್ಸಿನ ಅಗತ್ಯವಿದೆ. ನವ್ಯಕವಿಗಳು ಕೆಲವರಲ್ಲಿ ಛಂದಸ್ಸು ತುಂಬಾ ಐಬು! ಅದರಿಂದ ಬಿಡಿಸಿಕೊಳ್ಳುವ ಭರದಲ್ಲಿ ನವ್ಯರು ಕಥನ ಕವನದ ಮೆಲೊಡಿಯನ್ನು ಕಾದಿಡುವ ಕಾಳಜಿ ವಹಿಸಲಿಲ್ಲ. ಕಂಬಾರರು ತಮ್ಮ 'ಹೇಳತೇನ ಕೇಳ'ದಲ್ಲಿ ಜಾನಪದ ಲಯಕ್ಕೆ ಹಿಂತಿರುಗಿದರೂ ಸಾತತ್ಯ ಸಾಧಿತವಾಗಲಿಲ್ಲ. ಒಟ್ಟಿನಲ್ಲಿ ಎಲ್ಲರೂ ಕಥನ ಕವನದ ವಿಷಯದಲ್ಲಿ ಕೈ ಚೆಲ್ಲಿ ನಿಂತರು. ನವ್ಯ ಪರಿಸರದಲ್ಲಿ ಕಥನ ಕಾವ್ಯ ಬೆಳೆಯದಿರುವುದಕ್ಕೆ ಇವು ಕಎಲವು ಕಾರಣಗಳು. ನವ್ಯೇತರ ಕಾರಣಗಳು ಒಂದೆರಡು:

ಮೊದಲನೆಯದಾಗಿ, ಕಥನ ಕವನ ಹಾಡುಗಬ್ಬ, ಇತೀಚೆಗೆ ಕಾವ್ಯವಾಚನ ಪರಂಪರೆಯೇ ಖಿಲವಾಗುತ್ತಿರುವುದರಿಂದ ಕಥನ ಕಾವ್ಯ ಅಗತ್ಯವೆನಿಸಲಿಲ್ಲ. ಎರಡನೆಯದಾಗಿ, ಇಂದು ದೂರದರ್ಶಿನಿ, ಛಾಯಾಚಿತ್ರ, ಭಾವಚಿತ್ರ, ಚಲಚ್ಚಿತ್ರಗಳಂತಹ ದೃಶ್ಯ ಮಾಧ್ಯಮಗಳು ವಿಪುಲವಾದುವು. ನೂರು ಸಾಲಿನ ಕವನ ಮಾಡದ ಕೆಲಸವನ್ನು ಒಂದು ಚಿತ್ರ ಮಾಡಲು ಸಾಧ್ಯವಿರುವುದರಿಂದ ವರ್ಣನಾ ಪ್ರಧಾನವಾದ ಕಥನ ಕಾವ್ಯಕ್ಕೆ ಬೇಡಿಕೆ ಕಡಿಮೆಯಾಯಿತು. ಇಷ್ಟಾದರೂ ಕಥನಕವನ ಬದುಕಿ ಬಂದದ್ದು ಒಂದು ಪವಾಡವೇ ಸರಿ. ಅದಕ್ಕೆ 'ಇತಿಶ್ರೀ' ಹಾಡಿದ ನವ್ಯ ಸಂಪ್ರದಾಯವೇ ಅದರ ಮರು ಸೃಷ್ಟಿಗೆ ಕಾರಣವಾಯಿತು. ಅಡಿಗ, ನಿಸಾರ್, ಶಿವರುದ್ರಪ್ಪ, ಕಣವಿ, ನರಸಿಂಹಸ್ವಾಮಿ ಮೊದಲಾದವರ ಕಾವ್ಯಗಳಲ್ಲಿ ಕಂಡೂ ಕಾಣದಂತಿದ್ದ ಈ ಕಾವ್ಯ ಪ್ರಕಾರ ಎಚ್. ಎಸ್. ವೆಂಕಟೇಶಮೂರ್ತಿ, ಎಸ್. ಎಸ್. ಶಿವಪ್ರಕಾಶ್ ಮತ್ತು ಸಿದ್ಧಲಿಂಗಯ್ಯ–ಇವರ ಕೈಯಲ್ಲಿ ಪುನಶ್ಚೇತನ ಪಡೆಯಿತು. ವೆಂಕಟೇಶ ಮೂರ್ತಿಯವರ 'ಸಿಂದಾಬಾದನ ಆತ್ಮಕಥೆ' (೧೯೭೭) ನವ್ಯ ಕಾವ್ಯ ಪ್ರಕಾರದಲ್ಲಿ ಒಂದು ಹೊಸ ಗವಾಕ್ಷಿ ತೆರೆಯಿತು. ಮೂರ್ತಿ ಯವರು ಷಟ್ಪದಿಯ ಛಂದಸ್ಸು ಮತ್ತು ಲಯಗಳನ್ನು ತುಂಬಾ ಸಮ ರ್ಥ ರೀತಿಯಲ್ಲಿ ಬಳಸಿಕೊಂಡರು. ಅವರ 'ಕ್ರಿಯಾ ಪರ್ವ'ದಲ್ಲೂ ಅದೇ ಯಶಸ್ಸು ಮುಂದುವರಿದಿದೆ. ಯೋಗನಿದ್ರಾ ಮುದ್ರೆಯಲ್ಲಿರುವ ಶಿವಪ್ರಕಾಶ್ ತಮ್ಮ 'ಮಳೆ ಬಿದ್ದ ನೆಲದಲ್ಲಿ' ಸಂಕಲನದ 'ಸಿಂಗಿರಾಜ ಸಂಪಾದನೆ' ಮತ್ತು 'ವಾಸವದತ್ತೆ'

ಕವನಗಳಲ್ಲಿ ಕಥನಕವನದ ಕುಂಡಿಲಿಯನ್ನು ಮಿಡಿದಿದ್ದಾರೆ. ಬಂಡಾಯ ಸಾಹಿತ್ಯ ವಿಶೇಷವಾಗಿ ಸಾಮಾನ್ಯ ಜನರನ್ನು ತಲಪುವ ಉದ್ದೇಶ ಹೊಂದಿದೆಯಾದ್ದರಿಂದ ಅದರಲ್ಲಿ ಕಥ ನದ, ಹಾಡಿ, ವರ್ಣನೆಯ ಅಂಶ ದಟ್ಟವಾಗಿರಬೇಕಾದದ್ದು ಅನಿವಾರ್ಯ. ದಲಿತ ಕವಿ ಸಿದ್ಧಲಿಂಗಯ್ಯನವರ 'ಸಾವಿರಾರು ನದಿ ಗಳು' (೧೯೭೯) ಕವನ ಸಂಕಲನದ 'ಅಲ್ಲೆ ಕುಂತವರೆ' ಎಂಬ ಗೀತೆ ತನ್ನ ಗೌರವದ ಸ್ಥಾನವನ್ನು ಮತ್ತೆ ಗಿಟ್ಟಿಸಿಕೊಂಡಿದೆ. ಇಂದು ಮಕ್ಕಳ ಸಾಹಿತ್ಯ ಅಕಾಡೆಮಿ ಆರಂಭವಾಗಿದೆ. ವೆಂಕಟೇಶಮೂರ್ತಿಯವರ 'ಕಂಚಿನ ತೇರು' ರೀತಿಯಲ್ಲಿ ಮಕ್ಕಳಿಗೆ (ದೊಡ್ಡವರಿಗೂ ಹೌದು) ಕಾವ್ಯವನ್ನು ಮುಟ್ಟಿಸುವುದು ಸುಗಮ ಮಾರ್ಗ. ಅಂದು ಮೈಸೂರು ವಿಶ್ವವಿದ್ಯಾನಿಲಯವೇರ್ಪಡಿಸು ತ್ತಿದ್ದ 'ಬಿ.ಎಂ.ಶ್ರೀ ಸ್ವರ್ಣ ಪದಕ' ಸ್ಪರ್ಧೆ ರಮ್ಯವಾಚಕರಿಗೆ ಸ್ಫೂರ್ತಿ ನೀಡಿದಂತೆ, ಇಂದು ಮಕ್ಕಳ ಸಾಹಿತ್ಯ ನವ್ಯ ಕವಿಗಳಿಗೆ ಪ್ರಚೋದನೆ ಕೊಡಬೇಕಾಗಿದೆ. ಒಟ್ಟಿನಲ್ಲಿ ಇಷ್ಟು ಹೇಳಬಹುದು: ಕಥನ ಕವನ ಇಂದು ಹೊಸ ಪಾತಳಿಗೆ ಹೊಂದಿಕೊಂಡು, ಅಭ್ಯುದಯದ ಹೊಸ ಕ್ಷಿತಜವನ್ನು ನಿರ್ಮಿಸಿಕೊಂಡಿದೆ. ಅದರ ಭವಿಷ್ಯ ತರುಣ ಕವಿಗಳ ಕೈಯಲ್ಲಿದೆ.

[ವಿಚಾರವಾದಿ ವಿಮರ್ಶಕ ಎಚ್. ಎಸ್. ರಾಘವೇಂದ್ರರಾವ್‌ರವರ ನೆರವಿಗೆ ಕೃತಜ್ಞ – ಲೇಖಕ]

# ಕೆಲವರು ವಿಶ್ವಕರ್ಮ ವಚನಕಾರರು:

ಲಲಿತಕಲೆ (Fine Art)ಯು ಕಾಯಕದ ಕಕ್ಷೆಗೆ ಬಂದದ್ದು ಕನ್ನಡ ನಾಡಿನಲ್ಲಿ, ಹನ್ನೆರಡನೆಯ ಶತಮಾನದಲ್ಲಿ. ವಚನ ಕಾರರ ಅಂದಿನ ವಿಚಾರಕ್ರಾಂತಿಯ ಪರಿಣಾಮವಾಗಿ ಎಲ್ಲವಕ್ಕೂ ಹೊಸ ಹೊಸ ಅರ್ಥಗಳು ಹುಟ್ಟಿಕೊಂಡಂತೆ ಕಲೆಗೂ ಕಮ ನೀಯ ಅರ್ಥವೊಂದು ಪ್ರಾಪ್ತವಾಗಿ, ಅದು ತನ್ನ ಬದುಕಿನ ಹೊಸ ಮಗ್ಗುಲನ್ನು ತೆರೆದುಕೊಳ್ಳುತ್ತಾ ಹೋಯಿತು. ಅಂದಿನವರೆಗೆ ಕೇವಲ ಮೋಜಿನ ವಸ್ತುವಾಗಿ ಇಲ್ಲವೇ ಉದರಂಭರಣದ ಸಾಧನವಾಗಿ ಬಲಳಕೆಯಾಗುತ್ತಿದ್ದ ಚಿತ್ರ, ಶಿಲ್ಪ, ನೃತ್ಯ, ಸಂಗೀತ, ಸಾಹಿ ತ್ಯ ಮೊದಲಾದ ಲಲಿತ ಕಲೆಗಳೂ, ಅಭಿನಯ, ಹಾಸ್ಯ, ಅಣಕ, ವಾಸ್ತು ಮೊದಲಾದ ನಾಡಕಲೆಗಳೂ ವಾದ್ಯ, ಓಲಗ, ಮೊದ ಲಾದ ಕಲಾಭಿವ್ಯಕ್ತಿಗಳೂ ಕಾಯಕದ ಮಹತ್ವ ಪಡೆದು ಮೆರೆದವು. ಅಂದರೆ ಅವು ಬರಿಯ ದುಡಿಮೆಯ ಸಾಧನೆಗಳಷ್ಟೇ ಆಗ ಲಿಲ್ಲ. ದಾಸೋಹದ ಮಾಧ್ಯಮಗಳೂ ಆದುವು. ಕುಲಕಸುಬೇ ಕಲೆಯಾಗಿ, ಕಲೆಯೇ ಕಾಯಕವಾಗಿ ಅವನವನ ಹೆಸರಿನೊಂದಿಗೆ ಅಂಟಿಕೊಂಡು ಕಿನ್ನರಿ, ಬೊಮ್ಮಯ್ಯ, ಕಂಕರಿ ಕಕ್ಕಯ್ಯ, ಕಲಿಕೇತ ಬ್ರಹ್ಮಯ್ಯ, ಬಹುರೂಪಿ ಚೌಡಯ್ಯ, ರಾಗದ ಸಂಗಣ್ಣ, ಡಕ್ಕೆಯ ಮಾರಯ್ಯ; ನಗೆಯ ಮಾರಿತಂದೆ ಮೊದಲಾದ ಶರಣ ಶರಣೆಯರನ್ನು ಲೋಕಕ್ಕೆ ಕೊಟ್ಟಿತು. ಇವುಗಳಷ್ಟೇ ಅಲ್ಲದೆ ಚಮ್ಮಾರಿಕೆ, ಕಮ್ಮಾರಿಕೆ, ಕುಂಬಾರಿಕೆ, ಮೇದಾರಿಕೆ, ಮಡಿವಾಳಿಕೆ, ಮೀನುಗಾರಿಕೆ, ಬಣ್ಣಗಾರಿಕೆ, ನೇಕಾರಿಕೆ, ನೂಲುಗಾರಿಕೆ, ರಾಟೆ ತಿರುಗಿಸುವಿಕೆ, ದೋಣಿ ನಡೆಸುವಿಕೆ, ಕಟ್ಟಿಗೆ ಮಾರುವಿಕೆ, ಹಗ್ಗ ಹೊಸೆಯುವಿಕೆ, ದನಕಾಯುವಿಕೆ, ಅಕ್ಕಸಾಲಿಕೆ, ಕಲ್ಲು ಕುಟಿಕೆ, ಮಾಲುಗಾರಿಕೆ, ಹೈನುಗಾರಿಕೆ, ಕೃಷಿ, ವ್ಯಾಪಾರ, ಅಕ್ಕಿ ಆಯುವಿಕೆ, ರಾಯಸ ರಚನೆ, ಓಲೆ ಒಪ್ಪಡಿಕೆ, ಗಾಣಗಾರಿಕೆ, ಕೊಟ್ಟಣ ಕುಟ್ಟುವಿಕೆ, ನೀರು ಹೊರುವಿಕೆ, ವೈದ್ಯಕೀಯ, ವಿದ್ಯಾದಾನ, ಆಡಳಿತ ನಡೆಸುವುದು, ಇಟ್ಟಿಗಟ ಕೊಯ್ಯುವುದು, ಗಾರೆ ಅರೆಯುವುದು, ಮೋಳಿಗೆ, ಜಾಳಿಗೆ, ಸತ್ತಿಗೆ, ಕೂಗುವಿಕೆ, ಗಣಿ, ಗೋಣಿ, ಹಡಪಿಗತನ, ಸೂಜಿ ಸೂತ್ರಿಕ, ಬೊಂಬೆಯಾಟ, ದೊಂಬರಾಟ, ಗಣೆಯಾಟ, ತಳವಾರಿಕೆ, ಭಂಡಾರಿತನ, ಹಡಪಿಗತನ, ಕನ್ನಡಿ, ಗಂದಿಗೆ, ಮೊದಲಾದ ಕಸುಬುಗಳೂ ಕಾಯಕದ ಘನತೆಗೇರಿದವು. ಇಂತೆಲ್ಲ ಕುಲಕಸುಬುಗಳ ಕಾಯಕನಿಷ್ಠರಲ್ಲಿ ಕಲಾಭಿಜ್ಞರಾದ ವಿಶ್ವಕರ್ಮ ಶರಣರ ಕೊಡುಗೆ ಅಪಾರ; ಅಮೋಘ, ಅಮೂಲ್ಯ. ಅದರಲ್ಲಿ ಪ್ರಧಾನವಾಗಿ ಬಸವಯುಗದ ಕಿನ್ನರಿ ಬೊಮ್ಮಯ್ಯ, ಕಲಕೇತ ಬ್ರಷ್ಮಯ್ಯ, ಹಾವಿನ ಹಾಳಕಲ್ಲಯ್ಯ, ವರದಾನಿ ಗುಡ್ಡವ್ವೆ, ಜಕ್ಕಣಾರ್ಯ (?), ಘಟ್ಟಿವಾಳಯ್ಯ (?), ಬಹುರೂಪಿ ಚೌಡಯ್ಯ ಹಾಗೂ ತೋಂಟದ ಸಿದ್ದಲಿಂಗೇಶ್ವರಯುಗದ ಬಾಚಿ ಕಾಯ ಕದ ಬಸವಣ್ಣ ಮೊದಲಾದವರನ್ನು ಹೆಸರಿಸಬಹುದು. ಸಾಮಾನ್ಯವಾಗಿ ವಿಶ್ವಕರ್ಮ ಅಥವಾ ಅಕ್ಕಸಾಲಿಗರು ಚಿನ್ನ-ಬೆಳ್ಳಿ, ಮಣ್ಣು-ಮರ, ಕಲ್ಲು-ಕಬ್ಬಿಣ ಇವುಗಳನ್ನೇ ತಮ್ಮ ಕಲಾಭಿವ್ಯಕ್ತಿಯ ಮಾಧ್ಯಮ ಅಥವಾ ಸಾಧನೆಗಳನ್ನಾಗಿ ಮಾಡಿಕೊಂಡು ಸಮರ್ಥ ರೀತಿಯಲ್ಲಿ ಸಂವಹಿಸುವವರು. ಕಿನ್ನರಯ್ಯ ಚಿನ್ನ ಬೆಳ್ಳಿ ಕೆಲಸ ಮಾಡುವವನಾಗಿದ್ದು, ಶಿವಕೃಪೆಯಿಂದ ಕಿನ್ನರಿ ಹಿಡಿದ ವನು, ಪರಶಿವನನ್ನೇ ಕುರಿತು ಹಾಡಿದವನು. ಬಸವಣ್ಣನ ಆತ್ಮೀಯ ಅನಿಮಿತ್ತ ಬಂಧುವಾಗಿದ್ದು, ಕಡೆಯವರೆಗೂ ಅವನ ಜೊತೆ ಯಲ್ಲಿದ್ದು, ಕಲ್ಯಾಣ ಹಾಳಾಧಾಗ ಉಳವಿಯ ಬಳಿ, ಚನ್ನಬಸವಣ್ಣ ಮೊದಲಾದವರ ಪರ ಹೋರಾಡೀ, ಹೋರಾಡುತ್ತಲೇ ಅಸು ನೀಗಿದ ವನು; ಅನುಭವ ಮಂಟಪದ ಆಜ್ಞಾಧಾರಕನಾಗಿದ್ದವನು. 'ಎನ್ನ ಮಹಾಗುರು ತ್ರಿಪುರಾಂತಕ ದೇವ' ಎಂಬ ಅಂಕಿತದಲ್ಲಿ ಅನೇಕ ವಚನಗಳನ್ನು ರಚಿಸಿದ ವಚನಕಾರನೂ ಹೌದು. ಅವನ ಒಂದು ವಚನ ಹೀಗಿದೆ:

ನಿನ್ನ ಹರೆಯದ ರೊಹಿನ, ನುಡಿಯ ಜಾಣಿನ, ಚೆಲುವಿನ ಸಿರಿಯ,
ಸಂತೋಷದ ಕರಿ ತುರಗ ರಥ ಪದಾತಿಯ ನೆರವಿಯ,
ಸತಿಸುತರ ಬಂಧುಗಳ ಸಮೂಹದ

ನಿನ್ನ ಕುಲದಭಿಮಾನದ ಗರ್ವವ ಬಿಡು, ಮರುಳಾಗದಿರು
ಅಕಟಕಟಾ ರೋಮಜನಿಂದ ಹಿರಿಯನೆ ?
ಮದನನಿಂದ ಚೆಲವನೆ? ಸುರಪತಿಯಿಂದ ಸಂಪನ್ನನೆ?
ವಾಮದೇವ ವಶಿಷ್ಠರಿಂದ ಕುಲಜನೆ ?
ಅಂತಕನ ದೂತರು ಬಂದು ಕೈವಿಡಿದೆಳೆದೊಯ್ಯುವಾಗ
ನುಡಿಗೆಡೆಯಿಲ್ಲ!
ಕೇಳೋ, ನರನೆ, ಎನ್ನ ಮಹಾಲಿಂಗ ತ್ರಿಪುರಾಂತಕದೇವರ
ಪೂಜಿಸಿದೆಯಾದರೆ ಕೇಡಿಲ್ಲದ ಪದ ದೊರಕೊಂಬುದು ಮರುಳೆ !

ಈ ವಚನದಲ್ಲಿ ಮಾನವನ ರೂಪ, ಯೌವನ, ವಿಭವ, ಜಾಣ್ಮೆ, ಜಬರು, ತಿಳಿವು, ಸತಿ, ಸುತ, ಕುಲ, ಬಲ ಮೊದಲಾದ ವುಗಳೇನಿದ್ದರೂ ದೈವದ ಮುಂದಲ್ಲ. ದೈವ ಎಂಬುದು ಒಂದು ಅಪ್ರತಿಹತ ಶಕ್ತಿ. ಅದರೊಲುಮೆಯೆ 'ಶಿವ'ದ ನೆಲೆಯ ಸಾಧನ– ಎಂಬ ಅನುಭವ–ಅನುಭಾವಗಳ ಕುರಿತ ವಿಬುಧೋಕ್ತಿ ಅಭಿವ್ಯಕ್ತವಾಗಿದೆ. ಇಂತಹ ಭಕ್ತಿ, ಪ್ರತಿಪಾದಕ ಕೃತಿಗಳನ್ನಿತು ವಚನ ವೈಭ ವಕ್ಕೆ ಕಾರಣನಾಗಿದ್ದಾನೆ ಕಿನ್ನರಯ್ಯ. ಕಿನ್ನರಿ ಬ್ರಹ್ಮಯ್ಯನಲ್ಲಿ ಜ್ಞಾನೋದಯವಂತೆಸಗಿದವನು ಮತ್ತೊಬ್ಬ ಬ್ರಹ್ಮಯ್ಯ. ಅವನ ಪೂರ್ಣ ಹೆಸರು ಕಲಕೇತ ಬ್ರಹ್ಮಯ್ಯ. ನೃತ್ಯ ಇವನ ಕಾಯಕ. ಮಹಾಪ್ರಾಜ್ಞ, ಮಹಾಶರಣ. ಹೇಳುತ್ತಾನೆ:

ಬೇಡಲೇತಕ್ಕೆ ಕಾಯಕವ ಮಾಡಿಹೆನೆಂದು?
ಕೂಡಿದೆಡೆ ಒಡಗೂಡಿ ಬಯ್ಯಲೇತಕ್ಕೆ ?
ಭಕ್ತರು ಮಾಡಿಹರೆಂದು ಗಡಿತಡಿಗಳಲ್ಲಿ
ಕವಾಟ ಮಂದಿರಗಳ ಮುಂದೆ ಗೊಂದಿಗಳಲ್ಲಿ ನಿಂದು ಕಾಯಲೇತಕ್ಕೆ?
ಈ ಗುಣ ಕಾಯಕದಂದವೆ ? ಈ ಗುಣ ಹೊಟ್ಟೆಗೆ ಕಾಣದ
ಸಂಸಾರದ ಪಟ್ಟುವನ ಇರವು
ಉಭಯ ಭ್ರಷ್ಟಂಗೆ ಕೊಟ್ಟ ದ್ರವ್ಯ.
ಮೇಖಲೇಶ್ವರ ಲಿಂಗಕ್ಕೆ ಮುಟ್ಟದೆ ಹೋಯತು.
ಬೇಡಿ ಮಾಡುವುದು ಕೂಲಿ, ಕಾಯಕವಲ್ಲ
ಬೇಡುವನೆಂಬುದು ಮನದಲ್ಲಿ ಹೊಳೆದರೆ ಅದೂ
ಕರ್ಮ ಕಾಲರೂಪವಲ್ಲ
ಬಯಸದೆ ಭ್ರಮಿಸದೆ ಭಕ್ತಿಯಿಂದ ಮಾಡುವ ಕಾಯಕವೆ ಕಾಯಕ.

–ಭಿಕ್ಷೆಗೆ ಕಾಯಕದ ಅರ್ಥ ಸಲ್ಲುವುದಿಲ್ಲ; ಅದರಿಂದ ಆರ್ಜಿಸಿದ ಹೊನ್ನು ಜಂಗಮ ದಾಸೋಹಕ್ಕೆ ಸಲ್ಲದು. ಶಿವಾರ್ಪಿತ ಪಾತ್ರವೂ ಅಲ್ಲ– ಎಂದು ಕಾಯಕವನ್ನು ನೈಜಾರ್ಥದಲ್ಲಿ ವ್ಯಾಖ್ಯಾನಿಸಿದ್ದಾನೆ. ಹಾವಿನಹಾಳ ಕಲ್ಲಯ್ಯ ಮತ್ತೊರ್ವ ವಿಶ್ವಕರ್ಮ ಶರಣ. ಇವನು ಸೊನ್ನಲಿಗೆಯಲ್ಲೆ ಸಿದ್ಧರಾಮನ ಸಾನಿಧ್ಯದಲ್ಲೇ ಕಡೆಯ ವರೆಗೂ ಇದ್ದವನು. ತಂದೆ ಶಿವನಯ್ಯ. ತಂದೆ ಮಗ ಇಬ್ಬರೂ ಹಾವಿನಹಾಳಲ್ಲಿದ್ದ ಚಿನ್ನದ ಕೆಲಸದಲ್ಲಿ ಕುಶಲರು. ಮಂಗಳವಾ ಡದ ಮಂಡಲಾಧೀಶನಾಗಿದ್ದ ಬಿಜ್ಜಳನು ಯಾವುದೋ ಒಡವೆ ಮಾಡಿಸಲು ಹೊನ್ನಿನಗಟ್ಟಿಯನ್ನು ಇವರ ಬಳಿ ಕಳುಇಸಿದ ಕತೆ ಬರುತ್ತದೆ. ಆದರೆ ಕಲ್ಲಯ್ಯ ರೇವಣಸಿದ್ದರಿಂದ, ಅವರ ಮಗ ರುದ್ರಮುನಿಯಿಂದ ದೀಕ್ಷಿತನಾಗಿ ಶ್ರೇಷ್ಠ ಶಿವಭಕ್ತನಾಗುತ್ತಾನೆ. ಸಿದ್ಧ ರಾಮನ ಅವಿಚ್ಛಿನ್ನ ಭಕ್ತನಾಗಿ ಬದುಕು ಮಾಡಿದ ಮಹಾಶರಣ ಹಾವಿನಹಾಳ ಕಲ್ಲಯ್ಯ; ವರದಾನಿ ಗುಡ್ಡವ್ವೆ ಉಮರಾಣಿ ಗ್ರಾಮದವಳು. ಅನಂತರಾಯ ಶೀಲವಂತನೆಂಬ ಅಕ್ಕಸಾಲಿಗನ ಮಗಳು. ದಾನಶಿರೋ ಮಣಿ ಎಂದು ಖ್ಯಾತಳಾಗಿ ಲಿಂಗಾನು ಸಂಧಾನವನ್ನು ಬಸವಣ್ಣನಿಗೇ ಬೋಧಿಸಿದ ಮಹಾನುಭಾವಿ. ಬಾಚಿಕಾಯಕದ ಬಸವಯ್ಯ ಬಹುಶಃ ಎಡೆಯೂರು ಸಿದ್ಧಲಿಂಗೇಶ್ವರ ಯುಗದವನು. ಇವನ ಬಗೆಗೂ ಸಂಶೋಧನೆ ಆಗ ಬೇಕಾಗಿದೆ. 'ಬಸವಣ್ಣ ಪ್ರಿಯ ವಿಶ್ವ ಕರ್ಮಟಕ್ಕೆ ಕಾಳಿಕಾ ವಿಮಲ ರಾಜೇಶ್ವರ ಲಿಂಗ' ಎಂಬ ಅಂಕಿತದ ಆಧಾರದಿಂದ ಈತ ವಿಶ್ವ ಕರ್ಮ ಶಿವಶರಣ ಹಾಗೂ ವಚನಕಾರನಿದ್ದಿರಬಹುದು. ಇವನ ಎರಡು ವಚನಗಳು ಹೀಗಿವೆ:

ಜಲಗಾರಂಗೆ ಸುವರ್ಣವಳಿಯನರಿದು ತೊಳೆಯಬೇಕು
ಬಲೆಗಾರಂಗೆ ಮತ್ಸ್ಯದ ಬೆಂಬಳಿಯನರಿದು ಕಲ್ಲಿಯನಿಡಬೇಕು
ಶಬರಂಗೆ ಸಂಭ್ರಮವ ಬಿಟ್ಟು ತರುಲತೆ ಪರ್ಣಂಗಳರಿತಿರಬೇಕು
ಇಂತೀ ಹೊಲಬಿನ ತೆರನಂತೆ ಗುಣವಿವರವನರಿದು
ಆರರ ಇರವಿನ ಪರಿಯ ಹರಿಸಿ, ತಾಸರಿಸವಾಗಿ ನಿರುತಿಗಳ ನಿಜವನರಿದು
ಮೂಸರ ಆಶೆಯನರಿದು ವೇಷಗಳ್ಳರ ನಿಹಿತವ ನೋಡಿ
ವಾಚಕರ ಪರಿಹಾಸಕರ ತಿಳಿಯ ತಿಳಿದು,
ಮತ್ತಾವ ರೀತಿನೀತಿಗಳಲ್ಲಿಯೂ ಮಾತ ತಾರದೆ
ತನ್ನ ಸುನೀತವನೆ ಬೀರಿ, ತನ್ನ ಸದ್ಗುಣ ನೀತಿಯನೆ ತೋರಿ

ತನ್ನ ಸುಗುಣವಾಸನೆಯನೆ ಬೀರಿ,
ಸತ್ಕುಲ ಭಕ್ತಿಯ ಕುಲರಿಗೆ ತನ್ನ ಸತ್ಯವನೆ ಸಾರಿಯಿಪ್ಪಾತ
ತ್ರಿವಿಧದವನಲ್ಲ, ಅರಿಷಡ್ವರ್ಗಂಗಳೊಳಗಿಲ್ಲ,
ಪಂಚೇಂದ್ರಿಯಂಗಳ ಸಂಚಿನ ಸುಖದವನಲ್ಲ,
ಮಿಕ್ಕಾದ ವಿಷಯದ ಗೊಥಲ ತೊಡಕಿನವನಲ್ಲ
ಬಸವಣ್ಣ ಪ್ರಿಯ ವಿಶ್ವಕರ್ಮಟಕ್ಕೆ
ಕಾಳಿಕಾ ವಿಮಲ ರಾಮಲಿಂಗೇಶ್ವರಲಿಂಗವು ತಾನು ತಾನೇ ॥

ಮತ್ತು,

ಪುರುಷಸೋಂಕಿದ ಲೋಹಕ್ಕೆ ಮತ್ತೆ ಪರುಷದ ಹಂಗೇಕೆ?
ಸರ್ಪದಷ್ಟವಾದ ದೇಹಕ್ಕೆ ಕಾರ ಕಠಿಣ ಮಧುರಸಂಗಳ
ಪ್ರಮಾಣಿಸಬಲ್ಲುದೆ?
ಇಂತು, ಅಂಗವಿದ್ದ ತನುವಿಂಗೆ ಅಷ್ಟೋತ್ತರಶಕ ವಾಧಿಗಳಲ್ಲಿ
ಸತ್ತು ಹುಟ್ಟುತ್ತಾ, ನಾನಾವಿಕಾರದಲ್ಲಿ ನಷ್ಟವಾಗುತ್ತಾ,
ಮಾತಿನ ವಾಸೆಗೆ ಮಿಟ್ಟಿಯ ಭಂಡರಂತೆ
ಕಟ್ಟಿಹೋರುತ್ತ ತಥ್ಯಮಿಥ್ಯದ್ಲಿ ಕುಕ್ಕುಳಗುಡಿವುತ್ತ
ಮತ್ತೆ ಭಕ್ತರು ವಿರಕ್ತರು ಎಂದು ಆತ್ಮ ತೇಜಕ್ಕೆ
ಬಿಕ್ಕಿನೆ ಬಿರಿವುತ್ತ ಇಂತಿವರು ಕೆಟ್ಟಕೇಡ ನೋಡಿ
ಬಸವಣ್ಣ ಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ
ರಾಜೇಸ್ವರಲಿಂಗವು ಅಂಜಿನಷ್ಟನಾಗಿಹೋದ॥

–ಮೊದಲ ವಚನದಲ್ಲಿ ನಿಜ ಶರಣನ ನೈಜ ನಿಲವನ್ನೂ, ಎರಡನೆಯದರಲ್ಲಿ ಅಂಗದ ಮೇಲೆ ಲಿಂಗವಿಲ್ಲದವನು ಇನುಭ ವಿಸುವ ಭಂಗ, ಅನುತಾಪಗಳನ್ನೂ ವಚನಕಾರ ಬಸವಯ್ಯ ಬಿತ್ತರಿಸಿದ್ದಾನೆ. ಕಂರಿ ಕಕ್ಕಯ್ಯ, ಮದ್ದಲೆ ವಾದಕ ಘಟ್ಟಿವಾಳಯ್ಯ, ಬಹುರೂಪೀ ಚೌಡಯ್ಯ, ಪ್ರೌಢದೇವರಾಯನಿಗೆ ಬೋಧೆಯಿತ್ತ ಜಕ್ಕ ಣಾರ್ಯ– ಇವರೆಲ್ಲರೂ ವಿಶ್ವಕರ್ಮ ಶಿವಶರಣರಿದ್ದಿರಬಹುದು. ಈ ಕುರಿತ ಸಂಶೋಧನೆ ಆಗಬೇಕಿದೆ.

# ಕೆಳದಿ ರಾಜ್ಯಾಭ್ಯುದಯಮ್ : ಐತಿಹಾಸಿಕ ವಿವೇಚನೆ

'ಕೆಲದಿ ರಾಜ್ಯಾಭ್ಯುದಯಮ್ ' ಕಾಗದದ ಮೇಲೆ ಬರೆಯಲ್ಪಟ್ಟಿರುವ ಒಂದು ಹಸ್ತಪ್ರತಿ[೧] ಆರಂಭದಲ್ಲಿ 'ಕರ್ನಾಟಕ ಕವಿ ಪರಮೇಶ್ವರಿ, ವಿದ್ವತ್ಸಭಾ ಸರಸ್ವತಿ, ಕೆಳದೀ ಗಂಗಾದೇವಿ ವಿರಚಿತಂ– ಕೆಳದಿ ರಾಜ್ಯಾಭ್ಯುದಯಮ್ ಎಂತಲೂ ಮೊದಲ ಸೋಪಾ ನದ ಅಂತ್ಯದಲ್ಲಿ 'ಇದು ವೇದಾಗಮ ಸಾಧಿತ ಶ್ರೀಮದ್ವೀರಶೈವ ಷಟಸ್ಥಲೈಕಮೇವಾದ್ವಿತೀಯ ಪರಶಿವಬ್ರಹ್ಮ ಪಾದಾರವಿಂದ ಮಧು ಕರಿ ಶ್ರೀಮತ್ ಕೆಳದೀರಾಯ ರಾಜಗುರು ಶ್ರೀ ಚೆನ್ನವೀರ ಶಿವಾಚಾರ್ಯ ಪುಣ್ಯವಲ್ಲಭೆ ಕವಿ ಪರಮೇಶ್ವರಿ ಗಂಗಾದೇವಿ ವಿರಚಿತ ಮಪ್ಪ ಕೆಳದಿ ರಾಜಾಭ್ಯುದಯಮ್ ಪ್ರಬಂಧದೊಳ್ ಇಷ್ಟ ದೇವತಾಸ್ತುತಿ ಕವಿ ಪ್ರಸ್ತಾಪಮಪ್ಪ ಪ್ರಥಮಸೋಪಾನಮ್' ಎಂತಲೂ ಇದೆ. ಉಪೋದ್ಘಾತವೆನಿಸಿದ ಈ ಪ್ರಥಮ ಸೋಪಾನದ ಪ್ರಕಾರ, ಒಂದು ದಿನ ಬಸವರಾಜೇಂದ್ರನೂ ಅವನ ಪತ್ನಿ ಚೆನ್ನಮ್ಮಾ ಜಿಯೂ ತನ್ನ ಕುಲಗುರುಗಳಾದ ಬನದಗದ್ದೆ ಮಹಂತರಮಠಕ್ಕೆ ಬಂದು, ಗುರು ಹಾಗೂ ಗುರುಪತ್ನಿಯರನ್ನು ಸಂಸರ್ಶಿಸಿ, ಪ್ರತಿಭಾವಂತಳಾದಂತಹ ಗುರುಪತ್ನಿ ಗಂಗಾದೇವಿಯನ್ನು ಕುರಿತು ತಮ್ಮ ಕೆಳದೀ ಅರಸರ ವಂಶದ ಕಥೆಯನ್ನು ಬರೆಯುವಂತೆ ಪ್ರಾರ್ಥಿಸಿದರಂತೆ. ಅಂತೆಯೇ ಬಸವರಾಜನು ಕೃತಿಗೆ ಹಲವು ವಿಷಯಗಳನ್ನು ಒದಗಿಸಿಕೊಟ್ಟನಂತೆ. ರಾಜದಂಪತಿಗಳ ಪ್ರಾರ್ಥನೆ ಹಾಗೂ ತನ್ನ ಪತಿದೇವರ (ಚೆನ್ನವೀರಸ್ವಾಮಿಯವರ) ಆಜ್ಞೆ ಇವುಗಳನ್ನು ಮನ್ನಿಸಿ ಕವಿ ಪರಮೇಶ್ವರಿ ಗಂಗಾದೇವಿಯು 'ಕೆಳದಿ ರಾಜ್ಯಾಭ್ಯುದಯಮ್' ಎಂಬ ಕೃತಿಯನ್ನು ಬರೆಯಲು ಉದ್ಯುಕ್ತಳಾಗುತಾಳೆ. ದ್ವಿತೀಯ ಸೋಪಾನವು ಮಲ್ಲದೇಶ, ಬಸವಪ್ಪ– ಬಸವಾಂಬೆಯರ ದಾಂಪತ್ಯ ಜೀವನ, ಬಸವಪ್ಪನ ಮತ್ತು ಅವನ ಇಬ್ಬರು ಮಕ್ಕಳ ಮರಣ, ದುಃಖ, ಅದಕ್ಕೆ ಹೊರಗುಡಿಗೆಯ ಪಟ್ಟದ ರುದ್ರಮುನಿಸ್ವಾಮಿಗಳ ಸಮಾಧಾನ ಇತ್ಯಾದಿ ಕೆಳದೀ ರಾಜವಂಶಕ್ಕೆ ಸಂಬಂಧಿಸಿದ ವಿಷಯಗಳನ್ನೇ ಎತ್ತಿಕೊಂಡು ಕಾವ್ಯ ಅರ್ಧದಲ್ಲಿ ನಿಂತಿದೆ.[೨] ಇದರಿಂದ 'ಕೆಳದಿ ರಾಜ್ಯಾಭ್ಯುದಯಮ್' ಒಂದು ಐತಿಹಾಸಿಕ ಕಾವ್ಯ ; ಕೆಳದೀ ಅರಸರ ಪೂರ್ವೋತ್ತರವನ್ನು ತಿಳಿಸುವ ಒಂದು ಕೃತಿ. ಇದನ್ನು ರಚಿಸಿದವಳು ಕೆಳದೀ ಅರಸರ ರಾಜಗುರು ಶ್ರೀ ಚೆನ್ನವೀರ ಶಿವಾಚಾ ರ್ಯರ ಧರ್ಮಪತ್ನಿ ಗಂಗಾದೇವಿ. ಆದರೆ ಈ ಅಪೂರ್ಣ ಗ್ರಂಥದ ಇತರ ಭಾಗಗಳನ್ನು ಹುಡುಕುತ್ತಿದ್ದಾಗ ಹಲವು ಸ್ಥಳೀಯ ವ್ಯಕ್ತಿಗಳು ಸಂದೇಹಗಳನ್ನು ವ್ಯಕ್ತಪಡಿ ಸಿದರು. "ಒಂದು ಮಾತು ಹೇಳಬೇಕೆಂದರೆ 'ಕೆಳದಿ ರಾಜ್ಯಾಭ್ಯುದಯಮ್' ಇತ್ತೀಚಿನವರು ತಮ್ಮ ಅನುಕೂಲಕಾಗಿ ಸೃಷ್ಟಿಸಿ ಕೊಂಡ ಕಾವ್ಯ. ಏಕೆಂದರೆ ಆಗ (ಕ್ರಿ.ಶ. ೧೯೬೧ ರಲ್ಲಿ) ಕೆಳದಿ ಮಠದ ವಿಷಯದಲ್ಲಿ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿತ್ತು– 'ಕೆಳದಿಮಠ' ಪುತ್ರವರ್ಗದ ಮಠವೇ ಅಥವಾ 'ಶಿಷ್ಯವರ್ಗದ ಮಠವೇ' ಎಂದು. ಅದಕ್ಕೆ ಅನುಕೂಲವಾಗಲೆಂದು ಈ ಗ್ರಂಥವನ್ನು ಬರೆಸಿದ್ದಾರೆ"– ಎಂಬುದು ಅಂತಹ ಸಂದೇಹಗಳಲ್ಲೊಂದು.

---

[೧] ೧೯೬೧ರಲ್ಲಿ ಮಲೆನಾಡಿನ ಮೂಲೆಯಿಂದ ಬೀಸಿ ಬಂದ ಗಾಳಿ ಒಂದು ಹೊಸ ಸುದ್ಧಿ ತಂದಿತ್ತು. ನೂತನವಾಗಿ ನಿರ್ಮಾಣವಾಗುತ್ತಿದ್ದ ಶರಾವತಿ ವ್ಯಾಲಿ ಪ್ರಾಜೆಕ್ಟ್‌ನಲ್ಲಿ ಶಿವಮೊಗ್ಗಾ ಜಿಲ್ಲೆಯ ಕೆಳಭಾಗ ಮುಳುಗಡೆ ಆಗುತ್ತೆ ಎಂದು. ಕೆಳದಿ ಇತಿಹಾಸವನ್ನು ಆಧರಿಸಿ ಸರಣಿ ಕಾದಂಬರಿ ರಚಿಸಬೇಕೆಂಬ ಸಂಕಲ್ಪ ಹೊಂದಿದ್ದ ನಾನು ಆ ಪ್ರದೇಶದಲ್ಲಿ ಪ್ರವಾಸ ಕೈಕೊಂಡೆ. ಕೆಳದಿಗೆ ಸಂಬಂಧಿಸಿದ ಹಲವು ಮಾಹಿತಿಗಳು, ಓಲೆಗ್ರಂಥಗಳು, ನೂರಾರು ಹಸ್ತಪ್ರತಿಗಳು ದೊರೆತವು. ಅವುಗಳಲ್ಲಿ ಗಂಗಾದೇವಿ ವಿರಚಿತ 'ಕೆಳದಿ ರಾಜ್ಯಾಭ್ಯುದಯಮ್' ಒಂದು.

ಈ ಕೃತಿಯ ಹಸ್ತಪ್ರತಿಯನ್ನು ಕೊಟ್ಟವರು ಕೆಳದಿಮಠದ ಶ್ರೀ ರೇವಣಸಿದ್ಧ ಶಿವಾಚಾರ್ಯರು. ಇದರ ಬಗೆಗೆ ವಿವರಣೆ ನೀಡಿದವರು ಫ.ಹ. ಶಿವಮೂರ್ತಿಯವರು. ಇದರ ಬಗೆಗೆ ಸಂದೇಹ ವ್ಯಕ್ತಪಡಿಸಿದವರು ಭುವನಗಿರಿ ಅಥವಾ ಕವಿಲೇದುರ್ಗದ ಸ್ವಾಮಿಗಳವರು. ಹಸ್ತಪ್ರತಿಯನ್ನು ಮಹಾಪ್ರಬಂಧಕ್ಕೆ ಅನುಕೂಲವಾಗಲೆಂದು ನಾನೇ ಅಚ್ಚು ಮಾಡಿಸಿದ್ದೇನೆ.

[೨] ಒಂದೂವರೆ ಸೋಪಾನ ಮಾತ್ರ ಇದೆ.

ಇದಕ್ಕೆ ಪೋಷಕವಾಗಿ ಸಿಕ್ಕಿರುವ ಪ್ರತೊ ಓಲೆಗರಿಯದಲ್ಲ ಅಥವಾ ಹಿಂದಿನ ಕಾಲದ ಕರಡು ಕಾಗದದ ಪ್ರತಿಯೂ ಅಲ್ಲ. ಅದು ಈಗಿನ ಕಾಗದದ ಮೇಲೆ ಬರೆದದ್ದು. ಅದರ ಸ್ವರೂಪ ತುಂಬಾ ವಿಚಿತ್ರ. ಮೊದಲ ಸೋಪಾನ ಭಾಮಿನೀ ಷಟ್ಪದಿಯಲ್ಲಿದ್ದು ದ್ವಿತೀಯ ಸೋಪಾನವು ಒಂದು ಕಂದ ಮತ್ತು ಸುಧೀರ್ಘವಾದ ಗದ್ಯ ಇವುಗಳಿಂದ ಕೂಡಿದೆ. ಈ

ರೀತಿಯ ರಚನೆ ಕನ್ನಡದಲ್ಲಿ ಅಪರೂಪ ಅಥವಾ ಇಲ್ಲವೇ ಇಲ್ಲ ಇತ್ಯಾದಿ ಜನಾಭಿಪ್ರಾಯಗಳು ಸಂದೇಹ ಹುಟ್ಟಿಸಿದುವು. ಇತಿಹಾಸಕ್ಕೆ ಅಪಚಾರ ಆಗದಂತೆ ನೋಡಿಕೊಳ್ಳಬೇಕಾದರೆ ಈ ಸಂದೇಹವನ್ನು ಸಂದೇಹವಾಗಿಯೇ ಉಳಿಸುವುದು ಒಳಿತು ಅನಿಸಿದ್ದರಿಂದ ಅದನ್ನು ಹಾಗೆಯೇ ಉಳಿಸಿದೆ. ಸಮರ್ಥನೆಗಾಗಲಿ, ಖಂಡನೆಗಾಗಲಿ ಹೆಚ್ಚಿನ ಕಾವ್ಯಾಧಾರ, ಶಾಸನಾಧಾರಗಳು ಇಂದಿನವರೆಗೂ ದೊರೆತಿಲ್ಲ. ಆದರೂ ಪ್ರಸ್ತುತದಲ್ಲಿ ಹುಲೀಕೆರೆಮಠದ ತಾಮ್ರ ಶಾಸನ[೩], ಕೆಳದಿಯ ಬನದಗದ್ದೆಮಠದ ಭೂದಾ ನದ ತಾಮ್ರಶಾಸನ[೪] ಹಾಗೂ ಮೈಸೂರು ಪುರಾತತ್ವ ಸರ್ವೇಕ್ಷಣ ಇಲಾಖೆಯ ೧೯೨೬ರ ವಾರ್ಷಿಕ ವರದಿಯಲ್ಲಿಯ (ಎಂ.ಎ. ಆರ್.) ಸಂಖ್ಯೆ ೩೬ರ ಹೈದರಲ್ಲೀಖಾನನ ಸನ್ನದು[೫] ಇಷ್ಟೂ ಶಾಸನಗಳು; ಕವಿ ಲಿಂಗಣ್ಣನ 'ಕೆಳದಿನೃಪವಿಜಯ'[೬], ಕೆಳದಿ ಬಸ ವಪ್ಪನಾಯಕ (ಹಿರಿಯ)ನ 'ಶಿವತತ್ತ್ವ ರತ್ನಾಕರ'[೭] ಗ್ರಂಥಗಳು- ಇವುಗಳ ನೆನಪನ್ನು ಪಡೆದು 'ಕೆಳದಿ ರಾಜ್ಯಾಭ್ಯುದಯಮ್'ನ ಐತಿಹಾಸಿಕತೆಯನ್ನು ಕುರಿತು ವಿವೇಚಿ ಸಬಹುದು. ಸತ್ಯಾಸತ್ಯತೆಗಳನ್ನು ಮುಖ್ಯವಾಗಿ ಮೂರು ಸ್ತರಗಳಲ್ಲಿ ನಿಂತು ಮೂರು ಅಂಶಗಳನ್ನು ಆಧಾರವಾಗಿಟ್ಟು ಕೊಂಡು ಚರ್ಚಿಸಬಹುದು: ಒಂದು ಗಂಗಾದೇವಿಯ ಅಸ್ತಿತ್ವವನ್ನು ಕುರಿತದ್ದು; ಎರಡು, ಕಾವ್ಯಶೈಲಿ ಮತ್ತು ವಸ್ತು ವಿನ್ಯಾಸಗಳಲ್ಲಿ ಕಾಣಸಿ ಗುವ ಕಾವ್ಯಗುಣ; ಹಾಗೂ ಮೂರು, ಅಪೂರ್ಣವಿದ್ದರೂ ಉಪಲಬ್ಧವಿರುವಷ್ಟರಲ್ಲಿ ಕಾಣ ಸಿಗುವ ಕೆಳದೀ ರಾಜವಂಶಕ್ಕೆ ಸಂಬಂ ಧಿಸಿದ ಐತಿಹಾಸಿಕ ಸತ್ಯ. ಹೀಗೆ ಅನುಕ್ರಮವಾಗಿ ಇವುಗಳನ್ನು ಅವಲೋಕಿಸುವುದಾದರೆ, ಗಂಗಾದೇವಿ ಯಾರು? ಇವಳು ಐತಿಹಾಸಿಕ ವ್ಯಕ್ತಿಯೇ? ಇದು ಇತಿಹಾಸಕಾರರನ್ನು ಕಾಡುತ್ತಿರುವ ಪ್ರಶ್ನೆ. 'ಕೆಳದಿ ರಾಜ್ಯಾಭ್ಯುದಯಮ್' ಪ್ರಕಾರ, ಇವಳ ತಾಯಿ ಗೌರಿ, ತಂದೆ ಶಿವಪ್ಪ. ಈ ದಂಪತಿಗಳಿಗೆ ಇವಳೊಬ್ಬಳೇ ಮಗಳಂತೆ; ಕೆಳದೀ ರಾಜವಂಶದ ಗುರುಗಳಾದ ಈ ಕೆಳದಿಮಠದ ಚೆನ್ನವೀರಾಚಾರ್ಯರ ಪತ್ನಿ ಯಾದ ಗಂಗಾದೇವಿ ಇದನ್ನು ರಚಿಸಿದಳೆಂತಲೂ ಖ್ಯಾತ ವಿದ್ಯಾದಾತೆಯಾದ ತನ್ನ ತಾಯಿಯೇ ತನಗೆ ಗುರುವಾಗಿ ವಿದ್ಯೆ ಕಲಿಸಿದಳೆಂತಲೂ ಕೃತಜ್ಞತೆಗಾಗಿ ಈ ಕೃತಿಯನ್ನು ವಿದ್ಯಾದಾತೆಯಾದ ತನ್ನ ತಾಯಿಗೆ ಅರ್ಪಿಸಿರುವುದಾಗಿಯೂ ತಿಳಿಸುತ್ತದೆ ಈ ಗ್ರಂಥ.[೮]

---

[೩] ನೋಡಿ: ಸಾ.ಶಿ. ಮರುಳಯ್ಯ : ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ. ಬೆಂಗಳೂರು, ೧೯೮೦: ಅನುಬಂಧ-೩, ಪು. ೨೮೬-೮೮

[೪] ಅದೇ, ಅನುಬಂಧ-೪, ಪು. ೨೮೯-೯೧ [೫] ಶರಣ ಸಾಹಿತ್ಯ, ೧೫-೨, ೧೯೫೨, ಪು. ೧೦೪

[೬] ಆರ್. ಶಾಮಾಶಾಸ್ತ್ರಿ (ಸಂ.), ಮೈಸೂರು, ೧೯೨೧

[೭] ಬಿ.ರಾಮರಾವ್, ಪಿ. ಸುಂದರಶಾಸ್ತ್ರಿ (ಸಂ.), ಮದ್ರಾಸ್, ೧೯೨೭

[೮] ಕೆಳದಿ ರಾಜ್ಯಾಭ್ಯುದಯಮೆಂಬೀ
ಲಲಿತ ನಾಮಂ ಕೃತಿಪತಿ
ಕೆಳದಿ ರಾಜಕುಲಾಬ್ಜರವಿ ರಾಮೇಶಲಿಂಗ ಕಣಾ।
ಇಳೆಯೊಳಿದನೊರೆದಳದಾರೆನೆ
ಕೆಳದಿ ರಾಜಾನ್ವಯದ ನಿಜಗುರು
ಕೆಳದಿ ವರಮಠ ಚೆನ್ನವೀರಚಾರ್ಯನರ್ಧಾಂಗಿ – ೧, ೩೨

ಕವಿಯಿತ್ರಿಯ ತಾಯಿ-ತಂದೆಯರ ಬಗೆಗೆ ದೊರೆಯುವ ಮಾಹಿತಿ ಇಷ್ಟೇ. ಆದರೆ ಅವಳ ಪತಿ ಎನಿಸಿಕೊಂಡ ಚೆನ್ನವೀರ ಶೀವಾಚಾರ್ಯನ ಬಗೆಗೆ, ಗಂಗಾದೇವಿ ಅವನ ಧರ್ಮಪತ್ನಿ ಆಗಿದ್ದಳು ಎಂಬ ಬಗೆಗೆ ಸಾಕ್ಷಿ ಹೇಳುತ್ತವೆ ಹುಲೀಕೆರೆ ಮತ್ತು ಕೆಳದಿ ಮಠಗಳಿಗೆ ಹಾಕಿಕೊಟ್ಟಿರುವ ತಾಮ್ರದ ದಾನಶಾಸನಗಳು. ಕೆಳದೀ ರಾಜರ ಕುಲಗುರುವೂ ಪಟ್ಟಬಂಧ ವಿಭೂಷಿತನೂ ಆದ ಚೆನ್ನ ವೀರ ಗುರುವು ಅಂಬಿಕೆಯೊಡನಿರುವ ಶಂಕರನಂತೆ ಕೆಳದೀ ರಾಜಧಾನಿಯಲ್ಲಿ ಸುಶೋಭಿಸುತ್ತಿದ್ದನೆಂದು ಹುಲೀಕೆರೆ ಮಠದ ಶಾಸನ ತಿಳಿಸಿದರೆ, ಕೆಳದಿಮಠದ ಶಾಸನ ತಿಳಿಸುತ್ತದೆ ಶ್ರೀ ಕೆಂಚವೀರ ಶಿವಾಚಾರ್ಯರಿಂದ ಅನ್ವಯಾಗತವಾಗಿ ಬಂದ ಗುರು ಪರಂಪರೆಯಲ್ಲಿ ಶಿವಸಿದ್ಧಾಂತ ಕೋವಿದನಾದ ಚೆನ್ನವೀರ ಗುರುವು ಪತ್ನಿ ಗಂಗಾದೇವಿಯೊಡಗೂಡಿ ಬೆಳಗುತ್ತಿದ್ದನು ಎಂದು. ಇದರಿಂದ ಗಂಗಾದೇವಿ ಎಂಬುವಳು ಕೆಳದೀ 'ರಾಜಗುರು'[೯] ಚೆನ್ನವೀರ ಶಿವಾಚಾರ್ಯನ ಪತ್ನಿ ಎಂಬಂಶ ತಿಳಿದಂತಾಯಿತು. ಹಾಗಾದರೆ ಈ ಚೆನ್ನವೀರಸ್ವಾಮಿ ಯಾರು?- ಎಂಬುದು

ಮುಂದಿನ ಪ್ರಶ್ನೆ. 'ಶಿವತತ್ತ್ವ ರತ್ನಾಕರ' ಎಂಬ ಸಂಸ್ಕೃತ ವಿಶ್ವಕೋಶದಲ್ಲಿ ಒಂದೆಡೆ ಚೆನ್ನವೀರ ಶಿವಾಚಾರ್ಯನ ಹೆಸರು ಬರುತ್ತದೆ. ಇದರ ಕರ್ತೃ ಕೆಳದಿಯನ್ನಾಳಿದ ಹಿರಿಯ ಬಸವಪ್ಪನಾಯಕನು ಗುರುಪರಂಪರೆಯನ್ನು ವಚಿಸುವಲ್ಲಿ–

ವಸಂತದೇವ

ಮಲ್ಲಿಕಾರ್ಜುನ

ಚೆನ್ನವೀರ (ವೀರೇಶ ಚನ್ನಪರ)

ಗುರುಪಾದಸ್ವಾಮಿ

ವಸಂತದೇವ

ಚೆನ್ನವೀರಸ್ವಾಮಿ

------------------------------------------------------------------------
---

ಮಾತೆ ಗೌರೀದೇವಿ ಶಿವ ವರ
ಜಾತ ಸುತೆಯಾದೆನ್ನನೊರ್ವಳ
ನೋತು ಸಲಹುತ ತಾನೆ ವಿದ್ಯೆಯನೆನಗೆ ಕಲಿಸಿದಳು
ಖ್ಯಾತ ವಿದ್ಯಾದಾತೆಯಂ ನಿಜ
ಮಾತೆಯಂ ತಾನಾದ ದೇವಿಗೆ
ಪ್ರೀತಿಯಿಂದರ್ಪಿಸುವೆನೀ ನವಕಾವ್ಯ ಕುಸುಮವನೆ – ೧, ೩೩

[೯] ಕೆಳದೀ ಅರಸರ ಕುಲಗುರುಗಳಾದ ಬನದಗದ್ದೆಮಠದ ಸಾಮಿಗಳವರಿಗೆ 'ರಾಜಗುರು' ಎಂಬ ಬಿರುದು ಇದ್ದಂತೆ ತೋರುತ್ತದೆ. ಈಗಲೂ ಈ ವಂಶೀಕರಿಗೆ 'ರಾಜಗುರು' ಎಂಬ ಉಪಸರ್ಗ ಇದೆ. ಕರ್ನಾಟಕದ ಪ್ರಸಿದ್ಧ ಗಾಯಕ ಬಸವರಾಜ ರಾಜಗುರು ಈ ಮಠಾದಿಪತಿಗಳ ಪೀಳಿಗೆಯವರು. ಎಂದು ತನ್ನ ಗುರು (ಪಟ್ಟಿಯಲ್ಲಿ ಕಡೆಯವನಾದ) ಚೆನ್ನವೀರಸ್ವಾಮಿಯನ್ನು ಹೆಸರಿಸಿದ್ದಾನೆ.[೧೦] ಆದರೆ ಈ ಚೆನ್ನವೀರನಿಗೆ ಗಂಗಾ ದೇವಿ ಎಂಬ ಪತ್ನಿ ಇದ್ದಳೆಂದು ಎಲ್ಲೂ ಹೇಳುವುದಿಲ್ಲ. ಹಿರಿಯ ಬಸವಪ್ಪನಾಯಕನಿಂದಲೇ ರಚಿತವಾದ 'ಶಿವತತ್ತ್ವ ರತ್ನಾ ಕರ'ವು ತುಂಬಾ ವಿಶ್ವಾಸಾರ್ಹವಾದ ಗ್ರಂಥವಾದ್ದರಿಂದ ಅದು ಹೇಳುವ ಚೆನ್ನ ವೀರಸ್ವಾಮಿ ಐತಿಹಾಸಿಕ ವ್ಯಕ್ತಿ ಎಂಬುದು ಸ್ಪಷ್ಟ ಹಾಗೂ ಸತ್ಯ. ಆದರೆ ಅವನಿಗೆ ಗಂಗಾದೇವಿ ಎಂಬ ಪತ್ನಿ ಇದ್ದಳೆಂದು ರುಜುವಾತು ಮಾಡುವುದು ಕಷ್ಟ. ಎರಡನೆಯದಾಗಿ, ಗಂಗಾದೇವಿ ಎಂಬುವಳು ಕೆಳದೀ 'ರಾಜಗುರು' ಚೆನ್ನವೀರ ಶಿವಾಚಾರ್ಯನ ಧರ್ಮಪತ್ನಿ ಎಂದು ವಶೀಲಿ ಹೇಳುವ ಹುಲೀ ಕೆರೆ ಮತ್ತು ಕೆಳದಿಮಠಗಳ ದಾನಶಾಸನಗಳು ತಾಮ್ರಶಾಸನಗಳು. ತಾಮ್ರಶಾಸನಗಳು ಶಿಲಾಶಾಸನಗಳಷ್ಟು ವಿಶ್ವಾಸಾರ್ಹವಾದು ವಲ್ಲ. ಅವುಗಳಲ್ಲಿ ಅನೇಕವು ಕೂಟ ಶಾಸನಗಳಿದ್ದರೂ ಇರಬಹುದು. ಆದ್ದರಿಂದ ಮೇಲೆ ಹೇಳಿದ ಎರಡೂ ಶಾಸನಗಳ ಸತ್ಯತೆ ಸ್ಥಿರವಾಗುವತನಕ ಗಂಗಾದೇವಿ–ಚೆನ್ನವೀರರ ಸಂಬಂಧ ಸತ್ಯ ರುಜುವಾತಾಗುವುದಿಲ್ಲ. ಮೂರನೆಯದಾಗಿ 'ಎಂ.ಎ.ಆರ್. ೧೯೫೬, ಸಂಖ್ಯೆ ೬೬ ರಲ್ಲಿ ಹಿರಿಯ ಬಸವಪ್ಪನಾಯಕನು ಚೆನ್ನವೀರ ಸ್ವಾಮಿಗಳಿಗೆ ಹಾಕಿಕೊಟ್ಟ ಈ ಭೂದಾನ ಶಾಸನದಲ್ಲಿ ಗಂಗಾ ದೇವಿಯ ಹೆಸರಾಗಲಿ, ಅವಳು ಕವಯಿತ್ರಿಯಾಗಿದ್ದಳೆಂಬ ವಿಷಯ ವಾಗಲಿ ಉಲ್ಲೇಖವಾಗಿಲ್ಲ. ಒಂದುವೇಳೆ, ಗುರುಪರಂಪರೆ ಯನ್ನೇ ಮೂಲ ಉದ್ದೇಶವಾಗುಳ್ಳ ಬಸವರಾಜೇಂದ್ರನಿಗೆ ಗುರು ಪತ್ನಿಯ ಹೆಸರನ್ನು ಉದ್ದರಿಸುವ ಅಗತ್ಯ ಕಂಡುಬರಲಿಲ್ಲ ('ಶಿವತತ್ತ್ವ ರತ್ನಾಕರ'ದಲ್ಲಿ) ಎಂದು ಹೇಳಿಕೊಂಡರೂ ದಾನ ಕೊಡುವಲ್ಲಿ ಪತಿಯ ಜೊತೆಯಲ್ಲಿ ಪತ್ನಿಯ ಪಾತ್ರವಿದ್ದಂತೆ, ದಾನ ಸ್ವೀಕರಿಸುವಲ್ಲಿ ವಿದ್ವತ್ ಸಭಾಸರಸ್ವತಿಯೆನಿಸಿದ ಪತ್ನಿಯ ಪಾಲು ಇದೆ ಎಂಬುದನ್ನು 'ಎಂ.ಎ.ಆರ್. ಹೇಳುವ ದಾನಶಾಸನ ತಿಳಿ ಸದೆ ಇರುತ್ತಿರಲಿಲ್ಲ. 'ಕರ್ನಾಟಕ ಕವಿ ಪರಮೇಶ್ವರಿ' ಯನ್ನು ಮರೆಯುವಷ್ಟು ಮೂಢನಲ್ಲ ಬಸವರಾಜ ಅನ್ನಿಸುತ್ತದೆ. ಗಂಗಾದೇವಿ ಒಂದು ಒಗಟಾಗಿಯೇ ಉಳಿಯುತ್ತಾಳೆ. ಕೆಳದೀ ಗಂಗಾದೇವಿಯ ಅಸ್ತಿತ್ವ ಅನುಮಾನ. ಅವಳು ಚೆನ್ನವೀರಸ್ವಾಮಿಯ ಧರ್ಮಪತ್ನಿ ಎಂಬುದು ಸಂದೇಹ. 'ಕೆಳದಿ ರಾಜ್ಯಾಭ್ಯುದಯಮ್' ಎಂಬ

ಅಪೂರ್ಣ ಗ್ರಂಥ ಅವಳು ರಚಿಸಿದ್ದಲ್ಲ ಎಂಬ ಗುಮಾನಿ ! ಭಾಮಿನಿ ಬರಹವನ್ನು ಹೆಕ್ಕಿ ನೋಡಿ ದಾಗ ಈ ಸಂದೇಹ ಇಣುಕು ಹಾಕಿತು ! ಉಪಲಬ್ಧ ಕೃತಿಯ ಪ್ರಥಮ ಸೋಪಾನದ ಎರಡು ಪದ್ಯಗಳು ತುಂಬು ಸಂದೇಹಕ್ಕೆ ಎಡೆ ಮಾಡಿಕೊಟ್ಟಿವೆ. ಉಪೋದ್ಘಾ ತದ ಈ ಭಾಗದಲ್ಲಿ ಕಾವ್ಯ ಸಂಪ್ರದಾಯದ ಹದಿನೆಂಟು ವರ್ಣನೆಗಳೇಕೆ?– ಎಂಬ ಧೋರಣೆ ತಳೆದ ಕವಯಿತ್ರಿ ಹೇಳುತ್ತಾಳೆ:

ಪುರದ ಗೌಡನು ಮಾಡದುದನವ
ನುರುವ ಕಂಬಳಿ ಮಾಳ್ಪುದೇ
ಸರಸ ಸುಂದರ ಸತ್ಯ ಕಥೆಗೇತಕ್ಕೆ ವರ್ಣನೆಯು ೧, ೩೧

ಇಲ್ಲಿ ಬರುವ 'ಪುರದ ಗೌಡನು ಮಾಡದುದನವನುರುವ ಕಂಬಳಿ ಮಾಳ್ಪುದೇ?' ಎಂಬ ದೇಸಿಯ ಸೊಗಡುಳ್ಳ ಮಾತು

---

[೧೦] ಅಶೀಮಜ್ಜಯನೀ ಪತಿರ್ಮರುಲಸಿದ್ದೇಶೋ ಗುರುಃ ಪ್ರಸ್ಸುರಾದೇಶೋ
ವಸಂತದೇವ ಮಹಿತ ಶ್ರೀ ಮಲ್ಲಿಕಾದ್ಯರ್ಜುನಾ
ವೀರಶ್ಚೇನ್ನಪರಃ ತತೋ ಗುರುಪದಸ್ವಾಮಿ ವಸಂತ
ಸ್ತ ತಸ್ತಸ್ಮಾದುನ್ನತ ಚೆನ್ನವೀರ ವಿಭುರಿತ್ಯಾಚಾರ್ಯ ಪಾರಂಪರೀ ॥ –ಶಿವತತ್ತ್ವ ರತ್ನಾಕರ, ೧, ೧, ೬–೭

ಇತ್ತೀಚೆಗೆ ಬೇರೊಂದು ರಾಜಗುರು ಪರಂಪರೆಯ ಪಟ್ಟಿ ಸಿಕ್ಕಿದೆ. ಇದನ್ನು ಒದಗಿಸಿಕೊಟ್ಟವರು ಶ್ರೀ ಕುಪ್ಪೂರು ಗದ್ದಿಗೆ ಮಠಾಧ್ಯಕ್ಷರಾದ ಷ॥ ಬ್ರ॥ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು. ಕನ್ನಡದ 'ಗೌಡ ಮಾಡದ್ದನ್ನ ಗೌಡನ ಕಂಬಳಿ ಮಾಡುತ್ತಾ!' ಎನ್ನುವ ಗಾದೆಯೇ ಆಗಿದೆ. ಈ ಅಶ್ಲೀಲ ಗಾದೆ ೧೭–೧೮ನೆಯ ಶತಮಾನದಲ್ಲಿ ರೂಢಿಯಲ್ಲಿತ್ತೇ ಇದ್ದರೂ

ಸವೇಷ್ಟವಹ ಹೆಣ್ಣಿಂಗೆ ಮಣ್ಣಿಗೆ
ಕಷ್ಟಪಟ್ಟುರು ಕಾದುಮಡಿದ
ಭ್ರಷ್ಟ ಭವಿಗಳ ಪೊಗಳ್ದ ಕೃತಿ ತಾನಲ್ಲವೀ ಕೃತಿಯು
ಸೃಷ್ಟಿಯೊಳಗಿಹೆ ಸಕಲ ಧರ್ಮ ಪ್ರ
ತಿಷ್ಠೆಗಾಗಿಯೆ ನಾಡೆಪೊವರೆ ವ
ರಿಷ್ಠ ಅವರತಿ ಶೀಲ ಕೆಳದೀ ರಾಜಚರಿತ –೧, ೩೫

ಎಂದು ಹೇಳುವ ಶಿಷ್ಟಕಾವ್ಯದಲ್ಲಿ ಬಳಸುವುದು ಉಚಿತವೆ? ಬಳಸಿದರೂ 'ಕರ್ಣಾಟ ಕವಿ ಪರಮೇಶ್ವರಿ, ವಿದ್ವತ್ ಸಭಾ ಸರಸ್ವತಿ ಮಠಾಧಿಪತಿ ರಾಜಗುರು ಶ್ರೀ ಚೆನ್ನವೀರ ಶಿವಾಚಾರ್ಯರ ಧರ್ಮಪತ್ನಿ' ಅನ್ನಿಸಿಕೊಂಡ ಗಂಗಾದೇವಿ ಎಂಬ ಲೇಖಕಿ ಕಾವ್ಯ ಸಂದರ್ಭದಲ್ಲಿ ಬಳಸಲು ಶಕ್ಯವೆ? ವೀರ ಮಾಹೇಶ್ವರನ ಧರ್ಮಪತ್ನಿಗಿದು ಸಾಧ್ಯವೆ? ಕೆಳದಿ ಸಾಮ್ರಾಟನ ಆಸ್ಥಾನ ಕವಯಿತ್ರಿಗೆ ರಾಜಾಸ್ಥಾನದ ಅರಿವು ಇರುವುದಿಲ್ಲವೆ? – ಇಚಿತೆಲ್ಲ ಪ್ರಶ್ನೆಗಳು ಉದ್ಭವಿಸುತ್ತವೆ. ಅಲ್ಲದೆ ಇತ್ತಿಚಿನ ದಿನಗಳಲ್ಲಿ ಪ್ರಚಲಿತವಿರುವ ಈ ಗಾದೆಯನ್ನು ಬಳಸಬಲ್ಲ ಶಕ್ತಿ ಕವಿಗಿರುತ್ತದೆಯೇ ಹೊರತು ಕವಯಿತ್ರಿಗಿರಲಾರದು. ಆದ್ದರಿಂದ ಯಾವನೋ ಗಂಡಸು ಬರೆದು ಗಂಗಾದೇವಿಯ ಕೊರಳಿಗೆ ಕಟ್ಟಿರಬಹುದು. ಇದು ಊಹೆಯಾದರೂ ಇದರಲ್ಲಿ ಕಟುಸತ್ಯ ಅಡಗಿದೆ. ಮತ್ತೊಂದು ಪದ್ಯದಲ್ಲಿ 'ಖ್ಯಾತ ವಿದ್ಯಾದಾತೆಯುಂ ನಿಜ ಮಾತೆಯುಂ ತಾನಾದ ದೇವಿಗೆ ಪ್ರೀತಿಯಿಂದರ್ಪಿಸುವೆನೀ ನವ ಕಾವ್ಯ ಕುಸುಮನನ್' (೧, ೩೩) ಎಂದಿದೆ. ಅಂದರೆ ತಾನೇ ಗುರುವಾಗಿ ವಿದ್ಯಾದಾನ ಮಾಡಿದ ತನ್ನ ತಾಯಿ ಗೌರೀ ದೇವಿಗೆ ತನ್ನ ಈ ನವಕಾವ್ಯ ಕುಸುಮವನ್ನು ಅರ್ಪಿಸುವುದಾಗಿ ಹೇಳಿದ್ದಾಳೆ. ಇಲ್ಲಿ ಮೂಡುವ ಒಂದು ಸಂದೇಹವೆಂದರೆ ಆ ಕಾಲದಲ್ಲಿ ಇಂದಿನಂತೆ ಕೃತಿಯನ್ನು 'ಅರ್ಪಣೆ' (Dedicate) ಮಾಡುವ ಪದ್ಧತಿ ಇತ್ತೆ? ತೆಲುಗಿನಲ್ಲಿ ಕೃತಿಯನ್ನು 'ಅಂಕಿತ' ಮಾಡುವುದು ರೂಢಿಯಲ್ಲಿದ್ದರೂ ಕನ್ನಡದಲ್ಲಿ ಎಲ್ಲೂ ಹಿಂದೆ ನೂತನವಾಗಿ ರಚಿಸಿದ ಕೃತಿಯನ್ನು

ಗುರುವಿಗೋ ಹಿರಿಯರಿಗೋ ಅರ್ಪಿಸಿದ ಸಂದರ್ಭ ಇಲ್ಲ! ಪ್ರಸ್ತು ಕಾವ್ಯದ ರಚನೆ ವಿಚಿತ್ರವೂ ವಿವಾದಾಸ್ಪದವೂ ಆಗಿದೆ. ಮೂರನೆಯದಾದ ಚಿಕಿತ್ಸೆ: 'ಕೆಳದಿ ರಾಜ್ಯಾಭ್ಯುದಯಮ್' ಕಾವ್ಯಗರ್ಭದ್ಲಿ ಕೆಲವು ಐತಿಹಾಸಿಕವಾದ ಸತ್ಯ ಸಂಗತಿಗಳು ಸ್ಪಷ್ಟ ಗೋಚರವಾಗುತ್ತವೆ. "ಬನಸಿರಿಯ ಚೆಲುವಿಂಗೆ ನಿಲವಿಂಗೆ ನೆಲೆಯೆನಿಪ್ಪಾ ಸಲ್ಲಲಿತವಾದ ಮಲ್ಲದೇಶದಲ್ಲಿ ಕೆಳದಿಪುರ" ಇದೆ; "ಆ ಊರೊಳ್ ಆಶವಸನಾನುಕೂಲ ಸಂಪನ್ನನುಂ, ಅಸಮ ಗುರುಭಕ್ತಿ ಪರನುಮಪ್ಪ ಬಸವಪ್ಪನೆಂಬ ಪೆಸರಿನ ವೀರಶೈವ ಗೃಹಸ್ಥಂ, ಸ್ವನಾಮಾಂಕಿತೆಯಪ್ಪ ಸತಿಯೊಳ್ ಪುರುಷಾರ್ಥದಂತೆ ನಾಲ್ಕಾಗಿಯೊಪ್ಪುವ ನಂದನರಂ ಪಡೆದ ಬಳಿಕ್ಕಂ ಕಾಲಕ್ರಮದಿಂದಾತಂ ಕೈಲಾಸಮನ್ಯೈದಲ್ ಅಗಳೆಯಾತ್ಮಜರಿರ್ವ್ವರುಮಾ ಪಿತನ ಬೆಂಬಿಡಿದು ಪೋಗುತಿರೆ. . ."[೧೧] ಇಲ್ಲಿ ಬರುವ ಬಸವಪ್ಪನು ಕೆಳದಿ ಅರಸುವಂಶದ ಮೂಲಪುರುಷ ಎಂಬುದು ಸತ್ಯ; ಅವನ ಪತ್ನಿ ಬಸವಾಂಬೆ. ಅವರಿಗೆ ನಾಲ್ವರು ಮಕ್ಕಳು. ಅವರಲ್ಲಿ ಇಬ್ಬರು ತೀರಿಕೊಂಡು ಚೌಡಪ್ಪ, ಭದ್ರಪ್ಪ ಎಂಬಿಬ್ಬರು ಮಾತ್ರ ಉಳಿಯುತ್ತಾರೆ. ಬಸವಪ್ಪನೂ ತೀರಿ ಕೊಳ್ಳುತ್ತಾನೆ– ಇವಿಷ್ಟನ್ನೂ 'ಕೆಳದನೃಪ ವಿಜಯ'ವೇ ಮೊದಲಾದ ಕೆಳದೀ ಆಸ್ಥಾನಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳು ಹೇಳುತ್ತ ವೆಯಾದರೂ ಬಸವಪ್ಪನಿಗೆ ನಾಲ್ಕು ಜನ ಮಕ್ಕಳಲ್ಲ ಇಬ್ಬರು ಎಂದು ತಿಳಿಸುತ್ತದೆ. 'ಕೆಳದಿ ರಾಜ್ಯಾಭ್ಯುದಯಮ್ ಮಾತ್ರ ನಾಲ್ಕು ಜನ ಎಂದು ಹೇಳುತ್ತದೆ. ಇಲ್ಲಿ ಬರುವ ಹೊರಗುಡಿಗೆಯ ಪಟ್ಟದ ರುದ್ರಸ್ವಾಮಿಗಳ ಪ್ರವೇಶ ಯಾವ ಕೃತಿಯಲ್ಲೂ ಇಲ್ಲ. 'ಪಟ್ಟದ ಸ್ವಾಮಿ' 'ನಿರಂಜರ ಪೀಠದ ಸ್ವಾಮಿ' ಎಂಬ ಭೇದ ಭಾವನೆ ಇತ್ತೀಚಿನದೇ ಹೊರತು ಅಂದಿನದಲ್ಲ.

——————————————————————————————————————————————

———

[೧೧] ಕೆಳದಿ ರಾಜ್ಯಾಭ್ಯುದಯಮ್; ದ್ವಿತೀಯ ಸೋಪಾನಂ

'ಕೆಳದಿ ರಾಜ್ಯಾಭ್ಯುದಯಮ್' ಹೇಳುವ ಬಸವಪ್ಪನಾಯಕ ಕ್ರಿ.ಶ. ೧೬೯೮ ರಿಂದ ೧೭೧೪ರ ವರೆಗೆ ಕೆಳದಿಯನ್ನಾಳಿದ ಹಿರಿಯ ಬಸವಪ್ಪನಾಯಕನೇ ಆಗಿದ್ದಾನೆ. ಚೆನ್ನವೀರಸ್ವಾಮಿಯೂ ಅವನ ಮನೆಯ ಗುರು ಆಗಿದ್ದುದು ಅದೇ ಕಾಲದಲ್ಲಿ. ಗಂಗಾ ದೇವಿ ಎಂಬವಳಿದ್ದರೆ ಅವಲ ಕಾಲವೂ ಅದೇ.

ಇಷ್ಟಾದರೂ 'ಕೆಳದಿ ರಾಜ್ಯಾಭ್ಯುದಯಮ್' ಅಪೂರ್ಣವಿರುವುದರಿಂದ ಅದರ ಬಗೆಗೆ 'ಇದಮಿತ್ಥಂ' ಎಂದು ಹೇಳಬರು ವುದಿಲ್ಲ. ಸದ್ಯದಲ್ಲಿ ಇಷ್ಟು ಹೇಳಬಹುದು: "ಕೆಳದಿಮಠಕ್ಕೆ ಚೆನ್ನಮ್ಮಾಜಿ ಹಾಗೂ ಅವಳ ದತ್ತಕ ಬಸವರಾಜೇಂದ್ರ ಇವರು ಹಾಕಿ ಕೊಟ್ಟಿರುವ ದಾನಶಾಸನಗಳು ಸುಳ್ಳಾಗುವುದಾದರೆ ಗಂಗಾಂಬಿಕೆಯೆಂಬ ಐತಿಹಾಸಿಕ ವ್ಯಕ್ತಿಯೂ ಸುಳ್ಳು. ವ್ಯಕ್ತಿ ಸುಳ್ಳಾದರೆ ಕಾವ್ಯವೂ ಸುಳ್ಳು."[೧೨]

——————————————————————————————————————————————

———

[೧೨] ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ, ಪು. ೧೩೪

# ಕನ್ನಡ ಸಾಹಿತ್ಯದ ಒಲವು-ನಿಲವುಗಳು

ವೇಷ ಬೇರೆಯಾದರೂ ದೇಶವೊಂದೆ; ಭಾಷೆ ಬೇರೆಯಾದರೂ ಭಾವನೆ ಒಂದೇ- ಇದು ನಮ್ಮ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯಗಳಲ್ಲಿ ಒಂದು. ಇದು ಭಾವೈಕ್ಯ ಸಾಧಕವೂ ಆಗಿದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಇಂದು ಗೋಚರಿಸುತ್ತಿರುವ ಹೊಸ ಸ್ರೋತ್ಸುಗಳ ಅಥವಾ ಹೊಸ ಪ್ರವೃತ್ತಿ ಮತ್ತು ಪ್ರಗತಿಗಳ ರೂಪರೇಷೆಯೊಂದನ್ನು ಕೊಡುವ ಪ್ರಯತ್ನ ಇದು. ಇದು ಕರಿಯನ್ನು ಕನ್ನಡಿಯಲ್ಲಿ ಅಡಗಿಸಲು ಯತ್ನಿಸಿದನಂತೆ.

ಇಪ್ಪತ್ತರ ದಶಕದ ಆರಂಭದಲ್ಲಿ ಎಸ್.ಜಿ. ನರಸಿಂಹಾಚಾರ್ಯರು, ಪಂಜೆ ಮಂಗೇಶ ರಾಯರು ಇವರುಗಳ ಪ್ರಯತ್ನದಿಂದ ಕನ್ನಡ ಸಾಹಿತ್ಯವು ಇಂಗ್ಲಿಷ್ ಸಾಹಿತ್ಯದ ಸಂಪರ್ಕ ಪಡೆದು ರೊಮ್ಯಾಂಟಿಕ್ ಕಾವ್ಯಸೃಷ್ಟಿಗೆ ಕೈ ಹಾಕಿತು. ಆಚಾರ್ಯ "ಶ್ರೀ" ಯವರ ಶ್ರೇಷ್ಠ ಮಾರ್ಗದರ್ಶನದಲ್ಲಿ ಅದು ಪ್ರಬುದ್ಧ ಸ್ಥಿತಿಗೆ ಬಂದು, ಕುವೆಂಪು, ಬೇಂದ್ರೆ, ಪುತಿನ ಎಂಬ ರತ್ನತ್ರಯರನ್ನು ಕೊಟ್ಟಿತು. ಈ ದಿಶೆಯಲ್ಲಿ ಕೆಲವರು ದುಡಿದರು. ಜಿ.ಪಿ. ರಾಜರತ್ನಂ, ಕೆ.ಎಸ್. ನರಸಿಂಹಸ್ವಾಮಿ ಮತ್ತು ಎಸ್.ವಿ. ಪರಮೇಶ್ವರ ಭಟ್ಟ- ಇವರ ದುಡಿಮೆ ಅಪಾರವಾದದ್ದು. ಈ ವಲಯದಲ್ಲಿ ನಿರ್ಮಾಣವಾದ ಸಾಹಿತ್ಯದಲ್ಲಿ ಎಲ್ಲರಿಗೂ ತಿಳಿದಿರುವಂತೆ ಭಾವ ಮತ್ತು ನಾದ (ಗೀತೆ)-ಇವೇ ಪ್ರಧಾನ ಮೌಲ್ಯಗಳೆನಿಸಿದವು. ಆದರೆ ಈ ಮೌಲ್ಯ ಬದಲಾಗಲು ಹೆಚ್ಚುಕಾಲ ಬೇಕಾಗಲಿಲ್ಲ. ಕ್ರಿ.ಶ. ೧೯೫೦ರಿಂದ ಈಚೆಗೆ ಕೇವಲ ಇಪ್ಪತ್ತೇ ವರ್ಷಗಳಲ್ಲಿ ಕನ್ನಡ ಕಾವ್ಯ "ನವ್ಯ ಪಂಥ"ದ ನೂತನ ಶಿಖರವನ್ನೇರಿ ನಿಂತಿದೆ. ಭಾವ, ರಸಗಳಿಗಿಂತ ವೈಚಾರಿಕತೆಯೇ ಈ ಸಾಹಿತ್ಯದ ವೈಶಿಷ್ಟ್ಯ ಎಂದು ಸ್ಥೂಲವಾಗಿ ಹೇಳಬಹುದು.

೧೯೭೧ರಲ್ಲಿ ಬೆಂಗಳೂರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಏರ್ಪಡಿಸಿದ್ದ 'ಅಂತರಭಾರತಿ' ಕಾರ್ಯಕ್ರಮದಲ್ಲಿ ಕುವೆಂಪುರವರ ಅಧ್ಯಕ್ಷತೆಯಲ್ಲಿ ಕನ್ನಡವನ್ನು ಪ್ರತಿನಿಧಿಸಿ ನಾನು ಓದಿದ ಪ್ರಬಂಧಸಾರ.

ಹೀಗೆ ಬೆಳೆದು ಬಂದ ಕನ್ನಡ ಸಾಹಿತ್ಯ ಇಂದು ಹೊಸ ರೂಪು, ಹೊಸ ಉತ್ಸಾಹದಿಂದ ಮುಂದುವರಿಯುತ್ತಿದೆ. ನಮಗೆ ತಿಳಿದಂತೆ ನವ್ಯತೆಯ ನೆರಳು ವಿ.ಕೃ. ಗೋಕಾಕರ ಸಮುದ್ರ ಗೀತಗಳಲ್ಲಿ ಸುಳಿದರೂ, ಅದು ತನ್ನದೇ ಆದ ಪ್ರಸ್ಥಾನ ಪದವಿಯನ್ನು ಪಡೆದದ್ದು ಶ್ರೀ ಗೋಪಾಲಕೃಷ್ಣ ಅಡಿಗರಲ್ಲಿ. ಅಡಿಗರು ಹಾಕಿದ ಅಡಿಗಲ್ಲು ನವ್ಯಪಂಥದ ಭವ್ಯ ಭವನ ಸುಭದ್ರವಾಗಿ ನಿಲ್ಲು ಸಹ ಕಾರಿಯಾಯಿತು. ಒವರ ಜೊತೆಯಲ್ಲಿ ಹತ್ತಾರು ಕವಿಗಳು ನವ್ಯತೆಯನ್ನು ನಾವೀನ್ಯಪೂರ್ಣವಾಗಿ ಬೆಳಸಿಕೊಂಡು ಬಂದಿದ್ದಾರೆ. ಅನುಕರಣೆಯನ್ನುಳಿದ ಸ್ವಾನುಭವ, ರಸಕ್ಕೆ ಬದಲಾಗಿ ವಿಚಾರ, ಪಾಂಡಿತ್ಯಕ್ಕೆ ಬದಲು ಪ್ರತಿಮೆ ಛಂದದ ನಿಯಮವನ್ನು ಅತಿಕ್ರಮಿ ಸಿದ ಸ್ವಚ್ಛಂದತೆ, ಆದರ್ಶಕ್ಕೆ ಬದಲು ವಾಸ್ತವತೆ, ಕಲ್ಪನೆಯ ಕೃತಕತೆಗೆ ಬದಲು ಬದುಕನ್ನು ಕುರಿತ ಸಮಕಾಲೀನ ಪ್ರಜ್ಞೆ, ಸೌಂದ ರ್ಯದ ಸ್ಥಾನದಲ್ಲಿ ಸಾಂಕೇತಿಕತೆ ಇತ್ಯಾದಿ ಗಣನೀಯ ಗುಣಗಳನ್ನು ನಮ್ಮ ನವ್ಯ ಕವಿಗಳು ಬೆಳಗಿದ್ದಾರೆ. ನಿಜಕ್ಕೂ ಇದು ಕನ್ನಡಿ ಗರಿಗೆ ಹೆಮ್ಮೆ ತಂದ ವಿಷಯ. ಈ ಕ್ಷೇತ್ರದಲ್ಲಿ ಯಾರೂ ಯಾರನ್ನೂ ಅನುಕರಣೆ ಮಾಡಿದಂತೆ ಕಾಣಿಸುವುದಿಲ್ಲ. ಒಬ್ಬೊಬ್ಬರದು ಒಂದೊಂದು ಹಾದಿ. ಅವರಲ್ಲಿ ನಾನು ಕಂಡ ವೈಶಿಷ್ಟ್ಯವನ್ನು ಹೀಗೆ ಸಮೀಕರಿಸಿದ್ದೇನೆ: ಅಡಿಗರ ಓಜಸ್ಸು, ನರಸಿಂಹಸ್ವಾಮಿಯವರ ಸಮೃದ್ಧವಾದ ಸುಕುಮಾರತೆ, ಶಿವರುದ್ರಪ್ಪನವರ ಸೌಂದರ್ಯ, ಕಣವಿಯವರ ಭಾವುಕತೆ, ರಾಮಾನುಜನ್‌ರವರ ಲಯ, ರಾಜಗೋಪಾಲ್‌ರವರ ನಯ, ರಾಮ ಚಂದ್ರಶರ್ಮರ ಕಾಮ, ಚಿತ್ತಾಲರಲ್ಲಿನ ಮುಕ್ತ ಆನಂದ, ಪಾಟೀಲರ ಸ್ವಚ್ಛತೆ, ನಿಸಾರರ ಶುದ್ಧಿ, ಕಂಬಾರರ ಜಾನಪದ ಧಾಟಿ, ಲಂ ಕೇಶರ ಕಸುವು, ಸ್ದ್ಧಲಿಂಗಯ್ಯನವರ ಪೌರಾಣಿಕ ಪ್ರತಿಮೆಗಳನ್ನು ಬಳಸುವುದರಲ್ಲಿ ಕಾಣುವ ಪ್ರಬುದ್ಧತೆ, ಅನಂತಮೂರ್ತಿಯವರ ಮಾಧುರ್ಯ, ಚನ್ನಯ್ಯನವರ ನಗ್ನತೆ, ಶಿವಪ್ಪನವರ ಕಥನಶೈಲಿ, ಮೊಕಾಶಿಯವರ ಮೋಡಿ, ಸಣ್ಣಗುಡ್ಡಯ್ಯನವರ ವಿಡಂಬನೆ, ಪಟ್ಟ ಣಶೆಟ್ಟಿಯವರ ಮಾತುಗಾರಿಕೆ, ತಿರುಮಲೇಶ್‌ರವರ ಕೃತಕ ಜೀವನವನ್ನು ಕುರಿತ ಕಳಕಳಿ, ಸುಮತೀಂದ್ರರ ಹಿತವೆನಿಸುವ ಪ್ರಾಸ, ಕುಸನೂರರ ಸುಭಗತೆ, ಬುದ್ದಣ್ಣನವರ ಒರಟು, ಶಾಂತರಸರ ಒಲವು, ಹಕಾರಿಯವರ ಚಾತುರ್ಯ, ವೆಂಕಟಗಿರಿ ಕಡೇಕಾರರ ವಿಜ ಯ, ಸುಬ್ರಾಯ ಚೊಕ್ಕಾಡಿಯವರ ಅಚ್ಚುಕಟ್ಟು, ಎಕ್ಕುಂಡಿಯವರ ತತ್ವದರ್ಶನ, ಕೋ. ಚೆನ್ನಬಸಪ್ಪನವರ ವೈಚಾರಿಕತೆ, ಲಕ್ಷ್ಮಣರಾ ಯರ ಸರಳತೆ- ಇವೆಲ್ಲವೂ ಬೆರೆತಿವೆ. ಅಲ್ಲದೆ ಆಲನಹಳ್ಳಿಕೃಷ್ಣ, ಬಿಳಿಗಿರಿ, ಯರ್ಮಂಜ ರಾಮಚಂದ್ರ, ಮಂಗೇಶ ನಾಡಕರ್ಣಿ, ಅರವಿಂದ ನಾಡಕರ್ಣಿ, ವಿ.ಜಿ. ಭಟ್ಟ, ಪೂರ್ಣಚಂದ್ರ ತೇಜಸ್ವಿ, ಪೇಜಾವರ ಸದಾಶಿವರಾಯ, ಸಾ.ಶಿ. ಮರುಳಯ್ಯ, ಲಕ್ಷ್ಮೀನಾರಾ ಯಣ ಭಟ್ಟ, ವೆಂಕಟರಮಣಾಚಾರ್ಯ, ಪಂಚಾಕ್ಷರಿ ಹಿರೇಮಠ, ವೇಣುಗೋಪಾಲ ಸೊರಬ, ದೊಡ್ಡರಂಗೇ ಗೌಡ, ಸುಬ್ರಹ್ಮಣ್ಯ ಅಡಿಗ, ಜಯ ಸುದರ್ಶನ, ಆರ್.ಸಿ. ಕುಲಕರ್ಣಿ,

ಮೊದಲಾದವರ ಕೃಷಿಯಿಂದ ಹಸನಾಗಿ ಹೊಸ ಸುಗ್ಗಿಯನ್ನು ಸೂರೆಗೊಟ್ಟಿದೆ ಇಂದಿನ ಕನ್ನಡ ಕಾವ್ಯ ಕ್ಷೇತ್ರ. ಈ ಚತುರ ರೂವಾರಿಗಳ ಕಲಾಕೈವಾಡದಿಂದ ಇಂದು ಕನ್ನಡ ಕಾವ್ಯ ಸಮಗ್ರವೂ ಸಂಕೀರ್ಣವೂ ಆದ ಸುಂದರ ಶಿಲ್ಪವೆನಿಸಿ ಮೆರೆದಿದೆ. ಬದುಕಿನ ಬಹು ಮುಖಗಳನ್ನು ಬಿತ್ತರಿಸುತ್ತಾ ಈ ಕವಿಗಳು ಜೀವಂತ ಸಮಸ್ಯೆಗಳಿಗೆ ಪರಿಹಾರ ಹುಡುಕ ಹೊರಟಿದ್ದಾರೆ. ವಸ್ತುವಿನ ಆಯ್ಕೆಯಲ್ಲಿ, ಛಂದಸ್ಸಿನ ಬಳಕೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯ ಇವರದ್ದಾಗಿದೆ. ಆದರೆ ಅದರಲ್ಲಿ ದೋಷಗಳಿ ಲ್ಲದಿಲ್ಲ. ಈ ನವ್ಯ ರಚನೆಯ ಆರಂಭದ ದಿನಗಳಲ್ಲಿ ಬದುಕಿನ ಬಗ್ಗೆ ಅಳತೆ ಮೀರಿದ ವಿಡಂಬನೆ, ವಿಕೃತ ಕಾಮ, ಲಯ ತಪ್ಪಿದ ನಡಿಗೆ, ಸ್ವಚ್ಛಂದದ ಹೆಸರಿನಲ್ಲಿ ಸ್ವೇಚ್ಛಾಚಾರ– ಇವೆಲ್ಲವೂ ಕಂಡುಬಂದವು. ಇಂದಿಘು ಹಲವರು ಈ ರೀತಿಯ ಸರ್ಕಸ್ ಮಾಡು ತ್ತಲೇ ಇದ್ದಾರೆ. ಆದರೆ ತೇಜಸ್ವೀ ತರುಣರ ಹುರುಪು, ಉತ್ಸಾಹಗಳಿಂದ ಹೊಸತನ ಮೈತಳೆದು ಜಗತ್ತಿನ ಇತರ ಬಾಷಾ ಸಾಹಿ ತ್ಯಕ್ಕೆ ಹೊಯ್ ಕೈ ಆಗಿ ಸಮರ್ಥವೂ ಸಮೃದ್ಧವೂ ಆಗಿ ಬೆಳೆಯುತ್ತಿದೆ ನಮ್ಮ ಕನ್ನಡ ಕಾವ್ಯ. ಸತ್ವ ಶಾಲಿಗಳ ಕೈಗೆ ಸಿಕ್ಕಿರುವುದ ರಿಂದ ನಿಜಕ್ಕೂ ಅದಕ್ಕೆ ಉಜ್ವಲ ಭವಿಷ್ಯವಿದೆ. ನವ್ಯ ಪಂಥೀಯರ ದೃಷ್ಟಿಯನ್ನು ಸಾಕಷ್ಟು ಪ್ರಮಾಣದಲ್ಲಿ ಸೆಳೆದಿರುವ ಮತ್ತೊಂ ದು ಸಾಹಿತ್ಯಪ್ರಕಾರವೆಂದರೆ ನಾಟಕ. ಟಿ.ಪಿ. ಕೈಲಾಸಂರವರಿಂದ ಕಣ್ತೆರೆದ ಕನ್ನಡ ರಂಗಭೂಮಿ, ಬಿ. ಪುಟ್ಟಸ್ವಾಮಯ್ಯ, ಗರೂಡ್, ಕಂದಗಲ್, ಹೂಗಾರ, ಮಹಾಂತೇಶ ಶಾಸ್ತ್ರೀ, ಹಿರಣ್ಣಯ್ಯ ಮೊದಲಾದರವ ಕೈಯಲ್ಲಿ ಒಂದು ಸ್ವರೂಪ ಪಡೆಯಿತು. ಅಂತೆಯೇ ಈ ಕನ್ನಡ ರಂಗಕ್ಕೆ ರಂಗು ಬಳಿದವರು ಶ್ರೀರಂಗರು. ಶ್ರೀಯುತರು ಮಾನವಸ್ವಭಾವವನ್ನು ತಂಗದ ಮೇಲಕ್ಕೆ ಸೆಳೆದು ತಂದರು. ಬದುಕನ್ನು ವ್ಯಂಗ್ಯದ ಕಿಂಡಿಯಲ್ಲಿ ಇಣುಕಿ ನೋಡಿದರು. ಆದರೆ ಕೈಲಾಸಂ ಅನಂತರ ಕನ್ನಡರಂಗಭೂಮಿಯನ್ನು ರೂಪಿಸಿಕೊಟ್ಟ ಕೀರ್ತಿ ಪರ್ವತವಾಣಿ'ಯ ವರದು. ರಂಗವನ್ನು ಮರೆಯದೆ ನಾಟಕವನ್ನು ಅಭಿನಯಕ್ಕೆ ಅಳವಡಿಸಿದವರು ಶ್ರೀ ಪರ್ವತವಾಣಿ. ಹೊಸ ತಂತ್ರ, ಹೊಸ ವಸ್ತು, ಹೊಸ ರಚನೆ ಇವುಗಳಿಂದ ನಾಟಕದ ಮೊತ್ತ ಮೊದಲಿನ ಉತ್ಸಾಹ ಆದದ್ದೂ ಇವರಿಂದ. ಇವರ ಕೂಡ ಬೆಳೆದವರು, ಬೆಳೆಸಿದ ವರು ಎ.ಎಸ್. ಮೂರ್ತಿ, ಕೆ. ಗುಂಡಣ್ಣ, ದಾಶರಥಿ ದೀಕ್ಷಿತ್, ಸಿ. ಅಂಕಪ್ಪ, ಕ್ಷೀರಸಾಗರ, ರಾಜಾರಾವ್, ಅರ್ಚಕ ವೆಂಕಟೇಶ್, ಆರ್.ಡಿ.. ಕಾಮತ್, ಕಾಶಿ ವಿಶ್ವನಾಥ ಶೆಟ್ಟಿ ಮೊದಲಾದವರು. ಪ್ರಸಾರ ನಾಟಕಗಳನ್ನು ಪಳಗಿಸಿದವರು ಎಸ್.ಎನ್. ಶಿವಸ್ವಾಮಿ, ಹೆಚ್.ಕೆ. ರಂಗನಾಥ್, ಎನ್ಕೆ, ವಸಂತಕವಲಿ, ವೈ.ಎಸ್.ಕೆ. ರಾವ್ ಮುಂತಾದವರು. ಇವರುಗಳು ಬದುಕಿನ ಬಹುಮುಖಗಳನ್ನು ರಂಗದ ಮೇಲೆ ಪ್ರದರ್ಶಿಸಿದ್ದರೆ, ಗಿರೀಶ್ ಕಾರ್ನಾಡ್‌ರವರು ಅದಕ್ಕೆ ಹೊಸ ಮುಖಗಳನ್ನು ಅಳವಡಿಸ ಹೊರಟಿದ್ದಾರೆ. ಇವರು ನಾಟಕ ತಂತ್ರಕ್ಕಿಂತಲೂ ವಸ್ತು ವಿನ್ಯಾಸದಲ್ಲಿ ವಿಶೇಷ ಕ್ರಾಂತಿ ನಡೆಸಲು ಯತ್ನಿಸಿದ್ದಾರೆ. ಆದರೆ ಈ ಯಂತ್ರಕ್ಕೆ ಯಶಸ್ಸು ಎಂದು? ಯಾವ ಪ್ರಮಾಣದಲ್ಲಿ? ಎಂದು ನಿರ್ಧರಿಸುವುದಕ್ಕೆ ದಿನಗಳು ಬಲಿಯಬೇಕು ಅನ್ನಿಸುತ್ತದೆ. ಏಕೆಂದರೆ ಕನ್ನಡ ಜನತೆ ಅಷ್ಟೇಕೆ, ಭಾರತೀಯರಲ್ಲಿ ಬಹುಪಾಲು ಜನತೆ– ಯಯಾತಿಯ ಸೊಸೆ ಕೇಳುವ ಪ್ರಶ್ನೆಗಳಿಗೆ ಸೂಕ್ತ ರೀತಿಯ ಉತ್ತರ ನೀಡಲು ಸಿದ್ದರಿರು ವರೆ? ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಉತ್ತಮ ನಿದರ್ಶನವೆಂದರೆ ಹಿಟ್ಟಿನ ಹುಂಜದ ದ್ವಿತೀಯ ಪ್ರದರ್ಶನಕ್ಕೆ ದೆಹಲಿಯಲ್ಲಿ ಪ್ರತಿ ಭಟನೆ ಬಂದದ್ದು. ಅದು ನಮ್ಮಲ್ಲಿರುವ ರೂಢ ಮೂಲವಾದ, ಸಿದ್ಧ ಭಾವನೆಗಳಿಗೆ ಒಡ್ಡಿದ ಸಾಕ್ಷಿ– ಎಂದು ಹೇಳಬಹುದು. ನಮ್ಮೂರು ಅಮೇರಿಕದಷ್ಟು ಅಡ್ವಾನ್ಸ್ ಆಗಿಲ್ಲ; ಅವರ ಧೋರಣೆ ಇವರಿಗೆ ಹಿಡಿಸಿಲ್ಲ ಎಂದಿಷ್ಟೇ ಹೇಳಬಹುದಾಗಿದೆ. ಇಂದು ಗಿರೀಶ್ ಕಾರ್ನಾಡ್ ಮತ್ತು ಕೆಲವು ಅಬ್ಸರ್ಡಗಳ ನಡುವೆ ಹೆಚ್.ಕೆ. ರಾಮಚಂದ್ರಮೂರ್ತಿ ನಿಲ್ಲುತ್ತಾರೆ. ಇಂಗ್ಲಿಷಿನಿಂದ ಪ್ರೇರಿತರಾಗಿ, ಕನ್ನಡದ ಜಾಯಮಾನಕ್ಕೆ ಹೊಂದಿಕೊಳ್ಳುವಂತಹ ರೀತಿಯಲ್ಲಿ ಸನ್ನಿವೇಶಗಳನ್ನು ಅಳವಡಿಸಿ ನಾಟಕ ರಚನೆ ಮಾಡಿ ದ್ದಾರೆ. ಇವರ ಸಾಂಕೇತಿಕ ನಾಟಕವೂ ಸಹಜತೆಯನ್ನು ನೀಗಿಕೊಂಡಿಲ್ಲ. ಈಗ ಅಬ್ಸರ್ಡ್‌ಟ್ಟಕ್ಕತಲೆಯ ನರ್ತಕಿ, ಕೊಡೆಗಳು, ಅಪ್ಪ, ಬಿರುಕು, ಟಿ.ಪ್ರಸನ್ನನ ಗೃಹಸ್ಥಾಶ್ರಮ, ನನ್ನ ತಂಗಿಗೊಂದು ಗಂಡು ಕೊಡಿ, ಆಚಿಟಿ ಮಿಂಟಿ ಚಾವಲ್ ಚಿಂಟಿ, ಯಮಳ ಪ್ರಶ್ನೆ ಇವು ಕೆಲವು. ಏಕೋ ಏನೋ ಇವಕ್ಕಿನ್ನೂ ಸರಿಯಾದ ಸ್ವಾಗತ ದೊರೆತಂತಿಲ್ಲ. ಬಹುಶಃ ಈ ಅಸಂಗತಗಳಲ್ಲಿ ನಮ್ಮ ಮಣ್ಣಿನ ವಾಸನೆ ಅಷ್ಟಾಗಿ ಇರಲಿಕ್ಕಿಲ್ಲ. ಕೆಲವು ಆಮದಾಗಿ ಬಂದವುಗಳು ಎನಿಸುತ್ತದೆ. ಕೆಲವಂತೂ ಗಿಲೀಟು ಮಾಲುಗಳು. ಮತ್ತೆ ಕೆಲವು ತಾಯೆದೆಯ ಪೀಯೂಷದಿಂದ ಬೆಳೆದ ಕಂದಗಳಲ್ಲ. ದಾದಿ ಕೊಟ್ಟ ಫೀಡಿಂಗ್ ಬಾಟ್ಲಿನ ನೀರುಹಾಲು ಚಪ್ಪರಿಸುವ ಕಂದಗಳು. ಅವಕ್ಕೆ ಇನ್ನೂ ಶಕ್ತಿ ಸಾಲದು. ಅದರೂ ಉತ್ಸಾಹೀ ಬರಹಗಾರರ ನಿರಂತರ ಯತ್ನ ಪ್ರಶಂಸನೀಯವಾದದ್ದು.

ನವ್ಯ ಪಂಥೀಯರ ದಾಳಿಗೆ ನಾಟಕದಷ್ಟೇ ಪ್ರಮಾಣದಲ್ಲಿ ಸಣ್ಣಕತೆಯೂ ಬಲಿಯಾಗಿದೆ ಎನ್ನಬಹುದು. ಕನ್ನಡದಲ್ಲಿ ಸಣ್ಣಕತೆಯ ಸ್ವರೂಪ ಗೋಚರವಾದದ್ದು ಮಾಸ್ತಿಯವರಿಂದ. ಈ ಕ್ಷೇತ್ರದಲ್ಲಿ ನೂರಾರು ಜನ ಲೇಖಕ ಲೇಖಕಿಯರು ಕೃಷಿ ನಡೆಸಿದ್ದಾರೆ. ಅಂತೆ ಯೇ ಇಂದು ತ.ರಾ.ಸು, ತೇಜಸ್ವೀ, ಅನಂತಮೂರ್ತಿ, ಸದಾಶಿವ, ಶಂತಿನಾಥ ದೇಸಾಯಿ, ಚಿತ್ತಾಲ, ಡಿ. ಲಿಂಗಯ್ಯ, ಸುಧಾಕರ, ವ್ಯಾಸರಾಯ ಬಲ್ಲಾಳ, ಖಾಸನೀಸ, ಗಿರಡ್ಡಿ ಗೋವಿಂದರಾಜ, ಈ ಕೆಲವು ನವ್ಯ ಬರಹಗಾರರ

ಕೈಯಲ್ಲಿ ಸಣ್ಣಕತೆ ತನ್ನ ಸೌಂದ ರ್ಯವನ್ನು ಹೆಚ್ಚಿಸಿಕೊಂಡಿದೆ. ಈ ನವ್ಯದವರು ಮಾನಸಿಕ ತಾಕಲಾಟವನ್ನು ತೆಗೆದು ಎಲ್ಲರ ಅಂಗೈ ಮೇಲೂ ಬಡಿಸುವ ಯತ್ನ ನಡೆಸಿದ್ದಾರೆ. ಸೊಗಡು ತುಂಬಿದ ಸಾಂಕೇತಿಕತೆ ಇವರಲ್ಲಿ ಸಾರ್ಥಕ ಪಡೆದಿದೆ. ಈ ಕಾರ್ಯ ಹೆಚ್ಚು ಪ್ರಮಾಣದಲ್ಲಿ ನಡೆದಿರದಿ ದ್ದರೂ ಆಗಿರುವಷ್ಟು ಮಟ್ಟಿಗೆ ಅಚ್ಚುಕಟ್ಟಗಿದೆ; ತುಂಬಾ ಸುಂದರವಾಗಿದೆ. ಈ ದಿಸೆಯಲ್ಲಿ ಹೆಚ್ಚಿನ ಪ್ರಗತಿ ಆಗಬೇಕೆಂಬುದೇ ಎಲ್ಲ ಕನ್ನಡಿಗರ ಹಾರಯಿಕೆ. ಬಹು ಜನಪ್ರಿಯವಾದ ಬಹು ದೊಡ್ಡ ಕ್ಷೇತ್ರವೆಂದರೆ ಕಾದಂಬರಿ. ಎಂ.ಎಸ್. ಪುಟ್ಟಣ್ಣನವರ ಅನಂತರ ದಲ್ಲಿ ಸ್ವತಂತ್ರ ಸಾಮಾಜಿಕ ಕಾದಂಬರಿಗಳು ನಮ್ಮಲ್ಲಿ ವಿಫುಲವಾಗಿ ಬೆಳೆದವು. ಕೋಟ ಶಿವರಾಮ ಕಾರಂತ, ಕುವೆಂಪು, ಶ್ರೀನಿವಾಸ ಉಡುಪ– ಇವರವು ಪ್ರದೇಶಿಕ ಕಾದಂಬರಿಗೆ ವ್ಯಾಖ್ಯಾನ ರಚಿಸಿದ್ದರ, ತ್ರಿವೇಣೀಯವರವು ಮನಶಾಸ್ತ್ರಕ್ಕೆ ಆಹಾರ ಒದಗಿಸುತ್ತವೆ. ತಂತ್ರದ ದೃಷ್ಟಿಯಿಂದ ಗಣೀಸಿದರೆ ತ.ರಾ.ಸು.ರವರ 'ಹಂಸಗೀತೆ', ಕಾರಂತರ 'ಅಳಿದ ಮೇಲೆ' ಇವು ಅನ್ಯಾದೃಶ್ಯವಾದವು. ದೇವುಡುರವರ ಪೌರಾಣೀಕ ಕಾದಂಬರಿಗಳು, ವೀರಕೇಸರಿ, ಕೊರಟಿ ಮೊದಲಾದವರ ಐತಿಹಾಸಿಕ ಕಾದಂಬರಿಗಳು, ಅ.ನ.ಕೃ, ತ.ರಾ.ಸು., ಭೈರಪ್ಪ, ಪುರಾಣೀಕ, ಚಡಗ, ನಿರಂಜನ, ಅನಂತನಾರಾಯಣ ಇವರ ಸಾಮಾಜಿಕ ಕಾದಂಬರಿಗಳು, 'ಖೊ' ಪ್ರಾಯೋಗಿಕ ಕಾದಂಬರಿಯೂ ಪತ್ತೇ ದಾರಿಗಳೂ ನಮ್ಮಲ್ಲಿ ಇವೆ. ಕನ್ನಡ ಕಾದಂಬರಿ ಸಾರ್ವಭೌಮರೆನಿಸಿದ ಅ.ನ.ಕೃ ಮತ್ತು ಜ್ವಾಲಾಮುಖಿ ಕಟ್ಟೀಮನಿ, ಇವರ ಮಿತ್ರ ರು ಹಲವರು ಪ್ರಗತಿಶೀಲ ಸಾಹಿತಿಗಳೆಂದು ವಿಖ್ಯಾತರಾದವರು. ವಸ್ತು, ಕಥಾಸಂವಿಧಾನ, ರಚನೆ, ಮಾತು, ಪಾತ್ರ ಮೊದಲಾದವುಗಳಲ್ಲಿ ಮಡಿತನವನ್ನಿಟ್ಟು ಕೊಳ್ಳದ ಪ್ರಚಂಡ ಕ್ರಾಂತಿವಾದಿಗಳು ಇವರು. ಅಂತೆಯೇ ಇದೇ ಪ್ರಗತಿಪಥದಲ್ಲಿ ಇನ್ನೂ ಒಂದು ಹೆಜ್ಜೆಯನ್ನು ಮುಂದಿಟ್ಟವರು ಯು.ಆರ್. ಅನಂತಮೂರ್ತಿ. ನೀಳ್ಗತೆಯಂತಿರುವ ಅವರ ಕಿರು ಕಾದಂಬರಿ "ಸಂಸ್ಕಾರ" ಇಲ್ಲಿ ಉಲ್ಲೇಖನೀಯ. ಕಾರಂತರ "ಮರಳಿ ಮಣ್ಣಿಗೆ", ಕುವೆಂಪುರವೆ "ಕಾನೂರ ಹೆಗ್ಗಡಿತಿ" ಮತ್ತು "ಮಲೆಗಳಲ್ಲಿ ಮದುಮಗಳು" ರಾವಬಹದ್ದೂರರ "ಗ್ರಾಮಾಯಣ" ಮುಗುಳಿಯವರ "ಕಾರಣ ಪುರುಷ" ವಿನಾಯಕರ "ಸಮರಸವೇ ಜೀವನ" ಅಣ್ಣಾರಾಯರ "ನಿಸರ್ಗ" ಅಯ್ಯರವರ "ಶಾಂತಲಾ" ಮೊಕಾಶಿಯವರ "ಗಂಗವ್ವ ಗಂಗಾಮಾಯಿ" ಅ.ನ.ಕೃ.ರವರ "ಸಂಧ್ಯಾರಾಗ" ತ.ರಾ.ಸು.ರವರ "ಹಂಸಗೀತೆ" ಕಟ್ಟೀಮನಿಯವರ "ಮಾಡಿ ಮಡಿದವರು" ಇವು ಪ್ರಾಚೀನ ಮಹಾಕಾವ್ಯಗಳ ಸ್ಥಾನದಲ್ಲಿ ಇಂದು ನಿಲ್ಲಬಲ್ಲ ಮಹಾ ಕಾದಂಬರಿಗಳು.

ವಿಮರ್ಶೆ ನಮ್ಮಲ್ಲಿ ಹೆಚ್ಚಾಗಿ ಬೆಳೆದಿಲ್ಲ ಎಂಬ ಮಾತನ್ನು ಒಪ್ಪುತ್ತೇನೆ. ಆದರೆ ಕೆ.ಡಿ. ಕುರ್ತುಕೋಟಿ ಮತ್ತು ಹಾ.ಮಾ. ನಾಯಕ ರಂತಹ ನಿರ್ದಾಕ್ಷಿಣ್ಯಪರ ಅಧಿಕಾರೀ ವಿಮರ್ಶಕರಿದ್ದಾರೆ. ಡಾ.ಕೆ. ಕೃಷ್ಣಮೂರ್ತಿಯವರು ಸಂಸ್ಕೃತ ಮೀಮಾಂಸಕರನ್ನೂ ಸಿ.ಪಿ.ಕೆ. ಯವರು ಪಾಶ್ಚಾತ್ಯ ಕಾವ್ಯ ಚಿಂತನವನ್ನೂ ಜಿ.ಎಸ್. ಶಿವರುದ್ರಪ್ಪನವರು "ವಿಮರ್ಶೆಯ ಪೂರ್ವ–ಪಶ್ಚಿಮ"ಗಳನ್ನು ಕನ್ನಡಕ್ಕೆ ಕೊಟ್ಟಿದ್ದಾರೆ. ಎಲ್.ಎಸ್. ಶೇಷಗಿರಿರಾಯರು ಪ್ರಾಯೋಗಿಕ ವಿಮರ್ಶೆಯನ್ನು ಬೆಳೆಸಿದ್ದಾರೆ. ಕುವೆಂಪು, ಮಾಸ್ತಿ, ರಂಗಣ್ಣ, ವಿ.ಸೀ. ಗೋಕಾಕ ಮೊದಲಾದವರು ವಿಮರ್ಶೆಯ ಹಾದಿ ತೋರಿಸಿದ್ದಾರೆ. ಡಾ.ಜಿ.ಎಸ್. ಶಿವರುದ್ರಪ್ಪನವರ "ಗತಿಬಿಂಬ" ಒಂದು ನೂತ ನ ಸಿದ್ಧಾಂತ– ವಿಶ್ವದ ವಿಮರ್ಶಾಕ್ಷೇತ್ರಕ್ಕೆ ಕನ್ನಡಿಗನೊಬ್ಬನ ನೂತನ ವಿಚಾರ ಕಾಣೀಕೆ ಎಂದು ಹೇಳಬಹುದು.

ಶ್ರೀ ರಾಮಾಯಣದರ್ಶನಂ ಹುಟ್ಟಿದ ನೆಲದಲ್ಲಿ ಒಳ್ಳೆಯ ಬೆಳೆಯೂ ಕೆಟ್ಟ ಬೆಳೆಯೂ ಬೆಳೆದಿವೆ. ನಮ್ಮಲ್ಲಿ ತುಪ್ಪದ ಆಸೆಗೆ ಎಂಜ ಲೆಲೆ ನೆಕ್ಕಿದ ನಿರ್ಮೋಹಿಗಳದ್ದಾರೆ. ಹುಲಿಯನ್ನು ಬೆಕ್ಕೆಂದು ಕರೆದು ಬಾಯ ಚಪಲ ತೀರಿಸಿಕೊಂಡವು ಕೆಲವು. ""ಅಹೋ ಗಾನಂ! ಅಹೋ ರೂಪಂ!" ಡಂದು ಪರಸ್ಪರ ಪ್ರಶಂಸಾಹಾರ ಹಾಕಿಕೊಂಡವು ಕೆಲವು. ಈ ಜಾತಿಯ ಸಾಹಿತ್ಯವನ್ನು ಈರ್ಷ್ಯಾ ಸಾಹಿತ್ಯ, ಪ್ರಶಂಸಾ ಸಾಹಿತ್ಯ ಎಂದು ಕರೆದಿದ್ದೇನೆ. ಈರ್ಷೆಯಿಂದ ವಿಷ, ಪ್ರಶಂಸೆಯಿಂದ ಅಮೃತ ಹುಟ್ಟುವುದು ಸಹಜ. ಚಿತ್ತಸ್ವಾಸ್ಥ್ಯೆಯನ್ನು ನೀಗಿಕೊಂಡ ಸಾಹಿತಿಗಳು ವೈಯುಕ್ತಿಕವಾಗಿ ಟೀಕೆ, ನಿಂದೆ, ದೂಷಣೆಗಳನ್ನು ಮಾಡುವ ಮಟ್ಟಕ್ಕೂ ಇಳಿದರು. ಪರಿಣಾಮವಾಗಿ ಜಾತೀಯತೆ, ವ್ಯಕ್ತಿ ದ್ವೇಷ, ರಾಜಕೀಯ ಗುಂಪುಗಾರಿಕೆ, ಹಲವು ವೇಳೆ ಗೂಂಡಾಗಿರಿಯೂ ಗುಡುಗಾಡಿದ್ದುಂಟು ನಮ್ಮ ಸಾಹಿತ್ಯ ಕ್ಷೇತ್ರದಲ್ಲಿ. ಇದು ಸಾಹಿತ್ಯಕ್ಕೆ ಆರೋಗ್ಯ ತರುವಂಥದಲ್ಲ ಎಂಬ ಅಂಶವನ್ನು ಎಲ್ಲ ಸಾಹಿತಿಗಳೂ ಮನಗಂಡರೆ ಸಾಕು. ಈರ್ಷ್ಯಾ ಸಾಹಿತ್ಯವನ್ನು ಒಂದೆಡೆ ತೆಗೆದಿರಿಸಿ ಪ್ರಶಂಸಾ ಸಾಹಿತ್ಯವನ್ನೇ ಗಣೀಸಿದರೆ ಅದು ಕನ್ನಡಕ್ಕಾಗಿ ದುಡಿದ, ದುಡಿಯುತ್ತಿರುವ ಹಲವು ಚೇತನಗಳನ್ನು ಗುರುತಿಸಿ ಗೌರವಿಸುವ ಪುಣ್ಯಕಾರ್ಯದಲ್ಲಿ ತೊಡಗಿರುವುದು ಕಂಡುಬರುತ್ತದೆ. ಆಚಾರ್ಯ "ಶ್ರೀ" ಯವರಿಗೆ ನೀಡಿದ ಸಂಭಾವನೆಯ ಅನಂತರ, ಬಾಗಿನ ಉಡುಗೊರೆ, ಗಂಗೋತ್ರಿ, ಉಪಾಯನ, ಕಾರಂತ ಪ್ರಪಂಚ, ದೇಜಗೌ–ವ್ಯಕ್ತಿ ಮತ್ತು ಸಾಹಿತ್ಯ, ದೇವಗಂಗೆ, ದೀವಿಗೆ, ಅರ್ಪಣೆ, ತೀನಂಶ್ರೀ, ವಚನ ಪಿತಾಮಹ, ಪಂಜೆಯವರ ನೆನಪಿಗಾಗಿ, ಸವಿನೆನಪು ಮುಂತಾದ ಹತ್ತಾರು ಪ್ರಶಸ್ತಿ ಗ್ರಂಥಗಳು ಬೆಳಕು ಕಂಡವು. ನಾಡು ನುಡಿಗಳಿಗಾಗಿ

ದುಡಿದ ಹಿರಿಯ ಜೀವಿಗಳಾದ ಸ.ಸ. ಮಾಳ ವಾಡರಿಗೂ, ಎಸ್.ಎಸ್. ಭೂಸನೂರಮಠ– ಇವರಿಗೂ ಸಂಭಾವನಾ ಗ್ರಂಥಗಳು ರೂಪುಗೊಳ್ಳುತ್ತಿವೆ. ಈ ರೀತಿಯಲ್ಲಿ ಕೃತಿ ಮೂಲಕ ಸಾಹಿತಿಗಳನ್ನು ಗೌರವಿಸುವ ಆದರ್ಶ ಸಂಪ್ರದಾಯದಿಂದ ಬರಹಗಾರರಲ್ಲಿ ಸ್ನೇಹ, ಸೌಹಾರ್ದಗಳು ಬೆಳೆಯಲು ಅವಕಾಶವಾಗುತ್ತದೆ.
ಒಂದು ಶತಮಾನಕಾಲ ಶ್ರಮಿಸಿದ್ದರೂ ಸಾಧ್ಯವಾಗದಿದ್ದಷ್ಟು ಪ್ರಮಾಣದ ದುಡಿಮೆ ಒಂದೇ ದಶ ಕದಲ್ಲಿ ಮುಗಿದಿದೆ ಕನ್ನಡದಲ್ಲಿ. ಇಂಗ್ಲಿಷ್ ಸಾಹಿತ್ಯ ಸಂಪರ್ಕದಿಂದ ಕನ್ನಡ ಸಾಹಿತ್ಯ ಹೊಸ ರೂಪು ಹೊಸ ವೇಷಗಳನ್ನು ಪಡೆದಿದ್ದರೂ ಇಂದು ಯಾವ ವಿಧದಿಂದಲೂ ಅದಕ್ಕೆ ತೊತ್ತಾಗಿಲ್ಲ. ಎಲ್ಲೆಡೆಯೂ ತನ್ನತನವನ್ನು ಉಳಿಸಿಕೊಂಡು ಬೆಳೆದಿದೆ. ಅಷ್ಟೇ ಅಲ್ಲ, ಇಂದು ಬೇಕಾದರೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಇಂಗ್ಲಿಷ್ ಸಾಹಿತ್ಯಕ್ಕೆ ಸಾಲ ಕೊಡುವಷ್ಟು ಶ್ರೀಮಂತವಾಗಿದೆ. ಈ ದಶಕದಲ್ಲಿ ಸೃಷ್ಟಿಯಾದ ಆಗುತ್ತಿರುವ ಸಾಹಿತ್ಯವಂತೂ ಎಲ್ಲರನ್ನೂ ಅಚ್ಚರಿಗೊಳಿಸುವಷ್ಟು ಅದ್ಭುತವಾಗಿ ಬೆಳೆದಿದೆ. ಕೃತಕ ಮೌಲ್ಯಗಳನ್ನು ಖಂಡಿಸಿ, ಸಮಕಾಲೀನತೆಗೆ ಬದ್ಧವಾಗಿ ಮಾನವ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಿದೆ; ಅಥವಾ ಸೃಷ್ಟಿಸುತ್ತದೆ. ಬದುಕಿನ ಬಗ್ಗೆ ಬಹು ಗಂಭೀರವಾದ ದೃಷ್ಟಿ ತಳೆದಿದೆ. ಹಿಂದೆಂದೂ ಕಾಣಸಿಗದ ಶುದ್ಧ ರೂಪ ಇಂದು ನಮ್ಮ ಸಾಹಿತ್ಯದಲ್ಲಿ ಸಿಗುತ್ತಿದೆ. ಸಾವಯವ ಶಿಲ್ಪ, ಸಮಗ್ರೀಕರಣ, ಭಾಷೆಯಲ್ಲಿ ಭಾವಾಭಿನಯ ತರುವುದು. ಪದ ಹಾಗೂ ಪದ ಪ್ರಯೋಗಗಳಲ್ಲಿ ವಿಶೆಷ ಎಚ್ಚರಿಕೆ ವಹಿಸು ವುದು, ಪದದ ಅರ್ಥವನ್ನೂ ಬದುಕಿನ ಅರ್ಥವನ್ನೂ ಬಿಡಿಸಿ ಬಿಡಿಸಿ ತೋರುವುದು– ಇವೆಲ್ಲಾ ಇಂದಿನ ಹೊಸ ಪ್ರವೃತ್ತಿಯ ಹೊಸ ಕಾವ್ಯದ ಅಂತಸ್ಸತ್ವಗಳು. ವಚನಕಾರರ ಅನಂತರ ಆಡುಭಾಷೆಯನ್ನು ಇಷ್ಟು ಚೆನ್ನಾಗಿ ದುಡಿಸಿಕೊಂಡ ಕೀರ್ತಿ ನಮ್ಮ ಹೊಸ ಬರಹಗಾರರಿಗೆ ಸಲ್ಲುತ್ತದೆ. ಒಟ್ಟಿನಲ್ಲಿ, ನಮ್ಮ ಕನ್ನಡ ಸಾಹಿತ್ಯ ಸರ್ವಾಂಗ ಸುಂದರವಾಗಿ, ಸರ್ವತೋಮುಖವಾದ ಪ್ರಗತಿಯನ್ನು ಸಾಧಿಸಿ ತೋರಿಸಿದೆ.

# ಷಡಕ್ಷರದೇವನ ಕೃತಿಗಳಲ್ಲಿ ಗುಣದೋಷಗಳು

ಭಾರತೀಯ ಸಾಹಿತ್ಯದಲ್ಲಿ 'ಮೀಮಾಂಸೆ' ಬೆಳೆದಷ್ಟು ಪ್ರಮಾಣದಲ್ಲಿ 'ವಿಮರ್ಶೆ' ಬೆಳೆಯಲಿಲ್ಲ. ಅಂದರೆ ಕಾವ್ಯ ಎಂದರೇನು? ಕವಿ ಎಂದರೆ ಯಾರು? ಅವನಿಗಿರುವ ಅರ್ಹತೆಗಳಾವುವು? ಕಾವ್ಯ ಸೃಷ್ಟಿಗೆ ಕಾಱಣಗಳಾವುವು? ಕಾವ್ಯದಲ್ಲಿ ಯಾವುದು ಮುಖ್ಯ? ಯಾವುದು ಅಮುಖ್ಯ- ಇತ್ಯಾದಿ ಜಿಜ್ಞಾನಸೆ ನಿರಂತರವಾಗಿ ನಡೆದು, ಕಾವ್ಯಕ್ಕೆ ಸಂಬಂಧಿಸಿದ ಸಾಮಾನ್ಯ ಸೂತ್ರ ಗಳನ್ನು ಸೃಷ್ಟಿಸಿರುವುದು ಕಂಡುಬರುತ್ತದೆಯೇ ಹೊರತು, ಪಾಶ್ಚಾತ್ಯರಂತೆ ಸಹೃದಯನೊಬ್ಬನು ಓರ್ವ ಕವಿಯ ಒಂದು ಕೃತಿ ಯನ್ನು ಎತ್ತಿಕೊಂಡು, ಆಮೂಲಾಗ್ರವಾಗಿ ಓದಿ ಆಸ್ವಾದಿಸಿ, ವಿವೇಚಿಸಿ, ವಿಶ್ಲೇಷಿಸಿ ಗುಣವಿದ್ದಲ್ಲಿ ಮೆಚ್ಚುಗೆ ಸೂಚಿಸಿ, ದೋಷವಿ ದ್ದಲ್ಲಿ ಖಂಡಿಸಿ, ಕೃತಿಯ ಬೆಲೆ ಕಟ್ಟುವ ಕಾರ್ಯ ಅಷ್ಟಾಗಿ ನಡೆಯಲಿಲ್ಲ. ಅದಕ್ಕೆ ಕಾರಣ ಇಲ್ಲದಿಲ್ಲ. ಮುಖ್ಯವಾಗಿ ಭಾರತೀಯ ವಾದ ಪ್ರಾಚೀನ ಸಾಹಿತ್ಯ ಹುಟ್ಟಿದ್ದು ಗುರುಮನೆಯಲ್ಲಿ. ಪವಿತ್ರವೂ, ಪ್ರಶಾಂತವೂ ಆದ ತರಂಗಿಣ಼ಿಯ ತೀರದ ಪುಣ್ಯಾಶ್ರಮದಲ್ಲಿ. ಕೃತಿ ರಚಿಸುತ್ತಿದ್ದವರು ದಿವ್ಯ ದಾರ್ಶನಿಕರಾದ ರಸ್ಯಷಿಗಳು. ಅವರು ತುಂಬು ಜೀವನವನ್ನು ಅನುಭವಿಸಿದ ಅನುಭಾವಿಗಳಾದರೂ ವಿಶೇಷವಾಗಿ ಆಧ್ಯಾತ್ಮ ಕ್ಷೇತ್ರ ವಿಹಾರಿಗಳಾದ್ದರಿಂದ ಲೌಕಿಕ ಆಮಿಷಗಳಿಂದ ಸಾಕಷ್ಟು ದೂರ ನಿಂತರು. ಅದರಿಂದಾಗಿ ಅವರ ಕೃತಿ ಗಳು ವಿಶೆಷವಾಗಿ ವಾಸ್ತವತೆಯನ್ನು ಬಿತ್ತರಿಸುವ ಬದಲು ಆದರ್ಶವನ್ನು ಎತ್ತಿ ಹಿಡಿದವು. ದಿವ್ಯದ್ರಷ್ಟಾರರ ಆತ್ಮಜ್ಯೋತಿಯ ಪ್ರಭೆ ಯಿಂದ ಮೂಡಿಬಂದ ತಪೋಭೂಮಿಯ ತೀರ್ಥ ಸಾಹಿತ್ಯದಲ್ಲಿ ಕಸ, ಕಿಲ್ಬಿಷವೇ ಮೊದಲಾದ ದೋಷವನ್ನು ಹುಡುಕುವ ಕ್ಷುಲ್ಲಕ ಕೆಲಸಕ್ಕೆ ಯಾರೂ ಮನಸ್ಸು ಮಾಡಲಿಲ್ಲ.

ಆಶ್ರಮ ಸಾಹಿತ್ಯ ಹೀಗಿದ್ದರೆ ಆಶ್ರಿತ ಸಾಹಿತ್ಯ ಬೇರೆ ಬಣ್ಣಗೊಂಡಿದೆ. ಕಾಲ ಉರುಳಿ ದಂತೆ ನಮ್ಮ ಭಾರತೀಯ ಸಾಹಿತ್ಯ ಗುರುಮ ನೆಯನ್ನು ಬಿಟ್ಟು ಅರಮನೆಗೆ ಕಾಲಿರಿಸಿತು. ಕೂಡಲೇ ಅರಮನೆಯ, ಅದರ ನೆರೆಮ ನೆಯ ಅಲ್ಪತ್ವವೆಲ್ಲಾ ಅದಕ್ಕೆ ಸಹಜವಾಗಿಯೇ ಅಂಟಿಕೊಂಡಿತು ನಿಜ. ಆದರೆ ಅದು ಸಹಜವಾಗಿ, ಸ್ಪಷ್ಟವಾಗಿ ಅಂದಿನ ಸಾಹಿತ್ಯ ದಲ್ಲಿ ಮೂಡಲಿಲ್ಲ.ಕಾರಣ ಕವಿಗಳೂ ರಾಜ ರಂತೆ ಭೋಗಾಸಕ್ತರಾದ್ದರಿಂದ, ಇಲ್ಲವೇ ಆಳ್ದವನ ಮರ್ಜಿಗೆ ತಕ್ಕಂತೆ ಮೊಳ ಹಾಕಿದ್ದರಿಂದ, ಅಂತಹ ಬರಹವನ್ನು ಪ್ರಶ್ನಿಸುವ ಅಧಿಕಾರ ಯಾರಿಗೂ ಇರುತ್ತಿರಲಿಲ್ಲ.

ಆಶ್ರಿತ ಸಾಹಿತ್ಯದಲ್ಲಿ ವಿಮರ್ಶೆ ಬೆಳಯದಿರಲು ಮತ್ತೊಂದು ಕಾರಣವೆಂದರೆ ಯಾವುದೇ ಕಾವ್ಯ ಪ್ರಸಿದ್ಧಿ ಪಡೆಯಬೇಕಾಗಿದ್ದರೂ, ಅದು ಆಸ್ಥಾನದ ಪಂಡಿತಮಂಡಳಿಯಿಂದ 'ಅಸ್ತು' ಅನ್ನಿಸಿಕೊಳ್ಳಬೇಕಾಗಿತ್ತು. ಈ ಒರೆ ಗಲ್ಲಿಗೆ ಹೋಗುವ ಮುನ್ನ ಕೃತಿಸುವರ್ಣ ಸಾಕಷ್ಟು ಪಾರಿಶುದ್ಧ್ಯವನ್ನು ಪಡೆದಿರಲೇ ಬೇಕಾಗುತ್ತಿತ್ತು. ಈ ಕಾರಣದಿಂದ ಕವಿ ಸಾಕಷ್ಟು ಮುನ್ನೆಚ್ಚರಿಕೆ ವಹಿಸಿ ಮೈಯೆಲ್ಲಾ ಕಣ್ಣಾಗಿ ಕಾವ್ಯ ರಚನೆ ಮಾಡುತ್ತಿದ್ದ. ಯುಗಧರ್ಮಕ್ಕೆ, ರಾಜಧರ್ಮಕ್ಕೆ, ಮಣ಼ಿದೇ ಅವನ ಕಾವ್ಯ ಮೆರೆಯಬೇಕಾಗಿತ್ತು. ಅಂತೆಯೇ ಆಸ್ಥಾನಕವಿ ಪ್ರಾಚೀನ ಮೀಮಾಂಸಕರ ಸಿದ್ಧಾಂತಗಳಿಗೆ ವಿರುದ್ಧವಾಗದ ರೀತಿ ಯಲ್ಲಿ ಪ್ರತಿಭೆ, ವ್ಯುತ್ಪತ್ತಿ, ಅಭ್ಯಾಸ ಇವುಗಳಿರಲಿ, ಇಲ್ಲದಿರಲಿ ಲೆಕ್ಕಾಚಾರವಾಗಿ ವರ್ಣನೆ, ವಿಸ್ತಾರ ಮೊದಲಾದವುಗಳನ್ನು ತಂದು, ತಪ್ಪಿದ್ದರೂ ತನ್ನದು 'ಒಪ್ಪು' ಎಂದು ಸಮರ್ಥಿಸಿಕೊಳ್ಳುಯತ್ತಿದ್ದ. ಅದಕ್ಕೆ ಅವಕಾಶವೂ ಇತ್ತು. ನಮ್ಮ ಪ್ರಾಚೀನ ಕಾವ್ಯಗಳು ವಿಶೇ ಷವಾಗಿ ವಸ್ತು ನಿಷ್ಠ ಕಾವ್ಯಗಳು.(objective) ಸಮಕಾಲೀನ ವ್ಯಕ್ತಿ ಶಕ್ತಿಗಳ ಬಾಳು ಅಷ್ಟಾಗಿ ಅಲ್ಲಿ ಬಿತ್ತರಗೊಳ್ಳುತ್ತಿರಲಿಲ್ಲ. ಪುರಾಣ ಪ್ರಸಿದ್ಧ ಪಾತ್ರಗಳನ್ನೇ ಸಾಂಕೇತಿಕವಾಗಿ ಬಳಸಿಕೊಂಡು ಕಾವ್ಯ ರಚಿಸುತ್ತಿದ್ದರಿಂದಲೂ, ಕಾವ್ಯ ಕೆಲವರಿಗೆ ಮಾತ್ರ ಸಿಗುತ್ತಿದ್ದು ಸಾಮಾನ್ಯರ ಪಾಲಿಗೆ ಅದು ಮೊಲದ ಕೊಂಬಾದ್ದರಿಂದಲೂ, ಕಾವ್ಯಾಭ್ಯಾಸ ಕಾವ್ಯವನ್ನು ಕುರಿತ ವಿಮರ್ಶೆ- ಇವುಗಳ ವ್ಯಾಪ್ತಿ ಕಿರಿದಾಗಿ, ಕಾವ್ಯವಿಮರ್ಶೆ ಹುಟ್ಟಲಾಗಲಿಲ್ಲ. ಭಾರತೀಯ ಸಾಹಿತ್ಯದ ವಸ್ತು ದೈವ ಇಲ್ಲವೇ ಧರ್ಮ. ಅದರಲ್ಲಿ ಬದುಕಿನ ಬಹುಮುಖಗಳನ್ನು ಬಿತ್ತರಗೊಂಡಿದ್ದರೂ ಮಾನವಸಹಜವಾದ ದೌಷ್ಟ್ಯ, ದೌರ್ಜನ್ಯಗಳೂ, ಮಾನಸಿಕ ಸುಗು ಣಗಳಿಗಿಂತ ಮಿಗಿಲಾಧ ದುರ್ಗುಣಗಳ ವೈವಿಧ್ಯತೆ, ವಿಶಿಷ್ಟತೆ, ಅವುಗಳ ಸಂಕೀರ್ಣತೆ ಮೊದಲಾದವು ಅಲ್ಲಿ ಹೆಚ್ಚು ಸುಳಿಯಲಿಲ್ಲ; ಬೆಳೆಯಲಿಲ್ಲ; ಬೆಳೆದರೂ ಬರೆಯಲೂ ಇಲ್ಲ. ಬರೆದದ್ದು ಏನೇ ಇರಲಿ ಅದರಲ್ಲಿ ಒಂದಕ್ಷರವನ್ನು ಕೇಳಿದರೆ ಸಾಕು ಕೈವಲ್ಯ ಲಭಿ ಸುತ್ತದೆ ಎಂಬ ಮೋಕ್ಷರಕ್ಷೆ ಇದ್ದುದರಿಂದ ಕೃತಿಗಳಲ್ಲಿ ದೋಷಗಳಿದ್ದರೂ ಅದನ್ನು ಹಣ಼ಿಸಿ, ಗುಣ಼ಿಸಿ, ಪ್ರಚುರಪಡಿಸಿ ಪಾಪವನ್ನಾ ಚರಿಸಿ ನರಕಕ್ಕೆ ಹೋಗುವ ಸಾಹಸಕ್ಕೆ ಯಾರೂ ಕೈ ಹಾಕಲಿಲ್ಲ.

ಗುರುಮನೆ ಮತ್ತು ಅರಮನೆ ಸಾಹಿತ್ಯ ಹುಟ್ಟಿದಾಗ ಪ್ರಿಂಟಿಂಗ್ ಹುಟ್ಟಿರಲಿಲ್ಲ. ಕೈಬರಹದಲ್ಲೇ ಅಂದರೆ ಪಂಚಲೋಹದ ಕಂಠ ದಿಂದ ತಾಡ ಓಲೆಗಳ ಮೇಲೆ ಕೊರೆಯುವುದರಲ್ಲೇ ರಚನೆ ಮುಗಿಯುತ್ತಿತ್ತು. ಇದರಿಂದಾಗಿ ಹೆಚ್ಚು ಪ್ರತಿಗಳ ಪ್ರಕಟಣೆ ಸಾಧ್ಯವಾ ಗುತ್ತಿರಲಿಲ್ಲ. ಜೊತೆಗೆ ಅಂದಿನ ಕೃತಿಗಳು ಗಾತ್ರದಲ್ಲಿ ಬೃಹತ್ತಾಗಿಯೇ ಇರುತ್ತಿದ್ದವು. ಒಬ್ಬ ಕವಿ ತನ್ನ

ಜೀವಿತದಲ್ಲಿ ಎರಡು ಅಥವಾ ಮೂರು ಕೃತಿಗಳನ್ನು ರಚಿಸಬಹುದಾಗಿತ್ತು. ಹೀಗಿರುವಲ್ಲಿ ಅನ್ಯರ ಕೃತಿಗಳನ್ನು ಆದ್ಯಂತ ಓದಿ, ಅದರಲ್ಲಿರುವ ಒಳಿತು, ಕೆಡಕುಗ ಳನ್ನು ಕೂಲಂಕುಶವಾಗಿ ವಿಭಜಿಸಿ, ಅಪ್ರಿಯ ಹಾಗೂ ಅಹಿತವಾದ ವಿಮರ್ಶೆ ನೀಡಿ ತನ್ನ ಕಾಲ ವ್ಯಯ ಮಾಡಿಕೊಳ್ಳಲು ಇಚ್ಛಿಸು ತ್ತಿರಲಿಲ್ಲ. ಅದೇ ಕಾಲವನ್ನು ಒಂದು ಸತ್ಕಾವ್ಯ ರಚನೆಗಾಗಿ ವಿನಿಯೋಗಿಸಲ್ಪಡುತ್ತಿದ್ದ. ಇದರಿಂದಾಗಿ ಸೃಜನ ಸಾಹಿತ್ಯಕ್ಕೆ ಪ್ರೋತ್ಸಾಹ ಸಿಕ್ಕಿ ವಿಮರ್ಶಾ ಸಾಹಿತ್ಯ ಬೆಳಕಿಗೇ ಬರಲಾಗಲಿಲ್ಲ. 'ಕಲೆಗಾಗಿ ಕಲೆ' ಅಥವಾ 'ಕಾವ್ಯಕ್ಕಾಗಿ ಕಾವ್ಯ' ಎಂದವರಲ್ಲ ಭಾರತೀಯರು. ಕಾವ್ಯ ಕೇವಲ ಓದುಗನ ಮನಸ್ಸನ್ನು ಲಲ್ಲೈಸಿ ಕೈ ಬಿಡುವ ಸಾಧಾರಣ ಸಾಧನವಾಗಲಿಲ್ಲ. ಅದು ಮೋಕ್ಷದ ಮೆಟ್ಟಲಾಗಿತ್ತು. ಅದರಿಂದ ಲಭಿಸುವ ಆನಂದ ಬ್ರಹ್ಮಾನಂದ ಸಹೋ ದರ!! ಕಾವ್ಯದ ಪರಮ ಪ್ರಯೋಜನ ಆನಂದ ನಿಜ. ಅದರ ಉಲ್ಲಾಸದ ಜೊತೆಯಲ್ಲಿ ವಿಕಾಸವೂ ಆಗಬೇಕಾಗಿತ್ತು. ಆದರೆ ಆನಂ ದದ ಜೊತೆಯಲ್ಲಿ ಆತ್ಮಸಾಕ್ಷಾತ್ಕಾರವೂ, ಭಗವತ್ ದರ್ಶನವೂ, ಮೋಕ್ಷವೂ ಪ್ರಾಪ್ತವಾಗುವುದೆಂಬ ಪೂಜ್ಯ ಭಾವನೆಯಿತ್ತು. ಈ ಪೂಜ್ಯ ಭಾವನೆಯಿಂದಲೇ ಕವಿಯು ಕಾವ್ಯ ರಚಿಸುತ್ತದ್ದ; ಸಹೃದಯನೂ ಅದೇ ಸದ್ಭಾವನೆಯಿಂದ ಅಭ್ಯಸಿಸುತ್ತದ್ದ; ಮತೀ ಯ ಸಾಹಿತ್ಯದಲ್ಲಿ ಅಪರಿಮಿತವಾದ ಭಕ್ತಿ, ಧಾರ್ಮಿಕ ಅಂಧಶ್ರದ್ಧೆ ತುಂಬಿತುಳುಕುತ್ತಿದ್ದರಿಂದ ಶುದ್ಧ ಪ್ರಾಯೋಗಿಕ ವಿಮರ್ಶೆ ಅಷಾಗಿ ಬರಲಿಲ್ಲ ಅನ್ನಸುತ್ತದೆ. ಇವೆಲ್ಲವುಗಳ ಜೊತೆಗೆ ಯುಗಶಕ್ತಿಯ ಪ್ರಭಾವಕ್ಕೆ ಕವಿಯಾಗಲೀ, ವಿಮರ್ಶಕನಾಗಲೀ ಅಂದಿನ ಹಲವು ಧೋರಣೆಗಳಿಗೆ ಬದ್ಧನಾ ಗಲೇಬೇಕು.  ಇಲ್ಲದಿದ್ದರೆ ಕವಿ ಅಥವಾ ವಿಮರ್ಶೆ ಜೀವ ಸಹಿತ ಉಳಿಯುವುದು ಕಷ್ಟ! ಇಂತಹ ಪರಿಸ್ಥಿತಿ ಇಂದಿನ ಅತ್ಯಾಧು ನಿಕ ಯುಗದಲ್ಲೇ ತಾಂಡವಾಡುತ್ತಿರುವಾಗ ಅಂದಿನ ಸ್ಥಿತಿಗತಿಗಳು ಊಹಾತೀತ! ಹಲವು ಪ್ರಬಲ ಪ್ರಭುತ್ವಗಳಿಗೆ; ಇಲ್ಲವೇ ಪಟ್ಟ ಭದ್ರ ದುಷ್ಟ ಶಕ್ತಿಗಳ ಮುಷ್ಟಿಗೆ ಕವಿ ಅಥವಾ ವಿಮರ್ಶಕ ಸಿಕ್ಕಿ ಸಾಯಬೇಕಾಗಿತ್ತು. ಅದರಿಂದಾಗಿ ಅಂದೇಕೆ ಇಂದಿಗೂ ನಿಸ್ಪಕ್ಷಪಾತ ವಾದ, ನಿರ್ದಾಕ್ಷಿಣ್ಯಪರವಾದ, ನಿರ್ಭೀತವಾದ, ನಿರ್ದುಷ್ಟವಾದ, ನಿಖರವಾದ, ಶುದ್ಧವಾದ, ಸತ್ಯವಾದ ವಿಮರ್ಶೆ ಸಾಧ್ಯವಾಗು ತ್ತಿಲ್ಲ.  ಅಂದಮೇಲೆ ಆ ದಿನಗಳ ವಿಚಾರ ಕೇಳಬೇಕೇ? ವಸ್ತುಸ್ಥಿತಿ ಹೀಗಿದ್ದರೂ ಭಾರತೀಯರಲ್ಲಿ ಪಾಶ್ಚಾತ್ಯರ ರೀತಿಯ ಪ್ರಾಯೋಗಿಕ ವಿಮರ್ಶೆ ಸಂಪೂರ್ಣವಾಗಿ ಇಲ್ಲದೇ ಇಲ್ಲ.[೧] ನಮ್ಮ ಪ್ರಾಚೀನ ಅಲಂಕಾರಿಕರು ಕೇವಲ ಆನೆಯನ್ನು ಮುಟ್ಟುಹೋದ ಕುರುಡರಾಗಿರಲಿಲ್ಲ. ಅವರ ಸಾಹಸ ಅಲಂಕಾರ, ರೀತಿ, ಧ್ವನಿ, ರಸ ಇತ್ಯಾದಿ ಪ್ರಸ್ಥಾನಗಳ ಪ್ರತಿಷ್ಠಾಪನದಲ್ಲೇಆಗಿ ಮುಗಿಯಲಿಲ್ಲ. ನಿಷ್ಠೂರ ವಿಮರ್ಶೆಗೂ ಅವರು ಕೈಹಾಕಿ ವಿಜಯ ಗಳಿಸಿದರು. ವಿಮರ್ಶೆಗೆ ಗುರಿಯಾದ ಕವಿಗಳೂ, ಸಹೃದಯ ತೋರಿಸಿಕೊಟ್ಟ ಗುಣದೋಷಗಳಿಗೆ 'ಅಹುದಹುದು' ಎನ್ನುವಂತೆ ವಿಮರ್ಶಿಸಿದರು.

---

[೧] ನಮ್ಮಲ್ಲಿ ವಿಮರ್ಶೆ ಬೇರೆ ರೂಪದಲ್ಲಿ ಕಾಣಿಸಿಕೊಳ್ಳುತ್ತಿತ್ತು. ಓರ್ವ ಕವಿಯ ಕೃತಿಯೊಂದರಲ್ಲಿ ದೋಷಗಳೇನಾದರೂ ಇದ್ದರೆ ಸಮಕಾಲೀನ ಅಥವಾ ಮುಂದಿನ ಕವಿ ಆ ಕವಿ ಕೃತಿಯ ದೋಷಗಳನ್ನು ಪ್ರತ್ಯೇಕ ಪ್ರಾಯೋಗಿಕ ವಿಮರ್ಶಾ ಗ್ರಂಥವನ್ನಾಗಿ ರಚಿಸಿ ಪ್ರಕಟಿಸುತ್ತಿರಲಿಲ್ಲ. ಅದಕ್ಕೆ ಬದಲು ತನ್ನ ಹಿಂದಿನ ಕವಿಯ ಕೃತಿಯನ್ನೇ ಮಾರ್ಪಡಿಸಿ ಮತ್ತೊಂದು ಕಾವ್ಯವನ್ನಾಗಿಯೋ ಅಥವಾ ನಾಡಕವನ್ನಾಗಿಯೋ ರೂಪಾಂತರಿಸಿ ಬೇರೊಂದು ಕೃತಿ ರಚನೆ ಮಾಡುತ್ತಿದ್ದ. ಉದಾಹರಣೆಗೆ ಭಾಸನ ಪ್ರತಿಮಾ, ಪಂಚರಾತ್ರ, ಊರುಭಂಗ ಮೊದಲಾದ ನಾಟಕಗಳು ಇಂತಹ ಪುರ್ನಸೃಷ್ಟಿ ಒಂದು ವಿಧದ ವಿಮರ್ಶೆಯೇ ಆಗಿರುತ್ತಿತ್ತು.

ಇದೇ ರೀತಿ ಕಾವ್ಯಾರಂಭದಲ್ಲಿ ಕುಕವಿನಿಂದೆ, ಸ್ವಪ್ರಶಂಸೆ ಹಾಗೂ ಪೂರ್ವ ಕವಿ ಪ್ರಶಂಸೆ ಮೊದಲಾದಡೆಗಳಲ್ಲಿ "ಭಾವನಾ ವಿಮರ್ಶೆ'ಯನ್ನು ಕಾಣಬಹುದು.

ಇಂತಹ ಅನಿರ್ದಿಷ್ಟ ಅಪರಿಪೂರ್ಣ ವಿಮರ್ಶೆಗಿಂತಲೂ ಸ್ಥೂಲವೂ ತರ್ಕಬದ್ಧವೂ ಆದ ಪ್ರಾಯೋಗಿಕ ವಿಮರ್ಶೆ ಕಣ್ಣು ತೆರೆದದ್ದು ಗುಣ ದೋಷಗಳ ವಿಚಾರ ಮತ್ತು ಔಚಿತ್ಯ ವಿಚಾರ ಪ್ರಚಾರಕ್ಕೆ ಬಂದಾಗ.

॥ ೨ ॥

ಪ್ರಮಾಣ, ಪ್ರಭಾವ, ಪ್ರಕಾರ ಯಾವ ಮಟ್ಟದ್ದೇ ಇರಲಿ, ಐತಿಹಾಸಿಕವಾಗಿ ವಿಶ್ವಕ್ಕೆ ವಿಮರ್ಶೆಯನ್ನು ಮೊದಲು ನೀಡಿದ ಭಾರತ, ವಿಶ್ವಜಗತ್ತಿಗೆ ಶ್ರೇಷ್ಠವರ್ಗದ ಸಾಹಿತ್ಯವನ್ನು ಮೊತ್ತ ಮೊದಲು ಕೊಟ್ಟ ಕೀರ್ತಿ ಭಾರತಕ್ಕೆ ಸಲ್ಲುತ್ತದೆ. ಅಂತೆಯೇ ಸಾಹಿತ್ಯ ವಿಮರ್ಶೆಯನ್ನು ಮೊದಲು ನೀಡಿದ ಭಾಗ್ಯ ಭಾರತದ್ದಾಗಿದೆ.

ವೈಜ್ಞಾನಿಕವಾದ, ಮನಶಾಸ್ತ್ರೀಯವಾದ, ಪಾಶ್ಚಾತ್ಯ ರೂಪದ ಪ್ರಾಯೋಗಿಕ ವಿಮರ್ಶೆ ಪರಿಪೂರ್ಣಾವಸ್ಥೆಯಲ್ಲಿ ಕಾಣಿಸಿಕೊಳ್ಳದಿ ದ್ದರೂ ಅದರ ಎಳೆಸೆಳೆಗಳಿಲ್ಲದಿಲ್ಲ: ಪ್ರಸ್ಥಾನ (The Schools of thought)ಗಳ ಪ್ರಾದುರ್ಭಾವಕ್ಕೆ ಮುನ್ನವೇ ಗುಣ–ದೋಷ ಗಳ ವಿಚಾರ ಸಾಷ್ಟು ಚರ್ಚೆಯಾಗಿ, ದೋಷಯುಕ್ತ ಕಾವ್ಯಗಳು, ನಾಟಕಗಳು, ಪದ, ಪದಪುಂಜ, ಪ್ರಬಂಧ, ಪ್ರಯೋಗ ಮೊದ ಲಾದವುಗಳು ನಮ್ಮ ಲಾಕ್ಷಣಿಕರ ಟೀಕೆಗೆ, ನಿಂದೆಗೆ ಗುರಿಯಾಗಿ ದ್ದವು. ಗುಣಗಳಿಗಿಂತ ದೋಷ ನಿರ್ಣಾಯ ವೇಳೆಯಲ್ಲಿ, ಅದಕ್ಕೆ ನೀಡುವ ಉದಾಹರಣೆಗಳಲ್ಲಿ ಸಾಕಷ್ಟು ಪ್ರಾಯೋಗಿಕ ವಿಮರ್ಶೆಯನ್ನು ಕಾಣಬಹುದು.

ಗುಣಗಳು ಅಂದರೆ ಕಾವ್ಯಗುಣಗಳು, ಇವು ಅಲಂಕಾರಗಳಂತೆ ಕಾವ್ಯಕ್ಕೆ ಶೋಭೆ ತರುವ ಧರ್ಮಗಳು.[೨] ಸಂಗೀತದಲ್ಲಿ ರಾಗಸಂ ಯೋಜನೆ ಇದ್ದಂತೆ ಭಾವಕ್ಕೆ ಗುಣ, ಗುಣ ಕವಿಯ ಭಾವದ ಉಸಿರು; ಅವನ ಸ್ವಭಾವಕ್ಕೆ ಕವಿತಾಶಕ್ತಿಗೆ ಹಿಡಿದ ಕನ್ನಡಿ. ಹೀಗೆ ಗುಣ ಭಾವದ ಅಭಿವ್ಯಕ್ತಿಗೆ; ರಸಪ್ರತೀತಿಗೆ ಪೂರ್ಣ ಸಹಕಾರಿ: ಮೊದಲು ಗುಣಗಳನ್ನು ಹೆಸರಿಸಿದವನು ಬರತ[೩]: ಭಾಷೆಯನ್ನು ಸುಂದರಗೊಳಿಸುವ ಸಾಧನಗಳು ಗುಣಗಳು– ಎಂಬುದು ಅವನ ಅಭಿಪ್ರಾಯ. ಅಂತೆಯೇ ಗುಣಗಳಿಗೆ ಹೆಚ್ಚು ಪ್ರಾಶಸ್ತ್ಯ ಸಿಕ್ಕಿದ್ದು ದಂಡಿಯ ಕೈಯಲ್ಲಿ. ಅತನೂ ಭಾಮಹನಂತೆ ದಶ ಗುಣ ಗಳನ್ನು ಹೇಳಿದರೂ ಮೆಚ್ಚಿದ್ದು ಮಾಧುರ್ಯ, ಪ್ರಸಾದ ಮೊದಲಾದ ಗುಣಗಳನ್ನು ಮತ್ತು ಅವುಗಳನ್ನೊಳಗೊಂಡ ವೈದರ್ಭಿ ಮಾರ್ಗವನ್ನು. ಆದರೆ ಲಾಕ್ಷಣಿಕನಿಂದ ಲಾಕ್ಷಣಿಕನಿಗೆ ಬಂದಂತೆಲ್ಲಾ ಗುಣಗಳ ಸಂಖ್ಯೆ ಏರುತ್ತಾ ಹೋಯಿತು. ಹತ್ತರಿಂದ ಎಪ್ಪ ತ್ತೆರಡರವರೆಗೆ ಏರಿ ನಿಂತಿತು. ಇದರಿಂದಾಗಿ ಅಲಂಕ್ಕಾರಕಾದ ಗತಿಯೇ ಗುಣಕ್ಕೂ ಆಯಿತು. ಅಲ್ಲದೆ ಒಬ್ಬ ಪ್ರಸ್ಥಾನಕಾರನಿಂದ ಮತ್ತೊನ್ನ ಪ್ರಸ್ಥಾನಕಾರನ ಕವಿ ಸ್ವಭಾವಕ್ಕೂ, ಕವಿ ಸ್ವಭಾವದಿಂದ ವೃತ್ತಿರೂಪಕ್ಕೂ ಇಳಿದು, ಪ್ರಸ್ತಾನ ಪದವಿಯನ್ನು ಪಡೆಯ ಬಹುದಾದ ಗುಣ, ಸಾಧಾರಣ ಅಲಂಕಾರಗಳಲ್ಲಿ ಒಂದಾಯಿತು. ಆದರೆ ಗುಣದ ಸ್ಥಾನ ಪೂರ್ಣ ಗೌಣವಾದುದೂ ಅಲ್ಲ; ಕಾವ್ಯಸತ್ವದ ನಾಡಿ. ಕವಿಯ ಶಕ್ತಿಯ ಒರೆಗಲ್ಲು.

ಕಾವ್ಯ ವಿಮರ್ಶೆಯಲ್ಲಿ ಗುಣದ ಜೊತೆಯಲ್ಲಿ ಪ್ರಾಚುರ್ಯಕ್ಕೆ ಬಂದ ಮತ್ತೊಂದು ಅಂಶವೆಂದರೆ ದೋಷ. ಕಾವ್ಯದಲ್ಲಿ ಯಾವುದು ಗುಣವಲ್ಲವೋ ಅದು ದೋಷವೆನಿಸಿತು. ಅಂದರೆ ಕಾವ್ಯದ ಕಾಂತಿಗೆ ಕುಂದು ತರುವ ಅಂಶವೆಲ್ಲಾ ದೋಷವೆಂದು ಪರಿಗಣಿ ತವಾಯಿತು, ಪದ, ವಾಕ್ಯ, ಅರ್ಥ, ರಸ ಇತ್ಯಾದಿಗಳಲ್ಲಿ ಬರಬಹುದಾದ ಹಲವಾರು ಬಗೆಯ ದೋಷಗಳನ್ನು ಗುರುತಿಸಿ ಪಟ್ಟಿ ಹಾಕಿದ್ದಾರೆ.[೪] ಅಷ್ಟೇ ಅಲ್ಲ ನಮ್ಮ ಅಲಂಕಾರಿಕರಂತೂ ದೋಷದ ವಿಷಯದಲ್ಲಿ ಪದ ವಿರೋಧವಾಗಿ ಸಾಕಷ್ಟು ಚರ್ಚಿಸಿದ್ದಾರೆ. ಉತ್ತಮ ಕಾವ್ಯದಲ್ಲಿ ಒಂದು ಸಣ್ಣ ಪದದ ದೋಷವೂ ಇರ ಕೂಡದು. ಇದ್ದರೆ ಅದು ಇಡೀ ಕಾವ್ಯದ ಸೌಂದರ್ಯವನ್ನೇ ಹಾಳು ಮಾಡುತ್ತದೆ. ಹೇಗೆಂದರೆ ಅತ್ಯಂತ ಸುಂದರಳಾದ ಸ್ತ್ರೀಯ ಮುಖದಲ್ಲಿ ಒಂದು ಬಿಳಿ ಮಚ್ಚೆ ಇದ್ದರೆ ಹೇಗೆ ಅವಳ ಸೌಂದರ್ಯಕ್ಕೆ

---

[೨] ಕಾವ್ಯ ಶೋಭಾಯಾಃ ಕರ್ತಾರೋ ಧರ್ಮಾ ಗುಣಾಃ– ವಾಮನ, ಕಾವ್ಯಾಲಂಕಾರ iii – ೨–೨–೪

[೩]ಶ್ಲೇಷಃ ಪ್ರಸಾದಃ ಸಮತಾ ಸಮಾಧಿ–
ಮಾಧುರ್ಯಮೋಜಃ ಪದ ಸೌಕುಮಾರ್ಯಮ್ ।
ಅರ್ಥಸ್ಯ ಚ ವ್ಯಕ್ತಿರುದಾರ ತಾ ಚ
ಕಾಂತಿಶ್ಚ ಕಾವ್ಯಸ್ಯ ಗುಣಾ ದಶೈ ತೇ॥ –ಭರತ, ನಾಟ್ಯ ಶಾಸ್ತ್ರ xvii

[೪] ಮಮ್ಮಟ, ಕಾವ್ಯ ಪ್ರಕಾಶ – ಏಳನೇ ಉಲ್ಲಾಸ ಪೂರ್ತಾ

ಹಾನಿಯೋ ಹಾಗೆ ಅಲ್ಪ ಪ್ರಮಾಣದ ದೋಷವೂ ಕಾವ್ಯ ಸೌಂದರ್ಯಕ್ಕೆ ಧಕ್ಕೆ ತರುತ್ತದೆ.[೫] ಎಂದು ಹೇಳಿದರೂ ದೋಷವಿಲ್ಲದ ಕಾವ್ಯ ಉಂಟೆ? ದೋಷವಿದ್ದರೆ ಇದರ ಉಪಾದೇಯತೆ ಕಡಿಮೆಯಾಉತ್ತದೆಯೇ ಹೊರತು ಕಾವ್ಯತ್ವವೇ ಹೋಗುವುದಿಲ್ಲ ಎಂದು ಸಿದ್ಧಾಂತ ಪಡಿಸಿ ನುಡಿದಿದ್ದಾರೆ. ಭಾಮಹ ಮತ್ತು ದಂಡಿ ದೋಷವಾಗಲೀ, ಗುಣವಾಗಲೀ, ಸೃಷ್ಟಿಯಾಗುವುದು ಸನ್ನಿವೇಶ, ಸಂ ದರ್ಭ, ಪ್ರಮಾಣಾದಿಗಳ ಆವರಣದಲ್ಲಿ ಯಾವುದೂ ತನಗೆ ತಾನೇ ದೋಷವೂ ಅಲ್ಲ, ಗುಣವೂ ಅಲ್ಲ. ಆದ್ದರಿಂದ ದೋಷಗಳು "ಅನಿತ್ಯ" ಅಂದರೆ ಭಿನ್ನ ಭಿನ್ನ ಸನ್ನಿವೇಶಗಳಲ್ಲಿ ದೋಷವೇ ಗುಣವೆನಿಸಬಲ್ಲದು. ಅಪಾರ್ಥ

ಒಂದು ದೋಷ. ಆದರೆ ಉನ್ಮತ್ತರ ಹಾಗೂ ಮಕ್ಕಳ ಬಾಯಿಯಲ್ಲ– ಅದು ಗುಣವೇ ಅಗಿ ಶೋಭಿಸುತ್ತದೆ. ಬಾಮಹ, ದಂಡಿಗಳು ಕೈಗೆತ್ತಿಕೊಂಡ ದೋಷವೂ ಗುಣ ವೆನಿಸಬಲ್ಲ ಸಂದರ್ಭಗಳನ್ನು ಭೋಜನು 'ವೈಶೇಷಿಕ' ಎಂದು ಕರೆದು, ಅದಕ್ಕಾಗಿ ಒಂದು ಪ್ರತ್ಯೇಕ ವಿಭಾಗವನ್ನೇ ತೆರೆದು ಪ್ರಸ್ತಾ ಪಿಸಿದ್ದಾನೆ. ಅವುಗಳನ್ನು "ದೋಷಗುಣ"ಗಳೆಂದು ಕರೆದಿದ್ದಾಋಎ. ವಸ್ತುಸ್ಥಿತಿಯಲ್ಲಿ ಎಲ್ಲ ದೋಷಗಳೂ ವೈಶೇಷಿಕಗಳೇ. ಅದರೆ ಸಹಜ ಕವಿಗೆ ಸಿದ್ಧಾಂತಗಳೇ ಪ್ರಾಮಾಣ್ಯವಲ್ಲ. ಹಲವು ವೇಳೆ ಆತ ಅವುಗಳನ್ನು ಮೀರಿ ನಿಲ್ಲುತ್ತಾನೆ.

॥ ೩ ॥

ಔಚಿತ್ಯ ಭಾರತೀಯರ ಪ್ರಾಯೋಗಿಕ ವಿಮರ್ಶೆಯ ಹೆದ್ದಾರಿ. ನಮ್ಮ ಪ್ರಾಚೀನ ಅಲಂಕಾರಿಕರು ಯಾವ ವಿಮರ್ಶಾಂಶವನ್ನು ಗುಣ–ದೋಷ ಎಂದು ಗುರುತಿಸಿದರೋ ಅದನ್ನೇ ನವ್ಯಾಲಂಕಾರಿಕರು "ಔಚಿತ್ಯ" ಎಂದು ಕರೆದರು. ಯಾವ ವಸ್ತು ಎಲ್ಲಿರ ಬೇಕೋ ಅಲ್ಲಿದ್ದರೇ ಒಂದು ಲಕ್ಷಣ. ಇಲ್ಲವಾದರೆ ಅವಲಕ್ಷಣ. ಡಾಬನ್ನು ಕೊರಳಿಗೂ ರತ್ನಹಾರವನ್ನೂ ಕಾಲಿಗೂ, ಕಾಲಂದುಗೆ ಯನ್ನು ತೋಳಿಗೂ ಹಾಕಿಕೊಂಡರೆ ಲಕ್ಷಣವಲ್ಲ. ಭರತನ ಈ ಅಭಿಪ್ರಾಯವನ್ನೇ ಕ್ಷೇಮೇಂದ್ರ ವಿಸ್ತರಿಸಿ ಹೇಳಿದ್ದಾನೆ. ಮುಡಿಗೆ ಒಂದು ಅಥವಾ ಎರಡು ಗುಲಾಬಿ ಮುಡಿದರೆ ಅಂದ. ಅದು ಬಿಟ್ಟು ಒಂದು ಬುಟ್ಟಿಯಷ್ಟನ್ನು ಒಟ್ಟಿಕೊಂಡರೆ ಅಂದ ಹೀನ. ಕಾವ್ಯದಲ್ಲಿ ಯಾವುದೇ ಅಲಂಕಾರ ಯಾವುದೇ ವರ್ಣನೆ ಆಗಲೀ ಎಷ್ಟು ಬೇಕೋ ಅಷ್ಟು ಅಳತವರಿತು ಪ್ರಯೋಗವಾಗಿದ್ದರೆ ಮಾತ್ರ ಅದಕ್ಕೆ ಮರ್ಯಾದೆ. ಇಂತಹ ಮರ್ಯಾದೆಯನ್ನೇ ಔಚಿತ್ಯ ಎನ್ನುವುದು. ಅಳತೆ ಮೀರಿದರೆ ಅಮೃತವೂ ವಿಷವಾಗಿ ಪರಿಣಮಿಸುತ್ತದೆ. ಅದೇ ರೀತಿ ತಾಳ ತಪ್ಪಿದರೆ ತೂಕ ವ್ಯತ್ಯಾಸವಾದರೆ ಅನೌಚಿತ್ಯ ತಲೆದೋರುತ್ತದೆ. ಇದೇ ರೀತಿ ಸೌಂದರ್ಯಕ್ಕೆ, ಕಾವ್ಯದ ಆತ್ಮ ಪ್ರಕಾಶನಕ್ಕೆ ಅಂದರೆ ರಸವ್ಯಂಜನೆಗೆ ಯಾವುದು ಉಚಿತವೋ ಅದೇ ಔಚಿತ್ಯ. ಉಳಿದದ್ದು ಅನೌಚಿತ್ಯ.[೬] ಉಚಿತ ವೆನಿಸಿದ್ದೇ ಗುಣ. ಅನುಚಿತವೆನಿಸಿದ್ದೇ ದೋಷ. ಕಾವ್ಯದಲ್ಲಿ ಯಾವುದೇ ಇರಲಿ ಅದು ಔಚಿತ್ಯವರಿತು ಪ್ರಯೋಗವಾಗಿದೆಯೆ ಎಂಬುದು ಮುಖ್ಯ. ಇದಕ್ಕೆ ಮಾಘನಲ್ಲಿ ಸಮರ್ಥನೆ ದೊರೆಯುತ್ತದೆ. ರಾಜನೀತಿಯನ್ನು ಕುರಿತು ಮಾಘ ತನ್ನ 'ಶಿಶುಪಾಲ ವಧೆ'ಯಲ್ಲಿ ಹೀಗೆ ಹೇಳಿದ್ದಾನೆ–

---------------------------------------------------------------------------
---

[೫]ದೋಸಮೇನಾನುಂ ಸ್ವಲ್ಪಮಾದೊಡಂ
ಮಾಸಿಸಿರ್ಕುಮಣಂ ಕೃತಿವಧುವಂ
ಪೇಸದೆ ದುರ್ಜನದೊಳಾದ ಪರಿಚಯಂ
ಮಾಸಿಸಿ ಕಿಡಿಸುವವೊಲೊಪ್ಪುವ ಕುಲವಧುವಂ. – ಶ್ರೀವಿಜಯ, ಕವಿರಾಜಮಾರ್ಗ, ೧–೧೧೨

[ಕುಲವಧು ದುರ್ಜನರ ಪರಿಚಯ ಮಾಡಿಕೊಂಡ ಮಾತ್ರದಿಂದಲೇ ಅವಳ ನಡತೆ ಹೇಗೆ ಶಂಕಾಸ್ಪದವಾಗುವುದೋ ಹಾಗೆ ಕಾವ್ಯ ದೋಷವು ಎಷ್ಟೇ ಅತ್ಯಲ್ಪವಾದರೂ ಅದು ಕೃತಿ ವಧುವಿನ ಕ್ರಾಂತಿಯನ್ನು ಮಸುಳಿಸುತ್ತದೆ.]

– ಅದೇ. ಎಂ.ವಿ. ಸೀತಾರಾಮಯ್ಯ, ಟಿಪ್ಪಣಿ, ಪು. ೧೬೧–೬೨

[6] "The proper placing of thing in such a manner as to suit Rasa and the avoiding of things not suitable form of essence of artisitic expression. Thiis is propriety. Aucitya". –V. Raghavan, Some concepts of Alankara Sastra, P. 197

ತೇಜಃ ಕ್ಷಮಾ ವಾ ನೈಕಾಂತಂ
ಕಾಲಜ್ಞಸ್ಯ ಮಹಿಪತೇಃ॥
ನೈಕಮೋಜಃ ಪ್ರಸಾದೋವಾ
ರಸಭಾವವಿದಃ ಕವೇಃ॥ –ಶಿಶುಪಾಲವಧ. II, ೮೩

ರಾಜನು ಕಾಲ ಸಂದರ್ಭಗಳನ್ನು ಅರಿತು ತನ್ನ ನೀತಿಯನ್ನು ನಿರ್ಧರಿಸಬೇಕು. ಕಾಲ ಸಂದರ್ಭಗಳಿಗೆ ವಿರುದ್ಧವಾಗಿ ಬಂದಾಗ ಉತ್ತಮ ಗುಣಗಳಾದ ತೇಜ ಕ್ಷಮಗಳೆರಡೂ ಅವಗುಣಗಳೆನಿಸುತ್ತವೆ. ಹಾಗೆಯೇ ರಸಭಾವವಿದನಾದ ಕವಿ ಕಾವ್ಯ ಸಂದರ್ಭಕ್ಕೆ ತಕ್ಕಂತೆ ಗುಣಗಳನ್ನು ಪ್ರಯೋಗಿಸಬೇಕು. ವೀರ, ಅದ್ಭುತ, ರೌದ್ರರಸಗಳಿಗೆ ಓಜೋಗುಣ ಪೂರಕ. ಅದೇ ಓಜಸ್ಸು ಶೃಂಗಾರಪ್ರಧಾನ ಸನ್ನಿವೇಶದಲ್ಲಿ ದೋಷವಾಗಬಹುದು.

ಇದೇ 'ಗುಣೌಚಿತ್ಯ'. ಭೋಜನು ಇದನ್ನು 'ರಸಾನುರೂಪ ಸಂದರ್ಭ ತ್ವಮ್' ಎಂದು ಕರೆಯುತ್ತಾನೆ. ಅವನು ಮಾಘನನ್ನು ಉದ್ಧರಿಸುತ್ತಾ–
'ರಸಾನುರೂಪಸಂದರ್ಭತ್ವಮಿತ್ಯನೇನ ರತಿಪ್ರಕರ್ಷೇ ಕೋಮಲಃ, ಉತ್ಸಾಹ ಪ್ರಕರ್ಷೇ ಪ್ರೌಢಃ, ಕ್ರೋಧಪ್ರಕರ್ಷೇ ಕಠೋರಃ, ಶೋಕಪ್ರಕರ್ಷೇ ಮೃದುಃ, ವಿಸ್ಮಯಪ್ರಕರ್ಷೇ ತು ಸ್ಫುಟ ಸಂಭ್ರೋ ವಿರಚನೀಯ ಇತಿ ಉಪದೇಶಿನ್ "ನೈಕನೋಜಃ ಪ್ರಸಾದೋ ವಾ ರಸಭಾವವಿದಃ ಕವೇ॥"

ಗುಣಗಳು ರಸಧರ್ಮಗಳೆಂಬ ಆನಂದವರ್ಧನನ ಸಿದ್ಧಾಂತದ 'ಶಿರೋದಯ',ವನ್ನು ಇಲ್ಲಿ ಕಾಣಬಹುದು. ಮಾಘ ಇಲ್ಲಿ ಹೇಳಿರುವುದನ್ನೇ ಕಾವ್ಯಮೀಮಾಂಸೆಯ ಭಾಷೆಯಲ್ಲಿ ಮುಂದೆ, 'ವರ್ಣಸಂಘಟನಾ ಔಚಿತ್ಯ ಅಥವಾ ಗುಣೌಚಿತ್ಯ' ಎಂದು ಕರೆದರು.[೭]

'Aucitya is harmony and in one aspect it is proportion between the whole and the parts, between the chief and the subsidiary, between the Angin and the Angas. This perfection is all the morals and beauty in art. At the final stage of its formation as a theory explaining the secret of poetic oppeal. Aucitya is stated to be the "Jivita", life-breath, of poetry. This Aucitya which which is proportion and harmony on one side and appropriateness and adaptation on the unde- rstood by itself but presupposes that to which all other things are harmonius and appropriate.[8]

-ಹೀಗೆ ಔಚಿತ್ಯ ಕಾವ್ಯದ ಉಸಿರೆನಿಸಿತು. ರಸ, ಕಾವ್ಯದ ಆತ್ಮವಾದರೆ ಆತ್ಮನ ಆವಾಸಸ್ಥಾನವಾದ ದೇಹದಲ್ಲಿ ಚೈತನ್ಯ ತುಂಬಿದ ಜೀವರಸ ಔಚಿತ್ಯವಾಯಿತು. ಅಲಂಕಾರ, ರೀತಿ, ಧ್ವನಿ, ರಸ ಇವುಗಳಂತೆ ಔಚಿತ್ಯವೂ ಪ್ರಸ್ಥಾನ ಪದವಿಯನ್ನು ಪಡೆದು ಸರ್ವ ಮಾನ್ಯವಾಯಿತು. 'ಔಚಿತ್ಯ' ಎಂಬ ಪದವನ್ನು ಮೊತ್ತಮೊದಲು ಬಳಸಿದವನು ಯಶೋವರ್ಮ.[೯] ನಾಟ್ಯದ ಅನೇಕ ಗುಣಗಳನ್ನು

---

[೭] ಅದೇ, ಪು. ೧೯೯–೨೦೦ [೮] ಅದೇ. ಪು. ೧೯೮

[೯]ಔಚಿತ್ಯಂ ವಚಸಾಂ ಪ್ರಕೃತನುಗತಂ, ಸರ್ವತ್ರ ಪಾತ್ರೋಚಿತಾ ಪುಷ್ಟಿಃ ಸ್ವಾವಸರೇ ರಹಸ್ಯ ಚ ಕಥಾಮಾರ್ಗೇ ನ ಚಾತಿಕ್ರಮಃ। ಶುದ್ಧಿಃ ಪ್ರಸ್ತುತ ಸಣವಿಧಾನಕವಿಧೌ ಪ್ರೌಢಿಶ್ಚ ಶಬ್ದಾರ್ಥಯೋಃ ವಿದ್ವದ್ಭಿಃ ಪರಿಭಾವ್ಯತಾಮವ ಹಿತೈಃ, ಪಿತಾವದೇವಾಸ್ತು ನಃ॥ – ಭೋಜ, ಶೃಂಗಾರ ಪ್ರಕಾಶ

Quotation taken from V. Raghavan's 'Some Concepts of Alankara Sasatra' p. 205 (ಈ ಶ್ಲೋಕ ಯಶೋವರ್ಮನ ರಾಮಾಭ್ಯುದಯದ್ದೆಂದು ತಿಳಿಯುವುದು ಅಭಿನವಗುಪ್ತನಿಂದ)

ಹೇಳುತ್ತಾ ಪಾತ್ರಗಳ ಮಾತಿನಲ್ಲಿ ಔಚಿತ್ಯವಿರಬೇಕೆಂದು ತಿಳಿಸುತ್ತಾನೆ. ಆದರೆ ರಸ ಮತ್ತು ಔಚಿತ್ಯಗಳ ಪ್ರತಿಪಾದನೆ ಒಂದು ವ್ಯವಸ್ಥಿತ ರೀತಿಯಲ್ಲಿ ನಡೆದು ಅವುಗಳಿಗೆ ಪ್ರಾಮುಖ್ಯತೆ ದೊರೆತದ್ದು ೯–೧೦–೧೧ನೆಯ ಶತಮಾನಗಳಲ್ಲಿ. ಆದರೂ ಔಚಿತ್ಯ ಸಿದ್ಧಾಂತದ ಮೊದಲ ಮೊಳಕೆಯನ್ನು ಭರತನ ನಾಟ್ಯಶಾಸ್ತ್ರದಲ್ಲಿಯೇ ಕಾಣುತ್ತೇವೆ. ಭರತನು ಪ್ರವೃತ್ತಿ, ವೃತ್ತಿ, ಗುಣ, ಅಲಂಕಾರ ಆಹಾರ್ಯಾಭಿನಯ ಪಾಠ್ಯಗುಣ, ಸ್ವರ, ಜಾತ್ಯಾಂಶ ಮೊದಲಾದವುಗಳಲ್ಲಿನ ರಸ ಪ್ರಯೋಗವನ್ನು ಕುರಿತು ಹೇಳುತ್ತಾನೆ. ಈ 'ರಸ ಪ್ರಯೋಗ'ವೇ ಬರಬರುತ್ತಾ 'ರಸೌಚಿತ್ಯವಾಯಿತು.[೧೦]

ಭರತನ ಅನಂತರವೂ 'ಔಚಿತ್ಯ' ಎಲ್ಲ ಲಾಕ್ಷಣಿಕರಿಂದಲೂ ಮನ್ನಣೆ ಪಡೆಯಿತು. ಭಾಮ, ಹದಂಡಿ, ಲೊಲ್ಲಟ, ರುದ್ರಟ ವಿಶೇಷವಾಗಿ ಆನಂದವರ್ಧನ ಮತ್ತು ಭೋಜ– ಎಲ್ಲರೂ 'ಔಚಿತ್ಯ ಸಿದ್ಧಾಂತ'ವನ್ನು ಎತ್ತಿ ಹಿಡಿದಿದ್ದಾರೆ. ಕ್ಷೇಮೇಂದ್ರನಂತೂ 'ಔಚಿತ್ಯ ವಿಚಾರ ಚರ್ಚಾ' ಎಂಬ ಲಕ್ಷಣ ಗ್ರಂಥವನ್ನೇ ರಚಿಸಿ ಔಚಿತ್ಯಕ್ಕೆ ಪ್ರಸ್ಥಾನಪದವಿಯನ್ನು ಕರುಣಿಸಿಕೊಟ್ಟಿದ್ದಾನೆ. ಸೌಂದರ್ಯದ ಆಸ್ವಾದನೆಯಲ್ಲಿ ಚಮತ್ಕಾರಕ್ಕೆ ಕಾರಣವೂ, ರಸದ ಪ್ರಾಣಸ್ವರೂಪವೂ ಆದ 'ಔಚಿತ್ಯ'ದ ವಿಚಾರವನ್ನು ಮಾಡ ತೊಡಗುವುದಾಗಿ ಹೇಳಿ– "ಅಲಂಕಾರಗಳು ಅಲಂಕಾರಗಳೇ, 'ಗುಣ'ಗಳು ಎಂದಿಗೂ ಗುಣಗಳೇ. ರಸಸಿದ್ಧ ಕಾವ್ಯಕ್ಕೆ ಔಚಿತ್ಯ ವೊಂದೇ ಸ್ಥಿರವಾದ ಜೀವ"[೧೧]

ಕಾವ್ಯದ ಉಸಿರೆನಿಸಿದ 'ಔಚಿತ್ಯ' ಯಾವುದೆಂದರೆ–
ಉಚಿತಂ ಪ್ರಾಹುರಾಚಾರ್ಯಾಃ ಸದೃಶಂ ಕಿಲ ಯಸ್ಯಯತ್
ಉಚಿತಸ್ಯ ಚ ಯೋ ಭಾವಸ್ತದೌಚಿತ್ಯಂ ಪ್ರಚಕ್ಷತೇ॥
(ಯಾವುದು ಯಾವುದಕ್ಕೆ ತಕ್ಕುದಾಗಿರುವುದೋ ಅದನ್ನೇ ವಿದ್ವಾಂಸರು 'ಉಚಿತ'ವೆನ್ನುತ್ತಾರೆ. 'ಉಚಿತ'ದ ಆ ಭಾವ (=ಸ್ವಭಾವ)ವನ್ನೇ ಔಚಿತ್ಯವೆನ್ನುವರು.)[೧೨]

"ಕ್ಷೇಮೇಂದ್ರನು ವಿಂಗಡಿಸಿ ತೋರಿಸಿರುವ ಔಚಿತ್ಯಪ್ರಕಾರಗಳು ಇಪ್ಪತ್ತೇಳು. ಇವುಗಳಲ್ಲಿ ಪದ, ವಾಕ್ಯ, ಪ್ರಬಂದಾರ್ಥ– ಇವು ಭಾಷಾದೃಷ್ಟಿಯ ವಿಭಾಗಗಳು. ಗುಣ, ಅಲಂಕಾರ, ರಸ–ಇವು ಕಾವ್ಯತತ್ತ್ವದ ದೃಷ್ಟಿಯವು. ಕ್ರಿಯೆ, ಕಾರಕ, ಲಿಂಗ, ವಚನ, ವಿಶೇಣ, ಉಪಸರ್ಗ, ನಿಪಾತ– ಇವು ವ್ಯಾಕರಣ ಮೂಲ ವಿಭಾಗಗಳು, ಕಾಲ, ದೇಶ, ಕುಲ, ವ್ರತ, ತತ್ತ್ವ, ಅವಸ್ಥಾ ವಿಚಾರ, ನಾಮ, ಆಶೀರ್ವಾದ– ಇವು ಲೋಕ ವ್ಯವಹಾರ ಮೂಲವೆನ್ನಬಹುದು."[೧೩]

॥ ೪ ॥

ಕವಿ ಷಡಕ್ಷರದೇವ ಸವ್ಯಸಾಚಿ ಅಂದರೆ ಉಭಯ ಕವಿತಾ ವಿಶಾರದ. ಅವನವೆನ್ನುವ ಕೃತಿಗಳು ಸುಮಾರು ೨೦–೨೫ ರಷ್ಟು ಸಂಖ್ಯೆ ಉಳ್ಳವು.[೧೪] ಅವುಗಳಲ್ಲಿ ಸಂಸ್ಕೃತ ಗ್ರಂಥಗಳೇ ಹೆಚ್ಚು. 'ಕವಿ ಕರ್ಣರಸಾಯನ' ಎಂಬ ಅಪೂರ್ಣ ಗ್ರಂಥವೊಂದನ್ನು

---

[10] V. Raghavan , Some Concepts of Alankara Sastra. P. 198. (History of Aucitya in Sanskrit Poetics).
[೧೧] ಡಾ.ಕೆ. ಕೃಷ್ಣಮೂರ್ತಿ, ಕನ್ನಡ ಔಚಿತ್ಯ ವಿಚಾರಚರ್ಚಾ, ಪುಟ ೨.
[೧೨] ಅದೇ. ಪುಟ. ೩. [೧೩] ಅದೇ. ಪೀಠಿಕೆ–XVI.

[14] **ಷಡಕ್ಷರದೇವನ ಕೃತಿಗಳು**
**ಕನ್ನಡ ಮಹಾಕಾವ್ಯಗಳು** **ಸಂಸ್ಕೃತ (ಮಹಾಕಾವ್ಯ, ಅಪೂರ್ಣ)**

೧.ರಾಜಶೇಖರ ವಿಳಾಸಂ ೧. ಕವಿಕರ್ಣರಸಾಯನಂ
೨.ವೃಷಭೇಂದ್ರ ವಿಜಯಂ ೩.. ಶಬರಶಂಕರ ವಿಳಾಸಂ

**ಲಘು ಕಾವ್ಯಗಳು** ೧. ಶಿವಸ್ತೋತ್ರಮಂಜರಿ

**ಲಘು ಕಾವ್ಯ** ೧.ಷಡಕ್ಷರ ಸ್ತೋತ್ರ (ಉತ್ಸಾಹ ರಗಳೆ)೨. ಶಿವಸ್ತವ ಮಂಜರಿ ೩..ನಮಃ ಶಿವಾಯಷ್ಟಕ ೪. ಶ್ರೀಮದನಾದಿ ಸಿದ್ಧಲಿಂಗಸ್ತವ ೫.ವೀರಭದ್ರೋದಾಹರಣಗದ್ಯ. ೬. ವೀರಭದ್ರದಂಡಕ. ೭. ಇಂದುಧರ ಸ್ತೋತ್ರ ೮. ಶಿವಮಾನಸ್ತೋತ್ರ. ೯. ಇಷ್ಟಲಿಂಗಸ್ತವನ. ೧೦. ಬಸವಾಷ್ಟಕ. ೧೧. ನೀಲಾಂಬಿಕಾ ಸ್ತೋತ್ರ. ೧೨. ಶತ್ಸತ್ರಯ ಮಂಜರಿ. ೧೩. ಶಿವಾಧಿಕ್ಯ ರತ್ನಾವಳಿ. ೧೪. ಭಕ್ತಾಧಿಕ್ಯ ರತ್ನಾವಳಿ. ೧೫. ಮಂಗಲಾಷ್ಟಕ. ೧೬. ಲಿಂಗಾಷ್ಟಕ. ೧೭. ವೂತಿನಮಾಲಿಕ. ೧೮. ತೋಂಟದಾರ್ಯ ಸ್ತವನ.

---

––– ಬಿಟ್ಟರೆ[೧೫]. ಮಿಕ್ಕ ಕೃತಿಗಳು ಲಘುಕಾವ್ಯಗಳು. ಪ್ರಸ್ತುತದಲ್ಲಿ ಸಂಸ್ಕೃತ ಕಾವ್ಯಗಳನ್ನುಳಿದ ಕನ್ನಡದ ರಾಜಶೇಖರ ವಿಳಾಸ, ವೃಷಭೇಂದ್ರ ವಿಜಯ, ಮತ್ತು ಶಬರ ಶಂಕರ ವಿಳಾಸ– ಈ ಮೂರು ಕೃತಿಗಳನ್ನು ಮಾತ್ರ ಸ್ವೀಕರಿಸಿ, ಅವುಗಳಲ್ಲಿ ಕಾಣಸಿಗುವ ಗುಣ–ದೋಷಗಳನ್ನು ಸ್ಥೂಲವಾಗಿ ವಿವೇಚಿಸಲಾಗಿದೆ.

ಈ ಮಹಾಕೃತಿಗಳ ಕಥಾನಕ ಹೀಗಿದೆ–

**ರಾಜಶೇಖರ ವಿಳಾಸ:–** ಚೋಳ ಮಂಡಲದ ಖ್ಯಾತ ನಗರ ಧರ್ಮವತಿ. ಅರಸ ಸತ್ಯೇಂದ್ರ ಚೋಳ. ಅರಸಿ ಅಮೃತವತಿ. ಮಂತ್ರಿ ಪತಿ ಮೋಹಿ. ಮಂತ್ರಿಕುಮಾರ ಮಿತವಚನ. ಸರ್ವರೂ ಶಿವಭಕ್ತರು. ಅವರ ಭಕ್ತಿಗೆ ಬಡತನವಿಲ್ಲ. ನಿಷ್ಠೆಗೆ ದಾರಿದ್ರ್ಯವಿಲ್ಲ. ಆದ ರೂ ರಾಜ ರಾಣಿಯರಿಗೆ ಮಕ್ಕಳಿಲ್ಲ. ಒಮ್ಮೆ ಶ್ರೀಗುರು ಚಿದ್ಘನ ಶಿವಾಚಾರ್ಯರು ಆಗಮಿಸಿ ಅಮೃತಮತಿದೇವಿಗೆ ಶಿವಪಂಚಾಕ್ಷರಿ ಯನ್ನು ಉಪದೇಶಿಸಿ, ಅದನ್ನು ಸದಾ ಜಪಿಸುತ್ತಿದ್ದರೆ ಸತ್ಪುತ್ರನನ್ನು ಪಡೆಯುವುದಾಗಿ ಹೇಳಿ, ಆಶೀರ್ವದಿಸಿ ಹೋಗುತ್ತಾರೆ. ಶ್ರೀ ಗುರುವಿನ ಆಶೀರ್ವಚನ ಸತ್ಯವಾಗುತ್ತದೆ. ಮಂತ್ರಲಕ್ಷನು ಹುಟ್ಟುತ್ತಾನೆ. ರಾಜಶೇಖರನೆಂಬ ಪ್ರೀತಿನಾಮವೂ ಅವನಿಗಿರುತ್ತದೆ. ರಾಜ ಶೇಖರನೂ, ಮಿತವಚನನೂ ತಮ್ಮ ಬಾಲ್ಯವನ್ನು ಆನಂದದಿಂದ ಕಳೆದು ಶಿವದೀಕ್ಷೆಯನ್ನು ಪಡೆದು ಅನಂತರ ಸಕಲ ವಿದ್ಯಾ ಪಾರಂಗತರಾಗುತ್ತಾರೆ. ಶುಭಮಹೂರ್ತವೊಂದರಲ್ಲಿ ಸತ್ಯೇಂದ್ರ ಚೋಳನು ರಾಜಶೇಖರನಿಗೆ ಯುವರಾಜಪಟ್ಟ ಪದವಿಯನ್ನು ದಯಪಾಲಿಸಿ, ಸಕಲ ರಾಜಸೂತ್ರಗಳನ್ನು ಮಗನಿಗೆ ವಹಿಸಿಕೊಟ್ಟು ತಾನು ನಿರಂತರ ಶಿವಲಿಂಗಾರ್ಚನೆಯಲ್ಲಿ ನಿರತನಾಗುತ್ತಾನೆ. ಒಂದು ದಿನ ರಾಜಶೇಖರನು ಓಲಗಗೊಟ್ಟಿದ್ದಾಗ ಅವನ ಸಾಮಂತ ರಾಜನಾದ ಕಲಿಕಾಲ ಮೇಘನ ಮೇಲೆ, ಸಿಂಹಳೇಂದ್ರನು ಹೋರಾಟ ನಡೆಸುವ ಸುದ್ದಿ ಮುಟ್ಟಿಸುತ್ತಾನೆ.ಕೂಡಲೆ ರಾಜಶೇಖರನು ಕಾಲಮೇಘನ ನೆವಿಗೆ ಹೋಗಲು ಅವನ ಬೆನ್ನಟ್ಟಿ ಹೋಗಿ ಅವನೊಡನೆ ಸಂಧಿಮಾಡಿಕೊಂಡು ಅವನ ಮಗಳಾದ ಸರ್ವಮಂಗಳೆಯನ್ನು ಲಗ್ನವಾಗುತ್ತಾನೆ. ಹೀಗಿರುವಲ್ಲಿ ಒಂದು ದಿನ ರಾಜಶೇಖರನು ಒಡ್ಡೋಲಗದಲ್ಲಿದ್ದಾಗ ಸಿಂಧು ದೇಶದ ರಾಜನು ಎರಡು ಜಾತ್ಯಶ್ವಗಳನ್ನು ತಂದು ಕಾಣಿಕೆಯಾಗಿ ಅರ್ಪಿಸುತ್ತಾನೆ. ರಾಜಶೇಖರನು ಅವುಗಳನ್ನೇರಿ ವೈಹಾಳಿ ಹೊರಡಲು ಇಚ್ಛಿಸಿದಾಗ ಮಿತವಚನನು ಕುದುರೆಗ ಳನ್ನು ಪರೀಕ್ಷಿಸದೆ, ಪಳಗಿಸದೆ ಏರುವುದು ಯುಕ್ತವಲ್ಲ ಎಂದು ವಿವೇಕದ ನುಡಿ ನುಡಿಯುತ್ತಾನೆ. ಆದರೂ ಉತ್ಸಾಹಭರಿತನಾದ ರಾಜಶೇಖರನು ವೈಹಾಳಿಯಲ್ಲಿ ಸಂಭವಿಸಬಹುದಾದ ತಪ್ಪಿಗೆ ತಾನೇ ಹೊಣೆಗಾರನೆಂದು ಪ್ರಮಾಣ ಮಾಡಿ ಮಿತವಚನನ್ನು ಒಪ್ಪಿಸಿ ಕುದುರೆಯನ್ನೇರುತ್ತಾನೆ. ವೈಹಾಳಿಯಿಂದ ಹಿಂತಿರುಗುವಾಗ ಮಿತವಚನನ ಕುದುರೆಯ ಗೊರಸಿಗೆ ಸಿಕ್ಕು ನಗರದ ತಿರು ಕೊಳವಿನಾಚಿ ಎಂಬುವಳ ಏಕಮಾತ್ರ ಪುತ್ರನಾದ ಶಂಕರನು ಮಡಿಯುತ್ತಾನೆ. ತಿರುಕೊಳವಿನಾಚಿಯು ಸತ್ಯೇಂದ್ರ ಚೋಳನಲ್ಲಿ ತನ್ನ ದಾರುಣ ಕಥೆಯನ್ನು ನಿವೇದಿಸಿಕೊಂಡಾಗ, ಸತ್ಯನಿಷ್ಠಾಪರನಾದ ಸತ್ಯೇಂದ್ರನು ವಿಚಾರಣೆ ನಡೆಸಿ ಹಿಂದಿನ ಒಪ್ಪಂದದ ಪ್ರಕಾರ ರಾಜಶೇಖರನೇ ಶಿಕ್ಷೆಗೆ ಪಾತ್ರನೆಂದು ನಿರ್ಧರಿಸಿ ಅವನ ಶಿರಚ್ಛೇದನಕ್ಕೆ ಆಜ್ಞೆ ಮಾಡುತ್ತಾನೆ. ಆದರೆ ಆಜ್ಞಪ್ತನಾದ ಸುದಾ ಯಿಯು ಛೇಧಿಸುವ ಮುನ್ನ ಶಿವ ಪಂಚಾಕ್ಷರಿಯನ್ನು ಪಠಿಸುವಂತೆ ಒತ್ತಾಯ ಪಡಿಸಿದುದರಿಂದ ಮಂತ್ರಲಕ್ಷನು ಸಂದಾಯಿಯ ಭೃತ್ಯತ್ವಕ್ಕೆ ವ್ಯತ್ಯಯವಾಗದಂತೆ ಪಂಚಾಕ್ಷರಿ ಮಂತ್ರ ಮಹಿಮೆಯನ್ನು ಪ್ರಕಟಿಸುವುದಾಗಿ ಹೇಳಿ "ನಮಃಶಿವಾಯ" ಎಂದು ಮಂತ್ರೋಚ್ಚಾರಣೆ ಮಾಡುತ್ತಲೇ ತನ್ನ ಶಿರಸ್ಸನ್ನು ತಾನೇ ತ್ತರಿಸಿಕೊಳ್ಳುತ್ತಾನೆ. ಇ ರುಂಡವು 'ನಮಃಶಿವಾಯ' ಎಂಬ ಮಂತ್ರ ಪಠಿಸುವುದನ್ನು ನಿಲ್ಲಿಸಲೇ ಇಲ್ಲ. ಅದನ್ನು ಸತ್ಯೇಂದ್ರ ಚೋಳನ ಸಮ್ಮುಖದಲ್ಲಟ್ಟು ತನ್ನ ಶಿರಸ್ಸನ್ನು ಕತ್ತರಿಸಿಕೊಳ್ಳುತ್ತಾನೆ ಸಂದಾಯಿ. ಅದೂ 'ನಮಃಶಿವಾಯ' ಎಂಬ ಪಂಚಾಕ್ಷರಿಯನ್ನು ಪಠಿಸತೊಡಗುತ್ತದೆ. ತಿರುಕೊಳವಿನಾಚಿ, ಪತಿಮೊಹಿ, ಸತ್ಯೇಂದ್ರ, ಮಿತವಚನ ಹೀಗೆ ಏಳು ತಲೆಗಳು ನೆಲಕ್ಕುರುಳಿ ಶಿವಪಂಚಾಕ್ಷರಿಯನ್ನು ಜಪಿಸತೊಡಗುತ್ತವೆ. ಇದನ್ನು ತಿಳಿದ ರಾಣಿ ಅಮೃತವತಿಯು ಬಂದು, ತಾನೂ ಅವರೊಡನೆ ಒಂದಾಗಲೆಂದು ಇಚ್ಛಿಸಿ, ತನ್ನ ಶಿರವನ್ನರಿಯಲು ಯತ್ನಿಸಿದಾಗ ಪರಮೇಶ್ವರನು ಪ್ರತ್ಯಕ್ಷನಾಗಿ,

---

[೧೫] ವಿದ್ವಾನ್ ಶ್ರೀ.ಎಂ.ಎಸ್. ಬಸವರಾಜಯ್ಯನವರ ಸಂಪಾದಕತ್ವದಲ್ಲಿ ಡಾ॥ ಜಿ. ಮರುಳಸಿದ್ಧಯ್ಯನವರ ನಿರ್ದೇಶಕತ್ವದಲ್ಲಿ ಮೈಸೂರಲ್ಲಿ ಪ್ರಕಟವಾಗಲಿದೆ.

ಅವಳನ್ನು ತಡೆದು ಏನು ವರಬೇಕು ಕೇಳೆಂದು ಕೇಳಿದಾಗ, ಮಹಾಮಾತೆಯಾದ ಅಮೃತವತಿ ಮೊದಲ ವರದಂತೆ ಶಂಕರನ ಜೀವದಾನವನ್ನೂ, ಎರಡನೆಯ ವರದಂತೆ ತಿರುಕೊಳವಿನಾಚಿಯ ಪ್ರಾಣದಾನವನ್ನೂ ಬೇಡುತ್ತಾಳೆ. ಆಕೆಯ ಹೃದಯ ಶ್ರೀಮಂತಿ ಕೆಗೆ ಸಂತುಷ್ಟನಾದ ಪರಮಾತ್ಮನು ಸಕಲರನ್ನೂ ಬದುಕಿಸಿ ಕೈಲಾಸಕ್ಕೆ ಕರೆದೊಯ್ಯುತ್ತಾನೆ.

**ವೃಷಭೇಂದ್ರ ವಿಜಯ:**

ತಾರಾಚಲದಲ್ಲಿ ಪರಶಿವನ ಒಡ್ಡೋಲಗ. ಅಲ್ಲಿಗೆ ನಾರದನ ಆಗಮನ. ಅವನಿಂದ ಭೂಲೋಕದ ವೃತ್ತಾಂತವನ್ನರಿತ ಜಗದೀಶ್ವ ರನು ಅವನ ಅಜ್ಞಾನವನ್ನು ನೀಗಲು ತನ್ನಂಶ ಸ್ವರೂಪನಾದ ನಂದಿಯನ್ನು ಭೂಲೋಕಕ್ಕೆ ಕಳುಹಿಸುವನು. ನಂದಿಯು ಇಂಗಳೇ ಶ್ವರ ಬಾಗೇವಾಡಿಯ ಮಾದರಸ ಮಾದಲಾಂಬಿಕೆಯರ ಮಗನಾಗಿ ಹುಟ್ಟಿ ಬಸವನೆಂಬ ಅಭಿದಾನವನ್ನು ಮೆರೆಯುತ್ತಾನೆ. ಎಂಟು ವರ್ಷಕ್ಕೆ ನೆರವೇರಿಸಬೇಕಾಗಿದ್ದ ಉಪನಯನ ಕರ್ಮವನ್ನು ತಿರಸ್ಕರಿಸಿ ಬಸವನು ಕಪ್ಪಡಿಗೆ ಹೋಗಿ ಸಂಗಮನಾಥನ ಸಾನಿಧ್ಯ ದಲ್ಲಿದ್ದಾಗ ಕಲ್ಯಾಣದ ಅರಸು ಬಿಜ್ಜಳನ, ಮಹಾಮಂತ್ರಿ ಬಲದೇವನ ಮಗಳು ಗಂಗಾಬಿಕೆಯನ್ನು ಲಗ್ನವಾಗಿ ಕಲ್ಯಾಣದ ಆಸ್ಥಾನ ವನ್ನು ಸೇರುತ್ತಾನೆ. ಬಲದೇವನು ಐಕ್ಯನಾದ ಮೇಲೆ ಅವನಿಂದ ತೆರವಾದ ದಂಡಾದೀಶ ಪದವಿಯನ್ನು ಪಡೆಯುತ್ತಾನೆ. ಬಸ ವೇಶ್ವರ ಸಮಸ್ತರಿಗೂ ಅಣ್ಣನಾಗುತ್ತಾನೆ. ನಿತ್ಯದ ಶಿವಾನುಭವದ ಗೋಷ್ಠಿಯಲ್ಲಿ ಶರಣ ಸಂದೋಹದಲ್ಲಿ, ಭಕ್ತಿಯ ಸಾಗರದಲ್ಲಿ ಓಲಾಡುತ್ತಿರುತ್ತಾನೆ. ಅವನೊಬ್ಬ ಶಿವಾಂಶ ಸಂಭೂತನೆನಿಸಿ, ಅನೇಕ ಪವಾಡಗಳನ್ನು ಮೆರೆಯುತ್ತಾನೆ. (ಅವನ ಪವಾಡಗಳ ಜೊತೆಯಲ್ಲೆ ನೂರಾರು ಜನ ಶಿವಶರಣರ ಕಥೆಗಳು ಪ್ರಾಸಂಗಿಕವಾಗಿ ಬರುತ್ತವೆ). ಕಲ್ಯಾಣದ ಅಲ್ಲಯ್ಯ ಮತ್ತು ಮಧುಮಯ್ಯರಲ್ಲಿ ಬಾಂಧವ್ಯ ಬೆಳೆದದ್ದು ಜಾತಿ ಸಾಂಕರ್ಯಕ್ಕೆ ಕಾರಣವಾಯಿತೆಂದು ಹಲವು ಜನಪರವಾದಿಗಳ ಚಾಡಿ ಮಾತಿಗೆ ಕಿವಿಗೊಟ್ಟ ದೊರೆ ಅವರಿಗೆ ಉಗ್ರ ಶಿಕ್ಷೆ ವಿಧಿಸುತ್ತಾನೆ. ಇದರಿಂದ ಬೇಸರಗೊಂಡ ಬಸವಣ್ಣ ಕಲ್ಯಾಣವನ್ನು ತೊರೆದು ಕಪ್ಪಡಿಗೆ ಹೋಗಿ ಅಲ್ಲಿ ಸಂಗ ಮನಾಥನಲ್ಲಿ ಐಕ್ಯನಾಗುತ್ತಾನೆ.

**ಶಬರಶಂಕರ ವಿಳಾಸ:**

ಶಿವ ಶಿವೆಯರು ಓಲಗಗೊಟ್ಟಿದ್ದಾಗ ಇಂದ್ರಕೀಲ ಪರ್ವತದಿಂದ ಬಂದ ತಪಸ್ವಿಗಳ ಗುಂಪೊಂದು ನಮ್ಮ ಶಾಂತಿಗೆ ಭಂಗ ತಂದ ಉಗ್ರ ತಪಸ್ವಿ ಅರ್ಜುನನ ಮೇಲೆ ದೂರು ಹೇಳುವರು. ಅರ್ಜುನನ ತಂದೆ ದೇವೇಂದ್ರನು ಅವನ ತಪಸ್ಸನ್ನು ಪರೀಕ್ಷಿಸಿದನು. ಶಿವನು ಭಕ್ತಿ ಸಂಧಾನಕ್ಕೆ ಸುಲಭನು, ಅವನನ್ನು ಘನತಪಸ್ಸನ್ನಾಚರಿಸಿಯೇ ಮೆಚ್ಚಿಸುತ್ತೇನೆ, ಮೆಚ್ಚಿಸಲಾಗದಿದ್ದರೆ ತನ್ನ ಅಸುವನ್ನೇ ಅರ್ಪಿಸುತ್ತೇನೆ ಎಂದ ಅರ್ಜುನನ ಧೃಢ ಪ್ರತಿಜ್ಞೆಗೆ ಮೆಚ್ಚಿ ಹೋಗುತ್ತಾನೆ. ಇಂತಹವನಿಂದ ತಮ್ಮ ಮನಸ್ಸಿಗೆ ನೆಮ್ಮದಿ, ತಮ್ಮ ತಪಸ್ಸಿಗೆ ರಕ್ಷೆ ಬೇಕೆಂದು ಬೇಡಲು ಶಿವನು ಅಭಯ ಪ್ರದಾನ ಮಾಡುತ್ತಾನೆ. ಅದರಂತೆ ಶಿವ ಶಿವೆಯರಿಬ್ಬರೂ ಶಬರ, ಶಬರಿ ಯರಾಗಿ ಇಂದ್ರಕೀಲಕ್ಕೆ ಆಗಮಿಸುತ್ತಾರೆ. ಅಷ್ಟರಲ್ಲಿ ಮೂಕಾಸುರ ಎಂಬ ಪ್ರಚಂಡ ರಕ್ಕಸನು ಹಂದಿಯಾಗಿ ಆರ್ಭಟಿಸುತ್ತಾ ಬೇಡರ ಪಡೆಯನ್ನೆಲ್ಲಾ ಸೀಳತೊಡಗುವನು. ಕೂಡಲೆ ಶಬರ ವೇಷಧಾರಿಯಾದ ಶಿವನು ದಿವ್ಯಾಸ್ತ್ರವೊಂದನ್ನು ಪ್ರಯೋಗಿಸಲು ಹಂದಿಯು ಅದರ ಹೊಡೆತಕ್ಕೆ ತಾಳಲಾರದೆ ತಪಸ್ಸನ್ನಾಚರಿಸುತ್ತಿದ್ದ ಅರ್ಜುನನ ಬಳಿಗೆ ಓಡುವುದು. ಅರ್ಜುನನನು ಗಾಂಡೀ ವದಿಂದ ಬಾಣ ಪ್ರಯೋಗಿಸಿ ಹಂದಿಯನ್ನು ನೆಲಕ್ಕುರುಳಿಸುವನು, ಬೇಟೆ ನನ್ನದೆಂದು, ತನ್ನದೆಂದು ಶಬರಿನಿಗೂ, ಅರ್ಜುನನಿಗೂ ಯುದ್ಧವಾಘಿ, ಅರ್ಜುನನು ಸೋಲನ್ನನುಭವಿಸಬೇಕಾಗಿ ಬರುವುದು. ಆಗ ಮಣಲಿಂಗವೊಂದನ್ನು ನಿರ್ಮಿಸಿ, ಅದಕ್ಕೆ ಪುಷ್ಪಗಳನ್ನ ರ್ಪಿಸಿದಾಗ, ಅವು ಶಬರನ ತಲೆಯ ಮೇಲೆ ಶೋಭಿಸಹತ್ತಿದವು. ಕೂಡಲೇ ಅರ್ಜುನನ ಅಜ್ಞಾನ ದೂರವಾಗಿ, ಆತ ಶಬರ ವೇಷಧಾರಿಯಾದ ಶಿವನ ಅಡಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಾನೆ. ಶಿವನು ಪಾಶುಪಶಾಸ್ತ್ರವನ್ನೂ, ಬ್ರಹ್ಮಶಿರೋಸ್ತ್ರವನ್ನೂ, ಶಿವನು ಅಜಿಜನಾಸ್ತ್ರವನ್ನೂ ಅರ್ಜುನನಿಗೆ ದಯಪಾಲಿಸುತ್ತಾರೆ.

॥ ೫ ॥

ಷಡಕ್ಷರಿ ಲೆಕ್ಕಾಚಾರದ ಕವಿ. ಲಾಕ್ಷಣೀಕರು ಹಾಕಿಕೊಟ್ಟ ನಿಯಮ ನಿಬಂಧನೆಯ ಚೌಕಟ್ಟನ್ನು ಕಿಂಚಿತ್ತೂ ಮೀರದ ನಿಷ್ಠಾವಂತ ರಚಕ.

ಅರಾರೇಜಿರ್ಶಾಸ್ತ್ರ
ಶ್ರೀರೋಹಣಗಿರಿಯನಲ್ಲಿ ನವಕವಿತಾ ಚಿಂ
ತಾರತ್ನಂ ದೊರೆಗುಮೆ ಮಾ
ರಾರಿಯ ಕೃಪೆಯಿಲ್ಲದಂಗೆ ಧರಣೀತಳದೊಳ್॥[೧೬]

–ಎಂದು ಹೇಳಿಕೊಂಡಿದ್ದರೂ ಶಾಸ್ತ್ರದ ಶೃಂಖಲೆಯನ್ನು ಕಡಿದೊಗೆದು, ಪ್ರಾತಿಭವಲಯದಲ್ಲಿ ಸದಾ ನಿಮಿರಿ ನಿಲ್ಲುವ

ಸಾಮರ್ಥ್ಯ ಇವನಿಗಿದ್ದಂತೆ ತೋರುವುದಿಲ್ಲ. ಅವನಲ್ಲಿ ಪ್ರತಿಭೆಗೆ ಮಿಗಿಲಾದ ಪಾಂಡಿತ್ಯ ಪ್ರದರ್ಶನ, ಕಾವ್ಯ ಕಥೆಗೆ ಬದಲು ಕೃತಕ ಬಣ್ಣನೆಯ ಬಿತ್ತರ, ಸ್ವಾನುಭವವನ್ನೂ ಮೀರಿ ಮರೆಯುವ ಕವಿಸಮಯದ ಚಮತ್ಕಾರ, ಕಲಾವಂತಿಕೆಯನ್ನು ಮೆಟ್ಟಿ ನಿಂತ ತತ್ತ್ವಪ್ರದರ್ಶನದ ಹಿರಿಮೆ. 'ಮಿಸುಪ ಕನ್ನಡ'ದ ಮೇಲಿನ ಒಲವಿಗಿಂತ, 'ಬೆಕ್ಕಸಮುತ್ತಸಕ್ಕದದ'ಮೇಲೆ ವಿಶೇಷಾಭಿಮಾನ, ಸ್ವತಂತ್ರಕಲ್ಪನೆಗೆ ಮಿಗಿಲಾದ ಸಂಪ್ರದಾಯಶರಣತೆ, ಹೃದಯವಿಕಾಸಕ್ಕೆ ಬದಲಾದ ಬುದ್ಧಿವಿಲಾಸದ ವೈಭವ, ರಸವನ್ನೂ ಮರೆಸುವ ಅಲಂಕಾರಗಳ ಆರ್ಭಟ– ಇವುಗಳನ್ನು ಕಾಣಬಹುದಾಗಿದೆ. ಆದರೂ ಅವನ ಕವಿತಾಶಕ್ತಿ ಅದ್ಭುತ, ಅನ್ಯಾದೃಶ. ಅವನ ಪಾಂಡಿತ್ಯ, ಭಾಷಾಪ್ರಭುತ್ವ, ಕಲ್ಪಕತೆ– ಇವುಗಳಿಗೆ ಎಣಥವನೂ ಶಿರಬಾಗಬೇಕು. ದೌರ್ಬಲ್ಯವಿಲ್ಲದ ವ್ಯಕ್ತಿಯಿಲ್ಲ, ದೋಷವಿಲ್ಲದ ವಸ್ತುವಿಲ್ಲ. ಪರಮಾತ್ಮನೊಬ್ಬನನ್ನು ಬಿಟ್ಟರೆ ಯಾರೂ ಯಾವುದೂ ಈ ಜಗತ್ತಿನಲ್ಲಿ ಪರಿಪೂರ್ಣವಲ್ಲ. ಅಂದಮೇಲೆ ನಮ್ಮ ಪ್ರೌಢಕವಿ ಷಡಕ್ಷರಿದೇವನ ಕೃತಿಗಳಲ್ಲೂ ಗುಣ, ದೋಷಗಳಿರುವುದು ಅಸಹಜವೇನಲ್ಲ. ಷಡಕ್ಷರ ಕವಿಯ ಲೋಕವ್ಯವಹಾರ ಮೂಲವಾದ ಔಚಿತ್ಯಪ್ರಜ್ಞೆ ಮೆಚ್ಚುವಂಥದು. ತನ್ನ ಮೂರು ಮಾರ್ಗ ಕಾವ್ಯಗಳದ್ದೂ ಸಾರ್ಥಕ ಶಿರೋನಾಮೆ. ಹೇಗೆಂದರೆ ರಾಜಶೇಖರ ವಿಳಾಸ ಮತ್ತು ಶಬರ ಶಂಕರ ವಿಳಾಸಗಳು ಜಗನ್ಮಾತಾಪಿತರ ಲೀಲಾ ವಿನೋದಗಳು; ವಿಳಾಸ ವೈಭವಗಳು, ರಾಜಶೇಖರನೂ ಅವನೇ, ಶಬರ ಶಂಕರನೂ ಅವನೇ. ಇತ್ತ ಸರ್ವಮಂಗಳೆಯೊಡನೆ, ಪುಳಿಂದೆಯೊಡನೆ ಸಲ್ಲಾಪಗೈದವನೂ ಅವನೇ, ಅತ್ತ ಪ್ರಣವ ಪಂಚಾಕ್ಷರಿಯೊಡನೆ, ಧನಂಜಯನೊಡನೆ ಪ್ರತಾಪ ಮೆರೆದವನೂ ಅವನೇ. ಬಸವರಾಜ ವಿಜಯವು ಜಗಜ್ಯೋತಿ ಬಸವೇಶ್ವರನ ಲೀಲಾಭೂಮಿಕೆಯಾಗಿದೆ. ಮಾನವಸೇವೆಯನ್ನು ಮಹಾದೇವನ ಪೂಜೆಯೆಂದು ಭಾವಿಸಿ, ಆಚರಿಸಿ ಐಕ್ಯತೆಯನ್ನು ಪಡೆದ ಮಹದ್ವಿಭೂತಿಯ ಪುಣ್ಯಚರಿತೆ. ಇಂತಹ ಅರ್ಥವಂತಿಕೆಯಿಂದ ಈ ಕೃತಿತ್ರಯಗಳ ಹೆಸರಿನಲ್ಲಿ ಔಚಿತ್ಯ ತುಂಬಿದೆ. ಮೂರು ಕೃತಿಗಳಲ್ಲೂ ಮರ್ತ್ಯದ ಮಾನವರ ಮಹಾಸಾಹಸ ಪ್ರದರ್ಶಿತವಾಗಿದೆ. ಒಂದು ತೌರು ತಮಿಳುನಾಡು, ಮತ್ತೊಂದರದು ಕರ್ನಾಟಕ, ಮಗುದರೊಂದು ಇಂದ್ರ ಕೀಲದ ಮಹಾಟವಿ. ಮೂರೆಡೆಯಲ್ಲೂ ಮನೋಜ್ಞವಾಗಿ ಕಾವ್ಯಕುಸುಮ ಅರಳಿರುವುದ ರಿಂದ ದೇಶೌಚಿತ್ಯಕ್ಕೆ ಧಕ್ಕೆ ಬಂದಿಲ್ಲ. ಅದು ಸತ್ಯದ ಕಾಲ, ನ್ಯಾಯನಿಷ್ಠುರತೆಯ ಕಾಲ, ವ್ರತ, ನೇಮ, ತತ್ತ್ವ, ಸತ್ವಗಳಲ್ಲಾಗಲೀ, ಕುಲೋನ್ನತಿಯಲ್ಲಾಗಲೀ, ವೈಚಾರಿಕತೆಯಲ್ಲಾಗಲೀ, ಅಂತ್ಯದಲ್ಲಿ ಬಯಸುವ ಜಗತ್ ಕಲ್ಯಾಣದ ಅಶಂಸನೆಯಲ್ಲಾಗಲೀ ಷಡಕ್ಷರ ದೇವನ ಔಚಿತ್ಯ ಪ್ರಜ್ಞೆ ಸದಾ ಜಾಗೃತವಾಗಿರುವುದು ಕಂಡುಬರುತ್ತದೆ. ಪ್ರಬಂದೌಚಿತ್ಯದಲ್ಲೂ ಕವಿ ಯಶಸ್ವಿಯಾಗಿದ್ದಾನೆ– ರಾಜಶೇಖರ ವಿಳಾಸಕ್ಕೆ ಆಕರ ಹಾಗೂ ಪ್ರಚೋದನೆ ಗುಬ್ಬಿಯ ಮಲ್ಲಣಾರ್ಯನ 'ಭಾವಚಿಂತಾರತ್ನ'. ಆದರೆ ಎರಡೂ ಕೃತಿಗಳಲ್ಲಿ ಪಂಚಾಕ್ಷರೀ ಮಂತ್ರದ ಮಹಿಮೆ ಮೆರೆದಿದ್ದರೂ, ಕವಿ ಷಡಕ್ಷರಿ ಮೂಲ ಕೃತಿಯಿಂದ ತುಂಬಾ ಮಾರ್ಪಾಟು ಮಾಡಿಕೊಂಡಿದ್ದಾನೆ. ಮಲ್ಲನಾರ್ಯನದು ಸತ್ಯೇಂದ್ರಚೋಳನ ಕಥೆಯಾದರೆ, ಷಡಕ್ಷರಿಯದು ರಾಜಶೇಖರನ ಕಥೆ. ರಾಜಶೇಖರನೇ ಇದರ ಕಥಾನಾಯಕ. ಈ ಮಾರ್ಪಾಟಿನಿಂದ ಪರಿಮಿತ ವ್ಯಾಪ್ತಿಯುಳ್ಳ ವಸ್ತುವಿಗೆ ವಿಸ್ತಾರ ವಾದ ಭಿತ್ತಿಯನ್ನು ಒದಗಿಸಿಕೊಟ್ಟಂತಾಗಿದೆ.ರಾಜಶೇಖರನ ಜನನ, ಬಾಲ್ಯ, ಯೌವನ, ಯುವರಾಜ ಪದವಿ, ಜೈತ್ರಯಾತ್ರೆ, ದಿಗ್ವಿಜಯ, ವಿವಾಹ, ವೈಭವ– ಇತ್ಯಾದು ಹಲವು ಅಂಶಗಳನ್ನು ಸಾರವತ್ತಾಗಿ, ಸವಿಸ್ತಾರವಾಗಿ ಬಣ್ಣಿಸಲು ಅವಕಾಶ ದೊರೆ ಯಿತು. ಕಾವ್ಯದ ವ್ಯಾಪ್ತಿ ಹೆಚ್ಚಿ ಮಹಾಕಾವ್ಯದ ಎತ್ತರ ಬಿತ್ತರಗಳನ್ನು ಪಡೆಯಲವಕಾಶವಾಯಿತು. ಇದೇ ರೀತಿ ಬಸವರಾಜ ವಿಜಯದಲ್ಲಿ ಬಸವಣ್ಣನ ಪವಾಡಗಳಷ್ಟೇ ಅಲ್ಲದೆ ಅವನ ಮಾನವೀಯ ಗುಣಗಳು ಪ್ರದರ್ಶನಗೊಂಡಿವೆ. ಒಂದೊಂದು ಪವಾಡವೂ ಅವನ ಮಾನವತೆಗೊಡ್ಡಿದ ಒಂದೊಂದ ಮಹಾ ಪ್ರತಿಮೆಯಾಗಿರುವುದರಿಂದ ಅಣ್ಣನ ವ್ಯಕ್ತಿತ್ವದ ಔನಿತ್ಯದಲ್ಲಿ ಕವಿಯ ಔನನ್ನತ್ಯವೂ ಮೆರೆದಿದೆ. ಜೊತೆಗೆ ನೂರಾರು ಜನ ಶರಣ ಶರಣೆಯರ ಬದುಕು ಉಪಕಥಾ ರೂಪದಲ್ಲಿ ಬಿತ್ತರಗೊಂಡಿರುವುದ ರಿಂದ ಬಸವರಾಜವಿಜಯ ಕಾವ್ಯಕಥಾಗುಚ್ಛವಾಗಿದೆ. ಅದೊಂದು ಕೋಟಿಲಿಂಗ ಪ್ರತಿಷ್ಠೆಯ ಶಿವಾಲಯವಾಗಿ ಗೋಚರಿಸಿದೆ.

-----------------------------------------------------------------------------

[೧೬] ರಾಜಶೇಖರ ವಿಳಾಸ, ೧–೨೯

ಭಕ್ತಿಯ ಭಾಗೀರಥಿ ಅಲ್ಲಿ ತಾನೇ ತಾನಾಗಿ ಪ್ರವಹಿಸಿದ್ದಾಳೆ. ಮಹಾಭಾರತದ ಕಥಾಭಾಗವೊಂದು ಕಲಾಪೂರ್ಣ ಶಿಲ್ಪವಾಗಿ ಮಾರ್ಪಟ್ಟಿದೆ ಶಬರಸಂಕರವಿಳಸದಲ್ಲಿ. ಅರ್ಜುನನ ತಪೋವೈಭವ, ಇಂದ್ರನ ಪರೀಕ್ಷೆ, ಶಬರ ಲೀಲೆ, ಮೂಕಾಸುರನ ವಧೆ– ಇವೆಲ್ಲವೂ ಮೆಚ್ಚುವಂಥವೇ. ಆದರೆ ಶಬರಶಂಕರ

ವಿಳಾಸದ ವಸ್ತು ಖಂಡಕಾವ್ಯದಷ್ಟು ವ್ಯಾಪ್ತಿಯುಳ್ಳದ್ದು; ಮಹಾಕಾವ್ಯವೊಂದರ ತೂಕಾದ್ದರಿಂದ ಅದರ ತೂಕವೂ ಅಷ್ಟೇ. ಆದರೂ ಕವಿ ಅದನ್ನು ಮಹಾಕಾವ್ಯವೆನಿಸಲು ಯತ್ನಿಸಿದ್ದಾನೆ. ಇಥಹ ಶ್ಲಾಘನೀಯ ಪ್ರಯತ್ನ, ಪ್ರಯೋಗ, ಪ್ರಚುರತೆಗಳಿಂದ ಷಡಕ್ಷರ ದೇವನ ಕಾವ್ಯಗಳು ಗುಣಾಧಿಕ್ಯದಿಂದ ಮೆರೆದಿವೆ.

॥ ೬ ॥

ಹಗಲಿದ್ದ ಬಳಿಯಲ್ಲಿ ಇರುಳಿರಲೇಬೇಕು. ಅಲ್ಲದಿದ್ದರೆ ಹಗಲಿನ ಬೆಲೆ ನಮಗೆ ತಿಳಿಯುವುದಿಲ್ಲ. ಅದೇ ರೀತಿ ಗುಣವಿದ್ದ ಬಳಿಯಲ್ಲಿ ದೋಷವಿರುವುದು ಸಹಜ. ಷಡಕ್ಷರದೇವನ ಕಾವ್ಯಗಳಲ್ಲಿ ಔಚಿತ್ಯವಿದ್ದಷ್ಟೇ ಪ್ರಮಾಣದಲ್ಲಿ ಅನೌಚಿತ್ಯವೂ ಬೆರೆತಿದೆ. ರಾಜಶೇಖರವಿಳಾಸದ ಹದಿನಾಲ್ಕು ಆಶ್ವಾಸಗಳಲ್ಲಿ ಹನ್ನೆರಡು ಆಶ್ವಾಸಗಳು ಕೇವಲ ವರ್ಣನೆಗಾಗಿಯೇ ಮೀಸಲಾಗಿವೆ! ಕಾವ್ಯಕಥೆ ಅಲ್ಲಿ ಮಿಂಚಿ, ಇಲ್ಲಿ ಮಿರುಗಿ, ಮತ್ತಲ್ಲೋ ಇಣುಕಿ– ಕಗ್ಗಾಡಿನ ನಡುವೆ ಹರಿಯುವ ಹಳ್ಳದಂತೆ– ಕಂಡೂ ಕಣಸದಂತೆ ಉದ್ದಕ್ಕೂ ಕುಂಟಿಕೊಂಡೇ ಸಾಗುತ್ತದೆ. ರಾಜಶೇಖರನ ಜನನ, ಬಾಲ್ಯ, ಯೌವನ, ದಿಗ್ವಿಜಯ, ವಿವಾಹ–ಇವುಗಳನ್ನು ಹನ್ನೆರಡು ಆಶ್ವಾಸ ಗಳಲ್ಲಿ ಬಣ್ಣಿಸಿದ ಕವಿ, ಮಹಾಕಾವ್ಯದ ಹೃದಯಪ್ರಾಯವಾದ ತಿರುಕೊಳವಿನಾಚಿಯ ಪ್ರಸಂಗವನ್ನೂ, ಪಂಚಾಕ್ಷರೀ ಮಹಿಮೆ ಯನ್ನೂ, ಶಿವಸಾಕ್ಷಾತ್ಕಾರವನ್ನೂ, ಕೇವಲ ಎರಡು ಆಶ್ವಾಸಗಳಲ್ಲಿ ಹಾರಿಸಿಬಿಟ್ಟಿದ್ದಾನೆ. ಅಷ್ಟೇ ಅಲ್ಲ, ಬಹಳ ಸಮಯದವರೆಗೆ ತಿರು ಕೊಳವಿನಾಚಿಯ ಪರಿಚಯವನ್ನೇ ಕವಿ ಓದುಗರಿಗೆ ಮಾಡಿಕೊಡವುದಿಲ್ಲ. ಅಂದರೆ ಅವಳ ಹೆಸರನ್ನು ಆಶ್ವಾಸಾಂತ್ಯದ ಗದ್ಯ ಭಾಗ ದಲ್ಲಿ ಮಾತ್ರ ಕೊಡುತ್ತಾನೆ. ಮೊದಲನೇ ಆಶ್ವಾಸದಲ್ಲಿ ಅವಳ ಹೆಸರೇ ಬರುವುದಿಲ್ಲ. ಓದುಗರನ್ನು ತುಂಬಾ ಪೇಚಿನಲ್ಲಿ ಸಿಕ್ಕಿಸುತ್ತದೆ. ತಿರುಕೊಳವಿನಾಚಿ ಇಕ್ಕಡಿಯಾದ ಮಗನ ಕಳೇಬರವನ್ನು ಹೊತ್ತು ಸತ್ಯೇಂದ್ರ ಚೋಳನ ಎದುರಿನಲ್ಲಿ ದೂರುಕೊಡುವಾಗ ತನ್ನ ಬದುಕಿನ ಇತಿಹಾಸದ ಹಾಳೆಗಳನ್ನು ತೆರೆಯುತ್ತಾಳೆ. ಈ ಆತ್ಮಕಥನ ತುಂಬಾ ಸಂಗ್ರಹವಾಗಿದೆ. ಇದನ್ನು ಇನ್ನೂ ಸುವಿಸ್ತಾರವಾಗಿ, ಸಾರವತ್ತಾಗಿ ಮತ್ತೊಂದು ಉಪನದಿಯಾಗಿಸಬಹುದಿತ್ತು. ಆದರೆ ಪ್ರಸ್ತುತ ಭಾಗ ಹೃದಯಮಿಡಿಯದ ಒಣ ವರದಿಯಾಗಿಬಿಟ್ಟಿದೆ. ಅಂತೆಯೇ ತನ್ನ ಶಿಶ್ಚೇದನಕ್ಕೆ ರಾಜಾಜ್ಞೆಯಾಗಿದೆಯೆಂದು ತನ್ನ ತಾಯಿ ಅಮೃತಮತಿಗೆ ತಿಳಿಸಿದಾಗ, ಆಕೆಯಲ್ಲಿ ತಾಯಿಯ ಕರುಳು ಮಿಡಿಯುವುದಿರಲಿ, ಸ್ತ್ರೀ ಸಹಜವಾದ ಒಂದು ಹನಿ ಕಣ್ಣೀರು ಬರುವುದಿಲ್ಲ.

"ತಾನತ್ಯಂತ ಶಿವನಿಷ್ಠೆಯಪ್ಪುದಱಿಂ ತಲೆದೋರ್ಪ
ಮನಃಕ್ಷತಾಂಕುರಮಂ ಧೃತಿನಖಾಗ್ರದಿಂ ಚಿವುಂಟಿ,
ಮಗಳ್ದು ಬರಸೆಳೆದು ಮೊಲೆ ತೊರೆಯೆ ಬಿಗಿದಪ್ಪಿ
ಮೊಗಮಂ ನೋಡಿ ಮುದ್ದುಗೆಯ್ದು–
ಎನ್ನಾಳ್ದನ ಸತ್ಯಂ ಗೆಲೆ
ನಿನ್ನಸುವಂ ಭಕ್ತಸಿಶುಗೆ ಕುಡು ಚಿಂತೆಯದೇಕೆ?"[೧೭]

–ಎಂದು ಸಲೀಸಾಗಿ ನುಡಿದುಬಿಡುತ್ತಾಳೆ. ಎಷ್ಟೇ ಸ್ಥಿತಪ್ರಜ್ಞಳಾಗಿದ್ದರೂ ತಾಯಿಯಾದವಳಿಗೆ ಇಂತಹ ನಿಷ್ಠುರತೆ ಅಥವಾ ಉದಾ ತ್ತತೆ ಸಾಧುವಲ್ಲ ಅನ್ನಿಸುತ್ತದೆ. 'ನಿನಿಷ್ಟಮಾವುದದನೆಱಿ'[೧೮] ಎಂದು ಶಿವನು ಪ್ರತ್ಯಕ್ಷನಾಗಿ ಕೇಳಿದಾಗ ಮೊದಲು ಶಂಕರ ಅನಂತರ ಅವನ ತಾಯಿ ತಿರುಕೊಳವಿನಾಚಿಯ ಪ್ರಾಣದಾನವನ್ನು ಬೇಡಿದ ಮಹಾಮಾತೆ ಅಮೃತಮತಿಗೆ ತನ್ನ ಮಗನ ಶಿಶ್ಚೇದನದ ಸುದ್ದಿ ಕಿಂಚಿತ್ತೂ ನೋವು ತರದೆ, ಮೊಲೆ ತೊರೆದುಬುರುವಷ್ಟು ಹರ್ಷ ತಂದಿತೆಂದರೆ ಅದು ಲೋಕದೂರವಾದ ಸಂಗತಿ ಎನ್ನಿಸದಿರದು.

---

[೧೭] ಅದೇ. ಚತುರ್ಥಾಶ್ವಾಸಂ, ಗದ್ಯ ೩೯, ಪದ್ಯ ೪೦. [೧೮] ಅದೇ, ಪದ್ಯ ೮೯.

ಅವಳು ಮಗನನ್ನು ಸತ್ಯಸಂಧತೆಗಾಗಿ ತ್ಯಾಗಮಾಡಲಿ; ಆದರೆ ಮಾಡುವ ಮುನ್ನ ತನ್ನ ತಾಯ್ತನವನ್ನು ಮೆರೆಯಲಿ. ಅಲಿ ಕಾವ್ಯ ರಸಧಾರೆಯಾಗಿ ಹರಿಯುತ್ತದೆ. ಧ್ಯೇಯಕ್ಕಾಗಿ, ಮಗನ ತ್ಯಾಗಧ್ವಜ ಮೆರೆಯುತ್ತದೆ; ಶಿವಸಾಯುಜ್ಯ ಪದವಿ ಲಭಿಸುತ್ತದೆ. ಇದು ಸಹಜವಾದ ಮೆಟ್ಟಿಲು. ಇಹವನ್ನೇ ಮರೆತು ಕವಿ ಪರಕ್ಕೆ ಹಾರಿ ಮುಗ್ಗರಿಸಿದ್ದಾನೆ. ರಾಜಶೇಖರನ ತಲೆ ತೆಗೆಯುವ ಸನ್ನಿವೇಶ ಕಾವ್ಯದ ಒಂದು ರಸ ಘಟ್ಟ. ಆದರೆ ಔಚಿತ್ಯ ಮೀರಿದ ಘಟನೆಗಳಿಂದ ಅದೂ ದೋಷಯುಕ್ತವಾಗಿದೆ. ಕವಿಯ ದರ್ಶನದ್ಯುತಿ ಯಲ್ಲಿ ಕಲೆ ಕರಗಿಹೋಗಿದೆ! ತಲೆ ಮೇಲೆ ತಲೆಗಳು ಬೀಳುವುದರಿಂದ, ರಾಜಕುಮಾರನ ಮರಣದಿಂದುಟಾದ

ಸಾವಿನ ಕಾವು ಆರಿಹೋಗಿ, ಕಡೆ ಕಡೆಯಲ್ಲಿ ಓದುಗನ ಆಸಕ್ತಿ, ಅಭಿರುಚಿಗಳು ಹಾಳಾಗಿ, ನೀರಸ ಹುಟ್ಟುತ್ತದೆ. ಮಂತ್ರದ ಮಹಿಮೆಯನ್ನು ಮೆರಸ ಹೋಗಿ ಕವಿ ಕಲೆಯ ಕೊಲೆ ಮಾಡಿದ್ದಾನೆ, ಇದು ಅನಿವಾರ್ಯವಾದರೂ ಪ್ರಯತ್ನ ಪಟ್ಟಿದ್ದರೆ ಕಲಾತ್ಮಕವಾಗಿ, ರಸವತ್ತಾಗಿ, ಅಪೂ ರ್ವ ಸನ್ನಿವೇಶಗಳಲ್ಲಿ ಒಂದಾಗಿ ರಚಿಸಬಹುದಾಗಿತ್ತು. ಹಾಗಾಗದೆ ಮೈ ತುಂಬ ಫಲ ಬಿಟ್ಟ ಮಾವಿನಮರಕ್ಕೆ ದೊಣ್ಣೆಯಿಂದ ಹೊಡೆದರೆ ಉದುರುವ ಕಾಯಿಗಳಂತೆ ಪಂಚಾಕ್ಷರೀ ಮಂತ್ರದ ಮಹಿಮೆಗಾಗಿ ಏಳು ತಲೆಗಳು ಒಂದಾದ ಮೇಲೊಂದು ಉದುರಿ ನಿಜವಾದ ಕಾವು ಉಳಿಯದಂತೆ ಮಾಡಿವೆ. ಅದೂ ಕಲಾತ್ಮಕವಾದ ರಚನೆಯಾಗದಿದ್ದರೆ ನಿಜಕ್ಕೂ ಕಾವ್ಯವು ಮಹೋನ್ನತಿಯ ಮಜಲು ಮುಟ್ಟುತ್ತಿತ್ತು. ಇದರಿಂದಾಗಿ ಷಡಕ್ಷರಕವಿಯ ಪ್ರತಿಭಾಶಕ್ತಿ ಮೊದಮೊಲು ಪ್ರಜ್ವಲಿಸಿ, ಕಡೆಕಡೆಯಲ್ಲಿ ನಂದಿ ಹೋಗಿದೆ– ಎಂಬ ಟೀಕೆಗೂ ಗುರಿಯಾಗಿದ್ದಾನೆ. ಏನೇ ಇರಲಿ, ತುಂಬು ತೊರೆಯಾಗಿ, ಹನ್ನೆರಡು ಆಶ್ವಾಸಗಳ ವಿಶಾಲ ಭೂಮಿಕೆಯಲ್ಲಿ ಭೋರ್ಗರೆದು ಹರಿವ ಕಾವ್ಯವಾಹಿನಿ, ಅಂತ್ಯದಲ್ಲಿ ಕಿರುಹಳ್ಳದ ಆಕೃತಿ ಪಡೆದದ್ದು ಅನೌಚಿತ್ಯಕ್ಕೆ ಹಾದಿ ಮಾಡಿಕೊಟ್ಟಿದೆ. ಮೊದಲು ಹನ್ನೆರಡು ಆಶ್ವಾಸಗಳಲ್ಲಿ ಅತಿ ವ್ಯಾಪ್ತಿ ದೋಷವಿದ್ದರೆ, ಕಡೆಯ ಎರಡು ಆಶ್ವಸಗಳಲ್ಲಿ ಅವ್ಯಾಪ್ತಿ ದೋಷ ತುಂಬಿದೆ.

ಶಬರ ಶಂಕರ ವಿಳಾಸವು ಒಂದು ಖಂಡ ಕಾವ್ಯವೇ ಹೊರತು ಮಹಾಕಾವ್ಯವಲ್ಲ. ಆಗಲು ಸಾಧ್ಯವೂ ಇಲ್ಲ, ಈ ಯತ್ನದಲ್ಲಿ ಕವಿ ಸೋತಿದ್ದಾನೆ. ಅಂದರೆ ಮಹಾಕಾವ್ಯವನ್ನಾಗಿಸಲು ಹೋಗಿ ಸಿಕ್ಕಾಬಟ್ಟೆ ವಸ್ತುವನ್ನು ಹಿಗ್ಗಿಸಿ ಬರೀ ಬಣ್ಣನೆಯಲ್ಲಿ ಗಾತ್ರವನ್ನು ಹೆಚ್ಚಿಸಿದ್ದಾನೆ. ಸಂಗ್ರ ಹದಲ್ಲಿ ಬರುವ ಸತ್ವ, ಶಕ್ತಿ ವಿಸ್ತೃತಗೊಳಿಸಿದಾಗ ಬರುವುದಿಲ್ಲ. ಶಬರಶಂಕರ ವಿಳಾಸ ಈ ರೋತಿಯ ಹಿಂಜಿದ ಅರಳೆಯಾಗಿದೆ. ಅತಿವ್ಯಾಪ್ತಿ ದೋಷಕ್ಕೆ ಬಲಿಯಾಗಿದೆ. ವೃಷಭೇಂದ್ರವಿಜಯ ಕವಿಯ ದ್ವಿತೀಯ ಮಹಾಕಾವ್ಯ. ಅದರಲ್ಲಿ ಅವನ ಬಣ್ಣನೆಯ ಚಟ ಕುಗ್ಗಿ, ಕಥೆಗಳ ಕಡೆಗೆ ಗಮನ ಹರಿದಿರುವುದರಿಂದ , ಭಕ್ತಿಯು ಬಹುವಿಧದಲ್ಲಿ ಬಿತ್ತರಗೊಂಡಿರುವುದರಿಂದ ಕಾವ್ಯ ಓದುಗರನ್ನು ತನಗೆ ತಾನೇ ಓದಿಸಿಕೊಂಡು ಹೋಗುತ್ತದೆ. ಅಲ್ಲಿ ಬದುಕಿನ ಬಹುಮುಖಗಳನ್ನೂ ಕಾಣುತ್ತೇವೆ. ಶರಣ ಶರಣೆಯರ ನಿಷ್ಠಾಭಕ್ತಿ, ಮುಗ್ಧ ಭಕಿ, ದಾಸೋಹಭಾವ, ಧೈನ್ಯಭಾವ, ಕಾಯಕನಿಷ್ಠೆ, ಲಿಂಗಪೂಜಾವೈಭವ– ಇತ್ಯಾದಿಗಳಲ್ಲಿ ನಾವು ಮೈಮರೆಯುತ್ತೇವೆ. ಶುಷ್ಕ ವರ್ಣನೆಯಿಲ್ಲ, ಅನಗತ್ಯ ಪ್ರಸಂಗಗಳಿಲ್ಲ. ಬಸವರಾಜವಿಜಯ ಒಮದು ಉದ್ಯಾನದ ಮಧದ್ಯದಲ್ಲಿರುವ ಶಿವಾಲಯ. ವಿಹಾರಿಗೆ ಆನಂದ, ಆತ್ಮೋದ್ಧಾರಗಳನ್ನು ನೀಡುವ ತೀರ್ಥಕಾವ್ಯ!

॥ ೭ ॥

ಕಲೆಯಲ್ಲಿ ಅತಿವ್ಯಾಪ್ತಿಯೂ ಒಂದು ದೋಷ, ಅತಿ ಅವ್ಯಾಪ್ತಿಯೂ ಒಂದು ದೋಷ. ಷಡಕ್ಷರ ಕವಿಯ ರಾಜಶೇಖರ ವಿಳಾಸ ಮತ್ತು ಶಬರ ಶಂಕರ ವಿಳಾಸಗಳು ಈ ದೋಷಗಳಿಂದ ಬದ್ಧವಾಗಿವೆ. ಕಥಾ ಸಂವಿಧಾ ನದಲ್ಲಿ ಸಾತತ್ಯವಿಲ್ಲ. ಈ ಶೈಥಿಲ್ಯಕ್ಕೆ ಮೂಲ ಕಾರಣ ಕವಿಯ ಅಳತೆ ಮೀರಿದ ವರ್ಣನಾಕಾಂಕ್ಷೆ. ಮೇಲಿನ ಎರಡೂ ಕೃತಿಗಳಲ್ಲಿ ಔಚಿತ್ಯ ಮೀರಿದ ವರ್ಣನೆ ತುಂಬಿದೆ. ಇವುಗಳಲ್ಲಿ ಕಥೆಗಳಿಗಾಗಿ ವರ್ಣನೆಯಲ್ಲ. ವರ್ಣನೆಗಾಗಿ ಕಥೆ! ಅಷ್ಟಾದಶವರ್ಣನೆಗಳ ಪಟ್ಟಿ ಇಟ್ಟುಕೊಂಡು, ಆ ಪಟ್ಟಿಯ ಪ್ರಕಾರ ಅನುಭವವಿರಲಿ, ಇಲ್ಲದಿರಲಿ ನೂರಾರು ವೃತ್ತ, ಕಂದಗಳನ್ನು ಹೆಣೆದೇ ತೀರತ್ತಾನೆ.[೧೯] ಅನೇಕ ವರ್ಣನಾ ಪದ್ಯಗಳು ಕಟ್ಟಿದವುಗಳೇ ಹೊರತು ಹುಟ್ಟಿದವುಗಳಲ್ಲ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಸಮುದ್ರ ವರ್ಣನೆ–

---

[೧೯] ರಾಜಶೇಖರ ವಿಳಾಸ ಮತ್ತು ಶಬರ ಶಂಕರ ವಿಳಾಸದ ಪ್ರತಿ ಆಸ್ವಾಸವನ್ನು ನೋಡಿ

ಅಂಭಃ ಕುಂಭೀನ ಕುಂಭೀನಸ ಮಕರ ಮಹಾಕೂರ್ಮ ಕೀರ್ಣೋರ್ಮಿ ಮಾಲಾ
ಜೃಂಭದ್ವಂಭೋಳಿ ಹಸ್ತಾಹತಚಕಿತಗತಕ್ಷಾದ್ರ ವಿಸ್ತಾರವಿದ್ಯುಂ
ತ್ಸಂಭಿನ್ನಾಂಭೋಭೃದುದ್ಯತ್ತಟ ಚಟುಳ ಚಳನ್ಮೀನ ಫೇನಪ್ರತಾನಂ
ಶುಭದ್ಗಂಭೀರಿಮಂ ರಂಜಿಸಿದುದಮಮ ದತ್ತೇಂದ್ರಭದ್ರಂ ಸಮುದ್ರಂ.[೨೦]

ಇದರಲ್ಲಿ ಸಮುದ್ರದ ನಿರ್ಘೋಷ ಕೇಳಿ ಬರುತ್ತದೆಯೇ ಹೊರತು, ಸಮುದ್ರ ನಮ್ಮ ಕಣ್ಣಿಗೆ ಕಾಣಿಸುವುದೇ ಇಲ್ಲ. ಅಲ್ಲದೆ ಅರ್ಥೈಸಲು ಶ್ರಮ ಎಷ್ಟು? ಸುಮಾರು ಸಮಯ ವ್ಯಯಮಾಡಿ ನಾವು ಪಡೆದದ್ದಾದರೂ ಏನು? ಮೀನು, ಮೊಸಳೆ, ಕಪ್ಪೆ

ಚಿಪ್ಪು, ನೊರೆ, ನೊರಜು ಇತ್ಯಾದಿ. ಸಿಂಗಳೇಂದ್ರನು ಚೋಳ ಭೂಪಾ ಲನ ಮೇಲೆ ದಂಡೆತ್ತಿ ಬರುತ್ತಾನೆಂಬ ಸುದ್ದಿಯನ್ನು ಮುಟ್ಟಿಸಲು ಬಂದ ರಾಜಶೇಖರನ ಒಡ್ಡೋಲಗದಲ್ಲಿ ಮೃಗಯಾ ವಿಹಾರ ವರ್ಣನೆ, ಬೇಡ ಬೇಡತಿಯರ ಬೇಟದ ವರ್ಣನೆ ಮಾಡುವುದು ಮಂತ್ರಿ ಪತಿ ಮೋಹಿಯು ಸತ್ಯೇಂದ್ರ ಚೋಳನ ಸಮಗಮುಖದಲ್ಲಿ ಸರ್ವಮಂಗಳೆಯ ರೂಪು ಲಾವಣ್ಯಗಳನ್ನು ಬಿತ್ತರಿಸುವುದು. ರಾಜಶೇಖರ–ಸರ್ವಮಂಗಳೆಯ ವಿವಾಹಾನಂತರ ಋತುಗಳನ್ನು ಕುರಿತು ವರ್ಣಿಸುವುದು ಸೂಳೆಗೇರಿಯನ್ನು ಬಣ್ಣಿಸುವುದು ವೈಹಾಳಿಗೆ ಹೊರಟ ರಾಜಶೇಖರನಿಗೆ ಮಿತವಚನನು ಮಿತವಿಲ್ಲದ, ಹಿತವಲ್ಲದ ಹಿತೋಪದೇಶ ಮಾಡುವುದು ಇವೆಲ್ಲ ಅನೌ ಚಿವತ್ಯಕ್ಕೆ ಸಾಕ್ಷಿಗಳಾಗಿವೆ. ಜೊತೆಗೆ ಅವನ ಸಂಸ್ಕೃತ ಭೂಯಿಷ್ಠವಾದ ಪುರುಷ ಶೈಲಿ.

ತ್ವಂಗತ್ತುಂಗತ್ತರಂಗ ಫಲಿತತಟಿತ್ವತ್ತ ಟಿತ್ಸ್ವರ್ಣಭೂಷಾ
ಸಂಗಾಂಗಾಂಭಃ ಕಣೋದ್ಯನ್ಮನಿಗಣತರಳೀಭೂತ ಕೂರ್ಮೇಂದ್ರ ರತ್ನ
ಪಿಂಗಾಬ್ಜ ಸ್ಪಾರರೇಣು ಸ್ಪುಟ ಕನಕಪಟ ಪ್ರಾವೃತಂ ಮತ್ಸ್ಯಲೀಲಾ
ಪಾಂಗಂ ಭೂಭೃತ್ಕಿರೀಟಂ ಪ್ರಕಟಿತಟನೀಮೋಹಮುದ್ರಂ ಸಮುದ್ರಂ.[೨೧]

ಉಕ್ಕಿನ ಕಡಲೆಯಾದರೂ ಬೇಕು. ಇಂತಹ ಶ್ರುತಿ ಕಷ್ಟವಾದ ಪದ್ಯಗಳು ಬೇಡ ಅನ್ನಿಸುತ್ತದೆ. ಸಾಧಾರಣರಿಗಂತೂ ಅವನ್ನು ಅಗಿಯುವುದು, ಅರಗಿಸಿಕೊಳ್ಳುವುದು ಸಾಧ್ಯವೇ ಇಲ್ಲ. ಇದು ಕೇವಲ ಪಂಡಿತೋತ್ತಮರಿಗೆ ಪ್ರಿಯವಾಗುವ ಆಹಾರ; ಸಾಮಾನ್ಯರ ಗಂಜಿಯಲ್ಲ! ಹೀಗಾಗಿ ಷಡಕ್ಷರದೇವನ ಕೃತಿಗಳು ಪಾಂಡಿತ್ಯ ಪ್ರದರ್ಶನದ ವೇದಿಕೆಳೇನೋ ಎಂಬ ಸಂದೇಹ ಹುಟ್ಟಿಸುತ್ತವೆ. ಆದರೆ ಔಚಿತ್ಯಪೂರ್ಣವಾದ ವರ್ಣನೆಗಳು ವಿಫಲವಾಗಿವೆ. ಅರಣ್ಯದ ವರ್ಣನೆ ಶಬರ ಶಂಕರ ವಿಳಾಸದಲ್ಲೂ, ಬಸವರಾಜ ಬಿಜಯದ ಕಣ್ಣಪ್ಪನ ಕಥಾಭಾಗದಲ್ಲೂ ಔಚಿತ್ಯವೆನಿಸಿವೆ. ರಾಜಶೇಖರ ವಿಳಾಸದಲ್ಲಿ ಅನುಚಿತವಾಗಿ ಬರುವ ನೂರಾರು ಶೃಂಗಾ ರದ ಪದ್ಯಗಳಿಗಿಂತ ಬಸವರಾಜ ವಿಜಯದ ಮತ್ತು ಶಬರ ಶಂಕರ ವಿಳಾಸದ ಬೇಡತಿಯರ ವರ್ಣನೆ ಹಿತಮಿತವಾಗಿದೆ.

॥ ೮ ॥

'ಕಥೆಯಗತಿ ಕಡಿಮೆ; ವರ್ಣನೆಯ ವಿವರ ಹೆಚ್ಚು. ಉತ್ಪ್ರೇಕ್ಷೆಯ ಮೇಲೆ ಉತ್ಪ್ರೇಕ್ಷೆ. ಕಲ್ಪನೆಯ ಮೇಲೆ ಕಲ್ಪನೆ ಬರುವುದ ರಿಂದ ಸಾಂಪ್ರದಾಯಿಕವಾದ ವರ್ಣನೆಗಳೂ ಸುಂದರವಾಗಿ ಕಾಣುತ್ತವೆ. ಅವನ್ನು ಅರಿತು ಅನುಭವಿಸಿ ಆನಂದಿಸಲು ತಾಳ್ಮೆ ಬೇಕು. ಷಡಕ್ಷರಿದೇವನ ತಪ್ಪಲು ಪ್ರದೇಶ, ಗುಹೆಗಳು, ತಪೋವನ, ನದೀತೀರ ಮೊದಲಾದ ಗತಾನುಗತಿಕ ವರ್ಣನೆಗಳಲ್ಲಿಯೂ ಕಾವ್ಯ ಸೌಂದರ್ಯ ತುಂಬಿ ತುಳುಕುತ್ತದೆ. ಇವೆಲ್ಲ ವರ್ಣನೆಗಳ ಸಾರವನ್ನು ಹೀರುವಾಗ ಕಥೆಗಾಗಿ ದುಡುಕಿ ಓಡದೆ, ನಿಂತು ನಿಂತು ಕಾವ್ಯಸೌಂದರ್ಯವನ್ನು ಸವಿಯಬೇಕು.'[೨೨]

---

[೨೦] ಅದೇ, ಪ್ರಥಮಾಶ್ವಾಸಂ, ಪದ್ಯ ೯೦.
[೨೧] ಬಸವರಾಜ ವಿಜಯಂ, ಪ್ರಥಮಾಶ್ವಾಸಂ, ೬೪.
[೨೨] ಡಾ.ಆರ್.ಸಿ. ಹಿರೇಮಠ, ಡಾ.ಎಂ.ಎಸ್. ಸುಂಕಾಪುರ, ರಾಜಶೇಖರ ವಿಳಾಸಂ, ಪ್ರಸ್ತಾವನೆ, ಪು. LV (೧೯೬೮).

ಈ ಮಾತು ಅಕ್ಷರಶಃ ಸತ್ಯ. ಷಡಕ್ಷರಿದೇವನ ಕಾವ್ಯಪ್ರಪಂಚಕ್ಕೆ ಕಾಲಿಡುವ ಮೊದಲು, ಓದುಗ ಅನೇಕ ಸಿದ್ಧತೆಗಳನ್ನು ಮಾಡಿ ಕೊಳ್ಳಬೇಕಾಗುತ್ತದೆ. ಅವನು ಬಹುಶ್ರುತನಾಗಿರಬೇಕು. ಶಾಸ್ತ್ರಾಧ್ಯಯನದಲ್ಲಿ ನಿಷ್ಣಾತನಾಗಿರಬೇಕು. ಅವನಲ್ಲಿ ಪಾಂಡಿತ್ಯವೂ ಇರ ಬೇಕು, ಕಲ್ಪನಾಶಕ್ತಿಯೂ ವಿಪುಲವಾಗಿರಬೇಕು, ಶಬ್ದದಾರಿದ್ರ್ಯರಿಗೆ ಅಲ್ಲಿ ಪ್ರವೇಶವೇ ಇಲ್ಲ. ಸಕಲ ಸಜ್ಜಿಕೆಗಳಿಂದಲೂ ಕೂಡಿ, ಸಾರಸ್ವತ ವಿಹಾರವನ್ನು ಕೈಗೊಳ್ಳುವ ರಸಿಕನಿಗೆ ಅದೊಂದು ನಂದನ. ಅಲ್ಲಿನ ಮುಳ್ಳು ಬೇಲಿಯನ್ನು ಭೇದಿಸಿ, ಕಳ್ಳು ಕಳ್ಳೆಗಳನ್ನೂ, ಬೆಳೆದು ನಿಂತಿರುವ ಬಂದಳಿಕೆ ಬಳ್ಳಿಗಳನ್ನೂ ದೂರಮಾಡಿ ನೋಡಿದರೆ ನೂರಾರು ಕವನ ಕುಸುಮಗಳು ಮಘ ಮಘಿಸಿ ಆಹ್ವಾ ನಿಸುತ್ತವೆ. ಅವು ಸುಂದರ ಭಾವಗೀತೆಗಳೂ ಹೌದು.
ಈಗ ಅಂತಹ ಒಂದು ರಸಯಾತ್ರೆಯನ್ನು ಕೈಗೊಳ್ಳೋಣ–

ಚೋಳಮಂಡಲದ ದೇವಗಂಗೆಯೆನಿಸಿದ ಕಾವೇರಿ ಕವಿಯ ಕಣ್ಣಿಗೆ–
ಶರಧಿಯೊಳೆಗೆದ ವಿಷಮಂ
ಧರಿಯಿಸಿ ಸುರರಂ ಸಮಂತು ಪೊರೆದಭವಂಗೀ
ಧರೆ ಪಾಸಿದ ನಡೆಮಡಿಯೆನೆ
ಕರ ಮೆಸೆದುದು ವಿಮಳಗುಣದಿನಾ ನದಿ ಪದಪಿಂ[೨೩]
ಹೌದು! ಸುರಾಸುರಮಥನ ಸಂಜಾತವಾದ ಹಾಲಾಹಲವನ್ನು ಆಪೋಷಣೆ ಗೈದ ಜಗದೋದ್ಧಾರಕನಾದ ಪರಶಿವನಿಗಾಗಿ ಭೂದೇವಿ ಹಾಶಿದ ನಡೆಮಡಿಯಂತೆ ಕಾಣಿಸುತ್ತಿತ್ತು ಎಂಬ ಕಲ್ಪನೆ ಭವ್ಯವಾಗಿದೆ.
ಆ ನದಿಯ ತಟ ನಿಕಟ ಪ್ರದೇಶದಲ್ಲಿ–
ತೂಗುತೆ ತೊನೆಯುತೆ ಬಳ್ಕುತೆ
ಬಾಗುತೆ ಕಂಪಿಡುತೆ ಕನಕರುಚಿದಾಳುತ್ತಂ
ರಾಗಿಸುತೆ ರಂಜಿಸುತೆ ಸೊಂ
ಪಾಗಿರ್ದುವು ಕಣ್ಗೆ ಗಂಧಶಾಲಿ ವನಂಗಳ್[೨೪]
ಇಂತಹ ಬತ್ತದ ಗದ್ದೆಗಳಲ್ಲಿ ನೆಲ್ಲು ಸವಿಯಲು ಬಂದ ಗಿಳಿಗಳ ಬಳಗ ನೋಡಲು ಸುಂದರ ಅವುಗಳನ್ನು ಓಡಿಸಲು ಬಂದ ಹಳ್ಳಿ ಹೆಣ್ಣುಗಳ ಸಮೂಹ ಅದಕ್ಕಿಂತಲೂ ರಂಜನೀಯ, ನೋಡಿ–
ಬಡನಡು ಬಳ್ಕೆ ಬಟ್ಟಮೊಲೆ ಮೇಲುದನೆತ್ತೆ ನಿತಂಬಮಂಡಳಂ
ಪೊಡರೆ ಕಪೋಲರಂಗದೊಳೆ ನರ್ತಿಸೆ ಕನ್ನವುರಂ ಪರಾಗಮಿ
ರ್ಕಡೆಗೆಡೆಯಾಡೆ ನೋಟಮಳಿವುತ್ತಿರೆ ಸೋರ್ಮುಡಿ ಬಂದು
ನಿಂದು ಪೆಣ್ಗಡಣಮದಲ್ಲಿ ಪಾರುವುದು ಕೈರವದಿಂದಿಡುತಂಶುಕಾಳಿಯಂ[೨೫]
ಈ ಚೆನ್ನೆಯರ ಭಾವ, ಭಂಗಿ, ವನಪು, ವೈಯಾರ ವೈವಿಧ್ಯಮಯ ಅವರಲ್ಲಿ. ವೃತ್ತಕುಚದ ಮತ್ತಗಜಗಮನೆ ಒಬ್ಬಳು
ಏರುಂಜವ್ವನೆ ಮೇಲುದು
ಜಾರೆ ಕೆಲಂದೋರೆ ತೋರ ಮೊಲೆಗಳ್ಮೊದಲೊಳ್
ಪಾರಿಸಿದಳ್ ಯುವಧೃತಿಯಂ
ಪಾರಿಸಿದಳ್ ಬಳಿಗೆ ಗಿಳಿಯ ಕರತಳರವದಿಂ[೨೬]

------------------------------------------------------------------------
--

[೨೩] ರಾಜಶೇಖರ ವಿಳಾಸಂ, ದ್ವಿತೀಯಾಶ್ವಾಸಂ, ಪದ್ಯ ೫
[೨೪] ಅದೇ. ಪ. ೧೧
[೨೫] ಅದೇ. ಪ. ೧೬
[೨೬] ಅದೇ. ದ್ವಿತೀಯಾಶ್ವಾಸಂ, ಪ. ೨೦

ಓಹೋ! ನವತಾರುಣ್ಯದ ಆ ಅರುಣತೆ ಯುವಕರ ಧೈರ್ಯವನ್ನು ಹಾರಿಸುವುದರಲ್ಲಿ ಆಸ್ಚರ್ಯವೇನಿಲ್ಲ.

'ಇಂತನಂತಜನ ಮನಸ್ಸೂಚಿ ಸೂತ್ರಮಾದ ಕಳಮಕ್ಷೇತ್ರದನತಿದೂರದ ಭೂರಮೆಯ ಸಸಿಂಧೂರ ಸೀಮಂತ ರೇಖೆಯಂತೆ ಚೆಂಬುಡಿತಳ್ತು ಕೋಗಿಳಿಪ' ರಾಜಮಾರ್ಗದ ಬದಿಯಲ್ಲಿನ ಅರವಂಟಿಗೆಯಲ್ಲಿಯೂ ಶೃಂಗಾರದಾಗರವೇ!
ನೀರೆರೆವಚ್ಚ ಜವ್ವನೆಯ ಮೇಲುದು ಮೆಲ್ಲನೆ ಜಾರೆ ಗೌರರು
ಕ್ಚಾರುಕುಚಂಗಳೆಂಬ ಕಳಶಂಗಳ ಕಾಂತಿಪಯಃ ಪ್ರವಾಹಮಂ
ಪೀರುತೆ ಕಣ್ಗಳಿಂ ಮರೆದು ನೀರ್ಗುಡಿ ವಂದಮನಂದು ನಿಂದುನಿ
ಸ್ಸಾರಮುಖಂ ಮನೋಭವನ ಬಾಣದ ಬರಿಗೆ ಬಂದನಧ್ವಗಂ[೨೭]

ಶಿವನ ನೆಲೆವೀಡಾದ ಚೋಳಮಂಡಲದಲ್ಲಿ ಶರಣ ಸಂದೋಹದ ತೌರು ಧರ್ಮವತಿ. ಅದರ ಬಹಿರುದ್ಯಾನ ದೇವಲೋಕದ ಸುರನಂದನ !

ಎಳನನೆ ತೀವಿರ್ತೋರ್ಪ ಮೊನ್ನಲ್ಲಿಗೆ ತಾವರೆ ತೀವಿರ್ತೋರ್ಪತಂ
ಗೊಳಮಳಿ ತೀವಿರ್ತೋರ್ಪ ಮಧುದೂತಿಯಲರ್ತವ ತೀವಿರ್ತೋರ್ಪ ಪಾ
ಟಳಿಗಿಳಿ ತೀವಿರ್ತೋರ್ಪ ಪೊಸಮಾವು ತಿರ್ಬಿಡೆ ತೀವಿರ್ತೋರ್ಪ ಮಂ
ಜುಳತರಮಾದಶೋಕೆ ಮೆರೆದಿರ್ಪುದು ತದ್ವನ ಮಧ್ಯದೇಶದೊಳ್[೨೮]

ಆ ದೇಶದ ರಾಜರಾಣಿಯರು ಸತ್ಯೇಂದ್ರ ಚೋಳ ಮತ್ತು ಅಮೃತಮತಿ ಮಹಾದೇವಿ. ಅಮೃತಮತಿಯ ಒಂದು ಪುಣ್ಯವಾಸರದ ಸುಪ್ರಭಾತ ಸಮಯದೊಳ್ ಶಿವಲಿಂಗ ಪೂಜಾನಂತರಂ ಪುರಾಣಮಂ ಕೇಳ್ವಲ್ಲಿ ಮಾರ್ಕಂಡೇಯ ಚರಿತಂ ಬರೆವರ ತದ್ಭಾಲ ಲೀಲೆಸಿಯುಮನಾಕರ್ಣಿ ತನಗೆ ತನಯನಿಲ್ಲದಪ್ಪುದರಿಂ ನೆನೆದು ಬಿಸುಸುಯ್ದು ಕೆಲದೊಳಿರ್ದ ಕೆಳದಿ[೨೯]ಯೊಡನೆ ತನ್ನ ದುಃಖ ವನ್ನು ತೋಡಿಕೊಳ್ಳುತಾಳೆ. ಪುತ್ರದೋಹಳದ ಬಣ್ಣನೆಯಲ್ಲಿ ಜೀವನಾನುಭವದ ನೈಜತೆ ಅಡಗಿದೆ. ಅದರಲ್ಲಿ ಒಂದೆರಡು ಪದ್ಯಗಳು–

ಕರತಳದಿಂದನ್ನಯ್ಯನು
ಣ್ಬೆರಲಂ ಪಿಡಿದೇಳ್ದು ಜನನಿ ನಡೆದಪೆನೆನುತೊಂ
ದೆರದಡಿಯನಿಟ್ಟು ನಿರಿಯಂ
ಭರದಿಂ ತಳ್ಕೈಪ ಮಗನನೆಂದೀಕ್ಷಿಪೆನೋ[೩೦]

ಮಗನಂ ತಳ್ತಮರ್ದಪ್ಪಿನೋಡಿ ಮೊಗಮಂ ಮುಂಡಾಡಿ ನೇಹಂ ಮನಂ
ಬುಗೆ ಮಾತಾಡಿಸಿ ಲಲ್ಲೆಗೆಯ್ದು ನಗಿಸುತ್ತಿರ್ಕೈಗಳಂ ಸಾರ್ಚಿ ಮಂ
ಡೆಗೆ ಬಟ್ಟಾಡಿ ಕೆಲಕ್ಕೆ ಚಿಮ್ಮಿ ಮೊಲೆವಾಲಂ ಮತ್ತೆ ಬಾಯ್ಗೂಡಿ ಮೆ
ಲ್ಲಗೆ ತೊಟ್ಟಿಲ್ಗಿರದಿಟ್ಟು ತೂಗುವೆಳೆವೆಣ್ಣೆಂ ನೋಂಪಿಯಂ ನೋಂತಳೋ[೩೧]

ಪಡಿನೆಳಲಂ ಮಣಿಕುಟ್ಟಿಮ
ದೆಡೆಯೊಳ್ಕಡೆ ನೋಡಿ ದಾಯೆನುತಂ ಕೈ
ದುಡುಕಲದು ತುಡುಕೆ ನಗೆ ನಗೆ
ಕಡು ಬಿನದಂ ಬಡೆವ ಕಂದನೆಂದಾದಪನೋ[೩೨]

---

[೨೭] ಅದೇ. ಪ. ೨೬
[೨೮] ಅದೇ. ಪ.೨೭
[೨೯] ಅದೇ. ತೃತೀಯಾಶ್ವಾಸಂ, ೪೫ನೆಯ ಪದ್ಯದ ಗದ್ಯ
[೩೦] ಅದೇ. ೫, ೪೯
[೩೧] ಅದೇ. ೫, ೫೧
[೩೨] ಅದೇ, ೫, ೫೨

– ಈ ಬಯಕೆ ಸಹಜ, ಬಣ್ಣನೆ ಸಹಜ ಸುಂದರ; ಸರ್ವಮಂಗಳೆಯೊಡನೆ ರಾಜಶೇಖರನು ವನವಿಹಾರ ಕೈಗೊಂಡಾಗ ಹಲವು ಪ್ರಮುದೆಯರು ಸ್ವಚ್ಛಂದವಾಗಿ ವಿಹರಿಸಿ ವರ್ತಿಸುತ್ತಾರೆ–

ಓರ್ವಳ್ ಮತ್ತಕಾಶಿನಿ ಪೆಱತೊಂದು ಸರಳ ಚೂತ ಶಾಖಾಂತರದೊಳ್
ಪೂಗೊಯ್ಯಲೆತ್ತೆ ತೋಳಂ
ಮೇಗಣ್ಗಿನಿಸೊಗೆದ ದಕ್ಷಿಣಸ್ತನ ಮುಕುಳಂ
ಪೂಗಣೆಯನೀಕ್ಷಿಪರ ನಿಸ
ಲಾಗಳ್ತೆಗೆದಬ್ಜಬಾಣಮೆನೆ ಕಣ್ಗೊಳಿಕುಂ[೩೩]

ವರ್ಣ ಶಿಲ್ಪಿಯ ಕಲಾಕುಂಚಕ್ಕೆ ಹಬ್ಬ !
ಸೂಳೆಗೇರಿಯ ವರ್ಣನೆಯಂತೂ ರಸಿಕ ರಸನೆಗೆ ಜೇನು ಹನಿದಂತೆ !
ಒಬ್ಬ ವೇಶ್ಯೆ ತನ್ನ ಸಖಿಗೆ–
ಮುಳಿಯದಿರಾಳಿ ನಿನ್ನ ಮನದಾಸರ ಮಾತುಮನಾಡಿ ಪೋಳ್ತನೀಂ
ಕಳಿಯದಿರಾತನೊಳ್ನಖರ ದಕ್ಷತ ಸಂತತಿಯಂ ರತಾಂತದೊ
ಳ್ತಳೆಯದಿರುಟ್ಟುದಂ ಕಳೆಯದಿರ್ನೆರೆದೀಗಳೆ ಬೇಗ ಬರ್ಪುದು
ತ್ಪಳಸಖಿಮಂಡಳೋದಯಕೆ ಮುನ್ನಮೆನುತ್ತ ಬುದ್ಧಿವೇಳಿದಳ್[೩೪]
ಮತ್ತೊಬ್ಬ, ಪಾಣ್ಬೆ, ಹೊಸದಾಗಿ ವೇಶ್ಯಾ ಗೃಹಕ್ಕೆ ಕಾಲಿರಿಸಿದ ವಿಟಪುರುಷನಿಗೆ–
ಉಗುರ್ಗೊನೆ ನಾಂಟದಂತೆ ಪಿಡಿಬಲ್ಮೊಲೆಯಂ ನಿರಿಯಂ ಸಡಿಲ್ಚಿ ನೀ
ನುಗಿಯದಿರುಟ್ಟುದಂ ಜಡಿದು ಪೊಯ್ಯದಿರೊಯ್ಯನೆ ಮೈಯ ಬಾಸುಳಂ
ನೆಗಪದಿರೆನ್ನ ಚೆಂದುಟಿಗೆ ಪಲ್ಮೊಬೆ ನಾಂಟದ ಮಾಳ್ಕೆಯಿಂದ ಮೆ
ಲ್ಲಗೆ ಮಿಗೆ ಚುಂಬಿಸೆಂದು ಸತಿ ಶಿಕ್ಷಿಸಿದಳ್ಪೊಸಪಾಣ್ಬನೊರ್ವನಂ[೩೫]
ಅಂದಿನಿರುಳು ನಕ್ಷತ್ರಗಳು ಮಿನುಗಿದ ರೀತಿ ರಮ್ಯವಾಗಿದೆ.
ಇಡಿದ ತಮವೆಂಬ ಜಗುನೆಯ
ಮಡುವಿನ ಮಧ್ಯದೊಳೆ ಸುಳಿವ ಮೀಂಗಳಿವೆಂಬಂ
ತಿಡಿಕಿರಿದು ತುರುಗಿ ಮಿರುಗುತೆ
ಕಡು ಸೊಗಸಂ ಪಡೆದುವರರೆ ತಾರೆಗಳಾಗಳ್[೩೬]
ಸುರತ ಸುಖದಲ್ಲಿ ನಿರತವಾದ ವೇಶ್ಯಾವಾಟಿಯ ಬೆಳಗಿನ ಜಾವದ ಸಂಭ್ರ ಮವೂ ಅಸದೃಶ, ವರ್ಣನಾತೀತ–
ಜಾರೆ ನಿರಿ ಜಾರೆ ಸೋರ್ಮುಡಿ
ಜಾರೆ ಬೆಮರ್ಜಾರ ಮೇಲುದಂ ಮುಡಿದಲರ್ಗಳ್
ಜಾರೆ ಮುದಂ ಜಾರೆ ಮದಂ
ಜಾರೆ ಪದಂ ಜಾರೆ ಜಾರೆ ಜಾರಿದಳೊರ್ವಳ್[೩೭]

---

[೩೩]ಅದೇ, ದಶಮಾಶ್ವಾಸಂ, ೫೫
[೩೪] ಅದೇ. ಏಕಾದಶಾಶ್ವಾಸಂ, ೨೯
[೩೫] ಅದೇ. ಪದ್ಯ. ೩೧
[೩೬] ಅದೇ, ಪದ್ಯ, ೩೮
[೩೭]ಅದೇ, ದ್ವಾದಶಾಸ್ವಾಸಂ, ೯

ಇಂತಹ ಚೆಲ್ಲೆಯರೂ ವಿಟ, ಚೇಟ, ಪಾಣ್ಬೆ, ಅಭಿಸಾರಿಕೆ ಮೊದಲಾದವರ ಚೆನ್ನು–ಚೆದುರು, ಮೆರಗು–ಮೆರೆತ, ಅಲ್ಲಿ ಸುಗ್ಗಿ ಸೂರೆ.
ಕರುಣೆಯ ಕಾಸಾರವೆನಿಸಿದ ತಿರುಕೊಳವಿನಾಚಿಯ ಪ್ರಸಂಗದಲ್ಲಿ ಹಲವಾರು ಸುಂದರ ಕವನಗಳಿವೆ. ತುಂಬಿದ ಕೊಡವನ್ನು ಮನೆಯಲ್ಲಿರಿಸಿ ಕಂದನನ್ನು ಕಾಣದ ತಿರುಕೊಳವಿನಾಚಿ–
ತನುಭವನೆಲ್ಲಿದನೆಲ್ಲಿದ
ನಿನಿವಾತಿನ ಕೀರನೆಲ್ಲಿದಂ ಮೆಲ್ನಗೆಯಿಂ
ಪಿನ ಸೊಬಗನೆಲ್ಲಿದಂ ಚೆ
ಲ್ವಿನ ಕಣಿಯೆಲ್ಲಿದನೊ ಮನ್ಮನೋಂಬುಜಹಂಸಂ[೩೮]
ಎಂದು ಹಂಬಲಿಸುತ್ತಾಳೆ. ಕುದುರೆಯ ಕಾಲ ಗೊರಸಿಗೆ ಸಿಕ್ಕಿ ಮಡಿದ ತನ್ನ ಕಂದಮ್ಮನನ್ನು ಎತ್ತಿಕೊಂಡು–
ಎಳೆಗಿಳಿಯಂ ಕೊರಲ್ಮುರಿದು ಮೋದಿದರಾರ್ಮರಿಯಂಚೆಯಂ ಭಯಂ
ಗೊಳಿಸುತೆರಂಕೆಯಂ ಪರಿದು ಪೊಯ್ದುವರಾರ್ಮೃಗಶಾಬಮಂ ಕರಂ
ಮುಳಿದು ಶಿರೋಧಿಯಂ ಕೆಡೆಯಲೆಚ್ಚವರಾರ್ಬಿಸನಾಳಕಾಂಡಕೋ

ಮಳತರ ಕಂಠಮಂ ಕಡಿದುರುಳ್ಚಿದರಾರ್ಸುಕುಮಾರ ಶೇಖರಾ[೩೯]

ಎಂದು– ಪೊಸೆದಿಟ್ಟ ಪೂ ಮಾಲೆಯಂತೆ ಕಂದಿಕುಂದಿ ಮಂದೈಸಿದಳಲಿಂ ಮುಂದುಗೆಟ್ಟು ಎಟ್ಟಂ ಕೆಟ್ಟೆನೆಂದು ಬಸಿರಂ ಪೊಸೆದು ದೆಸೆದೆಸೆಗೆ ಬಾಯಂ ಬಿಟ್ಟು ಮೊರೆಯಿಡುವ ದಾರುಣ ಚಿತ್ರಣ ಕವಿಯ ಕವಿತಾಶಕ್ತಿಗೆ ಸಾಕ್ಷಿಯಾಗಿದೆ.

ಕೈಲಾಸದಲ್ಲಿ ಗಿರಿಜೆಯೊಡನೆ ವಿರಾಜಿಸುತ್ತಾ ಓಲಗಂಗೊಟ್ಟ ಸಚ್ಚಿದಾನಂದಮಯನಾದ ಮಹೇಶ್ವರನು– "ಮುಕ್ತಿಯ ಮುಗಳಂತೆ. ಚಿತ್ತಿನ ಬಿತ್ತಿನಂತೆ. ಸತ್ಯಸಾರ ದಂತೆ, ನಿತ್ಯತೆಯ ನಿಲುವಿನಂತೆ ಆನಂದದಾಗರದಂತೆ, ಪರಿಪೂರ್ಣತೆಯ ಪರಸೀಮೆಯಂತೆ ಕರುಣದ ಕಡಲಂತೆ, ಧರ್ಮದ ಪೆರ್ಮೆಯಂತೆ, ಸಿಂಗರದ ಸೀಮೆಯಂತೆ, ಮಂಗಳದ ಮೈಮೆಯಂತೆ, ಕಾಂತಿಯ ಕರುವಿನಂತೆ ಶಾಂತಿಯ ಸರ್ವಸ್ವ[೪೦] ದಂತೆ ಶೋಭಿಸುತ್ತಿದ್ದನಂತೆ. ಇದು ಷಡಕ್ಷರದೇವನ ಗದ್ಯ ಶೈಲಿಗೆ ಹಿಡಿದ ಕನ್ನಡಿಯಾಗಿದೆ, ಬಣ್ಣನೆಯೂ ಬೆರಗುಗೊಳಿಸುವಂತಿದೆ.

ಭಕ್ತಿ ಭಾಂಡಾರಿ ಬಸವಣ್ಣನು ಶಿವಪೂಜಾ ನಿರತನಾದಾಗ ಅವನ ತನ್ಮಯತೆಯನ್ನೂ, ಭಕ್ತಿಯ ಪರಾಕಾಷ್ಠತೆಯನ್ನೂ ಕವಿ ಅಮೋಘ ವಾಗಿ ಚಿತ್ರಸಿದ್ದಾನೆ. ಇದು ಸಾಮಾನ್ಯವಲ್ಲದೆ ಬೇರೆ ಅಲ್ಲ ಎನ್ನಿಸುತ್ತದೆ. ಏಕೆಂದರೆ ಷಡಕ್ಷರಿ ಮೊದಲು ಋಷಿ, ಆಮೇಲೆ ಕವಿ. ಇವನು ಕವಿಋಷಿಯಾದ್ದರಿಂದಲೇ ಇಂತಹ ಭಕ್ತಿ ಬಿತ್ತರಗೊಳ್ಳುವ ಭವ್ಯ ಸನ್ನಿವೇಶಗಳಲ್ಲಿ ಎಲ್ಲಿಲ್ಲದ ವಿಜಯ ವನ್ನು ಪಡೆದಿರುತ್ತಾನೆ. ನೋಡಿ–

ಪಳುಕುಗೊಡದೊಳಗೆ ಪೊರಗು
ಜ್ವಳಿಪ ಮಣಿಜ್ಯೋತಿಯಂತಿರೊಳ ಪೊರಗ ತಳ
ತ್ತಳಿಪ ಶಿವಲಿಂಗದಂಗದ
ಬೆಳಗಿನೊಳೆ ವೃಷೇಂದ್ರನಮರ್ದು ಬೆಳಗಾಗಿರ್ದಂ[೪೧]

ಹೀಗೆ ಸ್ಪಟಿಕದ ಕೊಡದಲ್ಲಿ ಮಿರುಗುವ ಜ್ಯೋತಿಯಂತೆ ಶಿವಲಿಂಗದ ಒಳ ಹೊರಗೆ ಪ್ರಜ್ವಲಿಸುತ್ತಿದ್ದ ಬಸವೇಶ್ವರನು–

---------------------------------------------------------------------------------------------------------------------------

[೩೮] ಅದೇ, ತ್ರಯೋದಶಾಶ್ವಾಸಂ, ೧೦೪

[೩೯] ಅದೇ. ಪದ್ಯ, ೧೦೫

[೪೦] ಅದೇ. ೮೧ನೆಯ ಪದ್ಯದ ಗದ್ಯ.

[೪೧] ಬಸವರಾಜವಿಜಯಂ, ತ್ರಯೋವಿಂಶಾಶ್ವಾಸಂ, ೬.

ತನ್ನೊಳಗೆ ಶಿವಂ ಶಿವನೊ
ಳ್ತಾನ್ನೆಲೆಗೊಂಡೆಸೆದನಮಮ ಕನ್ನಡಿಯಿದಿರೊ
ಳ್ಗನಗನಡಿಯೊಳ್ಕಾರ್ಪೊಳೆವವೊ
ಲುನ್ನತಗುಣನಿಳಯ ನಭವಗಣಮಣಿ ಮುಕುರಂ[೪೨]
ಪರೆದು ಪಸರಿಸಿದ ಕಿರಣಮ
ನರುಣಂ ಬರಸೆಳೆದು ಶರಧಿಯೊಳಪೊಕ್ಕವೊಲಾ
ಶರಣವರೇಣ್ಯಂ ಪಸರಿಪ
ಕರಣಮನೊಳಕೆಯ್ದು ಲಿಂಗದೊಳಪೊಕ್ಕಿರ್ದಂ[೪೩]

ಇಲ್ಲಿನ ಉಪಮೆಗಳು ಭೂಮವಾಗಿವೆ; ಭವ್ಯವಾಗಿವೆ. ದೇವ ಮತ್ತು ಭಕ್ತರ ಐಕ್ಯಾನು ಸಂಧಾನ ಹೇಗಿತ್ತೆಂದರೆ ಕನ್ನಡಿಗೆ ಕನ್ನಡಿ ಹಿಡಿದಂತೆ ಎನ್ನುತ್ತಾನೆ ಕವಿ. ಒಂದು ಕನ್ನಡಿಯ ಹೊಲಪು ತ್ತೊಂದು ಕನ್ನಡಿಯಲ್ಲಿ ಮಾರ್ಪೊಳೆಯುವಂತೆ ಶರಣ ಬಸವೇ ಶ್ವರನೂ ಶಿವನೂ ಒಬ್ಬರೊಳಗೊಬ್ಬರು ಪ್ರಜ್ವಲಿಸುತ್ತಿದ್ದರು. ಆ ಮಂಗಳ ಮಹೂರ್ತದಲ್ಲಿ ಶರಣವೃಏಣ್ಯನಾದ ಬಸವಣ್ಣನು ತನ್ನ ಪಂಚೇಂದ್ರಿಯಗಳನ್ನು ಲಿಂಗದಲ್ಲಿ ಕೇಂದ್ರೀಕರಿಸಿದ ರೀತಿ ಸಮುದ್ರದಲ್ಲಿ ಐಕ್ಯತೆಯನ್ನು ಪಡೆಯುವ ದಿನಮಣಿಯ ಅರುಣ ಕಿರಣ ಗಳಂತೆ ಇದ್ದಿತು. ಈ ರೀತಿ ಯೋಗ ನಿದ್ರಾ ಮುದ್ರಿತನಾದ ಬಸವೇಶ್ವರನು ಹೇಗಿದ್ದನೆಂಬ ಭವ್ಯ ಭಾವನೆಯನ್ನು ನೋಡಿ–

ಇದು ತೆರನಿಂದ ಸಾಗರಮೊ ನೋಡಿದು ಮೇಘ ವಿಹೀನಮಾದ ಶಾ
ರದವಿಮಳಾಮರಾಧ್ವಮೊ ಪರೀಕ್ಷಿಪೊಡಿಂತಿದು ಪರ್ಣಶಬ್ದ ಮಿ
ಲ್ಲದ ವಿಳಸನ್ಮಹೀರುಹಮೊ ಪೇಳನೆ ನಿಶ್ಚಳಭಾವಮಾಂತಡಂ
ಗಿದಕರಣಂಗಳಿಂ ಮಿಸುಪಯೋಗಮಿದೊಪ್ಪುಗುಮೀ ವೃಷೇಂದ್ರನಾ[೪೪]

॥ ೯ ॥

ಮಹಾಕವಿಗೆ ಪರ್ಯಾಯ ಪದಗಳೇನೆಂದೇ ತಿಳಿದಿಲ್ಲ. ಅವನದು 'ಪದವಿಟ್ಟಳುಪದಗ್ಗಳಿಕೆ' ಹಾಗಲ್ಲದೆ :

ಬರೆಬರೆದಂತದಂ ತೊಡೆದು ತೊಟ್ಟನೆ ನಿಟ್ಟಿಸಿ ಮೆಲ್ಲನೊಂದುಮಂ
ಸರಸಪದಾರ್ಥಮಂ ತಡಕಿ ಕಾಣದೆ ಕಳ್ದು ಪರೋಕ್ತಿಯಂ
ವಿರಚಿಸುತಂತುಮಿಂತುಮಳಿಕಬ್ದಮನಾಗಿಸಿ ಕೇಳಿಸುತ್ತೆ ಕಾ
ಲುರಿಚರ ತೋರ್ಪ ದುಷ್ಕವಿ ಮಹಾಕವಿ ಮಧ್ಯದೊಳೊಪ್ಪಲಾರ್ಪನೇ[೪೫]

ಮಹಾಕಾವ್ಯದಲ್ಲಿ ಪದ ಒಂದು ಪದವಿ ಔಚಿತ್ಯ ತಪ್ಪಿದರೆ ಆ ಪದವಿ ವಿನಾಶವಾದಂತೆಯೇ, ಪದಪ್ರಯೋಗದ ಉಚಿತಾನುಚಿತತೆ ಯನ್ನು ಷಡಕ್ಷರದೇವನ ಕೃತಿಗಳಲ್ಲಿ ಒಂದೆರಡನ್ನು ಎತ್ತಿ ಉದಾಹರಿಸಬಹುದು.

ಮೇವ ಮುಗಿಲ್ಗಳಿಂ ಮುಸುಕಿ ಮೋಹಿಪ ಭೂಧರಮೊಂದು ಪಕ್ಕದೊಳ್
ತಾವರೆಗಣ್ಣನಂತಿರೆ ಧರಾಧರಮೊಂದು ಸಧಾತು ನಿಂದ ವಾ
ಣೀವರನಂತೆ ತಳ್ತಿರೆ ಮೊದಲ್ತುದಿಗಾಣಿಸದಿರ್ದ ಸಾಂದ್ರತೇ
ಜೋವಹ ಲಿಂಗದಂತೆ ಕನಕಾಚಲಮುಜ್ವಲಮಾದುದುರ್ವಿಯೊಳ್[೪೬]

---------------------------------------------------------------------------

[೪೨] ಅದೇ. ಪದ್ಯ. ೯.
[೪೩] ಅದೇ. ಪದ್ಯ. ೧೦
[೪೪] ಅದೇ. ಪದ್ಯ, ೧೩
[೪೫] ರಾಶೇಖರವಿಳಾಸಂ, ಪ್ರಥಮಾಶ್ವಾಸಂ, ೨೩
[೪೬] ಅದೇ. ಪದ್ಯ, ೧೦೮

ಇದು ಮೇರು ಪರ್ವತದ ಭವ್ಯಬಣ್ಣನೆ. ಭೂಮಿ ಆಕಾಶ ತುಂಬಿ ನಿಂತ ಮಹಾಪರ್ವತ ತೇಜೋವಹ ಲಿಂಗದಂತೆ ಗೋಚರಿಸು ತ್ತಿತ್ತಂತೆ. ಈ ಉಪಮೆಯಲ್ಲಿ ಔಚಿತ್ಯವೂ ಇದೆ. ಕವಿಯ ದಿವ್ಯದರ್ಶನವೂ ದ್ಯೋತಕವಾಗಿದೆ. ಆದರೆ ಇಲ್ಲಿ ನಮ್ಮ ಮುಖ್ಯ ಗಮನ 'ಮೇವ ಮುಗಿಲ್ಗಳ' ಎಂದ ಪದದ ಕಡೆಗೆ ಹರಿಯಬೇಕಾಗಿದೆ. ದೂರದ ಪರ್ವತದ ಮೈ ಮೇಲೆ ಮುದ್ದಾಗಿ ಮಲಗಿರುವ ಉಣ್ಣೆ ಮೋಡ, ಬೆಣ್ಣೆ ಮೋಡಗಳು ಒಮ್ಮೊಮ್ಮೆ ಮೇಯುತ್ತಿರುವ ಬಿಳಿಯ ಕುರಿಗಳ ಮಂದೆ ಯಂತೆ ಗೋಚರಿಸುತ್ತವೆ. ಅದನ್ನೇ ಭಾವಿಸಿ 'ಮೇವ ಮುಗಿಲ್ಗಳಿಂ' ಎಂದಿದ್ದಾನೆ. ಇಲ್ಲಿ 'ಮೇವ' ಪದದ ಔಚಿತ್ಯ ಮುಖ್ಯವಾ ದುದು. ಇದೇ ರೀತಿ, ಮಡಿದ ಮಗನ ಕಳೇಬರವನ್ನು ತಬ್ಬಿ ಬಿಕ್ಕಿಬಿಕ್ಕಿ ಅಳುವ ತಿರುಕೊಳವಿನಾಚಿಯು, ಅನೇಕ ರೀತಿ ಪ್ರಲಾಪಿ ಸುತ್ತಾಳೆ. ಆಗ–

ಕೊರಲಂ ಮೆಟ್ಟುವ ಪದದೊಳ್
ತುರಗಂ ಕಂಗೆಟ್ಟು ಜನನಿಯೆಂದೆನ್ನಂ ನೀ
ಕರೆದೆಯೊ ಮರೆದೆಯೊ ದೋಷಾ
ಕರೆಯೆಂದೇ ತೊರೆದೆಯೋ ತನುಜನೆ ಪೇಳ್ಕೆ[೪೭]

ಇಲ್ಲಿ 'ಜನನಿ' ಎಂದೆನ್ನಂ ನೀ ಕರೆದೆಯೊ !! ಎನ್ನುವ ಬದಲು "ಅವ್ವಾ' ಎಂದೆನ್ನ ಕರೆದೆಯೊ ಎಂದಿದ್ದರೆ ಆ ಪದದ ಅರ್ಥ ಗೌರವವೇ ಬೇರೆಯಾಗುತ್ತಿತ್ತು. 'ಅವ್ವಾ' ಎಂದಾಗ ಮಿಡಿದ ಕರುಳು 'ಜನನಿ' ಎಂದಾಗ ಮಿಡಿಯಲಾರದು.

ತಂಬೆಲರಂತೆ ತುಂಬುವೆಯಿಂ ಪುರಪೋಣ್ಮುವ ಜೊನ್ನದಂತೆ
ಪೆಣ್ದುಂಬಿಯ ಗಾನದಂತೆ ಪೊಸಸುಗ್ಗಿಯ ನಂದನದಂತೆ ನಲ್ಮೆಯಿಂ

ದು ಬಿಗಿದಪ್ಪಿದಂಗನೆಯ ಪೆರ್ಮೊಲೆಸಘಂಕಿನ ಸೌಖ್ಯದಂತೆ ಚಿ
ತ್ತಂಬಡಿದಪ್ಪುದಿಕೃತಿ ಷಡಕ್ಷರಿ ದೇವಕೃತಂ ರಸಜ್ಞರಾ[೪೮]
ಔಚಿತ್ಯವರಿತ ಪದಜೋಡಣೆ, ಸುಭಗ ಶೈಲಿ, ಸರಳತೆಯಿಂದ ಇಲ್ಲಿನ ಉಪಮಾಲಂಕಾರವೂ ಅಲಂಕಾರಪೂರ್ಣವಾಗಿದೆ.
ಆದರೆ–
ಎಳಮಿಂಚಂ ಪೋಲ್ವ ಬಂಬಲ್ಜೆಡೆ ಬಳೆದ ಘನಶ್ಮಶ್ರುಭಸ್ಮತ್ರಿಪುಂಡ್ರಂ
ತೊಳಪುದ್ಯದ್ವಾಳಮಾಲಂಬಿತ ವಿಳಸಿತ ರುದ್ರಾಕ್ಷ ಮಾಲಾಳಿ ಹಸ್ತೋ
ಜ್ವಳ ದಂಡಂ ಯೋಗ ಪಟ್ಟಂ ಮೃಗದ ಸದಜಿನಂ ವಲ್ಕಲಂ ಲಾಕುಳಂ ಮಂ
ಜುಳಮಂದಸ್ಮೇರವಕ್ತ್ರಂ ಮಿಸುಗೆ ಚರಿಯಿಪರ್ ತಪೋಲೋಳ್ ತಾಪಸೇಂದ್ರರ್[೪೯]

ಇದರಲ್ಲಿ ಪಾಕ ಕೆಟ್ಟಿದೆ. ಸಾತ್ವಿಕತೆಯ ಸಾಕಾರ ರೂಪಿಗಳಾದ ತಾಪಸೇಂದ್ರರ ಬಣ್ಣನೆಗೆ ಈ ಮಾತುಗಳು ಬಲು ಬಿರುಸಾಗಿ ಕಾಣು ತ್ತವೆ. ಸಮುದ್ರಘೋಷ ಬಳಸಿದ ಪದಗಳೇ ತಪಸ್ವಿಗಳ ಬಣ್ಣನೆಗೆ ಬಳಕೆಯಾಗುವುದರಲ್ಲಿ ಔಚಿತ್ಯ ಇಲ್ಲ. 'ರೀತಿಯೇ ಕಾವ್ಯದ ಆತ್ಮ' ಎಂದರು ನಮ್ಮ ಲಾಕ್ಷಣಿಕರು. ಈ ಪದ್ಯ ಅದಕ್ಕೆ ಅಪವಾದವಾಗಿದೆ. ಪ್ರಸ್ತುತ ಅಪ್ರಸ್ತುತ ವಸ್ತುಗಳೆರಡರಲ್ಲೂ ಸಮಾನ ಧರ್ಮವಿದೆ ಎಂಬುದನ್ನು ದೀಪಕ ಸ್ಪಷ್ಟಪಡಿಸುತ್ತದೆ. ಮಧ್ಯದ ಗೋಡೆಯ ಮೇಲೆ ದೀಪವೊಂದನ್ನು ಹಚ್ಚಿಟ್ಟರೆ ಅದರ ಕಾಂತಿ ಎರಡು ಕೋಣೆ ಗಳಿಗೂ ಚೆಲ್ಲುತ್ತದೆ. ಅದೇ ರೀತಿ, ಮೆರೆದಿರುವ ವನ, ಮರಿದುಂಬಿಗಳಿರದ ತಾವರೆಕೊಳ, ಧ್ವನಿಗೈಯುತ್ತಾ ನಡೆದಾಡುವ ರಾಜ ಹಂಸಗಳಿರದ ಮರಳದಿಣ್ಣೆ– ಇವುಗಳಂತೆ ಮಕ್ಕಳಾಡದ ಮನಯಂಗಳ ಮನೋಹರವೇ ? ಎಂದು ಅಮೃತಮತಿ ಕೇಳುವ ಪ್ರಶ್ನೆ ಯಲ್ಲಿ, ಕವಿ ಬಳಸಿರುವ ಅಲಂಕಾರದಲ್ಲಿ ಔಚಿತ್ಯ ತುಂಬಿದೆ.

ರಾಜಶೇಖರನ ವಿವಾಹಾನಂತರ ಸರ್ವಮಂಗಳೆಯೊಡನೆ ವನವಿ ಹಾರಕ್ಕಾಗಿ ಆಗಮಿಸಬೇಕೆಂದು ಓರ್ವ ಸೇವಕನು ಬೇಡಿಕೊಳ್ಳು ತ್ತಾನೆ. ಆಗ–

---

[೪೭] ಅದೇ. ತ್ರಯೋದಶಾಶ್ವಾಸಂ, ೧೧೦
[೪೮] ಅದೇ. ಪದ್ಯ, ೮೪
[೪೯] ಅದೇ. ಪದ್ಯ, ೧೩೨

ಆನಂದನಮಂ ವಿಜಿತಮ
ಹಾನಂದನಮಂ ನಿಜಾಂತರಾಳಾಶ್ರಿತಲೋ
ಕಾನಂದನಮಂ ತೋಷಿತ
ಮಾನನಂದನಮಂ ನಿರೀಕ್ಷಿಸ್ನಡೆ ನೃಪತೀ[೫೦]
ಇಲ್ಲಿ ಬರುವ ಯಮಕಾಲಂಕಾರವು ತುಂಬಾ ಸೊಗಸಾಗಿದೆ.
ತಳಿರ್ಗೊಯ್ಯಲೆಂದು ಕನಕೋ
ಜ್ವಳರುಚಿ ತನುವಡರ್ದು ನವತಮಾಲದ ತರುವಂ
ಸೆಳೆ ಮಿಂಚು ಜಳದಮಂಡಳ
ದೊಳೆ ಥಳಥಳಿಪಂತೆ ಕಣ್ಣದೇಂ ತೊಳಗಿದಳೋ[೫೧]

ಇಂತಹ ಉತ್ಪ್ರೇಕ್ಷಾಲಂಕಾರಗಳು ಒಂದಲ್ಲ ಎರಡಲ್ಲ ನೂರಾರು. "ಉಪಮೆಗೆ ಕಾಳಿದಾಸ ಉತ್ಪ್ರೇಕ್ಷೆಗೆ ಷಡಕ್ಷರದೇವ". "ಷಡಕ್ಷರ ದೇವನಿಗೆ ಉಪಮೆ, ರೂಪಕ, ಅರ್ಥಾಂತರನ್ಯಾಸ ಯಾವ ಸೌಂದರ್ಯಾಲಂಕಾರವಿರಲಿ ರಾಶಿರಾಶಿಯಾಗಿ ಬರುತ್ತದೆ. ಕೆಲವು ಕಾವ್ಯಕ್ಕೆ ಭಾರವಾಗುವುದೂ ನಿಜ. ಕವಿ ಅಲಂಕಾರಕ್ಕೆ ಮನಸೋತಿರುವುದರಿಂದ ಒಮ್ಮೊಮ್ಮೆ ಇಲ್ಲಿಗೆ ನಿಲ್ಲಿಸಬೇಕು ಎಂಬ ಔಚಿತ್ಯ ಪ್ರಜ್ಞೆಯೂ ತಪ್ಪುವುದುಂಟು. ಆದರೆ ರಸದೂಟಕ್ಕೆ ಇತಿಮಿತಿ ಇಲ್ಲದಿದ್ದರೂ ಒಮ್ಮೊಮ್ಮೆ ನಡೆಯಬಹುದಲ್ಲವೆ ? ಸಹೃದ ಯರನ್ನು ಅತಿಥಿಗಳನ್ನಾಗಿ ಬರಮಾಡಿಕೊಂಡು ಅಲಂಕಾರದ ರಸದೂಟವನ್ನು ಕವಿ ಯಥೇಷ್ಟವಾಗಿ ಉಣಬಡಿಸುತ್ತಾನೆ. ಷಡಕ್ಷರ ದೇವನ ಅಲಂಕಾರಗಲನ್ನು ಸೂಕ್ಷ್ಮವಾಗಿ ಅಭ್ಯಸಿಸಿದರೆ ಆಧುನಿಕ ವಿಮರ್ಶೆಯ ತತ್ವವಾದ ಪ್ರತಿಮಾಸೃಷ್ಟಿಯ ವೈಭವ ಸ್ಪಷ್ಟವಾಗಿ ಕಂಡು ಬರುತ್ತದೆ." ವರ್ಣನೆಗಳನ್ನು ಸಂಗ್ರಹಿಸಿಕೊಂಡರೆ ಓದುಗನ ರಸಾಸ್ವಾದನೆಗೆ ಆಸ್ಪದ ಒದುಗುತ್ತದೆ. ಏಕೆಂದರೆ ಮಿತಿ ಇಲ್ಲದ ವರ್ಣನೆ

ಓದುಗನ ಸಹನೆಯನ್ನು ಹಾಳುಮಾಡುವುದರಿಂದ ಕಾವ್ಯ ಹೃದಯವನ್ನು ಮುಟ್ಟುವ ಮುನ್ನವೇ ಅವನು ನಿಶ್ಯಕ್ತನಾಗಿ ರಸ ಸನ್ನಿವೇಶಗಳನ್ನು ಸ್ವಾಗತಿಸುವ ಚೈತನ್ಯವನ್ನೇ ಕಳೆದುಕೊಳ್ಳುತ್ತಾನೆ. ರಾಜಶೇಖರ ವಿಳಾಸ ಮತ್ತು ಶಬರ ಶಂಕರ ವಿಳಾಸಗಳಿಗೆ ಇಂತಹ ಸಂಗ್ರಹದ ಅಗತ್ಯ ಇದೆ.

ರಾಜಶೇಖರ ವಿಳಾಸದಲ್ಲಿ ಶೃಂಗಾರ, ಕರುಣ ಮತ್ತು ಭಕ್ತಿ ರಸಗಳು ಮುಪ್ಪರಿಗೊಂಡಿದ್ದರೆ, ಶಬರ ಶಂಕರ ವಿಳಾಸದಲ್ಲಿ ವೀರ ಮತ್ತು ಭಕ್ತಿ ರಸಗಳು ಪ್ರಧಾನವಾಗಿವೆ. ಅಂತೆಯೇ ಬಸವರಾಜ ವಿಜಯದಲ್ಲಿ ಸಂಕೀರ್ಣತೆ ಕಂಡುಬಂದರೂ ವಿಶೇಷವಾಗಿ ಮೆರೆ ಯುವುದು ಭಕ್ತಿ ಒಂದೇ. ಷಡಕ್ಷರದೇವ ಶೃಂಗಾರಪ್ರಿಯನಾದ ಕವಿ. ಸರ್ವವೂ ಅವನಿಗೆ ಶೃಂಗಾರ ಪೂರ್ಣವಾಗಿಯೇ ಗೋಚರಿ ಸುತ್ತದೆ. ಅದನ್ನೇ ಆತ ಅವಕಾಶ ಸಿಕ್ಕಾಗಲೆಲ್ಲಾ ಕಂಡರಿಸಿದ್ದಾನೆ. ಇದರಿಂದಾಗಿ ರಾಜಶೇಖರ ವಿಳಾಸದಲ್ಲಿ ಶೃಂಗಾರ ಔಚಿತ್ಯ ಮೀರಿದೆ. ನಾವು ಹಿಂದೆಯೇ ಪ್ರಸ್ತಾಪಿಸಿದಂತೆ ಅಲ್ಲಲ್ಲಿ ಶೃಂಗಾರ ಅಳತೆ ಮೀರಿ ಬಣ್ಣನೆಗೊಂಡಿದೆ. ಆದರೆ ಪ್ರಧಾನ ರಸವೆನಿಸಿದ ಭಕ್ತಿಗೆ ಪೋಷಕವಾಗಿರುವುದು ಸಹಜ. ಅಂತೆಯೇ ತಿರುಕೊಳವಿನಾಚಿಯ ಪ್ರಸಂಗದಲ್ಲಿ ಕರುಣೆ ಕಾಲುವೆಯಾಗಿ ಹರಿದರೂ ಅದೂ ಸಹ ಭಕ್ತಿಗೆ ಪೂರಕ ರಸವೆನಿಸಿದೆ. ಈ ಕಾವ್ಯದಲ್ಲಿ ಸಹೃದಯ ಶೃಂಗಾರವನ್ನು ಅಲ್ಲಗಳೆದರೂ ಕರುಣದ ಬಗೆಗೆ ಅವಜ್ಞೆ ಗೈಯುವುದಿಲ್ಲ. ಕಾರನ ಕವಿಯ ಪಾಂಡಿತ್ಯ ಕರಗಿ ಅವನ ಹೃದಯ ಶ್ರೀಮಂತಿಕೆ ಮೆರೆದಿರುವುದೇ ಅಲ್ಲಿ.

॥ ೧೦ ॥

ಷಡಕ್ಷರಿ ವಿಶ್ವಕವಿ, ಪ್ರೌಢಕವಿ, ಭಕ್ತಕವಿ. ಅವನದು ಅದ್ವಿತಿಯ ಪಾಂಡಿತ್ಯ. ಉಭಯ ಕವಿತಾ ವಿಶಾರದನಾದ ಆತ ಕನ್ನಡ ದಲ್ಲಂತೂ 'ನಭೂತೋ ನಭವಿಷ್ಯತಿ' ಎನ್ನುವಂತಹ ಪಂಡಿತಕವಿ. ಕಲ್ಪನೆಯಲ್ಲಿ, ವರ್ಣನೆಯಲ್ಲಿ ಭಕ್ತಿಬರಿತ ಭಾವದಲ್ಲಿ ಅವನು ಶ್ರೀಮಂತ ಕವಿ. ಅವನ ಕಾಲಕ್ಕಾಗಲೇ ಮರೆತುಹೋಗಿದ್ದ ಚಂಪುವಿಗೆ ಮರುಹುಟ್ಟುಕೊಟ್ಟ ಕೀತಿ ಷಡಕ್ಷರ ದೇವನಿಗೆ ಸಲ್ಲಬೇಕಾ

---

[೫೦] ಅದೇ. ದಶಮಾಶ್ವಾಸಂ, ೫ [೫೧] ಅದೇ. ಪದ್ಯ, ೪೩

ಗುತ್ತದೆ. ಕಾವ್ಯ ವಿಮರ್ಶೆಗೆ ಇಂಥದೇ ಎಂಬ ನಿಖರವಾದ ಒರೆಗಲ್ಲು ಇಲ್ಲ. ವಿಮರ್ಶಕನಿಂದ ವಿಮರ್ಶಕನಿಗೆ ಅಭಿಪ್ರಾಯ ಭೇದ ತಲೆದೋರುವುದು ಸಹಜ. ಕೃತಿ ಮೌಲ್ಯದ ಮಾಪನ ದಂಡ ಆಗಾಗ ಬದಲಾಗುತಲೇ ಇರುತ್ತದೆ. ಅದಕ್ಕೆ ಮುಖ್ಯ ಕಾರಣ ಯುಗ ಶಕ್ತಿ. ಒಂದು ಯುಗ ಕ್ರಾಂತಿಯನ್ನು ಬಯಸಿದರೆ ಇನ್ನೊಂದು ಶಾಂತಿಯನ್ನು ಬೇಡುತ್ತದೆ; ಒಂದರಲ್ಲಿ ವೀರ ಮೆರೆದರೆ ಮತ್ತೊಂ ದರಲ್ಲಿ ಭಕ್ತಿ ದ್ಯೋತಕವಾಗಿರುತ್ತದೆ. ಹೀಗೆ ಅಭಿರುಚಿ ಬೆಳೆದಂತೆ ಅಭಿಪ್ರಾಯದಲ್ಲೂ ಬದಲಾವಣೆಗಳಾಗುತ್ತವೆ. ಆದರೆ ಸತ್ವಶಾಲಿ ಯಾದ ಕಾವ್ಯ ಶಾಶ್ವತವಾಗಿ ನಿಂತೇ ನಿಲ್ಲುತ್ತದೆ. ಜೊಳ್ಳು ಎಂದಿಗೂ ಬದುಕುವುದಿಲ್ಲ. ಶ್ರೀಮಂತ ಕವಿ ಷಡಕ್ಷರದೇವ ಯುಗದ ಕವಿ, ಕನ್ನಡ ಸೀಮಾ ಪುರುಷ.

# ಕೃತಿ ನನ್ನ ದರ್ಶನಂ

॥ ೧ ॥

ಸೃಜನಾತ್ಮಕ ಸಾಹಿತ್ಯ ಕೃತಿಗಳನ್ನು ತುಲನೆಗೆ ಎತ್ತಿಕೊಂಡಾಗ ನಾವು ಗಮನಿಸಬೇಕಾದ ಅಂಶ ಕಾವ್ಯ ಕಥೆ ಮತ್ತು ಕಾವ್ಯ ವಸ್ತು – ಇವುಗಳಿಗೆ ಸಂಬಂಧಿಸಿದ್ದು, ಕಾವ್ಯದಲ್ಲಿ ಬರುವ ಕಥೆಯೇ (Story) ಬೇರೆ, ಇರುವ ವಸ್ತುವೇ (Theme) ಬೇರೆ, (ಕಥೆಯೇ ಇಲ್ಲದ ಕಾವ್ಯಗಳೂ ಇವೆಯಾದ್ದರಿಂದ ಕಥೆ ಎಂಬುದಕ್ಕೆ ಬದಲು ವಸ್ತು ಎಂಬ ಪದವನ್ನೇ ಬಳಸಿಕೊಂಡರೂ ತಪ್ಪಲ್ಲ. ಒಂದು ಕಾವ್ಯದ ವಸ್ತುವಾದರೆ, ಮತ್ತೊಂದು ಕವಿಯ ವಸ್ತು ಎನ್ನಿಸಿಕೊಳ್ಳುತ್ತದೆ). ಕಥೆ ಭಿತ್ತಿಯಾದರೆ, ವಸ್ತು ಅದರ ಮೇಲೆ ಹಬ್ಬಿ ಸಿದ ಬಳ್ಳಿ. ಕಥೆ ಪ್ರಾಚೀನ, ವಸ್ತು ಅವಾರ್ಚೀನ; ಅದು ನಿಂತದ್ದು, ಇದು ಕಾಲಕಾಲಕ್ಕೂ ಕವಿ ಮನೋಧರ್ಮಕ್ಕನುಗುಣವಾಗಿ ಬೆಳೆಯುವಂಥದು. ಮಹಾಕಾವ್ಯಗಳನ್ನು ನಿದರ್ಶನಕ್ಕಟ್ಟುಕೊಂಡರೆ ಈ ಅಭಿಪ್ರಾಯದ ಸ್ಪಷ್ಟತೆ ವೇದ್ಯವಾಗುತ್ತದೆ. ತೌಲನಿಕ ಸಾಹಿತ್ಯಾಧ್ಯಯನದಲ್ಲಿ ಮಹಾಕಾವ್ಯಗಳನ್ನು ಸ್ಥೂಲವಾಗಿ ಎರಡು ವರ್ಗಗಳಾಗಿ ವಿಂಗಡಿಸಿದ್ದಾರೆ: ಒಂದು ಮೂಲ ಮಹಾಕಾವ್ಯ (primitive or natural epic ) ಮತ್ತೊಂದು ಸಾಹಿತ್ಯಿಕ ಮಹಾಕಾವ್ಯ (literary epic), ವಾಲ್ಮೀಕಿ ರಾಮಾ ಯಣ ಮೂಲ ಮಹಾಕಾವ್ಯವಾದರೆ, ಅದರಿಂಧೀಚೆಗೆ ಬಂದ ಭಾಷೆ, ವೇಷ, ದೇಶಗಳ ಬಗೆಬಗೆಯ ರಾಮಾಯಣಗಳು ಸಾಹಿ ತ್ಯಿಕ ಮಹಾಕಾವ್ಯಗಳು. ಹೋಮರನ ಇಲಿಯಡ್ ಮತ್ತು ಒಡಿಸ್ಸಿಗಳು ಮೂಲ ಮಹಾಕಾವ್ಯಗಳಾದರೆ ವರ್ಜಿಲನ ಏನೀಡ್, ಡಾಂ ಟೆಯ ಡಿವೈನ್ ಕಾಮಿಡಿ ಸಾಹಿತ್ಯಿಕ ಮಹಾಕಾವ್ಯಗಳು. ಸಾಹಿತ್ಯಿಕ ಮಹಾಕಾವ್ಯ ಮೂಲ ಮಹಾಕಾವ್ಯಕ್ಕೆ ಋಣಿ. ಮೂಲ ಮಹಾಕಾವ್ಯ ತನ್ನ ಕಾಲದಲ್ಲಿ ಪ್ರಾಚುರ್ಯದಲ್ಲಿದ್ದ ಜಾನಪದಕ್ಕೆ ಋಣಿ. ಏಕೆಂದರೆ ಶಿಷ್ಟ ಸಾಹಿತ್ಯ ಸೃಷ್ಟಿಗೆ ಜಾನಪದವೇ ಮಾತೃಗರ್ಭ. ಒಬ್ಬ ರಾಜನ ಹೆಂಡತಿಯನ್ನು ಮತ್ತೊಬ್ಬ ರಾಜ ಅಪಹರಿ ಸಿದ. ಹಲವರ ನೆರವಿನಿಂದ ಅವಳನ್ನು ಆ ರಾಜ ಬಿಡಿಸಿ ತಂದ ಪ್ರಸಂಗ ಜನಪದದಲ್ಲಿದ್ದ ಒಂದು ಮೂಲ ಕಥೆ. ಅದನ್ನೇ ದೇಶ ಕಾಲ ಪರಿಸರ ಸಂಸ್ಕೃತಿ ಪರಂಪರೆಗಳಿಗೆ ಬದ್ಧವಾಗಿ ಇತ್ತ ವಾಲ್ಮೀಕಿ ವ್ಯಾಸರೂ ಅತ್ತ ಹೋಮರನೂ ಚೆನಾಗಿ ದುಡಿಸಿಕೊಂಡರು. ಆದರೆ ಜನಪದದ ಅಜ್ಞಾತ ಕವಿಗೂ ಮೂಲ ಮಹಾಕಾವ್ಯದ ಪ್ರಾಕೃತ ಮಹಾಕವಿಗೂ ನಡುವೆ ಒಬ್ಬ ವ್ಯಕ್ತಿ ಬರುತ್ತಾನೆ: ಅವನೇ ಚಾರಣಕವಿ (The bard). ತಮಿಳುನಾಡಿನ ಪಾಣರ್, ಪೊಜುನರ್, ಕೂಟ್ರರ್, ವಿಜಲಿಯರ್ ಮೊದಲಾದವರು ಕರ್ನಾಟಕದ ಯಕ್ಷಗಾನ ಕಲಾವಿದರು. ಭಾರತದಾದ್ಯಂತ ಇರುವ ಲಾವಣಿಕಾರರು, ಗ್ರೀಸಿನ ಬಾರ್ಡ್‌ಗಳು ಇವರೇ ಮೊದಲಾದದವರು ಈ ವರ್ಗಕ್ಕೆ ಸೇರಿದವರು. ಇವರು ಆಶುಕವಿಗಳೂ ಹೌದು. ಆನಪದ ವಸ್ತುವನ್ನೋ ಐತಿಹಾಸಿಕ ವ್ಯಕ್ತಿಯ ಬದುಕನ್ನೋ ಅಥವಾ ಇತಿಹಾಸ ಘಟನೆಯನ್ನೋ ಆಯ್ದುಕೊಂಡು ಪೃಥಕ್ ಪೃಥಕ್ಕಾಗಿ ಹಲವು ಲಾವಣಿ ಅಥವಾ ಹಾಡುಗಳನ್ನು ಕಟ್ಟಿ ಹಾಡುತ್ತಿದ್ದು ದುಂಟು[೧]. ಅವುಗಳನ್ನು ಸಂಗ್ರಹಿಸಿ ಸಮಗ್ರವಾಗಿ ಅವಲೋಕಿಸಿದಾಗ ಓರ್ವ ಪ್ರತಿಭಾಸಂಪನ್ನನಾದ ಪ್ರಾಚೀನ ಮಹಾವಿಗೆ ಸ್ಫೂರ್ತಿ ಬಂದು, ತನ್ನಲ್ಲಿ ಚಿಮಿದ ಹೊಸ ಮಿಂಚಿನ ಎಳೆಗಳಿಂದ ಇಂದು ವಿನೂತನ ಕಾವ್ಯ ವಸ್ತ್ರವನ್ನೇ ನೇಯುತ್ತಾನೆ. ಅದೇ ಮೂಲ ಮಹಾಕಾವ್ಯ (primitive epc). ಅದು ಪ್ರಕೃತಿಗೆ ಹೆಚ್ಚು ಹತ್ತಿರವಾಗಿರುವುದರಿಂದ ರೂಕ್ಷರೂಪದ ಶಿಲ್ಪವಾಗಿ ನಿಂತಿ ರಲು ಸಾಧ್ಯ. ಅದರ ಮೇಲೆ ಕುಸುರಿಗೆಲಸದ ಕಲಾಕೈವಾಡವನ್ನು ಮೆರಸುತ್ತಾನೆ ಅನಂತರದ ಅರ್ವಾಚೀನ ಮಹಾಕವಿ. ಪ್ರಾಚೀನ ಕವಿಯ ಪುರಾಕೃತ ಮಹಾಕಾವ್ಯವೇ ಅರ್ವಾಚೀನ ಕಾವ್ಯಗಳ ಮೂಲಮಾತೃಕೆ. ಜನಪದದ ಕಥೆ ಮತ್ತು ಶಿಷ್ಟ ಸಾಹಿತ್ಯಗಳ ನಡುವೆ ಚಾರಣ ಗೀತೆಗಳೇ ಅಲ್ಲದೆ ಹಲವು ಜನಪದ ಮಹಾಕಾವ್ಯಗಳು ಆವಿರ್ಭ ವಿಸುವುದುಂಟು. ಇದಕ್ಕೆ ಜಗತ್ತಿನ ಅತಿ ಪ್ರಾಚೀನ ಸಂಸ್ಕೃತಿಯ ತೊಟ್ಟಿಲೆನಿಸಿದ ಬ್ಯಾಬಿಲೋನಿಯಾ– ಅಸ್ಸೀರಿಯಾದಲ್ಲಿನ ಗಿಲ್ಗ ಮಿಶ್ ಎಂಬ ಜನಪದ ಮಹಾಕಾವ್ಯ ಸಾಕ್ಷಿಯಾಗಿದೆ. ಇದು ಹೋಮರನಿಗೆ ನೇರ ಸ್ಫೂರ್ತಿಕೊಟ್ಟಿದೆ. ವಸ್ತುವಿನ್ಯಾಸ, ಸಂವಿಧಾನ ಕೌಶಲ, ಕಲ್ಪಕತೆ, ಸಾಂದರ್ಭಿಕ ಸೊಬಗು– ಇಂಥೆಡೆಗಳಲ್ಲಿ ಹೋಮರನ ಕಾವ್ಯಗಳೆರಡೂ ಗಿಲ್ಗಮಿಶ್ ಮಹಾಕಾವ್ಯದ ಕಾರು ಣ್ಯದ ಶಿಶುಗಳು. ಕನ್ನಡದ ಮಂಟೇಸ್ವಾಮಿ, ಮಾದೇಶ್ವರರ ಮೇಲೆ ಯಾರು ಯಾರೋ ರಚಿಸಿ ಹಾಡಿದ ಜನಪದದ ಹಾಡು ಗಳು. ಲಾವಣಿಗಳು ಕಾಲಕ್ರಮೇಣ ಮಂಟೇಸ್ವಾಮಿಕಾವ್ಯ, ಮಲೆಯ ಮಾದೇಶ್ವರರ ಕಾವ್ಯಗಳೆಂಬ ಜನಪದ ಮಹಾಕಾವ್ಯಗಳಿಗೆ ಮಾತೃಕೆಗಳಾಗಿರಬಹುದು. ಅವುಗಳನ್ನು ಆಧರಿಸಿ ಆಧುನಿಕ ಮಹಾಕಾವ್ಯಗಳು ಹೊರಬರಬಹುದು. ಅದೇ ರೀತಿ ಕಿತ್ತೂರ ಚೆನ್ನಮ್ಮ, ಕೆಳದಿಯ ಚೆನ್ನಮ್ಮಾಜಿ, ಬೆಳವಡಿಯ ಮಲ್ಲಮ್ಮ, ಅರ್ಜಪ್ಪನಾಯಕ, ಚಿತ್ರದುರ್ಗದ ಮದಕರಿನಾಯಕ, ಸುರಪುರದ ವೆಂಕಟಪ್ಪನಾಯಕ, ಗಾಂಧೀಜಿ ಇವರೇ ಮೊದಲಾದವು ಬಗೆಗಿನ ಲಾವಣಿಗಳನ್ನೇ ಆಧರಿಸಿ ಓರ್ವ ಆಧುನಿಕ ಕವಿ ಮಹಾಕಾವ್ಯ ರಚಿಸಿದರೆ ಆಶ್ಚರ್ಯವೇನಿಲ್ಲ.

ಹೀಗೆ ಜನಮನದ ಕಥಾತಡಿಕೆ, ಅದರ ಮೇಲಿನ ಚಾರಣ ಗೀತೆಗಳು ಇಲ್ಲವೇ ಜನಪದ ಮಹಾ ಕಾವ್ಯ, ಅನಂತರದ ಮೂಲ ಮಹಾಕಾವ್ಯ, ತದನಂತರದ ಸಾಹಿತ್ಯಿಕ ಮಹಾಕಾವ್ಯ– ಇಷ್ಟು ಮಜಲುಗಳು ಕಾಣಸಿಗುತ್ತವೆ ಮಹಾಕಾವ್ಯದ ಮೇರುವಿನಲ್ಲಿ. ಇದರಿಂದ ವೇದ್ಯವಾಗುವುದಿಷ್ಟೆ: ಅರ್ವಾಚೀನ ಸುಧಾರಿತ ಮಹಾಕವಿಯ ಬೇರಳು ಪುರಾಕೃತ ಚಾರಣಗೀತಗಳ ಜೋಳಿಗೆಯಲ್ಲಿ, ಚಾರಣನ ಕಣ್ಣು ಅಜ್ಞಾತ ಜನಪದ ಕವಿಯ ಹೆರಳಿನಲ್ಲಿ ಎಂದು. ಆದರೆ ಯಾರಿಗೆ ಯಾರೂ[2] ಪರತಂತ್ರ ಜೀವಿಗಳಲ್ಲ. ಅವರ ರಚನೆಗಳು ಅನನ್ಯ ಪರತಂತ್ರಗಳು ಯಾರಿಗೆ ಎಷ್ಟೇ ಋಣಿಯಾಗಿದ್ದರೂ ತಮ್ಮತನದ ಗಣಿಯಾಗಿವೆ. ಪ್ರಾಕೃತ ಮಹಾಕವಿಯ ಪ್ರಭಾವಕ್ಕೆ ಸಿಕ್ಕಿದ್ದರೂ ಅರ್ವಾಚೀನ ಕವಿ ತನ್ನ ಕೃತಿರತ್ನದಲ್ಲಿ ಸೋಪಜ್ಞತೆಯನ್ನು ಮರೆಯದಿರುವುದಿಲ್ಲ. ಅಂತೆಯೇ, ಕಾವ್ಯ ಸಂದರ್ಭವನ್ನು ಕುರಿತು ಹೇಳುವುದಾದರೆ ಬದಲಾವಣೆಯೇ ಅದರ ಬೆಳವಣಿಗೆಯಾದ್ದರಿಂದ ಅದು ಕವಿಯಿಂದ ಕವಿಗೆ ಕಾಲದಿಂದ ಕಾಲಕ್ಕೆ ಯುಗಧರ್ಮ ಹಾಗೂ ಕವಿ ಮನೋಧರ್ಮಗಳ ಜೊತೆಯಲ್ಲಿ ಮಾರ್ಪಡುವ ಮೂಲಕ ಬೆಳೆಯುತ್ತಾ ಹೋಘುತ್ತದೆ. ಪರಿವರ್ತನೆಯೇ ಅದರ ಪ್ರಗತಿ. ಆದ್ದರಿಂದಲೇ 'ರಾಮಾಯಣದ ಕವಿಗಳ ಭಾರದಲಿ ಫಣಿರಾಯ ತಿಣಿಕಿದುದು; ರಘುರವರ ಚರಿತೆಯಲ್ಲಿ ಕಾಲಿಡಲು ತೆರಪಿಲ್ಲವಾದದ್ದು!

ಮೂಲದಿಂದ ಮಾರ್ಪಾಟನ್ನು ಗಮನಿಸುವುದು ತೌಲನಿಕ ಸಾಹಿತ್ಯಾಧ್ಯಯನದ ಪ್ರಾಥಮಿಕ ಉದ್ದೇಶವಾಗಿರುವುದರಿಂದ ಕಥೆ ಯಿಂದ ವಸ್ತುವನ್ನು ಬೇರ್ಪಡಿಸಿ ನೋಡುವ ಅನಿವಾರ್ಯತೆ ಇದೆ ಎಂಬುದನ್ನು ಒಪ್ಪಿಕೊಳ್ಳಲೇ ಬೇಕಾಗಿದೆ. ಏಕೆಂದರೆ,

ತನು ನಿನ್ನದಾದೊಡಂ ಚೈತನ್ಯಮೆನ್ನದೆನೆ
ಕಥೆ ನಿನ್ನದಾದೊಡಂ, ನೀನೆ ಮೇಣಾಶೀರ್ವದಿಸಿ
ಮತಿಗೆ ಬೋಧವನಿತ್ತೊಡಂ, ಕೃತಿ ನನ್ನ ದರ್ಶನಂ!

---

[1]ಉದಾಹರಣೆಗೆ ತಮಿಳಿನ ಸಂಗಂ ಸಾಹಿತ್ಯದ 'ಪತ್ತು ಪಾಟ್ಟು' (Ten Idyllys) ನೋಡಬಹುದು.
[2]ಕುವೆಂಪುರವರ 'ಕವಿ ಕೃತಿಯಲ್ಲಿ ಅನನ್ಯ ಪರತಂತ್ರತೆ' ನೋಡಿ.

ಆದ್ದರಿಂದ ಕಂಬ, ಕಾಳಿದಾಸ, ತುಲಸೀದಾಸ, ಪೊನ್ನ, ನಾಗಚಂದ್ರ, ಕುವೆಂಪು ಮೊದಲಾದ ಕವಿಗಳಿಗೆ ಕಾವ್ಯಶಿಲ್ಪಕ್ಕೆ ಬೇಕಾದ ಸಾಮಗ್ರಿಯನ್ನೊದಗಿಸಿ ಕೊಡುವಷ್ಟರ ಮಟ್ಟಿನ ಅಧಿಕಾರ ವಾಲ್ಮೀಕಿಯದು. ಉಳಿದ ಗೌರವಕ್ಕೆ ಅವನು ಬಾಧ್ಯನಲ್ಲ ಟ್ರಾಯ್ ಪತನ ದವರೆಗಿನ ಹಕ್ಕು ಹೋಮರನದು, ರೋಮ್ ಸಾಮ್ರಾಜ್ಯ ಸ್ಥಾಪನೆಯ ಕೀತೀ ಅವನಿಗೆ ಸೇರಿದ್ದಲ್ಲ; ಒಂದೇ ಮೂಲ ಮಹಾಕಾವ್ಯ ದಿಂದ ಪ್ರೇರಣೆ ಪಡೆದಿದ್ದರೂ ನಾಗಚಂದ್ರನ ದೃಷ್ಟಿಯೇ ಬೇರೆ, ಕುವೆಂಪು ದೃಷ್ಟಿಯೇ ಬೇರೆ! ವ್ಯಾಸ ಮುನೀಂದ್ರ ರುಂದ್ರ ವಚನಾ ಮೃತ ವಾರ್ಧಿಯನ್ನೀಸಿದ ಪಂಪನ ವಿನ್ಯಾಸವೇ ಬೇರೆ. ಜಗನ್ನಾಟಕ ಸೂತ್ರಧಾರಿಯಾದ ಗದುಗಿನ ವೀರನಾರಾಯಣನ ಲೀಲಾ ವಿನೋದವನ್ನು ಬಿತ್ತರಿಸಲು ಅಪರಿಮಿತ ಭಕ್ತಿಯಿಂದ ಕೈಗೆತ್ತಿಕೊಂಡ ಕುಮಾರವ್ಯಾಸನ ದೃಷ್ಟಿಕೋನವೇ ಬೇರೆ. ತುಲಸಿಯಿಂದ ಕಂಬರು ಭಿನ್ನರು, ತೊರವೆಯ ನರಹರಿಯಿಂದ ಪೊನ್ನ ಭಿನ್ನ. ಈ ಹಿನ್ನಲೆಯಲ್ಲಿ ವಾಲ್ಮೀಕಿಯಿಂದ ಕುವೆಂಪು ಎಷ್ಟರ ಮಟ್ಟಿಗೆ ಭಿನ್ನರಿದ್ದಾರೆ, ಎಲ್ಲೆಲ್ಲಿ ಅವನನ್ನು ಅನುಸರಿಸಿದ್ದಾರಿ, ಸ್ವಂತದ ಸಂಪಾದನೆ ಏನು ಎಂಬುದನ್ನು ಒಂದು ನಿದರ್ಶನದ ಮೂಲಕ ಪ್ರದರ್ಶಿಸಿ ನೋಡೋಣ.

॥ ೨ ॥

ವಾಲ್ಮೀಕಿ ನಡೆದ ಹಾದಿಯಲ್ಲಿ ನಡೆದಿದ್ದರೂ ಕುವೆಂಪು ಅವನ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟಿಲ್ಲ. ತಮ್ಮ ಮನೋಧರ್ಮಕ್ಕೆ ತಕ್ಕಂತೆ ಸಾಕಷ್ಟು ಮಾರ್ಪಾಟು ಮಾಡಿಕೊಂಡಿದ್ದಾರೆ. ರಾಮ–ರಾವಣರ ಯುದ್ಧ ಪ್ರಸಂಗವನ್ನೇ ಪ್ರಸ್ತುತದಲ್ಲಿ ಕೈಗೆತ್ತಿಕೊಳ್ಳೋಣ. ಅಲ್ಲಿ ಕವಿ ಪ್ರತಿಭೆಯ ಭಿನ್ನಕಾರ್ಯದ ವೈಭವದ ಮಜಲನ್ನು ನಾವು ಗುರುತಿಸಬಹುದು. ಪ್ರಾಕೃತ ಕವಿಯ ಪ್ರಾಸಂಗಿಕ ಯುದ್ಧ ವರ್ಣನೆ, ಅಸ್ತ್ರ ಪ್ರತ್ಯಸ್ತ್ರಗಳ ಸಂಘರ್ಷಣೆ, ತಾಂತ್ರಿಕರೂಪದ ತಲಸ್ಪರ್ಶಿ ವಿವರಣೆ ಆಧುನಿಕ ಕವಿಗೆ ಅಗತ್ಯವೆನಿಸಿಲ್ಲ. ಮೇಲಾಗಿ ಈ ಕವಿ ಅಂ ದಿನ ಯುದ್ಧ ಕಲೆಯನ್ನು ಅರಿತವನೂ ಅಲ್ಲ. ತನ್ನ ಅನುಭವಕ್ಕೆ ಎಟುಕದ್ದನ್ನು ಕಲ್ಪನೆಯಲ್ಲಿ ದಕಿಸಿಕೊಳ್ಳುವ ವ್ಯರ್ಥ ಪ್ರಯತ್ನಕ್ಕೆ ಕೈ ಹಾಇದವನೂ ಅಲ್ಲ. ವಾಲ್ಮೀಕಿಯ ವಿಸ್ತೃತ ತಂತ್ರ ಮಂತ್ರದ ಯುದ್ಧ ವೈಖರಿ ಕವಿ ಕುವೆಂಪು ಅವರಲ್ಲಿ ಮಾನಸಿಕ ಯುದ್ಧವಾಗಿ ಪರಿಣಾಮ ಪಡೆದಿದೆ. ಕೌಟುಬಿಕ ಪರಿಸರದ ಸೃಷ್ಟಿಯಲ್ಲಿ ಕವಿ ಬದುಕಿನ ಹಲವು ಸವಾಲುಗಳನ್ನು ಎದುರಿಸಿದ್ದಾನೆ. ರಾವಣನ ರಾಕ್ಷಸತ್ವಕ್ಕೆ ಮಾರ್ದವತೆಯ ಕೋಮಲತೆಯನ್ನು ಕೊಡಮಾಡಿದ್ದಾನೆ. ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾನೆ. ಮನುಜ ಸಹಜವಾದ ಗುಣ ದೋಷಗಳನ್ನು

ಗುರುತಿಸಿದ್ದಾನೆ. ರಾವಣನ ಸೇಂದ್ರಿಯ ಸಂಕಲ್ಪಗಳಿಗೆ ಅತೀಂದ್ರಿಯತ್ವದ ಸಿದ್ಧಿಯನ್ನು ದಯ ಪಾಲಿಸಿದ್ದಾನೆ. ವರದಿಯ ರೂಪದ ಯುದ್ಧ ವರ್ಣನೆ ಇಲ್ಲಿ ಕಲಾತ್ಮಕತೆಯ ಪರಿಣಾಮ ಪಡೆದಿದೆ. ಸಂಭಾಷಣೆಯ ಸೊಬಗಿನಲ್ಲಿ ಒಂದು ನಾಟ್ಯವೇದಿಕೆಯನ್ನೇ ನಿರ್ಮಿಸಿದ್ದಾನೆ. ದೌಷ್ಟ್ಯ ದಯೆಯಾಗಿ, ಕ್ರೌರ್ಯ ಕರುಣೆಯಾಗಿ ಮಾರ್ಪಟ್ಟಿದೆ. ರಾವಣನು ಉದಾ ತ್ತ ಜೀವನದ ಮಹೋನ್ನತ ಕಲಾಕೃತಿಯನ್ನು ನಿರ್ಮಿಸಿದ ಮಹತ್ ಶಿಲ್ಪಿಯಾಗಿದ್ದಾನೆ. ಸೀತೆ ಅವನ ಕಾಮಜೀವನವನ್ನು ರಾಮ ಜೀವನದತ್ತ ತಿರುಗಿಸಿದ ಉದ್ಧಾರಕ ಶಕ್ತಿಯಾಗಿದ್ದಾಳೆ. ಸಮಕಾಲೀನ ಸಾಮಾಜಿಕ ವ್ಯವಸ್ಥೆಗೆ ಅನುಗುಣವಾಗಿ ರಾಮನಂತಹ ಧೀರೋದ್ಧಾತ ಪಾತ್ರದಲ್ಲೂ ಸುಂದರ ಪರಿವರ್ತನೆ ಆಗಿದೆ. ಸೀತೆಯನ್ನು ಅಗ್ನಿ ಪರೀಕ್ಷೆಗೆ ಒಳಗುಮಾಡಿದ ರಾಮ ತಾನೂ ಅಗ್ನಿ ಪರಿಶುದ್ಧನೆಂಬುದನ್ನು ಸಾಬೀತು ಪಡಿಸುವ ಕಕ್ಷಿಗಾರನಾಗಿದ್ದಾನೆ. ಇದೇ ರೀತಿ ತಾರಾಕ್ಷಿಯ ಪಾತಿವ್ರತ್ಯ, ಸೀತೆಯ ಶೀಲ, ಧಾನ್ಯಮಾಲಿನಿಯು ಮೈಯೊಪ್ಪಿಸಲು ಬಂದ ಅನಿವಾರ್ಯತೆ, ಅನಲೆಯ ಮಮತೆ- ವಾತ್ಸಲ್ಯಗಳು, ವಹ್ನಿ-ರಮ್ಹರ ತ್ಯಾಗ, ಸಂಪಾತಿಯ ಕರ್ತವ್ಯ ನಿಷ್ಠೆ, ಅಂಜನಾಸುತನ ಅನನ್ಯ ಭಕ್ತಿ, ಕಪಿ ವೀರರ ಪೌರುಷ, ರಾವ ಣನ ನಮಹಾನುಭಾವತ್ವ ಇವೆಲ್ಲವೂ ಮೂರ್ತಿವತ್ತಾಗಿ ಚಿತ್ರತವಾಗಿವೆ. ಅಲ್ಲದೆ ರಾವಣ ತಾತ್ವಿಕವಾಗಿ, ಕವಿ ದರ್ಶನಾದ್ಯುತಿಯ ಕಾಂತಿಯಲ್ಲಿ ಮರುಜನ್ಮದಲ್ಲಿ ಸೀತೆ ತನ್ನನ್ನು ಒಲಿದಂತೆ, ರಾಮನು ತನಗೆ ಸೋತಂತೆ ಕನಸು ಕಾಣುತ್ತಾನೆ. ರಾವಣನ ಸ್ವಪ್ನ ಸಿದ್ಧಿಯ ಈ ಸುಂದರ ಸನ್ನಿವೇಶದಂತೆ ಹಲವು ಮಾರ್ಪಾಟುಗಳಿಂದ, ರೂಪ-ಸ್ವರೂಪಗಳಲ್ಲಿ ಅದ ಬದಲಾವಣೆಗಳಿಂದ ಕಾವ್ಯ ಕಮನೀಯವೂ ಹೃದಯಸ್ಪರ್ಶಿಯೂ ಆಗಿದೆ.

॥ ೩ ॥

"ಮಡಿದನ್ನೆಂದ್ರಾಸ್ತ್ರದಿಂ ಮಂಡೋದರಿಯ ಮಗನ್"; ಮಗನ ಮರಣ ತಂದೆಯಾದವನಿಗೆ ನೋವು ತರುವುದು ಸಹಜ. ರಾವಣನಿಗೆ ಅದಕ್ಕಿಂತಲೂ ಹೆಚ್ಚು ನೋವು ತಂದದ್ದು ಧಾನ್ಯಮಾಲಿನಿಯು ತನ್ನ ಉತ್ಕ್ರಮಣಾವಸ್ಥೆಯಲ್ಲಿ ಆಡಿದ ಮಾತುಗಳು. ಇವಳು ಮೊದಲು ಬೇರೊಬ್ಬನ ಹೆಂಡತಿ ರಾವಣನಿಂದ ಅಪಹೃತಳಾದವಳು. ಆದರೆ ಮನವನ್ನು ತನ್ನ ಪೂರ್ವಾಶ್ರಮದ ಪತಿಗೂ, ತನುವನ್ನು ಮಾತ್ರ ರಾವಣನಿಗೂ ಕೊಟ್ಟವಳು. ಮೈ ಕೊಟ್ಟರೂ ಮನವನ್ನು ಬಿಚ್ಚಿ ತೋರಿದವಳಲ್ಲ. ಆದರೆ ಮರಣಾ ವಸ್ಥೆಯ ಮಂಪರಿನಲ್ಲಿ ಅವಳ ಸುಪ್ತಪ್ರಜ್ಞೆಯಲ್ಲಡಗಿದ್ದ ಸ್ತಯಾಂಶ ಹೊರಬೀಳುತ್ತದೆ:

ಮುನಿಯದಿರ್ ಸ್ವಾಮಿ, ಮೈಯ್ ಸೋಲ್ತುದು ದಿಟಂ; ಮನಂ<br>
ಸುಡುತಿರ್ದುದದನೇಗಳುಂ. ಮೈಯ್ಯನಲ್ಲದೇಂ<br>
ಮನವನಿತ್ತೆನೆ ರಾಕ್ಷಸಂಗೆ? ಕೈಬಿಡದಿರೀ<br>
ದಾಸಿಯಂ. ಮನವನಲ್ಲದೆ ತನುವ ನೋಡುವನೆ<br>
ಜಗದೀಶ್ವರಂ? ನನಗೆ ನೀನೆ ಸರ್ವೇಶ್ವರಂ.

-ಈ ಮಾತು ರಾವಣನ ಮನದ ಗಾಯದ ಮೇಲೆ ಬರೆ ಎಳೆಯುತ್ತದೆ. ಅಲ್ಲದೆ ಅತ್ತ ತಾರಾಕ್ಷಿ ತನ್ನ ಪತಿಯ ಕಳೇಬರದ ಜೊತೆಯಲ್ಲಿ ಸಹಗಮನ ಮಾಡಲಿರುವ ಸುದ್ಧಿಯೂ ಮುಟ್ಟುತ್ತದೆ. ಲಂಕೆಯ ಅನೇಕ ಯೋಧರುಗಳು ಈಗಾಗಲೇ ಮಡಿದು ಮಣ್ಣಾಗಿದ್ದಾರೆ. ರಾವಣನ ಜರ್ಜರಿತ ಹೃದಯಕೆ ಮೇಲಿಂದ ಮೇಲೆ ಪ್ರತಿಘಾತಗಳು ಆಗುತ್ತಲೇ ಇರುತ್ತವೆ. ತನ್ನ ಪಾಪದ ಪಾತ್ರೆ ತುಂಬುವವರೆಗೂ ಇಂತೆಲ್ಲ ಸೆಣಸಿದ ರಾವಣ ಸೀತೆಯ ಸ್ಥಿತಪ್ರಜ್ಞತೆಯಿಂದ ತಾನೂ ಮಾನಸಿಕ ಪರಿವರ್ತನೆ ಪಡೆದುಕೊಳ್ಳುತ್ತಾನೆ. ಆ ಪರಿವರ್ತನಾಶಕ್ತಿ ಅವನ ಆಂತರ್ಯದಲ್ಲೇ ತನ್ನ ಪ್ರತಿಕ್ರಿಯೆಯನ್ನು ಆರಂಭಿಸು ತ್ತದೆ. ಆಗ ಆಗಮಿಸುತ್ತಾಳೆ ಚಂದ್ರನಖಿ. ಅಣ್ಣ-ತಂಗಿಯರ ಸಂವಾದದಲ್ಲಿ ಸತ್ಯಾಂಶ ಹೊರಬೀಳುತ್ತದೆ. ಅಣ್ಣನ ಕಾಲ್ವಿಡಿದು ಬೇಡುತ್ತಾಳೆ-

ನಾನ್ ಪೊತ್ತಿಸಿದ ಕಿಚ್ಚನಾನ್ ನಂದಿಸಲ್ಕೆನಗೆ<br>
ನೀಡು ನಿನ್ನನುಮತಿಯ ಭಿಕ್ಷೆಯಂ!<br>
-ಎಂದು.<br>
ರಾವಣನ ನಿರ್ಧಾರದ ವಾಣಿ ನುಡಿಯುತ್ತದೆ-<br>
ನಿನ್ನ ಕೈ ಪೊತ್ತಿಸಿತ್ತಾದೊಡಂ, ನಿನ್ನಳವನಾ<br>
ಕಾಳ್ಗಿಚ್ಚು ಮೀರಿರ್ಪುದಿಂದು. ನೀನಾರಿಸಲ್<br>
ಪೋದಡದು ಕೇಳ್ ನಿನ್ನನೊಳಕೊಳ್ಳುವುದು ದಿಟಂ!<br>
-ಎಂದು.

ಚಂದ್ರನಖಿ ಅಂತಹ ಬಲಿಗೂ ಸಿದ್ಧಳಿರುತ್ತಾಳೆ. ಅವಳ ತಪ್ಪಿನ ಅರಿವು ಅವಳಿಗಾಗಿದೆ. ಸೋದರಿಯ ಸ್ತ್ರೀ ಸಹಜವಾದ ಮಾರ್ದವ ವನ್ನು ಗುರುತಿಸಿದ ರಾವಣ ತನ್ನ ಮನದಲ್ಲಿ ಮುಚ್ಚಿಟ್ಟಿದ್ದ ಸತ್ಯಾಂಶವನ್ನು ಬಯಲಿಗೆ ತರುತ್ತಾನೆ: 'ಕೊಳಗುಳದಿ ರಘುಕುಲ ಲಲಾ ಮನಂ, ಜಗದೇಕವೀರನಂ ಗೆಲ್ದು, ಸೆರೆಯಾಳಮಾಡಿ ತಂದು, ಲಂಕೇಶ್ವರನ ಸರ್ವ ಗರ್ವವನಿರದೆ ಸೋಲಿಸಿದ ಮೈಥಿಲಿಗೆ ಕಪ್ಪ ಮನೆ ಕಾಣ್ಕೆಯನೊಪ್ಪಿಸುವುದಾಗಿ ತಿಳಿಸುತ್ತಾನೆ. ಅಹಿತ ಪ್ರಸಂಗಗಳು ಮೇಲಿಂದ ಮೇಲೆ ಸಂಭವಿಸಿದರೂ ರಾವನನು ತನ್ನ ಧ್ಯೇಯದಿಂದ ವಿಚಲಿತನಾಗುವುದಿಲ್ಲ. ಆತ ತನ್ನ ಹಿರಿಮೆಯನ್ನು ಮಾತ್ರ ಸಾಧಿಸಿಕೊಂಡದ್ದಲ್ಲದೆ ಸೀತೆಯ ಚಿತ್ತಸ್ಥಿರತೆಯನ್ನು ಕಡೆ ಯದಾಗಿ ಪರಿಶೀಲಿಸಲು ಅಶೋಕವನಕ್ಕೆ ಹೋಗುತಾನೆ. ಅಲ್ಲಿ ಕವಿಯ ಕಲ್ಪನೆ ಒಂದು ಅಲೌಕಿಕ, ಅಸಾಧಾರಣ ದೃಶ್ಯವನ್ನು ನಿರ್ಮಿಸಿ ಪಾತ್ರದ ಹೆಗ್ಗಳಿಕೆಗೆ ಸಾಕ್ಷಿಯಾಗಿದೆ. ಸೀತೆಯ ಕುಟೀರ ಧಗಧಗಿಸಿ ಉರಿಯುತ್ತಿರುವಂತೆಯೂ, ಉರಿದ ಕೆನ್ನಾಲಿಗೆ ದಿಕು ದಿಕ್ಕಿಗೆ ವ್ಯಾಪಿಸಿದಾಗ ಅದರ ಪ್ರಖರತೆಯನ್ನು ಸಹಿಸಲಾರದೆ ಬಹುದೂರದಲ್ಲಿಯೇ ರಾವಣ ತಡೆದು ನಿಂತಂತೆಯೂ ಸೀತೆ ರಣ ಚಂಡಿಯಾಗಿ ನರ್ತನಗೈದಂತೆಯೂ ಕಾಣುತ್ತದೆ ಕವಿಯ ಕಲ್ಪನೆಯ ಕಣ್ಣು!

ರಾವಣನು ಹಿಂತಿರುಗಿದ್ದನ್ನು ಕಂಡು ಸೀತೆ ತ್ರಿಜೆಟೆಗೆ ನುಡಿಯುತ್ತಾಳೆ– 'ಫಲಿಸಿತನಲಾ ಪ್ರಾರ್ಥನಂ, ಬಾರನಿನ್ ಬಳಿಗವನ್ ಈ ಜನ್ಮದೊಳ್!' ಎಂದು. ಈ 'ಈ ಜನ್ಮದೊಳ್' ಎನ್ನುವ ಮಾತಿನಲ್ಲಿ 'ಮರುಜನ್ಮದೊಳ್' ಎಂಬ ಧ್ವನಿಯೂ ಇದೆ. ಕವಿಯ ದರ್ಶ ನವೂ ಇದೆ. ಕವಿಯ ಈ ದರ್ಶನಶುದ್ಧಿ ರಾವಣನ ಸ್ವಪ್ನಸಿದ್ಧಿಯಲ್ಲಿ ಪರಿಣಾಮ ಪಡೆದಿರುವುಪಿ ಆ ಪಾತ್ರ ಒಂದು ಮಹೋನ್ನ ತಿಯ ಮಜಲು ಮುಟ್ಟಿರುವುದಕ್ಕೆ ಸಾಕ್ಷಿ. ರಣಾಭಿಮುಖಿಯಾಗುವ ಮುನ್ನ ಜಗನ್ಮಾತೆಯನ್ನು ಕುರಿತು ಉಪಾಸಿಸುತಾನೆ ಲಂಕಾಧಿ ಪತಿ. ಪ್ರತ್ಯಕ್ಷಲಶದ ಆದಿಶಕ್ತಿ ಲಂಕಾಲಕ್ಷ್ಮಿಯ ರೂಪದಲ್ಲೊಮ್ಮೆ, ಧಾನ್ಯಮಾಲಿನಿಯ ರೂಪದಲ್ಲೊಮ್ಮೆ ದರ್ಶನವನ್ನಿತ್ತು ವರವನ್ನು ಕೇಳುವಂತೆ ಆಜ್ಞಾಪಿಸುತ್ತಾಳೆ. ರಾವಣನು ಎರಡು ವರಗಳನ್ನು ಬೇಡುತ್ತಾನೆ. ಅವನ್ನು ಜಗನ್ಮಾತೆ ಅನುಗ್ರಹಿಸುತ್ತಾಳೆ:

'ದಶರಥಸುತಂ
ರಣದಿ ಸೋಲ್ವಂತೆನಗೆ ಮಾಡು ಕೃಪೆಯನ್ ॥
'ತಥಾಸ್ತು !'
'ಸೀತೆ ವಶವಪ್ಪಂತೆ !"
'ತಥಾಸ್ತು!'
ಆದರೆ ರಾವಣನಿಗೆ ಸಂದೇಹ; ಅಷ್ಟೇ ಅಚ್ಚರಿ; ಅಷ್ಟೇ ಆನಂದ! 'ರಾಮ ಜಯಕಿಂ ಮಿಗಿಲ್ ಸೀತೆ ಸೋಲ್ವುದೆ ಸೋಜಿಗಂ'
ಎನ್ನುತ್ತಾನೆ. ಅದಕೆ ತ್ರಿಜಗನ್ಮಾತೆಯ ಉತ್ತರ:
'ರಾಮ ಜಯಕಿಂ ಮಿಗಿಲ್ ಸೀತೆ ಸೋಲ್ವುದೆ ಸೋಜಿಗಂ'
'ಸೋಜಿಗಮದೇಕೆ
ಒಲಿದ ಕಂದಂಗೆ ತಾಯ್ ಸೋಲ್ತುದೇನಚ್ಚರಿಯೆ?
ಸೀತೆಯಾಲಿಂಗಿಪಳ್, ಚುಂಬಿಸೆರ್ದೆಗೊತ್ತುವಳ್
ರಣದಿ ರಾಮನ ಸೋಲಿಪಯ್, ಪುನರ್ ಜನ್ಮದೊಳ್!'

ಮರುಜನ್ಮದಲ್ಲಿ ಮಗುವಿನ ವಾತ್ಸಲ್ಯರೂಪದಲ್ಲಿ ಸೀತೆ ಒಲಿಯುವ ಮತ್ತು ಯಜ್ಞಾಶ್ವಸ್ತಂಭನ ಸಂದರ್ಭದಲ್ಲಿ ರಾಮನನ್ನು ಗೆಲ್ಲುವ ಭವಿಷ್ಯತ್ ಸತ್ಯವನ್ನು ಆದ್ಯತನದ ಕವಿಯ ಕಣ್ ಕಂಡಿರುವುದು 'ಉತ್ತರ ರಾಮ ಚರಿತೆಯ ಕಾವ್ಯ ಸಂದರ್ಭಕೆ ಮೂಲಬೀಜ ವಾಗಿ ಒಂದು ಹೊಸ ಅರ್ಥವನ್ನು ಕಲ್ಪಿಸಿರುವುದು ಒಂದು ಅದ್ಭುತ ಕಲ್ಪನೆ' ವಾಲ್ಮೀಕಿ ಕಾಣದ್ದನ್ನು ಕುವೆಂಪು ಕಂಡಿದ್ದಾರೆ. ಇದು ಮೂಲ ಮಹಾ ಕಾವ್ಯ ಕಥೆಗೆ ಸಾಹಿತ್ಯಕ ಮಹಾಕಾವ್ಯ ಒದಗಿಸಿಕೊಟ್ಟ ಹೊಸ ಆಯಾಮ.

ರಾಮ ರಾವಣರ ಘನಘೋರ ಸಂಗ್ರಾಮದ ಪರಿಣಾಮವಾಗಿ ಉಭಯ ಪಕ್ಷಗಳಲ್ಲೂ ಅನೇಕ ವೀರರು ಬಲಿಯಾದದ್ದು, ಲಕ್ಷ್ಮಣ ನಂತಹ ಅಸಾಧಾರಣ ಚೇತನವೂ ಮೂರ್ಛಾಗತವಾದದ್ದು ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಕಲಾತ್ಮಕವಾಗಿಯೇ ಚಿತ್ರಿತವಾಗಿದೆ. ಅಂತ್ಯದಲ್ಲಿ ಶ್ರೀ ರಾಮನು ಪ್ರಯೋಗಿಸಿದ ಬ್ರಹ್ಮಾಸ್ತ್ರವು ರಾವಣನ ಎದೆಯಲ್ಲಿ ನಾಟಿದಾಗ ಅವನು 'ಸೆರೆಸಿಲ್ಕಿದನೊ ವೈರಿ' ಎಂದು ಕೂಗುತ್ತ ಮನೆ ಸೇರುವ, 'ನೋಡಿಲ್ಲಿ, ಭದ್ರ ಮುಷ್ಟಿಯೊಳೆಂತು ಪಿಡಿದಿಹೆನ್ ಭುವನಯಕ ವೀರನಂ! ಕೊಳ್ಳಿದಂ ಕಪ್ಪಮಂ, ಕಾಣ್ಕೆಗೊಡು ಮಾತೆ ಸೀತೆಗೆ' ಎಂದು

ಹೇಳುವ ರಾವಣತ್ವದ ಚರಮಘಟ್ಟ ರುದ್ರ ರಮಣೀಯವಾಗಿದೆ. ಇತ್ತ ರಣಭೂ ಮಿಯಲ್ಲಿ ಗತಜೀವಿ ಯಂತೆ ಬಿದ್ದಿದ್ದ ರಾಮ ಅತ್ತ ರಾವಣ ಮಡಿದ ಕೂಡಲೇ ಚೈತನ್ಯ ಪಡೆದವನಾಗಿ ಎದ್ದು ನಿಲ್ಲುತ್ತಾನೆ. ರಾವ ಣನ ಎದೆಯಲ್ಲಿ ನಾಟಿದ ಬಾಣದ ರೂಪದಲ್ಲಿ ಹೋಗಿದ್ದ ಅವನ ಪ್ರಾಣಮಯ ಚೈತನ್ಯ ಮತ್ತೆ ರಾಮ ಶರೀರವೆಂಬ ಅನ್ನಮಯ ಕೋಶಕ್ಕೆ ಬಂದು ಸೇರುತ್ತದೆ ಎಂಬ ದರ್ಶನ ಇಲ್ಲಿ ಧ್ವನಿತವಾಗಿದೆ.

॥ ೪ ॥

ಅಗ್ನಿಪ್ರವೇಶ ಪ್ರಸಂಗ ಶ್ರೀ ಕುವೆಂಪುರವರ ಸಮಕಾಲೀನ ಪ್ರಜ್ಞೆ ಎಚ್ಚೆತ್ತಿರುವುದಕ್ಕೆ ಸಾಕ್ಷಿ. ಸುಮಾರು ಒಂದು ವರ್ಷ ಕಾಲ ಪರಪುರುಷನ ಸೆರೆಯಲ್ಲಿದ್ದ ಹೆಣ್ಣು ಎಷ್ಟರ ಮಟ್ಟಿಗೆ ತನ್ನ ಶೀಲವನ್ನು ಸಂರಕ್ಷಿಸಿಕೊಂಡಿದ್ದಾಳೆ ಎಂಬುದರ ಪರೀಕ್ಷೆ ಈಗ ಆಗಬೇ ಕಾಗಿದೆ; ಅದೇ ಮಟ್ಟದಲ್ಲಿ ಆಗಬೇಕಾಗಿದೆ ಪುರಷನೂ ಎಂತಹ ಚಾರಿತ್ರ್ಯವನ್ನು ಅಷ್ಟೂ ದಿನಗಳ ತನಕ ಉಳಿಸಿಕೊಂಡು ಬಂದಿ ದ್ದಾನೆ ಎಂಬುದರ ಅಗ್ನಿಪರೀಕ್ಷೆ. ಅದರಿಂದಾಗಿ ಸೀತೆಯ ಜೊತೆಯಲ್ಲಿ ರಾಮನನ್ನೂ ಅಗ್ನಿಪ್ರವೇಶ ಮಾಡಿಸುತ್ತಾರೆ ಕುವೆಂಪು. ಸಂದರ್ಭದ ಸಿರಿ ವಾಲ್ಮೀಕಿಯನ್ನು ಅನುಸರಿಸಿದ್ದರೂ ಕುವೆಂಪು ಕಲಾ ವೈಖರಿ ನಾಟಕೀಯ ಗುಣದಿಂದ ಪರಿಪೋಷಿತವಾಗಿದೆ. ಬಹಳ ದಿನಗಳ ಮೇಲೆ ತನ್ನ ಪತಿಯನ್ನು ಕಾಣಲು ಸಂಭ್ರಮದಿಂದ ಬಂದ ಸತಿಗೆ ಸ್ವಾಗತ ಎಂಥದು. . .

ಸಂದುದು ಪೂಣ್ ನನಗೆ. ಕುಲತೇಜಮಂ
ಮತ್ತೆನ್ನ ಪುರುಷಕಾರವನುಳಿಸೆ ಜಯಸಿದೆನ್,
ಕೊಂದೆನ್ ದಶಗ್ರಿವನಂ; ನಿನ್ನಂ ಪಡೆಯಲಲ್ತು. . .
ನೀಂ ಸ್ಫುರದ್ರೂಪಿಣೀಯೆ ದಲ್ !. . .ದಶಾನನನವಶಿ,
ದಶರಥಾತ್ಮಜನಲ್ತು! ತಿಳಿಯವೊಡೆ ತಿಳಿ, ಸುಜ್ಞೆ,
ಪೇಳ್ದ ವಾಕ್ಯಾರ್ಥಮಂ. ಇಲ್ಲದಿರೆ ತೊಲಗು ನಡೆ,
ಮೂರ್ಖೆ, ನೀನೆಲ್ಲಿಗಾದೊಡಮೆನ್ನ ಕಣ್ಮುಂದೆ
ನಿಲ್ಲದಿರ್ ಕಣ್ಬೇನೆಯಿರ್ಪವನಿದರ್ ಸೊಡರ್
ಕುಡಿವಿಡಿಯದಿರ್!' ಅಬ್ಬಾ!
ಇಂತಹ ಕರ್ಣಕಠೋರ ನುಡಿಗಳನ್ನು ಕನಸುಮನಸ್ಸಿನಲ್ಲೂ ನೆನೆಸಿರಲಿಲ್ಲ ಸೀತೆ ಶ್ರೀರಾಮಚಂದ್ರನಿಂದ!
ಕಿ ಮಾಮಸದೃಶಂ ವಾಕ್ಯಮೀದೃಶಂ ಶ್ರೋತ್ರದಾರುಣಂ
ರೂಕ್ಷಂ ಶ್ರಾವಯಸೇ ವೀರ ಪ್ರಾಕೃತಃ ಪ್ರಾಕೃತಾಮಿವ॥
ಎಂದವಳೇ ಲಕ್ಷ್ಮಣನಿಗೆ ಚಿತೆಯನ್ನು ಸಿದ್ಧಪಡಿಸುವಂತೆ ಆಜ್ಞಾಪಿಸುತಾಳೆ ಸೀತೆ. ಅಗ್ನಿ ಸಿದ್ಧವಾಗುತ್ತದೆ.
ಓ ಅಗ್ನಿ,
ನೀಂ ಲೋಕಸಾಕ್ಷಿ. ನಡೆನುಡಿಗಳಲಿ ಬಗೆಯಲ್ಲಿ
ರಾಘವೇಂದ್ರನನುಳಿದು ಚರಿಸಿರ್ದೊಡೆನ್ನುಸಿರ್
ನನ್ನನಾಹುತಿಗೊಳೆ
ಎಂದು ನುಡಿಯುತ್ತಲೇ
ಪೊಕ್ಕಳ್ ಧಗದ್ಧಗಿಸುವಜ್ವಲ ಚಿತಾಗ್ನಿಯಂ
ಕೂಡಲೇ ಶಿಲಾಮೂರ್ತಿಯಂತೆ ನಿಂತಿದ್ದ ರಾಮನೂ ಆ ಅಗ್ನಿಕುಂಡದಲ್ಲಿ ಧುಮ್ಮಿಕ್ಕುತ್ತಾನೆ. ಈರ್ವರೂ ಅಗ್ನಿಸ್ನಾತರಾಗಿ ಹೊರಬರುತ್ತಾರೆ.

॥ ೫ ॥

ಮೂರು ಮಹಾಕಾವ್ಯದಿಂದ ಪ್ರೇರಣೆ ಪಡೆದ ಸಾಹಿತ್ಯಿಕ ಮಹಾಕಾವ್ಯಗಳು ತಮ್ಮ ಕಾಲ ದೇಶ ಪರಿಸರಗಳಿಗನುಗುಣವಾಗಿ ಬೆಳೆಯುತ್ತಾ ಹೋಗುತ್ತವೆ. ಅಂತೆಯೆ ತಮ್ಮ ಬೆಳವಣಿಗೆಯ ಜೊತೆಯಲ್ಲಿ ಮೂಲ ಮಹಾಕಾವ್ಯವನ್ನೂ ಬೆಳಗಿಸುತ್ತವೆ. ಅಜ್ಜನ ಹೆಗಲೇರಿದ ಮೊಮ್ಮಗನಂತೆ ವೃದ್ಧನಿಗಿಂತಲೂ ಬಹುದೂರ ನೋಡಬಲ್ಲ ಸಾಮರ್ಥ್ಯ ಇವುಗಳಿಗಿರುತ್ತದೆ. ಆದರೆ ಅಜ್ಜನಿಲ್ಲದೆ ತಾವು ಬಂದಿಲ್ಲ ಎಂಬ ಅರಿವೂ ಇರುತ್ತದೆ. ನೀರು, ನೆಲ, ಗಾಳಿ, ಬೆಳಕು,

ಗೋಡು, ಗೊಬ್ಬರ ಮೊದಲಾದವುಗಳನ್ನು ಹೀರಿ ಬೆಳೆದ ಗಿಡ ತಾನು ಹೂ ಬಿಟ್ಟರೆ, ಆ ಹೂವು ಹೇಳಿದ ಎಲ್ಲ ಪೋಷಕಾಂಶಗಳಿಂದಲೂ ಭಿನ್ನವಾಗಿಯೇ ಪ್ರಕಾಶಿಸುತ್ತದೆ. ಸಾಹಿ ತ್ಯಿಕ ಮಹಾಕಾವ್ಯದ ಸೃಷ್ಟಿ ಅಂಥದೇ. ಅದು ವ್ಯಷ್ಟಿ ರೂಪದ ಸಮಷ್ಟಿಯೂ ಹೌದು, ಮಹಾ ಚೇತನವೊಂದರ ಜೀವರಸವೂ ಹೌದು.

# ಮೇದಾರ ಕೇತಯ್ಯನ ವಚನಗಳಲ್ಲಿ ಕಾವ್ಯಾಂಶ

ಮೇದಾರ ಕೇತಯ್ಯನ ವಚನಗಳಲ್ಲಿ ಕಾವ್ಯಾಂಶಕ್ಕಿಂತ ಆಧ್ಯಾತ್ಮಿಕಾಂಶವೆ ಹೆಚ್ಚು. ಅದರಲ್ಲೂ ಶಿವಾದ್ವೈತ ದರ್ಶನದ ಸ್ಪಷ್ಟ ಪ್ರತಿಪಾದನೆ, ಅಲ್ಲಿನ ಅನುಷ್ಠಾನ ಯೋಗ್ಯ ಅಷ್ಟಾವರಣ ಪ್ರಕ್ರಿಯೆಗಳಲ್ಲಿನ ತೀವ್ರಸಂವೇದನೆ ಅಣ್ಣನ ಬಗೆಗಿದ್ದ ತನ್ನ ಒಲವು ಒಪ್ಪಿತ ಅರಿವು ಅರ್ಪಿತಗಳ ಅಸಾಮಾನ್ಯ ನಿವೇದನೆ– ಇವು ಮೂರೂ ಮುಪ್ಪುರಿಗೊಂಡು ಆದ ಒಂದು ಹೊಸ ಪಾಕಸಿದ್ಧಿ ಇದೆ. ಇದು ವಚನದ ಮೇಲ್ನೋಟಕ್ಕೆ ಸಿಗುವ ಸವಿಯಲ್ಲ; ಸೌಂದರ್ಯ ಅಲ್ಲ. ಅಲ್ಲಿನ ಅನುಭಾವದ ಅಂತರಾಳಕ್ಕಿಳಿದಾಗ ಲಭ್ಯವಾಗುವ ಆತ್ಮನವನೀತ. ಅವನ ಒಂದು ವಚನ:

ಒಂದು ಬಿದಿರಿಗೆ ಮೂರು ಕವೆ:
ಆ ಕವೆಯೊಳಗೆ ಲಕ್ಷ ಸಿಬಿರು
ಮೂರು ಕವೆಯ ಕೊಚ್ಚಿ ಸಿಬುರ ಸಿಕ್ಕ ಬಿಡಿಸಿ
ಸೀಳಿದ ಬಿದಿರ ಹೊರೆಯಲ್ಲಿ ನೆಯ್ದೆ; ತೊಟ್ಟಿಲ ಸಂದ ಕಾಣದಂತೆ
ನಾಲ್ಕು ಕಾಲನಿಕ್ಕಿ ಅಂದವಾದ ತೊಟ್ಟಿಲ ದಂಡೆಯನಿಕ್ಕಿ
ಕಟ್ಟುವುದಕ್ಕ ಶ್ರುತ, ದೃಷ್ಟವೆಂಬ ಎರಡು ದಾರದಲ್ಲಿ ತೊಟ್ಟಿಲ ಕಟ್ಟಿ
ಗೌರೀಶ್ವರಲಿಂಗಕ್ಕೆ ಹುಟ್ಟುಗೆಟ್ಟು ಹೋಗೋ ಎಂದು
ಜೋಗುಳವಾಡಿದೆ.

ಇದೊಂದು ಬೆಡಗಿನ ವಚನ. ಕೇತಯ್ಯ ತನ್ನ ಕಾಯಕಕ್ಕೆ ಬೇಕಾಗುವ ಪರಿಕರಗಳ ಪರಿಕಲ್ಪನೆಯಲ್ಲೇ ಆಧ್ಯಾತ್ಮವನ್ನು ಅನುಸಂಧಾ ನಗೊಳಿಸಿದ್ದಾನೆ. ತನ್ನ ಯತ್ನದಲ್ಲಿ ಯಶಸ್ವಿಯಾಗಿದ್ದಾನೆ ಎಂಬುದಕ್ಕೆ ಮೇಲಿನ ವಚನ ನಿದರ್ಶನ. ಒಂದು ಬಿದಿರಿಗೆ ಅಂದರೆ ಶಿವ ಅಥವಾ ಶೂನ್ಯ ಸಿದ್ಧಿಗೆ, ಕ್ರೀ, ಜ್ಞಾನ ಮತ್ತು ಭಾವ ಇವು ಮೂರು ಕವೆಗಳು. ಅವೇ 'ಶೂನ್ಯ' ಅಥವಾ 'ಶಿವ' ಸಂಪಾದನೆಯ ಸಾಧನಗಳು ಉಲ್ಲವೇ ಶಿವಾದ್ವೈತದ ಮೂಲಧಾತುಗಳು. ಅಕ್ಕ, ಸಿದ್ಧರಾಮರು ಹೇಳುವಂತೆ ಇವು ವೀರಶೈವದ ತ್ರಿವಿಧಗಳು The Three lAws of Veersshaivism. ಈ ತ್ರಿವಿಧಗಳು ಅಥವಾ ಈ ಮೂರು ಕವನಗ ಳೊಳಗೆ ಸ್ಥೂಲ, ಸೂಕ್ಷ್ಮ, ಕಾರಣ, ನಿರ್ಮಾಲ, ಆನಂದ, ಚಿನ್ಮಯ, ಚಿದ್ರೂಪ, ಶುದ್ಧ ಎಂಬ ಅಷ್ಟತನುಗಳ ಕ್ಲಿಷ್ಟತೆ, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬ ಅರಿಷಡ್ವರ್ಗಗಳ ಪೀಡನೆ, ಆಣವ, ಕಾರ್ಮಿಕ, ಮಾಯಾ ಎಂಬ ಮಲತ್ರಯ ಗಳ ದೇಹ ಸಹಜ ಈಪ್ಸೆ, ಕಿಲ್ಬಿಷ, ಮನ ಸಹಜ ಚಾಂಚಲ್ಯ ಇವೇ ಮೊದಲಾದ ಲಕ್ಷಲಕ್ಷ ಸಿಬುರುಗಳು ಕ್ರೀ, ಜ್ಞಾನ, ಮತ್ತು ಭಾವವೆಂಬ ಕವೆಗಳಲ್ಲಿ. ಈ ಕವೆಗಳನ್ನು ಕೊಚ್ಚಬೇಕು; ಆ ಲಕ್ಷ ಸಿಬುರುಗಳನ್ನು ಸೀಳಬೇಕು. ಅಂದರೆ ಈ ತ್ರಿವಿಧಗಳನ್ನು ಸಾಧಕ ಅಥವಾ ಶರಣ ದಾಟಬೇಕು; ಈ ಲಕ್ಷ ಕಾಮನೆಗಳಿಂದ ದೂರನಾಗಬೇಕು. ಏಕೆಂದರೆ ತ್ರಿವಿಧಗಳೇ ಅಚಿತಿಮಾವಸ್ಥೆಗಳಲ್ಲ; ಆದರೆ ಅವುಗಳಿಲ್ಲವೆ ಶೂನ್ಯ ಅಥವಾ ಶಿವ ಅಥವಾ ಸಾಮರಸ್ಯಸ್ಥಿತಿ ಪ್ರಾಪ್ತವಲ್ಲ. ರಸ ಪ್ರತೀತಿಗಾಗಿ ತನ್ನನ್ನೇ ತಾನು ಅರ್ಪಿಸಿಕೊಳ್ಳುವ 'ಧ್ವನಿ'ಯಂತೆ, ತನ್ನ ಪತಿ ಮತ್ತು ಪುತ್ರರ ಪ್ರೇಯಸ್ಸಿಗಾಗಿ ತನ್ನನ್ನೇ ತಾನು ನಿವೇದಿಸಿಕೊಳ್ಳುವ ಹೆಣ್ಣಿನಂತೆ, ಕ್ರೀ, ಜ್ಞಾನ ಮತ್ತು ಭಾವಗಳು ಶೂನ್ಯದ ಸಂಪಾದನೆಗಾಗಿ ತಮ್ಮನ್ನೇ ತಾವು ಬಲಿಗೊಟ್ಟುಕೊಳ್ಳುತ್ತವೆ. ಅದೇ ರೀತಿ ತನುವಿನ ಕ್ಲಿಷ್ಟತೆ, ಮನದ ಮೋಹ ಎಲ್ಲವೂ ಇಲ್ಲವಗಬೇಕು. ಅಂತಾದಾಗ ಅನುಭಾವದ ತೊಟ್ಟಿಲ ಸೃಷ್ಟಿ ಸಾಧ್ಯ. ಆ ತೊಟ್ಟಿಲ ಸಂದು ಕಾಣದಂತೆ ಅಂದರೆ ಎಲ್ಲೂ ವಿಳಂಬ ವಿಕಾರಗಳಿಗೆಡೆಕೊಡದಂತೆ ಚಿತ್ತ, ಬುದ್ಧಿ, ಮನ ಮತ್ತು ಅಹಂಕಾರ ಎಂಬ ನಾಲ್ಕು ಕಾಲಗಳನ್ನಿಕ್ಕಿ, ಆ ಅಂದದ ತೊಟ್ಟಿ ಲನ್ನು ಶ್ರುತ (ಕೇಳುವುದು) ಮತ್ತು ದೃಷ್ಟ (ಕಾಣುವುದು) ಎಂಬ ಎರಡು ದಾರ (ಹಗ್ಗ)ಗಳಲ್ಲಿ ಕಟ್ಟಿ, ಅದರಲ್ಲಿ ಗೌರೀಶ್ವರಲಿಂಗ ಶಿಶುರೂಪಿ ಮಹಾಚೈತನ್ಯವನ್ನು ಪಟ್ಟಿರಿಸಿ, 'ಹುಟ್ಟುಗೆಟ್ಟು ಹೋಗೋ' ಎಂದು ಜೋಗುಳ ಹಾಡಿದೆ. ಅಂದರೆ ಮತ್ತೆ ಮರ್ತ್ಯಕ್ಕೆ ಬಾರದಂತೆ ಜನನ ಮರಣ ವಿದೂ ರನಾಗು, 'ಶಿವ' ಆಗು ಅಥವಾ 'ಶೂನ್ಯ' ಆಗು ಎಂಬ ಮಂಗಳದ ಹಾಡು ಹಾಡಿದೆ. ಇದು ಮೇದಾರ ಕೇತಯ್ಯನ ಆಧ್ಯಾತ್ಮ ನಿಲುವು; ಅವನು ಕಂಡ, ಕಾಣಿಸಿದ ಮುಟ್ಟಿಮೆರೆದ ಸಿದ್ಧಿಸ್ಥಲವೂ ಹೌದು. ಇದು ಸಾಂಕೇತಿಕತೆಯ ಶ್ರೀಮಂತಿಕೆಯಲ್ಲಿ, ಬೆಡಗಿನ ಬೆಗಿನಲ್ಲಿ ದ್ಯುತಿವಡೆದಿದೆ.

ಮತ್ತೊಂದು ವಚನ:

ಭಕ್ತಂಗೆ ಸುಖವೂ ಸರಿ, ದುಃಖವೂ ಸರಿ
ಉರಿಸಿರಿ ಉಭಯವೂ ಸರಿ ಎನ್ನದಿದ್ದರೆ ಭಕ್ತಿಗೆ ಹಾನಿ
ಜಂಗಮವೆಂದು ಪ್ರಮಾಣಿಸಿ ತನ್ನ ಕಂಗಳ ಮುಂದೆ
ಕಂಡವರ ಭಜಿಸಲಿಕ್ಕೆ ತನ್ನಂಗವ ಹೊರೆವಡೆ
ತೀರ್ಥ ಪ್ರಸಾದಕ್ಕೆ ಅವನಂದೇ ಹೊರಗು ಗೌರೀಶ್ವರಲಿಂಗದಲ್ಲಿ.

ಭಕ್ತ ಎಂದಿಗೂ ಯಾವುದೇ ದುರ್ಭರ ಪ್ರಸಂಗದಲ್ಲೂ ವಿಚಲಿತಾಗುವವನಲ್ಲ; ಅವನೋರ್ವ ಸಮದರ್ಶಿ ಎಂಬುದರ ಪ್ರತಿಪಾದ ನೆಯೆ ಸಹಜ ರಚನೆ ಇದು. ಮತ್ತೆ ಪ್ರಮಾಣಿಸದೆ ಯಾವುದನ್ನೂ ಸ್ವೀಕರಿಸುವುದು ಬೇಡ. ಸ್ವೀಕರಿಸಿದ್ದಾದರೆ ಅದರ ಪರಿಣಾಮ ಘೋರ, ನಿಷ್ಪ್ರಯೋಜಕ. ಹೀಗೆ ಭಕ್ತನ ಸಮದರ್ಶಿತ್ವ ಮತ್ತು ಜಂಗಮದ ಆಯ್ಕೆಯ ಬಗೆಗಿನ ಎಚ್ಚರಿಕೆ ಈ ಎರಡೂ ಅಂಶಗಳ ವಿಶ್ಲೇಷಣೆ ಇದೆ ಇಲ್ಲಿ. ಅದು ಪ್ರಾಸ, ಅನುಪ್ರಾಸ, ಯಮಕ ಗಮಕಗಳ ಮೂಲಕ ಉತ್ತಮ ಅಭಿವ್ಯಕ್ತಿ ಪಡೆದಿದೆ. ಮಗುದೊಂದು ವಚನ ನಿರಂಗನ ನಿಲುವನ್ನು ಸಾರುತ್ತದೆ. ಪಂಚೇಂದ್ರಿಯಗಳು ಕಾಮನ ಪ್ರಲೋಭಕ್ಕೆ ಒಳಗು. ಆ ಕಾಮನೆಗೆ ಕಣ್ಣು ಅಥವಾ ಈಪ್ಸೆ ಮೂಲ. ಆದ್ದರಿಂದ ಈ ಈಪ್ಸೆ ಅಥವಾ 'ಮನದ ಮುಂದಣ ಮಾಯೆ'ಯನ್ನು ನಿಗ್ರಹಿಸಿದರೆ ಲಿಂಗಮೂರ್ತಿಯ ಸಾಕ್ಷಾ ತ್ಕಾರ. ಆ ರೀತಿಯ ನಿರಂಜನತ್ವವಿಲ್ಲದೆ ನಿಜ ದೊರೆಕೊಳ್ಳದು ಎಂಬ ಸತ್ಯಾಂಸದ ಪ್ರತಿಪಾದನೆ ಸ್ಫುಟಗೊಂಡಿದೆ ಹೀಗೆ–

ಇಂದ್ರಿಯಂಗಳ ಕೊಂದಿಹೆನೆಂದರೆ
ಅವು ಕಂದರ್ಪನ ಹಂಗು
ಕಂದರ್ಪನ ಕೊಂದಿಹೆನೆಂದರೆ
ಅವು ಕಂಗಳ ಲಾಭ
ಆ ಕಂಗಳ ಮುಚ್ಚಿದಲ್ಲದೆ ಲಿಂಗವ ಕಾಣಬಾರದು
ಅದು ನಿರಂಗಗಲ್ಲದೆ
ಜನದ ಹಂಗಿನವರಿಗಿಲ್ಲ ಎಂದೆ ಗೌರೇಶ್ವರಾ!

ಮತ್ತೂ ಒಂದು ವಚನದಲ್ಲಿ 'ಅರಿವರಿತು ಮರಹು ನಷ್ಟವಾಗಬೇಕು' ಎಂಬಂಶದ ಸ್ಪಷ್ಟೀಕರಣವಿದೆ. ಶೂನ್ಯ ಅಥವಾ ಶಿವ ಸಂಪಾದನಕ್ಕೆ ಅರಿವು ಬೇಕು. ಅದೂ ಒಂದು ಘಟ್ಟದವರೆಗೆ ಮಾತ್ರ. ಅದು ಕಡೆಯತನಕ ವಿದ್ದರೆ ನಿಜ ಸಿಗದು. ಆ ಸಿದ್ಧಿಗೆ ಅದೊಂದು ಸಾಧನ ಅಥವಾ ಕರಣ ಮಾತ್ರ. ಆ ನೆಲೆ ಮುಟ್ಟಿದ ಮೇಲೆ ಅಂಗನಿಗೆ ಅದರ ಹಂಗು ಇರದು. ರಸ ನಿಷ್ಪನ್ನವಾಗುವವರೆಗೂ ಸ್ಥಾಯೀಭಾವ (instinct)ಗಳ ಅಗತ್ಯತೆ ಇದೆ; ಅನಿವಾರ್ಯತೆಯೂ ಇದೆ. ರಸ ಅನುಭೂತವಾದ ಕೂಡಲೇ ಸ್ಥಾಯೀ ಕಳಚಿಬೀಳಬೇಕು ಅಥವಾ ಭಾವ ಬಯಲಾದನಂತರವೇ ರಸದ ಸಿದ್ಧಿ, ರಸದ ಕಿಂಚಿತ್ ಸೆಲೆ ಸುಳಿವು ಇದ್ದರೂ ಸಾಮಾಜಿಕನಲ್ಲಿ ರಸಾನುಭವ ಸಾಧ್ಯವೇ ಇಲ್ಲ. ಚಂದ್ರಲೋಕಕ್ಕೆ ಹಾರಲು ಬಿಟ್ಟ ಸ್ಪೂಟ್ನಿಕ್ ಭೂಪಥವನ್ನು ದಾಡಿ, ಚಂದ್ರನಿಗೆ ಅಭಿಮುಖಿಯಾದ ಕೂಡಲೇ ಕೋಶವೊಂದನ್ನು ಹೊರಗಳಚಿ ಬಿಸಾಡುವಂತೆ ಜ್ಞಾನ ಕ್ರಿಯಾ ಭಾವಗಳೂ ಬಯಲಾಗಬೇಕು. ಅಂತಾದಾಗ ಮಾತ್ರ ಶಿವ ಅಥವಾ ಶೂನ್ಯ ಸಾಧ್ಯ. ಆ ಬಗೆಯ ಲಿಂಗ–ಅಂಗ–ಸಾಮರಸ್ಯ ಸಿದ್ಧಿಯನ್ನು ಕೇತಯ್ಯ ತನ್ನದೊಂದು ವಚನದಲ್ಲಿ ಅಭಿವ್ಯಕ್ತಿಸಿದ್ದಾನೆ. ಅದು ಹಾಗಿದೆ–

ಅರಿವಿನ ಕುಳವನರಿಯೆ
ಮರಹಿನ ತೆರನನರಿಯೆ
ಅರಿವು ಮರಹಳಿದ ಗೌರೀಶ್ವರ ಲಿಂಗಕ್ಕೆ
ಅರಿವೇ ಅರ್ಪಿತ, ಮರವೇ ಅನರ್ಪಿತ !
ಮೊರನ ಹೆಣೆವ ಗೌ ನಾನೆತ್ತಬಲ್ಲೆನಯ್ಯಾ!

ಹೀಗೆ ಮಹಾನುಭಾವಿ ಮೇದಾರ ಕೇತಯ್ಯನ ವಚನಗಳಲ್ಲಿ ಅಲ್ಲಲ್ಲಿ ಅಲ್ಪಸ್ವಲ್ಪ ಕಾವ್ಯಾಂಶ ಮಿರುಗಿ, ಅನುಭಾವವನ್ನು ಅರ್ಥೈಸುವ ಮೂಲಕ ಸಾರ್ಥಕ್ಯ ಪಡೆದಿದೆ. ಉಪಲಬ್ದ ವಚನಗಳ ಸಂಖ್ಯೆ ಹನ್ನೊಂದು ಮಾತ್ರ ಇದ್ದರೂ ಸತ್ವದಲ್ಲಿ ಅಮೇಯಗುಣವುಳ್ಳವಾಗಿವೆ. ಆ ಮೂಲಕ ಮೇದಾರ ಕೇತಯ್ಯ ಅಣ್ಣನ ಅನುಷ್ಠಾನ, ಅನುಭೂತಿಗಳ ಕೇತನವೇ ಆಗಿದ್ದಾನೆ.

# ಶ್ರೀ ಕುವೆಂಪು ಒಲವು–ನಿಲವು: ಭಾವಗೀತೆಗಳಲ್ಲಿ

॥ ೧ ॥

ಕವಿಯ ಅಂತರಂಗದ ಅಭಿವ್ಯಕ್ತಿಗೆ ಪ್ರಣಾಳಿಗಳು ಮೂರು. ಟಿ.ಎಸ್. ಎಲಿಯಟ್ ಇವುಗಳನ್ನು ಕಾವ್ಯದ ಮೂರು ವಾಣಿಗಳು ಎಂದು ಕರೆದಿದ್ದಾನೆ.[1] ಅವನ ಸಿದ್ಧಾಂತದಂತೆ ಕವಿಯ ಮೊದಲ ವಾಣಿ ಭಾವಗೀತೆ. ಅದನ್ನು ಕವಿ ತನಗೆ ತಾನೇ ಆತ್ಮಾನಂದಕ್ಕಾಗಿ ಹಾಡಿಕೊಳ್ಳುತ್ತಾನೆ; ಎರಡನೆಯದು ಮಹಾಕಾವ್ಯ – ಇಲ್ಲವೇ ಕಥನಕಾವ್ಯ; ಕವಿ ಅನೇಕ ಶ್ರೋತೃಗಳನ್ನು ಉದ್ದೇ ಶಿಸಿ ಹಾಡಿದ್ದು ಇದು; ಮೂರನೆಯದು ನಾಟಕ ಅಥವಾ ದೃಶ್ಯಕಾವ್ಯ; ಇದರಲ್ಲಿ ಕವಿ ಪಾತ್ರಗಳ ಮುಖಾಂತರ ತನ್ನ ಅಭಿಮತ ವನ್ನು ಸಂವಹಿಸುತ್ತಾನೆ. ಕವಿಯ ಅಭಿವ್ಯಕ್ತಿ ಮಾಧ್ಯಮಗಳಲ್ಲಿ ಒಂದಾದ ಭಾವಗೀತದಲ್ಲಿ ಕವಿ ನೇರವಾಗಿ ನಮ್ಮ ಮುಂದೆ ಬಂದು ನಿಲ್ಲುತ್ತಾನೆ; ಉಳಿದೆರಡು ಮಾಧ್ಯಮಗಳಲ್ಲಿಯಂತೆ ತೆರೆಯ ಮರೆಯಲ್ಲೊ, ಪಾತ್ರಗಳ ಸೆರಗು ಹಿಡಿದೋ ಕೂಗುಹಾಕುವುದಿಲ್ಲ. ಅವನು ನೇರವಾಗಿ ನಮ್ಮೊಡನೆ ಸಂಭಾಷಿಸುತ್ತಾನೆ. ಅಲ್ಲಿ ಅವನ ಹೇಳಿಕೆಗಳೆಲ್ಲವೂ ಅವನ ಸ್ವಾನುಭವದ ಸಿದ್ಧಾಂತಗಳಾಗಿರುತ್ತವೆ. ಬದುಕನ್ನು ಅವನು ಪರಿಭಾವಿಸಿದ ರೀತಿ, ಬದುಕಿನಿಂದ ಅವನು ಕಲಿತ ಪಾಠ, ಬದುಕನ್ನು ಕುರಿತ ಅವನ ಚಿಂತನ–ಮಂಥನ, ಬಾಳಿನಲ್ಲಿ ಅವನು ಕಂಡ ಕನಸು, ಉಂಡ ಅನುಭವ ಇವುಗಳನ್ನು ಮಾತಿನ ಮಾಧ್ಯಮದಲ್ಲಿ ನಿವೇದಿಸಿಕೊಳ್ಳುತ್ತಾನೆ. ಅವನು ಹೇಳುವುದೆಲ್ಲವೂ ಅವನ ವೈಯುಕ್ತಿಕಾನುಭವದ ಮಾತಾಗುತ್ತದೆ. ಅಂದರೆ ಅವನೆ ಸ್ವತಃ ಸುಖದುಃಖಗಳಿಗೆ ವ್ಯಾಖ್ಯಾನ ನೀಡು ತ್ತಾನೆ. ಅಲ್ಲಿ ಅವನ ಅನುಭವವೇ ಮೂಲದ್ರವ್ಯ, ಅವನ ಅನಿಸಿಕೆಯೇ ಶ್ರೇಷ್ಠ ಪ್ರಮಾಣ. ಅಲ್ಲಿ ಅವನ ಸಂವೇದನೆಗೆ ಪ್ರಾಮು ಖ್ಯತೆಯೇ ಹೊರತು ಬೇರಾವ ಬಾಹ್ಯ ವಸ್ತುವಿಗೂ ಅಲ್ಲ. ಅಲ್ಲಿ ವಸ್ತುವೆನ್ನುವುದು ಒಂದು ಉಪಾಧಿ ಮಾತ್ರ. ಅವನ ಚಿಂತನ ದರ್ಶನಗಳನ್ನು ಸಂವಹಿಸುವ ಸಾಧನ ಅಷ್ಟೆ. ಭಾವಗೀತಗಳಲ್ಲಿ ವಸ್ತು ಎಂದರೆ ಕವಿಯ ಅಂತರಂಗದ ಭಾವನಾ ಸಂಪತ್ತು. "ಭಾವದಿಂದ ವಸ್ತು ಆಸ್ವಾದವಾಗುವುದೇ ಹೊರತು ವಸ್ತುವಿನಿಂದ ಭಾವ ಅಲ್ಲ. ವಸ್ತು ಮತ್ತು ಘಟನೆಗಳು ಕವಿಯ ಅಂತ ರಂಗದ ರಮಣೀಯತೆಯಿಂದ ಪ್ರಿಯವಾಗುತ್ತವೆ. ಭಾವಗೀತದಲ್ಲಿ ಭಾವವೇ ಪ್ರಧಾನ ಮತ್ತು ಪ್ರಧಾನಿ. ಈ ಭಾವವು ಕವಿಯ ವೈಯುಕ್ತಿಕ ವಾದ ಅನುಭವ ಎಂದರೆ ಉಳಿದವರಿಗೆ ಅರ್ಥವಾಗದುದು ಎಂದಲ್ಲ, ಅದು ಕವಿವ್ಯಕ್ತಿ ವಿಶಿಷ್ಟವಾದುದು. ಈ ಕವಿ ವ್ಯಕ್ತಿ ಸಮಷ್ಟಿ ಯಲ್ಲಿ ನಿಷ್ಠನಾದುದರಿಂದ ಅವನ ವಿಶಿಷ್ಟಾನುಭವದ ವಿಶಿಷ್ಟಾಭಿವ್ಯಕ್ತಿ ಸರ್ವರೂ ಜ್ಞಾತನಾಗಿಯೋ ಅಜ್ಞಾತನಾ ಗಿಯೋ ಹಾರೈಸುವ ಒಂದು ಸತ್ಯವನ್ನು ಸೌಂದರ್ಯದ ಮುಖಾಂತರ ಪ್ರಕಟನಗೊಳಿಸುತ್ತದೆ." ಕವಿಯ ವಿಶಿಷ್ಟಾನುಭವದ ಅಭಿವ್ಯಕ್ತಿ ಸಾಧಿಸಿಕೊಳ್ಳುವಾಗ ಅನಿವಾರ್ಯವಾಗಿ ಅವನ ಮನೋಧರ್ಮಕ್ಕೆ ಬದ್ಧವಾಗುತ್ತದೆ. ಮನೋಧರ್ಮವೆಂದರೆ ಕವಿಯ ಅನಿಸಿಕೆ, ಅವನ ಜೀವನದೃಷ್ಟಿ, ಧೋರಣೆ. ಒಟ್ಟಿನಲ್ಲಿ ಒಲವು–ನಿಲವುಗಳು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಶ್ರೀ ಕುವೆಂಪುರವರಿಗೆ ಪ್ರಕೃತಿ ಯನ್ನು ಕಂಡರೆ ಅಮಿತವಾದ ಪ್ರೀತಿ: ಸಂಪ್ರದಾಯ ಶರಣತೆ, ಮೌಢ್ಯ–ಮಾಲಿನ್ಯ, ಶೋಷಣೆಗಳನ್ನು ಕಂಡರೆ ಪ್ರಳಯಕೋಪ; ಬಡತನ ಅಜ್ಞಾನಗಳ ಬಗೆಗೆ ದುರಭಿಮಾನವೋ ಎನ್ನುವಷ್ಟು ಮಟ್ಟಿನ ಅಭಿಮಾನ; ದರ್ಪ ದೌರ್ಜನ್ಯಗಳಿಗೆ ತಲೆಬಾಗದ ಸ್ವಾಭಿ ಮಾನ; ಎಲೆಮರೆಯ ಹೂವಿನಂತೆ ಯಾರ ಕಣ್ಣಿಗೂ ಬೀಳದಿರುವ ವಲ್ಮೀಕ ನಿರ್ಮಿತಿಯ ಪ್ರವೃತ್ತಿ. ಇವು ಅವರ ಒಲವು–ನಿಲ ವುಗಳು. ಇವು ಪರಿಪೂರ್ಣ ಅಭಿವ್ಯಕ್ತಿಯನ್ನು ಸಾಧಿಸಿಕೊಂಡಿವೆ ಅವರ ಸಹಸ್ರ ಸಂಖ್ಯೆತ ಭಾವಗೀತಗಳಲ್ಲಿ.

---------------------------------------------------------------------------------------------------------------
-----

[1] 'The first voice is the voice of the post talking to himself or to nobody. The second is the voice of the poet addressing an audience. The third is the voice of the poet when he attempts to cre- ate a dramatic character speaking in verse' – T.S. Eliot, The Three Voices of Poetry (1953) p.4

॥ ೨ ॥

ಕುವೆಂಪು ನಿಸರ್ಗಕವಿ, ಪ್ರಕೃತಿಯಾರಾಧನೆಯ ಪರಮನಾರಾಧನೆ. ಪ್ರಕೃತಿಯೊಲ್ಮೆಯ ಮುಕ್ತಿಯಾನಂದದ ಸಾಧನೆ ಎಂದು ಭಾವಿಸಿ, ಪ್ರಕೃತಿಯನ್ನು ಕೇವಲ ಒಂದು ಭೌಗೋಳಿಕ ವಸ್ತುವೆಂದು ಭಾವಿಸದೆ ಅದರಲ್ಲಿ ಭಗವಂತನ

ಆವಿರ್ಭೂತಿಯನ್ನು ಕಂಡ ದಾರ್ಶನಿಕ ಕವಿ. ತನ್ನ ಚಿನ್ಮಯೀ ಚೈತನ್ಯಕ್ಕೆ ಸಹ್ಯಾದ್ರಿಯ 'ಅಂಗಶರೀರ'ವೆಂದು ಭಾವಿಸಿ, ಶಿವ ಮತ್ತು ಪ್ರಕೃತಿ ಶಿವರಲ್ಲಿ ಅಭೇದ ಕಲ್ಪಿಸಿ ಅನುಭಾವವೇದ್ಯವಾದ ಲಿಂಗ–ಅಂಗ ಸಾಮರಸ್ಯವನ್ನು ತೋರಿಸಿದ ಐಕ್ಯಸ್ಥಲದ ಅನುಭಾವ ಕವಿ. ಸಹ್ಯಾದ್ರಿಯ ಉತ್ತುಂಗ ಶೃಂಗದ ಮೇಲೆ ನಿಂತು, ಸುತ್ತಣ ನಿಟ್ಟಿಗೆ ದಿಟ್ಟಿ ಹರಿಸಿ, ಕಣ್ಣು ಹರಿದೆಡೆಯಲ್ಲೆಲ್ಲಾ ಮೈಹಾಸಿ ಮಲಗಿರುವ ಮಲೆನಾಡಿನ ನಿಸರ್ಗ ಸೌಂದರ್ಯಕ್ಕೆ ಮನಸೋತು, ಆ ಪ್ರಕೃತಿ ನಾಟಕದಲ್ಲಿ ತಾನೂ ಓರ್ವ ಪಾತ್ರಧಾರಿಯಾಗಿ ಪಾತ್ರ ನಿರ್ವಹಿಸಿ, ಪ್ರಕೃತಿಯ ಚೈತನ್ಯ ವನ್ನು ತನ್ನಲ್ಲಿಯೇ ತುಂಬಿಕೊಂಡ ಶ್ರೀಮಂತ ಕವಿ. ಈ ಕವಿಗೆ ಪ್ರಕೃತಿಯೇ ಜೀವ, ಪ್ರಕೃತಿಯೇ ದೈವ. ನಿಸರ್ಗದ ಸಹಜ ಸೌಂದ ರ್ಯದ ವಿವಿಧ ವಿನ್ಯಾಸಗಳನ್ನು ರಸಾವೇಶದೊಂದಿಗೆ ಅನಾವರಣಗೊಳಿಸಿ ವಿಶೇಷಾನುಭೂತಿಗೆ ಕೊಂಡೊಯ್ದು ಮಹಾದ್ರಷ್ಟಾರ. ವೈಶಾಖಶುಕ್ಲದಲ್ಲಿ 'ಗಿರಿಪಂಕ್ತಿ ವನರಾಜಿ ಬುವಿ ಬಾನು ಮುಗಿಲೋಳಿಗಳು ಬೆಳ್ದಿಂಗಳನು ಹೀರಿ ಮಧುಮಾಸದ ಉನ್ಮಾದದಿಂದ ಚಂದ್ರಿಕೆಯಿಂದ ಮತ್ತೇರಿ ಪ್ರೇಮ ಸುಖ ವಿಸ್ಮೃತಿಯ ರಸಗಂಗೆಯಲಿ ತೇಲಿ ಚಂದ್ರಿಕಾ ಸ್ವಪ್ನದಲಿ ಕನವರಿಪ ಜಗತ್ತು ಮಾತೆಯ ಮೃದುವಕ್ಷ ಸ್ಥಲದಲ್ಲಿ ನಿದ್ರಿಸಿದ ಶಿಶುವಿನಂತಿದೆಯಂತೆ' ಅಂತಹ ಅಮೃತ ಮಹೂರ್ತದಲ್ಲಿ ಕವಿ ಬಯಸುತ್ತಾನೆ. 'ಸಮಾಧಿಸ್ಥ ವಿಶ್ವ ದಲಿ ತಲ್ಲೀನವಾಗುವಂ, ಭವಿ ರವಿಯೊಳಾಗುವಂತೆ!' ಅಂದರೆ ಕಾಂತಿಕಿರಣಗಳು ಸೂರ್ಯನಲ್ಲಿ ಬೆರೆತಂತೆ ನಿಸರ್ಗದೊಡನೆ ಐಕ್ಯಾನುಸಂಧಾನವನ್ನು ಪಡೆದುಕೊಂಡಿದ್ದಾನೆ. ಬೆಳದಿಂಗಳನ್ನು ಕಂಡಾಗ–

ಜೊನ್ನದಿಂಪನು ನೋಡಿ, ಜೊನ್ನದೊಳು ತೇಲಾಡಿ
ಜೊನ್ನದೊಳು ಜೊನ್ನಾಗಿ ಕರಗಿ ಹೋದೆ[3]

ಎನ್ನುತ್ತಾರೆ. ಕತ್ತಲಿನ ಭಿತ್ತಿಯಲಿ 'ಮಿಂಚಿನ ಹನಿಗಳ ಮಳೆ, ಜ್ಯೋತಿಯ ಸೇಸೆ' ಗಳೆನಿಸಿದ ಮಿಂಚು ಹುಳುಗಳನ್ನು ಕಂಡಾಗ, 'ಮೋಹದ ನೋಟದೊಳೊಂದಾಗಿ ಮಿಂಚಿನ ಹುಳುವಾಗಿ ಮಿಣುಮಿಣು'[4]ಗುತ್ತಾರೆ!

'ನವರಾತ್ರಿಯ ನವಧಾತ್ರಿಯ ಸಸ್ಯಶಾಮಲ ವನಧಿಯಲಿ ಹಸುರಾಗಸ, ಹಸುರು ಮುಗಿಲು, ಹಸುರು ಗದ್ದೆಯ ಬಯಲು, ಹಸು ರೆಲೆ, ಹಸುರು ಕಣಿವೆ, ಸಂಜೆಯ ಬಿಸಿಲೂ ಹಸುರು; ಹೊಸ ಹೂವಿನ ಕಂಪು ಹಸುರು, ಎಲರಿನ ತಂಪು ಹಸುರು, ಹಕ್ಕಿಯ ಕೊರಲಿಂಪು ಹಸುರು, ಇಳೆಯುಸಿರು ಹಸಿರು–

ಹಸುರತ್ತಲ್! ಹಸುರಿತ್ತಲ್!
ಹಸುರೆತ್ತಲ್ ಕಡಲಿನಲಿ
ಹಸುರ್‌ಗಟ್ಟಿತೊ ಕವಿಯಾತ್ಮಂ
ಹಸುರ್ ನೆತ್ತರ್ ಒರಲಿನಲಿ![5]

ತನ್ನ ಮೈನೆತ್ತರೂ ಹಸುರಾಗುವಂತಹ ತನ್ಮಯತೆ ಈ ಕವಿಗೆ! ಅಂತೆಯೆ ಅವನ ನಾಲಗೆ ನುಡಿಯುತ್ತದೆ– 'ಶಿವ ಶಿವಾ ಕಣ್ದೆರೆದು ಪ್ರಕೃತಿ ಸೌಂದರ್ಯವಂ ಭಾವನೋಜ್ವಲ ನೋಡದಿಹ ಬಾಳೊಂದು ಬಾಳಲ್ಲ'ಎಂದು. ರಸಾನುಭೂತಿಯ ತುರೀಯಾವಸ್ಥೆಯಲ್ಲಿ ಕವಿಗೆ ಸಮಸ್ತವೂ ಶಿವಾತ್ಮಕವೆ ಆಗಿ ಗೋಚರಿಸುತ್ತದೆ. ಸೌಂದರ್ಯದ ಸೋಪಾನವನ್ನೇರಿ, ಸತ್ಯದ ಸೀಮೆಯಲ್ಲಿ ವಿಹರಿಸಿ, ಶಿವ ದಲ್ಲಿ ಪರ್ಯಾವಸನ ಹೊಂದುವುದೇ ಅವರ ಕಾವ್ಯದ ಪರಮ ಗುರಿ. ಹಾಗಾಗದಿದ್ದರೆ 'ಶಿವನಿಲ್ಲದೆ ಸೌಂದರ್ಯವೆ? ಶವಮು ಖದಾ ಕಣ್ಣೋ!!'. . .ಸತ್ಯ ಸೌಂದರ್ಯಗಳು ಶಿವ ಸಮನ್ವಿತವಾದವುಗಳು ಕವಿಯ ದರ್ಶನದಲ್ಲಿ. ಶ್ರೀ ಕುವೆಂಪುರವರ ಕಲಾಕುಂ ಚಕ್ಕೆ ಸಿಕ್ಕ ಮಲೆನಾಡಿನ ಪಕ್ಷಿಲೋಕ ಅಮರವಾಯಿತು. ಕೋಗಿಲೆ, ಕಾಜಾಣ, ಕಾಮಳ್ಳಿ, ಚೋರೆ, ಬೋರೆ, ಕ್ರೌಂಚ, ಬಲಾಕ, ಬೆಳ್ಳಕ್ಕಿ, ಗಿಳಿ, ತೇನೆ, ಗೊರವಂಕ ಎಲ್ಲವೂ ಆನಂದದ ಕಂದಗಳಾದವು; ನಿಸರ್ಗ ರಮಣಿಯ ಕಣ್ಣುಗಳಾದವು. ವಿಯನ್‌ಮಾರ್ಗ ದಲ್ಲಿ ವಿಹಾರ ಕೈಗೊಂಡ ಬೆಳ್ಳಕ್ಕಿಯ ಮಾಲೆ ಕವಿಯ ಕಣ್ಣಿನಲ್ಲಿ 'ದೇವರು ತುಜು ಮಾಡಿದ'ದಂತೆ ಕಾಣಿಸಿಕೊಳ್ಳುತ್ತದೆ. ಅಲ್ಲದೆ

------------------------------------------------------------------------
---

[೨] ನವಿಲು, ಬೆಳ್ದಿಂಗಳು
[೩] ಕೊಳಲು, ಮಿಣುಕು ಹುಳಗಳು
[೪] ಪಕ್ಷಿಕಾಶಿ, ಹಸುರು

ಮಲೆನಾಡಿನ ಪಕ್ಷಿ ಸಾಧಾರಣ ಹಕ್ಕಿಯಾಗಿ ಕಂಡಿಲ್ಲ. ಅದು
. . .ತರು ಚೇತನ ಚೈತ್ಯಾಕ್ಷಿ
ಗರಿತಳೆದಿರೆ ಸಸ್ಯಪ್ರಜ್ಞೆಗೆ ಸೇಂದ್ರಿಯ ಸಾಕ್ಷಿ!

ಆ ಕಾರಣ ಅದೊಂದು ವಿಶ್ವಾತ್ಮನ ವ್ಯಕ್ತರೂಪ ಇಂತಹ ಆಧ್ಯಾತ್ಮಿಕ ದೃಷ್ಟಿ, ದಿವ್ಯದರ್ಶನ, ಚಿರಂತನ ಚಿಂತನ–ಇವುಗಳಿಂದ ಶ್ರೀ ಕುವೆಂಪುರವರ ಪ್ರಕೃತಿ ಪ್ರಪಂಚ ನಿತ್ಯನೂತನ, ಸತ್ಯ ಶಾಶ್ವತ ಆಗಿದೆ. ಅಂತೆಯೇ ಕವಿಯ ದರ್ಶನ ದ್ಯುತಿಯಲ್ಲಿ ಜಡಚೇತನಗಳೆಲ್ಲವೂ ಪ್ರಜ್ವಲಿಸಿ ಬೆಳಗುತ್ತವೆ. ಎಲ್ಲೆಲ್ಲೂ ಚೈತ ನ್ಯವೇ ಹೊನಲಾಗಿ ಹರಿಯುತ್ತದೆ. ಆದರೆ ಅದು ರಸದೃಷ್ಟಿಗೆ ಮಾತ್ರ ಸಾಧ್ಯ, ಸಂವೇದ್ಯ. ಅದೇ 'ಸತ್–ಚಿತ್–ಆನಂದ' ತುಂಬಿದ ವಧುವಿನ ಮಡು. ಅಲ್ಲಿ ರಸಋುಷಿಯಾದ ಕವಿ ಕರಗುತ್ತಾನೆ ಕಾರಣ ಅವನ ಬಾಳೆಲ್ಲ ನಾಲಗೆ; ಅವನ ಬದುಕೆಲ್ಲವೂ ರಸವಶ ತೆಯ ಸವಿ ಸುಧೆ!

॥ ೩ ॥

ನಿಸರ್ಗದ ಬಗೆಗೆ ಕುವೆಂಪುರವರಿಗೆ ದಳದೆರೆದ ಮೋಹ; ಅದರೊಡನೆ ಅಧ್ವೈತವನ್ನು ಸಾಧಿಸುವ ಇಚ್ಛೆ; ಅದರಲ್ಲಿ ಶಿವ ನನ್ನು ಸಾಕ್ಷಾತ್ಕರಿಸಿಕೊಳ್ಳುವ ಬಯಕೆ; ಅಂಥದೇ ಒಲವು ಅವರ ಪ್ರೇಮಗೀತೆಗಳಲ್ಲಿ. ಪ್ರೇಮ ವಿಶ್ವಾಂತರಾಳದಲ್ಲಿ ಸದಾ ಪ್ರವಹಿಸುತ್ತಿರುವ ಒಂದು ಅದಮ್ಯ ಶಕ್ತಿ. ಜಗದ ಜೀವನವನ್ನು ಸವಿಯಾಗಿಸಿ, ಬಾಳಬೇಕೆಂಬ ಆಸೆ ಮೂಡಿಸುವ ಸಂಜೀವಿನಿ. ಅದನ್ನು ಬಣ್ಣಿಸದ ಕವಿಯಿಲ್ಲ, ಬಿತ್ತರಿಸದ ಕಾವ್ಯವಿಲ್ಲ. ಆದರೆ ಕುವೆಂಪು ಎಲ್ಲರಂತಲ್ಲ. ಹೆಣ್ಣು ಗಂಡಿನ ಪ್ರಣಯವೇ ಇರಲಿ ಅದು ಲೈಂಗಿದ ಭೋಗದ ಅರ್ಥದಲ್ಲಿ ನಿಂತಿಲ್ಲ; ಶಿವನನ್ನು ಸಾಧಿಸುವ ಸಾಧನವಾಗಿದೆ. ಭಗವಂತ ಅತ್ಯುತ್ತಮವಾದ ಮುತ್ತುಗಳನ್ನು ಆಯ್ದು ಸೃಷ್ಟಿಸಿದ್ದಾನಂತೆ ಸ್ತ್ರೀ ಪುರುಷ ಶಿಶು ಇತ್ಯಾದಿಗಳ ರೂಪದಲ್ಲಿ. ಆ ಕಾರಣ ತಾಯಿ ಮಗುವಿಗೆ ಕೊಡುವ ಮುತ್ತು ಅದು 'ದೇವರ ಮುತ್ತು!' ಪ್ರೇಯಸಿಯ–

ಗಲ್ಲ, ಕೆನ್ನೆ, ಮೂಗು, ಹುಬ್ಬು
ಕಣ್ಣು, ತುಟಿ, ಹಣೆ, ಜಡೆ
ವ. . .ಕ್ಷೋ. . .ಜ
ಕುಟ್ಮಲ ಸರೋಜ,
ನಿತಂಬಾದಿ ಅಂಗಾಂಗ
ನನಗಿಂದಾಗಿವೆ ತಪೋರಂಗ!
ಶ್ರೀಮಾತೆಯ ಚರಣಕೃಪಾ ಸರೋಜಸಂಗ!'[೫]

ಇಂತಹ ಮಂಚಯೋಗಿಯ ಪ್ರೇಮಸಾಕ್ಷಾತ್ಕಾರಕ್ಕೆ ಒಡ್ಡಿದ ಪ್ರತಿಮೆ ಎಂದರೆ 'ಸ್ವರ್ಗ ದ್ವಾರಾಧಿ ಯಕ್ಷಪ್ರಶ್ನೆ'. ಅಲ್ಲಿ ಕವಿ ತಮ್ಮ 'ಹೃದಯದ ಹೃದಯದಾತ್ಮದೊಲವಿನ ಹೆಸರು ಹೇಳಿ ಸ್ವರ್ಗದ್ವಾರವನ್ನು ತೆರೆಸಿಕೊಂಡರಂತೆ! ಬಾಳನ್ನು ಹಸನಾಗಿಸಿ, ಗಂಡನ್ನು ಋಜುಮಾರ್ಗದಲ್ಲಿ ನಡೆಸಿದ ಮಹಾಶಕ್ತಿ ಎಂದರೆ ಕೈಹಿಡಿದ ಧರ್ಮಪತ್ನಿ ಅವಳಿಂದಲೇ ಪುರುಷನ ಶ್ರೇಯಸರ್ವಸ್ವ, ಪ್ರತಿಷ್ಠೆ–ಪ್ರತಾಪಗಳು. ಇವರ ದರ್ಶನ ಈ ನೀಳ್ಗವನದಲ್ಲಾಗುತ್ತದೆ. 'ಚಂದ್ರಮಂಚಕೆ ಬಾ ಚಕೋರಿ' ಎಂದು ಪ್ರೇಯಸಿಯನ್ನು ಆಹ್ವಾನಿಸಿ ದರೂ, ಕವಿಮನ ಮರುಘಳಿಗೆಯಲ್ಲೇ ನುಡಿಯುತ್ತದೆ–

ತಾಯ ಚರಣ ಕಿರಣವೊಂದು
ಕೃಪೆಯೊಳೆನ್ನ ಪೊರೆಯಲೆಂದು
ನಿನ್ನ ರೂಪದಿಂದ ಬಂದು
ಸಲಹುತಿರುವುದೆನ್ನನಿಂದು[೬]

---

[೫] ಮಂಚಯೋಗಿ, ಅನುತ್ತರಾ
[೬] ಚಂದ್ರಮಂಚಕೆ ಬಾ ಚಕೋರಿ

ಎಂದು. ಇಂತಹ ಆಧ್ಯಾತ್ಮಿಕ ಕಲ್ಪನೆ ಅವರ ಕವನಗಳಲ್ಲಿದೆ. ಅವರ ಪ್ರೀತಿ, ಪ್ರೇಮ, ಪ್ರಣಯಗಳೆಲ್ಲವೂ ಪ್ರಣವದಲ್ಲಿ ವಿಶ್ರಮಿಸಿವೆ.

॥ ೪ ॥

ನಾಡು ನುಡಿಗಳ ಬಗೆಗೆ ಶ್ರೀ ಕುವೆಂಪುರವರಿಗೆ ಪ್ರಚಂಡಪ್ರೇಮ. ತಮಿಳು ನಾಡಿನ ಭಾರತಿಯಾರ್‌ರವರಂತೆ ಬ್ರಿಟಿಷರ ದಬ್ಬಾಳಿಕೆಯನ್ನು ಪ್ರತಿಭಟಿಸಿ ನುಡಿದ ಕೆಚ್ಚು ಅವರದು. ಅಂದೇ ನವಭಾರತದ ಲೀಲೆಯ ಕನಸು ಕಂಡ ಈ ಕ್ರಾಂತಿಕವಿ

ಭರತ ಖಂಡದ ಹಿತವೆ
ನನ್ನ ಹಿತ ಎಂದು
ಭರತಮಾತೆಯ ಮತವೆ
ನನ್ನ ಮತ ಎಂದು
ಭಾರತಾಂಬೆಯ ಸುತರೆ
ಸೋದರರು ಎಂದು
ಭಾರತಾಂಬೆಯ ಮುಕ್ತಿ
ಮುಕ್ತಿ ನನಗೆಂದು
ನುಗ್ಗು ಮುಂದಕೆ, ಧೀರ,
ಕಾಳೆಗದ ಕೊಲೆಗೆ!
ನುಗ್ಗು ಮರಣಕೆ, ವೀರ,
ಸಗ್ಗದಾ ನೆಲೆಗೆ![೭]

ಎಂದು ಪಾಂಚಜನ್ಯವನ್ನು ಮೊಳಗಿಸಿ, ದರ್ಪ ರಥದಡಿಯಲ್ಲಿ ಬಿದ್ದು ನರಳುತ್ತಿರುವ ಭಾರತಾಂಬೆಯ ಮುಕ್ತಿಗಾಗಿ ಕರೆ ನೀಡು ತ್ತಾರೆ. ರಾಷ್ಟ್ರದ ಬಗೆಗಿನ ಪ್ರೇಮವೆ ಕರ್ನಾಟಕದ ಬಗೆಗೆ, ಕನ್ನಡ ನುಡಿಯ ಬಗೆಗೆ ತುಂಬಿತುಳುಕುತ್ತದೆ ಶ್ರೀ ಕುವೆಂಪುರವರ ಅಭಿಮಾನೀ ಹೃದಯದಲ್ಲಿ.

ಕನ್ನಡ ಎನೆ ಕುಣಿದಾಡುವುದೆನ್ನದೆ
ಕನ್ನಡ ಎನೆ ಕಿವಿ ನಿಮಿರುವುದು[೮]
ಎಂದು ಭಾವುಕರಾಗಿ ಹಾಡಿದ ಕವಿ–
'ಕನ್ನಡಕೆ ಹೋರಾಡು ಕನ್ನಡದ ಕಂದ
ಕನ್ನಡವ ಕಾಪಾಡು ನನ್ನಾನಂದ'[೯]
ಎಂದು ಹರಕೆ ಸಲ್ಲಿಸಿ,
ಎಲ್ಲಾದರೂ ಇರು ಎಂತಾದರೂ ಇರು
ಎಂದೆಂದಿಗೂ ನೀ ಕನ್ನಡವಾಗಿರು[೧೦]
ಎಂಬ ಬೇಡಿಕೆಯೊಂದಿಗೆ ಕನ್ನಡಿಗನನ್ನು ಎಚ್ಚರಿಸಿದ ನಾಡಕವಿ, ನಾಡೋಜ ಕವಿ ಶ್ರೀ ಕುವೆಂಪು.

---

[೭] ಪಾಂಚಜನ್ಯ
[೮] ಕೊಳಲು
[೯] ಕೋಗಿಲೆ ಮತ್ತು ಸೋವಿಯಟ್ ರಷ್ಯಾ
[೧೦] ಅದೇ

॥ ೫ ॥

ಶ್ರೀ ಕುವೆಂಪುರವರಲ್ಲಿ ಪರಿಸರದ ಪ್ರಜ್ಞೆ, ಸಾಮಾಜಿಕ ಎಚ್ಚರ ಸದಾ ಜಾಗೃತವಾಗಿರುವುದು ಅವರ ಕವಿತೆಗಳಲ್ಲಿ ಕಂಡು ಬರುತ್ತದೆ. ಅವರು ಎಂದಿಗೂ ಗೂಡಾರದ ಕವಿಗಳಾಗಿಲ್ಲ– ಎಂಬುದಕ್ಕೆ ಅವರ ಹಲವು ಕವನಗಳು ಸಾಕ್ಷಿ.

ಕ್ರಾಂತಿಕಾಳಿ ಅವರೆದೆಗೆ ನಟಿಸುತ್ತಾ ನುಡಿದಳಂತೆ–
ಓ ದ್ರೋಹಿ ಕವಿಯೇ, ನಿನಗಿತ್ತಾಣತಿಯ ಮರೆತು
ಕ್ಲೀಬತನದಲಿ ಹೆಣ್ಣು ಸೋಬಾನೆಗಳ ಹಾಡಿ

ಪಾಳ್ಗೆಯ್ದೆ ಕಜ್ಜಮಂ! ಶುಕ, ಪಿಕ, ವಸಂತ, ಲತೆ,
ಮುಂಗುರುಳು, ತಂಗಾಳಿ, ದೊರೆಗಿರೆಗಳಜ್ಜಿ ಕಥೆ,
ಬೆಳ್ದಿಂಗಳೆಂಬುವಂ ನೂಕಾಚೆ, ಹೆಂಬೇಡಿ!
ಬಡತನಂ, ಗೊಬ್ಬರಂ, ಕತ್ತಿ, ಗುದ್ದಲಿ, ಹಾರೆ.
ಬೆವರು ನೆತ್ತರ್ಗಳಂ ಗಾನಗೈವುದು ನಿನ್ನ
ಕರ್ತವ್ಯವಿಂದು, ಹಾ! ಹೊಟ್ಟೆಗಿಲ್ಲದೆ ಅನ್ನ
ಬಡಜನರು ಸಾಯುತಿರೆ, ರಸಗಂಧವನು ತೋರೆ
ತಣಿವಹುದೆ, ಕ್ರಾಂತಿಕಾಳಿಯು ನಾನು, ಕೈಬೀಸಿ
ಕರೆಯೆ, ಬಾ ಪೂಜೆಗೈ ಹೃದಯ ರಕ್ತವ ಸೂಸಿ[೧೧]

ಸಮಾಜ ಸುಧಾರಣೆಯ ಕಾರ್ಯದಲ್ಲಿ ಕವಿ 'ಅಜ್ಞಾತ ಶಾಸಕ' ಆಗಿದ್ದಾನೆ. ಖಂಡಿತವಾದಿಯಾದ ಈ ಕವಿ ದೈವ, ಧರ್ಮ, ಮೂಢನಂಬಿಕೆ, ಸಂಪ್ರದಾಯ ಶರಣತೆ, ಕ್ಷುದ್ರ ರಾಜಕೀಯ, ದುರ್ಬಲ ಧ್ಯೇಯ, ರಾಜತ್ವದ ದರ್ಪ ದೌರ್ಜನ್ಯ– ಇವೇ ಮೊದಲಾದವುಗಳಿಗೆ ತಮ್ಮದೇ ಆದ ನಿಲವು ತಳೆದಿದ್ದಾರೆ. ಅವರ ಆತ್ಮಾಭಿಮಾನ ತಂಬಾ ಪ್ರಶಂಸನೀಯವಾದದ್ದು. ಅರಸುತನ ಅಧಿಕಾರಗಳಿಗೆ ಮಣಿಯದ, ತಮ್ಮತನವನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದ ಧೀ ಮಂತ ವ್ಯಕತಿತ್ವ ಅವರದು. 'ಕವಿ' ಎಂಬ ಕವನ ಅವರ ಮನೋಧರ್ಮಕ್ಕೆ ಹಿಡಿದ ಕನ್ನಡಿಯಾಗಿದೆ–

ವಸಂತವನದಲಿ ಕೂಗುವ ಕೋಗಿಲೆ
ರಾಜನ ಬಿರುದನು ಬಯಸುವುದಿಲ್ಲ!
ಹೂವಿನ ಮರದಲಿ ಜೇನುಂಬುಳಗಳು
ಮೊರೆವುದು ರಾಜನ ಭಯದಿಂದಲ್ಲ[೧೨]

ನಿಸರ್ಗದ ಯಾವ ವಸ್ತುವೂ ರಾಜನ ಅಧೀನವಲ್ಲ; ಅದೇ ರೀತಿ ನಿಸರ್ಗದತ್ತ ಸ್ವಾಭಿಮಾನ ಪಡೆದ ಕವಿ ಯಾರ ಹಂಗಿಗೂ ಬಾಳಿದವನಲ್ಲ. ಅವನು ಸರ್ವತಂತ್ರ ಸ್ವತಂತ್ರನಾದ ಶಕ್ತಿ, ಚೈತನ್ಯ ಅವನು 'ಅಗ್ನಿಮುಖಿ! ಪ್ರಲಯಶಿಖಿ' ಇಂಥವನಿತೋ ಘಟ್ಟಗಳಲ್ಲಿ ಶ್ರೀ ಕುವೆಂಪುರವರ ಒಲವು–ನಿಲವುಗಳು ಕಾಣಸಿಗುತ್ತವೆ.

---

---- [೧೧] ಕೃತ್ತಿಕೆ– ಕ್ರಾಂತಿಕಾಳಿ [೧೨] ಪಾಂಚಜನ್ಯ

# ಸುಬೋಧ ಸೌರಭ: ಜೀವನಚರಿತ್ರೆಗಳು

ಇಂಗ್ಲಿಷ್ ಸಾಹಿತ್ಯ ಸಂಪರ್ಕದಿಂದಾಗಿ ಆಧುನಿಕ ಕನ್ನಡ ಸಾಹಿತ್ಯ ಶ್ರೀಮಂತವಾಗಿದೆ ಎಂಬ ಅಭಿಪ್ರಾಯದ ಬಗೆಗೆ ಹೆಚ್ಚು ವಿರೋಧವಿರಲಾರದು. ಹಾಗೆ ಕನ್ನಡ ಸಾಹಿತ್ಯ ಸಂವೃದ್ಧಿಗೆ ಕಾರಣವಾದ ಹಲವು ಪ್ರಕಾರಗಳು ಪಾಶ್ಚಾತ್ಯ ರಾಷ್ಟ್ರಗಳಿಂದ ಇಂಗ್ಲಿಷ್ ಮೂಲಕ ಭಾರತಕ್ಕೆ, ಕರ್ನಾಟಕಕ್ಕೆ ಆಮದಾದವು. ಅವುಗಳಲ್ಲಿ ಪದ್ಯಪ್ರಕಾರದ ಭಾವಗೀತ (Lyric) ಮತ್ತು ಖಂಡಕಾವ್ಯ (Frag- ment) ಗಳು, ಗದ್ಯ ಪ್ರಕಾರದ ಕಾದಂಬರಿ (Novel), ಸಣ್ಣಕತೆ (Short Story) ಭಾವಪ್ರಬಂಧ (Essay), ಪ್ರವಾಸ ಕಥನ (Travalogue), ವಿಮರ್ಶೆ (Criticism) ಮೊದಲಾದವು. ಇವುಗಳ ಮಾಲಿಕೆಯಲ್ಲಿ ಜೀವನ ಚರಿತ್ರೆ (Biography) ಬರುತ್ತದೆ. ಆದರೆ ಈ ರೂಪ ಆ ಮೊದಲು ಇರಲೇ ಇಲ್ಲವೆಂದಲ್ಲ; ಇತ್ತು, ಇದ್ದರೂ ಇಂಗ್ಲಿಷ್‌ನ ರಚನಾ ವಿಧಾನದ ವಿನ್ಯಾಸ ವೈಖರಿ ಪಡೆ ದಿರಲಿಲ್ಲ. ಆ ಕಾರಣ ಜೀವನ ಚರಿತ್ರೆಯೂ ಒಂದರ್ಥದಲ್ಲಿ ಇಂಗ್ಲಿಷ್‌ನ ಸಂಪರ್ಕ ಸಹವಾಸಗಳಿಂದಲೆ ಸರ್ವಾಂಗ ಸುಂದರವಾ ಯಿತು ಎಂದರೆ ತಪ್ಪಾಗಲಿಕ್ಕಿಲ್ಲ. ಜೀವನ ಚರಿತ್ರೆ ಮೂಲತಃ ಗದ್ಯ ರಚನೆ, ಮಹಾಕವಿ, ಮಹಾದಾರ್ಶನಿಕ, ಮಹಾವಿಜ್ಞಾನಿ, ಮಹಾರಾಜಕಾರಣಿ, ಸಂತ, ಸತ್ಪುರುಷ, ಸಿದ್ಧ, ಸಾಧು, ಕಲಿ, ಕಲಾವಿದ ಒಟ್ಟಿನಲ್ಲಿ ಮಾನವ ಬದುಕನ್ನು ಕಟ್ಟಿ ಬೆಳಗಿಸಿದ ಯಾವನಾದರೂ ಮಹಾನ್ ವ್ಯಕ್ತಿಯ ಬಾಳು ಅದಕ್ಕೆ ವಸ್ತು ಆಗಬಲ್ಲುದು.. ಅಂಥವನ ಬದುಕು, ಸಾಧನೆ, ಸಿದ್ಧಿ, ಸಂದೇಶ, ಸಜ್ಜನಿಕೆ, ಹೃದಯ ಶ್ರೀಮಂತಿಕೆ, ಇವು ಆ ಬಗೆಯ ರಚನೆಗೆ ಮೂಲಧಾತುವಾಗಬಲ್ಲವು. ಇಲ್ಲಿ ಕಲ್ಪನೆಗಿಂತ ವಾಸ್ತವಿಕತೆ, ವ್ಯಕ್ತಿಗಿಂತ ವ್ಯಕ್ತಿತ್ವ, ವ್ಯಷ್ಟಿನಿಷ್ಟತೆಯ ಮೂಲಕ ಸಮಷ್ಟಿಯನ್ನು ಸಾಧಿಸುವ, ಸಾರುವ, ಬೀರುವ ಗುರಿ– ಇವು ಮುಖ್ಯ. 'ಯೋ ವೈ ಭೂಮಾಃ ತತ್ಸುಖಂ ನಾಲ್ಪೇ ಸುಖಮಸ್ತಿ' ಎಂಬ ದಿವ್ಯ ಸಂ ದೇಶ ಜೀವನಚರಿತ್ರೆಯ ರಚನೆಯಲ್ಲಿ ತುಂಬಾ ಅರ್ಥಪೂರ್ಣ. ಇಂತಹ ಜೀವನ ಚರಿತ್ರೆಯ ರಚನಾ ವಿಧಾನದಲ್ಲಿ ಎರಡು ರೂಪಗಳನ್ನು ಆಣುತ್ತೇವೆ. ಒಂದು ಜೀವನ ಚಿತ್ರಣ, ಮತ್ತೊಂದು ಆತ್ಮಕಥೆ. ಬೇರೊರ್ವ ಮಹಾನ್ ವ್ಯಕ್ತಿಯ ಬದುಕನ್ನು ಕುರಿತು ಬರೆದದ್ದು ಜೀವನ ಚಿತ್ರಣ; ತನ್ನನ್ನೇ ತಾನು ಕುರಿತು ರಚಿಸಿಕೊಂಡಿದ್ದು ಆತ್ಮಕಥೆ. ಕನ್ನಡದಲ್ಲಿ ಇವೆರಡೂ ರೂಪಗಳು ಸಾಕ ಷ್ಟಿವೆ. ಜೀವನ ಚಿತ್ರಗಳನ್ನು ಬರೆಯಲು ಮೊದಲು ಕೈಹಾಕಿದವರು ಶಾಸನಕವಿಗಳು. 'ಪ್ರಶಸ್ತಿ'ಗಳು, ವೀರಗಲ್ಲುಗಳು, ಮಾಸ್ತಿಕಲ್ಲು ಗಳು, ನಿಷಧಿಗಲ್ಲುಗಳು ಸಾಕಷ್ಟು ಕೆಲಸಮಾಡಿವೆ ಈ ದಿಸೆಯಲ್ಲಿ. ಅನಂತರದಲ್ಲಿ ಅದನ್ನು ಮುಂದುವರಿಸಿಕೊಂಡುಹೋದ ಕೀರ್ತಿ ಕೆಳದಿ ನೃಪವಿಜಯ, ಕುಮಾರರಾಮ ಸಾಂಗತ್ಯ, ಕಂಠೀರವ ನರಸಿಂಹರಾಜ ವಿಜಯ ಮೊದಲಾದ ಪದ್ಯ ಕಾವ್ಯಗಳಿಗೂ, ಮುದ್ರಾ ಮಂಜೂಷದಂತಹ ಗದ್ಯಕೃತಿಗೂ ಸಲ್ಲುತ್ತದೆ. ಪಂಪ, ರನ್ನ ಮೊದಲಾದ ಚಂಪೂ ಕವಿಗಳೂ ಪ್ರಾಸಂಗಿಕವಾಗಿ ತಮ್ಮ ತಮ್ಮ ಕೃತಿ ರತ್ನಗಳಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆದರೆ ಇಪ್ಪತ್ತನೆಯ ಶತಮಾನದಲ್ಲಿ ಕನ್ನಡದಲ್ಲಿ ಇದು ಶುದ್ಧಗದ್ಯರೂಪಿಯಾಗಿ ವಿಶಿಷ್ಟ ರಚನೆಯಾಗಿ ಮೆರೆಯಿತು. ಅನೇಕ ಉದ್ಭಕೃತಿಗಳೂ ಎರಡೂ ರೂಪಗಳಲ್ಲಿ ಬಂದವು. ಡಾ.ಜಾನ್‌ಸನ್ ಕುರಿತ ಬಾಸ್ವೆಲನ ರಚನೆ ಯನ್ನು ಸರಿಗಟ್ಟುವ ಕವಿ ಕುರಿತ ಕವಿ ರಚನೆ ಕನ್ನಡದಲ್ಲಿ ಬಂದಿಲ್ಲದಿದ್ದರೂ ಮಹಾಪುರುಷರನ್ನು ಕುರಿತ ಅನೇಕ ಗ್ರಂಥಗಳು ಬೆಳಕಿಗೆ ಬಂದಿವೆ. ರಾಷ್ಟ್ರಪ್ರೇಮ, ದೈವಭಕ್ತಿ, ಧಾರ್ಮಿಕ ವ್ಯಕ್ತಿಗಳ ಬಗೆಗಿನ ಪೂಜ್ಯಭಾವನೆ– ಇವುಗಳನ್ನೇ ಮೂಲಧಾತುವಾಗುಳ್ಳ ರಚನೆಗಳು ವಿಫುಲವಾಗಿದೆ. ಇಂತಹ ಮೌಲ್ಯಗಳನ್ನು ಆಧರಿಸಿದ ರಚನೆಗಳಿಗೆ ಹೆಸರಾದವರು ಸುಬೋಧ ಎಂ. ರಾಮರಾಯರು. ಈ ದಿಸೆಯಲ್ಲಿ ಶ್ರೀಯುತರ ಸಾಧನೆ ತುಂಬಾ ಶ್ಲಾಘನೀಯವಾದುದು. ೧೯೨೧ರಲ್ಲಿ ಆರಂಭವಾದ ಅವರ ಲೇಖಣಿ ಅವಿಶ್ರಾಂತ ವಾಗಿ ದುಡಿದು ಸುಮಾರು ಒಂದು ನೂರ ಅರವತ್ತು ಜೀವನ ಚಿತ್ರಣಗಳನ್ನು ಕೊಟ್ಟ ಕೀರ್ತಿಗೆ ಪಾತ್ರವಾಗಿದೆ. 'ಸುಬೋಧ' ಮಾಸಪತ್ರಿಕೆಯ ಮೂಲಕ ಪ್ರತಿ ತಿಂಗಳೂ ಒಂದೊಂದು ಜೀವನ ಚಿತ್ರಣವಿತ್ತು ರಾಮರಾಯರು ಈ ಸಾಹಿತ್ಯ ಪ್ರಕಾರವನ್ನು ಶ್ರೀ ಮಂತಗೊಳಿಸಿದ್ದಾರೆ. ಅದರಿಂದಾಗಿ, 'In the Kannada Literay horizon Rama Rao was the first, perhaps the only one to dedicate himself to the unenviable task of publishing small books on great leaders, ancient and the modern- in different fields-religion, politics, education, social reform, literature art, music, science, industry etc. What W.T. Stead for the education of the masses in England and what G.A. Natesan did to educate the English speaking Indians, Subodha Rama Rao did for the education of the Kannada Children and masses'. ಎಂಬ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಸುಬೋಧ ರಾಮ ರಾಯರ ಕೃತಿಗಲನ್ನು ೧. ಪೌರಾಣಿಕ ವ್ಯಕ್ತಿಗಳು, ೨. ಧರ್ಮಸಂಸ್ಥಾಪಕರು, ೩. ಐತಿಹಾಸಿಕ ಗಣ್ಯರು ಎಂದು ಮೂರು ವರ್ಗ ಗಳಾಗಿ ವಿಂಗಡಿಸಬಹುದು. ಅವರ ಸಾಹಿತ್ಯ ಸಂಪದ ಹೀಗಿದೆ:

**ಮೊದಲ ವರ್ಗದಲ್ಲಿ** ೧. ಚಂದ್ರಹಾಸ, ೨. ಧ್ರುವ ೩. ಪ್ರಹ್ಲಾದ ೪. ಭೀಷ್ಮ ೫. ಅಂಬರೀಷ ೬. ಮಾರ್ಕಂಡೇಯ ೭. ಕುಚೇಲ ೮. ಆಂಜನೇಯ. ೯. ರುಕ್ಮಾಂಗದ ಮಹಾರಾಜ ೧೦. ಅಜಾಮಿಳ ೧೧. ಬಲಿಚಕ್ರವರ್ತಿ ೧೨. ನಾರದ ಮಹಾಮುನಿ ೧೩. ಹರಿಶ್ಚಂದ್ರ ೧೪. ದಾನ ವೀರ ಕರ್ಣ ೧೫. ಕುಶಲವರು ೧೬. ಶ್ರೀಕೃಷ್ಣ ೧೭. ಅಭಿಮನ್ಯು ೧೮. ಭಗೀರಥ ೧೯. ಭೀಮಸೇನ ೨೦. ಮಯೂರ ಧ್ವಜ ಮಹಾರಾಜ ೨೧. ವಿನಾಯಕ ೨೨. ಸುಧನ್ವ ೨೩. ಪರುಶರಾಮ ೨೪. ಜಡಭರತ ಮಹರ್ಷಿ ೨೫. ಧನಂಜಯ ೨೬. ವಿಶ್ವಾ ಮಿತ್ರ ೨೭. ಶ್ರೀರಾಮಚಂದ್ರ ೨೮. ಬಭ್ರುವಾಹನ ೨೯. ವಾಲ್ಮೀಕಿ ಮಹರ್ಷಿ ೩೦. ಜನಮೇಜಯ ಮಹಾರಾಜ ೩೧. ದಿಲೀಪ ಮಹಾರಾಜ ೩೨. ಸವಮಿತ್ರಿ ೩೩. ಸಾವಿತ್ರಿ ೩೪. ದಮಯಂತಿ ೩೫. ಶಕುಂತಲಾ ದುಷ್ಯಂತರು ೩೬. ದ್ರೌಪದಿ ೩೭. ದಾಕ್ಷಾಯಿ ಣೀದೇವಿ ೩೮. ರುಕ್ಮಿಣೀದೇವಿ ೩೯. ಅನಸೂಯಾದೇವಿ ೪೦. ಸೀತದೇವಿ ೪೧. ಸಾಧ್ವೀ ದೇವಯಾನೆ ೪೨. ಅಹಲ್ಯಾದೇವಿ ೪೩. ಸಾಧ್ವೀ ಸುಕನ್ಯಾ ೪೪. ಪಾರ್ವತೀದೇವಿ ೪೫. ಸುಭದ್ರಾದೇವಿ– ಇವರು ಸೇರುತ್ತಾರೆ.

**ಎರಡನೆಯ ವರ್ಗದಲ್ಲಿ** ೧. ಬುದ್ಧದೇವ ೨. ಶಂಕರಾಚಾರ್ಯರು ೩. ರಾಮಾನುಜಾಚಾರ್ಯರು ೪. ಮಧ್ವಾಚಾರ್ಯರು ೫. ಬಸವೇಶ್ವರರು ೬. ಮಹಮ್ಮದ್ ಪೈಗಂಬರ್ ೭. ಮಹಾತ್ಮ ಏಸುಕ್ರಿಸ್ತ ೮. ಮಹಾವೀರಸ್ವಾಮಿ ಮೊದಲಾದವರು ಬರುತ್ತಾರೆ.

**ಮೂರನೆಯ ವರ್ಗದಲ್ಲಿ** ೧. ರಾಮಕೃಷ್ಣ ಪರಮಹಂಸ ೨ ಸ್ವಾಮಿ ವಿವೇಕಾನಂದ ೩. ದಯಾನಂದ ಸರಸ್ವತಿ ೪. ಸಮರ್ಥ ರಾಮದಾಸರು ೫. ಸ್ವಾಮಿ ಶ್ರದ್ಧಾನಂದರು ೬. ಸ್ವಾಮಿ ರಾಮತೀರ್ಥರು ೭. ಗುರುನಾನಕ್ ೮. ಗುರುಗೋವಿಂದಸಿಂಗ್ ೯. ರಾಜಾರಾಮಮೋಹನರಾಯ್ ೧೦. ವ್ಯಾಸರಾಯ ಸ್ವಾಮಿಗಳು ೧೧. ಟೀಕಾಚಾರ್ಯರು ೧೨. ವಲ್ಲಭಾಚಾರ್ಯರು ೧೩. ರಾಘ ವೇಂದ್ರಸ್ವಾಮಿಗಳು ೧೪. ಚಂದ್ರಗುಪ್ತ ಚಾಣುಕ್ಯರು ೧೫. ಶ್ರೀ ಶಿವಾಜಿ ೧೬. ಅಶೋಕ ಚಕ್ರವರ್ತಿ ೧೭. ಅಕ್ಬರ್ ಮಹಾಶಯ ೧೮. ವಿದ್ಯಾರಣ್ಯರು ೧೯. ಮುಮ್ಮಡಿ ಕೃಷ್ಣರಾಜ ಒಡೆಯರು ೨೦. ಪ್ರತಾಪಸಿಂಹ ೨೧. ಕೃಷ್ಣದೇವರಾಯ ೨೨. ಸರ್ ಸಲಾರ್ ಜಂಗ್ ೨೩. ರಾಜಾ ರಣಜಿತ್‌ಸಿಂಗ್ ೨೪. ಕಂಠೀರವ ನರಸರಾಜ ಒಡೆಯರ್ ೨೫. ಹರ್ಷ ಮಹಾರಾಜ ೨೬. ರಾಮರಾಜ ೨೭. ಹೈದರಲ್ಲೀ ಖಾನ್ ೨೮. ಸಾರ್ವಭೌಮ ಪುಲಿಕೇಶಿ ೨೯. ಚಾಲುಕ್ಯ ವಿಕ್ರಮ ೩೦. ದಿವಾನ್ ಪೂರ್ಣಯ್ಯ ೩೧. ಶಿವಪ್ಪ ನಾಯಕ ೩೨. ಚಾಮರಾಜ ಒಡೆಯರು ೩೩. ರಾಣಿ ಭವಾನಿ ೩೪. ಸತೀ ಸಂಯುಕ್ತೆ ೩೫. ಅಹಲ್ಯಾಬಾಯಿ ಹೋಳ್ಕರ್ ೩೬. ಝಾನ್ಸಿರಾಣಿ ಲಕ್ಷ್ಮೀಬಾಯಿ ೩೭. ನೂರ್‌ಜಹಾನ್ ಬೇಗಂ ೩೮. ಪದ್ಮಿನಿ ೩೯. ಕರ್ಮದೇವಿ ೪೦. ರಾಣಿ ವೀರಮತಿ ೪೧. ವೀರ ರಾಣಿ ರಮಾಬಾಯಿ ೪೨. ಪಂಡಿತ ರಮಾಬಾಯಿ ಸರಸ್ವತಿ ೪೩. ಮಹಾರಾಣಿ ಲಕ್ಷ್ಮಮ್ಮಣ್ಣಿ ೪೪. ಈಶ್ವರ ಚಂದ್ರ ವಿದ್ಯಾ ಸಾಗರ ೪೫. ಮಹಾತ್ಮ ಗಾಂಧಿ ೪೬. ಲೋಕಮಾನ್ಯ ತಿಲಕ್ ೪೭. ದಾಧಾಭಾಯ್ ನವರೋಜಿ ೪೮. ಸರ್.ಕೆ. ಶೇಷಾದ್ರಿ ಅಯ್ಯರ್ ೪೯. ಗೋಪಾಲಕೃಷ್ಣ ಗೋಖಲೆ ೫೦. ಲಾಲಲಜಪತ್ ರಾಯ್ ೫೧. ಜೆ.ಎನ್. ತಾತಾ ೫೨. ಮಹಾದೇವ ಗೋವಿಂದ ರಾನಡೆ ೫೩. ಚಿತ್ತರಂಜನ್ ದಾಸ್ ೫೪. ರಾಜಾ ಸರ್ ಟಿ. ಮಾಧವರಾವ್ ೫೫. ರಾಜಾ ರವಿವರ್ಮ ೫೬. ಬಂಕಿಂ ಚಂದ್ರ ಚಟ್ಟೋಪಾಧ್ಯಾಯ ೫೭. ರಂಗಾಚಾರ್ಲು ೫೮. ಸುರೇಂದ್ರನಾಥ ಬ್ಯಾನರ್ಜಿ ೫೯. ಪಂಡಿತ ಮೋತಿಲಾಲ್ ನೆಹರು ೬೦. ರಂಗನಾಥ ಶಾಸ್ತ್ರಿ ೬೧. ಅಬ್ರಹಾಂ ಲಿಂಕನ್ ೬೨. ನೆಪೋಲಿಯನ್ ಬೋನೋಪಾರ್ಟ ೬೩. ಜೋಸಫ್ ಮ್ಯಾಝಿನಿ ೬೪. ಬೆಂಜಮಿನ್ ಫ್ರಾಂಕ್ಲಿನ್ ೬೫. ಜಾರ್ಜ್ ಸ್ಟೀವನ್‌ಸನ್ ೬೬. ಲಿಯೋ ಟಾಲ್‌ಸ್ಟಾಯ್ ೬೭. ಸಾಕ್ರೆಟೀಸ್ ಮೊದಲಾದವರು. ಇವೆಲ್ಲವೂ ಸಂಸ್ಕೃತಿ ಭೂಯಿಷ್ಠವಾದವುಗಳು. ಎಲ್ಲ ಕೃತಿಗಳ ಪ್ರವೇಶವೂ ರಾಷ್ಟ್ರ ಪ್ರೇಮದ, ಧರ್ಮಧ್ಯುತಿಯ ದ್ವಾರಗಳು. ರಾಮ ರಾಯರ ರಚನೆಯಲ್ಲಿ ಒಪ್ಪವಿದೆ, ಓರಣವಿದೆ. ಪ್ರತಿ ಪುಸ್ತಕವನ್ನೂ ಅವರು ಅನಾವರಣಗೊಳಿಸುವುದು ಹೀಗೆ: 'ನಮ್ಮ ಮಾತೃಭೂಮಿಯಾದ ಈ ಭಾರತದೇಶವು ಪುಣ್ಯತಮವಾದುದು. ವಿಸ್ತಾರವಾದ ಈ ಭೂಭಾಗದ ಪ್ರತಿಯೊಂದು ಪ್ರದೇ ಶವೂ ಯಾವುದಾದರೊಂದು ದಿವ್ಯ ಮಹಿಮೆಯಿಂದ ಕೂಡಿ ಪ್ರಸಿದ್ಧವೆನಿಸಿರುವುದು (ಆಂಜನೇಯ): 'ಪವಿತ್ರ ಚರಿತ್ರಳಾದ ನಮ್ಮ ಭಾರತ ಭೂಮಾತೆಯು ಕೇವಲ ಧರ್ಮ ವೀರರ್ರು ಮಾತ್ರವಲ್ಲ, ದಾನಶೂರರನ್ನು ಮಾತ್ರವಲ್ಲ, ಜ್ಞಾನಿಗಳನ್ನು ಮಾತ್ರವಲ್ಲ, ತಂತ್ರ ಜ್ಞರನ್ನು ಮಾತ್ರವಲ್ಲ ಈ ಎಲ್ಲರಲ್ಲೂ ಅವಶ್ಯಕವಾಗಿರಬೇಕಾದ ಸದ್ಗುಣಗಳನ್ನೂ ಗಳಿಸಿ, ಅಚಲಿತ ಚಿತ್ತ ವೃತ್ತಿಯಿಂದ– ಅಖಂಡ ಪರಿಶ್ರಮದಿಂದ–ಫಲೋದಯದ ಪರ್ಯಂತ ತಟಸ್ಥರಾದ ಮಹಾಕರ್ಮವೀರರನ್ನೂ ಪ್ರಸವಿಸಿರುವಳು.' (ಜಿ.ಎನ್. ತಾತಾ)

ರಾಮರಾಯರ ಎಲ್ಲ ಕೃತಿಗಳಲ್ಲೂ ಈ ಬಗೆಯ ಮಾತೃಭೂಮಿ ಪ್ರೇಮ ನಾಂದಿಯಾಗಿ ಮೆರೆದಿದೆ. ಸುಬೋಧ ಎಂ. ರಾಮರಾಯರ ಜೀವನ ಚರಿತ್ರೆಗಳಲ್ಲಿ ಸಂಕ್ಷಿಪ್ತತೆ, ಸಾಂತತೆ, ಸ್ವಯಂಪೂರ್ಣತೆ ಇವೆ. ಅವರ

ಲೇಖಣೀಯಲ್ಲಿ ಕಸುವೂ ಇದೆ, ಕಾಂತಿಯೂ ಇದೆ– ಅವರ ಸಂಗ್ರಹಶೀಲತೆ ಪ್ರಶಂಸನೀಯವಾದುದು. ಶೈಲಿ ಸುಭಗ, ಭಾಷೆ ಬಂಧುರ, ಸಮಗ್ರ ಶಿಲ್ಪದಲ್ಲೊಂದು ಬಗೆಯ ಕಮನೀಯತೆ ಇದೆ. ಇದೇ ಅವರಿಗೆ ಕೀರ್ತಿತಂದ ಗುಣ ಎನ್ನಬಹುದು. ಕನ್ನಡದ ಜೀವನಚರಿತ್ರೆಗೆ ಒಂದು ಆಯಾಮವಿತ್ತು ಕನ್ನಡವನ್ನು, ಕನ್ನಡ ಕುಲಕೋಟಿಯನ್ನು ಆಶೀರ್ವದಿಸಿದ ಸುಬೋಧ ಎಂ. ರಾಮರಾಯರು ನಿಜಕ್ಕೂ ಪ್ರಾತಃಸ್ಮರಣೀಯರು.

# ಬಣಕಾರರ ವಚನಗಳಲ್ಲಿ ಪಡೆನುಡಿಗಳು

ಅಭಿವ್ಯಕ್ತಿ ಸಿದ್ಧಿಗೆ ಬಾಷೆಯಂತಹ ಸಮರ್ಥ ಸಾಧನ ಬೇರೊಂದಿಲ್ಲ. ಚಿತ್ರ, ಶಿಲ್ಪ, ನೃತ್ಯ, ಸಂಗೀತಗಳೆಂಬ ಲಲಿತಕಲೆಗಳು ಕ್ರಮವಾಗಿ ಬಣ್ಣ, ಶಿಲೆ, ಅಭಿನಯ (ಹಾವ–ಭಾವ ವಿನ್ಯಾಸ), ನಾದ ಇವುಗಳನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿ ಪಡೆದಿದ್ದರೆ ಸಾಹಿತ್ಯ ಎಂದೆಂದಿಗೂ ಮಾನವನೊಡನೆ ಮಾತಾಡುವ ಭಾಷೆಯನ್ನು ಪಡೆದಿದೆ. ಅದೇ ಅದರ ಗೆಲುವು. ಉಳಿದೆಲ್ಲ ಮಾಧ್ಯಮ ಗಳೂ ಯಾವುದೋ ಒಂದು ಘಟ್ಟದವರೆಗೆ ಏರಿ ಅಲ್ಲಿಯೇ ನಿಂತರೆ, ಸಂವಹನ ಕ್ರಿಯೆಯಲ್ಲಿ ಸೋತರೆ, ಭಾಷೆಯ ಮೂಲಕವೇ ಸಂಭಾಷಿಸುವ ಸಾಹಿತ್ಯ ಶಬ್ದಾಂತರಾಳಕ್ಕಿಳಿದು ಅಲ್ಲಿ ಸ್ಫುರಿಸುವ ಅರ್ಥದ ಒಗಟೆಯನ್ನೊಡೆದು, ಮನಂಬುಗುವ ರೀತಿಯಲ್ಲಿ ಸಂ ವಹಿಸಿ ಗೆಲ್ಲುತ್ತದೆ. ಆದರೂ ಕವಿ ಮನದ ಭಾವ–ಭಾವನೆಗಳು ಚಿಂತನೋತ್ಪತ್ತಿಯಲ್ಲಿ ಆಕಾರ ತಳೆವಲ್ಲಿ ಭಾಷೆಯ ಬಡತನ ವೇದ್ಯ ವಾಗುವ ಸಾಧ್ಯತೆಗಳುಂಟು! ಭಾವಗಳ ಸಂವಾಹಕ ಆಗಬಲ್ಲ ಭಾಷೆ ಹಲವೆಡೆಗಳಲ್ಲಿ ಕೀಲುಮುರಿದು ಬೀಳಬಹುದು. ಅಂದರೆ ಕವಿಯೆದೆಯ ತೀವ್ರ ಭಾವಗಳನ್ನು ಸಂವಹಿಸುವಲ್ಲಿ ಭಾಷೆಯೂ ಅನೇಕವೇಳೆ ಸೋಲಬಹುದು. ಮಾತು ಸೋತಡೆಯಲ್ಲಿ ಮೌನ ಗೆಲ್ಲುತ್ತದೆ: ಧ್ವನಿ ಬದುಕುತ್ತದೆ. ಆ ಕಾರಣದಿಂದಲೆ ಕವಿ ತನ್ನಾಂತರ್ಯದಲ್ಲಿ ಮಿಡಿದ ಭಾವಗಳಿಗೆ ನುಡಿಯ ಮೂಲಕ ಸಮರ್ಥ ಅಭಿವ್ಯಕ್ತಿ ನೀಡಲು ಅಶಕ್ತನಾದಾಗ ಅನಿವಾರ್ಯವಾಗಿ ಧ್ವನಿಯನ್ನಾಶ್ರಯಿಸುತ್ತಾನೆ, ಅಭಿದಾ, ಲಕ್ಷ್ಯಾರ್ಥಗಳನ್ನು ದಾಟಿ ವ್ಯಂಗ್ಯಾರ್ಥ ದಲ್ಲಿ ವ್ಯವಹರಿಸುತ್ತಾನೆ. ಅಲ್ಲಿ ಶಬ್ದಶಕ್ತಿಗೆ ಹೆಚ್ಚಿನ ಸಾಮರ್ಥ್ಯ ದೊರೆತು ಅವನ ಉದ್ದೇಶ ಸಫಲವಾಗುತ್ತದೆ. ಅವನ ಭಾವಕ್ಕೆ ಭಾಷೆ ದಾಸನಾಗಿ ದುಡಿಯುತ್ತದೆ. ತಾನು ಒರೆವ, ಬರೆದ ಭಾಷೆಯ ಮೇಲೆ ತನಗೆ ಸಾಕಷ್ಟು ಪ್ರಭುತ್ವ ಇರುವುದರಿಂದ ಅದನ್ನು ಮುರಿದು, ತರಿದು, ಬಗ್ಗಿಸಿ, ಹಿಗ್ಗಿಸಿ ದುಡಿಸಿಕೊಳ್ಳುತ್ತಾನೆ. ತನ್ನ ಪ್ರಬುದ್ಧ ರಚನೆಯ ಸಂದರ್ಭದಲ್ಲೂ ಅವನ ತಾಯ್ನುಡಿಯ ಸೊಗಡು ಸಡಗರಿಸದಿರುವುದಿಲ್ಲ. ತನಗೆ ಒಪ್ಪಿತವಿರಲಿ ಇಲ್ಲದಿರಲಿ ಉಸಿರಾಡಿದಷ್ಟು ಸ್ವಾಭಾವಿಕವಾಗಿ ನೀರು ಕುಡಿದಷ್ಟು ಸರಳ ವಾಗಿ ತನ್ನೊಡನೆ ಬೆಳೆದುಬಂದ ತಾಯ್ನುಡಿಯನ್ನು ಕವಿ ಕಸುವು ತುಂಬಿ ಪ್ರಯೋಗಿಸುತ್ತಾನೆ. ಸಾಂದರ್ಭಿಕವಾಗಿ ಪ್ರಯೋಗ ಗೊಂಡ ಆ ಪದ ಒಂದು ಪದವಿಯೇ ಆಗಿ ಪರಿಣಮಿಸುತ್ತದೆ. ಅದಕ್ಕೆ ಪರ್ಯಾಯ ಪದ ಹುಡುಕುವುದು, ವಿವಿದಾರ್ಥಗಳನ್ನು ಹೇಳುವುದು ಹಾಸ್ಯಾಸ್ಪದವೆನಿಸುತ್ತದೆ. ಅದೇ ಅಲಿನ ಧ್ವನಿಶಕ್ತಿಯಾಗಿ ನಿಲ್ಲುತ್ತದೆ. ಹೀಗೆ ಜನಪದದ ಆಡುನುಡಿಯನ್ನು ದುಡಿಸಿ ಕೊಳ್ಳುವ ಕವಿ ಔಚಿತ್ಯವರಿತು ಪ್ರಯೋಗಿಸಿ ಅದರ ಶಬ್ದ ಶಕ್ತಿಯನ್ನು ಹೆಚ್ಚಿಸು ತ್ತಾನೆ.ಅವನ ಪ್ರೌಢರಚನೆಯ ಹಾಸು–ಬೀಸಿನಲ್ಲಿ ದೇಸಿಯ ಸ್ವರ್ಣರೇಖೆ ಲಾಳಿಯಾಡುತ್ತದೆ. ಗಾದೆ, ಒಗಟು, ಪಡೆನುಡಿ, ನುಡಿ ಗಟ್ಟು ಮೊದಲಾದವುಗಳ ಬುಟ್ಟಾಸೆರಗು ರೂಪಿತ ವಾಗುತ್ತದೆ; ನೇಯ್ಗೆಯ ಕಮನೀಯತೆಗೆ ಕಾರಣವಾಗುತ್ತದೆ, ಒಟ್ಟಿನಲ್ಲಿ ಮಾರ್ಗಕಾವ್ಯ ರಚಕನಿರಲಿ, ದೇಸಿಯ ದುಡಿಮೆಗಾರನಿರಲಿ ತಪ್ಪದೆ ಬಳಸಿಕೊಳ್ಳುತ್ತಾನೆ ಜಾನಪದೀಯ ಧಾಟಿ ಧೋರಣೆಗಳನ್ನು ಪ್ರಯೋಗ ಪರಿಸರಗಳನ್ನು. ಪಡೆನುಡಿ ಅಂಥವುಗಳಲ್ಲಿ ಒಂದು. ಎರಡು ಅಥವಾ ಹೆಚ್ಚು ನುಡಿಗಳು ಒಂದೆಡೆ ಸೀರೆ ಧ್ವನಿಸುವ ಅನ್ಯಾರ್ಥವೇ ಪಡೆನುಡಿ. ರಸಪ್ರೀತಿಗಾಗಿ ತನ್ನನ್ನೇ ತಾನು ಇಲ್ಲಗೈ ದುಕೊಳ್ಳುವ 'ಧ್ವನಿ'ಯಂತೆ, ಪಡೆನುಡಿಯೂ ಸಹ ಅರ್ಥಾಭಿವ್ಯಕ್ತಿಗಾಗಿ ತನ್ನನ್ನೇ ತಾನು ಅರ್ಪಿಸಿಕೊಳ್ಳುತ್ತದೆ. ಹತ್ತು ಮಾತು ಆಡಿ ವ್ಯರ್ಥಗೊಳುವಡೆಯಲ್ಲಿ ಒಂದು ಪಡೆನುಡಿ ನುಡಿದು ಉತ್ತಮ ಅಭಿವ್ಯಕ್ತಿಯನ್ನು ಸಾಧಿಸುತ್ತದೆ. ಧ್ವನಿಯಂತೆಯೇ ಕಾವ್ಯ ಸಂದರ್ಭ ದಲ್ಲಿ ಪಡೆನುಡಿಯೂ ಪ್ರತಿಮೆಯೇ ಆಗಿ ಕಾರ್ಯ ನಿರ್ವಹಿಸುತ್ತದೆ. ಶಬ್ಧ ಸ್ಫೋಟಗೊಂಡ ಕೂಡಲೆ ಒಂದು ಮಾತಿನ ಮೂರ್ತಿ ಯನ್ನು ನಮ್ಮ ಕಣ್ಣೆದುರು ತಂದು ನಿಲ್ಲಿಸಿ ಕವಿಮನದ ಅವ್ಯಕ್ತ ಭಾವ ಸಹೃದಯ ಹೃದಯವೇದಿಯಾಗುವಂತೆ ಮಾಡುತ್ತದೆ. ಇಲ್ಲಿ ಮಿಡಿದದ್ದು ಅಲ್ಲಿ ನುಡಿಯುವಂತಾಗಲು ಪಡೆನುಡಿಯ ಪಾತ್ರ ಮಹತ್ವದ್ದಿದೆ. ಭಾಷೆ ಯಾದೃಚ್ಛಿಕ ಧ್ವನಿ ಸಂಕೇತಗಳ ವ್ಯವಸ್ಥೆಯಾ ದರೆ, ಅದರಿಂದಾದ ಪಡೆನುಡಿ ಸಾದೃಶ್ಯ ಕಾವ್ಯಪ್ರತಿಮೆ ಎನಿಸಿಕೊಳ್ಳುತ್ತದೆ.

ಪಡೆನುಡಿಗಳು ಒಕ್ಕಲುತನ, ವೈದ್ಯಕೀಯ, ಪಂಚಭೂತ, ಪರಿಸರ, ಪಶು–ಪಕ್ಷಿ, ಪ್ರಾಣಿ, ತಾರೆ, ನೀಹಾರಿಕೆ, ಜ್ಯೋತಿಷ್ಯ, ಯಕ್ಷ ಲೋಕ ಯಾವುದೇ ಗರ್ಭದಿಂದ ಉದಿಸಿ ಬಂದವುಗಳು. ಪ್ರಯತ್ನಿಸಿದ ವಸ್ತು ದಕ್ಕಲಿಲ್ಲ ಎಂಬಲ್ಲಿ 'ಮೊಲದ ಕೊಂಬು' ಪ್ರಯೋ ಗಗೊಳ್ಳುತ್ತದೆ; ಧರ್ಮದ ಭೀತಿ, ಸತ್ಯದ ನೀತಿ ಎಲ್ಲವನ್ನೂ ಬಿಟ್ಟು ರಾಜಾ ರೋಷವಾಗಿ ಮೋಸಮಾಡುವುದಕ್ಕೆ 'ಹಗಲ ಹಾದರ ' ಎಂಬುದು ಬಳಕೆಯಾಗುತ್ತದೆ. ಕಪ್ಪೂರು ಗದ್ದಿಗೆ ಮಠದ ರುದ್ರಯ್ಯನವರು ಒಂದು 'ಜಾವದ ಕೋಳಿ' ಎಂಬಲ್ಲಿ ಅವರು ರಾತ್ರಿ ಸಮಯದಲ್ಲಿ ಬೇಕೆಂದಾಗ ಎಚ್ಚರಗೊಳ್ಳುವಂತಹ ಪ್ರಜ್ಞೆ ಉಳ್ಳವರಿದ್ದಾರೆ ಎಮದರ್ಥ. ಶಿವಾನಂದ ಯೋಗಿಯ ಜಪ 'ನಾಯಿ ನಿದ್ದೆ' ಎಂಬಲ್ಲಿ ಬಾಯಿ ಮಂತ್ರ ಜಪಿಸಿದರೆ ಮನಸ್ಸು ಏನೋ ಕೆಟ್ಟದ್ದನ್ನು ನೆನೆಯುತ್ತದೆ ಎಂಬ ಭಾವ. (ನಾಯಿ ಕಣ್ಣು ಮುಚ್ಚಿ ದರೂ ಕಿವಿ ಬಳಿ, ಬಾಯಬಳಿ ಹಾರಾಡುವ ಹುಳಕ್ಕೆ ಕಿವಿ

ಬಡಿಯುವ, ಕಚಕ್ಕನೆ ಕ್ಯಾಚ್ ಹಿಡಿಯುವ ವರ್ತನೆ ತಪ್ಪಿರುವುದಿಲ್ಲ) ಏನೂ ಹೊಳೆಯದಾಗ 'ಬುದ್ಧಿಗೆ ತುಕ್ಕು ಹಿಡಿದಿದೆ' ಅನ್ನುತ್ತೇವೆ. ಬೇರೆಯವರ ಮಾತಿನ ಮಧ್ಯಪ್ರವೇಶ ಮಾಡುವವನನ್ನು 'ನಡುವೆ ಮೂಗು ಹಾಯಿಸಬೇಡ' ಅನ್ನುತ್ತೇವೆ. ಇಂಥವು ದೇಸಿ ಪಡೆನುಡಿಗಳಾದರೆ, ಮತ್ತೆ ಕೆಲವು ಅನ್ಯಭಾಷೆಗಳಿಂದ ಆಮ ದಾದವುಗಳು. ಉದಾಹರಣೆಗೆ– 'ಮೊಸಳೆ ಕಣ್ಣೀರು' (Crocodile tears) ನೀಲಿ ನಕ್ಷೆ (Blue print), ಸಿಂಹ ಪಾಲು (Lion share) ಮುಂತಾದವು. ಅನೇಕವೇಳೆ ರಾಜಕೀಯ, ಸಾಮಾಜಿಕ ಒತ್ತಡಗಳಿಂದಾಗಿ 'ಇಂದಿರಾ ಗಾಳಿ' ಕಾಂಗ್ರೆಸ್ ಮಾಡಿದ 'ನಾಮರ್ದ ನಾಯಿಗಳು' 'ಗುಂಡು ಹಾಕಿದ್ದಾನೆ' ಇತ್ಯಾದಿ ಶಬ್ದಗಳು ಹುಟ್ಟಿಕೊಳ್ಳುತ್ತವೆ.

ಇಂಥವೆನಿತೋ ಶಬ್ದಗಳ ನೂತನ ಸೃಷ್ಟಿ ಕಾಲಕಾಲಕ್ಕೂ ಇದ್ದದ್ದೆ. ಆದರೆ ಪಡೆನುಡಿಗಳನ್ನು ಸಂಕಲಿಸುವುದಕ್ಕಿಂತ ಬಣಕಾರರ ವಚನಗಳಲ್ಲಿ ಪಡೆನುಡಿಯ ಸ್ಥಾನ, ಅವುಗಳ ಮಾನ ಮೊದಲಾದವುಗಳನ್ನು ಗುರುತಿಸಿ ಗೊತ್ತು ಪಡಿಸುವುದು ಪ್ರಸ್ತುತವಾಗಿರುವು ದರಿಂದ ನಿಮ್ಮನ್ನು ೧೯೭೭ರಲ್ಲಿ ಪ್ರಕಟವಾದ 'ಮಹದೇವ ಬಣಕಾರರ ವಚನಗಳು' ಎಂಬ ಒಂದು ಸಾವಿರದ ಒಂದು ನೂರ ಎಂಟು ವಚನಗಳ ಬೃಹತ್ ಸಂಗ್ರಹದ ಕಡೆಗೆ ಕೊಂಡೊಯ್ಯಲಿಚ್ಚಿಸುತ್ತೇನೆ. ಬಣಕಾರರು ಜನಪ್ರಿಯ ಕವಿಗಳು; ಜನಪದದ ಸೊಗಡು ಸವಿದವರು. ಅವರದೇ ಆದ, ಅವರದೇ ಬಣ್ಣ–ಭಣಿತೆಗಳನ್ನು ಪಡೆದ ಪಡೆನುಡಿಗಳು ಅವರ ವಚನಗಳಲ್ಲಿ ಕಾಣಸಿ ಗುತ್ತವೆ. 'ಜಾತಿಸೂತಕ', 'ಒಡಲಕಿಚ್ಚು' 'ಮಾತಿನ ಮಲ್ಲ' 'ನಾಯಿತನ', ಗಾಣದೆತ್ತು', 'ಊಸರವಳ್ಳಿ', 'ದೊಂಬರಾಟ' –ಇತ್ಯಾದಿಗಳ ಮೇಲೆ ಬಣಕಾರರ ಸಾಮ್ಯ ಇಲ್ಲ. ಕಾರಣ ಅವು ಪೂರ್ವ ಕವಿ ಪ್ರಯೋಗಗಳು. ಆದರೆ 'ಸುಟ್ಟ ಬಟ್ಟೆ', 'ಬೇಯದ ಬಿಂದಿಗೆ', 'ಜಾತಿ ಜಂಗಮ', 'ಶಿವಕುಲ', 'ಮನದ ಮಲ್ಲಿಗೆ' ಮತ್ತು 'ಭಾವದ ಬಿಲ್ವ'– ಇವೇ ಮೊದಲಾದವು ಬಣಕಾರರ ಭಾವಕೋಶದ ಕಮ್ಮಟದಲ್ಲಿ ತಯಾರಾದ ಹದ ತುಂಬಿದ ಶಾಬ್ದಿಕ ಉಪಕರಣಗಳು. ಅವುಗಳನ್ನೀಗ ಹೆಕ್ಕೆ ಎಣ್ಣೆ ತೆಗೆಯೋಣ, ಬೆಣ್ಣೆ ತೆಗೆಯೋಣ. 'ಸುಟ್ಟ ಬಟ್ಟೆ' ಅಪ್ರಯೋಜಕ ವಸ್ತುವಿಗಾಗಿ ನಿಂತ ಸತ್ವಶಾಲಿ ಪ್ರತಿಮೆ! ಸುಟ್ಟ ಬಟ್ಟೆ ಉಡಲು ತೊಡಲು ಬರುವಂಥದಲ್ಲ. ಅದಕ್ಕೆ ಅದರದೇ ಆದ ಅತಿತ್ವ ಇಲ್ಲವೆಂದರೂ ತಪ್ಪಲ್ಲ. ಅದನ್ನು ವ್ಯಂಜಿಸುವ ಒಂದು ವಚನ:

ಕ್ರಿಯೆಯಿಲ್ಲದ ಜ್ಞಾನ, ಕಣ್ಣಿಲ್ಲದವನ ಕೈಗನ್ನಡಿ,
ಕ್ರಿಯೆಯಿಲ್ಲದ ಜ್ಞಾನ, ಪ್ರಾಣವಿಲ್ಲದ ದೇಹ,
ಕ್ರಿಯೆಯಿಲ್ಲದ ಜ್ಞಾನ, ಶೀಲವಿಲ್ಲದ ಹೆಣ್ಣು,
ಕ್ರಿಯೆಯಿಲ್ಲದ ಜ್ಞಾನ, ಎಣ್ಣೆಯಿಲ್ಲದ ಎಳ್ಳು,
ಕ್ರಿಯೆಯಿಲ್ಲದ ಜ್ಞಾನ, ನೀರಿಲ್ಲದ ಕೆರೆ,
ಕ್ರಿಯೆಯಿಲ್ಲದ ಜ್ಞಾನ, ಸುಟ್ಟಬಟ್ಟೆಯೊಲು,
ಇಡಲು ಬಾರದು– ಉಡಲು ಬಾರದು ನೋಡಾ!
ಎನ್ನ ವರಗುರು ಶಿವಕುಮಾರ ಪ್ರಭುವೆ ॥ ೮೮೩ ॥

ದೃಷ್ಟಾಂತಗಳೇನೇ ಇರಲಿ, ಕಡೆಯಲಿ ಪ್ರಯೋಗಗೊಂಡಿರುವ 'ಸುಟ್ಟ ಬಟ್ಟೆಯೊಲು' ಎಂಬ ಉಪಮೆ ತುಂಬಾ ಪರಿಣಾಮಕಾರಿ. ವೀರಶೈವದಲ್ಲಿ 'ಕ್ರೀ'ಗೆ ಮಹತ್ವವಿರುವಂತೆ 'ಕ್ರಿಯೆ' ಅಥವಾ 'ನಡೆ' ಅಥವಾ 'ಆಚರಣೆಗೂ' ವಿಶೇಷಸ್ಥಾನವಿದೆ. ಶರಣರು ಆಡಿ ಸೊತವರಲ್ಲ, ಮಾಡಿ ಗೆದ್ದವರು. ಅವರದು ನುಡಿ ಬೇರೆ ನಡೆ ಬೇರೆ ಅಲ್ಲ. ನಡೆ ನುಡಿ ಒಂದಾದ ಮಡಿ ಬದುಕು ಅವರದು. ಮಣದಷ್ಟು ತತ್ವೋಪದೇಶಕ್ಕಿಂತ ದುಡಿಮೆ ದೊಡ್ಡದು ಎಂದವರು ಅವರು. ಇಂತಹ ಸತ್ಯ ಸಾಕ್ಷಾತ್ಕಾರಕ್ಕೆ 'ಸುಟ್ಟಬಟ್ಟೆ' ಎಂತಹ ಪ್ರತಿಮೆ! ಆದರೆ–

ಭಕ್ತನಾಗಿಯೂ ಭವಿಯ ನೆಂಟರೆಂಬ
ಜಗ ಭಂಡರಿಗೇನೆಂಬೆನಯ್ಯಾ?
ಎಣ್ಣೆ ನೀರಕೊಂಡು ಬೆರಕಿಯಾದುದುಂಟೇ?
ಬೆಣ್ಣೆ ಕರಗಿ ಹಾಲಾಡುದುಂಟೇನು ಹೇಳಾ?
ಸುಣ್ಣ ಮಣ್ಣಾದುದುಂಟೇ?
ಕಿಚ್ಚು ಕಾಷ್ಟವಾದುದುಂಟೇ?
**ಸುಟ್ಟ ಬಟ್ಟೆಯನುಟ್ಟರುಂಟೆ?**

ಮುತ್ತು ಮತ್ತೆ ನೀರಾದುದುಂಟೇನು ಹಾಳಾ!
ಎನ್ನ ವರಗುರು ಶಿವಕುಮಾರ ಪ್ರಭುವೆ ॥ ೩೭೮ ॥
ಇಲ್ಲಿ ಬರುವ 'ಸುಟ್ಟ ಬಟ್ಟೆಯನುಟ್ಟುವರುಂಟೆ?' ಎಂಬ ಪ್ರಶ್ನೆ ಎಲ್ಲಿಂದಲೋ ಕಿತ್ತು ತಂದು ಅಚಿಟಿಸಿದ್ದು. ಇದನ್ನು ಬಿಟ್ಟಿದ್ದರೇ ನೆಟ್ಟಗಿರುತ್ತಿತ್ತು– ಸಾದೃಶ್ಯವೂ ಇಲ್ಲ, ಸಾವಯವೂ ಅಲ್ಲ!
ಮತ್ತೊಂದು ವಚನ ಹೀಗೆ ಹೇಳುತ್ತದೆ:
ಧೃಢ ಭಕುತಿಯಲಿ ಮೃಡ ನಿನ್ನ ನಂಬದೆ
ಕೆಡು ಒಡಲ ನಂಬಿ ಕೆಟ್ಟೆನಯ್ಯಾ
ಅರಿವು ಆಚಾರಕ್ಕಳವಡದೆ ಕಟ್ಟಿದ ಲಿಂಗ
ಶಿಲೆಯಾಗಿ ಪರಿಣಮಿಸಿ, ಬಟ್ಟೆಗೆಟ್ಟೆನಯ್ಯಾ!
ಸುಟ್ಟ ಬಟ್ಟೆಯ ಹಾಸಲುಂಟೆ?
ಹೊದೆಯಲುಂಟೆ? ಎನ್ನ ವರಗುರು ಶಿವಕುಮಾರ ಪ್ರಭುವೆ ॥ ೪೩ ॥
–ಇಲ್ಲಿ ಸುಟ್ಟ ಬಟ್ಟೆ ನಿರರ್ಥಕವಸ್ತು ಸಂಕೇತ ನಿಜ. ಆದರೆ–
'ನಾನೊಂದು ಸುಟ್ಟ ಬಟ್ಟೆ'!

ಇಡಲೂ ಬಾರದು ಉಡಲೂ ಬಾರದು. ಅದನ್ನು ಇಡಲೂ ಬರುವಂತೆ ಉಡಲೂ ಬರುವಂತೆ ಮಾಡಿದ ಕಾರುಣ್ಯ ಸಿರಿಗೆರೆ ಶ್ರೀಗಳವರದು. ಅದಕ್ಕಾಗಿಯೇ ಅವರು ನನ್ನ ಆರಾಧ್ಯ ದೇವರು. ಅವರ ಮೂಲಕವೇ ನಾನು ಇಹದ ಸುಖವನ್ನೂ ಪರದ ನಿಃಶ್ರೇಯಸ್ಸನ್ನೂ ಕಾಣಬೇಕಾಗಿದೆ (–ನಿವೇದನೆ, ಪು. xxxxvii)
ಎಂಬಲ್ಲಿ ಗುರುಕಾರುಣ್ಯದ ಮಹತ್ವ, ಸಾಧಕನ ಸದ್ಭಕ್ತಿ– ಇವುಗಳು ಸುಸಂವೇದ್ಯ 'ಸುಟ್ಟ ಬಟ್ಟೆ' ಪರಿಣಾಮ ಪಡೆದ ಸ್ಥಿತಿ ಶ್ಲಾಘನೀಯ. ''ಸುಡದ ಮಡಕೆ' ನಶ್ವರತ್ವಕ್ಕೆ ಸಂಕೇತ; ಅಶಾಶ್ವತತೆಯ ಪ್ರತೀಕ!

ಮರವನೇರಿ ಬುಡವಕಡಿದೊಡೆ
ಕೆಡಕು ತನಗಲ್ಲದೆ ಅನ್ಯರಿಗಾಗದಯ್ಯಾ
ಹರನನೊಲಿಸಲು ಬಂದ ನರ, ತನ್ನ ಒಡಲಿಂಗೆ
ಕುದಿದೊಡೆ, ಮೃಡನಿಗೇನಪ್ಪುದಯ್ಯಾ
ಕೆಡಗು ತನಗಲ್ಲದೆ?
ಸುಡದ ಮಡಕೆಯ ನೀರನೆಚ್ಚಿ ನಾನೇಸು ಕಾಲ
ಬದುಕುವೆನಯ್ಯಾ ಬಾಯಾರಿ ಬಳಲುವುದಲ್ಲದೆ?
ಎನ್ನ ವರಗುರು ಶಿವಕುಮಾರ ಪ್ರಭುವೆ? ॥ ೫೩ ॥
ಅಂದರೆ ಚಿರಂತನ ಚಿಲುಮೆಯೆನಿಸಿದ ಆ ಮಹಾ ಚೈತನ್ಯವನ್ನು ನೆನೆಯದ, ಕ್ಷಣಿಕವಾದ ಕ್ಷುಲ್ಲಕ ವಸ್ತುವಿಗೆ ಭ್ರಮಿಸುವುದು ಕೇಡಿನ ಕುರುಹಲ್ಲದೆ ಪ್ರಗತಿಯ ಚಿಹ್ನೆಯಲ್ಲ ಎಂಬುದು ಮಥಿತಾರ್ಥ. ಸುಡದ ಮಡಕೆ ಸೊಗಸಾಗಿ ಅರ್ಥ ಬಿಡಿಸಿದೆ ಇಲ್ಲಿ, ಅಂತೆಯೇ–
'ಅಳಿಮನದವನ ಭಕ್ತಿ
ಬೇಯದ ಬಿಂದಿಗೆಯಲ್ಲಿ ನೀರ ತುಂಬಿದಂತೆ!' (–೨೮)
ಮತ್ತೆರಡು ವಚನಗಳು:
ಹಸಿ ಮಡಕೆಯೊಳು ಅನ್ನವ ಮಾಡಿದೊಡೆ
ಒಸೆದೀವುವುದೇನಯ್ಯಾ?
ಮಡಕೆ ನೀರ ಕೊಂಡಿತ್ತು, ಅಕ್ಕಿ ಅಗ್ನಿಯ ಕೂಡಿತ್ತು
ಅನ್ನವಣ್ಣುವ ಪರಿ ಎಂತಯ್ಯಾ?
ಧೃಢಭಕುತಿ ಇಲ್ಲದ, ಮೃಡನ ಪೂಜಿಸುವವನ ಪರಿ
ಇಂತಪ್ಪುದಯ್ಯಾ! ॥ ೧೮೩ ॥
ಒಮ್ಮೆ ನೆನೆವರು, ಒಮ್ಮೆ ನೆನೆವರು

ಇಹದಾಸೆಗೊಳಗಾಗಿ ನಿಮ್ಮ ನೆರೆ ಮರೆವರಯ್ಯಾ
ಇಂತಪ್ಪ ಅರೆಮನದ ಭಕ್ತರು
ಭಕ್ತಿಯ ಬೆಸಗೊಂಡೊಡೆ
ಸುಡದ ಮಡಕೆಯಲಿ ಅಡುಗೆಯ ಮಾಡಿದಂತೆ ನೋಡಾ
ಎನ್ನ ವರಗುರು ಶಿವಕುಮಾರ ಪ್ರಭುವೇ?[೨]

ಇಂಥೆಡೆಗಳಲ್ಲಿ ಡಾಂಬಿಕ ಭಕ್ತನಿಗೆ ಪ್ರತೀಕವಾಗಿ ನಿಲ್ಲುತ್ತದೆ. 'ಹಸಿ ಮಡಕೆ'. ಅದರಲ್ಲಿ ನೀರು ತುಂಬಿದರೆ ನಿಲ್ಲುವುದಿಲ್ಲ. ಅಡುಗೆ ಮಾಡಲು ಹೋದರೆ ಶ್ರಮ ವ್ಯರ್ಥ. ನಿಶ್ಚಲ ಹಾಗೂ ನಿರ್ಮಲ ಭಕ್ತಿ ಇಲ್ಲದವನ ಸ್ಥಿತಿ ಅಂಥದು. ಲೋಕದ ಹಂಗು ತೊರೆಯದೆ ಪರವನ್ನು ಕಾಣುತ್ತೇನೆಂಬ, ಪರಾತ್ಪರ ವಸ್ತುವನ್ನು ಕಾಣುತ್ತೇನೆಂಬ ಭ್ರಮಿತವನ್ನು 'ಹಸಿಮಡಕೆ' ಉತ್ತಮ ರೀತಿಯಲ್ಲಿ ಸಾಂಕೇತಿಸುತ್ತದೆ.
'ಜಂಗಮ' ಎಂಬುದು ಶುದ್ಧ ವೀರಶೈವ ಪಾರಿಭಾಷಿಕ ಶಬ್ದ, ಗುರು, ಲಿಂಗ, ಜಂಗಮ ಎಂಬಲ್ಲಿನ ತ್ರಿವಿಧದಲ್ಲಿ ತಾನೂ ಒಂದು. 'ಸ್ಥಾವರಕ್ಕಿವುಂಟು ಜಂಗಮಕ್ಕಳಿವಿಲ್ಲ'[೩] ಎಂಬಲ್ಲಿ ಸ್ಥಾವರಕ್ಕೆ ವಿರುದ್ಧ ಶಬ್ದವಾಗಿ ಪ್ರಯೋಗಗೊಂಡಿರುವುದುಂಟು. ಅರ್ಥ ಸ್ಥಾವರ= ಜಡ, ಜಂಗಮ= ಚೇತನ. ಜಡ ನಾಶವಾಗುತ್ತೆ ಕಾಲಗತಿಯಲ್ಲಿ. ಆದರೆ ಜಂಗಮ ಬದುಕುತ್ತೆ ನಿತ್ಯ ನೂತನವಾಗಿ. ಇದು ಅಣ್ಣ ಮೊದಲಾದವರ ಅರ್ಥ 'ಜಂಗಮ' ಶಬ್ದಕ್ಕೆ. ಆದರೆ ಬಣಕಾರರ ಕೋಶದ ಅರ್ಥವೇ ಬೇರೆ. 'ಜಂಗಮ' ಎಂದರೆ ವೀರಶೈವ

---

[೧] ಬೇಯದ ಬಿಂದಿಗೆ ಪ್ರಾಸಕ್ಕಾಗಿ ಬಂದಿರುವ ಪ್ರಯೋಗ. ಬಿಂದಿಗೆ ಲೋಹದ ಕೊಡ ಅಲ್ಲ, ಮಣ್ಣಿನ ಗಡಿಗೆ
೨ ಈ ವಚನ ಪುನರಾವರ್ತನಗೊಂಡಿದೆ; ನೋಡಿ: ೭೪೬ ಮತ್ತು ೯೫೮
[೩] ಬಸವಣ್ಣನವರ ಷಟ್‌ಸ್ಥಳದ ವಚನಗಳು– ೮೨೦. (ಸಂ: ಶಿ.ಶಿ. ಬಸವನಾಳ ೧೯೫೧)

ರಲ್ಲಿರುವ ಒಂದು ಒಳಜಾತಿ! ಭಕ್ತರ ಮನೆಯಲ್ಲಿ ಬಿನ್ನಹ ಹೊಡೆದು, ಬಸವನಗುಡಿಯಲ್ಲಿ ನಿದ್ರೆ ಮಾಡುವ ಸೋಮಾರಿ ಜಂಗಮ ಯ್ಯಗಳು. ಅವರನ್ನು ಬಣಕಾರರು ಚೆನ್ನಾಗಿ ತರಾಟೆ ತೆಗೆದುಕೊಂಡಿದ್ದಾರೆ– 'ಜಾರ ಜಂಗಮ'[೪] 'ತೊಂಬಲಗಳ್ಳ ಜಂಗಮ'[೫] 'ಜಾತಿ ಜಂಗಮ'[೬] 'ಕೊಳಬಾಕ ಜಂಗಮ'[೭] ಕೊಂಬ ಜಂಗಮ[೮] ಭಂಡ ಜಂಗಮ'[೯] 'ಭವ ರೋಗಿ ಜಂಗಮ[೧೦] 'ಜಾತಿ ಸೂತಕಿ ಜಂಗಮ[೧೧] 'ಕಪಟ ಜಂಗಮ'[೧೨] – ಇಂಥವೆಷ್ಟೋ ವಿಷೇಣಗಳಿಂದ ಅವರನ್ನು ಸಂಬೋಧಿಸಿದ್ದಾರೆ. 'ಜಾತಿ ಜಂಗಮ' ಎಂಬ ಶಬ್ದ ಅವರ ಬತ್ತಳಿಕೆಯ ಬಾಣ. ಪ್ರಸ್ತುತದಲ್ಲಿ ಅದು ಜಾತಿ ಸೂಚಕ. ಆದರೆ ಅದು ಚೈತನ್ಯದ ಪ್ರತೀಕ ಎಂಬುದೂ ಅವರಿಗೆ ತಿಳಿದಿದೆ.[೧೩] ಒಟ್ಟಿನಲ್ಲಿ 'ಜಾತಿ ಜಂಗಮ' ಒಂದು ಉತ್ತಮ ಪ್ರತಿಮೆ. ದ್ವಿಜ ಮೊದಲಾಗಿ ಅಂತ್ಯಜ ಕಡೆಯಾಗಿ ಎಲ್ಲ ಮನುಕುಲವನ್ನು ಒಂದೆಂದು ಭಾವಿಸಿ ನಡೆಸಿಕೊಂಡ ಕುಲ ಶಿವಕುಲ' 'ಬಸವಣ್ಣ ನಿಂದ ಶೂದ್ರಕುಲ ಶಿವಕುಲವಾಯಿತು.'[೧೪]ದಕ್ಕೆ ಜಾತಿ ಸೂತಕವಿಲ್ಲ; ಮೇಲು–ಕೀಳು, ಬಡವ–ಬಲ್ಲಿದ, ಹೆಣ್ಣು–ಗಂಡು ಎಂಬ ಮೈಲಿಗೆಗಳಿಲ್ಲ. ಸರ್ವಸಮತಾಭಾವದ ನಿಲವು ಅದರದು. ದು ಹಲವು ಅನುಭಾವಿಗಳ ಸಂಗದಲ್ಲಿ ಉದಿಸಿದ ಈ ನವನೀತ ಸಮತೆಯ ಸಂಕೇತವಾಗಿ ಪರಿಣಾಮ ಪಡೆದಿದೆ.

* * * * *

ಹೃದಯಾಂತರಾಳದೊಳು ಗುರುಪೀಠವನನುಗೊಳಿಸಿ
ಭಕ್ತಿಯ ಕನಕಾಭಿಷೇಕವ ಮಾಡಿಸುವೆನಯ್ಯಾ
ಇಷ್ಟಲಿಂಗ ಪೂಜೆಗೆಂದು;
ಮನದ ಮಲ್ಲಿಗೆ ಮುಡಿಸಿ
ಭಾವ ಬಿಲ್ವವನೇರಿಸಿ ಪೂಜಿಸುವೆನಯ್ಯಾ
ಗುರು ಕರುಣೆ ಸರ್ವಾಂಗಕಾವರಿಸಲೆಂದು![೧೫]

–ಇಲ್ಲಿ ಬರುವ 'ಮನದ ಮಲ್ಲಿಗೆ, ಭಾವ ಬಿಲ್ವ' ತುಂಬಾ ಮಧುರವಾದ ಆಧ್ಯಾತ್ಮ ದ್ಯೋತಕವಾದ ನುಡಿಮುತ್ತುಗಳು. ಧವಳತೆ ಶುದ್ಧ ಸತ್ಯಕ್ಕೆ ಸಾಕ್ಷಿ: ಪರಿಶುದ್ಧತೆಯ ಸಂಕೇತ. ಬಣ್ಣದಲ್ಲಿ ಬಿಳುಪು, ಕೋಮಲತೆ ಯಲ್ಲಿ ಸಪುರ, ಕಂಪಿನಲ್ಲಿ

ನವುರು– ಈ ಮೂರೂ ಮುಪ್ಪುರಿಗೊಂಡು ಆದದ್ದು ಮಲ್ಲಿಗೆ, ದಳದೆರೆದ ಮಲ್ಲಿಗೆಯಂತೆ ಬಗೆ ಬಿಚ್ಚಿದ ಮನಸ್ಸು; ಅದರಲ್ಲಿ ಆವಿರ್ಭವಿಸಿದ್ದು ಭಾವಬಿಲ್ವ! ಬಿಲ್ವದ ವೈಭವ ವರ್ಣನೆಗೆ ಮೀರಿದ್ದು. ವೀರಶೈವದಲ್ಲಿ ಅದಕ್ಕೊಂದು ಪವಿತ್ರ ಸ್ಥಾನಮೀಸಲಿದೆ. ಪರಶಿವನ ಸಿರಿಮುಡಿಗೆ ಮೂರುದಳದ ಬಿಲ್ವ ಬಹು ಶ್ರೇಷ್ಠ– ಶ್ರೀಕೃಷ್ಣನಿಗೆ ತುಲಸಿ ಇದ್ದಂತೆ.

---

[೪] ವಚನ: ೮೬

[೫] ವಚನ: ೧೧೮

[೬] ವಚನ: ೧೫೪, ೫೮೪, ೫೮೯, ೬೨೦, ೬೩೩, ೭೭೯, ೭೮೦, ೮೦೨, ೮೧೪, ೮೭೦, ೮೯೧, ೯೧೨ ಇತ್ಯಾದಿ.

[೭] ವಚನ: ೧೬೦, ೫೮೫

[೮] ವಚನ: ಪುನರಾವರ್ತನೆಗೊಂಡಿದೆ: ೨೨೪ ಮತ್ತು ೭೮೧

[೯] ವಚನ: ೭೯೧

[೧೦] ವಚನ: ೮೭

[೧೧] ವಚನ: ೯೩೬

[೧೨] ವಚನ: ೮೪೬, ೮೫೧

[೧೩] "ಜಂಗಮವೆಂಬುದು ಜ್ಞಾನ– ೫೮೪ ಜಂಗಮವೆಂದರೆ ಅರಿವು. ಅರಿವೆಂದರೆ ಜ್ಞಾನ, ಜ್ಞಾನವೆಂದರೆ ಬೆಳಕು. ಬೆಳಕೆಂದರೆ ಬಯಲು ಬಯಲೆಂದರೆ ಶೂನ್ಯ– ೮೯೧

[೧೪] ವಚನ : ೭೮೯

[೧೫] ವಚನ ಪುನರಾವರ್ತನೆಗೊಂಡಿದೆ. ನೋಡಿ: ೩೫೭ ಮತ್ತು ೬೫೨

ಭಾವ ಬಿಲ್ವ ಇಲ್ಲಿ ಪ್ರಾಸಪ್ರಯೋಗವಾಗಿ ಬಂದಿಲ್ಲ; ಬರಿಯ ಪಡೆನುಡಿಯೂ ಅಲ್ಲ– ಅದೊಂದು ದಿವ್ಯತೆಗೊಡ್ಡಿದ ಮಹಾ ಪ್ರತಿಮೆ. ಸಹೃದಯನ ಹೃದಯ ತನ್ನ ಮನದ ಮಲ್ಲಿಗೆ ಮುಡಿಸಿ ಭಾವಬಿಲ್ವವನ್ನು ಅಂಗಕ್ಕೇರಿಸಿದಾಗ ಆಗುವುದು ಅನುಭವವಲ್ಲ, ಅನುಭೂತಿ! ಆ ವಿಶೇಷಾನುಭುತಿಯ ಸ್ತರಕ್ಕೊಯ್ಯುವ ಶಕ್ತಿ ಸಾಮರ್ಥ್ಯ 'ಭಾವಬಿಲ್ವ'ಕ್ಕಿದೆ. ಇದೇ ರೀತಿ 'ಗಂಗೆಯೊಳಗಿದ್ದ ಕಲ್ಲು'[೧೬] 'ಶೀಲವಂತರ ಮನೆಯ ಸೂಳೆ'[೧೭] 'ಇಜ್ಜಲಿಯ ತೇದು ಗಂಧವ ತೆಗೆಯುವರು'[೧೮] – ಇವೇ ಮೊದಲಾದ ನೂರಾರು ನುಡಿಗಟ್ಟು ಗಳೂ ಬಣಕಾರರ ಬತ್ತಳಿಕೆಯಲ್ಲಿವೆ.
**ಕಡೆಯಲ್ಲಿ ಒಂದು ಮಾತು:** ಮಹದೇವ ಬಣಕಾರರು ಆಧುನಿಕ ವಚನಕಾರರಲ್ಲಿ ಅಗ್ರಮಾನ್ಯರು. ಕಸುವು ತುಂಬಿದ ಕಸಿಯಾದ ವಚನಗಳನ್ನು ಅವರು ನೀಡಿ ಕನ್ನಡದ ಶ್ರೀಮಂತಿಕೆಗೆ ಕಾರಣರಾಗಿದ್ದಾರೆ; ತನ್ಮೂಲಕ ತಮ್ಮ ಬದುಕನ್ನು ಸಾರ್ಥಕ ಪಡಿಸಿಕೊಂಡಿ ದ್ದಾರೆ. ಅವರ ವಚನಗಳಲ್ಲಿ ಬಸವಣ್ಣನ ಭಕ್ತಿ ಇದೆ, ಅಕ್ಕನ ವೈರಾಗ್ಯವಿದೆ, ಚೆನ್ನಬಸವಣ್ಣನ ಜ್ಞಾನ ದ್ಯುತಿ ಇದೆ. ಸಿದ್ಧರಾಮನ ಕರ್ಮ ಯೋಗದ ಮೂಲಕ ಶಿವಯೋಗ ಸಾಧಿಸುವ ಸಿದ್ಧಿ ಇದೆ., ಅಂಬಿಗರ ಚೌಡಯ್ಯನ ಒರಟುತನವೂ ಇದೆ. ನಿಭಿಡೆಯಿಂದ ನುಡಿವ ನಿರ್ದಾಕ್ಷಿಣ್ಯಪರ ವ್ಯಕ್ತಿಯೆನಿಸಿದ ಬಣಕಾರರ ಹಲವು ವಚನಗಳಲ್ಲಿ ಅನುಭವವನ್ನು ಮೀರಿದ ಅನುಭಾವ ಸೌಂದರ್ಯಕ್ಕೆ ಮಿಗಿಲಾದ ಸುಯಿಧಾನ, ಭಾವವನ್ನು ಮೆಟ್ಟಿನಿಂತ ಅನನ್ಯ ಭಕ್ತಿ ಇವು ಗುರುತಿಸುವಷ್ಟು ಸ್ಪಷ್ಟ ಇವೆ.

ಕುರುಹು ಮರೆಯಾದೊಡೆ ಅರಿವು ಉಳಿದಿತ್ತು,
ಭಾವ ಬಯಲಾದೊಡೆ ಅನುಭಾವ ಉಳಿದಿತ್ತು.
ಪರಿಭ್ರಮಣೆ ಬಯಲಾದೊಡೆ ಪ್ರಸನ್ನತೆಯು ಉಳಿದಿತ್ತು
ಇಂತೀ ತ್ರಿವಿಧಂಗಳನವಧರಿಸಿದ ಬಳಿಕ
ಇಹಂ ನಾಸ್ತಿಯಾಯಿತ್ತು ನೋಡಾ
ಎನ್ನ ವರಗುರು ಶಿವಕುಮಾರ ಪ್ರಭುವೆ ॥ ೭೦೬ ॥

---

[೧೬] ವಚನ: ೨೯

[೧೭] ವಚನ: ೧೧೦

[೧೮] ವಚನ: ೮೯೯

# ಕಳೆದ ಎರಡು ವರ್ಷಗಳ ಸಾಹಿತ್ಯ ಸಮೀಕ್ಷೆ: ಕಾವ್ಯ

## ನಮ್ಮ ಕಾವ್ಯ ೧೯೭೬

ಒಬ್ಬ ಮಿತ್ರರು ಹೇಳಿದರು– ಈಗ ನವ್ಯ ಕವಿಗೆ ಇಪ್ಪತ್ತೈದು ವರ್ಷ ವಯಸ್ಸು; ಇದು ಅವನ ತುಂಬು ಪ್ರಾಯದ ದಿನ: ಅವನು ನಿಜಕ್ಕೂ ತೇಜಸ್ವೀ ತರುಣ ಎಂದು. ಮತ್ತೊಬ್ಬರು ಹೇಳಿದರು– ಕನ್ನಡದ ನವ್ಯ ಕವಿ ಇನ್ನೂ ಅಂಬೆಗಾಲಿಡುವ ಹಸುಳೆ; ಮೈ–ಮನಗಳು ಬೆಳೆಯದ ಬಾಲ್ಯಾವಸ್ಥೆ; ಏಕೆಂದರೆ೨೫ ವರ್ಷಗಳ ಒಂದು ಸಾಹಿತ್ಯ ಪ್ರಕಾರದ ಜೀವಿತದಲ್ಲಿ ಏನೇನೂ ಅಲ್ಲ– ಎಂದು. ಹತ್ತು ವರ್ಷಗಳ ಹಿಂದೆಯೇ ಶ್ರೀ ಸಿದ್ಧಗಂಗಾ ಸಾಹಿತ್ಯ ಸಮ್ಮೇಳನದಲ್ಲಿ ಕವಿ ಗೋಷ್ಠಿಯ ಅಧ್ಯಕ್ಷ ಪೀಠದಿಂದ ಡಾ॥ಜಿ. ಎಸ್. ಶಿವರುದ್ರಪ್ಪನವರು ನುಡಿದಿದ್ದರು– ಕನ್ನಡ ಕಾವ್ಯ ಈಗಾಗಲೇ ಸಂಧ್ಯಾಮೌನದಲ್ಲಿ ಸಮಾಧಿತವಾಗಿದೆ ಎಂದು. ಆದರೆ ಇಂದು ಕನ್ನಡ ಕಾವ್ಯ ಸಂಪೂರ್ಣವಾಗಿ ಮೃತಿಯನ್ನೈದಿದೆ ಎಂದು ತಿಳಿಸಲು ವಿಷಾದಿಸುತ್ತೇನೆ. ಹುಟ್ಟಿದ್ದು ೧೯೫೦ರಲ್ಲಿ ಮುಪ್ಪಾ ದದ್ದು ೧೯೭೦ರಲ್ಲಿ, ಮರಣಿಸಿದ್ದು ೭೬ರಲ್ಲಿ. ಅಂದರೆ ಇಪ್ಪತ್ತನೆಯ ವಯಸ್ಸಿಗೇ ಕನ್ನಡದ ಕಾವ್ಯ ಕಂದಮ್ಮನಿಗೆ ಮುದಿತನ ಪ್ರಾಪ್ತ ವಾಯಿತು. ೨೫ಕ್ಕೆ ಮರಣ ಸಂಭವಿಸಿತು. ಇಂತಾಗಿಸಲು ಕಾರಣವೆನಿಸಿದ ಶುಕ್ರಾಚಾರ್ಯರ ಶಾಪವಾಗಲಿ, ದೂರ್ವಾಸರ ಶಾಪ ವಾಗಲಿ ಮೇಲುನೋಟಕ್ಕೆ ಸುಲಭವಾಗಿ ಗೋಚರಿಸುವುದಿಲ್ಲ. ಸೂಕ್ಷ್ಮದರ್ಶಕದಲ್ಲಿ ಕಣ್ಣಲ್ಲಿ ಕಣ್ಣಿಟ್ಟು ವೀಕ್ಷಿಸಿದ ವಿಮರ್ಶಕ ಶ್ರೀ ದೇಶ ಕುಲಕರ್ಣಿ ಉದ್ಗರಿಸಿದರು– "ಈಚಿನ ಮೂರು–ನಾಲ್ಕು ವರ್ಷಗಳಲ್ಲಿ ಕಾವ್ಯದ ಮಾರುಕಟ್ಟೆ ತೀವ್ರವಾಗಿಯೇ ಕುಸಿದಿದೆ. ಈ ಅವಧಿಯಲ್ಲಿ ಕವಿಗಳು ಯಾಕೆ ಆಕಾಂಕ್ಷೆ–ಶ್ರದ್ಧೆಗಳು ಕಡಿಮೆಯಾಗಿದೆಯೋ ಸ್ಪಷ್ಟವಾಗಿ ಹೇಳಲು ಬರುವುದಿಲ್ಲ" ಎಂದು ಕಾರಣ ಹುಡುಕುವುದು ಕಷ್ಟ ಸಾಧ್ಯ ಎಂಬುದೂ ಸ್ಪಷ್ಟ. ಆದರೂ ಹುಡುಕಿ ನೋಡಿದಾಗ ನವ್ಯಕವಿಯ ಮರಣಕ್ಕೆ ನಾಲ್ಕಾರು ಕಾರಣಗಳು ಸಿಗುತ್ತವೆ. ಮೊದಲನೆಯದಾಗಿ ನವ್ಯಕವಿ ತುಂಬ ಆತುರಬಡಕ. ಹುಟ್ಟಿದ ಮರುಘಳಿಗೆಯಲ್ಲೇ ಎದ್ದು ಓಡಾಡಬೇಕೆನ್ನುವ ಚಪಲ. ಗಾಂಧಾರೀ ಗರ್ಭದಿಂದ ಹೊರಬಿದ್ದ ಪಿಂಡಗಳು ಒಂದೊಂದು ತಮಗೆ ತಾವೇ ಪಟ್ಟ ಕಟ್ಟಿಕೊಂಡು ನೀತಿ–ನಿಯಮ, ಗೊತ್ತು–ಗುರಿ, ಲಂಗು–ಲಗಾಮು ಯಾವುದೂ ಇಲ್ಲದೆ ಮೆರೆಯ ಹತ್ತಿದವು. ವೈಯುಕ್ತಿಕತೆ ಹೆಚ್ಚಿದಂತೆ ವ್ಯಕ್ತಿ ನಿಷ್ಠತೆ, ಸ್ವಪ್ರತಿಷ್ಠೆ, ಸತ್ವಹೀನ ಸ್ವಾಭಿಮಾನ, ದುಂದಿನ ದುರಭಿಮಾನ, ಜಾತೀಯತೆ, ಗುಪುಗುಳಿತನ, ಗೆಲ್ಲುಗುದುರೆಯ ಬಾಲ ಹಿಡಿಯುವ ಜಾಣತನ, ಹಿಪ್ಪೀ, ವೈರಾಗ್ಯ, ಆಡಿದ್ದೇ ಆಟ, ಹೂತಿದ್ದೇ ಲೆಗ್ಗೆ ಆಗಿ– ಹೇಳಕೇಳುವವರಿಲ್ಲದೆ ಹೋಗಿ, ಕನ್ನಡ ಕಾವ್ಯ ಕ್ಷೇತ್ರದಲ್ಲಿ ಅರಾಜಕತೆ ಉಂ ಟಾಗಿ ಅನಾಕತ್ವ ತಲೆದೋರಿತು, ಅನಾಥ ಸ್ಥಿತಿಗೆ ತನ್ನನ್ನೇ ತಾನೇ ಕೊಂಡೊಯ್ದಿತು. ಕನ್ನಡಮ್ಮ ಬಂಜೆಯಲ್ಲ, ಕುಟುಂಬಯೋಜನೆ ಅವಳಿಗೆ ಅನ್ವಯಿಸಲೇ ಇಲ್ಲ. ಪುಂಡು ಪವೃತ್ತಿ ಪಬಲವಾಗಿ ಪಾರ್ಥೇನಿಯಂ ಕಾವ್ಯ ಹುಲುಸಾಗಿ ಬೆಳೆಯಿತು. ಲಿಬಿಡೋ ಕಾವ್ಯ Passion ಕಾವ್ಯ, ಮ್ಯಾನಿಫೆಸ್ಟೋ ಕಾವ್ಯ, Sunday poems- ಒಂದು ಕುಲವೇ, ಒಂದು ಜಾತಿಯೇ, ದೇವರೇ ಗತಿ! ಅಂತೆಯೇ ತನ್ನ ದಿನಗಳು ಬಲಿತು, ತಾನು ಪ್ರಬುದ್ಧತೆಯ ಪ್ರಸ್ಥಾನವನ್ನೇರಿದ್ದ ರಮ್ಯಕಾವ್ಯ ಈ ನವ್ಯದ ಅವಾಂತರದಿಂದ ಬೆಳೆಯಲಾಗಲೇ ಇಲ್ಲ. ಕಥನಕವನ, ಖಂಡಕಾವ್ಯಗಳು ಇನ್ನೂ ಸಮೃದ್ಧವಾಗಬೇಕಾ ಗಿತ್ತು, ಅಷ್ಟರಲ್ಲೇ ಈ ಸುಯೋಧನ ಸಂತಾನ ಸಂಪೂರ್ಣವಾಗಿ ತುಳಿದುಹಾಕಿಬಿಟ್ಟಿತು. ಹೀಗೆ ನವ್ಯದ ಮಿಡಿಗಾಯಿ ತನ್ನ ಎಳಮೆ ಯಲ್ಲೇ ಹಣ್ಣಿನ ಕನಸು ಕಂಡದ್ದು ಕನ್ನಡದ ದೌರ್ಭಾಗ್ಯ. ಎರಡನೆಯದಾಗಿ, ಸ್ವಾತಂತ್ರ್ಯಪೂರ್ವದ ಧ್ಯೇಯ ಧೋರಣೆಗಳು ಸಂ ಪೂರ್ಣವಾಗಿ ಪಲ್ಲಟಿಸಿದವು. ಆದರ್ಶವೆನ್ನುವುದು ಅರ್ಥಹೀನವಾಯಿತು. ಸ್ವಾತಂತ್ರ್ಯದ ಅರ್ಥ ಸ್ವೇಚ್ಛಾಚಾರವೆಂದಂತಾಯಿತು. ಜನತೆಯಲ್ಲಿ ಬದುಕನ್ನು ಹಗುರವಾಗಿ ತೆಗೆದುಕೊ ಳ್ಳುವ ಮನೋವೃತ್ತಿ ಪ್ರಬಲವಾಗಿ ಅದರ ಪ್ರಭಾವ ಕವಿಯ ಮೇಲೆ ತನ್ಮೂಲಕ ಕಾವ್ಯದ ಮೇಲೆ ವಿಶೇಷವಾಗಿ ಆಗತೊಡಗಿತು. ಈ ದಿನಗಳಲ್ಲಿ ಕಾವ್ಯಕ್ಕೂ ಜೀವನಕ್ಕೂ ಜೈವಿಕ ಬಾಂಧವ್ಯ ಏರ್ಪಟ್ಟಂತೆ, ರಾಜ ಕೀಯಕ್ಕೂ ಕಾವ್ಯಕ್ಕೂ ಒಂದು ಅರ್ಥಪೂರ್ಣ ಸಾವಯವ ಸಂಬಂಧ ಏರ್ಪಡಲಿಲ್ಲ. ಇದರಿಂದಾಗಿ ಬದುಕನ್ನು ಕುರಿತ ತೀವ್ರ ಚಿಂತನ–ಮಂಥನಗಳು ಅಳಿದು ನಮ್ಮ ಕವಿಗಳು ತೇಲುಮರದ ಮೇಲೆ 'ತೆಪ್ಪದಾಟ' ಆಡಿದರು. ಮೂರನೆಯದಾಗಿ ಇತ್ತೀಚಿನ ಸಾಹಿತ್ಯದಲ್ಲಿ ಶ್ರೀಮಂತಿಕೆ (Aristocracy in Literature) ಅತಿಯಾಯಿತು. ಹೊಸ ಆಯಾಮ ದಿಂದ ನಮ್ಮ ಸಾಹಿತ್ಯ ಅದರಲ್ಲೂ ಕಾವ್ಯಪ್ರಕಾರ ಎಷ್ಟು ಶ್ರೀಮಂತವಾಯಿತೋ ಅಷ್ಟೇ ಶ್ರೀಮಂತರ ಸ್ವತ್ತೂ ಆಯಿತು. "ಸ್ವಾಮಿ, ನಿಮ್ಮ ಸಾಹಿತ್ಯ ಜನಸಾಮಾನ್ಯರ ಕೈಗೆ ಎಟಕುತ್ತಿದೆಯೇ" ಎಂದು ಕೇಳಿದರೆ– "ಯಾಕೆ ಬೇಕು? ಸಾಮಾನ್ಯನಿಗೆ ಸಾಹಿತ್ಯ ಏಕೆ? ಶ್ರೀಸಾಮಾನ್ಯ ಎಂದರೆ ಯಾರು?" ಎಂಬ ತುಬಾಕಿಗಳು ಹಾರಹತ್ತಿದವು. ಕೆಲವರು ಶ್ರೀಸಾಮಾನ್ಯನ, ಗಾಗಿ, ನಿಂದ ಎಂಬ ವಿಭಕ್ತಿ ಪ್ರತ್ಯಯಗಳನ್ನು ಘೋಷಿಸಿ, ಆಡುನುಡಿಯನ್ನು ದುಡಿಸಿಕೊಳ್ಳುತ್ತಿದ್ದೇವೆ ಎಂಬ ಭ್ರಮೆಯಿಂದ, ಅರ್ಥವಾಗದೆಡೆಯಲ್ಲಿ ಓದುಗರನ್ನು ಅಯೋಗ್ಯರು, ಅಪ್ರಬುದ್ಧರು, ಅರ್ಥಮಾಡಿಕೊಳ್ಳಲು ಯೋಗ್ಯತೆ

ಇಲ್ಲದವರು ಎಂದು ಕಡೆಗಣಿಸಿದ್ದು ಮತ್ತು ಅನ್ಯರು ಬರೆದದ್ದು ಅಂತಿರಲಿ, ತಾನು ಬರೆದದ್ದೇ ತನಗೆ ತಿಳಿಯದಾಗ ಇಲ್ಲದ ಅರ್ಥ, ಸಲ್ಲದ ಸ್ವರ್ಗ ಕವನದಲ್ಲಡಗಿದೆಯೆಂಬ ಸೋಗು ಹಾಕಿದ್ದು, ಒಟ್ಟಿನಲ್ಲಿ ಸಹೃದಯರ ಸಂಖ್ಯೆ ಬೆಳೆಸಲಿಲ್ಲ. ಅವರ ಸಹಾನುಭೂತಿಗೆ ಪಾತ್ರವಾಗಲಿಲ್ಲ. ನಾಲ್ಕನೆಯದಾಗಿ, ಹಳೆಯ ಕವಿಗಳಲ್ಲಿ ಪ್ರತಿಭಾ ದಾರಿದ್ರ್ಯ ಕಾಲಿರಿಸಿತು. ಹೊದ ಕವಿಗಳಲ್ಲಿ ಸಿನೆಮಾ ಗೀಳು ಹೆಚ್ಚಿತು; ಈಗಿನ ತುರ್ತುಪರಿಸ್ಥಿತಿ ಬಾಯಿಗೆ ಬುಟ್ಟಿ ಕಟ್ಟಿತು. ಹೀಗಾಗಿ ದೇಶಕ್ಕೆ ಬಂದ ಬರಗಾಲ ಕಾವ್ಯಕ್ಕೂ ಬಂತು. ಐದನೆಯದಾಗಿ, ನಮ್ಮ ದೃಷ್ಟಿಯಲ್ಲಿ ಕಡೆಯದಾಗಿ ನವ್ಯಕಾವ್ಯ ತಾನು ಎಷ್ಟು ಬೆಳೆಯಬೇಕೋ ಅಷ್ಟು ಬೆಳೆದು ಬೆಳಗಿ ಈಗ 'ನವನ ವೋನ್ಮೇಷ ಶಾಲಿನಿ' 'ನವನವೋಲ್ಲೇಖ ಶಾಲಿನಿ' ಎಂಬ ಥಿಯರಿಗನುಗುಣವಾಗಿ ಹೊಸ ರೂಪಿನ ಅನ್ವೇಷಣ ಸ್ಥಿತಿಯಲ್ಲಿರುವುದ ರಿಂದ, ಡಾ॥ ಜಿ.ಎಸ್. ಶಿವರುದ್ರಪ್ಪನವರು ಸಂದರ್ಶನವೊಂದರಲ್ಲಿ ನುಡಿದಂತೆ "ಕನ್ನಡ ನವ್ಯಕಾವ್ಯ ಹೊಸ ಜಾಡು ಹುಡುಕುವ ಜಡ ಸ್ಥಿತಿಯಲ್ಲಿರುವುದರಿಂದ, ಮುಂದಿನ ಗತಿ ಏನು? ಎಂಬ ಚಿಂತನೆಯಲ್ಲಿ ನಿಂತಿರುವುದರಿಂದ ಕನ್ನಡ ಕಾವ್ಯ ಕ್ಷೇತ್ರ ಇಂದು ಬಂಜರಾಗಿದೆ; ಅದರ ಗತಿ-ಗಮ್ಮತ್ತು ಉರುಬು-ಆರ್ಭಟ, ವನುಪು-ವಯ್ಯಾರ ಎಲ್ಲಾ ಸ್ಥಗಿತವಾಗಿವೆ" ಎಂದು ಊಹಿಸಬಹುದಾಗಿದೆ.

೧೯೭೦-೮೦ರ ಈ ದಶಕ ಕನ್ನಡ ಕಾವ್ಯರಂಗದ ಒಂದು ಕತ್ತಲೆಯುಗ. ನಾಟಕದ ದೃಶ್ಯ ಬದಲಾವಣೆ- ಅಥವಾ transfer scene ನ ಅನಿವಾರ್ಯ ಕತ್ತಲ ಘಳಿಗೆ. ಒಂದು ನಾಟಕದಲ್ಲಿ ಕೈಲಾಸದ ದೃಶ್ಯ ನಡೆಯುತ್ತಿರುತ್ತದೆ. ಅದು ಮುಗಿದು ಅದೇ ಕ್ಷಣ ದಲ್ಲಿ, ಅದೇ ಸ್ಥಳದಲ್ಲಿ ವೈಕುಂಠದ ದೃಶ್ಯ ಆರಂಭವಾಗಬೇಕಾದರೆ ಮಧ್ಯೆ light off ಆಗುತ್ತದೆ. ಆ ಕೂಡಲೇ ದೃಶ್ಯ ಬದಲಾ ವಣೆ ಕಾರ್ಯ ಚಕಮಕಿಯಂತೆ ನಡೆದು ಕೈಲಾಸವಿದ್ದ ಬಳಿಯಲ್ಲೇ ವೈಕುಂಠ ನಿರ್ಮಾಣವಾಗುತ್ತದೆ. ಈ ನಿರ್ಮಾಣಕ್ಕೆ ಎರಡು ದೃಶ್ಯಗಳ ಮಧ್ಯೆ Light off ಆಗಲೇಬೇಕು. ಆ ರೀತಿ ಹಿಂದಿನ ಸಾಹಿತ್ಯ ಸೃಷ್ಟಿಗೂ ಮುಂದೆ ಬರುವ ಮಹೋನ್ನತ ಸಾಹಿತ್ಯ ಸೃಷ್ಟಿಗೂ ಮಧ್ಯೆ ಈ ಕತ್ತಲು ಏರ್ಪಟ್ಟಿರಬೇಕು ಎನಿಸುತ್ತದೆ. ನಮ್ಮ ಸಾಹಿತ್ಯವನ್ನೇ ಉದಾಹರಿಸುವುದಾದರೆ ೧೦ ಮತ್ತು ೧೨ ನೆಯ ಶತಮಾನಗಳ ಮಧ್ಯೆ ೧೧ನೆಯ ಶತಮಾನ ಒಂದು ಕತ್ತಲೆಯುಗವಾಗಿ ಬಂತು, ಬರಬೇಕು. ಹೀಗೆ ಸಾಹಿತ್ಯ ವೃದ್ಧಿಯ ಎರಡು ವಿಶಿಷ್ಟ ಕಾವ್ಯ ಶೀಖರಗಳ ಮಧ್ಯೆ ಒಂದು ಪ್ರಪಾತ ಏರ್ಪಡುವುದು ಅನಿವಾರ್ಯ. ಈ ೧೯೭೦-೮೦ರ ಮಧ್ಯದ ದಿನ ಕನ್ನಡ ಕಾವ್ಯದ ಬದುಕಿನಲ್ಲಿ ಒಂದು (Transfer scene) ಕತ್ತಲೆಯ ದಿನ, ಪರಿವರ್ತನದ ಪರ್ವಕಾಲ. ಅಂತೂ, ಇಂದು ನಮ್ಮ ಕನ್ನಡ ಕವಿಗಳು ಹೊಸ ಮಾರ್ಗದ ಹೊಸ ಮಾಧ್ಯಮದ ಅನ್ವೇಷಕರಾಗಿದ್ದಾರೆ ಎಂದು ಹೇಳಬಹುದು. ಇದರ ಫಲವನ್ನು ಮುಂದೆ ಕಾದು ನೋಡೋಣ. ಈಗ ೧೯೭೪-೭೫ ಮತ್ತು ೧೯೭೫-೭೬ರ ಅವಧಿಯಲ್ಲಿ ಬೆಳೆದು ಬಂದು ಕನ್ನಡ ಕಾವ್ಯ ಸಂಕಲನದತ್ತ ನಮ್ಮ ಗಮನ ಹರಿಸೋಣ- ನಮಗೆ ಉಪಲಬ್ಧವಿರುವ ಮಟ್ಟಿಗೆ ಈ ಅವಧಿಯಲ್ಲಿ ಸೃಷ್ಟಿಯಾದ ಕಾವ್ಯ ಕೃತಿಗಳ ಸಂಖ್ಯೆ ಸುಮಾರು ಒಂದು ನೂರು- ೧೯೭೪ರಲ್ಲಿ ೫೧, ೧೯೭೫ರಲ್ಲಿ ೩೨, ೧೯೭೬ರಲ್ಲಿ ೧೮- ಆದರೆ ಕಾಲದ ಮಿತಿ ಇರುವು ದರಿಂದ ಪ್ರಾತಿನಿಧಿಕವಾಗಿ ಒಂದೆರಡು ಕೃತಿಗಳನ್ನೂ, ಪ್ರಾಯೋಗಿಕವಾಗಿ ಒಂದೆರಡು ಕೃತಿಗಳನ್ನೂ ವೀಕ್ಷಿಸಿ, ಎಲ್ಲ ಕೃತಿಗಳ ಮೇಲೂ ಒಮ್ಮೆ ಕಣ್ಣು ಹಾಯಿಸಿ ಅಲ್ಲಿ ಆಗಾಗ ಭಾವನಾ ವಿಮರ್ಶೆಯನ್ನು ನೀಡಿ ಗುರಿ ಸೇರಲು ಯತ್ನಿಸುತ್ತೇನೆ.

ನಮ್ಮ ಮೊದಲ ಸ್ಮರಣೆ ಕನ್ನಡ ನವ್ಯ ಪ್ರಸ್ಥಾನಕಾರ ಶ್ರೀ ಗೋಪಾಲ ಕೃಷ್ಣ ಅಡಿಗ. 'ಆರೋಹಣ' ಎಂಬ ಆಯ್ದ ಕವನಗಳ ಸಂಕಲನ ಮತ್ತು 'ಇದನ್ನು ಬಯಸಿರಲಿಲ್ಲ' ಎಂಬ ಕಿರು ಸಂಕಲನ ಕೃತಿಗಳನ್ನು ೭೪-೭೫ ವರ್ಷಗಳಲ್ಲಿ ಕೊಟ್ಟಿದ್ದರೂ ೧೯೭೬ರ 'ಸಮಗ್ರ ಕಾವ್ಯ' ಅವರ ೪೦ವರ್ಷಗಳ ಸುಧೀರ್ಘ ವ್ಯಾಪ್ತಿಯನ್ನು ಪಡೆದ ಬೃಹತ್ ಸಂಕಲನವಾಗಿದೆ. ಓರ್ವ ಕವಿಯು ನಡೆದು ಬಂದ ದಾರಿಯಲ್ಲಿ ಕಾಣಸಿಗುವ ಹೆಜ್ಜೆಗಳನ್ನು ಗುರುತಿಸಲು ಉಪಯುಕ್ತವಾದ್ದರಿಂದ ಇದೊಂದು ಕಾವ್ಯೇತಿಹಾಸದ ಅಧ್ಯಯನ ಯೋಗ್ಯ ಕೃತಿ ಎಂದು ಹೇಳಬಹುದು. ಆಧುನಿಕ ಕನ್ನಡ ಕಾವ್ಯದ ಹಾಸಿನಲ್ಲಿ ಅಪೂರ್ವವಾಗಿ ಬೀಸಿನಲ್ಲಿ ಉಜ್ವಲವಾಗಿ ಬೆಳಗುವ ಈ ಕೃತಿಯಲ್ಲಿ ಕವಿ ಏರಿದ ಹಂತಗಳು ನೆಲೆನಿಂತ ಮಜಲುಗಳು ಸ್ಪಷ್ಟ ಗೋಚರ. ಪ್ರತಿಮೆಗಳ ಪುನರಾವರ್ತನೆ ಇಲ್ಲಿರದಿದ್ದರೂ ಮಾತಿನ ಜಾಡು, ಜಳ್ಳಾಗದಿದ್ದರೂ ಇತ್ತೀಚಿನ ಇವರ ಕಾವ್ಯಬಂಧ ಗೊಂದಲಪುರ, ಹಿಮಗಿರಿಯ ಕಂದರ ಇವುಗಳ ಹಾದಿ ಯನ್ನೇ ಹಿಡಿದಿದೆ. ನೂತನ ಕಾವ್ಯ ಬಂಧದ ಹಾದಿ ಅರಿಯದೆ ಕವಿ ಅಲ್ಲಿಗೆ ಬಂದು ಕಲ್‌ನೆಲೆ ನಿಂತಿದ್ದಾರೆ.

ಗೋಡೆಯೊಳಗಡೆ ಜೀವಸಹಿತ ಹೂಳಿದ ಮೇಲೆ
ಗಾರೆ ಹಾಕಿಸಿದವರು;
ಅಂಗುಲಂಗುಲವಾಗಿ ಅಂಗಾಂಗ ಕತ್ತರಿಸಿ

ಗಾಯಕ್ಕೆ ಮೆಣಸುಪ್ಪು ತುಂಬಿದವರು;
ಕಣ್ಣು ಕೀಳಿಸಿ ಚರ್ಮ ಸುಲಿಸಿ ಸುಖಪಟ್ಟವರು,
ಅಯ್ಯಾ, ಈಗೇಕೆ ನೀವಿಲ್ಲಿ ಕಳ್ದಿಂಗಳಲ್ಲಿ?
ಈ ಅರಾಜಕದೊಂಬಿ ಕುಣಿತದಲ್ಲಿ

ಆದರೂ ತನ್ನಲ್ಲಿನ ಅಸ್ಪಷ್ಟತೆಯ ಅಂತರಾಳದಲ್ಲಿ ಸ್ಪಷ್ಟ ಪ್ರಾತಿಭ ಜ್ಯೋತಿಯನ್ನು ಬೆಳಗಿಸಿಕೊಂಡು ಬಂದಿರುವ ಗಟ್ಟಿಜೀವ ಶ್ರೀ ಅಡಿಗ. ಸಮಾಜಕ್ಕೊಂದು ಸವಾಲು, ಸರಕಾರಕ್ಕೊಂದು ಎಚ್ಚರಿಕೆ ನೀಡಿ ನಡೆದ ಸವ್ಯಸಾಚಿ ಎಂದರೆ ಶ್ರೀ ಅಡಿಗ.

**೨. ತೆರೆದ ಬಾಗಿಲು:**

ಕವಿ ಕೆ.ಎಸ್. ನರಸಿಂಹಸ್ವಾಮಿಯವರ ಹದಿನಾರು ವರ್ಷಗಳ ಹರವು ಪಡೆದ ದಿಡ್ಡಿ ಬಾಗಿಲು. ನಾಟಕೀಯತೆಯ ನಾಜೂಕಿನಲ್ಲಿ ಹರಿಯುವ ಈ ಕವನ ಒಂದು ನೀಳ್ಗವನವೇ ಆಗಿದೆ. ಆನನ ಮರಣಗಳ ಬಗೆಗೆ ನಾಯಕನ ವ್ಯಾಖ್ಯಾನ– ಅದರಲ್ಲೂ 'ತೆರೆದ ಬಾಗಿಲು' ಹೇಗೆ ಒಂದು ಮುಕ್ತಿಯ ಮಹಾ ದ್ವಾರವಾಗುತ್ತದೆ ಎಂಬುದನ್ನು ಸಾಕ್ಷಾತ್ಕರಿಸುತ್ತದೆ.

ಐವತ್ತು ಕಳೆದರೂ ಐವತ್ತು ಉಳಿದಿತ್ತು:
ನನ್ನ ಸಂದರ್ಭಕ್ಕೆ ಅಷ್ಟು ಸಾಕೆಂದೆದ್ದೆ.
ಶಾಂತವಾಯಿತು ಕಡಲು; ಶಾಂತವಾಯಿತು ಗಗನ;
ಶಾಂತವಾಯಿತು ನಾನು ನಿಂತ ಭೂಮಿ,
ತೆರೆದ ಬಾಗಿಲಿನವರು ದಾಟಿಹೋದುದ ಕಂಡೆ;
ನೆಲದ ಮೇಲೆಲ್ಲು ಮಂತ್ರಾಕ್ಷತೆ
ಶಾಂತಿಃ ಶಾಂತಿಃ ಶಾಂತಿಃ

ಕೆ.ಎಸ್. ನರಸಿಂಹಸ್ವಾಮಿಯವರ ಪದ್ಯ proseನಂತೆ ಕಂಡರೂ prosaic ಅಂತೂ ಅಲ್ಲ. ತೆರೆದ ಬಾಗಿಲು ಅಡಿಗರ ಸಮಗ್ರ ಕಾವ್ಯದಂತೆ ಈ ದಶಕದ ಗಣನೀಯ ಕೃತಿ.

**೩. ನಗರದಲ್ಲಿ ನೆರಳು (೧೯೭೪)**

ತೆಳ್ಳನ್ನೆ ತೆಳುವಾಗಿ ಜಾಳು ಜೀಳಾದ ಬಾಳಿನ ನಗ್ನ ಚಿತ್ರಣ, ತೊನ್ನು ಮೈಯಂತೆ ಬಾಬ್‌ಕಟ್ ಮಾಡಿಸಿಕೊಂಡ ನಗರವೀಥಿಗಳ ಮರ ಮರಗಳ ನರಳಲ್ಲಿ ಅಚ್ಚುಕಟ್ಟಾಗಿ ಹರಹಿಕೊಂಡಿದೆ. ನಗರದ ನೆರಳಿನಲ್ಲಿ ಕವಿ ಕಣವಿಯವರು–

ಜನ ಸಾಮಾನ್ಯ ಇಂದಿನ ಅನನ್ಯ ಧಾನ್ಯ–
ಬೀಸುಕಲ್ಲಿನ ಮುಕ್ಕು? ಅಲ್ಲ
ಭದ್ರಾವತಿಯ ಉಕ್ಕು
ಹಕ್ಕು ಚಲಾಯಿಸುವವರೆ ಎಲ್ಲರೂ
ಹೊಣೆಗಾರಿಕೆಗೆ ಮಾತ್ರ ತುಕು.
. . . . . .. . . . . . . . .
ನಿಂತದ್ದು ಹೆರವರ ಕಾಲಮೇಲೆ, ಕೈಯೂರಿದ್ದು
ಮತ್ತೊಬ್ಬರ ಹೆಗಲಮೇಲೆ

–ಇಂತಹ ತಲೆಕೆಟ್ಟ ತಿರುಕರನ್ನು ವಿಡಂಬಿಸಿದ್ದಾರೆ. ಆದರೆ ಈ ಸಂಕಲನದ ಸತ್ತ್ವ ಅಡಗಿರುವುದು ಇಲ್ಲಿರುವ 'ವಿನಾಯಕರಿಗೆ ವಂದನೆ', 'ಕರಿಕಿ–ಕಣಗಲ', 'ಸರ್ವಜ್ಞ', ಶ್ರೀ ಜಚನಿ', 'ಪುತಿನ', 'ಪಂಜೆಯವರನ್ನು ನೆನೆದು'– ಮುಂತಾದ ಸಾನೆಟ್‌ಗಳಲ್ಲಿ ಬದುಕಿನ ತೀವ್ರತೆಯನ್ನು ತಮ್ಮ ಸೂಕ್ಷ್ಮವಾದ ತ್ರಾಸಿನಲ್ಲಿ ತೂಗಿನೋಡುವ ಜಾಣ ಕವಿ ಶ್ರೀಕಣವಿ. ಆದರೆ ಬದುಕಿನ ಬತ್ತಲೆಗೆ ಬಟ್ಟೆಕೊಡಲಾರದೆ ಕವಿ ಸೋತಿದ್ದಾರೆ. ಆದರೂ 'ನಗರದಲ್ಲಿ ನೆರಳು' ೧೯೭೪ರ ಮಹತ್ವದ ಕೃತಿ.
೪. ನಿನ್ನೆಯ ಹಾಳು ನೆನಪಿನಲ್ಲೋ ನಾಳೆಯ ಹಾಳು ಕನಸಿನಲ್ಲೋ ವಿಹರಿಸಿ, ಅನುಭವದ 'ಪುನಃಸೃಷ್ಟಿ' ಮಾಡಿಕೊಂಡು ಭಾಷೆಯಲ್ಲಿ ಅದಕ್ಕೊಂದು 'ಕಲಾತ್ಮಕ' ರೂಪು ಕೊಡಲು ತಿಣಕಾಡುವ ಪಲಾಯನದ ಹಾದಿಗೆ ಕೈಮುಗಿದು, ಇಂದಿನ ಈ ಕ್ಷಣದ, ಈ ವರ್ತಮಾದ ಹಸಿ ಹಸಿ ಅನುಭವಗಳಿಗೆ ಹಾಗೆಯೇ ಎದೆಯೊಡ್ಡಿ ನಿಂತು ಬದುಕಿನ ಸವಾಲು ಸ್ವೀಕರಿಸಿದ ಬರಹಗಾ ರರ ಒಂದು ಗುಂಪಿನ ಸಮಷ್ಟಿ ಅನುಭವವಿದೆ ಈ ನನ್ನ ಧ್ವನಿಯ ಹಿಂದೆ'– ಎಂಬ ಸ್ವಯಂ ತೃಪ್ತ ಕವಿ

ಚಂದ್ರಶೇಖರ ಪಾಟೀ ಲರ ಈ ವರ್ಷದ ಕಲಾ ಕಾಣಿಕೆ 'ಗಾಂಧೀ ಸ್ಮರಣೆ'. ಲಂಕೇಶರು ಹೇಳುವಂತೆ ಕಳೆದ ಎರಡು ವರ್ಷಗಳ ಮೌನದಲ್ಲಿ ಸಾರ್ವ ತ್ರಿಕ ಶ್ಮಶಾನಮೌನದಲ್ಲಿ ಪಾಟೀಲರ ಒಂದೇ ಒಂದು ಧ್ವನಿ ಎಲ್ಲರಿಗೂ ತಾಗುವ ನೈತಿಕ ಹಾಗೂ ಕಲಾತ್ಮಕ ಗುಣ ತಳೆದಿದೆ.' ಪಾಟೀಲರ 'ಗಾಂಧೀ ಸ್ಮರಣೆ' ಆದ್ಯತನವನ್ನು ಅರ್ಥವತ್ತಾಗಿ ಚಿತ್ರಿಸಿರುವ ಒಂದು ಮಹತ್ವದ ಕೃತಿ.

**೫. ನಿನ್ನೆಗೆ ನನ್ನ ಮಾತು:** ಉಸುರಿದವರು ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು. ತೀರಾ ಸರಳರಲ್ಲದ ಆದರೆ ಕ್ಲಿಷ್ಟರೆನಿಸದ ಸೂಕ್ಷ್ಮ ಚಿಂತನೆಯ ವೈಚಾರಿಕತೆಯನ್ನು ಉಳಿಸಿಕೊಂಡಿರುವ ಗಟ್ಟಿಕಾಳು ಶ್ರೀ ಭಟ್ಟರು. 'ಅನಾಮಿಕರು' 'ಬೆಳಕಿನ ಬಂಗಾಳ' ಕವನ ಗಳಲ್ಲಿ ಶ್ರೀ ಲಕ್ಷ್ಮೀನಾರಾಯಣ ಭಟ್ಟರನ್ನು ಕಾಣಬಹುದು. ಆದರೂ ಈತ ಬೆಳೆಯಬೇಕಾದ ಕವಿ. ಭಾವಕ್ಕೆ ಭಾಷೆ ದಟ್ಟವಾಗಿ ಮೆತ್ತಿಕೊಳ್ಳುವುದಿಲ್ಲ ಈ ಕವಿಯಲ್ಲಿ. ಹಾಗಾಗಿ ಅಲ್ಲಲ್ಲಿ ಅಸ್ಪಷ್ಟ ಆಕೃತಿಗಳ ಅಲೆಮಾರಿತನ ಕಾಣಬರುತ್ತದೆ. ಆದರೂ–

ಬಂಗಾರದ ಬಟ್ಟಲು ಕಫಕ್ಕೆ ನಿಲ್ದಾಣ
ತಿಳಿಯದ ಹುಚ್ಚಿಗೆ ತಡೆಗಳ ಮೆಚ್ಚಿಗೆ ಯಾಕೆ?
ಹೊಸತನ್ನು ಕಟ್ಟುವ ಅದನ್ನು ಕಟ್ಟೀತೇ ಟೀಕೆ?
–ಎಂಬೆಡೆಗಳಲ್ಲಿ ಭಾವ–ಭಾಷೆಗಳ ಸಂಲಗ್ನ ಸ್ಪಷ್ಟ, ಸುಂದರ.

೫ (ಅ). ಗಿರಡ್ಡಿ ಗೋವಿಂದರಾಜರವರು ವಿಮರ್ಶಕರಾಗಿ ಗೆದ್ದಿದ್ದಾರೆ. ಕವಿಗಳಾಗಿ ಸೋತಿದ್ದಾರೆ– ಎಂಬ ಆಪಾದನೆ ಇದೆ. ಮರ್ಲಿನ್ ಮನ್ರೊ ಓದಿದಾಗ ಈ ಮಾತಿನ ಸತ್ಯಾಂಶ ಸ್ವಲ್ಪಮಟ್ಟಿಗೆ ವೇದ್ಯವಾಗದಿರದು.

೬. 'ಇನ್ನಾದರೂ ಬದುಕಬೇಕು'– ೧೯೭೪ರಲ್ಲಿ ಹೊರಬಂದ ಜಯಸುದರ್ಶನರ ಕವನ ಸಂಕಲನ. "ಬದುಕಿನ ಅನಿವಾರ್ಯತೆ ಯನ್ನು ಒಪ್ಪಿಕೊಂಡು ಬದುಕು ಯಾವ ಯಾವ ಸಾಧ್ಯತೆಗಳನ್ನು ಹೊಂದಿದೆ ಎಂದು ಪ್ರಯೋಗ ಮಾಡುವ ಒಂದು ಮನಸ್ಥಿತಿ ನನ್ನ ವ್ಯಕ್ತಿ ವಿಶಿಷ್ಟ ಮಿತಿಗಳ ಅವಕಾಶದಲ್ಲೇ ಅಸ್ತಿತ್ವದ ಬೇರೆ ಬೇರೆ ಆಯಾಮಗಳ ಬಾಗಿಲು ಬಡಿದು ನೋಡುವ ಆಸಕ್ತಿಯ ಪರಿಣಾಮವಾಗಿ ಇಲ್ಲಿನ ಕವನಗಳು ಹುಟ್ಟಿವೆ"– ಎನ್ನತ್ತಾರೆ ಲೇಖಕರು. ಅಂದರೆ ಇವರೂ ಸಹ ಪಾಟೀಲರ ಪಂಥದವರೇ. ಆದರೆ ಇಬ್ಬರ ತಾತ್ವಿಕ ತಳಹದಿಯೇ ಬೇರೆ. ಇರಲಿ. ತುಂಬ ತಾತ್ವಿಕ ಕವಿ ಎಂಬ ಆಪಾದನೆ ಇವರ ಮೇಲಿದ್ದರೂ 'ಇನ್ನಾದರೂ ಬದುಕಬೇಕು' ಎಂಬಲ್ಲಿನ ಕವನ ನಂದನದಲ್ಲಿ ಕಮನೀಯ ಕುಸುಮಗಳೂ ಇವೆ– ಎಂಬುದನ್ನು ಮರೆಯಲಾಗದು.

೭. 'ಹೊಲೆಮಾದಿಗರ ಹಾಡು'– ಹಾಡಿದವರು ಶ್ರೀ ಸಿದ್ಧಲಿಂಗಯ್ಯ. ಪಠ್ಯ ಪುಸ್ತಕವಲ್ಲದ ಒಂದು ಕವನ ಸಂಕಲನ ಕೇವಲ ಒಂದೇ ವರ್ಷದಲ್ಲಿ ಕನ್ನಡದಲ್ಲಿ ಪುನರ್ ಮುದ್ರಣ ಪಡೆಯಿತು ಅಂದರೆ ಕವನದಲ್ಲಿನ ಸೊಗಸು, ಸೊಗಡುಗಳ ಬಗೆಗೆ ಬೇರೆ ಮಾತು ಬೇಕಿಲ್ಲ. ಶತಶತಮಾನಗಳಿಂದಲೂ ಅನ್ಯರ ಪದಾಘಾತಕ್ಕೆ ಸಿಕ್ಕು ಕಸಕ್ಕೂ ಕಡೆಯಾಗಿದ್ದ, ಹೇಸಿಗೆಯ ವಸ್ತುವೆನಿಸಿದ್ದ ಜನಾಂಗವೊಂದರ ದುಃಖದಾರುಣಗಳನ್ನು ಕನಿಕರಿಸಿ, ಕೆರಳಿ ಕೆಂಡ ಕಾರಿದ್ದಾರೆ. ಇಲ್ಲಿ ವಿಚಾರವಿದೆ. ವಿಷಾದತೆಯೂ ಇದೆ. ಆದರೆ ಕವಿ ಆಶಾವಾದಿ. ದೇಸಿಯ ಸಹಜ ವಿನ್ಯಾಸದಲ್ಲಿ ಅನುಭವ ಅರಳಿಸಿದ್ದಾರೆ. ಈ ಕ್ರಾಂತಿ ಗೀತೆ ಆಕೃತಿಯಲ್ಲಿ ಚಿಕ್ಕದಿದ್ದರೂ ತೂಕದಲ್ಲಿ ದೊಡ್ಡದು.

೮. 'ಬಿರುಗಾಳಿ' ಬೀಸಿದವರು ಸೋಮಶೇಖರ ಇಮ್ರಾಪುರ. ಈತ ಕಸುವುಳ್ಳ ಕವಿ ಎಂಬುದು ನಿಸ್ಸಂದೇಹವಾದ ಮಾತು. ಬೇಕಾದರೆ 'ದುಮ್ಮಜಲಿನ ಮನೆ', 'ಬಲಹೂವ ಕೆಡುವ ತಾಯಿ', 'ತಿರುಬೋಕಿ ಪದಾ'– ಈ ಕವನಗಳನ್ನು ಓದಿ ನೋಡಬ ಹುದು. ಅಲ್ಲಿ ಅವರ ತಾಕತ್ ತಿಳಿಯುತ್ತೆ. ಸ್ವಂತಿಕೆ ವೇದ್ಯವಾಗುತ್ತದೆ. "ಇಲ್ಲಿಯ ಕವನಗಳು ಆಧುನಿಕ ಜೀವನದ ಕವನಗಳು. ಯಾವ ಜೀವನವನ್ನು ಇಮ್ರಾಪೂರರು ಚಿತ್ರಿಸಿದ್ದಾರೋ ಅದರ ದನಿ ಅದರೊಳಗಿಂದಲೇ ಇನ್ನೂ ಹುಟ್ಟಿ ಬಂದಿರಲಿಲ್ಲ. ನವ್ಯರು ಅದನ್ನು ನೋಡಿರಲೇ ಇಲ್ಲ. ಇದೀಗ ಇಂಥ ಹೊಸ ವಾಣಿ ಬಂದದ್ದು. ಇಷ್ಟು ಶಕ್ತಿಯುತವಾಗಿ ಬಂದದ್ದು, ಕನ್ನಡ ಕಾವ್ಯಪರಂ ಪರೆಯ ಜೀವಂತಿಕೆಗೆ ಸಾಕ್ಷಿ" – ಎಂಬ ಡಾ॥ ಶಂಕರ ಮೊಕಾಶಿಯವರ ತಾಳವರಿತ ಮಾತುಗಳನ್ನು ಇಲ್ಲಿ ನೆನೆಯಬಹುದು.

೯. ನೀರಿಗೆ ಬರ ಬಂದ ಗಲ್ಲಿಗಳು ಕೊಳೆತು ನಾರುತ್ತವೆ
ಆಚೆ ಈಚೆ ಹೊಗೆ ಹೂಬಿಡುವ ಜಿರಾಫೆ ಚಿಮಣಿಗಳು
ಸದಾ ರೈಲಿನ ಹಾಗೆ ಉಸಿರಡುತ್ತವೆ.

–ಇತ್ಯಾದಿ ಮಾತುಗಳಿಂದ ನಗರದ ನಗ್ನ ದರ್ಶನ ಮಾಡಿಸುವ ಸರಳ ಸ್ವಭಾವದ ದೊಡ್ಡ ರಂಗೇಗೌಡರ ನಾಲ್ಕನೆಯ ಕವನ ಸಂ ಕಲನ 'ನಾಡಾಡಿ'. ಅವರ ಅನುಭವ ಮತ್ತು ಅಭಿವ್ಯಕ್ತಿಗಳು ಮೇಳೈಸಿರುವುದು 'ಹೆಸರಿದ್ದ ಜಾಗದ ಕುಲಗೋತ್ರ' ಎಂಬ ಕವನದಲ್ಲಿ
೧೦. ಮುಂದಿನದು 'ಬೆತ್ತಲೆ ಪದ್ಯಗಳು'– ಕೊಟ್ಟವರು ಹೊ.ಮ. ಪಂಡಿತಾರಾಧ್ಯ. ಇದು ಈ ಕವಿಯ ಚೊಚ್ಚು ಕೃತಿ. ಆದರೂ ನವ್ಯದ ಆವರಣದಲ್ಲಿ ತನ್ನ ಅಭಿವ್ಯಕ್ತಿಯನ್ನು ಸಾಧಿಸಿಕೊಂಡಿದ್ದರೂ ಈ ಕವಿ ಆವರಣದ ಅಣೆಕಟ್ಟನ್ನು ಮೀರಿ ನಿಲ್ಲಬಲ್ಲ ಸಾಮರ್ಥ್ಯ ಪಡೆದಿದ್ದಾನೆ. 'ಮೃಗಜಲ', 'ವಿಫಲತೆ', 'ನನ್ನ ದೇಶ ಭಾರತ', 'ನನ್ನೂರ ಹಾರುವರು' ಇಲ್ಲಿ ಕವಿಯ ಗೆಲವು ನಿಲವು ಗಳನ್ನು ಕಾಣಬಹುದು. ನಿಜಕ್ಕೂ 'ಬೆತ್ತಲೆ ಪದ್ಯಗಳು' ಹೊಸ ಕವಿಯ ಬಗೆಗೆ ಬೆರಗು ಹುಟ್ಟಿಸುವಂಥವು.

೧೧. ಇದೇ ವರ್ಗದ ಕವಿ ಕವಿಯಿತ್ರಿಯರು "ರಂಗದಿಂದೊಂದಿಷ್ಟು ದೂರ" ಕವನ ಸಂಕಲನದ ಜಯಂತ ಕಾಯ್ಕಿಣಿ. "ಚಿಗಳಿ" ಕವಿ ಸಿದ್ಧಲಿಂಗ ದೇಸಾಯಿ. "ಇರುತ್ತವೆ" ಬರೆದ ಶ್ರೀಮತಿ ಡಿ. ವಿಜಯ. 'ಸ್ತ್ರೀ ಮತ್ತು ಇತರ ಕವನಗಳು'– ಕೃತಿಯನಿತ್ತ ಗುಂಡ್ಮಿ ಚಂದ್ರಶೇಖರ ಐತಾಳ. "ಗುಮ್ಮ"ದ ಗೋವಿಂದರಾಜು, 'ವರ್ತಮಾನದ ಮುಖಗಳು' – ನೀಡಿದ ನಾ. ಮೊಗಸಾಲೆ. "ವೀಕ್ಷಕ" ಡಿ. ಲಿಂಗಯ್ಯ, 'ಅಕ್ವೇರಿಯಂ ಮೀನು' ತೋರಿದ ಮಲ್ಲಿಕಾರ್ಜುನ ಹಿರೇಮಠ. 'ಹಿಪ್ಪೇಮರ' ಕಾಣಿಸಿದ ಸತ್ಯನಾರಾಯಣರಾವ್ ಅಣತಿ, 'ದಾರಿ ಮಗ್ಗುಲ ಹಾಡು' ಹಾಡಿದ ಮು.ಶಿವನಂಜಯ್ಯ, 'ಕ್ಯೂ ನಿಂತ ಪಾಶಗಳು',–ಯಾವುವೆಂಬುದನ್ನು ತೋರಿಕೊಟ್ಟ ಜಿ.ಎಸ್. ಉಬರಡ್ಕ, 'ಹತ್ತರ ಕೊಡ ಹನ್ನೊಂದು' ಎಂದ ಶಿವಶರಣ ಜಾವಳಿ, 'ಗೊತ್ತಿಲ್ಲದ ದಾರಿ'ಯಲ್ಲಿ ನಿಂತ ಅಶೋಕ ಮಠದ. ಇಪ್ಪತ್ತಾರು ಕವಿತೆಗಳನ್ನಿತ್ತ "ಅಬ್ದುಲ್ ರಹಮಾನ್ ಮಾಸಾಪತಿ", "ಬೆಂಗಾಡು" ತೋರಿದ ವಿ.ಎಸ್. ಕಾಶೆಟ್ಟಿ. 'ಲಾಸ್ಯ ತಾಂಡವ' ಆಡಿದ ಬಿ.ಎಸ್. ಸ್ವಾಮಿ, 'ಹತಬಾಗಿನಿ ತಂಗಿಗೆ'– ಏನೋ ಉಡುಗೊರೆ ಕೊಟ್ಟ ಶಿವಳ್ಳಿ ಕೆಂಪೇಗೌಡ, 'ಅನಾಮಧೇ ಯನ ಆತ್ಮಕಥೆ' ನೀಡಿದ ದು. ರುದ್ರಮೂರ್ತಿ ಶಾಸ್ತ್ರಿ, 'ಬೊಗಸೆ ಯುಂಬಿದ ಬದುಕು' ತೋರಿದ ದೇಶಪಾಂಡೆ ಸುಬ್ಬರಾಯ, ನಮ್ಮ ಚರಿತ್ರೆ, ಬೃಂದಾವನ, ಸ್ವರ್ಗ ನಿಸರ್ಗ– ಎಂಬ ಮೂರು ಸಂಕಲನಗಳನ್ನು ಕೊಟ್ಟ ಭುವನಮಿತ್ರ ಮೊದಲಾದವರು. ಶ್ರೀಮತಿ ಪ್ರೇಮಾಭಟ್‌ರವರ 'ಮನೆ' ಇತ್ತೀಚಿನ ಕವನ ಸಂಕಲನ. ಇದರಲ್ಲಿ ರಮ್ಯ–ನವ್ಯಗಳ ಸರಿಬೆರಕೆಯನ್ನು ಕಾಣಬಹುದು. "ಗುಮ್ಮ"ದ ಕವಿ ಗೋವಿಂದರಾಜು ಒಂದು Dynomic personality ಅದರ ಕೆಲವು ಪ್ರಭಾವೀ ಶಕ್ತಿಗಳಿಂದ ಮುಕ್ತಿ ಪಡೆಯ ಬೇಕು. ಪಡೆದರೆ ನಿಜಕೂ ಈ ಕವಿ ಬೆಳೆಯಬಲ್ಲ.

ಇಲ್ಲಿ ಗುಣಿಸಲೇಬೇಕಾದ ಮತ್ತೆ ಕೆಲವು ಕೃತಿಗಳಿವೆ. ಮುಖ್ಯವಾಗಿ ಡಾ॥ ಜಿ.ಎಸ್. ಶಿವರುದ್ರಪ್ಪನವರ 'ನನ್ನ–ನಿನ್ನ ನಡುವೆ' ಇದು ಶ್ರೀಯುತರ ಆಯ್ದ ಕವನಗಳ ಸಂಕಲನ. ಶ್ರೀ ಕಣವಿಯವರಂತೆ ಶಿವರುದ್ರಪ್ಪನವರು ಸಮನ್ವಯ ಮಾರ್ಗದ ಕವಿ. ರಮ್ಯದಾವರ ಣದಲ್ಲಿ ಬೆಳೆದ ಈ ಕವಿ ನವ್ಯದ ಗಾದಿಯನ್ನೂ ಏರಿದ್ದಾರೆ. ಸ್ವಂತ ನುಡಿಗಟ್ಟುಗಳನ್ನು ಕಟ್ಟಬಲ್ಲ, 'ದುಸ್ವಪ್ನ'ದಂತಹ ಕಾವ್ಯಶಿಲ್ಪವನ್ನು ನೀಡಬಲ್ಲ ಸತ್ವಶಾಲಿ ಕವಿ.

ತಮ್ಮ ಆಯ್ದ ಕವನಗಳನ್ನು ಹೊರತಂದ ನಿಸಾರ್ ಅಹಮದ್‌ರವರು ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರು. ಸಂಭಾಷಣೆಯ ಸೊಬಗು ಇವರ ಕಾವ್ಯದ ವೈಶಿಷ್ಟ್ಯ. ಬಳಸಿಕೊಂಡ ಭಾಷೆಯೂ ಅಷ್ಟೇ ತುಂಬಾ ತೂಕಮಾಡಿಹಾಕಿದ್ದು. ಮಣಿಮಾಲೆ ಡಾ॥ ರಂ.ಶ್ರೀ. ಮುಗಳಿಯವರ ೧೦೨ ಮುಕ್ತಗಳ ಸಂಕಲನ. ಅತೀತಶಕ್ತಿಯ ಅವ್ಯಾಹತವಾದ ಹರಹು ಬದುಕಿನ ಎಲ್ಲ ಚಟುವಟಿಕೆಗಳಲ್ಲೂ ಅಡಗಿದೆ ಎಂಬ ಸಿದ್ಧಾಂತಕ್ಕೆ ಇಲ್ಲಿನ ಮುಕ್ತಕಗಳು ಓದುಗರನ್ನು ಸೆಳೆದೊಯ್ಯುತ್ತವೆ. ಪ್ರೊ. ಎಸ್.ವಿ. ಪರಮೇಶ್ವರ ಭಟ್ಟರ 'ಪಾಮರ' ಇಂತಹದೇ ಒಂದು ಕೃತಿ. 'ಸದಾಶಿವಗುರು' ಎಂಬ ಅಂಕಿತದ ನೂರಾರು ವಚನಗಳಿವೆ ಇಲ್ಲಿ. 'ಪಾಮರ' ಅಂದರೆ ಪಾಸುಮರ– ಎರಡು ಬಾವಿಗಳ ಮಧ್ಯೆ ಅಡ್ಡಲಾಗಿ ಹಾಸಿದ ಮರದ ತುಂಡು, ಭಟ್ಟರು ಹೇಳುತ್ತಾರೆ ಇಹ–ಪರಗಳೆಂಬ ಬಾವಿಗೆ ಇದು ಪಾಸು–ಮರ ಎಂದು. ಪಾಮರ, ಇಲ್ಲಿ ಬದುಕಿನ ವೈಶಾಲ್ಯವಿದೆ, ಚಿಂತನೆಯ ಆಳವೂ ಇದೆ. ಭಟ್ಟರ 'ಬುದ್ಧಚರಿತೆ' ಈ ವರ್ಷದ ಅತ್ಯುತ್ತಮ ಭಾಷಾಂತರ ಕೃತಿ. 'ಬಳ್ಳಾರಿಯ ಬೆಳಗಿತ್ತ' ಹಿ.ಮ. ನಾಗಯ್ಯನವರು ಇದೀಗ 'ನೀವೆಲ್ಲ ನಮ್ಮವರೆ' ಹೊತ್ತಗೆಯನ್ನು ಹೊರತಂದಿದ್ದಾರೆ. ರಮ್ಯದ

ಧಾಟಿಯ ರಮ್ಯ ಕವನ ಕುಸುಮಗಳು, ನಾದಮೋದ ತುಂಬುವ ಗೀತಗುಚ್ಛಗಳು ಇಲ್ಲಿವೆ. ಇದೇ ವರ್ಗದ ಕರತಿ ಕವಿ ಪುತಿನರವರ 'ಇರುಳ ಮೆರಗು'.

'ಕವಿಗಳು ಕಂಡ ಕರ್ನಾಟಕ' ೩೫ ಕವನಗಳ ಸಂಕಲನ. ಸಂಪಾದಕರು ಎಸ್. ಚನ್ನಪ್ಪ. ಕನ್ನಡ ನಾಡು ಒಂದಾಗಿ, ಕರ್ನಾಟಕ ಎಂದು ಕರೆಸಿಕೊಂಡಾಗ ಅದರ ಸಂಸ್ಕೃತಿಯ ಕುರುಹಾಗಿ ಕನ್ನಡ ಕವಿಗಳು ಹಾಡಿದ ಹಾಡುಗಬ್ಬಗಳು ಇಲ್ಲಿವೆ. ಕೃತಿ ಚಿಕ್ಕದೇ ಇದ್ದರೂ ನಾಡು–ನುಡಿಯ ಬಗೆಗಿನ ಕನ್ನಡಿಗರ ಅಭಿಮಾನದ ಪ್ರತೀಕ. ಕಾವ್ಯವಿಹಾರಿಗೆ ಕಮನೀಯವಾದ ಕಲ್ಯಾಣಿಗಳೆಂದರೆ ನವ್ಯಧ್ವನಿ. ನಡೆದು ಬಂದ ದಾರಿ, ಅಕ್ಷರ ಹೊಸ ಕಾವ್ಯ, ಹೊಸ ಜನಾಂಗದ ಹೊಸ ಕವಿತೆಗಳು, ಬೆನ್ನ ಹಿಂದಿನ ಬೆಳಕು, ಚೇತನ, ಸೊಗಡು, ಉತ್ತರ ಕನ್ನಡದ ಕವನಗಳು, ಮೊಗ್ಗೆ ಬುಗ್ಗೆ, ಸಂಗಮ, ನೆಲದ ನೆರಳು, ಧ್ವನಿ, ನವರಂಗ, ೩೬ ಮುಖ ೬೩ ಕವನ.

ಪಿ. ಲಂಕೇಶರ ಹೊಸ ಕಾವ್ಯ ವ್ಯಾಪ್ತಿಯಲ್ಲಿ ಹಿರಿದಾಗಿ. ಗುಣದಲ್ಲಿ ದೊಡ್ಡದಾಗಿ ಹೊರಬಂದ ಮೇಲೆ. ಡಾ॥ ಬುದ್ದಣ್ಣ ಹಿಂಗೆಮಿರೆ ಯವರು 'ಹೊಸ ಜನಾಂಗದ ಕವಿತೆಗಳು' ಸಂಕಲನವನ್ನು ಅಷ್ಟೇ ತೂಕ ಬಣ್ಣ ಉಳ್ಳದ್ದನ್ನು ತಂದರು. ಸಾಂತರಸರು ರಾಯಚೂ ರು ಮೊದಲಾದೆಡೆಗಳಲ್ಲಿ ಕಂಡು ಬಂದ ಅನ್ಯ ಸಂಪಾದಕರ ಅವಜ್ಞತೆಗೆ ಪಾತ್ರಾದ ಹಲವು ಕವಿಗಳನ್ನು ಬೆಳಕಿಗೆ ತಂದರು. ಸಾಹಿ ತ್ಯಾನಂದ ಮತ್ತು ಕೆ. ವಿರೂಪಾಕ್ಷ ಗೌಡ, ರೊಚ್ಚಿಗೆದ್ದು ಬಳ್ಳಾರಿ ಜಿಲ್ಲೆಯ ಪ್ರಾತಿಭಜ್ಯೋತಿಯನ್ನು 'ಚೇತನ'ದಲ್ಲಿ ಬೆಳಗಿಸಿದರು. ಧಾರವಾಡದ ಯುವಕವಿಗಳ ಕಾಣಿಕೆಯಾಗಿ ೩೬ ಮುಖ ೬೩ ಕವನಗಳನ್ನು ಪ್ರೊ॥ ಸೋಮಶೇಖರ ಇಮ್ರಾಪೂರರವರೂ, ಮಂಡ್ಯ ಜಿಲ್ಲೆಯ ೧೦–೧೨ ಕವಿಗಳ ಕವನಗಳನ್ನು "ಸಂಗಮ" ಎಂಬಭಿಧಾನದಲ್ಲಿ ಎಲ್ಲೇಗೌಡ ಬೆಗರಹಳ್ಳಿಯವರೂ, ವಿಷ್ಣು ನಾಯ್ಕ ಮತ್ತು ಶ್ಯಾಮ ಹುದ್ದಾರರ "ಉತ್ತರ ಕನ್ನಡದ ಕವನಗಳು" ಉತ್ತರ ಕನ್ನ ಜಿಲ್ಲೆಯ ಪ್ರಾತಿನಿಧಿಕ ಕವನ ಕೃತಿಯನ್ನು ತಂದರು. ಅನೇಕ ಜನ ತರುಣ ಕವಿ ಕವಯಿತ್ರಿಯರನ್ನು ಒಂದೇ ವೇದಿಕೆ ಮೇಲೆ ನಿಲ್ಲಿಸಿ ಜಯಭೇರಿ ಬಾರಿಸಿದ "ಸೊಗಡಿನ" ಗೋವಿಂದರಾಜು, ಕವಿಗುರು "ಜಚನಿ" ತಂದ ಸಂಗಮೇಶ ಹಂಡಗಿಯವರು, "ಕವಿಗಳು ಕಂಡ ಕೊಡಗು" ನೀಡಿದ ಡಿ.ಬಿ. ರಾಮಚಂದ್ರಾಚಾರ್‌ರವರು, "ನವತರಂಗ"ದ ಪ್ರಕಾಶ ದೇಶಪಾಂಡೆಯವರು, "ಧ್ವನಿ" ಎಂಬ ಸಂಗ್ರಹದ ಕರ್ತೃಗಳಾದ ಮಹೇಂದ್ರ ಪ್ರಸಾದ್, ಬೆಳ್ಳಿ ಚಂದ್ರಶೇಖರ ಶೆಟ್ಟಿ, ರಾಮೇಗೌಡ ಕದಲೂರು, ಸಾಹಿತ್ಯಾನಂದ–ಮೊದಲಾದವರು, "ನೆಲದ ನೆರಳು" ಕರ್ತೃಗಳಾದ ಸರಜೂ ಕಾಟಕರ, ಸತೀಶ ಕುಲಕರ್ಣಿ, ಕೆ. ಪದ್ಮರಾಜ ಮೊದಲಾದವರು, 'ಮೊಗ್ಗೆ–ಬುಗ್ಗೆ"ತ ಸಂಪಾದಕರಾದ ಎಸ್.ವಿ. ಗೊಂಬಿ, ಆರ್.ವಿ. ಯಡಹಳ್ಳಿ, ಕೆ.ಎಸ್. ಕದಿಕೊಂಡ– ಮೊದಲಾದವರು ಕನ್ನಡಿಗರ ಕೃತಜ್ಞತೆಗೆ ನಿಜಕ್ಕೂ ಪಾತ್ರರಾಗಿ ದ್ದಾರೆ. ಇವುಗಳಲ್ಲಿ "ಗುಮ್ಮ" ಗೋವಿಂದರಾಜುರವರ ಸಂಪಾದಕತ್ವದಲ್ಲಿ ಬಂದ "ಸೊಗಡು" ಒಂದು ಮೈಲಿಗಲ್ಲು. ತರುಣ ಕವಿಗಳ ತಿರುಳು ಅಲ್ಲಿದೆ. ಕುಮಾರಸ್ವಾಮಿ, ರಸಿಕ ಪುತ್ತಿಗೆ, ಮಾತಂಗಿ, ದೊಡ್ಡರಂಗೇಗೌಡ ಮೊದಲಾದವರಿದ್ದಾರೆ. ಈ ಎರಡು ವರ್ಷಗಳ ಅವಧಿಯಲ್ಲಿ ಕನ್ನಡಕ್ಕೆ ಅನ್ಯ ಭಾಷೆಗಳಿಂದ ಬಂದ ಗಣನೀಯ ಕರತಿಗಳು ಕೆಲವಿವೆ. ಪಾಬ್ಲೊ ನೆರೊದ "ಮರಳಿ ಬರುವೆ"– ಅನುವಾದಿಸಿದವರು ತೇಜಸ್ವಿನೀ ನಿರಂಜನ. ೨೫ ಕವನಗಳ ಸಂಕಲನ. ೧೯೭೫ಕ್ಕೆ ಸೇರುವುದಾದರೆ ಶ್ರೀ ಕೃಷ್ಣ ಆಲನಹಳ್ಳಿಯವರ "ತೋಗ್ರಾ ಪಹಾರಿ ಪ್ರೇಮಗೀತೆಗಳು" ಕಾಶ್ಮೀರದ ಜಾನಪದ ಪ್ರೇಮಕವನಗಳ ರೂಪಾಂತರ ಈ ಕೃತಿ. ಫ್ರೆಂಚ್ ಕವಿ ಬೋದಿಲೇರ್‌ನ ಹಲವು ಗೀತೆಗಳನ್ನು ಲಂಕೇಶರ ಅನುವಾದದ ಗಾಂಭೀರ್ಯವನ್ನು ಗುರುತಿಸಬೇಕಾಗಿದೆ.

೧೯೭೪–೭೫, ೭೬ರ ಕನ್ನಡ ಕಾವ್ಯದ ಪ್ರಮುಖ ಲಕ್ಷಣವೆಂದರೆ ಕಾಳೇಗೌಡ ನಾಗವಾರರು ಹೇಳುವಂತೆ "ಏಕತಾನತೆ ಭಾಷಾ ಮಾದರಿ, ಸಂವೇದನೆ, ತಂತ್ರ– ಈ ಎಲ್ಲಾ ದೃಷ್ಟಿಯಿಂದಲೂ ಉಸಿರು ಹಿಡಿಯುವಷ್ಟು ಏಕತಾನತೆಯನ್ನು ನಾವು ಕಾಣಬಹುದು. ಇದರ ಅರ್ಥ ಹೊಸಗನ್ನಡದ ಎರಡು ಕಾವ್ಯ ಮಾರ್ಗಗಳು ಸಹ ನಿರ್ವೀರ್ಯತೆಯ ಹಂತವನ್ನು ಮುಟ್ಟಿವೆ ಎಂಬುದು. ಅದರ ಲ್ಲಿಯು ಈಗಿನ ಚಲಾವಣೆಯ ನವ್ಯಕಾವ್ಯ ಸಂಪೂರ್ಣವಾಗಿ ನಿಸ್ತೇಜವಾಗಿದೆ. ನವ್ಯ ನವೋದಯ ಕಾವ್ಯ ಮಾರ್ಗಗಳು ಒಂದು "ಕಾವ್ಯಭಾಷೆ"ಯನ್ನೇ ನಿರ್ಮಾಣ ಮಾಡಿವೆ. ಚಾರಿತ್ರಿಕವಾಗಿ ಕಾವ್ಯ ಮಾರ್ಗವೊಂದು ಇಂಥ ಸ್ಥಿತಿಗೆ ಮುಟ್ಟಿತೆಂದರೆ, ಆ ಕಾವ್ಯ ಮಾರ್ಗ ಅಲ್ಲಿಗೆ ಕೊನೆಯಾಯಿತೆಂದು ಹೇಳಬಹುದು. ಇದರ ನಂತರದ ಕೆಲವು ಕಾಲ ಈ ಕಾವ್ಯ ಮಾರ್ಗದ ಪ್ರೇತಗಳು ಕಾಣಿಸಿಕೊಳ್ಳುತ್ತವೆ.

ಆತ್ಮೀಯರೆ,
ಸಾಹಿತ್ಯ ಸದಾ ಹರಿಯುತ್ತಿರುವ ಅಮಲವಾಹಿನಿ. ಹರಿಯುವ ನೀರು ತೀರ್ಥ, ನಿಂತ ನೀರು ಕೊಚ್ಚೆ. ಕನ್ನಡ ಕಾವ್ಯ ನಿರಂತರ ಪ್ರವಾಹವೇ ಆಗಿದ್ದರೂ ಈಗ ಸ್ವಲ್ಪ ಮಟ್ಟಿಗೆ ನಿಂತು ಮಡುಗಟ್ಟಿ ಮಲವಾಗಿ ಕುಡಿಯಲು ಯೋಗ್ಯವಲ್ಲದ ಸ್ಥಿತಿಯಲ್ಲಿದೆ.

ನಾನು ಮೊದಲೇ ಬಿನ್ನವಿಸಿಕೊಂಡಂತೆ ಹೊಸ ಮಾಧ್ಯಮಕ್ಕಾಗಿ ಹುಡುಕಾಡುತ್ತಿದೆ. ೧೯೭೦–೮೦ ಕತ್ತಲ ಕಾಲವೆನಿಸಿದರೂ ೮೦ರ ನಂತರ ನವಯುಗ ಹೊಸ ಸ್ವರ್ಣೋದಯ ಕನ್ನಡ ಕಾವ್ಯಾಕಾಶದಲ್ಲಿ ಆಗುತ್ತದೆ– ಎಂದು ಹೇಳಿ ವಿರಮಿಸುತ್ತೇನೆ.

# ತರಾಸುರವರ ಎರಡು ಕಾದಂಬರಿಗಳು

ಒಂದು : ಜೀತದ ಜೀವ: ಮತ್ತೊಂದು : ಅಗ್ನಿರಥ–ಮುಕ್ತಿಪಥ

---

ಎರಡೂ ಕಾದಂಬರಿಗಳನ್ನು ಒಟ್ಟಿಗೇ ಪರಿಚಯಿಸುವಲ್ಲಿ ಔಚಿತ್ಯವೇನೂ ಇಲ್ಲ. ಒಂದು ಭೂಮಿ ಮತ್ತೊಂದು ಆಕಾಶ. ಒಂದರ ನಾಯಕ ಜೀತದಾಳು ಮತ್ತೊಂದರ ನಾಯಕ ದೇವನಾಳು. ಇವೆರಡಲ್ಲಿ ಸಾದೃಶ್ಯಕ್ಕಿಂತಲು ವೈದೃಶ್ಯಗಳೇ ಬಹಳ. ವಸ್ತು, ವಿನ್ಯಾಸ, ಉದ್ದೇಶ, ಪರಿಣಾಮ ಎಲ್ಲವೂ ಬೇರೆಬೇರ್ರೊ ಬರೆದ ಕೈ ಒಂದೇ ಎಂಬುದಷ್ಟೇ ಇವವುಗಳಲ್ಲಿನ ಸಾಮ್ಯತೆ. ಪರಿಣತ ಹಸ್ತ ಹೇಗೆ ಪರಿಣಾಮಕಾರಿಯಾಗಿ ನಿರೂಪಿಸಬಲ್ಲದು ಎಂಬುದಕ್ಕೆ ಇವೆರಡೂ ನಿಂತ ಸಾಕ್ಷಿ. ಅಂದಾಕ್ಷಣಕೇ ವಿಶಿಷ್ಟ ವಿಮರ್ಶೆ ನೀಡುವುದೂ ಈ ಲೇಖನದ ಉದ್ದೇಶವಲ್ಲ, ಪರಿಚಯ! ಕೇವಲ ಕಿರು ಪರಿಚಯ ಅಷ್ಟೆ.

**ಜೀತದ ಜೀವ**

ಒಂದು ಸರಳ ಸಾಧಾರಣ ಸಾಮಾಜಿಕ ಕಾದಂಬರಿ. ಕಥೆಯ ಹಂದರ ಇದು:– ಜೋಗೇನಹಳ್ಳಿ ಬಡಪಾಲ ತನ್ನ ಮಗ ಓಬ ನನ್ನು ಕರೆತಂದು ಜೀತಕ್ಕಿಡುತ್ತಾನೆ. ನಗರದಲ್ಲಿದ್ದ ವೀರಭದ್ರಯ್ಯನ ಮನೆಯಲ್ಲಿ, "ತಿಂಗಳಿಗಾರು ರೂಪಾಯಿ ಸಂಬಳ, ಎರಡ್ಹೊತ್ತು ಊಟ. ವರ್ಸಕ್ಕೆ ಎರಡು ಜೊತೆ ಬಟ್ಟೆ ಕೊಡ್ತೀನಿ. ಸಂಳದ ದುಡ್ಡನ್ನ ಸಾಲಕ್ಕೇ ಮುರೇ ಹಾಕಿ ಕೊಳ್ತೀನಿ" ಮಾತುಕತೆ ನಡೆಯಿತು; ಮಗನನ್ನು ಳಿಸುವಾಗ ಹೆಂಡತಿ ತಕರಾರು. ". .. .ಹೆತ್ಹೊಟ್ಟೆ ನಂದು ನಿಂಗೇನು? ಜೀತಾ ಮಾಡಾಕೆ ಹಡೆದಿದ್ನಾ ಮಾರಾಜನಂತ ಮಗನ್ನ"– "ಮಾರಾಜನ್ನ ಹಡೆದಿದ್ರೆ ನನಗ್ಯಾಕೆ ಈ ಗಾಸಾರ. . ." ಇತ್ಯಾದಿ ಮಾತುಕತೆ ನಡೆದಿತ್ತು. ಆದರೆ ವಿಧಿಯಿಲ್ಲ. ಮಾಡಿದ ಸಾಲ ತೀರಬೇಕು. ತೀರಸಲಿಕ್ಕೆ ಮಗ ಆಳಾಗಿ ದುಡಿಯಬೇಕು ಐದು ವರ್ಷಕಾಲ. ಹಳ್ಳಿಮುಕ್ಕ ಓಬನಿಗೆ ಎಲ್ಲವೂ ಹೊಸದು. ನಗರದ ನಾಗರೀಕ ಜೀವನವನ್ನೇ ಕಂಡರಿಯದ ಮುಗ್ಧ. . . ."ನಾಲ್ಕು ದಿನಾ ಆದರೆ ಪಳಗತಾನೆ. ಏನೋ ಓಬಾ. ಹೇಳಿದ ಕೆಲಸ ಮಾಡಿಕೊಂಡಿರ್ತೀಯೇನೋ"– ಅಂತಾ ವೀರಭದ್ರಯ್ಯ ಕೇಳಿದಾಗ ಓಬ ಮಂಕಾಗಿ ಅವರಾಡುವ ಮಾತು ಕೇಳುತ್ತಿದ್ದ. ಕುರಿಯ ವ್ಯಾಪಾರವಾಗುತ್ತಿದ್ದಾಗ ಕುರಿ ಏನು ಹೇಳೀತು! ಓಬ ಏನೂ ಉತ್ತರ ಕೊಡಲಿಲ್ಲ. ಅಪ್ಪ ಅಮ್ಮರ ವಾತ್ಸಲ್ಯದ ವಾತಾವರಣದಿಂದ ಹೊರಬಂದ ಓಬ ಹೊಸ ಸ್ಥಳದಲ್ಲಿ ಹೊಂದಿಕೊಳ್ಳುವುದು ಕಷ್ಟವೇ ಆಗುತ್ತೆ. ಆದರೆ ಅವನಿಗೆ ಆಸರೆಯಾಗಿದ್ದವಳು ತನ್ನ ತಾಯಿಯನ್ನೇ ಮರೆಸಿದ ಮಮತೆಯ ಮೂರ್ತಿ ಅಂದರೆ ವೀರಭದ್ರಯ್ಯನ ಹೆಂಡತಿ ನೀಲಮ್ಮ. ಮಕ್ಕಳಿಲ್ಲದ ಆಕೆ ಮಗನಂತೆ ಕಾಣುತ್ತಾಳೆ; ನಡೆಸಿಕೊಳ್ಳುತ್ತಾಳೆ. ಆದರೆ ಅವರ ಮನೆಯಲ್ಲೆ ಮೊದಲೇ ಸೇರಿಕೊಂಡಿದ್ದ ಅಡುಗೆಯಾಳು ಶಾಂತವೀರನಿಂದ ಮನೆ ಗೊಂದಲದ ಗೂಡಾಗುತ್ತದೆ. ಶಾಂತವೀರನಿಗೆ ವಿನಾ ಕಾರಣ ಕೋಪ ಈ ಹಳ್ಳೀ ಹುಡುಗನ ಬಗೆಗೆ. ಅಮ್ಮವರಿಂದ ಬಯ್ಯುಸ್ತಾನೆ ಎಂಬ ಕಾರಣದಿಂದ ಅವನನ್ನು ತುಂಬಾ ದ್ವೇಷಿಸಿ ಕಡೆಗೆ ಮನೆಯ ಅಶಾಂತಿ, ಅನಾಹುತಗಳಿಗೆ ಕಾರಣನಾಗುತ್ತಾನೆ. ಶಾಂತವೀರ ಒಂದು ದಿನ ಓಬನನ್ನು ಶೆಟ್ಟಿ ಅಂಗಡಿಗೆ ಸಾಮಾನು ತರಲು ಕಳುಹಿಸುತ್ತಾನೆ. ಹುಡುಗ ಕಷ್ಟಬಿದ್ದು ಹುಡುಕುತ್ತಾನೆ. ಆಗ ಅವನಿಗೆ ನಗರದ ಕಿರುಪರಿಚಯ ಆಗುತ್ತೆ– ಹಗ್ಗ ಇಲ್ಲ, ಬಾವಿ ಇಲ್ಲ ಕೊಳಾಯಿನಲ್ಲಿ ಬರುತ್ತೆ ನೀರು. ಎಣ್ಣೆ ಇಲ್ಲ, ಬತ್ತಿ ಇಲ್ಲ, ಗುಂಡಿ ಒತ್ತಿದರೆ ಉರಿಯತ್ತೆ ದೀಪ; ಹಾಡೋನಿಲ್ಲ ಬಾರಿಸೋನಿಲ್ಲ ತನಗೆ ತಾನೇ ಹಾಡುತ್ತೆ ಪೆಟ್ಟಿಗೆ– ತಿಂಡಿ ಹೋಟೆಲು, ಮನೆಗಳ ಮೇಲೆ ಹತ್ತಿ ನಿಂತ ಮನೆಗಳು. ಕಾರು ಮೋಟಾರುಗಳ ಓಡಾಟ, ಜನರ ಗಡಿಬಿಡಿ– ಎಲ್ಲವೂ ಭ್ರಮೆ ಹುಟ್ಟಿಸುತ್ತವೆ ಅವನಲ್ಲಿ. ನಗರ ದರ್ಶನ ಮಾಡಿಸುತ್ತೆ ಓಬನಿಗೆ ಎಂದು ಅಮ್ಮಾವ್ರು ಹೇಳಿದರೂ ಕೇಳದ ಶಾಂತವೀರನ ಮೇಲೆ ರೇಗಾಟ ನಡೆದು ಮನೆಯಲ್ಲಿ ಎರಡು ಪಕ್ಷಗಳು– ಒಂದು ಯಜಮಾನ ವೀರಭದ್ರಯ್ಯ ಮತ್ತು ಶಾಂತವೀರ. ಇನ್ನೊಂದು ಯಜಮಾನಿ ನೀಲಮ್ಮ ಮತ್ತು ಓಬ. ಹೀಗಾಗಿ ಒಂದು ಸಣ್ಣ ಕಾರಣಕ್ಕಾಗಿ ಓಬ ಹಾಗೂ ನೀಲಮ್ಮ ಏಟು ತಿನ್ನುತ್ತಾರೆ. ವೀರಭದ್ರಯ್ಯನಿಂದ ಮನೆ ಶಾಂತಿ ಹಾಳಾಗುತ್ತೆ. ಇಷ್ಟಕ್ಕೂ ಮೂಲ ಕಾರಣ ಓಬನೇ ಎಂಬ ನಿರ್ಧಾರಕ್ಕೆ ಬರುತ್ತಾನೆ ವೀರಭದ್ರಯ್ಯ. ಒಂದು ದಿನ ಹೆಂಡತಿ ನೀಲಾ ತನ್ನ ತೌರಿಗೆ ಹೋಗಬೇಕಾದಾಗ ವೀರಭದ್ರಯ್ಯ ಸಂತೋಷದಿಂದ ಕಳುಹಿಸಿ ಹೆಂಡತಿಯ ಆಸರೆ, ಅನುರಾಗ ಇವುಗಳಿಂದ ದೂರನಾಗುತ್ತಾನೆ. ಅಷ್ಟರಲ್ಲಿ ಆ ಊರಿಗೆ "ಶ್ರೀ ಬಸವರಾಜಾ ಕೃಪಾಪೋಷಿತ ನಾಟಕ ಮಂಡಲಿ" ಆಗಮಿಸುತ್ತೆ. ಕಂಪನಿ ಮನೆ ವೀರಭದ್ರಯ್ಯನ ಮುಂದಿನ ಮನೆಯಲ್ಲಿ. ಕಂಪನಿ ಹೀರೋಯಿನ್ ಶಾಂತಾಬಾಯಿ. ಕಂಪನಿ ಮಾಲೀಕ ಬಸವರಾಜಪ್ಪವೀರಭದ್ರಯ್ಯನವರನ್ನು ಸೆಳೆದು ಶಾಂತಾಬಾಯಿ ಬುಟ್ಟಿಗಟ ಹಾಕುತ್ತಾನೆ. ಐದುನೂರು ರೂಪಾಯಿಗಳಿಗೆ ಆಸೆ ಬಿದ್ದು ಧರ್ಮಪತ್ನಿಗೆ ದ್ರೋಹ ಮಾಡಿದೆ ಎಂಬ ಪಶ್ಚಾತ್ತಾಪದಲ್ಲಿ ದಹಿಸಿ ಹೋಗುತ್ತಾನೆ ವೀರಭದ್ರಯ್ಯ.

ತಾಯಿಯಂತಿದ್ದ ವಾತ್ಸಲ್ಯಮಯಿ ನೀಲಮ್ಮನ ಆಶ್ರಯ ತಪ್ಪಿದ ಓಬನಿಗೆ ವೀರಭದ್ರಯ್ಯನಿಂದ ಮತ್ತೊಂದು ದಿನ ಏಟು ಬೀಳು ತ್ತದೆ. ಅಂದೇ ಅವನು ಮನೆ ಬಿಟ್ಟು ಹೊರಟು ಹೋಗುತ್ತಾನೆ ತನ್ನ ಗಂಟು ಮೂಟೆಯೊಂದಿಗೆ. ಅಲ್ಲಿಗೆ ಮುಕ್ತಾಯವಾಗುತ್ತದೆ ಕಾದಂಬರಿ.

ವೀರಭದ್ರಯ್ಯ ಕಡುಬಡವ. ಚಿಕ್ಕಂದಿನಲ್ಲಿ ಬೇರೊಬ್ಬರ ಅಂಗಡಿಯಲ್ಲಿ ಗುಮಾಸ್ತನಾಗಿದ್ದವನು. ಆದರೆ ಅಂಗಡಿ ಯಜಮಾನರು ಹುಡುಗನಿಗೆ ಸ್ವಾವಲಂಬನೆ ಕಲಿಸಲು ಇಚ್ಛಿಸಿ ಸ್ವತಂತ್ರ ಜೀವನ ಸಾಗಿಸುವಂತೆ ಹೇಳಿ ಸ್ವಲ್ಪ ಬಂಡವಾಳ ಕೊಟ್ಟು ಗಿರಾಕಿಗಳನ್ನು ಹೊಂದಿಸಿಕೊಟ್ಟು ಬೇರೆ ಮಳಿಗೆ ತೆಗೆಸುತ್ತಾರೆ. ಚುರುಕು ಬುದ್ಧಿಯ ವೀರಭದ್ರಯ್ಯ ಮೇಲೆ ಬರುತ್ತಾನೆ, ಗಣ್ಯನಾಗು ತ್ತಾನೆ. ಆದರೆ ಈ ಮಧ್ಯೆ ಕಟ್ಟ ಹೆಂಗಸಿನ ಸಹವಾಸಕ್ಕೆ ಬಿದ್ದು ಆರೀಗ್ಯ ಕೆಡಸಿಕೊಂಡಿರುತ್ತಾನೆ. ಮತ್ತೆ ಆ ಕೆಲಸಕೆ ಹೋಗಬಾರದು ಅನ್ನಿಸಿರುತ್ತೆ. ನೀಲಮ್ಮನನ್ನು ಲಗ್ನವಾದ ಮೇಲೆ ಅವಳಿಗೊಂದು ವಿಚಿತ್ರ ಮಗು ಹುಟ್ಟಿ, ಆಪರೇಷನ್ ಮಾಡಿ ತೆಗೆದು ತಾಯಿಯನ್ನು ಉಳಿಸ ಬೇಕಾಗುತ್ತೆ. ಅದರೆ ನೀಲಮ್ಮನಿಗೆ ಮುಂದೆ ಮಕ್ಕಳಾಗುವ ಸಂಭವವೇ ಇಲ್ಲವಾಗುತ್ತದೆ. ಇದರಿಂದ ನೀಲಮ್ಮನಿಗೆ ಓಬನನ್ನು ಕಂ ಡರೆ ಸಹಜವಾದ ವಾತ್ಸಲ್ಯ ಮೂಡುತ್ತದೆ. ಮನಶಾಸ್ತ್ರೀಯವಾದ ವಿನ್ಯಾಸ ರೂಪುಗೊಂಡಿದೆ ಇಲ್ಲಿ. ಜೀತ ಪದ್ಧತಿಯ ದೈತ್ಯರೂಪು ಇಲ್ಲಿ ಕಾಣ¹ಸುವುದಿಲ್ಲ. ಸಣ್ಣ ಕಥೆ ಒಂದು ಕಾದಂಬರಿಯಾಗಿದೆ ಅನ್ನಿಸುತ್ತೆ. ಕಾದಂಬರಿ ದೊಡ್ಡದಲ್ಲ. ಚಿತ್ರ ದಟ್ಟವಾಗಿ ಮೂಡಿಲ್ಲ. ಓಬನ ಪಾತ್ರಕ್ಕೆ ಪೂರ್ಣತೆ ಸಿಕ್ಕಿಲ್ಲ. ಕೇವಲ ೫-೬ ಪಾತ್ರಗಳಲ್ಲಿ ನಾಟಕ ಮುಗಿಯುತ್ತದೆ. ಏಕಾಂಕ ಇದು. ಅನೇಕಾಂಕ ಅಲ್ಲ. ನೀಲಮ್ಮ ವೀರಭದ್ರಯ್ಯ ಇವರ ವರ್ತನೆ, ಪರಿ ವರ್ತನೆಗಳೂ ವೈಜ್ಞಾನಿಕವಾಗಿ ಇವೆ. ಮನಶಾಸ್ತ್ರಕ್ಕೆ ಕಾದಂಬರಿಕಾರ ಅಂಟಿಕೊಂಡಿದ್ದರಿಂದಲೇ ಕಲೆಯ ಪಾಕ ಕೆಟ್ಟಿದೆ ಎನ್ನಬ ಹುದು. ಮನಶಾಸ್ತ್ರಕ್ಕೆ ಮೀರಿದ ಒಂದು ಮಾನವೀಯ ಧರ್ಮ ಇದೆ. ಅದರ ಕಡೆಗೆ ಕಣ್ಣು ಮುಚ್ಚಿರುವುದು ಕಾದಂಬರಿಯ ಕೊರತೆಗೆ ಕಾರಣವಾಗಿದೆ. ಜೀತಪದ್ಧತಿಯ ವಿಷಯದಲ್ಲಿ ಅನುಭವ ಬೇಕು.

**ಅಗ್ನಿರಥ-ಮುಕ್ತಿ ಪಥ**

ಅಪರೋಕ್ಷಜ್ಞಾನಿ ವೀರವೈರಾಗ್ಯಮೂರ್ತಿ ಅಲ್ಲಮಪ್ರಭುವಿನ ಆಧ್ಯಾತ್ಮ ಜೀವನಕ್ಕೆ ಸಂಬಂಧಿಸಿದ ಕಥೆ ಈ ಕಾದಂಬರಿಯ ವಸ್ತು. ಅಲ್ಲಮಪ್ರಭು ಕೇವಲ ವೀರಶೈವ ಧಾರ್ಮಿಕ ಗುರುವಷ್ಟೇ ಅಲ್ಲ, ಕನ್ನಡಿಗರ ಕುಲಗುರು. ಆತನ ವಚನಗಳು ಸಕಲ ಧರ್ಮಸಾರ. ಆತನ ಕಾಲ-ದೇಶ, ಮತಾತೀತ ಜ್ಞಾನ ದೀವಿಗೆ. ಆಧ್ಯಾತ್ಮ ಸ್ತರದಲ್ಲಿ ಬಹು ಎತ್ತರಕ್ಕೇರಿದ ವ್ಯಕ್ತಿ. ಭಕ್ತಿ, ಜ್ಞಾನ, ವೈರಾಗ್ಯಗಳಲ್ಲಿ ವ್ಯೋಮ ಮೂರುತಿ. ಇಂತಹ ಮಹಾಚೇತನದ ಲೀಲಾರೂಪಿ ಜೀವನ ಕಲಾತ್ಮಕವಾಗಿ ಕಂಡರಿಸಲ್ಪಟ್ಟಿದೆ ಇಲ್ಲಿ. ನಾಗರಖಂಡದ ಬಳ್ಳಿಗಾಮೆ ಅಲ್ಲಮ್ಮನ ಹುಟ್ಟೂರು. ಅರಸು ಮಕ್ಕಳಿಗೆ ನೃತ್ಯ ಕಲಿಸುತ್ತಿದ್ದ ನಿರಹಂಕಾರಯ್ಯನ ಮಗ. ಆದರೆ ಕುಲ ಕಸುಬಿಗೆ ಮಗ ಅಂಟಿಕೊಳ್ಳಲಿಲ್ಲ. ನಾಗಾವಾಸದ ಆಧಿಪತ್ಯಕ್ಕೆ ಬೇಕಾದ ಶಿಕ್ಷಣ ಅವನಿಗೆ ಇಷ್ಟವಾಗಲಿಲ್ಲ. ವೇದವೇದಾಂತಗಳನ್ನು ಅಭ್ಯಸಮಾಡಿ ಸಕಲ ವಿದ್ಯಾ ಪಾರಂಗತನಾದ. ಅಷ್ಟೇ ವೈರಾಗ್ಯಮೂರ್ತಿಯೂ ಆದ. ಲೌಕಿಕ ವ್ಯಾಮೋಹ ಅವನನ್ನು ಸೆಳೆಯ ಲಾಗಲಿಲ್ಲ. ಕೆಸರಿಗಂಟಿದ ಜೀವ ಅರಸುಗುವರಿ ಮಾಯೆಯನ್ನು ಧಿಕ್ಕರಿಸಿ ವಿಶ್ವಪರ್ಯಟನದಲ್ಲಿ ತೊಡಗಿತು. ಹಾದಿಯಲ್ಲಿ ಸಿಕ್ಕಿದ ತೋಟಗಾರ ಗೊಗ್ಗಯ್ಯನಿಗೆ “ತನುವ ತೋಂಟವ ಮಾಡಿ, ಮನವ ಗುದ್ದಲಿ ಮಾಡಿ, ಭ್ರಾಂತಿ ಬೇರನ್ನು ಅಗೆದು ಕಳೆದು ಬ್ರಹ್ಮ ಬೀಜವ ಬಿತ್ತಿ ಪಡೆದ ಫಲವ ಪರಿಯನ್ನು ವಿವರಿಸುತ್ತಾನೆ. ಗೊಗ್ಗಯ್ಯ ನಿರ್ಮಿಸಿದ ಸಾಧಾರಣ ತೋಟಗಾರಿಕೆ ಆಧ್ಯಾತ್ಮದತ್ತ ತಿರುಗುವಂತೆ ಮಾಡುತ್ತಾನೆ. ಮುಂದೆ ಅಗಲಿದ ಅಣ್ಣನಿಗಾಗಿ ಆಳುತ್ತಿದ್ದ ಮುಕ್ತಾಯಿ ಕಾಣಸಿಗುತ್ತಾಳೆ. ಲಿಂಗೈಕ್ಯನಾದ ಅಣ್ಣನಿಗಾಗಿ ಕಣ್ಣೀರಿಡುವುದು ಶ್ರೇಯಸ್ಕರ ವಲ್ಲ; ಅಲ್ಲದೆ ಶಿವ ಬೇರೆ, ಜೀವ ಬೇರೆ ಎಂಬ ದ್ವಂದ್ವವನ್ನುಳಿದು ಜ್ಞಾನಿಯಾಗಬೇಕು ಎಂಬ ತತ್ವೋಪದೇಶವಿತ್ತು ಪ್ರಭು ಹಾದಿ ಯುದ್ದಕ್ಕ ಮೌಢ್ಯವನ್ನು ಖಂಡಿಸಿ, ಸೊನ್ನಲಿಗೆಯಲ್ಲಿ ಸಿದ್ಧರಾಮನನ್ನು ಸಂದರ್ಶಿಸುತ್ತಾನೆ. ಸಿದ್ಧರಾಮ ಅಲ್ಲಿ ಕೆರೆಯ ನಿರ್ಮಾ ಣದ ಕಾರ್ಯದಲ್ಲಿ ತೊಡಗಿರುತ್ತಾನೆ. ಅವನ ಲೌಕಿಕ ಮೋಹವನ್ನು ದೂರ ಮಾಡಿ ಪ್ರಭು ಅವನನ್ನು ಬರಮಾಡಿಕೊಂಡು ಕಲ್ಯಾ ಣಕ್ಕೆ ಹೋಗುತ್ತಾನೆ. ಕಲ್ಯಾಣದಲ್ಲಿ ಬಸವದರ್ಶನವಾಗುತ್ತದೆ. ಅನುಭವಮಂಟಪದಲ್ಲಿ ಶೂನ್ಯ ಪೀಠದ ಅಧ್ಯಕ್ಷನಾಗುತ್ತಾನೆ. ಅನು ಭವ ಗೋಷ್ಠಿ ನಡೆಸಿ ಕಡೆಗೆ ಕದಳಿಯಲ್ಲಿ ಬಯಲಾಗುತ್ತಾನೆ.

ವಸ್ತುವಿನ್ಯಾದಸಲ್ಲಿ ವೈವಿಧ್ಯವೇನೂ ಇಲ್ಲ. ಹರಿಹರ ಚಾಮರಸರ ಹೆಜ್ಜೆಗಳಲ್ಲಿ ಹೆಜ್ಜೆ ಇಟ್ಟು ನಡೆದಿದ್ದಾರೆ ಕಾದಂಬರಿಕಾರರು. ಆದರೆ ಕಲ್ಯಾಣದ ಹಂಬಲ ಅಣ್ಣನನ್ನು ಕಾಣುವ ಹಂಬಲ ತೀವ್ರವಾದುದನ್ನು ತುಂಬಾ ಕಲಾತ್ಮಕವಾಗಿ ನಿರೂಪಿಸಿದ್ದಾರೆ. ಅಲ್ಲಮಪ್ರಭು ವಿನ ವ್ಯಕ್ತಿತ್ವ ಓದುಗರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತದೆ. ಅಣ್ಣ-ಅಕ್ಕ ಇವರ ವಚನಗಳಂತೆ ಅಲ್ಲಮನ ವಚನಗಳೂ ತರಾಸುರವರ ಮೇಲೆ ವಿಶೇಷ ಪ್ರಭಾವ ಬೀರಿವೆ. ಔಚಿತ್ಯಪೂರ್ಣವಾಗಿ ಅವು ಬಳಕೆಯಾಗಿವೆ

ಕಾದಂಬರಿಯಲ್ಲಿ. ಕೃತಿಗೆ ಮುನ್ನುಡಿ ಬರೆಯುತ್ತಾ ಕಾದಂಬರಿಕಾರರು ಹೀಗೆ ಹೇಳಿದ್ದಾರೆ: "ಅಲ್ಲಮಪ್ರಭು ಕೇವಲ ವೀರಶೈವ ಧಾರ್ಮಿಕ ಗುರುವಷ್ಟೇ ಅಲ್ಲ. ಕನ್ನಡಿಗರ ಕುಲಗುರು. ಆತನ ವಚನಗಳು ಸಕಲ ಧರ್ಮಸಾರ. ಆತನೆ ಕಾಲ–ದೇಶ–ಮತಾತೀತ ಜ್ಞಾನದೀವಿಗೆ ಎಂಬುದು ಅರಿವಾಗಿ ಅಭಿಮಾನದೊಂದಿಗೆ ಅರಿವೂ ಬೆಳೆದು ಪ್ರಭುದೇವರಲ್ಲಿ ನನ್ನ ಭಕ್ತಿ ಅಚಲವಾಯಿತು. ಅಂದಿನಿಂದ ಇಂದಿನವರೆಗೂ ಅದೇ ಭಾವನೆ ಉಳಿದು, ಬೆಳೆದು ಬಂದಿದೆ. .ಅಲ್ಲಮಪ್ರಭುವಿನಂ ಥೆಲ್ಲ ಕಾಲಕ್ಕೂ ಜ್ಞಾನದ ಗುರುವಾಗಿ ನಿಲ್ಲುವಂಥ ವ್ಯಕ್ತಿತ್ವದ ಬಗ್ಗೆ ಇತಿಹಾಸ ಗೌಣ. ಅವನ ಬಾಳು ಕಾಲದ ಸೃಷ್ಟಿಯಲ್ಲ: ಸಹಜ ಶಕ್ತಿಯಿಂದ ವಿಕಸಿಸುವ ವ್ಯಕ್ತಿತ್ವದ ಪವಾಡ. ಅದನ್ನೇ ಈ ಕಾದಂಬರಿ ರೂಪದ ವ್ಯಕ್ತಿ ಚಿತ್ರಣದಲ್ಲಿ ಚಿತ್ರಿಸಲು ಯತ್ನಿಸಿದ್ದೇನೆ. ಈ ಪ್ರಯತ್ನದಲ್ಲಿ ನನಗೆ ಎಷ್ಟರಮಟ್ಟಿಗೆ ಸಾರ್ಥಕತೆ ಲಭ್ಯವಾಗಿದೆಯೋ ನಾನು ಹೇಳಲಾರೆ. ಅದು ವಾಚಕರು, ವಿಮರ್ಶಕರು ಹೇಳ ಬೇಕಾದ ಮಾತು."

ಹೌದು, ಹೇಳಬೇಕಾದ್ದನ್ನು ಹೇಳಿಯಾಯಿತು.

# ವಚನ ಸಾಹಿತ್ಯದಲ್ಲಿ ಅದ್ವೈತ

೧

ಅದ್ವೈತದ ಆಲಕ್ಕೆ ಬಿಳಿಲುಗಳು ಹಲವು, ಅವುಗಳಲ್ಲಿ ವಿಶಿಷ್ಟಾದ್ವೈತ ಮತ್ತು ಶಕ್ತಿವಿಶಿಷ್ಟಾದ್ವೈತ ಮುಖ್ಯವಾದವುಗಳು. ಬಂಧ ನದಿಂದ ಬಿಡುಗಡೆ ಹೊಂದಿದ ಜೀವನು ನಿತ್ಯಮುಕ್ತನಲ್ಲೆ ಬೆರೆದು ಸಚ್ಚಿದಾನಂದ ಸ್ವರೂಪನಾಗಿ, ಏಕಮೇವಾದ್ವಿತೀಯ ಬ್ರಹ್ಮನೇ ಆಗಿಬಿಡುತ್ತಾನೆ. ಆದರೆ ವಿಶಿಷ್ಟಾದ್ವೈತದ ಪ್ರಕಾರ ಆ ಸಹಜಾನಂದದಲ್ಲಿ ಭಾಗಿಯೇ ಹೊರತು ಬೆರೆಯಲರ್ಹನಲ್ಲಿ ಜೀವ. ಅಲ್ಲಿ ಜೀವನಿಗಿಂತ ದೇವ ಮಿಗಿಲಾದವನು. ಅವನ ವೈಭವೀಕರಣವೆ ಅಥವಾ ವೈಶಿಷ್ಟ್ಯವೆ ವಿಶೀಷ್ಟಾದ್ವೈತದ ತಿರುಳು. ಶಕ್ತಿವಿಶಿಷ್ಟಾದ್ವೈತ ಅಥವಾ ಶಿವಾದ್ವೈತದಲ್ಲಿಶಿವ–ಶಕ್ತಿಯರ ಅಥವಾ ಪುರುಷ ಪ್ರಕೃತಿಯರ ಅಥವಾ ಸ್ಥಾವರ (ಜಡ) ಮತ್ತು ಜಂಗಂ (ಚೇತನ)ಗಳ ಸಹಯೋಗ ಸಾಧನ ಸಿದ್ಧಿಗಳು ಬಿತ್ತರಗೊಳ್ಳುತ್ತವೆ. ಅಲ್ಲಿ ಜೀವ–ದೇವರ ಐಕ್ಯಾನುಸಂಧಾನ ಸ್ವರೂಪ ಸ್ವಪ್ರವೇದ್ಯವಿದೆ. ಅಂದರೆ ಅಲ್ಲಿ ಜೀವ ಮತ್ತು ದೇವರುಗಳು ಅದ್ವೈತಗೊಂಡು ಮೂರನೆಯ 'ಶಿವ' ಅಥವಾ 'ಶೂನ್ಯ' ಆಗುತ್ತಾರೆ. ಅಲ್ಲಿರುವುದು ಲೋಕ ವ್ಯವಹರಣೆ ಅಲ್ಲ, ಒಂದು ಬಗೆಯ ಸಂಸ್ಮರಣೆ. ಕವಿಯ ಕಾವ್ಯ ಕ್ರಿಯೆಯಂತೆ ಅದು ವಿಶ್ವಾತ್ಮನ ವಿನೂತನ ಸೃಷ್ಟಿಕ್ರಿಯೆ. ಜಗದ್ವಿ ಖ್ಯಾತ ಕವಿ–ವಿಮರ್ಶಕ ಟಿ.ಎಸ್. ಎಲಿಯಟ್ ಕಾವ್ಯಮೀಮಾಂಸಾ ಸಂದರ್ಭದಲ್ಲಿ ಹೇಳುವ 'ವ್ಯಕ್ತಿತ್ವ ನಿರಸನ ಸಿದ್ಧಾಂತ' (Extinction of personality)ವನ್ನು ಇಲ್ಲಿ ಸ್ಮರಿಸಬಹುದು. ಅಲ್ಲಿ Extinct ಅಂದರೆ ಇಲ್ಲವಾಗುವವಲ್ಲ ಎಲ್ಲವಾಗುವುದು. ನೀರಿನ ಒಂದು ಹನಿಗೆ ಸ್ವತಂತ್ರ ಅಸ್ತಿತ್ವವಿದ್ದರೂ, ತನ್ನನ್ನು ತಾನು ಪ್ರದರ್ಶಿಸಿಕೊಳ್ಳುವ ಅಥವಾ ಸಂರಕ್ಷಿಸಿಕೊಳ್ಳುವ, ಇಲ್ಲವೇ ಸಮರ್ಥಿಸಿ ಕೊಳ್ಳುವ ಸಾಮರ್ಥ್ಯ ಅದಕ್ಕಿಲ್ಲ. ಆದರೆ ಅದೇ ಹನಿ ಸಾಗರದಲ್ಲಿ ಬೆರೆತರೆ ಸಾಗರದ ಸಾಮರ್ಥ್ಯ ಪಡೆಯುತ್ತದೆ, ಸಾಗರವೇ ತಾನಾಗುತ್ತದೆ, ಅದೇ ರೀತಿ ವ್ಯಷ್ಟಿ (individual) ಸಮಷ್ಟಿ (universal)ಯಲ್ಲಿ ಬೆರೆದು ನಿರಸನಗೊಂಡು (to become extinct) ಸಮನ್ವಯ ಸಾಧಿಸುತ್ತದೆ. ಅರ್ಥಾತ್ ಕವಿಚೇತನ ಮತ್ತು ವಿಶ್ವಚೇತನಗಳ ಸಹಯೋಗದಿಂದ ಕಾವ್ಯನೂತನ ನಿರ್ಮಾ ಣವಾಗುತ್ತದೆ. ಅಂಥದೇ ಪ್ರಕ್ರಿಯೆ ಶಿವಾದ್ವೈತ ಸಂದರ್ಭದಲ್ಲಿ ಆಗಿ ಮುಗಿಯುತ್ತದೆ. ಅಲ್ಲಿ 'ಜೀವ' ಮತ್ತು 'ದೇವ' ಸೇರಿ 'ಶಿವ' ಅಗುತ್ತಾರೆ: ನೀರು ಮತ್ತು ಅಲೆ ಸೇರಿ ಆದ ಸಾಗರ. ಕಿರಣ ಮತ್ತು ಕಾಂತಿ ಕೂಡಿ ಆದ ಸೂರ್ಯ, ದಳ ಮತ್ತು ಪರಿಮಳ ಬೆರೆತು ಆದ ಹೂವು. ಅದು ಭೇದದೊಳಗಣ ಅಭೇದ, ಶಬ್ದದೊಳಗಣ ನಿಶ್ಯಬ್ದ, ನಾದರ ರೂಪ ಕ್ರೀ ಕಳಾಪ ವಿರಾಮ ಸ್ಥಿತಿ. ವೀರಶೈವ ಪರಿಭಾಷೆಯಲ್ಲಿ ಹೇಳುವುದಾದರೆ ಅದು ಅಂಗ ಮತ್ತು ಲಿಂಗ ಬೆರೆತಾದ ಸಾಮರಸ್ಯ ಸ್ವರೂಪ. ಅಲ್ಲಿ ರವಿಯ ತಾಪವೂ ಇಲ್ಲ, ಶಶಿಯ ಶೈತ್ಯವೂ ಇಲ್ಲ. ಅವೆರಡನ್ನೂ ಗರ್ಭೀಕರಿಸಿಕೊಂಡ ತೇಜೋರೂಪವುಂಟು. ಅದೇ ಶೂನ್ಯ: ಅದೇ ಶಿವ ಸಮಯದ ಮಹಾ ಮಜಲು; ಮಹಾ ಬಯಲು!

ಈ ಬಯಲ ಗಳಿಕೆಗೆ ಷಟ್‌ಸ್ಥಲಗಳು ಸಿದ್ಧ ಸೋಪಾನಗಳು, ಅವುಗಳಲ್ಲಿ ಭಕ್ತ, ಮಾಹೇಶ್ವರ, ಪ್ರಸಾದಿ ಸ್ಥಲಗಳು ಜೀವ (ಅಂಗ) ಪರವಾದವುಗಳು; ಪ್ರಾಣಲಿಂಗ, ಶರಣ, ಐಕ್ಯ ಸ್ಥಲಗಳು ದೇವ (ಲಿಂಗ) ಪರವಾದವುಗಳು. ಆದರೆ ಆ ಆರು ಮಜಲುಗಳಲ್ಲೇ ಶಿವ ಅಥವಾ ಶೂನ್ಯ ಸಿದ್ಧಿ ಸಾಧ್ಯವಿಲ್ಲ. ಅವು ಸಾಧನಾ ವೇದಿಕೆಗಳು, ಸಿದ್ಧಿಯ ನೆಲೆಗಳಲ್ಲ. ಆ ಆರು ಸ್ಥಲಗಳನ್ನು ದಾಟಿದ ಮೇಲೆ ಪ್ರಾಪ್ತವಾಗುತ್ತದೆ ಶೂನ್ಯಸ್ಥಿತಿ ಅಥವಾ ಶಿವದ ನೆಲೆ! ಇಂತಹ ಶಿವಾದ್ವೈತದ ಸ್ಥೂಲ ವಿಶ್ಲೇಷಣೆಯ ಬೆಳಕಿನಲ್ಲಿ ಅದ್ವೈತದ ಕಿರಣಗಳನ್ನು ಬಿಡಿಸಿ ನೊಡಿದಾಗ ಅವು ಷಟ್‌ಸ್ಥಲದ ತುಂಬಾ ತುಂಬಿರುವುದು ಸ್ಪಷ್ಟ ಗೋಚರ. ಕಾರಣ ಶಿವಾದ್ವೈತಕ್ಕೆ ಅದ್ವೈತವೇ ಬುನಾದಿ. ವೀರಶೈವಕ್ಕೆ ಸಂಸ್ಕೃತದ ಆಗಮಗಳು ಹೇಗೆ ಪ್ರಮಾಣವೊ ಕನ್ನಡದ ವಚನಗಳೂ ಹಾಗೆ ಪ್ರಮಾಣ. ಅವು ಸಿದ್ಧಾಂತ ಸ್ಥಾಪನೆಗೈದರೆ ಇವು ಅನುಭವವನ್ನು ಅನುವಾದಿಸಿ ಕೊಟ್ಟಿವೆ. ಇವುಗಳಲ್ಲಿ ಅದ್ವೈತದ ಸೆಲೆಗಳಿವೆ. ಅವುಗಳನ್ನು ಹೆಕ್ಕಿ ತೆಗೆಯುವ ಪ್ರಯತ್ನ ಈ ಪ್ರಬಂಧದ ಮೂಲ ಉದ್ದೇಶ.

॥ ೨ ॥

ಷಟ್‌ಸ್ಥಲವನ್ನಪ್ಪಿದ ಶಿವಾದ್ವೈತ, ದ್ವೈತ, ಅದ್ವೈತಗಳನ್ನೂ ಒಪ್ಪಿದೆ. ಅದರಿಂದಲೆ ಇರಬೇಕು ಅದಕ್ಕೆ 'ದ್ವೈತಾದ್ವೈತ ದರ್ಶನ' ಎಂಬ ಪರ್ಯಾಯನಾಮವೂ ಇರುವುದು. ಷಟ್‌ಸ್ಥಲಗಳಲ್ಲಿ ಮೊದಲ ಮೂರು ಸ್ಥಲಗಳು ದ್ವೈತಕ್ಕೂ ಕಡೆಯ ಮೂರು ಸ್ಥಲ ಗಳು ಅದ್ವೈತಕ್ಕೂ ಮೀಸಲಿವೆ. ಭಕ್ತ, ಮಾಹೇಶ್ವರ, ಪ್ರಸಾದಿ–ಇವು ಅಂಗಸ್ಥಲಗು. ದ್ವೈತವನ್ನು ಗರ್ಭೀಕರಿಸಿಕೊಂಡು ವಿಕಾಸವಾದವುಗಳು. ಪ್ರಾಣಲಿಂಗಿ, ಶರಣ ಮತ್ತು ಐಕ್ಯಗಳು ಲಿಂಗಸ್ಥಲಗಳು! ಅದ್ವೈತದ

ಆವಿರ್ಭಾವದೊಂದಿಗೆ ಅಮೃತತ್ವವನ್ನೈದಿದವು ಗಳು. 'ವನವೆಲ್ಲ ನೀವೆ, ವನದೊಳಗಣ ದೇವ ತರುವೆಲ್ಲ ನೀವೆ. ತರುವಿನೊಳಗಾಡುವ ಖಗಮೃಗವೆಲ್ಲ ನೀವೆ, ಚೆನ್ನಮಲ್ಲಿಕಾ ರ್ಜುನ ಸರ್ವಭರಿತನಾಗಿ ಎನಗೆ ಮುಖದೋರ' ಎಂದು ಬೇಡುವೆಡೆಯಲ್ಲಿ ಭಕ್ತಚೇತನ ಇನ್ನೂ ಭಿನ್ನವಾಗಿ, ಬೇರೆಯಾಗಿ ಆ ಭವನಿಂದ ದೂರ ನಿಂತಿರುತ್ತದೆ. ದ್ವೈತದೇಹಿಯಾಗಿ ದೈನ್ಯತೆ ವ್ಯಕ್ತಪಡಿಸುತ್ತ. ಆದರೆ ಶರಣ ಸ್ಥಲದ ಶರಣ, 'ನಾ ದೇವನಲ್ಲದೆ ನೀ ದೇವನೆ?. . .ನಾ ದೇವ ಕಾಣಾ ಗುಹೇಶ್ವರಾ!' ಎಂದು ಅದ್ವೈತದ ಸಾಕಾರ ಮೂರ್ತಿಯಾಗಿ ನಿಂತು 'ಅಹಂ ಬ್ರಹ್ಮಾಸ್ಮಿ' ಎಂಬ ಘೋಷಣೆಯನ್ನು ಉದ್ಘೋಷಿಸುತ್ತದೆ. ಅಂತೆಯೇ ಚಂದಿಮರಸನು ಹೇಳುವಂತೆ–

ನಿಜವಸ್ತುವೊಂದೇ, ತನ್ನ ಲೀಲೆಯಿಂದ ಎರಡಾಗಬಲ್ಲುದೊಂದೇ,
ಬೇರೆ ತೋರಬಲ್ಲುದದೊಂದೇ. ತನ್ನ ಮರೆಯಬಲ್ಲುದದಂದೇ.
ಆ ಮರವೆಯ ಬಲ್ಲುದದೊಂದೇ.
ತಾನಲ್ಲದನ್ಯವಿಲ್ಲೆಂದರಿದರಿವು ತನೆ ಚೆಮ್ಮಲಿಗೆಯ ಚಿನ್ನರಾಮನು.

ಪರವಸ್ತು ಏಕದಿಂದ ಅನೇಕವಾಗಿ, ಮತ್ತೆ ಏಕರೂಪಿಯಾಗುವ ಸ್ಥಿತಿಸ್ಥಾಪಕತ್ವವುಳ್ಳ ವಸ್ತು, ಅದರಲ್ಲಿ 'ತಾನಲ್ಲದನ್ಯವಿಲ್ಲ' ಎಂಬ ಪ್ರಜ್ಞೆ ಸದಾ ಜಾಗೃತವಿರುತ್ತದೆ. ಇದು ಅದ್ವೈತದ ಆವಿರ್ಭಾವ ಸ್ಥಿತಿ. ಮೊದಲ ಸ್ತರ ಅಥವಾ ಸ್ಥಲಗಳಲ್ಲಿ ಅದ್ವೈತದ ಪ್ರವೇಶವಿಲ್ಲವಾದ್ದರಿಂದ ಕವಿದ್ರಷ್ಟಾರ ಹೇಳುತ್ತಾನೆ–

ದ್ವೈತಿಯಲ್ಲ ಅದ್ವೈತಿಯಲ್ಲ ಕಾಣಾಭೋ ಶರಣ
ದ್ವೈತಾದ್ವೈತವೆಂಬ ಉಭಯ ಕಲ್ಪನೆಯನಳಿದುಳಿದ ವೀರಮಾಹೇಶ್ವರನು
ಪರಶಿವನ ನಿರುತ ಸ್ವಯಾನಂದಸುಖಿ;
ಪರಶಿವನ ಪರಮ ತೇಜದಾದಿ ಬೀಜ;
ಪರಶಿವನ ಪರಮಜ್ಞಾನ ಪ್ರಕಾಶಮಯ ಮರಮಾನಂದದ,
ನಿರುಪಮ ಲಿಂಗದ ಪ್ರಭಾಕಿರಣವೇ ತಾನಾದ ಶರಣನಯ್ಯ
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೆ।
ಎಂದು,

ಆದರೆ ಐಕ್ಯಸ್ಥಲದ ಔನ್ನತ್ಯಕ್ಕೇರಿದ ಚೈತನ್ಯ "ಗಾಳಿ ಗಂಧವನಪ್ಪಿದಂತೆ. ಬಯಲು ಬಯಲನಪ್ಪಿದಂತೆ, ಬೆಳಗು ಬೇಲಗನಪ್ಪಿ ಮಹಾ ಬೆಳಗಾದಂತೆ" ಅದ್ವೈತಾನಂದದಲ್ಲಿ ಪರಿಪೂರ್ಣವೆನಿಸುತ್ತದೆ.

ಆಗ ನುಡಿಯುತ್ತದೆ–
ಮಣ್ಣಿನಿಂದಾದ ಮಡಕೆ, ಚಿನ್ನದಿಂದಾದ ತೊಡಿಗೆ
ಕಂಚಿನಿಂದಾದ ತಳಿಗೆ ಬಟ್ಟಲು, ಕಬ್ಬುನದಿಂದಾದ ಕೊಡಲಿ ಕಂಡನು
ಮೊದಲಾದವರ ಕಾರ್ಯಕಾರಣಕ್ಕೆ ಭಿನ್ನವುಂಟೆ?
ಇಲ್ಲ ಎಂಬಂತೆ.
ಮಹಾಲಿಂಗದಲ್ಲಿ ಜ್ಯೋತಿಯಿಂದ ಜ್ಯೋತಿ ಉದಯಿಸಿದಂತೆ
ಉದಯಿಸಿದ ಶರಣಂಗೆ
ಭಿನ್ನವೆಲ್ಲಿಯದೊ ಶರಣಂಗೂ ಲಿಂಗಕ್ಕೂ!
ಅದ್ವೈತಾನಂದದಿಂದ ಸಂಪೂರ್ಣವನ್ನುಳ್ಳುದಲ್ಲದೆ
ಅಲ್ಲಿ ಮತ್ತೊಂದು ಸಂದೇಹವುಂಟೆ?
ಅಲ್ಲಿ ಸಂಶಯವ ಕಲ್ಪಿಸುವ ಮಾಯಾಭ್ರಾಂತರ ತೋರದಿರಯ್ಯಾ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ;
ಎಂದು,

ಇಂತಹ ಶಿವಯೋಗದ ಸಿದ್ಧ ಶಿಲೆಯನ್ನು ಮೆಟ್ಟಿನಿಮತ ಮಹಾಯೋಗಿ ತನ್ನ ಸಾಹಸದಿಂದ “ಶಿವ” ಅಥವಾ “ಶೂನ್ಯ” ಆಗುತ್ತಾನೆ. ಆ ಪರಿಪೂರ್ಣತೆಗೆ ಅದ್ವೈತ ನೆರವಾಗುತ್ತದೆ. ಶಿವಯೋಗ ಸಾಧನೆಯ ಹಂತದಲ್ಲಿ ದ್ವೈತ ನೆರವಾದರೆ, ಸಿದ್ಧಿಯ ಪ್ರಾಪ್ತಿ ಸಂದರ್ಭದಲ್ಲಿ ಅದ್ವೈತ ಸಹಾಯಕ್ಕೆ ಬರುತ್ತದೆ. ಅಲ್ಲಿ–

ಚಂದ್ರನಿಂದಾದ ಕಲೆ ಚಂದ್ರನ ಬೆರಸಿ ಚಂದ್ರನಾದಂತೆ
ಸೂರ್ಯನಿಂದಾದ ಕಿರಣ ಸೂರ್ಯನ ಬೆರಸಿ ಸೂರ್ಯನಾದಂತೆ
ಅಗ್ನಿಯಂದಾದ ಕಾಂತಿ ಅಗ್ನಿಯನೆ ಬೆರಸಿ ಅಗ್ನಿಯಾದಂತೆ
ದೀಪದಿಂದಾದ ಬೆಳಗು ದೀಪವನೆ ಬೆರಸಿ ದೀಪವಾದಂತೆ
ಸಮುದ್ರದೀಮಥದ ನದಿ ಸಮುದ್ರವನೆ ಬೆರಸಿ ಸಮುದ್ರವಾದಂತೆ
ಪರಶಿವತತ್ವದಲಿ ನಾನುದಯಿಸಿ
ಆ ಪರಶಿವತತ್ವದಲಿಯೆ ಬೆರಸಿ
ಪರಶಿವಯೋಗಿಯಾದೆನು ಕಾಣಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ॥

ಈ ಪರಿಪೂರ್ಣ ಪ್ರಕ್ರಿಯೆ ಎಲ್ಲ ವಚನಕಾರರ ವಚನಗಳಲ್ಲೂ ಕಾಣಸಿಗುತ್ತದೆ. ಅದ್ವೈತಕ್ಕೆ ಸೀಮಿತವಾದಂತಹ ಕೆಲವು ವಚನಗಳನ್ನು ಇಲ್ಲಿ ವಿವೇಚಿಸಬಹುದು.
ಅಣ್ಣನ ಬದುಕಿನಲ್ಲಾದ ಘಟನೆ ಇದ್ದಿರಬೇಕು ಕಳ್ಳರು ಗೋವುಗಳನ್ನು ಅಪಹರಿಸಿದ್ದು. ಆಗ ಭೂತದಯಾಪರನಾದ ಬಸವಣ್ಣ ತನ್ನವರಿಗೆ ಹೇಳುತ್ತಾನೆ–

ಆಕಳ ಕಳ್ಳರು ಕೊಂಡೊಯ್ದರೆನ್ನದಿರಿಂ ಭೋ, ನಿಮ್ಮ ಧರ್ಮ!
ಬೊಬ್ಬಿಡದಿರಿಂ ಭೋ, ನಿಮ್ಮ ಧರ್ಮ!
ಆಱಡದಿರಿಂ ಭೋ, ನಿಮ್ಮ ಧರ್ಮ!
ಅಲ್ಲಿ ಉಂಬರೆ ಸಂಗ, ಇಲ್ಲಿ ಉಂಬರೆ ಸಂಗ!
ಕೂಡಲಸಂಗಮದೇವ ಏಕೋಭಾವ॥

ಎಂದು, ಪೂರ್ಣದೃಷ್ಟಿಗೆ ಇಷ್ಟ ಅನಿಷ್ಟಗಳ ತಾರತಮ್ಯ ತಿಳಿದಿಲ್ಲವಾದ್ದರಿಂದ ಅದು ಉಭಯವನ್ನೂ ಗೌರವಿಸುತ್ತದೆ. ಅರ್ಪಿತ ವಾದ ಅಂಶ ಅಲ್ಲಿ ಇಲ್ಲಿ ಎಲ್ಲೆಡೆಯೂ ಏಕರೂಪದಲ್ಲೆ ಸಲ್ಲುತ್ತದೆ. ದೇವನಿಗೆ ಮುಗಿದ ಕೈ ದೇಗುಲಕ್ಕೂ ಸಲ್ಲುವಂತೆ, ತಾಯಿ ಉಂಡರೆ ತನ್ನ ಗರ್ಭದಲ್ಲಿರುವ ಶಿಶು ತಣಿವಂತೆ, ಬೇರಿಗೆ ನೀರೆರೆದರೆ ವೃಕ್ಷದ ಶಾಖೋಪಶಾಖೆಗಳು ತಣಿವಂತೆ ಎಲ್ಲಿಗೇ ಎರೆಯಲಿ ಅದು ಸಂಗನಿಗೆ ಸಂದ ಶ್ರೇಯಾಂಶವಾಗುತ್ತದೆ. ಈ ಸದ್ಭಾವನೆ ಇದ್ದುದರಿಂದಲೇ “ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ ಅವನು ಕೂಡಲಸಂಗಮ ದೇವನಲ್ಲದೆ ಬೇರೆ ಅಲ್ಲ” ಎಂದು ನುಡಿದದ್ದು. ಇಲ್ಲಿ ಕಳ್ಳ ಮತ್ತು ಒಳ್ಳೆಯವ ಭಿನ್ನರಿದ್ದರೂ ಅವರ ಅಂತರಾತ್ಮಗಳು ಒಂದೇ ಅಲ್ಲದೆ ಎರಡಲ್ಲ. ಅವುಗಳಲ್ಲಿ ಯಾವುದಾದರೊಂದು ತಣಿದರೂ ಮತ್ತೊಂದು ತೃಪ್ತಗೊಂಡಂತೆ ಎಂಬ ಅದ್ವೈತ ಭಾವನೆ. ಏಕೆಂದರೆ ಎರಡೂ ಒಬ್ಬನೇ ಪರಮಾತ್ಮನಿಂದಾದ ಚಿದ್ರೂಪ ಚೈತನ್ಯಗಳು. ಮತ್ತೊಂದು ವಚನ: ಮೃತ್ತಿಕೆ ಒಂದರಲ್ಲಿ ಆದ ಭಾಂಡದಂತೆ,

ಚಿನ್ನ ಒಂದರಲ್ಲಿ ಆದ ಬಂಗಾರದಂತೆ,
ಉದಕ ಒಂದರಲ್ಲಿ ಆದ ವಾರಿಕಲ್ಲಂತೆ,
ಬ್ರಹ್ಮದಿಂದಲಾದ ಜಗವು ಭಿನ್ನವೆಲ್ಲಿಯದು ಸಕಳೇಶ್ವರಯ್ಯಾ?

ಅಂದರೆ ಮಣ್ಣು–ಮಡಕೆ, ಚಿನ್ನ–ಒಡವೆ, ನೀರು–ಆಲಿಕಲ್ಲು ಹೇಗೆ ಅಭಿನ್ನ ಅಂಶಗಳೊ ಹಾಗೆ ಬ್ರಹ್ಮ ಮತ್ತು ಬ್ರಹ್ಮಸೃಷ್ಟಿ ಒಂದೇ ಧಾತುವುಳ್ಳವುಗಳು. ಆದರೆ ಆತ್ಮ ಪರಮಾತ್ಮರ ಐಕ್ಯಾನುಮೋದನೆ ಅಲ್ಲಮಪ್ರಭು ಹೇಳುವಂತೆ, “ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಶಬ್ದದಂತೆ!” ಒಟ್ಟಿನಲ್ಲಿ, “ಮಣ್ಣು ಬಿಟ್ಟು ಮಡಕೆ ಇಲ್ಲ, ನನ್ನ ಬಿಟ್ಟು ದೇವರಿಲ್ಲ” ಎಂಬ ಗಾದೆಮಾತಿಗೆ ಬಂದು ನಿಲ್ಲುತ್ತದೆ ಜಿಜ್ಞಾಸೆ.

ವನವೆಲ್ಲ ನೀವೆ
ವನದೊಳಗಣ ದೇವತರುವೆಲ್ಲ ನೀವೆ
ಚೆನ್ನಮಲ್ಲಿಕಾರ್ಜುನ ಸರ್ವಭರಿತನಾಗಿ ಎನಗೆ ಮುಖದೋರ.
ಎಂದು ಬೇಡಿದ. ಎಲ್ಲೆಡೆಯೂ ಅವನನ್ನೇ ಅರಸಿದ ಅಕ್ಕ ಬಡಗಿನಲ್ಲಿ ನುಡಿಯುತ್ತಾಳೆ–
ಜಲದ ಮಂಟಪದ ಮೇಲೆ ಉರಿಯ ಚಪ್ಪರವಿಕ್ಕಿ
ಆಲಿಕಲ್ಲ ಹಸೆಯ ಹಾಸಿ
ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು
ಎಂದೆಂದಿಗೂ ಬಿಡದ ಬಾಳುವೆಗೆ ಕೊಟ್ಟರೆನ್ನ
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು.
ಎಂದು,

ಅದ್ವೈತ ಪರವಾದ ಅಲೌಕಿಕ ವ್ಯಾಪಾರವನ್ನು ಅಕ್ಕ ಈ ಚೊಕ್ಕ ಪ್ರತಿಮೆಯ ಮೂಲಕ ಸೃಷ್ಟೀಕರಿಸಿದ್ದಾಳೆ. ಜಲ ಅಂದರೆ ಜಡ; ಚಂಚಲ; ಅಸ್ಥಿರ ಎಂದೆಲ್ಲ ಅರ್ಥವುಂಟು. ಪ್ರಸಕ್ತ ಸಂದರ್ಭದಲ್ಲಿ "ಜಲದ ಮಂಟಪದ ಮೇಲೆ" ಎಂದರೆ ಚಂಚಲ ಅಥವಾ ಅಸ್ಥಿರವಾದ ಈ ಭೌತಶರೀರದಲ್ಲಿ, "ಉರಿಯ ಚಪ್ಪರವಿಕ್ಕಿ" ಅಂದರೆ ಜ್ಞಾನವೆಂಬ ತೇಜಸ್ಸನ್ನು ತುಂಬಿ (ಉರಿ ಅಥವಾ ಜ್ಯೋತಿ ಜ್ಞಾನದ ಸಂಕೇತ) "ಆಲಿಕಲ್ಲ ಹಸೆಯ ಹಾಸಿ" ಅಂದರೆ ತೃಪ್ತಿ ಎಂಬ ಮಂಗಳ ವಸ್ತುವನ್ನು ನೆಲಸುವಂತೆ ಮಾಡಿ (ತುಂಬು ತಂಪಿನಿಂದ ಕೂಡಿರುವ ಆಲಿಕಲ್ಲು ತೃಪ್ತಿಯ ಸಂಕೇತ) ಕಾಲಿಲ್ಲದ ಹೆಂಡತಿಗೆ ಅಂದರೆ ಲೌಕಿಕ ಹಂಗಿಲ್ಲದ ಆಸೆ, ಭಾಷೆ, ಮೋಸ, ಆಮಿಷ ಮೊದಲಾದ ಯಾವುದೇ ಕಾಮನೆ ಇಲ್ಲದ ಅಥವಾ ಮೋಹಮಂದಿರವೆನಿಸಿದ ಈ ಜಗತ್ತಿನಲ್ಲಿ, ಕಾಮದ ಕೆಸರಿನಲ್ಲಿ ಕಾಲೂರದ, ತಾವರೆಯ ಎಲೆಯ ಮೇಲಿನ ನೀರ ಹನಿಯಂತೆ ಅಂಟಿಯೂ ಅಂಟದಂತಿರುವ ಜೀವಾತ್ಮನು. "ತಲೆಯಿಲ್ಲದ ಗಂಡ ಬಂದು ಮದುವೆಯಾದನು" ಅಂದರೆ ನಿರ್ಗುಣ ನಿರಾಕಾರನಾದ, ಅಚಿಂತ್ಯ, ಅನೂಹ್ಯ, ಅಗೋಚರನಾದ ದಿವ್ಯ ಮಹಾ ಚೈತನ್ಯನೆನಿಸಿದ ಪರಮಾತ್ಮನಲ್ಲಿ ಐಕ್ಯತೆಯನ್ನು ಪಡೆದಿದ್ದಾನೆ ಐಕ್ಯಸ್ಥಲದ ನಿಃಕಲ ಬ್ರಹ್ಮದಲ್ಲಿ. ಅದು ಎಂದೆಂದಿಗೂ ಬಿಡದ ಬಾಳುವೆ; ಅಂದರೆ ಜೀವ–ದೇವರ ಐಕ್ಯಾನು ಸಂಧಾನದ ಅವಿಭಾಜ್ಯವಾದ ರಾಸಾಯನಿಕ ಕ್ರಿಯೆ. ಅದು ಶಿವಾದ್ವೈತದ ಪರಮ ಸಿದ್ಧಿ; ಅದು ಎಂದೆಂದಿಗೂ ಪ್ರತ್ಯೇಕಗೊಳ್ಳದ, ಲೌಕಿಕ್ಕೆ ಮತ್ತೆ ಮರುಳದ ಶಾಸ್ವತ ಸ್ಥಿತಿ. ಅಂತಹ ನಿಚ್ಚಳ ಪ್ರಭೆಯಲ್ಲಿ ಬೆಳಗು ಬೆಳ ಗನ್ನು ಕೂಡಿ ಬಯಲಾಗಿದೆ. ಮಹಾದೇವಿ ಎಂಬ ಅಭಿದಾನದ ಬೆಳಗು ಚೆನ್ನಮಲ್ಲಿಕಾರ್ಜುನನೆಂಬ ಜ್ಯೋತಿಯಲ್ಲಿ ಸುಲಗ್ನವಾಗಿದೆ.

ಈ ಬಗೆಯ ಸಂಲಗ್ನ ಬರಿಯ ಸಹಯೋಗವಲ್ಲ. ಸಂಮಿಶ್ರಣ ಸಮ್ಮಿಲನವೂ ಹೌದು. ಹಾಲಿಗೆ ಹಾಲು ಬೆರೆತಂತೆ, ನೀರಿಗೆ ನೀರು ಸೇರಿದಂತೆ ಒಂದು ಮತ್ತೊಂದರಲ್ಲಿ ಅವಿಭಾಜ್ಯ ಸ್ವರೂಪದಲ್ಲಿ ಬೆರಗುಗೊಳ್ಳುತ್ತವೆ. ಅಂತಾದಾಗ–

ಎನ್ನ ತನುವಿನೊಳಗೆ ತನುರೂಪವಾಗಿರ್ದಿರಯ್ಯಾ ನೀವು,
ಎನ್ನ ಮನದೊಳಗೆ ಮನರೂಪವಾಗಿರ್ದಿರಯ್ಯಾ ನೀವು,
ಎನ್ನ ಪ್ರಾಣದೊಳಗೆ ಪ್ರಾಣರೂಪವಾಗಿರ್ದಿರಯ್ಯಾ ನೀವು,
ಎನ್ನ ಭಾವದೊಳಗೆ ಭಾವರೂಪವಾಗಿರ್ದಿರಯ್ಯಾ ನೀವು,
ಎನ್ನ ಇಂದ್ರಿಯಗಳೊಳಗೆ ಇಂದ್ರಿಯಂಗಳ ರೂಪವಾಗಿರ್ದಿರಯ್ಯಾ ನೀವು,
ಎನ್ನ ವಿಷಯಂಗಳೊಳಗೆ ವಿಷಯಂಗಳ ರೂಪವಾಗಿರ್ದಿರಯ್ಯಾ ನೀವು,
ಎನ್ನ ತನು ಮನ ಪ್ರಾಣ ಭಾವ ಇಂದ್ರಿಯಂಗಳೆಲ್ಲವು ನಿಮ್ಮವಾಗಿ,
ಇಂತು ಎನ್ನೊಳಗೆ ನೀವು ಈ ಪರಿಯಲ್ಲಿರ್ದಿರಾಗಿ,
ನಾ ನಿಮ್ಮೊಳಗೆ ಚಿನ್ನ ಬಣ್ಣದಂತೆ, ರತ್ನ ದೀಪ್ತಿಯಂತೆ,
ಜ್ಯೋತಿ ಪ್ರಭೆಯಂತಿರ್ದೆನಯ್ಯಾ ಅಖಂಡೇಶ್ವರಾ॥

ಅಲ್ಲಿ ಚಿನ್ನ–ಬಣ್ಣ, ರತ್ನ–ದೀಪ್ತಿ, ಜ್ಯೋತಿ–ಪ್ರಭೆ ಇವು ಅವಿಭಾಜ್ಯ ಅಂಶ ಗಳು. ಅದೇ ಬಗೆಯದು ಜೀವ–ದೇವ ಇವರ ಸಂಲಗ್ನ ಸಂಬಂಧ. ಅವರಿಬ್ಬರೂ ಅಭಿನ್ನರಾಗಿ, ಅಭೇದ್ಯರಾಗಿ, ಅವಿಭಾಜ್ಯ ಅಂಶಗಳಾಗಿ ಶಿವಸ್ಥಿತಿ ಪಡೆಯುತ್ತಾರೆ. ಆ ಅದ್ವೈತ ಸಿದ್ಧಿಯ ಆಚೆಗಿನ "ಶಿವ'ದಲ್ಲಿ ಅನಿರ್ವಚನೀಯ ಸ್ಥಿತಿ! ಅಲ್ಲಿ ಮುಗ್ಧವಾಗು ತ್ತದೆ. ಈ ಅನುಭಾವವನ್ನು ಅಕ್ಕ ಹೀಗೆ ಹೇಳಿದ್ದಾಳೆ–

ಲಿಂಗವೆನ್ನೆ ಲಿಂಗೈಕ್ಯವೆನ್ನೆ, ಸಂಗವೆನ್ನೆ, ಸಮರಸವೆನ್ನೆ.
ಆಯಿತ್ತೆನ್ನೆ, ನೀನೆನ್ನೆ ನಾನೆನ್ನ.
ಚೆನ್ನಮಲ್ಲಿಕಾರ್ಜುನನಲ್ಲಿ ಲಿಂಗೈಕ್ಯವಾದ ಬಳಿಕ ಏನೂ ಎನ್ನೆ!

# ಚಾರ್ವಾಕರು

ಹಿಂದೂ ದರ್ಶನ ಶಾಸ್ತ್ರದಲ್ಲಿ ಚಾರ್ವಾಕದರ್ಶನವೇ ಮೊದಲನೆಯದೆಂದು ಹೇಳುತ್ತಾರೆ. ಈ ದರ್ಶನಕ್ಕೆ ಬೃಹಸ್ಪತಿಯು ಪ್ರವರ್ತಕನೆಂದು ನಂಬುತ್ತಾರೆ. ಅವರು ಬರೆದಿರುವ ಬೃಹಸ್ಪತಿ ಸೂತ್ರವು ಉಪಲಬ್ಧವಿಲ್ಲ. ಈ ಪಾತ್ರಗಳ ಆಧಾರದ ಮೇಲೆ ಚಾರು ವಾಕರೆಂಬ ವಿದ್ವಾಂಸರು ಭಾಷ್ಯವನ್ನು ರಚಿಸಿದರು. ಅವರ ಹೆಸರಿನಿಂದ ಈ ದರ್ಶನಕ್ಕೆ ಚಾರ್ವಾಕ ದರ್ಶನವೆಂದು ಹೆಸರಾಯಿತು ಇಹಲೋಕದ ಬದುಕಷ್ಟೇ ಇವರ ಪ್ರಾಮಾಣ್ಯವಾಗಿರುವುದರಿಂದ ಈ ಮತಕ್ಕೆ ಲೋಕಾಯುತ ಮತವೆಂದೂ ಹೆಸರು. ಪ್ರಾಚೀನ ಗ್ರಂಥಕರ್ತರಿಂದ ಜಾಬಾಲಿ, ಪರಾಶರೂ ಈ ಸಿದ್ಧಾಂತವನ್ನು ಪ್ರಸ್ತಾಪಿಸಿದ್ದಾರೆ. ನ್ಯಾಯದರ್ಶನದ ನ್ಯಾಯಮಂಜರಿ ಯೂ ಮೀಮಾಂಸಾ ದರ್ಶನದ ಶ್ಲೋಕವಾರ್ತಿಕ ಗ್ರಂಥವೂ, ಮಾಧವಾಚಾರ್ಯರ ಸಂದರ್ಶನ ಸಂಗ್ರಹದ ಮೊದಲನೆಯ ಭಾಗವೂ ಚಾರ್ವಾಕಮತದ ಸಿದ್ಧಾಂತಗಳನ್ನು ಕುರಿತು ವಿವರಿಸಿವೆ. ಇದಲ್ಲದೆ ವ್ಯಾಸರು ತಮ್ಮ ಮಹಾಭಾರತದಲ್ಲಿ ಕಣ್ವಾಶ್ರಮ ವನ್ನು ವರ್ಣಿಸುವ ಸಂದರ್ಭದಲ್ಲಿ ಅಲ್ಲಿ ಲೋಕಾಯುತ ವಿದ್ವಾಂಸರೂ ಇದ್ದರೆಂದು ತಿಳಿಸುತ್ತಾರೆ. ಬುದ್ಧನೂ ಸಹ ತನ್ನ ಉಪದೇಶದಲ್ಲಿ ಶರೀರನಾಶವೇ ಆತ್ಮನಾಶವೆಂಬ ಚಾರ್ವಾಕರ ತತ್ವವನ್ನು ಪ್ರಾಸಂಗಿಕವಾಗಿ ಉದಾಹರಿಸಿರುವುದು ಕಂಡುಬರುತ್ತದೆ. ಚಾರ್ವಾಕರು ದೇಹಕ್ಕಿಂತಲೂ ಬೇರೆಯಾದ ಆತ್ಮವೆಂಬ ವಸ್ತುವಿದೆ ಎಂದು ನಂಬುವುದಿಲ್ಲ. ಜನ್ಮಾಂತರಗಳನ್ನೂ, ಪಾಪಪುಣ್ಯ ವೆಂಬ ಅದೃಷ್ಟವನ್ನೂ, ಪರಲೋಕವನ್ನೂ ಇವರು ಒಪ್ಪುವುದಿಲ್ಲ. ಸೃಷ್ಟಿಕರ್ತನಾದ ಭಗವಂತನೊಬ್ಬನು ಇರುವನೆಂದೂ, ಅವನ ಸಂಕಲ್ಪದಿಂದ ಈ ಜಗತ್ತು ನಡೆಯುವುದೆಂದೂ ಅವರು ಒಪ್ಪುವುದಿಲ್ಲ. ಆದುದರಿಂದ ದೈವದ ಅಸ್ತಿತ್ವವನ್ನು ನಂಬದ ಇವರನ್ನು ನಾಸ್ತಿಕರೆಂದೂ ಕರೆಯುತ್ತಾರೆ.

ವೇದಗಳಲ್ಲಿ ಹಿಂದೂ ಷಟ್‌ದರ್ಶನಗಳ ಪ್ರತಿಪಾದನೆಗೆ ಅನುಕೂಲವಾಗುವ ಮಾತುಗಳು ಬಂದಿವೆ. ಋಗ್ವೇದದ ಹತ್ತನೆಯ ಮಂ ಡಲದಲ್ಲಿ "ಈ ಪ್ರಪಂಚವು ಯಾರಿಂದ ಹುಟ್ಟಿತೆಂಬುದನ್ನು ಯಾರು ಬಲ್ಲರು? ಯಾರು ಹೇಳುವರು?" ಎಂಬ ಸಂದೇಹವನ್ನು ಅಂದಿನ ಋಷಿಯೊಬ್ಬನು ವ್ಯಕ್ತಪಡಿಸಿದ್ದಾನೆ. ನಾಸ್ತಿಕ ಮತಕ್ಕೆ ಇದು ಬೀಜವೆಂದು ಕೆಲವರು ಹೇಳುತ್ತಾರೆ. ಇದರಂತೆ ಭಾಗವತ ದಲ್ಲಿ ಬರುವ "ಜೀವೋ ಜೀವಸ್ಯ ಜೀವನಮ್" ಜೀವಿಯು ಬದುಕಲು ಜೀವಿಯೇ ಜೀವನಾಧಾರವೆಂಬ ಮಾತು ಪುರಾಣಗ ಳಲ್ಲೂ ಚಾರ್ವಕಸಿದ್ಧಾಂತ ಬಂದಿದೆ ಎಂದು ಹೇಳುತ್ತಾರೆ. ದೇವರ ಸ್ತಿತ್ವವನ್ನೂ, ಪರಲೋಕವನ್ನೂ, ಜನ್ಮಾಂತರಗಳನ್ನೂ, ಪಾಪ ಪುಣ್ಯಗಳನ್ನೂ, ಮೋಕ್ಷವನ್ನೂ ಒಪ್ಪದ ಚಾರ್ವಾಕಮತ ವನ್ನು ಎಲ್ಲ ವೈದಿಕ ಮತಗಳೂ ಖಂಡಿಸಿವೆ. ಹಾಗಾದರೆ ಈ ಚಾರ್ವಾಕಮತದ ದರ್ಶನವೇನು? ಸಿದ್ಧಾಂತಗಳಾವುವು? ಚಾರ್ವಾಕರ ಪ್ರಕಾರ ಇಂದ್ರಿಯಗಳಿಗೆ ಗೋಚರವಾಗುವ ವಸ್ತುಗಳು ಮಾತ್ರ ಸತ್ಯ. ಮನುಷ್ಯನ ಸುಖ ದುಃಖಗಳಿಗೆ ಪಾಪ ಪುಣ್ಯಗಳು ಕಾರಣವಲ್ಲ. ಏಕೆಂದರೆ ಇವು ಅದೃಷ್ಟವಾದುವು. ಹಾಗಾದರೆ ಸುಖ ದುಃಖಗಳಿಗೆ ಕಾರಣಗಳೇನು? ಜಗತ್ತಿನಲ್ಲಿ ಪ್ರತಿ ಯೊಂದು ವಸ್ತುವಿನಲ್ಲೂ ಒಂದೊಂದು ಬಗೆಯ ಗುಣಸ್ವಭಾವಗಳಿವೆ. ಪಂಚಭೂತಗಳಿಂದ ನಿರ್ಮಿತವಾದ ಈ ಪಾರ್ಥಿವ ದೇಹಕ್ಕೆ ಸುಖದುಃಖಗಳಿಗೆ ಕಾರಣವಾಗುವ ಗುಣಸ್ವಭಾವ ಜನ್ಯವಾಗಿ ಬಂದಿದೆ. ಬೆಂಕಿಗೆ ಸುಡುವ ಗುಣ ಹೇಗೆ ಸಹಜವೋ ಹಾಗೆ ದೇಹದ ಗುಣ ಸ್ವಭಾವದಿಂದ ಜನನ ಮರಣಗಳ ಸುಖದುಃಖಗಳು – ಎಂದು ಚಾರ್ವಾಕರು ನಂಬುತ್ತಾರೆ.

ಚಾರ್ವಾಕರ ಮತದಂತೆ ಪುನರ್ಜನ್ಮ, ಪಾಪಪುಣ್ಯಗಳಾಗಲೀ ಇರುವುದಿಲ್ಲ. ಅವರು ಕಾರ್ಯಕಾರಣ ಭಾವವನ್ನು ಒಪ್ಪುವುದಿಲ್ಲ. ಅವರು ಸ್‌ವಭಾವವಾದವನ್ನು ಒಪ್ಪುತ್ತಾರೆ. ಒಂದು ಬೀಜವು ಭೂಮಿಯಲ್ಲಿ ಬಿದ್ದರೆ ನಿಸರ್ಗವಸ್ತುಗಳಾದ ಗಾಳಿ ಮಳೆಗಳಿಂದ ಶಕ್ತಿ ಪಡೆದು, ತನ್‌ನಲ್ಲಿ ಸ್ವಭಾವಜನ್ಯವಾಗಿ ಹುದುಗಿರುವ ಗಿಡದ ಗುಣಗಳನ್ನು ಅಭಿವೃದ್ಧಿಪಡಿಸಿಕೊಂಡು ಮೊಳಕೆಯೊಡೆದಲು ಎಲೆ ಕೊಂಬೆಗಳಾಗಿ, ಮೊಗ್ಗಾಗಿ ಪುಷ್ಪವಾಗಿ ಫಲದಲ್ಲಿ ಹೇಗೆ ಪರಿಸಮಾಪ್ತಿ ಹೊಂದುವುದೋ ಹಾಗೆಯೇ ಮನುಷ್ಯನ ಜೀವನ. ಅವರ ತದಂತೆ ಪ್ರತ್ಯಕ್ಷ ಗೋಚರಗಳಾದ ಪೃಥ್ವೀ, ಜಲ, ತೇಜಸ್ಸು, ವಾಯುವೆಂಬ ನಾಲ್ಕು ತತ್ವಗಳು ಅಥವಾ ವಸ್ತುಗಳು ಪರಿಣಾ ಮಗೊಂಡು ಶರೀರ ಮೊದಲಾದ ವಸ್ತುಗಳಿಂದ ಕೂಡಿದ ಪ್ರಪಂಚವು ಹುಟ್ಟಿದೆ. ಈ ನಾಲ್ಕು ಭೂತಗಳ ಸುಯೋಗದಿಂದ ಬುದ್ಧಿ, ಜ್ಞಾನ ಎಂಬ ಚೈತನ್ಯ ಶಕ್ತಿ ಹೊರಬಿದ್ದಿದೆ. ಇದನ್ನು ಅವರು ಭೌತಶಕ್ತಿ ಎಂದು ಕರೆಯುತ್ತಾರೆ. ಈ ಭೌತಶಕ್ತಿಯು ತನ್ನ ಸ್ವಭಾವ ಗುಣಕ್ಕೆ ಅನುಗುಣವಾಗಿ ಆತ್ಮ, ಮನಸ್ಸು, ಸುಖ, ದುಃಖ, ಇಚ್ಛೆ, ಕಾಮ, ಕ್ರಓಧ ಮೊದಲಾದ ರೂಪಗಳನ್ನು ಹೊಂದುತ್ತದೆ. ಶರೀರದ ನಿರ್ಮಿತಿಗೆ ಕಾರಣವಾದ ಸ್ಥೂಲವಸ್ತುಗಳಾದ ಭೂತಗಳು ಬೇರೆಬೇರೆಯಾದರೆ ಚೈತನ್ಯಶಕ್ತಿ–ಪ್ರಾಣಶಕ್ತಿ ಉಡುಗುತ್ತದೆ. ಇದೇ ಮರಣವೆನಿಸುವುದು. ಜೀವನವೆಂದರೆ ಚೈತನ್ಯಶಕ್ತಿಯ ಪ್ರಾದುರ್ಭಾವ, ಮರಣವೆಂದರೆ ಈ ಶಕ್ತಿಯ ನಾಶವೆಂದು ಚಾರ್ವಾಕರು ತಿಳಿಯುತ್ತಾರೆ. ಈ ದೇಹವು ಆರೋಗ್ಯವಾಗಿದ್ದರಎ

ಸುಖ; ಮುಪ್ಪಡರಿ ನಾಶವಾದರೆ ದುಃಖ, ಆದುದರಿಂದ ಶರೀರದ ಆಯರಾರೋಗ್ಯ ಐಶ್ವರ್ಯಗಳನ್ನು ಗಳಿಸುವುದವಿ ಜೀವನದ ಪರಮಗುರಿ ಎಂದು ಚಾರ್ವಾಕರು ತಿಳಿಯುತ್ತಾರೆ. ಹಾಗಾದರೆ ಸ್ವರ್ಗಸುಖ ನರಕದುಃಖಗಳೆಂಬುವೇನು? ಮೃಷ್ಟಾನ್ನ ಭೋಜನ, ಜನಾನುರಾಗ, ಆರೋಗ್ಯಬಾಗ್ಯ ಇವುಗಳಿಂದ ಉಂಟಾಗುವ ವಿಷಯ ಸುಖವವಿ ಸ್ವರ್ಗಾನಉಭವ. ವ್ಯಾಧಿ, ದಾರಿದ್ರ್ಯ,, ಹಿಂಸೆ, ಪರಾವಲಂಬನ, ದೈನ್ಯತೆ ಮೊದಲಾದ ಅಹಿ ತವನ್ನು ಉಂಟುಮಾಡುವ ಉಪದ್ರವಗಳು ನರಕಾನುಭವ, ಚಾರ್ವಾಕರ ಪಾಲಿಗೆ ಪುರುಷಾರ್ಥವೆಂದರೆ ಅರ್ಥ ಮತ್ತು ಕಾಮ ಗಳು. ಧರ್ಮವಾಗಲೀ, ಮೋಕ್ಷವಾಗಲೀ ಅವರಿಗೆ ಪ್ರಯೋಜನವಿಲ್ಲದ್ದು. ಹುಟ್ಟಿದ ಪ್ರತಿಯೊಬ್ಬ ಮಾನವಜೀವಿಯೂ ಕೃಷಿ, ವಾಣಿಜ್ಯ, ದಂಡನೀತಿಗಳಿಂದ ಅರ್ಥಕಾಮಗಳನ್ನು ಸಂಪಾದಿಸಿ ಜೀವನಪರ್ಯಂತ ಸುಖವಾಗಿರುವುದವಿ ಜೀವನದ ಗುರಿ ಎಂದು ಚಾರ್ವಾಕರು ನಂಬುತ್ತಾರೆ. ಇದೇ ಬದುಕಿನ ಪ್ರತ್ಯಕ್ಷ ಪ್ರಯೋಜನ. ಆದುದರಿಂದ ಈ ದೇಹ ಪೋಷಣೆಗೆ ಅಗತ್ಯ ವಾದ ದ್ರವ್ಯವನ್ನು ಸಾಲ ಮಾಡಿಯಾದರೂ ಗಳಿಸಿಕೊಳ್ಳುವುದೇ ಜೀವನಧರ್ಮ. ಇದೇ ಮನುಷ್ಯಜನ್ಮದ ಮುಖ್ಯ ಪ್ರಯೋಜನ. ಇದನ್ನೇ "ಋಣಂ ಕೃತ್ವಾಘೃತಂ ಪಿಬ" ಎಂಬ ಸೂತ್ರದಲ್ಲಿ ಚಾರ್ವಾಕರು ಅಳವಡಿಸಿದ್ದಾರೆ. ವೇದಗಳಲ್ಲಿ ಚಾರ್ವಾಕ ದರ್ಶನಕ್ಕೆ ಇಂಬು ಕೊಡುವ ಅನೇಕ ಮಾತುಗಳು ಕಂಡು ಬರುತ್ತವೆ. ಹುಟ್ಟಿದ ಪ್ರತಿಯೊಂದು ವಸ್ತುವೂ ನಾಶಹೊಂದಲೇಬೇಕು. ಇದು ಪ್ರಕೃತಿ ಸತ್ಯ. "ಜಾತಸ್ಯಾಹಿ ಧ್ರುವಂ ಮರಣಂ". ಮನುಷ್ಯನ ಮನಸ್ಸೆಂಬುದು ಆಹಾರದ ಪರಿ ಣಾಮ ರೂಪವಾದುದೆಂದು ಛಾಂದೋಕ್ಯೋಪನಿಷತ್ತಿನಲ್ಲಿ ಆರನೆಯ ಅಧ್ಯಾಯದಲ್ಲಿ ಹೇಳಿದೆ. ಚಾರ್ವಾಕರು ಇದನ್ನೇ ಚೈತನ್ಯ ಶಕ್ತಿಯ ಅಭಿವ್ಯಕ್ತಿ ಎಂದು ಹೇಳುವುದು. ಇದರಂತೆ ಬೃಹದಾರಣ್ಯಕೋಪನಿಷತ್ತಿನಲ್ಲಿ ಮನುಷ್ಯನ ಶರೀರದ ನಾಶದ ಜೊತೆಯ ಲ್ಲಿಯೇ ಅವನಲ್ಲಿ ಕಂಡುಬರುವ ಚೈತನ್ಯಶಕ್ತಿಯೂ ನಾಶವನ್ನು ಹೊಂದುವುದೆಂದು ಹೇಳಿದೆ. ಇದನ್ನೇ ಚಾರ್ವಾಕರು ಚೈತನ್ಯದ ಲಯ ಅಥವಾ ನಾಶವೆಂದು ಹೇಳುತ್ತಾರೆ. ಚಾರ್ವಾಕರಲ್ಲಿ ಸುಶಿಕ್ಷಿತ, ಧೂರ್ತ ಎಂಬ ಭೇದವಿದೆ. ಸುಶಿಕ್ಷಿತ ಚಾರ್ವಾಕ ಮತ ದಲ್ಲಿ ಪ್ರತ್ಯಕ್ಷವಾದ ವಿಷಯದಲ್ಲಿ ಅನುಮಾನವನ್ನು ಪ್ರಮಾಣವಾಗಿ ಒಪ್ಪುವುದು. ಧೂರ್ತ ಚಾರ್ವಾಕಮತವು ಇದನ್ನು ತಿರಸ್ಕರಿಸು ತ್ತದೆ. ಆದರೂ ಚಾರ್ವಾಕದರ್ಶನದಲ್ಲಿ ಪ್ರತ್ಯಕ್ಷವೊಂದೇ ಸರ್ವಸಿದ್ಧ ಪ್ರಮಾಣ–ಅನುಮಾನವು ಪ್ರಮಾಣವಲ್ಲ. ಇದರಂತೆ ಶಬ್ದವೂ ಪ್ರಮಾಣವಲ್ಲ. ವೇದಗಳು ಶಬ್ದರೂಪವಾಗಿರುವುದರಿಂದ ಅವು ಪ್ರಮಾಣವಾಗಲಾರದು. ಇನ್ನು ಆಪ್ತವಾಕ್ಯ. ಇದೂ ಚಾರ್ವಾಕ ರಿಗೆ ಪ್ರಮಾಣವಲ್ಲ. ಆಪ್ತವಾಕ್ಯವು ವೇದಗಳಂತೆ ಇತರ ದಾರ್ಶನಿಕರಿಗೆ ಪ್ರಮಾಣವೆನಿಸಿದರೂ, ಚಾರ್ವಾಕರು ಇದನ್ನು ಒಪ್ಪುವು ದಿಲ್ಲ. ಆಪ್ತನೆಂದರೆ ಯಾರು? ಒಂದು ವಸ್ತುವನ್ನು ಒಬ್ಬನು ಸರಿಯಾಗಿ ಮೊದಲು ತಿಳಿದು ಅದನ್ನು ಬೋಧಿಸುವ ಶಬ್ದಗಳನ್ನು ಸರಿಯಾಗಿ ಉಚ್ಚರಿಸುವ ವ್ಯಕ್ತಿ ಎಂದು ಅರ್ಥ. ಇಂಥ ಯಥಾರ್ಥ ಜ್ಞಾನವನ್ನು ಹೊಂದಿ, ಸರಿಯಾದ ರೀತಿಯಲ್ಲಿ ತಿಳಿಸುವ ಆಪ್ತರು ಜಗತ್ತಿನಲ್ಲಿ ದೊರಕುವುದು ಕಷ್ಟ. ಯಾಕೆಂದರೆ ಯಾರನ್ನು ನಾವು ಆಪ್ತರೆಂದು ತಿಳಿದು ವ್ಯವಹರಿಸುತ್ತೇವೆಯೋ ಅವರು ಭ್ರಾಂತಿಗೆ ಒಳಗಾಗಿರುತ್ತಾರೆ. ಮನುಷ್ಯನ ಸುಖದ ಅಪೇಕ್ಷೆ ಇಂದ್ರಿಯ ಪಾಟವವನ್ನು ಹೊಂದಿಕೊಂಡಿರುತ್ತದೆ. ಅದು ಕಡಿಮೆಯಾ ದರೆ ಸುಖದ ಅಪೇಕ್ಷೆಯೂ ಕಡಿಮೆಯಾಗುತ್ತದೆ. ಇಂಥ ಮನುಷ್ಯನು ಯಥಾರ್ಥಜ್ಞಾನ ಹೊಂದಿರುವ ಆಪ್ತನೆಂದು ಹೇಗೆ ತಿಳಿ ಯಲು ಸಾಧ್ಯ? ಒಂದು ವೇಳೆ ಅಂಥ ಆಪ್ತನು ದೊರಕಿದರೂ ಅದು ಆಕಸ್ಮಿಕವಾದುದೇ ಹೊರತು ಸಾಮಾನ್ಯ ನಿಯಮವಾಗಿರು ವುದಿಲ್ಲವೆಂದು ಚಾರ್ವಾಕರ ನಿಲವು. ಶಬ್ದಪ್ರಾಮಾಣ್ಯವನ್ನು ಒಪ್ಪದ ಚಾರ್ವಾಕರು ವೇದಗಳನ್ನು ಪ್ರಮಾಣವಾಗಿ ಅಂಗೀಕರಿಸುವು ದಿಲ್ಲ. ವೇದವು ಪುರುಷನಿರ್ಮಿತ. ಅದು ಅಪೌರುಷೇಯವಲ್ಲ ಎಂಬುದು ಅವರ ವಾದ. ವೇದಗಳಲ್ಲಿ ಬರುವ ಪರಸ್ಪರ ವಿರೋಧ ಅಭಾಸ ಸಂಗತಿಗಳು ಅವು ಪುರುಷನಿರ್ಮಿತವೆಂಬುದಕ್ಕೆ ಸಾಕ್ಷಿ ಎನ್ನುತ್ತಾರೆ ಚಾರ್ವಾಕರು. ಲೌಕಿಕ ಸುಖವೇ ಇಂದ್ರಿಯ ಸುಖವೇ ಪುರುಷಾರ್ಥವೆನ್ನುವ ಚಾರ್ವಾಕ ಮತವು ಮನುಷ್ಯನ ಸ್ವಭಾವಕ್ಕೆ ಅನುಸಾರಿಯಾಗಿಲ್ಲ ವೆಂದು ಪ್ರತಿಪಕ್ಷದವರ ಟೀಕೆ. ಏಕೆಂದರೆ ಸುಖದ ಕಲ್ಪನೆ ವ್ಯಕ್ತಿ ವ್ಯಕ್ತಿಗೆ ಭಿನ್ನವಾದುದು. ಅದು ದೇಹಸುಖದಂತೆಯೇ ಮಾನಸಿಕ ವ್ಯಾಪಾರ. ಸುಖವನ್ನು ಅನುಭವಿಸುವ ವ್ಯಕ್ತಿಗೆ ಸ್ವಲ್ಪವಾದರೂ ಅತ್ಮನಿಗ್ರಹ, ಸಂಯಮ ಅಗತ್ಯ. ಸುಖವನ್ನು ಪಡೆಯಲು ತ್ಯಾಗವೂ ಬೇಕು. ಇಂಥ ತ್ಯಾಗ ವಾರ್ವಾಕನಿಗೆ ಹೊರತಾದ ಸಂಗತಿ. ಪ್ರಾಚೀನ ಮೀಮಾಂಸಕರಾದ ಶಬರ, ಪ್ರಾಭಾಕರ ಮುಂತಾದವರು ಕೆಲವು ಅಂಶಗಳಲ್ಲಿ ಚಾರ್ವಾಕದರ್ಶನವನ್ನು ಒಪ್ಪಿದ್ದಾರೆ. ಅವರು ಜೀವಾತ್ಮ, ಜನ್ಮಾಂತರಗಳನ್ನು ಒಪ್ಪಿದ್ದಾರೆ. ಆದರೆ ದೇವರನ್ನು, ದೇವಲೀಕ, ನರಕಗಳನ್ನು ಒಪ್ಪುವುದಿಲ್ಲ. ಅವರಿಗೆ ರಾಕ್ಷಸರಾಗಲೀ, ಪಿಶಾಚಿಗಳಾಗಲೀ ಅಸ್ತಿತ್ವದಲ್ಲಿ ಇರುವುದಿಲ್ಲ. ಈ ಜಗತ್ತಿನ ಸುಖದುಃಖಗಳು ಅದರ ಅನುಭವಗಳೇ ಸ್ವರ್ಗನರಕ ಗಳು. ಅನ್ನಸತ್ರ, ಕೆರೆ, ಕಾಲುವೆ ಮುಂತಾದ ಧರ್ಮಕಾರ್ಯಗಳನ್ನು ಪರೋಪಕಾರ ಬುದ್ಧಿಯಿಂದ ಮಾಡುವವನಿಗೆ ಮಾನಸಿಕ ವಾಗಿ ಸುಖವುಂಟು. ಇದರ ಹೊರತು ಬೇರೆ ಧರ್ಮವಿಲ್ಲ– ಎಂದು ಶಬರಸ್ವಾಮಿಗಳು ಹೇಳುತ್ತಾರೆ. ದೇವರಿಲ್ಲವೆಂದಮೇಲೆ ದೇವ ದೇವನಾದ ಪರಮೇಶ್ವರನೆಲ್ಲಿ? ವಿಗ್ರಹಾರಾಧನೆ ಇಲ್ಲ. ನೈವೇದ್ಯವಿಲ್ಲ. ಅನುಗ್ರಹ ನಿಗ್ರಹಗಳೂ

ಇಲ್ಲವೆಂದು ಪ್ರಾಭಾಕರ ಗ್ರಂಥ ಪ್ರಕರಣ ಸಂಚಿಕೆ ತಿಳಿಸುತ್ತದೆ. ವೈದಿಕ ಮತವನ್ನು ಒಪ್ಪುವ ಕುಮಾರಿಲಭಟ್ಟರು ಪಉರಾಣಕಥೆಗಳು ನೀತಿಬೋಧಕ ಕಥೆ ಮಾತ್ರ ಎಂದು ಹೇಳುತ್ತಾರೆ. ಪ್ರಪಂ ಚಕ್ಕೂ ಸೂರ್ಯಚಂದ್ರಾದಿಗಳಿಗೂ ಸೃಷ್ಟಿಯಿಲ್ಲ. ಅರ್ವವೂ ಅನಾದಿ. ಜನ್ಮಪರಂಪರೆಗೆ ಅವಸಾನವಾದ ಮೋಕ್ಷವಿಲ್ಲ– ಎಂದು ಅವರು ಹೇಳುತ್ತಾರೆ.

ಈ ಅಭಿಪ್ರಾಯಗಳನ್ನು ನೋಡಿದರೆ ಇವರೆಲ್ಲರ ಮೇಲೆ ವಾರ್ವಾಕದರ್ಶನದ ಪ್ರಭಾವವು ಬಿದ್ದಿರುವುದನ್ನು ಕಾಣಬಹುದಾಗಿದೆ. ಇಷ್ಟೆಲ್ಲ ಹೇಳಿದಮೇಲೂ ವಾರ್ವಾಕಮತದಲ್ಲಿ ಕೆಲವು ಸ್ವೀಕಾರಾರ್ಹ ಸಂಗತಿಗಳಿವೆ. ಚಾರ್ವಾಕರು ದೇವರನ್ನೂ, ಪಾಪಪುಣ್ಯ ಗಳನ್ನೂ, ಜನ್ಮಾಂತರಗಳನ್ನೂ, ಕರ್ಮಫಲವನ್ನೂ ಒಪ್ಪುವದಿಲ್ಲವಾದುದರಿಂದ ವ್ಯಕ್ತಿಗಳಲ್ಲಿ ರಾಗದ್ವೇಷಗಳಿಗೆ ಎಡೆ ಇರುವುದಿಲ್ಲ.  ಏಕೆಂದರೆ ವ್ಯಕ್ತಿಯ ಸುಖದುಃಖಗಳು ಬೀಜರೂಪ ನ್ಯಾಯದಂತೆ ವ್ಯಕ್ತಿಗಳ ಸ್ವಭಾವದಿಂದ  ಉಂಟಾಗುವ ಅಂಶಗಳು ಎಂದು ತಿಳಿದ ಮೇಲೆ ಮನಸ್ಸಿಗೆ ಒಂದು ಬಗೆಯ ಸಮಾಧಾನ ಉಂಟಾಗುತ್ತದೆ. ಚಾರ್ವಾಕದರ್ಶನದಲ್ಲಿ ಪುರುಷ ಪ್ರಯತ್ನಕ್ಕೆ ಮಹತ್ವದ ಸ್ಥಾನವಿದೆ. ಪುರುಷಪ್ರಯತ್ನದಿಂದ ಸಾಧಿಸಲಾಗದ ಮಾನವಕಲ್ಯಾಣ ಯಾವುದೂ ಇಲ್ಲ. ಈ ದೃಷ್ಟಿಯಿಂದ ಇಂದಿನ ವೈಜ್ಞಾನಿಕ ಜಗತ್ತಿನಲ್ಲಿ ಚಾರ್ವಾಕರು ಪರತಿಪಾದಿಸಿದ ಲೋಕಾಯುತಮತವು ಪ್ರಭಾವಶಾಲಿಯಾಗಿದ್ದರೆ ಆಶ್ಚರ್ಯವಿಲ್ಲ.

# ಕನ್ನಡದಲ್ಲಿ ಸಣ್ಣಕತೆ ಮತ್ತು ಅದರ ಭವಿಷ್ಯ

ಕನ್ನಡಿಗರ ಸಂಖ್ಯೆ ಸುಮಆರು ಮೂರು ಕೋಟಿ; ಕನ್ನಡದಲ್ಲಿರುವ ಕತೆಗಳು ಮೂರು ಸಾವಿರ; ಕನ್ನಡದ ಕತೆಗಾರರು ಮುನ್ನೂರು ಮಂದಿ. ಕನ್ನಡ ಕತೆಗಳಲ್ಲಿ ಅಭಿರುಚಿ, ಆಸಕ್ತಿ ಉಳ್ಳವರು ಮಾತ್ರ ಮೂವರೇ! ಇಂಗ್ಲಿಷ್ ಸಾಹಿತ್ಯಕ್ಷೇತ್ರದಿಂದ ಆಮ ದಾಗಿ ಬಂದ ಈ ಸಾಹಿತ್ಯ ಪ್ರಕಾರ ಇತರ ಪ್ರಕಾರಗಳಷ್ಟು ಸರ್ವಾಂಗಸುಂದರವಾಗಿ ಬೆಳೆಯಲಿಲ್ಲ ಕನ್ನಡದಲ್ಲಿ. ಅದಕ್ಕೆ ನಾವು ಅಂದರೆ ಲೇಖಕರು ಮತ್ತು ಓದುಗರು ಕಾರಣರು. ಮೊದಲನೆಯದಾಗಿ, ಕನ್ನಡದ ಕತೆಗಾರರು ತಮ್ಮ ಪ್ರತಿಭೆ, ಪ್ರಯತ್ನಗಳನ್ನು ಈ ಕ್ಷೇತ್ರಕ್ಕೇ ಮೀಸಲಿಡಲಿಲ್ಲ; ಅದರ ತಂತ್ರವನ್ನು ಸಂಪೂರ್ಣವಾಗಿ ವಶಪಡಿಸಿಕೊಂಡು, ಅಭಿವ್ಯಕ್ತಿಗೆ ಅರಿಯಾಗಿ ಅಳವಡಿಸಲಿಲ್ಲ, ಕನ್ನಡ ಕತೆಗಾರರ ಮತ್ತೊಂದು ದೌರ್ಬಲ್ಯವೆಂದರೆ ಕಾದಂಬರಿಯ ಗೀಳು. ಹಲವರ ಸಾಹಿತ್ಯ ಕೃಷಿ ಆರಂಭವಾದದ್ದು ಸಣ್ಣಕತೆ ಯಲ್ಲಿ ಆದರೆ ಮುಂದುವರೆದದ್ದು ಕಾದಂಬರೀವಲಯದಲ್ಲಿ. ಕನ್ನಡ ಸಾಹಿತಿಗಳ ಈ ದ್ರೋಹ ಸಣ್ಣ ಕತೆಯ ಅವನತಿಗೆ ಕಾರಣ ವಾಯಿತು. ಅವರ ಈ ರೀತಿಯ ತಿರಸ್ಕಾರದ ತಾಯಿಬೇರು ಇರುವುದು ಮಾರುಕಟ್ಟೆಯ ಪೆಟ್ಟಿಗೆಯಲ್ಲಿ; ಅದನ್ನು ತುಂಬಹೊರಟ ನಮ್ಮ ಜನರ ಒಲವಿನಲ್ಲಿ. ಪುಸ್ತಕದ ಅಂಗಡಿಗೆ ಹೋದ ಜನ ಕಾದಂಬರಿಗಳನ್ನು ಬೇಡಿತೇ ಹೊರತು ಸಣ್ಣಕತೆಗಳನ್ನಲ್ಲ. ಹೀಗಾಗಿ ಸಣ್ಣಕತೆಯನ್ನು ಬೆಳೆಯುವ ರೈತರೇ ನಮ್ಮಲ್ಲಿ ಕಡಿಮೆಯಾಗುತಾ ಬಂದರು. ಆದರೂ ಕರುತಿಂದ ಕರಕೆಯಂತೆ ಮಳೆಬಂದಾಗ ಚಿಗುರಿ, ಬೇಸಗೆಯಲ್ಲಿ ಒಣಗಿ, ಮತ್ತೆ ಯಾವಾಗಲೋ ನಾಲ್ಕಾರು ಟಿಸಿಲುಗಳೊಡನೆ ಕಾಣಿಸಿಕೊಂಡು, ತನ್ನ ಹಸಿರು ದೋಣಿ ಯಲ್ಲಿ ಮಂಜಿನ ಮಣಿಗಳನ್ನು ತುಂಬಿಕೊಂಡು ಸ್ವರ್ಣೋದಯದ ಅರುಣ ಕಿರಣಗಳೊಡನೆ ಸರಸವಾಡಿದ್ದೂ ಉಂಟು.ೕ ಅದರ ಬಾಳಿನ ಅಂತಹ ನಾಲ್ಕು ಬಂಗಾರದ ದಿನಗಳನ್ನು ಇಲ್ಲಿ ನೆನೆಯೋಣ.

**ಪ್ರಾಚೀನರು**

ಸಣ್ಣಕತೆಯಲ್ಲಿ ದೊಡ್ಡ ಹೆಸರೆಂದರೆ ಮಾಸ್ತಿ! ಅವರು ಕನ್ನಡಕ್ಕೆ ಕೊಟ್ಟ ನಿಜವಾದ ಆಸ್ತಿಯೆಂದರೆ ಕತೆ ಒಂದೇ! ಏಕೆಂದರೆ ಅವರ ಭಾವ ಭಾವನೆಗಳು, ಅವಕ್ಕೆ ತಕ್ಕ ಭಾಷೆ. ಸುಸಂಸ್ಕೃತಿಯ ಸುಂದರ ಅಭಿವ್ಯಕ್ತಿ ಮೊದಲು ಕಾಣಿಸಿಕೊಂಡಿದ್ದು ಅವರ ಸಣ್ಣಕತೆಗ ಳಲ್ಲಿ. ಈ ಸಿದ್ಧಿ ಅವರ ಕಾದಂಬರಿಗಾಗಲೀ, ಕಾವ್ಯಕ್ಕಾಗಲೀ, ನಾಠಕಕ್ಕಾಗಲೀ ಇಲ್ಲ. ಮಾತಿನ ನಯ, ನವರು ಜಾಣ್ಮೆ, ಕುಸುರಿ ಕೆಲಸದ ಕಲಾ ಕೈವಾಡಕ್ಕೆ ಸಣ್ಣಕತೆಯಷ್ಟು ಬೇರಾವ ಪ್ರಕಾರವೂ ಅವರಿಗೆ ಒಲಿಯಲಿಲ್ಲ. ಅದರಿಂದಲೂ ಕನ್ನಡ ಸಣ್ಣಕತೆಗೆ ಐವತ್ತು ವರ್ಷ ತುಂಬಿದ್ದರೂ, ಪಂಜೆ, ಕೆರೂರರಂಥ ಹಿರಿಯರಿದ್ದರೂ ಮಾಸ್ತಿ ಎಲ್ಲರಿಗಿಂತ ದೊಡ್ಡಣ್ಣನಾಗಿರುವುದು. ಆಗ ಇವರೊಡನೆ ದುಡಿದವರು ಆನಂದ, ಆನಂದಕಂದ, ಗೊರೂರು, ಸಿ.ಕಿ. ವೆಂಕಟರಾಮಯ್ಯ, ಅಶ್ವತ್ಥ, ವರದರಾಜ ಹುಯಿಲುಗೋಳ, ಗೋಪಾ ಲಕೃಷ್ಣರಾಯರು ಹಾಗೂ ಕೃಷ್ಣಕುಮಾರ ಕಲ್ಲೂರರು. ಇವರಲ್ಲಿ ಮಾಸ್ತಿಯವರಷ್ಟೇ ಮಹತ್ವದ ಸ್ಥಾನವನ್ನು ಸಣ್ಣಕತೆಗೆ ದೊರಕಿಸಿ ಕೊಟ್ಟವರು ಆನಂದ, ಕಲ್ಲೂರ ಮತ್ತು ಗೊರೂರರು. ಆನಂದರ ಹಾಲ್ದಿಂಗಳಂತಹ ನಗೆ, ಸವಿದಷ್ಟೂ ಸಿಹಿಕೊಡುವ ಪ್ರಣಯ ಚಿತ್ರಣಗಳು ಕನ್ನಡದಲ್ಲಿ ಆನಂದರ ಅನಂತರ ಮತ್ತೆ ಬರಲೇ ಇಲ್ಲ ಎನ್ನಬಹುದು. ಶ್ರೀ ಕಲ್ಲೂರರು ಅಷ್ಟೇ ತಮ್ಮ ಕಾವ್ಯಮಯ ಶೈಲಿಯಲ್ಲಿ ವೈನೋದಿಕ ಚಿತ್ರಣಗಳನ್ನು ಬಿಡಿಸಿ ಬಿಡಿಸಿ ಓದುಗರನ್ನು ಆಕರ್ಷಿಸಿ, ಬದುಕಿನ ಆಳಕ್ಕೆ ಇಳಿಯುತ್ತಾರೆ. ಗೊರೂರರ ಕತೆಗಳಲ್ಲಿ ಮಣ್ಣಿನ ವಾಸನೆ ಇದೆ. ನಗರಜೀವನದ ಎಣ್ಣೆಯ ಕಮಟು ವಾಸನೆಗಿಂತ ಇವರು ನೀಡುವ ನಮ್ಮ ನೆಲದ ಸೊಗಡು ಹೆಚ್ಚು ಹಿತಕರವಾಗಿದೆ.

**ಪ್ರಗತಿಶೀಲರು**

ಪ್ರಾಚೀನರ ಹಲವು ಆದರ್ಶಗಳನ್ನೂ, ಮಾತಿನ ಮಡಿನವನ್ನೂ ಧಿಕ್ಕರಿಸಿ ಮುನ್ನುಗ್ಗಿದವರು ಪ್ರಗತಿಶೀಲರು. ಅ.ನ.ಕೃ. ಈ ಯಜ್ಞಕ್ಕೆ ಯಜಮಾನರು ಕಟ್ಟೀಮನಿ ಅಧ್ವರ್ಯು, ತ.ರಾ.ಸು. ಹೋತೃ, ನಿರ<ಜನ ಉದ್ಗಾತೃ, ಕೋ, ಚೆನ್ನಬಸಪ್ಪನವರು ಬ್ರಹ್ಮರಾದರು. ಈ ಪ್ರಚಂಡ ಯಜ್ಞಕ್ಕೆ ಆದ ವೆಚ್ಚ ಹೆಚ್ಚಾಯಿತೇ ಹೊರತು ಅದರಿಂದ ದೊರೆತ ಫಲ ಮಾತ್ರ ಸ್ವಲ್ಪವೇ! ಅದಕ್ಕೆ ಕಾರಣ ಪ್ರಗತಿಶೀಲರ ದುಡುಕುತನ, ಸಂತಮರಹಿತವಾದ ರಚನೆ ಎಂದು ಹೇಳಬಹುದು. ಬಂಗಾಳದ ಬಂಕಿಮರನ್ನೂ ಕನ್ನಡ ದೇಶದಲ್ಲಿ ಧಿಡೀರನೆ ಧುಮುಕಿಸಿಬಿಟ್ಟರು. ಅಷ್ಟು ಬೇಗ ಕೈ ಬಿಟ್ಟೂ ಬಿಟ್ಟರು. ಹಲವರದು ಸೋಡಾ ಬಾಟ್ಲಿಯ ಸ್ಪಿರಿಟ್ ಆಯಿತು. ಮತ್ತೆ ಕೆಲವರು ಕಾದಂಬರಿಯ ಕಡೆಗೆ ತಮ್ಮ ನಿಷ್ಠೆಯದೆ ಎಂಬುದನ್ನು ತೋರಿಸಿ ಕೊಂಡರು; ಇನ್ನು ಕೆಲವರು ಹಿರಿಯರನ್ನೆಲ್ಲಾ ಬಯ್ದುಕೊಂಡು ತಿರುಗಾಡಿದರು. ತಮ್ಮ ತಮ್ಮಲ್ಲೇ ಐಕ್ಯಮತ್ಯವಿಲ್ಲದೆ, ದುಡಿಮೆ ಸಾಲದೆ, ಶ್ರದ್ಧೆ ಇಲ್ಲದೆ ಹಾಳುಮಾಡಿದರು ಸಣ್ಣತೆಯನ್ನು. ಪ್ರಗತಿಶೀಲರ ಸೋಲಿನಿಂದ ಕೆಟ್ಟ ಪರಿಣಾಮವಾಯಿತು ಸಣ್ಣಕತೆಗೆ. ಹಲವು ಕೃತಕ ಬರಹಗಳು ಹೆಸರಿಗಾಗಇ, ಹಣಕ್ಕಾಗಿ, ಪತ್ರಿಕೆಗಾಗಿ, ಪ್ರತಿಷ್ಠೆಗಾಗಿ– ಒಟ್ಟಿನಲ್ಲಿ ಸಂತೆ ಹೊತ್ತಿಗೆ ಮೂರು ಮೊಳ ದಾಟು ನೂಲಿನ ಗೀಚು ಗೆರೆಗಳಾದವು. ಹಲವು ಇಂಗ್ಲಿಷ್ ಮತ್ತಿತರ ಭಾಷೆಯ ಅನುಕರಣಗಳು, ಛಾಯೆಗಳು ಇಲ್ಲವೇ

ಕೃತಿಚೌರ್ಯಗಳು. ಇವುಗಳ ಜೊತೆಯಲ್ಲಿ ಹಲಕೆಲವು ಒಳ್ಳೊ ಳ್ಳೆಯ ಭಾಷಾಂತರಗಳೂ ಬಂದವು. ಈ ಕೀರ್ತಿ ಶ್ರೀ ಎ.ಎನ್. ಮೂರ್ತಿರಾವ್, ಕುಮಾರಿ ಎಂ.ಎಸ್. ಸುಲೋಚನ, ಶ್ರೀಮತಿ ನಿರುಪಮಾ, ಶ್ರೀ ಭೀಮರಾವ್, ಶ್ರೀಮತಿ ಸಾವಿತ್ರಮ್ಮ ಮೊದಲಾದವರಿಗೆ ಸಲ್ಲಬೇಕು. ಆದರೂ ಕನ್ನಡದ ಸ್ವತಂತ್ರ ಕಥಾರಚನೆ ಕುಸಿದುಬಿದ್ದಿತು. ಇದರಿತೋ ಅರಯದೆಯೋ ಅಂತೂ ಹಲವರು ಹೂತುಹೋಗಿದ್ದ ಕಥಾರಥವನ್ನು ಮತ್ತೆ ಹೆಗಲುಕೊಟ್ಟು

---

[೧] ಕನ್ನಡದ ಸಣ್ಣ ಕತೆ ನಡೆದು ಬಂದ ದಾರಿಯಲ್ಲಿ ಹಲವು ನಿಲುಗಡೆಗಳಿವೆ. ಮುಖ್ಯವಾಗಿ ಕಾಮನಬಿಲ್ಲು, ನವಕಥಾಗುಚ್ಛ (ಭಾಗ ೧-೨). ಅತ್ಯುತ್ತಮ ಸಣ್ಣ ಕತೆಗಳು, ಕಥಾ ಪಲ್ಲವ, ತ್ರಿವೇಣಿ, ಹೊಸ ಕ್ಷಿತಿಜ, ಕಾಮಧೇನು, ದಿಗಂತ, ಒಂದಿಷ್ಟು ಕತೆಗಳು, ಐದು ಹತ್ತು- ಇವುಗಳಲ್ಲಿ ಗಣನೀಯ ಗುಣವುಳ್ಳವೆಂದರೆ ಶ್ರೀ ಸೂರ್ಯನಾರಾಯಣ ಚಡಗರ ಕಾಮಧೇನಿ. ಪ್ರಪಂಚದ ಸಾಹಿತ್ಯದಲ್ಲೇ ಪ್ರಥಮ ಪ್ರಯತ್ನ ಅನ್ನಿಸಿಕೊಂಡ ಕನ್ನಡದ ಸುಮಾರು ೧೦೫ ಕತೆಗಾರ್ತಿಯರ ಸಂಕಲನ; ಮತ್ತೊಂದು ಪ್ರಸಿದ್ಧ ಕತೆಗಾರರ ಕಥಾಗುಚ್ಛ ಶ್ರೀ ಮಾವಿನಕೆರೆ ರಂಗನಾಥ್‌ರವರ ಸಂಕಲನ ಗ್ರಂಥ 'ದಿಗಂತ'. ಮೂರನೆಯದು ಕನ್ನಡ ಸಾಹಿತ್ಯ ಪರಿಷತ್ತಿನ 'ಅತ್ಯು ತ್ತಮ ಸಣ್ಣ ಕತೆಗಳು', ನಾಲ್ಕನೆಯದು ಮನೋಹರ ಗ್ರಂಥಮಾಲೆಯವರ ಹೊಸ ಕ್ಷಿತಿಜ-

ಎತ್ತಿದರು. ಅವರೇ ಆಧುನಿಕರು. ಒಂದರ್ಥದಲ್ಲಿ ಇವರ ಕಾಲ ೧೯೫೦ರಿಂದ ೬೦ರವರೆಗೆ. ಇದನ್ನು ಸಣ್ಣಕತೆಯ ಪನರುತ್ಥಾನ ಕಾಲ ಎನ್ನಬಹುದು.

ಆಧುನಿಕರು ನಿಜಕ್ಕೂ ಪ್ರತೀಭಾಶಲಿ ರೂವಾರಿಗಳು. ಅವರು ಕಡೆದು ನಿಲ್ಲಿಸಿದ ಒಂದೊಂದೂ ಒಬ್ಬೊಬ್ಬ ಶೀಲಾಬಾಲಿಕೆಯರು! ತ್ರಿವೇಣಿಯವರ ಮನೋವೈಜ್ಞಾನಿಕ ಚಿತ್ರಗಳು; ವೀರಭದ್ರ ಮತ್ತು ಅನಪಮಾ ನಿರಂಜನರ ವೈಚಾರಿಕ ಪ್ರತಿ ಮೆಗಳು, ಕೆ.ಎಂ. ಸೀತಾರಾಮಯ್ಯನವರ ನಗ್ನ ಶಿಲ್ಪಗಳು, ಬೆಸಗರಹಳ್ಳಿ ರಾಮಣ್ಣನವರ ಮಣ್ಣಿನ ಮನಮೋಹಕ ಮೂರ್ತಿಗಳು- ಇವು ಕನ್ನಡಕ್ಕೆ ಕೀರ್ತಿ ತಂದಿವೆ. ಈ ಕೀರ್ತಿಗೆ ಮೆರಗು ತುಂಬಿದವರು ಪ್ರೇಮಾಭಟ್, ಎಚ್.ಎಸ್. ಪಾರ್ವತಿ, ಎಂ.ಕೆ. ಇಂದಿರಾ ಶಾಂತಾದೇವಿ ಕಣವಿ, ವಾಣಿ, ಜಯಲಕ್ಷ್ಮಿ, ಶ್ರೀಪಂಚ, ಸೂ. ಸುಬ್ರಹ್ಮಣ್ಯಂ, ಭಾರತೀಸುತ, ಶಾಂತಾ ಲಿಂಗೇಗೌಡ, ಚಿರಂಜೀವಿ, ದೊಡ್ಡರಂಗೇಗೌಡ, ಜೀಶಂಪ, ಕಮಲಾ ಹಂಪನಾ, ಶ್ರೀಕಾಂತ ಮೊದಲಾದ ಸುಮಾರು ನೂರು ಮಧಿ ಕನ್ನಡ ಲೇಖಕ ಲೇಖಕಿ ಯರು. ಇವರೆಲ್ಲರೂ ಸಣ್ಣಕತೆಯ ಮರ್ಯಾದೆಯನ್ನು ಕಾಪಾಡಿದವರಾಗಿದ್ದಾರೆ.

**ನವ್ಯರು**

ಕ್ರಿ.ಶ. ೧೯೬೦-೭೦ರ ಅವಧಿಯಲ್ಲಿ ಕನ್ನಡ ರಸಿಕರಿಗೆ ಆಧುನಿಕರ ದೃಷ್ಟಿಯೂ ಹಳಸಲಾಯಿತು! ಕೋಟೆ, ಪೇಟೆ, ಹೋಟೆಲ್, ನಾಟಕ, ಚಹಾಪಾನದ ಚಿತ್ರಣಗಳು ಸ್ವಲ್ಪ ಬೇಸರ ತಂದವು. ಲೇಖಕರಲ್ಲಿ ಹೊಸ ಪ್ರಜ್ಞೆ ಬಲಿದು, ಸಾಹಿತ್ಯದಲ್ಲಿ ಸಾವಯವ ಶಿಲ್ಪ ಸೃಷ್ಟಿಯಾಗತೊಡಗಿತು. ಮುಕ್ತ ರಚನೆಗೆ ಕೈಹಾಕಿದ ಕನ್ನಡ ಲೇಖಕರು ಸಣ್ಣಕತೆಯ ನೆಲದಲ್ಲೂ ಅಷ್ಟಿಷ್ಟು ಕೈಯಾಡಿಸಿದರು; ಆದರೆ ನವ್ಯ ಕಾವ್ಯದಷ್ಟು ಮಟ್ಟದಲ್ಲಲ್ಲ. ಕವನ ರಚನೆ ಬೇಸರವಾದಾಗ ಬದಲಾವಣೆಯ ಬಯಕೆಯಿಂದ. ವೈವಿಧ್ಯಕ್ಕಾಗಿ ಆಗೊಂದು ಈಗೊಂದು ಸ್ಯಾಂಪಲ್ ಕತೆಗಳನ್ನು ಒಗೆದರು. ಕೆಲವೇ ಕೆಲವು ಉತ್ತಮ ಕತೆಗಳು ಈ ನವ್ಯರ ಕೊಡುಗೆಗಳಾಗಿ ಉಳಿದಿವೆ. ನವ್ಯರು ಬದುಕಿನ ವಿಡಂಬನೆಗಳನ್ನು ಹಲವಾರು ಸಂಕೇತಗಲಲ್ಲಿ ಸೂಚಿಸಿ ಕೊಟ್ಟರು. ಅವರು ಆಡುವ ಮಾತು ಮೇಲುನೋಟಕ್ಕೆ ಸರಳವಾಗಿ ಕಂಡರೂ, ಆಂತರ್ಯದಲ್ಲಿ ಆಳವಾದ ಸಂವೇದನೆಗೆ ಸಾಕ್ಷಿಯಾಗಿದೆ. ನಮ್ಮ ನೆಲ, ನಮ್ಮ ಜಲ, ನಮ್ಮ ಸಂಸ್ಕೃತಿ ಇವುಗಳ ಕಡೆಗೆ ವಿಶೇಷ ಆಸ್ಥೆ ಇದೆ ಈ ಬರಹಗಾರರಲ್ಲಿ. ಪ್ರಮುಖರೆಂದರೆ, ಯು.ಆರ್. ಅನಂತಮೂರ್ತಿ, ಪಿ. ಲಂಕೇಶ್, ಪೂಚಂತೇ, ಡಿ. ಲಿಂಗಯ್ಯ, ಖಾಸನೀಸ, ಸದಾಶಿವ, ಶಾಂತಿನಾಥ ದೇಸಾಯಿ, ರಾಮಚಂದ್ರ ಶರ್ಮ, ಯಶವಂತ ಚಿತ್ತಾಲ, ಈಶ್ವರ ಚಂದ್ರ ಇವರುಗಳು. ಮನಸ್ಸು ಮಾಡಿದರೆ ಇವರೆಲ್ಲರೂ- ಇವರ ಜೊತೆಯಲ್ಲಿ ವೀರಭದ್ರ, ಬೆಸಗರಹಳ್ಳಿ ರಾಮಣ್ಣ, ವಿಜಯಾ, ಪ್ರೇಮಾಭಟ್, ಅನುಪಮಾ ನಿರಂಜನ ಇವರುಗಳು ಸಣ್ಣಕತೆಯ ಕೀರ್ತಿಯನ್ನು ಹೆಚ್ಚಿಸಿ ದಿಗಂತ ವಿಶ್ರಾಂತಗೊಳಿಸಬ ಲ್ಲರು. ಇವರುಗಳಲ್ಲಿ ಅದಕ್ಕೆ ಬೇಕಾದ ಶಕ್ತಿ ಇದೆ; ಸತ್ವ ಇದೆ; ಆದರೆ ಅದು ಸಣ್ಣಕತೆಯ ಸೇವೆಗೆ ಮೀಸಲಾಗಬೇಕು ಅಷ್ಟೆ.

**ನವೋನವ್ಯರು**

ಇವರಿನ್ನೂ ಬಂದಿಲ್ಲ; ಅಥವಾ ಬಂದಿದ್ದರೂ ನಮ್ಮ ಕೈಗೆ ಸಿಕ್ಕಿಲ್ಲ. ಇವರನ್ನು ಕಾಣುವ ಕಾಲ ಬಹುದೂರ ಉಳಿದಿಲ್ಲ ಅನ್ನಿಸು ತ್ತದೆ. ಇನ್ನು ಕೇವಲ ಒಂದೇ ಒಂದು ದಶಕದಲ್ಲಿ ಅಂದರೆ ೧೯೮೦ರ ಹೊತ್ತಿಗೆ ಇಂದಿನ ನವ್ಯರೇ ಅಥವಾ ಆಧುನಿಕರೇ ಅಂದಿನ ನವೋನವ್ಯರಾದರೂ ಆಗಬಹುದು. ಈ ಶುಭ ಸೂಚನೆಗಳು ಹಲವು ಆಧುನಿಕ ಕತೆಗಾರರಲ್ಲೂ ಇವೆ. ಇವರೆಲ್ಲರೂ

ಅಂದು ಹೊಸ ಕ್ಷಿತಿಜದ ಮೇಲೆ ಹೊಂಬಣ್ಣದಣ್ಣಗಳಾಗಿ ಬೆಳಗುತ್ತಾರೆ. ಆ ದಿನದ ಕಥಾರೂಪವೇ ಬೇರೆ. ಇನ್ನೆರಡು ವರ್ಷಗಳಲ್ಲಿ ತರಾಸು ರವರು ತಮ್ಮ ಕತೆಯೊಂದಕ್ಕೆ ಇಟ್ಟ ೦–೦=೦ ಎಂಬ ಸಾಂಕೇತಿಕ ಶಿರೋನಾಮೆಯ ಕತೆಯ ಶರೀರಕ್ಕೂ ಇಳಿದು, ಬರೀ ಸಂಜ್ಞೆ ಇಲ್ಲದೇ ಪ್ರಜ್ಞೆಗೆತ್ತಿದ ಪ್ರತೀಕವಾಗಿ ಉಳಿದು, ಬೆಳೆಯಬಲ್ಲುದು.

# ಕಾನೂನು, ಭಾಷೆ ಮತ್ತು ನಾವು

ಬದುಕಿನಲ್ಲಿ ಬೇಕಬಿಟ್ಟಿ ಎಂದು ಭಾವಿಸಿರುವ ಒಂದು ವಸ್ತುವೆಂದರೆ ಕಾನೂನು. ಮುಂಜಾನೆ ನಾವು ನಮ್ಮ ಕಛೇರಿಗೆ ಹೋಗಲು ಒಂದು ಬಸ್ ಹಿಡಿಯುತ್ತೇವೆ ಎಂದು ಇಟ್ಟುಕೊಳ್ಳೋಣ; ಆದರೆ ಆ ಬಸ್ಸಿನವರ ಸಂಗಡ ನಮಗೆ ಒಂದು ಒಪ್ಪಂದವಿದೆ ಎಂಬ ಅರಿವೇ ನಮಗಿರುವುದಿಲ್ಲ. ಕಛೇರಿಯಲ್ಲಿ ನಾವು ಕೆಲಸ ನಿಯಮಗಳನ್ನು ಪಾಲಿಸಬೇಕಾಗುತ್ತೆ; ಹಲವು ಸೇವಾನಿ ಯಮಗಳಿಗೆ ಅಲ್ಲಿ ನಾವು ಬದ್ಧರು. ನಾವು ಏನನ್ನಾದರೂ ಕೊಳ್ಳು ಪೇಟೆಗೆ ಹೋದರೆ ಯಾವುದೇ ರೀತಿಯ ಮೋಸ, ವಂಚನೆ ಗಳಿಗೆ ಬಲಿಯಾಗದಂತೆ ಕನೂನು ನಮ್ಮ ಬೆನ್ನನ್ನು ಕಾಯುತ್ತೆ. ನಾವು ಮನೆ ಮುಟ್ಟಿದಾಗ ಕೊಂಡು ತಂದ ವಸ್ತುಗಳು ಕಿಂಚಿತ್ತೂ ಮುಕ್ಕಾಗಲಿಲ್ಲ ಎಂಬ ಭರವಸೆ ನಮಗಿರುತ್ತೆ. ಕಾರಣ ಕಾನೂನು ಅವುಗಳ ಬಗ್ಗೆ ಕಾಳಜಿ ವಹಿಸಿದೆ ಎಂಬುದು ನಮ್ಮ ನಂಬಿಕೆ. ದಿನೇ ದಿನೇ ಜಗತ್ತು ಸಂಕೀರ್ಣಗೊಳ್ಳುತ್ತಾ ಇದೆ. ನಮ್ಮ ನಮ್ಮ ಹಕ್ಕುಗಳನ್ನು ಚೆನ್ನಾಗಿ ತಿಳಿದುಕೊಂಡಿರಬೇಕಾದ್ದು ಪೌರರಾದ ನಮ್ಮೆಲ್ಲರ ಕರ್ತವ್ಯ. ಕನಿಷ್ಟಪಕ್ಷ; ಯಾವುದಾದರೂ ಒಂದು ತೊಂದರೆಗೆ ಸಿಕ್ಕಿಕೊಂಡಾಗ ಕಾನೂನು ರೀತ್ಯಾ ನಮ್ಮ ನಿಲುವೇನು ಎಂಬಷ್ಟಾದರೂ ಅರಿವು ನಮಗೆ ತಿಳಿದಿರಬೇಕು. ನಿಜಹೇಳಬೇಕೆಂದರೆ ಕಾನೂನಿನ ಬಗ್ಗೆ ನಾವು ಸರಿಯಾಗಿ ತಿಳಿದುಕೊಂಡಿದ್ದರೆ ತಕರಾರುಗಳನ್ನು ನಮ್ಮಲ್ಲೇ ಇತ್ಯರ್ಥಪಡಿಸಿಕೊಂಡು ನ್ಯಾಯಾಲಯದಿಂದ ದೂರವಿರಲು ಸಾಧ್ಯ. ಭಾರತೀಯರು ತಮ್ಮ ತಮ್ಮಲ್ಲೇ ಕಿತ್ತಾಡಿಕೊಂಡು ಕೋರ್ಟಿನ ಕಟ್ಟೆ ಹತ್ತುವುದರಲ್ಲಿ ನಿಸ್ಸೀಮರು. ಯಾವುದೇ ಹಗರಣವನ್ನು ಕೂಡಲೇ ಇತ್ಯರ್ಥಗೊಳಿಸದೆ ಅನಂತ ಕಾಲದವರೆಗೆ ಲಂಬಿಸುವುದರಲ್ಲಿ ಈ ದೇಶ ತನ್ನದೇ ಆದ ವಿಶ್ವದಾಖಲೆಯನ್ನು ಸ್ಥಾಪಿಸಿದೆ. ಕ್ರಿ.ಶ. ೧೨೦೫ರಲ್ಲಿ ದಾಖಲಾದ ಒಂದು ದಾವೆ ಇದಕ್ಕೆ ಪುಣೆಯ ನ್ಯಾಯಾಧೀಶರಿಂದ ಇತ್ಯರ್ಥಗೊಂಡು ತೀರ್ಪುಕಂಡದ್ದು ೧೯೬೬ರಲ್ಲಿ; ಅಂದರೆ ಇದಕ್ಕೆ ೭೬೧ ವರ್ಷಗಳೇ ಬೇಕಾದವು. ಈ ದಾವೆ ಧಾರ್ಮಿಕ ಉತ್ಸವಗಳಲ್ಲಿ ಆದ್ಯತೆ ಹಾಗೂ ಸಾರ್ವಜನಿಕ ಸಮಾರಂಭಗಳಲ್ಲಿ ಅಗ್ರಮಾನ್ಯ ಸ್ಥಾನಗಳ ಹಕ್ಕಿಗೆ ಸಂಬಂಧಿಸಿದ್ದು ಎಂದು ವಿಶ್ವ ದಾಖಲೆಯ ಪುಸ್ತಕವು ಹೇಳುತ್ತದೆ. ನಿಜ ಜೀವನದಲ್ಲಿ ಸಣ್ಣಪುಟ್ಟ ವಿಷಯಗಳಿ ಗೆಲ್ಲಾ ನೀವು ನಿಮ್ಮ ಹಕ್ಕುಗಳನ್ನು ಪ್ರತಿಪಾದಿಸುವುದು ಸಾಧ್ಯವಿಲ್ಲದ ಮಾತು. ಒಂದು ವೈದ್ಯಕೀಯ ನಿಘಂಟಿನ ಪಟ್ಟಿಯಲ್ಲಿ ಪ್ರತಿಯೊಂದು ರೋಗದ ಲಕ್ಷಣಗಳನ್ನು ಕುರಿತ ವಿವರ ಇದ್ದರೂ ತನ್ನ ಮನೆ ಕೆಲಸದಾಕೆಯ ಮೊಣಕಾಲಿನ ರೋಗದ ಲಕ್ಷಣವನ್ನು ತಿಳಿಸುವ ವಿವರ ಅದರಲ್ಲಿಲ್ಲವೆಂದು ಆಂಗ್ಲ ಹಾಸ್ಯ ಬರಹಗಾರ ಜೆರೋಮ್ ಕೆ.ಜೆರೋಮ್ ಚಿತ್ರಸಿರುವ ಒಂದು ಪಾತ್ರವು ಹೇಳುತ್ತದೆ. ಅಂಥ ಆಧರದ ಮೇಲೆ ಕಾನೂನು ರೀತ್ಯಾ ನಿಮ್ಮ ನಿಮ್ಮ ಹಕ್ಕನ್ನು ನೀವು ಪ್ರತಿಪಾದಿಸ ಲಾರಿರಿ. ಆದಾಗ್ಯೂ ಆಧಾರದ ಮೇಲೆ ತನ್ನ ಹಕ್ಕನ್ನು ಪ್ರತಿಪಾದಿಸಿಕೊಂಡು ಬಂದ ನಿದರ್ಶನ ಇದೆ; ಕೋರ್ಟು ವ್ಯಾಜ್ಯಗಳ ಮೂಲಕವೇ ತನ್ನ ಹಕ್ಕುಗಳನ್ನು ಪ್ರತಿಪಾದಿಸಿಕೊಳ್ಳುವುದರಲ್ಲಿ ನಿಷ್ಣಾತನಾದ ನ್ಯೂಯಾರ್ಕಿನ ಒಬ್ಬ ವ್ಯಕ್ತಿಯು ಕೆಟ್ಟ ದೂರವಾಣಿ ಸೇವೆ, ಅನಿಲ ಮತ್ತು ವಿದ್ಯುಚ್ಛಕ್ತಿಗಳ ಮೇಲಿನ ದುಬಾರಿ ಚಾರ್ಜು, ಅಸಮರ್ಪಕವಾದ ವಿದ್ಯುತ್ ಉಪಕರಣಗಳ ಜೋಡಣೆ ಇತ್ಯಾದಿಗಳಿಗಾಗಿ ೮೦,೭೧೦ ಡಾಲರುಗಳನ್ನು ಡ್ಯಾಮೇಜ್ ತೆಗೆದುಕೊಂಡ.

ಪ್ರಜಾಸತ್ತೆಯ ಪ್ರತಿ ಪ್ರಜೆಗೂ ಕನಿಷ್ಠ ಪ್ರಮಾಣದಲ್ಲಾದರೂ ಕಾನೂನಿನ ಪ್ರಜ್ಞೆ ಇರಲೇಬೇಕು. ಏಕೆಂದರೆ ಅನೇಕವೇಳೆ ಸರ್ಕಾರ ಗಳು ಅವನ ಮೂಲಭೂತ ಹಕ್ಕುಗಳನ್ನೇ ಕಬಳಿಸುವ ಸಂಭವವುಂಟು. ಅಂಥ ಸಂದರ್ಭಗಳಲ್ಲಿ ಒಬ್ಬ ಜುಜುಬಿ ಸರ್ಕಾರೀ ನೌಕ ರನಾಗಲಿ ಇಲ್ಲವೆ ಒಬ್ಬ ಪೋಲೀಸ್ ಪೇದೆಯಾಗಲಿ ಅವನ ಅಧೀಕಾರ ಮೀರಿ ವರ್ತಿಸುವುದುಂಟು. ಇದರಿಂದ ವೈಯುಕ್ತಿಕವಾಗಿ ಸ್ತ್ರೀಪುರುಷರಿಗೆ ಹಾನಿ ತಟ್ಟುವುದೂ ಉಂಟು. ಈ ರೀತಿಯಲ್ಲಿ ಸಂಕಷ್ಟಕ್ಕೊಳಾದವರು ತಮ್ಮ ತಮ್ಮ ಹಕ್ಕುಗಳನ್ನು ತಿಳಿದುಕೊಂಡಿ ದ್ದರೂ ಅಥವಾ ಕನಿಷ್ಟಪಕ್ಷ ತಾವು ಎಲ್ಲಿ ನೆರವು ಪಡೆಯಬಹುದೆಂಬುದಷ್ಟಾದರೂ ತಿಳಿದಿದ್ದರೆ ಅವರು ಅಷ್ಟು ದುಃಖಿಕ್ಕೀಡಬೇ ಕಾದ ಪ್ರಮೇಯವೇ ಇರುತ್ತಿರಲಿಲ್ಲ. ಇದಕ್ಕೋಸ್ಕರವಾಗಿಯೇ ಪ್ರಜಾಪ್ರಭುತ್ವವಾದ ಈ ನಮ್ಮ ದೇಶದಲ್ಲಿ ಕಾನೂನು ಹಾಗೂ ಕಾನೂನು ಪ್ರಕ್ರಿಯಗಳ ನಿಕಟ ಸಂಪರ್ಕವಿಟ್ಟುಕೊಳ್ಳುವ ಸಗತ್ಯತೆ ಇದೆ. ನಾವು ಯಾವಾಗಲೂ ಒಬ್ಬವಕೀಲನನ್ನು ಆಶ್ರಯಿಸುವು ದಾಗಲೀ ನಮ್ಮ ಜವಾಬ್ದಾರಿಯನ್ನೆಲ್ಲ ಅವನ ತಲೆಯ ಮೇಲೆ ಹೇರುವುದಾಗಲಿ ಸಾಧ್ಯವಿಲ್ಲ. ನ್ಯಾಯವಾದಿ ಭಗವಂತನಿದ್ದ ಹಾಗೆ; ಯಾರು ತಮ್ಮನ್ನು ತಾವು ರಕ್ಷಿಸಿಕೊಳ್ಳುತ್ತಾರೋ ಅಂಥವರನ್ನು ಮಾತ್ರ ಅವನು ರಕ್ಷಿಸಬಲ್ಲ. ಭಾಷೆ ಭಾವ ಸಂವಹನದ ಸಮರ್ಥ ಸಾಧನ; ವ್ಯವಹಾರ ಹಾಗೂ ಆಡಳಿತ ಜಗತ್ತಿನಲ್ಲಿ ಇದರ ಅನಿವಾರ್ಯತೆ ಅಷ್ಟಿಷ್ಟಲ್ಲ. ಇದರ ಹೊರತು ಬೇರೊಂದು ಸಾಧನ ಅಥವಾ ಅಭಿವ್ಯಕ್ತಿ ಮಾಧ್ಯಮ ಇಲ್ಲವೇ ಇಲ್ಲ. ಒಂದು ರಾಜ್ಯದ ಆಡಳಿತ ಯಂತ್ರ ಸುಸೂತ್ರವಾಗಿ ಸಾಗಬೇಕಾದರೆ ಭಾಷೆಯ ಬೆವರಿನ ನಿರಂತರ ಪ್ರವಾಹ ಇದೆ ಎಂಬುದನ್ನು ಮರೆಯುವಂತಿಲ್ಲ. ಹಿಂದಿನಂತೆ

ಸಪ್ತಾಂಗ ಸಂಯೋಜಿತವಾಗಿರಲಿ ಇಲ್ಲದಿರಲಿ ಇಂದು ರಾಜ್ಯಾಡಳಿತಕ್ಕೆ ರಾಜ್ಯಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಎಂಬ ತ್ರಿಕರಣಗಳು ಸದಾ ಜಾಗೃತವಾಗಿರುವುದರ ಅವಶ್ಯಕತೆ ಇದೆ. ಇಲ್ಲವಾದರೆ ರಾಜ್ಯಾಡಳಿತ ತನ್ನ ಬದುಕು ಮಾಡಲಾರದು. ಇವುಗಳ ವ್ಯವಹರಣೆಯಲ್ಲಿ ಭಾಷೆಯದು ತುಂಬಾ ಮಹತ್ವದ ಪಾತ್ರ. ನಮ್ಮ ರಾಷ್ಟ್ರದಲ್ಲಿ ಭಾಷಾವಾರು ಪ್ರಾಂತ ರಚನೆಯಾದ ಮೇಲಂತೂ ಎಂದಿಲ್ಲದ ಪ್ರಾಧಾನ್ಯ ಇಂದು ರಾಜ್ಯ ಭಾಷೆಗಳಿಗೆ ಲಭಿಸಿದೆ. ಅದು ಅಗತ್ಯವೂ ಹೌದು, ಅನಿವಾರ್ಯವೂ ಹೌದು. ಏಕೆಂದರೆ ಒಂದು ಭಾಷೆಯನ್ನಾಡುವ ಬಹುಸಂಖ್ಯಾತರಿರುವೆಡೆಯಲ್ಲಿ ಆ ಭಾಷೆಯಲ್ಲೆ ವ್ಯವಹರಣೆ ನಡೆದರೆ ಆಡಳಿತ ಯಂತ್ರ ನಿರಾತಂಕವಾಗಿ ಸಾಗುತ್ತದೆ. ಇಲ್ಲವಾದರೆ ಸಲ್ಲದ ಗೊಂದಲಗಳಿಗೆ ಕಾರಣವಾಗಿ ದೇಶದಲ್ಲಿ ಅತೃಪ್ತಿ ಅಶಾಂತಿಗಳು ತಲೆದೋರುತ್ತವೆ.

ಎರಡನೆಯದಾಗಿ, ಭಾರತ ಗ್ರಾಮಭರಿತ ರಾಷ್ಟ್ರ. ರಾಜ್ಯವೂ ಇದಕ್ಕೆ ಅಪವಾದ ಅಲ್ಲ. ನಮ್ಮ ಕರ್ನಾಟಕವನ್ನೇ ತೆಗೆದುಕೊಂಡರೆ ನೂರಕ್ಕೆ ಅರವತ್ತುಜನ ನಿರಕ್ಷರ ಕುಕ್ಷಿಗಳಿದ್ದಾರೆ. ಇವರಿಗೆ ತಮ್ಮ ಮಾತೃಭಾಷೆ ಸ್ವರೂಪದ ಅರಿವೇ ಸ್ಪಷ್ಟ ಇಲ್ಲದಿರುವಾಗ ಅವರು ಅನ್ಯಭಾಷೆಗಳ ಮೂಲಕ ವ್ಯವಹರಿಸುವುದು ಬಹುದೂರವೇ ಉಳಿಯಿತು. ಶಿಸ್ತು ಸಂಯಮಗಳ ವ್ಯವಸ್ಥಿತ ಜೀವನವನ್ನು ಸಾಗಿಸ ಬೇಕಾದರೆ ಪ್ರತಿಯೊಬ್ಬ ರಾಷ್ಟ್ರಕನೂ ಕಾನೂನು ಬಲ್ಲವನಾಗಿರಬೇಕು. ಅಂದಮೇಲೆ ಇಂಗ್ಲಿಷ್, ಹಿಂದಿ ಮೊದಲಾದ ಗೊತ್ತಿಲ್ಲದ ಭಾಷೆಗಳಲ್ಲಿ ಕಾನೂನು ಕಾರ್ಯ ನಡೆಯುವುದಾದರೆ ದೇಶ ಭಾಷೆ ಒಂದನ್ನೇ ಬಲ್ಲ ಪ್ರಜೆ ಪ್ರಚಲಿತ ವ್ಯವಹರಣೆಗಳಿಂದ. ನಿಗದಿತ ಕಾನೂನು ಕಟ್ಟಳೆಗಳಿಂದ, ಒಟ್ಟಿನಲ್ಲಿ, ಆಧ್ಯತನ ಬದುಕಿನ ಸಹಜಜ್ಞಾನದಿಂದ ವಂಚಿತನಾಗಬೇಕಾಗುತ್ತದೆ. ಇದರ ನಿವಾರಣೆಗಾಗಿ, ಶ್ರೀ ಸಾಮಾನ್ಯನಿಗೂ ರಾಜ್ಯ ಹಾಗೂ ಕೇಂದ್ರಗಳ ಕಾನೂನಿನ ಶಿಷ್ಟ ಸಂಹಿತೆಗಳೂ ಅಧಿನಿಯಮಗಳೂ ಜನಮನವನ್ನು ಮುಟ್ಟಲಿ ಎಂಬ ಹಿರಿಯ ಉದ್ದೇಶದಿಂದ ರಾಜ್ಯಭಾಷಾ (ವಿಧಾಯೀ) ಆಯೋಗ ಸ್ಥಾಪಿತವಾಗಿದೆ ಕರ್ನಾಟಕದಲ್ಲಿ. ಇದರ ನಿರಂತರ ದುಡಿ ಮೆಯಿಂದಾಗಿ 'ಭಾರತ ಸಂವಿಧಾನ'ದಂತಹ ಬೃಹತ್‌ಗ್ರಂಥ ಕನ್ನಡಗರ ಕೈ ಸೇರಿದೆ. ಈಗಾಲೇ ನೂರಾರು ಅಧಿನಯಮಗಳು ಕನ್ನಡಕ್ಕೆ ಭಾಷಾಂತರಗೊಂಡು, ಕನ್ನಡಿಗರ ಅರಿವು ಹೆಚ್ಚುವಂತೆ, ವ್ಯವಹರಣೆ ವ್ಯಾಪಕ ಪ್ರಮಾಣದಲ್ಲಿ ಆಗುವಂತೆ ಸಹಕರಿಸಿದೆ. ಶ್ರೀ ವೈ.ಎಂ.ಸಿ. ಶರ್ಮರವರ ದಕ್ಷ ನೇತೃತ್ವದಲ್ಲಿ ಕರ್ನಾಟಕದ ದಕ್ಷ ಭಾಷಾ ಆಯೋಗವು ಕಾನೂನು ಅರ್ಥಕೋಶವನ್ನಷ್ಟೇ ಅಲ್ಲದೆ ಕೇಂದ್ರ ಮತ್ತು ರಾಜ್ಯ ಅಧಿನಿಯಮಗಳನ್ನು ಅಧಿಕ ಸಂಖ್ಯೆಯಲ್ಲಿ ಕನ್ನಡಿಸಿದೆ. ಈ ಅಧಿನಿಯಮಗಳ ಅನುವಾದದಿಂದಾಗಿ ರಾಜ್ಯ ಸರ್ಕಾರದ ಮಂತ್ರಿಗಳಿಗೆ, ಪ್ರಜರಿಗೆ, ನ್ಯಾಯಾಧೀಶರುಗಳಿಗೆ, ವಿಶೇಷವಾಗಿ ನಮ್ಮ ಹಳ್ಳಿಯ ಬಡ ಬೋರೇಗೌಡನಿಗೆ ಕಾನೂನು ಮಹತ್ವ ತಿಳಿದಿದೆ. ಅವನಲ್ಲಿ ಕ್ರಮಬದ್ಧ ಪ್ರಜ್ಞೆ ಮೂಡಿದೆ. ಇದಕ್ಕಿಂತಲೂ ಮಿಗಿಲಾದದ್ದು ಏನು ಬೇಕು!

# ವೇದಋಷಿ ದರ್ಶನ*

ವೇದದಲ್ಲಿರುವುದು ಪ್ರಕೃತಪೂಜೆ[೧] ದೇವತಾ ಪ್ರಾರ್ಥನೆ[೨] ಪರತತ್ವ ಚಿಂತನೆ[೩] ಅಥವಾ ಖಗೋಳ[೪] ಇತಿಹಾಸಗಳ ರಚನೆ[೫] ಎನ್ನುವಂತೆಯೇ ಬೇರೊಂದು ಅಂಶ ಧ್ವನಿತವಾಗುತ್ತದೆ. ಅದೇ ಜ್ಞಾನೋಪಾಸನೆ! ವೇದಮುನಿಗಳು ಹೆಚ್ಚಾಗಿ ಜ್ಞಾನಾಕಾಂಷಿಗಳೇ ಹೊರತು ಲೌಕಿಕಾಪೇಕ್ಷಿಗಳಾಗಿರಲಿಲ್ಲ. ಬದುಕು ಅವರಿಗೆ ಸಮಸ್ಯೆಯಾಗಿರಲಿಲ್ಲ. ಆದರೆ ಆ ಬದುಕಿಗೆ ಬಹು ಮುಖ್ಯವಾಗಿ ಬೇಕಾ ಗಿದ್ದ ಜ್ಞಾನ, ಆ ಜ್ಞಾನವನ್ನು ಪಡೆಯುವ ವಿಧಾನ, ಪಡೆಯಲಪೇಕ್ಷಿಸಿದರೆ ಅದನ್ನು ನೀಡುವ ಶಕ್ತಿ ಇವುಗಳ ಬಗ್ಗೆ ಚಿಂತನೆ ವಿಶೇ ಷವಾಗಿತ್ತು. ವೇದ ಕರ್ಮಕಾಂಡ, ಅರಣ್ಯಕಗಳು ಕ್ರಿಯಾಕಾಂಡ, ಉಪನಿಷತ್ತುಗಳು ಜ್ಞಾನಕಾಂಡಗಳೆಂದು ಪರಿಗಣಿತವಾಗಿದ್ದರೂ ನಮ್ಮ ವೇದಋಷಿಗಳು ಮಾಡಿದ್ದು ಶುಷ್ಕ ಔಪಾಸನೆಯಲ್ಲ. ಅಥವಾ ಲೋಕದೃಷ್ಟಿಯ ಸ್ವಾರ್ಥದ ಪೂಜೆಯಲ್ಲ; ಅವರು ಮೊದಲು ಗುರ್ತಿಸಿದ್ದು ಜ್ಞಾನವನ್ನು ಅಥವಾ ಜ್ಯೋತಿಯನ್ನು. ಅವರು ಬೇಡಿದ್ದು ಅದನ್ನೇ– ಅಂದರೆ ಅವರು ಜ್ಞಾನದಾಹಿಗಳಾಗಿ ದ್ದರು ಎಂಬುದು– ಅವರ ಅನೇಕ ಸಂಹಿತೆಗಳಲ್ಲಿ ಅಭಿವ್ಯಕ್ತಗೊಂಡಿದೆ.

ಋಗ್ವೇದದ ಮೊದಲ ಋಕ್ಕು ಅಗ್ನಿಯನ್ನು ಕುರಿತ ಪ್ರಾರ್ಥನೆ–

ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಂ। ಹೋತಾರಂ ರತ್ನಧಾತಮಂ॥ ೧ ॥

ಇದೇರೀತಿ ಋಗ್ವೇದದಲ್ಲಿ ಹತ್ತಾರು ಕಡೆ ಈ ಅಗ್ನಿಯನ್ನು ಕುರಿತ ಪ್ರಾರ್ಥನೆ ಬರುತ್ತದೆ.[೬]. ಇದು ಸಾಧಾರಣವಾದ ಬೆಂಕಿಯ ಪೂಜೆ ಅಥವಾ ಅಗ್ನಿಯ ಔಪಾಸನೆ ಅಲ್ಲ. ಅದು ಅಗ್ನಿರೂಪದ ಜ್ಞಾನಕ್ಕೆ ಇತ್ತ ಕರೆ. ಅಗ್ನಿ 'ಜ್ಞಾನ'ಕ್ಕೆ ಸಂಕೇತ (symbol) ಏಕೆಂದರೆ ಪಂಚಭೂತಗಳಲ್ಲಿ ಮಿಕ್ಕ ನಾಲ್ಕು ಅಧೋಗಾಮಿಗಳಾದರೆ, ಅಗ್ನಿ ಮಾತ್ರ ಊರ್ಧ್ವ ಗಾಮಿ. ನೀರು ಕೆಳಗೆ ಹರಿಯುತ್ತದೆ, ಗಾಳಿ ಬೀಸುವುದೂ ಕೆಳಮುಖವಾಗಿಯೇ, ಭೂಮಿ ಇರುವುದೂ ಕೆಳಗಡೆ; ಆಕಾಶದೃ ಷ್ಟಿಯು ಅಧೋಮುಖವಾದುದು. ಆದರೆ ಅಗ್ನಿ ಅಥವಾ ಜ್ಯೋತಿ ಯಾವಾಗಲೂ ಊರ್ಧ್ವಗಾಮಿ. ಅದುಕುಡು ಮೇಲು ಮೇಲಕ್ಕೆ ಹೋಗುತ್ತಿರುತ್ತದೆ. ಜ್ಞಾನ ಜ್ಯೋತಿಯೂ ಹಾಗೇ ಸದಾ ಊರ್ಧ್ವಗಾಮಿ. ಅದರಿಂದಲೇ ಅಗ್ನಿ ಅಥವಾ ಜ್ಯೋತಿಯನ್ನು ಜ್ಞಾನದ ಸಂಕೇತವೆನ್ನುವುದು. ಅಲ್ಲದೆ ಅದರಲ್ಲಿ ಬೆಳಕು ತುಂಬಿರುವುದರಿಂದಲೂ ಅದನ್ನೇ ತಾನಿದ್ದಡೆಯಲ್ಲೆಲ್ಲಾ ಪ್ರಸಾರ ಮಾಡಿ ಪ್ರಕಾಶಿಸು ವುದರಿಂದಲೂ ಅದು ಪಾರಿಶುದ್ಧ್ಯಕ್ಕೆ ಸಾಕ್ಷಿಯಾಗಿ, ಶುದ್ಧಸತ್ವ್ಯಕ್ಕೆ ಸಂಕೇತವಾಗಿ ನಿಲ್ಲುತ್ತದೆ. ಸೂಕ್ಷ್ಮವಾಗಿ ವೀಕ್ಷಿಸಿದರೆ ವೇದಮುನಿಗಳು ಪ್ರಾರ್ಥಿಸಿದ ಸಮಸ್ತ ದೇವತೆಗಳೂ ಒಂದೊಂದು ಅಂಶದ ಪ್ರತಿನಿಧಿಗಳಾದಂತೆ, ಒಂ ದೊಂದಕ್ಕೆ ಸಂಕೇತವಾಗಿ ನಿಲ್ಲುತ್ತಾರೆ. ಪೃಥ್ವಿ ಆಶ್ರಯಕ್ಕೆ ಸಂಕೇತವೆನಿಸಿದರೆ, ಆಪಃ ಬಾಳಇಗೆ ಸಂಕೇತ. ಅದೇ ರೀತಿ ವಾಯು ಆಧಾರ, ಸೋಮ ಜೀವರಸ, ಇಂದ್ರನು ಅಜ್ಞಾನ ಅಥವಾ ವೃತ್ರ ಮೊದಲಾದ ದೈತ್ಯ ಶಕ್ತಿಗಳ ನಾಶಕವಾದ ಜ್ಞಾನವಸ್ತು, ಬೃಹಸ್ಪತಿ

---

*'ಸವಿ ನೆನಪು'– ದಿವಂಗತ ಪ್ರೊ.ಟಿ.ಎಸ್. ವೆಂಕಣ್ಣಯ್ಯನವರ ಸ್ಮಾರಕ ಗ್ರಂಥ. ತ.ವೆಂ. ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು–೪, ೧೯೭೦

[೧] A. Weber, The History of Indian Literature- p.5; M. Winternitz- A History of Indian Literature Vol.I, p. 75-76.

[೨] ಅದೇ. ಪು.91; op-cit.p. 68; (Roth ರವರ Zur Literature and Gaschichtedes Weda. P.8 (Strtltgavt. 1846),ಉದ್ಧರಿಸಿದ್ದಾರೆ ವೀಬರ್–ಅದೇ. ಪು.೮; ಋಗ್ವೇದ v, 80-5-6, vi. 64 x 168. ಅಥರ್ವ 1. 17.

[೩] ಅರವಿಂದ– Hymns to the Mystic fire (Introduction)

[೪] ಬಾಲ ಗಂಗಾದರ ತಿಲಕ್–orion ಗ್ರಂಥ

[೫] ಎನ್.ಎಸ್. ಅನಂತರಂಗಾಚಾರ್, ವೈದಿಕ ಸಾಹಿತ್ಯ ಚರಿತ್ರೆ, ಪು. ೪೬

[೬] ಸುಮಾರು ೨೦೦ ಅಗ್ನಿ ಸೂಕ್ತಗಳು ಸಿಗುತ್ತವೆ.

[೭] ನಿರುಕ್ತ ೭–೫–೧,೨; ಬೃಹದ್ವೇತಾ । –೯೧೭೦;

ಬುದ್ಧಿ ಅಥವಾ ಪ್ರಚೋದಕ ಶಕ್ತಿ. ರುದ್ರ ಶಿವ, ಆದಿತ್ಯ ಜ್ಯೋತಿ ಅಥವಾ ಜ್ಞಾನ, ಅಪಂನಪಾತ್ ಸೃಷ್ಟಿಶಕ್ತಿ, ವರುಣ–ಭೋಗ, ಉಪಸ್–ಸೌಂದರ್ಯ, ಮಿತ್ರ–ಮೈತ್ರಿ, ಪೂಷನ್–ಪೋಷಣೆ– ಹೀಗೆ ಬಾಳಿನ ಒಂದೊಂದು ಅಂಶಕ್ಕೆ ಒಂದೊಂದು ದೈವೀಶಕ್ತಿ ಸಾಂಕೇತಿಕವಾಗಿ ನಿಂತಿದೆ. ಇಲ್ಲಿ ಬಹು ಮುಖ್ಯವಾಗಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ‘ಜ್ಞಾನ’ದಾಯಿಗಳ ಸ್ಥಾನ ಮತ್ತು ಸಂಕೇತ.

ಪೃಥ್ವಿ, ಅಂತರಿಕ್ಷ ಮತ್ತು ದ್ಯುಲೋಕ ಎಂದು ಲೋಕವನ್ನು ಮೂರು ಭಾಗಗಳಾಗಿ ವಿಂಗಡಿಸಿ ಒಂದೊಂದಕ್ಕೆ ಒಬ್ಬೊಬ್ಬನು ಅಧಿ ದೇವತೆಯೆಂದು ಸಾರಿದ್ದಾರೆ.[೭] ಪೃಥ್ವಿಗೆ ಅಗ್ನಿ, ಅಂತರಿಕ್ಷಕ್ಕೆ ವಾಯು ವೃಷ್ಟಿ ವಿದ್ಯುತ್, ದ್ಯುಲೋಕಕೆ ಆದಿತ್ಯ–ಈ ಮೂವರೂ ತೇಜೋರೂಪಿಗಳೇ, ಜ್ಞಾನದಾಯಿಗಳೇ ಆದ್ದರಿಂದಲೇ ಪ್ರಾಚೀನ ದೃಷ್ಟಾರರು ತಮ್ಮ ತಪಸ್ಸಮಾಧಿಯಲ್ಲಿ ಜ್ಞಾನವನ್ನು ದರ್ಶಿಸಿ, ತೇಜಸ್ಸಿನ ರೂಪು ಕೊಟ್ಟು ಪೂಜಿಸಿ ಶುದ್ಧಸತ್ವನ್ನೂ, ಜ್ಞಾನಪುಂಜವನ್ನೂ ತಮ್ಮದನ್ನಾಗಿ ಮಾಡಿಕೊಳ್ಳಲು ಯತ್ನಿಸಿದರು. ವೇದ  ತಾತ್ವಿಕಾಂಶವನ್ನು ತಳೆದೇ ಪ್ರಕಾಶಗೊಂಡಿದೆ ಎಂದು ಹೇಳಿದರೆ ತಪ್ಪಾಗಲಾರದು. ವೇದ ಪದದ ವ್ಯುತ್ಪತ್ತಿಯೂ ಅದೇ. ವಿತ್–ಅಂದರೆ ಜ್ಞಾನವನ್ನು ಅರಿಯುವಂತೆ ಮಾಡುವುದೇ ವೇದ![೮] ನಮ್ಮ ಋಷಿಗಳು ಪ್ರಕೃ ತಿಯನ್ನು ಪೂಜಿಸಿದರು, ಪರಮಾತ್ಮನನ್ನು ಪಡೆದರು ಎಂಬುದರಿಂದಲೇ ಅದರ ಸಂಕೇತವಾದ ಜ್ಯೋತಿಯನ್ನು ಮೂರು ಲೋಕ ಗಳ ವಿಭಾಗದಲ್ಲೂ ಮೂರು ರೂಪದಲ್ಲಿ ಬೇಡಿ ಪಡೆಯಲು ಯತ್ನಿಸಿದರು. ಜ್ಯೋತಿಯ ಔಪಾಸಕರಾದ ಅವರು ನಿಜಕ್ಕೂ ಜ್ಞಾನ ದಾಹಿಗಳು. ಇದೇ ಅಂಶವನ್ನು ಉಪನಿಷತ್‌ಗಳಲ್ಲೂ ಗುರುತಿಸಬಹುದು[೯]. ಮುಂದೆ ಇತಿಹಾಸಕಾಲಕ್ಕೆ ಪದ ಬದಲಾವಣೆಯಾ ಯಿತೇ ವಿನಃ ಅರ್ಥವ್ಯತ್ಯಾಸವಾಗಲಿಲ್ಲ. ಮಹಾಭಾರತದಲ್ಲಿ ‘ಭಾರತ’ ಎಂಬ ಪದ ಬಹಳವಾಗಿ ಬಳಕೆಯಾಗಿದೆ. ಅದರ ಅರ್ಥ ವೂ ಅಷ್ಟೇ– ಭಾಃ–ಜ್ಯೋತಿಯಲ್ಲಿ ರತ– ಆಸಕ್ತ ಎಂದು. ಕೃಷ್ಣನು ಅರ್ಜುನನ್ನು ಸಂಬೋಧಿಸಿ ‘ಎಲೈ ಭಾರತ’ ಎಂದರೆ ‘ಜ್ಞಾನಾಕಾಂಕ್ಷಿ’ಯೇ ಎಂದರ್ಥ. ಭರತ ಭೂಮಿಯ ಎಲ್ಲ ವ್ಯಕ್ತಿಯೂ ಭಾರತನೇ ಅಂದರೆ ಜ್ಞಾನದಾಹಿಯೇ.

ಹೀಗೆ ಜ್ಞಾನದಾಹಿಗಳಾದ ‘ಭಾರತ’ರು ಪ್ರಥಮತಃ ಉಪಾಸಿಸಿದ್ದು ‘ತೇಜೋ ರೂಪಿ’ಗಳಾದ ಅಗ್ನಿ, ಆದಿತ್ಯ, ವಾಯು, ಇಂದ್ರ, ಉಪಸ್, ಪೂಷನ್ ಮೊದಲಾದವರನ್ನು. ಅಂದರೆ ಜ್ಞಾನವನ್ನು ಅಥವಾ ಜ್ಞಾನರೂಪಿಗಳನ್ನು. ಲೋಕಗಳು ಮೂರಾಗಿ, ಪ್ರಾರ್ಥಿಸ ಲ್ಪಡುವ ರೂಪಗಳು ನೂರಾದರೂ ಮಹರ್ಷಿಗಳ ಅಂತರಂಗದ ಭಾವವೊಂದೇ, ಬಯಕೆಯೊಂದೇ. ‘ದಿವ’ ಎಂದರೆ ಬೆಳಕು. ಇದರಿಂದಲೇ ‘ದೇವ’ ಆದದ್ದು. ಅಂದರೆ ನಮ್ಮ ದೇವತೆಗಳ ಸೃಷ್ಟಿಯ ಮೂಲ ಬೆಳಕು ಅರ್ಥಾತ್ ಜ್ಯೋತಿ. ಅಲ್ಲದೆ ಈ ಜ್ಞಾನ ಸಂಕೇತದಲ್ಲಿದೆಯೆಂದು ಹೇಳಿದ ಈ ಅಗ್ನಿಯು ಮೂರು ಲೋಕಸ್ಥಾನಗಳಲ್ಲೂ[೧೦]  ಪೃಥ್ವಿಗೆ ಸಂಬಂ ಧಿಸಿದಂತೆ ಅಗ್ನಿಯಾಗಿಯೂ, ಅಂತರಿಕ್ಷಕ್ಕೆ ಸಂಬಂಧಿಸಿದಂತೆ ವಿದ್ಯುದ್ರೂಪಿಯಾಗಿಯೂ, ದ್ಯುಲೋಕದಲ್ಲಿ ದಿವ್ಯಾಗ್ನಿಯ ಸೂರ್ಯ ನಾಗಿಯೂ ಶೋಭಿಸುವುದೆಂದು ವೇದವೇ ಹೇಳಿದೆ.[೧೧]. ಈ ಅಗ್ನಿ ಎಲ್ಲ ದೇವತೆಗಳಲ್ಲೂ ಅಂತರ್ಗತವಾದ ಶಕ್ತಿ ಎಂಬುದನ್ನು ಮಂತ್ರಗಳು ತಿಳಿಸುತ್ತವೆ[೧೨]. ನಮ್ಮ ದಿವ್ಯರ್ಷಿಗಳ ಪ್ರಾರ್ಥನೆಯಲ್ಲೂ ಸಹ ಈ ಅಗ್ನಿ ಸಮಸ್ತ ಜ್ಞಾನಗಳ ಸಹಕಾರ ಸ್ವರೂಪಿಯೆಂದು ಹೊಗಳಲ್ಪಟ್ಟಿದೆ.[೧೩]  ಅವರೇ ಹೇಳುವಂತೆ–

“ಅಪಾಮ ಸೋಮಮಮೃತಾ ಅಭೂಮ
ಅಗನ್ಮ ಜ್ಯೋತಿರವಿದಾಮ ದೇವಾನ್”[೧೪]

---

[೮]ಋಗ್ವೇದ ।,  ಪೂರ್ವ ಪೀಠಿಕೆ, ಪು.೪

[೯]ಬೃಹದಾರಣ್ಯಕ ೪–೪–೧೬

[೧೦] ಋಕ ।, ೯೫–೩;

[೧೧] ಅದೇ. IV-

[೧೨] ಅದೇ. II-೧–೩ ರಿಂದ ೭ರ ವರೆಗಿನ ಮಂತ್ರಗಳು

[೧೩] I-೮೯–೧;

[೧೪] VIII ೪೮–೩

(ನಾವು ಸೋಮಪಾನ ಮಾಡಿದೆವು. ಜ್ಯೋತಿಃಪ್ರವೇಶ
ಮಾಡಿದೆವು, ದೇವತೆಗಳನ್ನು ಸಾಕ್ಷಾತ್ಕರಿಸಿಕೊಂಡೆವು.)

ಎಂಬಲ್ಲಿ ಜ್ಯೋತಿಯಿಂದ ದೇವರನ್ನು ಕಂಡಿದ್ದಾರೆ ಎಂಬುದು ಸ್ಪಷ್ಟ. ಪ್ರಪಂಚದ ಎಲ್ಲಾ ರಾಷ್ಟ್ರಗಳು ಅಜ್ಞಾನದ ಅಂಧಕಾರದಲ್ಲಿ ಕಣ್ಣು ಕಾಣದೆ ಕುಳಿತಿದ್ದಾಗ ಬಹುಶಃ ಪ್ರಥಮತಃ ಎಚ್ಚೆತ್ತ ಭಾರತ ಜ್ಞಾನಜ್ಯೋತಿಯನ್ನು ಆಹ್ವಾನಿಸಿರಬಹುದು. ವಿಶ್ವ ಸಾಹಿತ್ಯದಲ್ಲೇ ಪ್ರಾಚೀನವೂ[೧೫], ಪ್ರಮುಖವೂ ಆದ ಸ್ಥಾನ ಗಳಿಸಿರುವ ವೇದ ಆದ್ಯಂತವಾಗಿ ಅಗ್ನಿ ಅಥವಾ ತೇಜಸ್ಸಿನ ವ್ಯಾಜದಲ್ಲಿ ಜ್ಞಾನವನ್ನು ಉಪಾಸಿಸಿದೆ. ದೀಪ್ತಮತಿಗಳಾದ ನಮ್ಮ ದೇವರ್ಷಿಗಳಿಗೆ ಈ ಜ್ಯೋತಿಯ ಸಾಕ್ಷಾತ್ಕಾರವಾಗಿದೆ. ಇದನ್ನೇ ಒಬ್ಬೊಬ್ಬರು ಒಂದೊಂ ದು ಅರ್ಥದಲ್ಲಿ ಗ್ರಹಿಸಿ ಪ್ರಕೃತಿ ಪೂಜೆ, ಪರಮೇಶ್ವರ ಸಾಕ್ಷಾತ್ಕಾರ ಇತ್ಯಾದಿಗಳನ್ನು ಮಾಡಿಕೊಂಡರೆಂದು ಹೇಳುತ್ತಾ ಬಂದರು. ಆಧುನಿಕ ವಿಮರ್ಶಕರೇ ಅಲ್ಲ ಪ್ರಾಚೀನ ಮುನಿಗಳೂ ಸಹ ಇದೇ ಅಭಿಪ್ರಾಯವುಳ್ಳವರಾಗಿದ್ದಾರೆ. ನಿರುಕ್ತದಲ್ಲಿ ದೇವತಾಸೃಷ್ಟಿ ಹಾಗೂ ಅದರ ಸ್ವರೂಪಾದಿಗಳನ್ನು ವಿವರಿಸಿದ್ದಾರೆ. ಶತಪಥಾದಿ ಬ್ರಾಹ್ಮಣಗಳೂ, ಛಾಂದೋಗ್ಯಾದಿ ಉಪನಿಷತ್ತುಗಳೂ ದೇವತಾ ವರ್ಗಗಳನ್ನು ವಿಂಗಡಿಸಿಕೊಟ್ಟಿವೆ. ಋಗ್ವೇದದಲ್ಲಿ ವಿಶೇಷವಾಗಿ ಮೂರೇ ಮೂರು ದೇವತೆಗಳನ್ನು (ಈಗಿನವರು ಕೊಟ್ಟಿರುವ ಅರ್ಥದಲ್ಲೇ ಗ್ರಹಿಸಿದರೂ) ಪೂಜಿಸದರೂ ಕ್ರಮೇಣ ಅವರ ಸಂಖ್ಯೆ ಹೆಚ್ಚುತ್ತಾ ಬಂದು ಅದರ ವಿಭಜನೆ ಮಾಡಿ ಅದರ ಅಧಿಕಾ ರಾದಿಗಳನ್ನು ನಿರ್ದೇಶಿಸುವ ಸ್ಥಿತಿ ಬಂತು. ವೇದಗಳಲ್ಲಿ ಬರುವ ಪ್ರಾರ್ಥನಾ ರೂಪದ ಮಂತ್ರಗಳೂ ಸಹ ಕೆಲವರ ದೃಷ್ಟಿಯಲ್ಲಿ– "ಕೇವಲ ಯಜ್ಞಕ್ಕೆ ಸಂಬಂಧಿಸಿದವುಗಳಾಗಿ ಅವುಗಳಲ್ಲಿ ಚಿತ್ರಿತವಾದ ದೇವಮಾನವ ಸಂಬಂಧ ಕೇವಲ ಯಾಂತ್ರಿಕವಾದ ಕೊಳ್–ಕೊಡುಗೆಯ ಅಥವಾ ಲಾಭ–ನಷ್ಟಗಳ ರೂಪವಾಗಿ"[೧೬] ಪರಿಣಮಿಸಿವೆ. ಆದರೆ ನಮ್ಮ ವೇಧ ಋಷಿಗಳ ಜ್ಞಾನದ ವ್ಯಾಪ್ತಿ ಇಷ್ಟು ಪರಿಮಿತವಾದದ್ದಲ್ಲವೆಂದು ನಮ್ರವಾಗಿ ಸೂಚಿಸಬೇಕಾಗುತ್ತದೆ. ಅದರ ದೀಪ್ತಿ ಅನಂತವಾದದ್ದು. ಅನಂತರದ ಎಲ್ಲ ಭಾರತೀಯ ಸಾಹಿತ್ಯಗಳಲ್ಲೂ ಒಂದಲ್ಲ ಒಂದು ಕಡೆ ಅದ ಪ್ರಕಾಸಗೊಂಡಿರುವುದು ಕಂಡು ಬರುತ್ತದೆ. ಆದರೆ ಸೂರ್ಯನಿಗೂ ಬೆಳಕು ಹಾಗೂ ಶಾಖಗಳಿಗೂ ಇರುವ ಸಂಬಂಧವೇ ವೇದಗಳಿಗೂ ಮತ್ತು ಇತರ ಸಾಹಿತ್ಯ ಶಾಖೆಗಳಿಗೂ ಇದೆ. ಅಂದರೆ ಸೂರ್ಯನ ಬಳಿ ಶಾಖ ಹೆಚ್ಚು; ಬೆಳಕಿನ ವೈಶಾಲ್ಯ ಕಡಿಮೆ: ಭೂಮಿ ಮೊದಲಾದ ಸ್ವಪ್ರಕಾಶಿತಗಳಲ್ಲದ ಗ್ರಹಗಳ ಸೂರ್ಯನ ಶಾಖ ಕಡಿಮೆ, ಬೆಳಕಿನ ವೈಶಾಲ್ಯ ಬಹಳ. ಹಾಗೆಯೇ ವೇದಗಳ ರಚನೆಯಲ್ಲಿ ಮೂಲತಃ ತೀವ್ರತೆ ಹೆಚ್ಚು, ದಾರಿ ಕಿರಿದು! ಇದನ್ನು ಹೆಚ್ಚಿಸಿ ಬೆಳಗಿಸುವುದೆಂದರೆ ಅರಣ್ಯಕ, ಬ್ರಾಹ್ಮಣ, ಉಪನಿಷತ್, ಇತಿಹಾಸ, ಪುರಾಣ ಇತ್ಯಾದಿಗಳು. ಋಷಿ' ಎಂದರೆ ಮೊದಲು ಮಂತ್ರವನ್ನು ಕಂಡವನು ಎಂದಿಷ್ಟೇ ಅರ್ಥವಲ್ಲ ಸಾಯಣರು ಹೇಳುವಂತೆ "ಅತೀಂದ್ರಿಯಸ್ಯ ಪರ ಮೇಶ್ವರಾನುಗ್ರಹೇಣ ಪ್ರಥಮತೋ ದರ್ಶನಾತ್ ಋಷಿತ್ವಂ' – (ಪರಮೇಶ್ವರನ ಅನುಗ್ರಹದಿಂದ ಅತೀಂದ್ರಿಯವಾದ ವೇದವನ್ನು ಮೊತ್ತ ಮೊದಲು ಕಂಡವನು ಋಷಿ.[೧೭]) ಈ ವೇದ ಅಥವಾ ಅತೀಂದ್ರಿಯ ಜ್ಞಾನವನ್ನು ಮೊದಲು ಕಂಡು ಅನಂತರ ಕಂಡರಿ ಸುವ ಶಕ್ತಿ ಅವರಿಗೆ ಬಂದುದು ತಪಸ್ಸಿನಿಂದ. ಸಾಧನೆಯಿಂದ ಸಿದ್ಧಿ ಪಡೆದಂತೆ ತಪಸ್ಸಿನಿಂದ ಸಾಕ್ಷಾತ್ಕಾರ

ಹೊಂದಿದರು ಯುಗಾಂತೇಂತ ಹಿನತಾನ್ ವೇದಾನ್ ಸೇಹಿಹಾಸಾನ್ ಮಹರ್ಷಯಃ
ಲೇಭಿರೇ ತಪಸಾ ಪೂರ್ವಂ ಅನುಜ್ಞಾತಾ ಸ್ವಯಂಭುವಾ॥
–ಮಹಾಭಾರತ

ನಮ್ಮ ತಪೋಧನರ ದರ್ಶನದ್ಯುತಿ ಕಾಲಕಾಲಕ್ಕೂ ಪ್ರಕಾಶಗೊಳ್ಳುತ್ತಲೇ ಬಂದಿದೆ. ಜಗದ್ಭವ್ಯ ಕೃತಿರತ್ನಗಳಾದ ರಾಮಾಯಣ, ಮಹಾಭಾರತಗಳಂತೂ ನಮ್ಮ ಸಂಸ್ಕೃತಿಯ ಶಿಖರಗಳಾಗಿ ನಿಂತಿವೆ. ಇವುಗಳಲ್ಲಿ ಋಷಿ ತಪಸ್ವಿಯಷ್ಟೇ ಅಲ್ಲ ಕವಿಯೂ ಆಗಿದ್ದಾನೆ. ಋಷಿಯಾಗಿ ಕಂಡು ಕವಿಯಾಗಿ ಕಟ್ಟಿದ್ದಾನೆ. 'ನಾನೃಷಿಃ ಕುರುತೇ ಕಾವ್ಯಂ' ಎಂಬ ವಾಕ್ಯದ ಪೂರ್ಣ ಅರ್ಥ ತಿಳಿಯುವುದು– ಈ ಮಹಾಕೃತಿಗಳ ಅಧ್ಯಯನ ಮಾಡಿದ ಮೇಲೆ ನಮ್ಮ ಋಷಿಗಳು ಕವಿಗಳು, ಕ್ರಾಂತದರ್ಶಿಗಳು, ದ್ರಷ್ಟಾರರು, ಅಷ್ಟೇ ಮಟ್ಟದಲ್ಲಿ ಜಿವನವನ್ನು ಕಂಡವರು; ಭವ್ಯ ಬಾಳನ್ನು ಬಾಳಿದ ಮಹಾಪುರುಷರು; ಬದುಕಿನಲ್ಲಿ ಬೆರೆತು ಅದನ್ನು ಬೆಳಗಿಸಿದವರು.

---

[೧೫] Winternitz- History-p. 52; Weber-History-p. 2
[೧೬] S. Radhakrishnan- Indian Philosophy Vol. I- p.147.
[೧೭] ಎನ್.ಎಸ್. ಅನಂತರಂಗಾಚಾರ್, ವೈದಿಕ ಸಾಹಿತ್ಯ ಚರಿತ್ರೆ–ಪುಟ ೨೬೪

# ಕನ್ನಡ ಕಿಂಕಿಣಿ

॥ ೧ ॥

ಆಧುನಿಕ ಕನ್ನಡ ಸಾಹಿತ್ಯ ಇಂಗ್ಲಿಷಿಗೆ ಬಹು ವಿಧದಲ್ಲಿ ಋಣಿ. ಏಕೆಂದರೆ ಅದರಿಂದ ಇದು ತುಂಬಾ ಉಪಕೃತವಾಗಿದೆ. ಅದರ ಸಂಪರ್ಕದಿಂದಲೇ ಸರ್ವಾಂಗ ಸುಂದರವಾಗಿ ಬೆಳೆಯಿತು ಎನ್ನಬಹುದು. ಅಲ್ಲಿನ Lyrics, Novels, Short Stories, Essays and Criticism- ಮೊದಲಾದ ರೂಪಗಳನ್ನು ಕನ್ನಡಕ್ಕೆ ಭಾವಗೀತೆ, ಕಾದಂಬರಿ, ಸಣ್ಣಕತೆ, ಪ್ರಬಂಧಮ ವಿಮರ್ಶೆ ಎಂಬ ಹೆಸರುಗಳಿಂದ ಹೊಂದಿಸಿ ಕೊಂಡಿದ್ದೇವೆ. ಆದರೆ ನಾವು ಇಂಗ್ಲಿಷಿನಿಂದ ಬಾಹ್ಯರೂಪಗಳನ್ನು ಪಡೆದವೇ ಹೊರತು, ಅದರ ಅಂತಸ್ಥವಾದ ಆತ್ಮವನ್ನಲ್ಲ. ಆತ್ಮ ನಮ್ಮದು ಭಾರತೀಯವಾದದ್ದು. ಹೆಚ್ಚು ಹೇಳಬೇಕೆಂದರೆ ಅಲ್ಲಿನ ಅಥಿಪಂಜರಕ್ಕೆ ನಮ್ಮ ಭಾರತೀಯ ರಕ್ತ, ಮಾಂಸ, ಮೇದಸ್ಸು, ಧರ್ಮ, ಬಣ್ಣಗಳನ್ನು ಕೊಟ್ಟು ನಮ್ಮದೇ ಆದ ಆತ್ಮವನ್ನು ಅನುಗ್ರಹಿಸಿ ಅದೊಂದು ವಿನೂತನ ಚೇತನವೆನಿಸಿ ಬಾಳುವಂತೆ ಮಾಡಿದ್ದೇವೆ. ರೂಪ ಅಲ್ಲಿಯದು ಸ್ವರೂಪ ನಮ್ಮದು. ಇಷ್ಟೇ ಅಲ್ಲ ರೊಮ್ಯಾಂಟಿಕ್ ಶೈಲಿಯ ರಚನೆಯಲ್ಲಿ ನಾವು ಮುಂದೆ ಹೋಗಿದ್ದೇವೆ. ನವ್ಯ ಕಾವ್ಯ ರಚನೆಯಲ್ಲಿ ನಮ್ಮ ಕವಿಗಳು ಇಂಗ್ಲಿಷಿನ modern poet ಗಳನ್ನು ಹಿಂದಿಕ್ಕಲಾಗದಿದ್ದರೂ ಭಾವಗೀತಗಳಲ್ಲಿ ಸರ್ವ ಸಿದ್ಧಿಯನ್ನು ಸಂಪಾದಿಸಿ ಕೊಂಡಿದ್ದಾರೆ. ಇಂದು ಇಂಗ್ಲಿಷ್ ಕಾಣಿಕೆ ಯಾಗಿ ಕೊಡಬಲ್ಲಷ್ಟು ರಾಶಿರಾಶಿಯಾಗಿ ಭಾವಗೀತಗಳು ನಮ್ಮಲ್ಲಿ ಸೃಷ್ಟಿಯಾಗಿವೆ. ಅಲ್ಲದೆ, ಸತ್ವದಲ್ಲಂತೂ ನಮ್ಮ ಕನ್ನಡ ಗೀತೆ ಗಳಿಗೆ ಸರಿಸಮಾನವಾಗಿ ಇನ್ನಾವ ಭಾಷೆಯ ಭಾವಗೀತವು ನಿಲ್ಲಲಾರದು ಎಂದರೆ ಅತಿಶಯೋಕ್ತಿಯಾಗಲಾರದು. ಭಾರತೀಯ ಬೇರಾವ ಸಾಹಿತ್ಯವೂ ಬೆಳೆದಿಲ್ಲ ಅಷ್ಟು ಬೆಳೆದಿದೆ ನಮ್ಮ ಕನ್ನಡ ಸಾಹಿತ್ಯಶ್ರೀ. ಇಂಗ್ಲಿಷಿನ ಅತ್ಯುತ್ತಮ ಗೀತೆಯೆನ್ನುವುದು ನಮ್ಮ ಕನ್ನಡದ ಸಾಧಾರಣ ಪದ್ಯಕ್ಕೆ ಸಾಟಿಯಾಗಬಲ್ಲದು ಅಷ್ಟೆ. ಇದು ಆತ್ಮಪ್ರತಿಷ್ಠೆಯಲ್ಲ; ಸತ್ಯಸ್ಯ ಸತ್ಯ ಸಂಗತಿ. ಕನ್ನ ಕಾವ್ಯ ಕೋಶ ವನ್ನು ಪ್ರವೇಶಿಸಿ, ಸೋಶೋಧಿಸಿದವರಿಗೆ ಮಾತ್ರ ಈ ಮಾತಿನ ಸತ್ಯಾಂಶ ತಿಳಿಯುವುದು. ಹೆಚ್ಚು ಬೇಡ 'ಕಿಂಕಿಣಿ'ಯಂಥಾ ಒಂದು ಕನ್ನಡದ ಕಿರು ಗೆಜ್ಜೆಯನ್ನು ಮಿಡಿದರೆ ಸಾಕು ಅದರ ನಾದ ಎಂಥದು, ಮಾಧುರ್ಯ ಹೇಗೆ? ಎಂಬ ಅರಿವಾಗುತ್ತದೆ. ಆಧ್ಯಾತ್ಮ ಅಂಶಗಳಿಂದ ಪರಿಪುಷ್ಟವಾದ ಆತ್ಮ ಗೀತಾಂಜಲಿ ಈ ಕಿರಿಯ ಕಿಂಕಿಣಿ!
ಈ ಕಾವ್ಯ ಧಾಟಿ ಕನ್ನಡಿಗರಿಗೆ ಹೊಸದೇನೂ ಅಲ್ಲ. ಭಾವಗೀತೆ, ನವ್ಯಕಾವ್ಯ, ಸಣ್ಣಕತೆ, ಕಾದಂಬರಿ, ಪ್ರಬಂಧ, ವಿಮರ್ಶೆಗಳಂತೆ ಈ ರಚನಾರೂಪವನ್ನು ನಾವು ಇನ್ನೊಬ್ಬರಿಂದ ಎರವು ಪಡೆಯಬೇಕಾಗಿಲ್ಲ. ನಾವೇ ದಾನಕೊಡುವಷ್ಟು ನಮ್ಮಲ್ಲಿ ಹೇರಳವಾಗಿದೆ. ಕ್ರಿ.ಶ. ಹನ್ನೊಂದು–ಹನ್ನೆರಡನೆಯ ಶತಮಾನಗಳಲ್ಲಿ ವಚನಕಾರರಿಂದ ವಿಫುಲವಾಗಿ ಬೆಳೆದು ನಿಂತಿದೆ ಈ ಸಾಹಿತ್ಯ ಬೆಳೆಸು. ವಿಶ್ವದ ಮತ್ತಾವ ಸಾಹಿತ್ಯದಲ್ಲೂ ಕಾಣಸಿಗದ ಈ ಕಾವುರೂಪ ಕನ್ನಡಕ್ಕೇ ಮಿಸಲು; ಹಾಗೂ ವಿಶ್ವಸಾಹಿತ್ಯಕ್ಕೆ ಕನ್ನಡದ ಅಮುಲ್ಯ ಕೊಡುಗೆ ಹಾಡಿದರೆ ಪದ್ಯ, ಓದಿದರೆ ಗದ್ಯ. ಬೃಹತ್‌ರೂಪ ಸರಳ ಆದರೆ ಅಂತರಂಗ ಗಹನ; ಆಕಾರದಲ್ಲಿ ವಾಹನ; ಸಾಕಾರ ದಲ್ಲಿ ತ್ರಿವಿಕ್ರಮ! ಇಲ್ಲಿ ಆರ್ಥಿಕ ಚಿಂತೆಗಿಂತ ಆಧ್ಯಾತ್ಮ ಚಿಂತನೆ ಬಹಳ. ಲೌಕಿಕಕ್ಕಿಂತ ಪಾರಮಾರ್ಥದ ವಿಶೇಷ ಬೋಧೆ ಇಲ್ಲಿದೆ. ಆದರೆ ಈ ಬೋಧೆ ಬೋಧೆಯಾಗಿಯೇ ಮೂಡಿಲ್ಲ. ಅದು ಭಾವದಿಂದ ದೀಪ್ತವಾಗಿ ಸಾಹಿತ್ಯದ ಸೊಬಗು ಸೌರಭಗಳನ್ನು ತಳೆದು ಅಭಿವ್ಯಕ್ತವಾಗಿದೆ.
ಈ ರೀತಿಯ ವಚನ ರಚನೆ ಬೇರೆ ಭಾಷಾ ಸಾಹಿತ್ದಲ್ಲೂ ಇದೆ. ಖಲೀಲ್ ಗಿಬ್ರಾನರ 'ಪ್ರವಾದಿಯ ತೋಟ ವಿಶ್ವಕವಿ ರವೀಂದ್ರರ 'ತೋಟಗಾರ' (The gardener) ಬಾಲಚಂದ್ರ (Crescent Moon) ಫಲಸಂಚಯ (Fruit gathering) ಇತ್ಯಾದಿಗಳನ್ನು ಉದಾಹರಿಸಬಹುದು. ಇವೂ ಸಹ ನಮ್ಮ ಶಿವಶರಣರ ವಚನಗಳಂತೆ, ಶ್ರೀ ಕುವೆಂಪುರವರ 'ಕಿಂಕಿಣಿ'ಯಂತೆ ಆಧ್ಯಾತ್ಮ ಅಂಶ ದಿಂದ ಪುಷ್ಟವಾಗಿ, ಆತ್ಮತೇಜದಿಂದ ಬೆಳಗಿದವುಗಳೇ. ಬಿಂದುವಿನಲ್ಲಿ ಸಿಂಧುವನ್ನು ಅಡಗಿಸುವ ಸಾಹಸ ಈ ಕೃತಿಗಳಲ್ಲಿದೆ. ಅವನ್ನು ಆಳವಾಗಿ ಅಭ್ಯಸಿಸಿದರೆ ಮಾತ್ರ ಅವರ ಸೌಂದರ್ಯ ವೇದ್ಯವಾಗುವುದು. ಈ ಸೌದರ್ಯದಿಂದ ಸಂತೋಷವಷ್ಟೇ ಅಲ್ಲ ಕೈವಲ್ಯ ಪ್ರಾಪ್ತಿಯಾಗುತ್ತದೆ.

॥ ೨ ॥

ಕಿಂಕಿಣಿ ಕವಿಯ ಆಧ್ಯಾತ್ಮ ಅನುಭವಕ್ಕೆ ನೀಡಿದ ಅಭಿವ್ಯಕ್ತಿ! ಇವುಗಳಲ್ಲಿ ಭಾವಾಂಶಕ್ಕಿಂತ ಚಿಂತನಾಂಸದ ಪಾತ್ರ ಪ್ರಧಾನವಾ ಗಿರುವುದು ಕಂಡುಬರುತ್ತದೆ.

ಭಾವ ವೀಚಿಗಳಳಿದು ಹರದಯ ಸರೊವರ ನಿಸ್ತರಂಗ!
ಚಿಂತೆಯೂರ್ಮಿಗಳುಡುಗಿ ವಿತ್ತವಾರಿಧಿ ಅಚಂಚಲ!
ಉಳೆದೆಲ್ಲ ಉಪಾಧಿಗಳನುಳಿದಾತ್ಮ ತಾನೆ ಕಿಂಕಿಣಿ!
ಆತ್ಮ ಸಂಧ್ಯಾಧೇನು ಕಿಂಕಿಣಿ!
ಅರ್ಥಮುಕ್ತ, ಭಾವದೀಪ್ತ, ಧ್ವನಿಪ್ರಚುರ ಕೇಳ;
ಧ್ಯಾನಧೇನು ಕಿಂಕಿಣಿ! –(ಕಿಂಕಿಣಿ: ಪದ್ಯ ೧. ಪುಟ ೧.)

ಭಾವವೀಚಿ, ಚಿಂತೆಯೂರ್ಮಿ ಮೊದಲಾದ ಎಲ್ಲಾ ಉಪಾಧಿಗಳು, ಅಳಿದು ಉಡುಗಿದ ಮೇಲೇ ನಮಗೆ ಈ ಕಿಂಕಿಣಿಯ ನಿಕ್ವಣನ ಗಿತ ಕೇಳಿಸುವುದು! ಅಂದರೆ ನಮ್ಮ ಮನದ ಮಾನಸದಲ್ಲಿ ಬಗೆಬಗೆಯ ಭಾವತರಂಗಗಳು ಎದ್ದು ಅವು ಉಡುಗಬೇಕು. ಲೋಕ ಜೀವನದ ಹಲವಾರು ಚಿಂತೆಗಳು ಬತ್ತಬೇಕು, ಯಾವ ಜಂಜಾಟವೂ ಆತ್ಮಕ್ಕಿರಬಾರದು. ಆಗ ಅದು ಆನಂದಕಾಗಿ ಹಾಡಿಕೊಳ್ಳು ತ್ತದೆ. ಅದೇ ಆತ್ಮ ಗೀತಾಂಜಲಿ! ಅದು 'ಅರ್ಥಮುಕ್ತ' ಅಂದರೆ ಸಾಧಾರಣ ಅರ್ತದಿಂದ ಅವರು ಬಹುದೂರ ಅಥವಾ ಅದಕ್ಕೆ ಒಂದೇ ಅರ್ಥ ಸಲ್ಲದು. ಅದು ಚಿಂತನೆಯಿಂದ ಭರಿತವಾಗಿದ್ದರೂ ಭಾವದಿಂದ ಬೆಳಗಿರುತ್ತದೆ. ಇಲ್ಲಿ ಚಿಂತನೆಗೆ ಸ್ಥಾನ ಎಂದರೆ ಭಾವ ಇಲ್ಲ ಎಂದರ್ಥವಲ್ಲ. ಭಾವದ ಕಾವು ಇಲ್ಲದಿದ್ದರೆ ಅದು 'ಗೀತ'ವೇ ಅಲ್ಲ. ಆದ್ದರಿಂದ ಅದು 'ಭಾವದೀಪ್ತ'! ಅಂತೆಯೇ ಅದು "ಧ್ವನಿಪ್ರಚುರ!' ವಾಚ್ಯಕ್ಕಿಂತಲೂ ಹೆಚ್ಚಿನ ಸೂಚ್ಯವನ್ನು ತನ್ನ ಗರ್ಭದಲ್ಲಿ ಅಡಗಿಸಿಟ್ಟುಕೊಂಡಿದೆ. 'ಕಾವ್ಯಸ್ಯಾತ್ಮಾ ಧ್ವನಿಃ' ಅಲ್ಲವೆ? ಅಂತೆಯೇ ನಮ್ಮ 'ಕಿಂಕಿಣಿ' ಒಂದು ಮಾತಿಗೆ ನೂರು ಅರ್ಥ ಹೇಳಿ, ನೂರು ಭಾವಗಳು ಮಿಡಿಯುವಂತೆ ಮಾಡು ತ್ತಾಳೆ. ವಸ್ತು, ಅಲಂಕಾರ, ರಸ ಧ್ವನಿಗಳಿಗಿಂತ ಈಕೆ 'ದರ್ಶನ ಧ್ವನಿ' ಯ ಕಾಂತಿಯುತವಾಗಿ ತಂತಿಯನ್ನು ಮೀಟಿ 'ಓಂ'ಕಾರದ ಝೇಂಕಾರಗೈಯ್ದಿದ್ದಾಳೆ. ಅದೇ ಓಂಕಾರದಲ್ಲಿ ತಾನೂ ಲಯಳಾಗಿ "ಧ್ಯಾನುಧೇನು'ವೆನಿಸಿದ್ದಾಳೆ. ಲೋಕನೀತಿಯನ್ನೂ, ಲೋಕೋ ತ್ತರ ರೀತಿಯನ್ನೂ ಜೊತೆಜೊತೆಯಲ್ಲೇ ತಿಳಿಸಿ ಅನಂತವಿಹಾರಕ್ಕೆ ಓದುಗನ ಆತ್ಮವನ್ನು ಅನುಗೊಳಿಸುತ್ತಾಳೆ ಈ ಸರಸ 'ಕಿಂಕಿಣಿ!'

॥ ೩ ॥

ಪ್ರಯೋಗಕ್ಕೆಂದು ಒಂದೆರಡು ಕವನಗಳನ್ನು ಆರಿಸಿಕೊಳ್ಳೋಣ– ಮೊದಲನೆಯದಾಗಿ 'ನೀನು ಪ್ರೇಮಮಯಿ' ಎಂಬ ಕವನ.
ಪರಮಾತ್ಮ ಸರ್ವಾಂತರ್ಯಾಮಿ, ಸರ್ವಶಕ್ತ, ಸರ್ವರೂಪಿ. ಅವನ ಅರಮನೆಗೆ ನೂರಾರು ಮಾರ್ಗಗಳಿವೆ ನೂರಾರು ಹೆಬ್ಬಾಗಿಲು ಗಳೂ ಇವೆ. ಸೇರುವ ಗುರಿಯಷ್ಟೇ ಮುಖ್ಯ. ಆ ಗುರಿಯ ಅನ್ವೇಷಣೆ, ಸಾಧಕ ಈ ಹಾದಿಯಲ್ಲಿ ಯಶಸ್ವಿಯಾದರೆ ಸಾಕು. ಏಕೆಂ ದರೆ ಆತ 'ಎಲ್ಲ ಕರ್ಮಗಳ ಆದರ್ಶ; ಎಲ್ಲ ಭಾವಗಳ ಆದರ್ಶ; ಎಲ್ಲ ಆತ್ಮಗಳ ಆದರ್ಶ!' ಆದ್ದರಿಂದಲೇ ಆತ ಪ್ರೇಮಮಯನಾಗಿ ದ್ದಾನೆ. ಈ ಕರುಣಾ ಮೂರ್ತಿ ಕಾರುಣ್ಯಕ್ಕೆ ಸಿಕ್ಕ ಸಾಧಕ ಸಿದ್ಧನಾಗುವುದರಲ್ಲಿ ಸಂದೇಹವಿಲ್ಲ. ಅವನ ಕರುಣೆಗಾಗಿ ಈತ ಸದಾ ಶ್ರಮಿಸಬೇಕು. ಗುಡಿಯಲ್ಲಾಗಲೀ, ಬೇರೆಲ್ಲಾದರೂ ಆಗಲಿ ಆತನನ್ನು ಕಾಣುವ ಹಂಬಲ ತುಂಬಿರಬೇಕು ಸಾಧಕನಲ್ಲಿ. ಈ ಸಾಧ ಕನ ಬೇಡಿಕೆ ಸ್ಪಷ್ಟವಾಗಿರುವುದು 'ಒಡನಾಡಿ' ಎಂಬ ಗೀತೆಯಲ್ಲಿ.

ದಾರಿಯ ಪರಿಚಯವಿಲ್ಲ; ಸೇರುವ ಗುರಿಯ ಪರಿಚಯವಿಲ್ಲ
ನಿನ್ನ ಪರಿಚಯವೊಂದೆ ನನಗೆಲ್ಲದರ ಪರಿಚಯ,
ಕಡಿದಾದ ಬೆಟ್ಟಗಳಿರೆ ಕೈಹಿಡಿದು ಮೇಲೇರಿಸು, ಆಳವಾದ
ಕಂದರಗಳಿರೆ ಮೆಲ್ಲಗೆ ಕೆಳಗಿಳಿಸು. ಮುಳ್ಳು ಕೆಸರುಗಳಿರೆ
ಮೇಲೆತ್ತಿ ದಾಟಿಸು. ಮರುಭೂಮಿಗಳಿರೆ ಹಾಡಿ ಹುರಿದುಂಬಿಸು
ಯಾರೂ ತುಳಿಯದ ಹಾದಿಯಲಿ ತವರೂರಿಗೆ ಹೊರಟಿರುವೆನು
ನನ್ನದು ಸಿಡಿಲು ಮಿಂಚುಗಳ ಹಾದಿ. ಬೇಡವೆಂದರೆ ಹಲರು; ನುಗ್ಗು
ವಿಂಬರು ಎಲ್ಲಿಯೊ ಕೆಲರು.
ಒಂಟಿಗರ ಸಂಗಡಿಗನೇ ಸಾಹಸಿಗಳೊಡನಾಡಿಯೆ, ಕೈಹಿಡಿದು
ಕಡೆ ಹಾಯಿಸೆನ್ನ !
–(ಕಿಂಕಿಣಿ: ಪದ್ಯ ೧೧. ಪುಟ ೧೫).

ಇಂಥವೆನಿತೋ ಕವನ ಸಂಕುಲ ಈ ಕಿಂಕಿಣಿ. ಕಾಯಕಕ್ಕೆ ಮುಗಿದ ಕವಿ, ಸೃಷ್ಟಿಯ ಪವಾಡವನ್ನು ಮನಸಾ ಮೆಚ್ಚಿದ್ದಾರೆ, ಪ್ರಕೃತಿಗೆ ಮಾರುಹೋಗಿದ್ದಾರೆ, ಅಪರೋಕ್ಷಾನುಭೂತಿಯಿಂದ ಅಮೃತ ಪುತ್ರರಾಗಿದ್ದಾರೆ. ಆಧುನಿಕ ಕನ್ನಡ ಉಪನಿಷತ್ ಎನಿಸಬಲ್ಲ 'ಕಿಂಕಿಣಿ' ಅನವರತ ಅಮೃತಸ್ರೋತವಾಗಲಿ !

# ಕೆಳದಿಯ ಅರಸರು

**ಪೀಠಿಕೆ:**

ಯಾವುದೇ ಸಾಮ್ರಾಜ್ಯದ ಶ್ರೀಮಂತಿಕೆಯ ಹಿನ್ನಲೆಯಲ್ಲಿ ಅದರ ಅಧೀನ ರಾಜ್ಯಗಳ ಅವಿಶ್ರಾಂತ ದುಡಿಮೆ ಇದೆ ಎಂಬು ದನ್ನು ಮರೆಯಲಾಗದು. ಈ ಹೇಳಿಕೆಗೆ ನಿಂತ ನಿದರ್ಶನ ಕೆಳದಿ. ಕೆಳದಿ ವಿಜಯನಗರದ ಅಧೀನ ರಾಜ್ಯ– ಒಂದು ಕಾಲಕ್ಕೆ– ಅನಂತರ ಅಲ್ಲ. ಅನಂತರದಲ್ಲಿ ಅದು ಒಮದು ಸ್ವತಂತ್ರ ಸಾಮ್ರಾಜ್ಯ. ಆದರೆ ಅದು ಮೊದಲು ಅಸ್ತಿತ್ವಕ್ಕೆ ಬಂದ ದಿನಗಳಲ್ಲಿ. ಅದರ ಸಂವರ್ಧನೆಯ ಸಂದರ್ಭಗಳಲ್ಲಿ ವಿಜಯನಗರದ ಅನನ್ಯ ಆಶೀರ್ವಾದ ಇದೆ. ರಕ್ಕಸ ತಂಗಡಿಯ ಕಥನದ ನಂತರ ವಿಜ ಯನಗರ ಹಾಳಾದ ಮೇಲೆ ಅದರ ಅಧೀನದಲ್ಲಿದ್ದ ಅನೇಕ ಪಾಳೆಯಪಟ್ಟುಗಳು ತಲೆ ಎತ್ತದ್ದುಂಟು; ನಾಯಿಕೊಡೆಗಳಂತೆ ಬೆಳೆ ದಿದ್ದೂ ಉಂಟು. ಆದರೆ ಕೆಳದಿ ಅಂತಹ ಪುಂಡರ ಪಾಳೆಯಪಟ್ಟಾಗಿರಲಿಲ್ಲ. ವಿಜಯನಗರದ ವಯಭವದ ದಿನಗಳಲ್ಲೇ ಜನ್ಮ ತಲೆದು. ಅದರ ಅವನತಿಯ ಕಾಲದಲ್ಲಿ ತನ್ನ ಕೈಲಾದ ಸೇವೆ ಸಲ್ಲಿಸಿ ಕೃತಾರ್ಥವಾಗಿದೆ. ಅಷ್ಟೇ ಅಲ್ಲದೆ ವಿಜಯನಗರದ ಪತನಾ ನಂತರದ ಒಂದು ಪತಿತ ಪಾಳೆಯಪಟ್ಟು ಎನಿಸಿಕೊಳ್ಳದೆ, ಸಾಹಿತ್ಯ, ಸಂಸ್ಕೃತಿ, ಸಾಹಸ, ಸಜ್ಜನಿಕೆ, ಸರ್ವಧರ್ಮ ಸಹಿಷ್ಣುತೆ ಮೊದ ಲಾದ ಸದ್ಗುಣಗಳಿಂದ ವಿಜಯನಗರದ ವೈಭವ, ವೈಶಿಷ್ಟ್ಯಗಳನ್ನು ತಾನೂ ಮೆರೆದು, ವಿಜಯನಗರ ಸಮ್ರಾಜ್ಯದ 'ಉತ್ತರಾಧಿಕಾರಿ ಸಾಮ್ರಾಜ್ಯ' ಎಂಬ ಕೀರ್ತಿಗೆ ಕಾರಣವಾಗಿದೆ. ಇದು ತನ್ನ ಪ್ರಾಬಲ್ಯದ ದಿನಗಳಲ್ಲಿ ಪ್ರಜಾಪಾಲನೆ, ಧರ್ಮರಕ್ಷಣೆಗಳನ್ನು ನಿಷ್ಠೆ ಯಿಂದ ಪಾಲಿಸಿದೆ. ಉದಾಹರಣೆಗೆ ಉತ್ತರದಿಂದ ದಾಳಿ ಬರುತ್ತಿದ್ದ ಮೊಗಲರ ಹಾವಳಿಯನ್ನು ತಡೆಗಟ್ಟಲು ಇದ್ದ ಶಿವಾಜಿ ವಿಜ ಯನಗರಗಳು ಆಗ ಇಲ್ಲವಾಗಿದ್ದವು. ಅಂದು ದಕ್ಷಿಣಕ್ಕಿದ್ದ ಒಂದೇ ಒಂದು ಆಸೆಯ ನೆಲೆ ಎಂದರೆ ಕೆಳದಿ. ಅದು ಅ ಸಂಕಷ್ಟ ಸಂದರ್ಭದಲ್ಲಿ ಸಮರ್ಥನೀಯವಾಗಿ ತನ್ನ ಪಾತ್ರವನ್ನು ನಿರ್ವಹಿಸಿ, ಭರತ ಖಂಡದ ಇತಿಹಾಸದ ಕೃತಜ್ಞತೆಗೆ ಪಾತ್ರವಾಯಿತು. **ಆಳ್ವಿಕೆ:** ಕೆಳದಿ ಶಿವಮೊಗ್ಗಾ ಜಿಲ್ಲೆ, ಸಾಗರ ತಾಲ್ಲುಕಿನ ಒಂದು ಪುಟ್ಟ ಗ್ರಾಮ. ಅಂದು ಸುಮಾರು ಎರಡು ನೂರು ವರ್ಷಗಳ ಹಿಂದೆ ಇದೊಂದು ಸಾಮ್ರಾಜ್ಯದ ವೈಭವದ ರಾಜಧಾನಿಯಾಗಿತ್ತು. ಮಲವರೆಂಬ ವೀರರು ಆಳಿದ್ದರಿಂದ ಇದಕ್ಕೆ ಮಲ್ಲ ಸಾಮ್ರಾಜ್ಯ ವೆಂಬ ಖ್ಯಾತನಾಮವಿದೆ. ಮೊದಲು ಕೆಳದಿಯಲ್ಲಿ ಸ್ಥಾಪಿತವಾದ ಈ ಸಾಮ್ರಾಜ್ಯವು ಇಕ್ಕೇರಿಗೂ, ತದನಂತರ ಬಿದನೂರಿಗೂ ತನ್ನ ರಾಜಧಾನಿಯನ್ನು ಬದಲಿಸಿಕೊಂಡಿತು. ಉತ್ತರಕ್ಕೆ ಈಗಿನ ಮಿರ್ಜಾನ್  ನದಿ, ಈಶಾನ್ಯಕ್ಕೆ ಮಾಸೂರು ಮತ್ತು ಹೊಳಲ್ಕೆರೆ, ಪೂರ್ವಕ್ಕೆ ಚಿಕ್ಕನಾಯಕನ ಹಳ್ಳಿ, ದಕ್ಷಿಣಕ್ಕೆ ಮಲ್ಲಿ ಪಟ್ಟಣ, ಪಶ್ಚಿಮಕ್ಕೆ ಅಸಮುದ್ರಾಂತ ಭೂಭಾಗ– ಇಷ್ಟು ಸುವಿಸ್ತಾರವಾದ ರಾಜ್ಯ ಕೆಳದಿ. ಸುಮಾರು ಇಪ್ಪತ್ತು ಮಂದಿ ರಾಜ ರಾಣಿಯರಿಂದ, ಸುಮಾರು ಎರಡೂ ಮುಕ್ಕಾಲು ಶತಮಾನಗಳ ಕಾಲ (ಕ್ರಿ.ಶ. ೧೫೦೦–೧೭೬೩) ಆಳಿಸಿಕೋಮಡ ಭಾಗ್ಯ ಇದರದ್ದಾಗಿದೆ. ಇದನ್ನಾಳಿದವರಿಗೆ ಇಕ್ಕೇರಿ ನಾಯಕರು, ಬಿದನುರ ಪ್ರಭುಗಳು ಎಂಬ ಪರ್ಯಾಯನಾಮಗಳಿದ್ದರೂ, 'ಕೆಳದಿಯ ಅರಸರು' ಎಂದು ಕರೆಯುವುದೂ ರೂಢಿ.

ಕೆಳದಿಯನ್ನಾಳಿದವರ ಪೂರ್ವಜರು ಮಣ್ಣಿನ ಮಕ್ಕಳು; ಕೃಷಿಯೇ ಅವರ ಕಾಯಕ. ಆದರೆ ದೈವಯೋಗದಿಂದಲೂ ಸ್ವಸಾಮ ರ್ಥ್ಯದಿಂದಲೂ ಅವರು ಸಾಮ್ರಾಜ್ಯ ಸ್ಥಾಪಕರೆನ್ನಿಸಿಕೊಳ್ಳುವ ಕೀರ್ತಿಗೆ ಕಾರಣರಾದರು. ಈ ಸಾಮ್ರಾಜ್ಯದ ಸಂಸ್ಥಾಪಕ ಚೌಡಪ್ಪ ನಾಯಕ. ಶ್ರೀ ರಾಮೇಶ್ವರನ ಕೃಪೆಯಿಂದ ಅವನಿಗೆ ಭೂಗತವಾಗಿದ್ದ ನಿಧಿಯೊಂದು ದೊರೆಯಿತು. ಅದರ ಜೊತೆಯಲ್ಲಿ ವಿಜಯನಗರದ ಚಕ್ರವರ್ತಿಯ ಅನುಗ್ರಹ ಆಶೀರ್ವಾದಗಳೂ ಲಭಿಸಿದವು. ಚೌಡಪ್ಪ ಎಂಟು ಮಾಗಣೆಗಳ ಒಡೆಯನಾಗಿ ಶಕವರ್ಷ ೧೪೨೨ನೆಯ ಸಿದ್ಧಾರ್ಥಿ ಸಂವತ್ಸರದ ಮಾಘಶುದ್ಧ ೩ರಲ್ಲಿ (ಕ್ರಿಶ. ೧೫೦೦ ಜನವರಿ ೮ರಂದು) ಅಧಿಕಾರ ಸ್ವೀಕರಿಸಿದ. ಇವನು ರಾಜಧಾನಿಯನ್ನು ಕೆಳದಿಯಿಂದ ಇಕ್ಕೇರಿಗೆ ವರ್ಗಾಯಿಸುತ್ತಾನೆ. ಇವನ ನಮತರ ಇವನ ಹಿರಿಯ ಮಗ ಸದಾಶಿವ ನಾಯಕನು ಕ್ರಿ.ಶ. ೧೫೧೪ರಂದು ಪಟ್ಟಕ್ಕೆ ಬಂದ, ೧೫೩೦ರವರೆಗೆ ಆಳಿದ. ಬಿದರೆಯ ಸುಲ್ತಾನನ್ನು ಸದೆಬಡಿದದ್ದಲ್ಲದೆ, 'ಕಾಸರಗೋಡೊಳ್ ತೊಲಗದ ಕಂಬವನ್ನು ನಿಲ್ಲಿಸಿದ' ಮಹಾಯೋಧ. ಇವನ ಪರಾಕ್ರಮದಷ್ಟೇ ಶ್ಲಾಘನೀಯವಾದದ್ದು ಇವನ ಧಾರ್ಮಿಕಾಚರಣೆ. ಈತ ಮದಗದ ಕೆರೆಯ ಕಟ್ಟಡವನ್ನು ಪೂರ್ಣಗೊಳಿಸಿ, ಶೃಂಗೇರಿಯ ಜಗದ್ಗು ರುಗಳನ್ನು ಆ ತಟಾದಡೆಗೆ ಆಹ್ವಾನಿಸಿ, ವಿಜಯನಗರದ ಶ್ರೀ ಕೃಷ್ಣದೇವರಾಯನಿಗೆ ಅವರ ದರ್ಶನ ಮಾಡಿಸಿ, ಉಭಯತ್ರರಿಂ ದಲೂ ಸನ್ಮಾನಿತನಾದವನು. ಕೆಳದಿ ರಾಮೇಶ್ವರ ದೇವರ ಮುಂದಿನ ನಂದಿ ಮಂಟಪವನ್ನು ನಿರ್ಮಿಸಿದ್ದಲ್ಲದೆ, ತನ್ನ ಹೆಸರಿನಲ್ಲಿ "ಸದಾಶಿವಪುರ'ವೆಂಬ ಅಗ್ರಹಾರವನ್ನು ಕಟ್ಟಿಸಿದ್ದಾನೆ. ಇವನ ನಂತರ ಇವನ ತಮ್ಮ ಇಮ್ಮಡಿ ಸದಾಶಿವ (ಭದ್ರಪ್ಪ)ನಾಯಕನೂ (ಕ್ರಿ.ಶ. ೧೫೩೦–೧೫೪೬). ಅನಂತರ ಹಿರಿಯ ಮಗ ದೊಡ್ಡ ಸಂಕಣ್ಣ

ನಾಯಕನೂ (ಕ್ರಿ.ಶ. ೧೫೪೬–೧೫೯೯), ಚಿಕ್ಕ ಸಂಕಣ್ಣ ನಾಯಕನೂ (ಕ್ರಿ.ಶ. ೧೫೯೯–೧೫೭೧), ರಾಮರಾಜ ನಾಯಕನೂ (ಕ್ರಿ.ಶ. ೧೫೭೧–೧೫೮೩) ಆಳುತ್ತಾರೆ.

ಕೆಳದಿಯ ರಾಜರ್ಷಿ ದೊಡ್ಡ ಸಂಕಣ್ಣ ನಾಯನ ಪುತ್ರನಾದ ಹಿರಿಯ ವೆಂಕಟಪ್ಪ ನಾಯಕನು ಕ್ರಿ.ಶ. ೧೫೮೩ ರಿಂದ ಕ್ರಿ.ಶ. ೧೬೩೦ ರವರೆಗೆ ರಾಜ್ಯವಾಳಿದ್ದಾನೆ. ಇವನ ಕಾಲಕ್ಕಾಗಲೇ ವಿಜಯನಗರ ಹಾಳಾಗಿತ್ತು. ಕೆಳದಿ ಸಂಪೂರ್ಣ ಸ್ವಾತಂತ್ರ್ಯ ಪಡೆದದ್ದು ಇವನ ಕಾಲದಲ್ಲೇ. ಇವನು ರಾಜ್ಯವನ್ನು ಸುಭದ್ರಗೊಳಿಸಿದ್ದಲ್ಲದೆ, ಕವಿಲೆದುರ್ಗದ ಕೋಟೆ (ಭುವನಗಿರಿದುರ್ಗ)ಯನ್ನು ಬಲಪಡಿಸುತ್ತಾನೆ. ಕಾಶಿಯಿಂದ ತಂದ ಶಿವಲಿಂಗವನ್ನು ಸ್ಥಾಪಿಸಿ, ಆ ಅನಂತ ಶಿವಪೂರ್ವಕ ಸ್ಥಳವನ್ನು "ಆನಂದಾಪುರ" ಎಂದು ಕರೆದು, ನಗರ ನಿರ್ಮಿಸಿ, ಅನೇಕ ದೇವಾಲಯಗಳನ್ನು ಕಟ್ಟಿಸುತ್ತಾನೆ. ಶೃಂಗೇರಿಯ ಜಗದ್ಗುರುಗಳಾಗಿದ್ದ ಶ್ರೀ ಅಭಿನವ ನರಸಿಂಹಭಾರತಿಯವರನ್ನು ಅವರ ಶಿಷ್ಯರಾದ ಶ್ರೀ ಸಚ್ಚಿದಾನಂದ ಭಾರತಿಯವರನ್ನೂ ಅನನ್ಯ ಭಕ್ತಿಯಿಂದ ಗೌರವಿಸಿದ್ದಾನೆ. ಶ್ರೀ ರಾಮಾನುಜ ಪಂಥದವರಿಗೆ ದತ್ತಿಯನ್ನೂ ಮುಸಲ್ಮಾನರಿಗೆ ಮಸೀದಿಗಳನ್ನೂ ಕಟ್ಟಿಸಿ, ಜೈನ ಚೈತ್ಯಾಲಯಕ್ಕೆ ಭೂಸ್ವಾಸ್ಥ್ಯೆಯನ್ನೇರ್ಪ ಡಿಸಿ ಸರ್ವಧರ್ಮಗಳನ್ನೂ ಮಾನಿಸಿದ್ದಾನೆ. ಅನೇಕ ಜನ ಕನ್ನಡ ಮತ್ತು ಸಂಸ್ಕೃತ ಕವಿಗಳಿಗೆ ಆಶ್ರಯದಾತನೂ ಆಗಿದ್ದಾನೆ.

ಇವನ ನಂತರ ವೀರಭದ್ರನಾಯಕ (ಕ್ರಿ.ಶ. ೧೬೩೦–೧೬೪೬), ಶಿಸ್ತುಗಾರ ಶಿವಪ್ಪನಾಯಕ (ಕ್ರಿ.ಶ. ೧೬೪೬–೧೬೬೧), ಕಿರಿಯ ವೆಂಕಟ ಪ್ಪನಾಯಕ (ಕ್ರಿ.ಶ. ೧೬೬೧–೧೬೬೨), ಭದ್ರಪ್ಪನಾಯಕ (ಕ್ರಿ.ಶ. ೧೬೬೨–೧೬೬೪), ಹಿರಿಯ ಸೋಮಶೇಖರ ನಾಯಕ (ಕ್ರಿ.ಶ. ೧೬೬೪–೧೬೭೨), ಕುತ್ಸಿತ ಶಿವಪ್ಪನಾಯಕ (. . . . . ) ಮತ್ತು ಚೆನ್ನಮ್ಮಾಜಿ (ಕ್ರಿ.ಶ. ೧೬೭೨–೧೬೯೮) ಪಟ್ಟಕ್ಕೆ ಬರುತ್ತಾರೆ. ಇವರಲ್ಲಿ ಶಿವಪ್ಪ ನಾಯಕ ಮತ್ತು ಅವನ ಸೊಸೆ ಕೆಳದಿಚೆನ್ನಮ್ಮಾಜಿಯವರ ಆಳ್ವಿಕೆಯ ಅವಧಿಗಳು ತುಂಬಾ ಮಹತ್ವವಾದವು ಗಳು. ಚೆನ್ನಮ್ಮಾಜಿಯು ಕೊಲ್ಲೂರ ಮೂಕಾಂಬಿಕೆಯ ಅಂಶ ಸಂಭೂತಳೆಂದು ಭಾವಿತಳಾಗಿದ್ದಾಳೆ. ಚಿಕ್ಕ ವಯಸ್ಸಿನಲ್ಲೇ ವಿಧವೆ ಯಾದ ಇವಳು ಶಿವಾಜಿಯ ಕಿರಿಯ ಮಗ ರಾಜಾರಾಮನಿಗೆ ಆಶ್ರಯವಿತ್ತು, ದೆಹಲಿಯ ಬಾದಶಹ ಔರಂಗಜೇಬನ ರೋಷಕ್ಕೆ ಪಾತ್ರಳಾಗುತ್ತಾಳೆ. ಪರಿಣಾಮವಾಗಿ ದಂಡೆತ್ತಿ ಬಂದ ಸುಲ್ತಾನನ್ನು ಸದೆಬಡಿದು ಜಯಸೀಲಳಾಗುತ್ತಾಳೆ. ಇವಳ ನಂತರ ಇವಳ ದತ್ತುಪುತ್ರ ಹಿರಿಯ ಬಸವಪ್ಪನಾಯಕನು ಕ್ರಿ.ಶ. ೧೬೯೮ರಂದು ಪಟ್ಟಕ್ಕೆ ಬರುತ್ತಾನೆ; ೧೭೧೫ರ ವರೆಗೆ ಅತ್ಯಂತ ವೈಭವದಿಂದ ರಾಜ್ಯವಾಳುತ್ತಾನೆ. ಸಕಲ ವಿದ್ಯಾಪಾರಂಗತನಾದ ಈತನು ಸ್ವಯಂ ಕವಿಯೂ, ಕವಿಜನಾಶ್ರಿತನೂ ಆಗಿದ್ದಾನೆ. ಧರ್ಮಪ್ರಭು ಬಸವರಾಜನ ಆಳ್ವಿಕೆಯು ಕೆಳದಿಯ ಇತಿಹಾಸದಲ್ಲಿ ಒಂದು ಸುವರ್ಣ ಸಂಪುಟ ಎನ್ನಬಹುದು. ಇವನಾದ ಮೇಲೆ ಕಿರಿಯ ಸೋಮಶೇಖರ ನಾಯಕ (ಕ್ರಿ.ಶ. ೧೭೧೫–೧೭೪೦), ಕಿರಿಯ ಬಸವಪ್ಪನಾಯಕ (ಕ್ರಿ.ಶ. ೧೭೪೦– ೧೭೫೫), ಚನ್ನಬಸಪ್ಪ ನಾಯಕ (ಕ್ರಿ.ಶ. ೧೭೫೫–೧೭೫೮), ಚೆನ್ನಮ್ಮಾಜಿ ಮತ್ತು ಮೂರನೆಯ ಸೋಮಶೇಖರನಾಯಕ (ಕ್ರಿ.ಶ. ೧೭೫೮–೧೭೬೩) ಕ್ರಮವಾಗಿ ರಾಜ್ಯವಾಳುತ್ತಾರೆ. ಆದರೆ ಹೊರಗಿನ ಶತ್ರುಗಳಿಂದ ಒಳಗಿನ ಗೋಮುಖವ್ಯಾಘ್ರಗಳಿಂದ ಸಾಮ್ರಾಜ್ಯ ಹೈದರಲಿಯ ವಶವಾಗುತ್ತದೆ. ಬಹುವೈಭವದಿಂದ ಆಳಿದ ಕೆಳದಿ ಅರಸುಮನೆತನ ಹಾಳಾಗಿ, ಪುಣೆಗೆ ಹೋಗುವ ಮರ್ಗದಲ್ಲಿ ನರಗುಂದದಲ್ಲಿ ಉಳಿಯುತ್ತದೆ. ಈ ವಂಶದ ಶಿವರಾಜ ಚನ್ನಬಸವರಾಜ ಅರಸು ಎಂಬುವರೂ ಈಗಲೂ ವಕೀಲ ವೃತ್ತಿಯನ್ನು ಮಾಡಿಕೊಂಡು ನರಗುಂದದಲ್ಲೇ ಇದ್ದರೆ.* ಇವರ ಮಗ ಬಸವರಾಜೇಂದ್ರ ಪ್ರಬುದ್ಧಮಾನಕ್ಕೆ ಬಂದಿದ್ದಾನೆ.

**ಸಂಸ್ಕೃತಿ ಸಮೀಕ್ಷೆ**

ಕೆಳದಿಯನ್ನಾಳಿದವರು ಧರ್ಮಪ್ರಭುಗಳು. ಪ್ರಜಾಪೀಡನೆಯಲ್ಲೇ ನಿರತರಾದ ಪುಮಡುಪಾಳೆಯಗಾರರಲ್ಲ. ಅವರದು ವಿಶ್ವವಿಶಾಲ ಭಾವನೆ. ಅವರು ಜಾತಿಯಲ್ಲಿ ವೀರಶೈವರು; ಆದರೆ ಭಾವನೆಯಲ್ಲಿ ಭಾರತೀಯರು. ಧರ್ಮ, ರಾಜಧರ್ಮ ಮತ್ತು ಮಾನವ ಧರ್ಮ– ಇವುಗಳನ್ನು ಬೆಳಗಿಸಿದ ಮಹಾನುಭಾವರು. ಡಾ॥ಜಿ.ಎಸ್. ದೀಕ್ಷಿತರು ಹೇಳುವಂತೆ– 'ಸವರ ಗುಣಾತಿಶಯಗಳು ಕೆಳದಿ ಚರಿತ್ರೆಯ ಓದುಗರ ಮನಸ್ಸಿನ ಮೇಲೆ ಅಚ್ಚಳಿಯದೆ ಉಳಿಯದಿರಲರವು. ಚೌಡಪ್ಪನ ದೈವಭಕ್ತಿ, ಕರ್ತೃತ್ವಶಕ್ತಿ, ಸದಾಶಿವ ನಾಯಕನ ಮಹಾಪರಾಕ್ರಮ, ದೊಡ್ಡ ಸಂಕಣ್ಣನಾಯಕನ ಘನ ವೈರಾಗ್ಯ, ಚಿಕ್ಕ ಸಂಕಣ್ಣನಾಯನ ಸ್ವಾಮಿನಿಷ್ಠೆ, ಹಿರಿಯ ವೆಂಕಟಪ್ಪ ನಾಯಕನ ಶೌರ್ಯ, ರಾಜಾರಣ ಪಟುತ್ವ, ಶಿವಪ್ಪನಾಯಕನ ಶಿಸ್ತು, ಮುತ್ಸದ್ಧಿತನ, ಹಿರಿಯನಬಸವಪ್ಪನಾಯಕನ ಪಾಂಡಿತ್ಯ, ಚೆನ್ನಮ್ಮಾಜಿಯ ಮತ್ತು ವೀರಮ್ಮಾಜಿಯ ಅಸಾಧಾರಣ ಸಾಮರ್ಥ್ಯ, ಇವೆಲ್ಲಕ್ಕೂ ಮಿಗಿಲಾಗಿ ಕೆಳದಿ ಅರಸರ ಧರ್ಮ ಸಹಿಷ್ಣುತೆ, ಮತ್ತು ಸಮದರ್ಶಿತ್ವ ಪ್ರಶಮಸಾರ್ಹವಾಗಿವೆ.' ಅವರ ನೂರಾರು ಶಾಸನಗಳಲ್ಲಿ ಪ್ರಕಟಗೊಂಡಿರುವ ಅವರ ಬಿರುದಿನ ಒಕ್ಕಣೆ ಯಲ್ಲಿ 'ಯಡವ ಮುರಾರಿ ಕೋಟೆ ಕೋಲಾಹಲ' ಎಂಬುದು

ಅವರ ಪರಾಕ್ರಮವನ್ನೂ, ಪೌರುಷ ಪ್ರತಾಪಾದಿಗಳನ್ನು ಬಿತ್ತರಿ ಸಿದರೆ, 'ವಿಶುದ್ಧ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಠಾಪಕ' ಎಂಬುದು ಅವರ ಧಾರ್ಮಿಕ ಮನೋಭಾವನೆಯನ್ನೂ, ವೈದಿಕ ಧರ್ಮದ ಬಗೆಗೆ ಅವರಿಗಿದ್ದ ಭಕ್ತಿಯನ್ನೂ, 'ಗೋದೇವ ಬ್ರಾಹ್ಮಣ ಪ್ರತಿಪಾಲಕ' ಎಂದಾಗ 'ಸಕಲ ಜೀವಾತ್ಮರಿಗೆ ಲೇಸನೇ ಬಯಸುವ' ಅವರ ದಯಾಮಾರ್ಗವೂ ಅಭಿವ್ಯಕ್ತವಾಗುತ್ತವೆ.
ಮತ್ತೊಂದು ಗಮನಾರ್ಹವಾದ ಅಂಶವೆಂದರೆ ಕೆಳದಿಯ ಧರ್ಮ ಮತ್ತು ದೇಶ ಎರಡನ್ನೂ ತಮ್ಮ ಎರಡು ಕಣ್ಣುಗಳೆಂದು ಭಾವಿಸಿ ಕಾಪಾಡಿಕೊಂಡು ಬಂದಿದ್ದಾರೆ. ಅವರ ಆಡಳಿತದ ಅವಧಿಯಲ್ಲಿ ಬ್ರಾಹ್ಮಣರಿಗೆ ಅಗ್ರಹಾರಗಳನ್ನೂ, ವೀರಶೈವರಿಗೆ ಶಿವಪುರಿಗಳನ್ನೂ, ಜೈನರಿಗೆ ಬಸದಿಗಳನ್ನೂ, ಮುಸಲ್ಮಾನರಿಗೆ ಮಸೀದಿಗಳನ್ನೂ, ಕ್ರೈಸ್ತರಿಗೆ ಚರ್ಚುಗಳನ್ನೂ ಕಟ್ಟಿಸಿಕೊಟ್ಟು, ದಾನ ದತ್ತಿಗಳನ್ನಿತ್ತು ಪ್ರೋತ್ಸಾಹಿಸಿದ್ದಾರೆ. ಸರ್ವಧರ್ಮಗಳನ್ನೂ ಈ ಧರ್ಮಪ್ರಭುಗಳು ಸಮಾನದೃಷ್ಟಿಯಿಂದ ನೋಡಿಕೊಂಡಿದ್ದಾರೆ. ನಿಷ್ಠಾವಂತ ಜಂಗಮಪ್ರೇಮಿಯಾದ ಕೆಳದಿಯ ಸದಾಶಿವರಾಯನು ಹೂವಿನ ಹಂತಯ್ಯನು ಕಟ್ಟಿಸಿದ ಮಹತ್ತಿನ ಮಠಕ್ಕೆ ಭೂಸ್ವಾಸ್ಥ್ಯ ಬಿಟ್ಟಂತೆ, ಸದಾಶಿವಪುರವೆಂಬ ಅಗ್ರಹಾರವನ್ನು ಕುಶಾವತೀ ತೀರದಲ್ಲಿ ಕಟ್ಟಿಸಿ ಬ್ರಾಹ್ಮಣರಿಗೆ ಶಿವಾರ್ಪಿತ ಮಾಡಿದ್ದಾನೆ. ರಾಮರಾಜನಾಯಕರು ಉಡುಪಿಯ ಶ್ರೀಕೃಷ್ಣದೇವರಿಗೂ ವಾದಿರಾಜತೀರ್ಥ ಶ್ರೀ ಪಾದಂಗಳಿಗೂ, ಬಂಕಾಪುರದ ರಘುನಿಧಿ ತೀರ್ಥ ಶ್ರೀಪಾದಂಗಳಿಗೂ ಅನೇಕ ಭೂಸ್ವಾಸ್ಥಗಳನ್ನು ದಾನವಾಗಿ ಕೊಟ್ಟಿದ್ದಾನೆ. ಹಿರಿಯ ವೆಂಕಟಪ್ಪನಾಯಕನು ಸದಾಶಿವಸಾಗರ (ಈಗಿನ ಸಾಗರ), ಬಾರಕೂರು, ಆನಂದಪುರ ಮೊದಲಾದಲ್ಲಿನ ಮಠಗಳಿಗೆ ದಾನದತ್ತಿ ನೀಡಿದ್ದಾನೆ. ಮುಖ್ಯವಾಗಿ ಶೃಂಗೇರಿಮ ಠದ ಪುನಃಪ್ರತಿಷ್ಠಾಪನೆಗೆ ಕಾರಣನಾಗಿದ್ದಾನೆ. ಅಂದಿನ ಜಗದ್ಗುರುಗಳಾಗಿದ್ದ ಶ್ರೀ ಶ್ರೀ ಶ್ರೀ ಅಭಿನವ ನೃಸಿಂಹ ಭಾರತಿಗಳನ್ನು ಭಯಭಕ್ತಿಯಿಂದ ಕಂಡು ಗೌರವಿಸಿದ್ದಾನೆ. ವೀರಾಮಬಪುರವೆಂಬ ಅಗ್ರಹಾರವನ್ನು ಕಟ್ಟಿಸಿ, ಬ್ರಾಹ್ಮಣೋತ್ತಮರಿಗೆ ಧಾರೆಯೆರೆದು ಸ್ಥಿರಶಾಸನ ಹಾಕಿಕೊಟ್ಟಿದ್ದಾನೆ. ಜೈನಧರ್ಮೀಯರಿಗೆ ಅನುಕೂಲವಾಗಲೆಂದು ವೆಂಕಟಾದ್ರಿಭೂಪನು ಮೇಳಿಗೆಯಲ್ಲಿ ಶ್ರೀಮದನಂತ ನಾಥ ಚೈತ್ಯಾಲಯದಲ್ಲಿ ನಡೆವ ಧರ್ಮವಿನಿಯೋಗಕ್ಕೆ ಸರ್ವ ಮಾನ್ಯದ ಸ್ವಾಸ್ಥೆ ನೀಡಿದ್ದಾನೆ. ಅಂತೆಯೇ ಭುವನಗಿರಿಯಲ್ಲಿ ಕಟ್ಟಿ ಸಿದ ಮಸೀದಿಗೆ ಧರ್ಮಶಾಸನವನ್ನಿತ್ತು ಇಸ್ಲಾಂ ಧರ್ಮಕ್ಕೂ ಪೋಷಣೆ ನೀಡಿದ್ದಾನೆ.

ವೀರಭದ್ರನಾಯಕನು ಇಕ್ಕೇರಿಯ ಮೈಲಾರೇಶ್ವರ ದೇವಾಲಯಕ್ಕೆ ದತ್ತಿ ಕೊಟ್ಟಿರುವುದಲ್ಲದೆ, ಕೆಳದಿ ಸೀಮೆಯ ಅಕ್ಕಿಪೇಟೆಯಲ್ಲಿ ಮಹತ್ತಿನ ಮಠ ಸ್ಥಾಪಿಸಲು ಭೂಮಿ ಬಿಟ್ಟಿದ್ದಾನೆ. ಶಿವಪ್ಪನಾಯಕನು ಶಿವರಾಜಪುರವೆಂಬ ಸಗ್ರಹಾರವನ್ನು ಬ್ರಾಹ್ಮಣರಿಗೆ ಶಿವಾ ರ್ಪಿತಮಾಡಿ, ಶೃಂಗೇರಿಯ ಮಠಕ್ಕೂ, ಕಾಶೀಕ್ಷೇತ್ರಕ್ಕೂ ಎಂದಿನಂತೆ ಕಾಣಿಕೆ ಸಲ್ಲಿಸಿದ್ದಾನೆ. ಬ್ರಾಹ್ಮಣರಿಗೆ ಅನೇಕ ದಾನಗಳನ್ನಿತ್ತು ಸಂತೈಸಿದ್ದಾನೆ.

ಕ್ರೈಸ್ತಧರ್ಮವೂ ಸಹ ಇವನ ಕಾಲದಲ್ಲಿ ಸಂತೋಷದ ಉಸಿರಾಡಿದೆ. ಭದ್ರಪ್ಪನಾಯಕನು ತೀರ್ಥಮುತ್ತೂರು ಮಠದ ಜ್ಞಾನೇಂದ್ರ ಭಾರತೀ ಸ್ವಾಮಿಗಳವರಿಗೂ ಮುಳಬಾಗಿಲು ವೈಷ್ಣವ ಮಠಕ್ಕೂ ಧರ್ಮಶಾಸನ ನೀಡಿದ್ದಾನೆ. ಸೋಮಶೇಖರನು ಕೂಡಲ ಕಲ್ಲುಮಠದ ರಘುರಾಮ ತೀರ್ಥರಿಗೆ ಗಾಜನೂರು ಸೀಮೆಯನ್ನು ಬಿಟ್ಟು ಕೊಟ್ಟಿದ್ದಾನೆ. ವೀರಮಾತೆ ಚೆನ್ನಮ್ಮಾಜಿಯು ಲಕ್ಷದ ತೊಂಬತ್ತಾರು ಸಾವಿರ ಜಂಗಮಸ್ತೋಮಕ್ಕೆ ಮಹಾದಾಸೋಹ ನಡೆಸಿದ್ದಲ್ಲದೆ, ಸೋಮಶೇಖರಪುರ ಅಗ್ರಹಾರವನ್ನು ಶ್ರೋತ್ರೀಯ ಬ್ರಾಹ್ಮಣರಿಗೆ ಶಿವಾರ್ಪಿತ ಮಾಡಿದ್ದಾಳೆ. ಅಲ್ಲದೆ, ಈ ವೀರಮಾತೆಯು–"ತಮ್ಮ ಸೇವಕರಾದ ಶಿವಭಕ್ತ ಗುರಿಕಾರ ಶೈವ ವೈಷ್ಣವ ಬ್ರಾಹ್ಮಣ ಗುರಿಕಾರರ ಮುಖದಿಂ ಮಠಮಾನ್ಯ ದೇವಸ್ಥಾನಾಗ್ರಹಾರಾದಿ ನಾನಾವಿಧ ದಾನಧರ್ಮಂಗಳನಾಗಿಸಿ ಶಾಶ್ವತಧರ್ಮ ಕೀರ್ತಿಗಳಂ ಸಂಪಾಧಿಸಿ ಸದ್ಧರ್ಮದಿಂ ರಾಜ್ಯ ಪ್ರತಿಪಾಲನಂಗೈದು–ಧರ್ಮದೇವತೆಯೆನಿಸಿದ್ದಾಳೆ."

ಕೆಳದಿಯಲ್ಲಿ ಹೀಗೆ ರಾಜ ರಾಣಿಯರೇ ಅಲ್ಲದೆ ಸೂಳೆಯರೂ ಸಹ ಧರ್ಮ ಪರಾಯಣರಾಗಿದ್ದಾರೆ. ಆರುನಾಡ ಸೀಮೆಯ ಕಂದಡಿಗನ ಮಾನಿಮೇಳದ ಶೀವಲಿಂಗಿಯು ಮಹತ್ತಿನಮಠಕ್ಕೆ ಕ್ರಯದಾನ ಮಾಡಿದ್ದಾಳೆ. ಜಂಬುಖಂಡಿಯ ಚೆನ್ನಿಯು ಜೆನಿಗ್ರಾ ಮದಲ್ಲಿ ಮಹತ್ತಿನಮಠ ಕಟ್ಟಿಸಿದ್ದಾಳೆ. ಕೆಳದಿ ಧಾರ್ಮಿಕರ ನಾಡು, ಧರ್ಮಪ್ರಭುಗಳು ಆಳಿದ ರಾಜ್ಯ. ಅಲ್ಲಿ ಕೆಟ್ಟ ಮನುಷ್ಯರಷ್ಟೇ ಅಲ್ಲ, ಕೆಟ್ಟ ಪ್ರಾಣಿಗಳೂ ಶಿಕ್ಷಿಸಲ್ಪಡುತ್ತಿದ್ದವು.

ಹೀಗೆ ಕೆಳದಿಯನ್ನಾಳಿದ ಎಲ್ಲ ರಾಜ ರಾಣಿಯರೂ ಎಲ್ಲ ಧರ್ಮಗಳಿಗೂ ರಕ್ಷಣೆನೀಡಿ ಪೋಷಿಸಿದ್ದಾರೆ.

“The kings and queens of keladi were generally wise and benevolent monarchs. They had the catholicity of vision and breadth of out look. They were not narrow minded bigots, but broad- minded rulers who gave shelter to various religious, faiths, creeds and cults in their state such as saivism, Virasaivism, Vishnavism, Muhammadanism, Jainism and Christianity”
ವೀರಶೈವ ಮಠಗಳೂ, ಬ್ರಾಹ್ಮಣರ ಅಗ್ರಹಾರಗಳೂ ಆ ಕಾಲದ ವಿದ್ಯಾ ಕೇಂದ್ರಗಳಾಗಿದ್ದುಕೊಂಡು, ವಿದ್ಯಾದಾನ ಮಾಡಿ ಅಜ್ಞಾನ ‘ವನ್ನೂ ಅನುಕರಣೆಯನ್ನೂ ನೀಗಿವೆ. ಅಂತೆಯೇ ಅತಿಥಿಗಳಿಗೆ ಸತ್ಕಾರ ಕ್ಷೇತ್ರಗಳಾಗಿದ್ದು ನಮ್ಮ ಸಂಸ್ಕೃತಿಯನ್ನು ಸಂರಕ್ಷಿಸಿಕೊಂಡು ಬಂದಿವೆ.

ಪುಣ್ಯಶ್ಲೋಕನಾದ ಚೌಡಪ್ಪನಾಯಕನ ವಂಶೋದ್ಭವರಾದ ಕೆಳದಿ ರಾಜರುಗಳೆಲ್ಲರೂ ಸತ್ಯವಂತರೂ, ಶುದ್ಧರೂ ಸಮಸ್ತ ರಾಜ ವಂದ್ಯರೂ ಜಗದ್ಭರಿತ ತೇಜಸ್ವಿಗಳೂ ತಮ್ಮದೇ ಆದ ಅಧಿಕತಮ ಗೌರವಾನ್ವಿತರೂ, ಸುಂದರವಾದ ಗುಣ–ಗಣ ಮಣಿ ಮಾಲಿಕೆ ಯಲ್ಲಿ ಶಿಖಾಮಣಿಗಳೂ ಆಗಿ ಯಾವ ಕಾಲಕ್ಕೂ ಯೋಗ್ಯರೆನಿಸಿ ಮೆರೆದಿದ್ದಾರೆ.

---

ಇವರು ಇತ್ತೀಚೆಗೆ ದುರ್ಮರಣಕ್ಕೀಡಾದರು.

# ಪ್ರವಾಸ ಸಾಹಿತ್ಯ (TRAVELOGUE)

-----------------------------------------------------------------------------------------
---

'Travel, in the younger sort, is a part of education; in elder, a part of experience.' ಇದು ಇಂಗ್ಲಿಷ್ ಸಾಹಿತ್ಯದ ಪ್ರಬಂಧ ಪ್ರಾಕಾರದ ಜನಕನೆನಿಸಿದ ಫ್ರಾನ್ಸಿಸ್ ಬೇಕನ್ನನ ಅನುಭವೋಕ್ತಿ ಪ್ರವಾದ ಬಗ್ಗೆ. ನಮ್ಮಲ್ಲಿರುವ 'ದೇಶ ತಿರುಗಬೇಕು, ಕೋಶ ಓದಬೇಕು' ಎಂಬ ನಾಣ್ನುಡಿಯೂ ಇಷ್ಟೇ ಅರ್ಥಪೂರ್ಣವಾದದ್ದು. ಹದಿನಾರನೆಯ ಶತಮಾನ ಆಂಗ್ಲ ಇತಿಹಾಸದಲ್ಲಿ ಒಂದು ಮಹತ್ವಪೂರ್ಣವಾದ ಕಾಲ. ಸಾಹಿತ್ಯ ಸೃಷ್ಟಿಯಲ್ಲಿ ಮಹೋನ್ನತಿ, ವೈಜ್ಞಾನಿಕ ಸಂಶೋಧನೆ ಹಾಗೂ ನೂತನ ಆವಿಷ್ಕಾರಗಳ ಜೊತೆಗೆ ಪೃಥ್ವಿಯ ಪ್ರದೇಶಗಳನ್ನೂ, ನೂತನ ಖಂಡಗಳನ್ನೂ ಪತ್ತೆ ಹಚ್ಚಿ ತಮ್ಮ ವಿಜಯಪತಾಕೆಯನ್ನು ಎತ್ತಿಹಿಡಿಯಲು ಸತತವಾಗಿ ಶ್ರಮಿಸಿದ ಯುಗ ಅದು. ಅವರ ಸಾಹಸ ಪ್ರವೃತ್ತಿಯ ಫಲವಾಗಿ ಅಮೇರಿಕೆಯನ್ನು ಕಂಡುಹಿಡಿಯಲಾಗಿತ್ತು. ಅದರ ಬಗ್ಗೆ ವಿಶ್ವಕವಿ ಷೇಕ್ಸ್ಪಿಯರ್‌ನಿಂದ 'ಟೆಂಪಟೆಸ್ಟ್' ಎಂಬ ಸಾಂಕೇತಿಕ ನಾಟ ಕವೂ ರಚಿತವಾಯಿತು. ಅದೇನೇ ಇರಲಿ, ಬ್ರಿಟಿಷರ ಮಗತ್ವಾಕಾಂಕ್ಷೆ ಬಹುರೂಪಿಯಾಗಿ ಅನೇಕಾನೇಕ ಸಾಹಸಿಗಳನ್ನು ಈ ಉದ್ಯ ಮದಲ್ಲಿ ತಳ್ಳಿತು. ಬಹುತೇಕ ಮಂದಿ ಸಮುದ್ರಯಾನ (voyages) ಗಳನ್ನು ಕೈಕೊಂಡು, ಹೊಸ ಹೊಸ ಭೂಪ್ರದೇಶಗಳ ದರ್ಶನ ಪಡೆದು, ಅಲ್ಲಿ ತಮ್ಮ ಅಸ್ತಿತ್ವವನ್ನು ಪ್ರತಿಷ್ಠಾಪಿಸಲು ಪ್ರಯತ್ನಿಸಿದರು. ಕವಿ, ಗಮಕಿ, ರಾಜಕಾರಣಿಗಳಲ್ಲದೆ ಇಂತಹ ಸಾಹಸ ಮ ನೋವೃತ್ತಿಯ ಪಟುಗಳಿಗೂ ಮಹಾರಾಣಿ ಎಲಿಜಿಬತ್ ಸದಾ ಸ್ವಾಗತ ಮತ್ತು ಪ್ರೋತ್ಸಾಹಗಳನ್ನಿತ್ತು ಸನ್ಮಾನಿಸುತ್ತಿದ್ದುದು ಸ್ತುತ್ಯಾ ರ್ಹವಾದ ವಿಚಾರ. ಅಂತಹ ಸಾಹಸಿಗಳು ಕೈಕೊಂಡ ಪ್ರಯಾಸ ಪೂರ್ಣ ಪ್ರವಾಸಗಳು. ಅನುಭವಿಸಿದ ಕಷ್ಟ ನಷ್ಟಗಳು ಇಂದಿ ಗೂ ಅಚ್ಚಳಿಯದೇ ಉಳಿದಿರವ ಜೀವಂತ ಸಾಹಿತ್ಯ ರೇಖೆಗಳು. ನಮ್ಮಲ್ಲಿ, ಅಂದರೆ ಭಾರತೀಯರಲ್ಲಿ ಈ ಪ್ರವಾಸ ಪಾಶ್ಚಾತ್ಯರ ಪ್ರವಾಸದಂತಹ ಬಹಿರಂಗ ಪ್ರದರ್ಶನದ ಪ್ರಗತಿಸೂಚಕವಲ್ಲ; ಅಂತ ರಂಗದ ವಿಕಾಸದ್ಯೋತಕ. ಆತ್ಮ ಪರಮಾತ್ಮನೆಡೆಗೆ ಹೊರಟ ಅನಂತ ಯಾತ್ರೆ. ಅವರು 'invaders 'explorers' ಆದರೆ, ನಮ್ಮವರು ಕೇವಲ ಚೈತ್ರಯಾತ್ರಿಗಳು. ಅವರದು ಕೇವಲ ಇಹದ ಸಾಧನೆ ವಾದ, ನಮ್ಮವರದು ಪರದ ಸಿದ್ಧಿಯೂ ಹೌದು. ಅವ ರದು ಛಲ ಬಲಗಳಾದರೆ, ಇವರದು ತಪ ಶೀಲಗಳ ಸದ್ಗುಣ ಶ್ರೀಕರವಾದುದು. ಅವರದು ಲೌಕಿಕದ ಶ್ರೇಯಸ್ಸು. ಇವರದು ಅಲೌಕಿಕ ಶ್ರೇಯಸ್ಸು.

ವೇದ ಉಪನಿಷತ್ತುಗಳ ಕಾಲದಲ್ಲೇ ಅಗಸ್ತ್ಯಾದಿ ಮಹಾಮುನಿಗಳಿಂದ ನಮ್ಮವರ ಪ್ರವಾಸ ಅಥವಾ ಯಾತ್ರೆ ಆರಂಭವಾಗುತ್ತದೆ. ನಚಿಕೇತನ ಚೈತ್ರ ಯಾತ್ರೆ ಒಂದು ಹೊಸ ಅಧ್ಯಾಯ. ಭಾರತೀಯ ಸಾಹಿತ್ಯದಲ್ಲಿಯ ಒಂದು ಹೊಸ ಸೃಷ್ಟಿ ಯೆನಿಸಿದ, ತ್ರಿಲೋಕ ಸಂಚಾರಿ ನಾರದನಿಗಂತೂ ಬೇರೆ ಕಸುಬೇ ಇಲ್ಲ ನಿತ್ಯದ ಪ್ರಯಾಣ ಬಿಟ್ಟರೆ. ಅವನೊಬ್ಬ ವಿಚಿತ್ರ ಪೋಸ್ಟ್ ಮೆನ್. ಇಂದ್ರಾದಿ ದೇವತೆಗಳಿಗೆ ನಮ್ಮ ಭೂಲೋಕ ಒಂದು ಆಡುಂಬೊಲ. ಅದರಲ್ಲೂ ಯಕ್ಷರಿಗೆ ಇದು ವಿಹಾರ ಕ್ಷೇತ್ರ. ತಮ್ಮ ಪ್ರಣಯ ಚೇಷ್ಟೆಗೆ ಭೂಲೋಕವೇ ಅತ್ಯುತ್ತಮ ಅಂತಃಪುರ! ಅಲ್ಪ ಕಾರಣಕ್ಕಾಗಿ ಕ್ಷತ್ರಿಯರ ಮೂಲೋತ್ಪಾಟನ ಮಾಡಲು 'ಮುಯ್ಯೇಳು ಸೂಳ್' ಭೂ ಪ್ರದಕ್ಷಿಣೆ ಮಾಡಿದ ಗಂಡುಗೊಡಲಿಯ ಗಂಡನ ಸಾಹಸ ಪ್ರಶಂಸನೀಯ. ಪರಶಿವನ ಪ್ರೀತಿಯ ಪುತ್ರ ಷಣ್ಮುಖನ ತ್ರಿಲೋಕ ಸಂಚಾರ ಯಾವುದಕ್ಕೂ ಕಡಿಮೆ ಅಲ್ಲ. ಅಂತೆಯೇ ಪಿತೃವಾಕ್ಯ ಪರಿಪಾಲನೆಗಾಗಿ ಅರಣ್ಯಕ್ಕೆ ನಡೆದ ಶ್ರೀರಾಮಚಂದ್ರನಾಗಲೀ, ತೀರ್ಥಯಾತ್ರೆಯನ್ನು ಸ್ವೀಕರಿಸಿದ ಅರ್ಜುನನಿಗಾಗಲೀ ಯಾತ್ರಾಕಾಂಕ್ಷಿಗಳಲ್ಲದೆ ಬೇರೆ ಅಲ್ಲ.

ಅನೇಕ ಧರ್ಮಗಳ ಆಗರವೆನಿಸಿದ ಭಾರತದಲ್ಲಿ ದೃಷ್ಟಾರರಿಗೇನೂ ದಾರಿದ್ರ್ಯವಿಲ್ಲ. ಹಲವಾರು ಧರ್ಮಪ್ರವರ್ತರು ತಮ್ಮ ಧರ್ಮ ಪ್ರಸಾರಣೆಗೆ ಪ್ರವಾಸವನ್ನು ಆಶ್ರಯಿಸಿದರಲ್ಲದೆ, ತಮ್ಮ ಅನುಯಾಯಿಗಳಿಗೂ ಬೋಧಿಸಿ ಕಳುಹಿಸುತ್ತಿದ್ದುದೂ ಉಂಟು. ಭಗವಾನ್ ಬುದ್ಧದೇವನು ರಾಜವನ, ಮಗದಾದಿ ದೇಶಗಳನ್ನು ಕಾಲ್ಗಟ್ಟವುದದಲ್ಲದೆ ಧರ್ಮಪ್ರಸಾರಕ್ಕಾಗಿ ಬರ್ಮಾ, ಸಿಂಹಳ, ಮಲಯಾ, ಸುಮಾತ್ರ ಮುಂತಾದ ಕಡೆಗಳಿಗೆ ಬೌದ್ಧ ಭಿಕ್ಷುಗಳನ್ನು ಕಳುಹಿಸಿದ್ದು ಸತ್ಯ. ಹಿಮದೂ ಧರ್ಮದ

ಪನುನಃಪ್ರತಿಷ್ಠಾಪಕರಾದ ಶಂಕರ ಭಗವತ್ಪಾದಕರು ಶಾರದಾ ದೇವಿಯನ್ನು ಕರೆದು ತಂದುದು ತಮ್ಮ ಜೈತ್ರಯಾತ್ರೆಯಲ್ಲಿಯೇ. ಪರಶಿವನ ಪಂಚಮುಖೋದ್ಭವರೆ ನಿಸಿದ ರೇಣುಕಾದಿ ಪಂಚಮಹಾಚಾರ್ಯರು ವೀರಶೈವ ಧರ್ಮಸಂಸ್ಥಾಪನಾ ಕಾರ್ಯವನ್ನು ಸ್ವೀಕರಿಸಿ, ಭರತಖಂಡದ ಬಹು ಮುಖ್ಯ ಪ್ರದೇಶಗಳಲ್ಲಿ ಧರ್ಮಪೀಠಗಳನ್ನು (ಪಂಚ ಪೀಠಗಳನ್ನು) ಸ್ಥಾಪಿಸಿದ್ದು ಯಾತ್ರೆಯ ಮೂಲಕವೇ. ಜೈನಧರ್ಮದಲ್ಲಂತೂ ಪ್ರವಾಸಕ್ಕೆ ಒಂದು ವಿಶಿಷ್ಟ ಸ್ಥಾನ ಮೀಸಲಿದೆ. ಜಿನ ದೀಕ್ಷೆಯನ್ನು ಸ್ವಖರಿಸಿದ ಪ್ರತಿಯೊಬ್ಬನೂ 'ಗ್ರಾಮ, ಖೇಡ, ಖರ್ವಡ, ಮಡಂಬ, ಪತ್ರಣ, ದ್ರೋಣಾ, ಮುಖಂಗಳಲ್ಲಿ ವಿಹರಿಸಲೇಬೇಕು. ಜೈನ ಗುರುವಾದನು, ಕೇವಲಿ ಎನಿಸಿದ ವನು ತನ್ನ ಶಿಷ್ಯ ಸಮೂಹದೊಡನೆ ಚರಿಗೆ ಹೋಗುವುದು ಅನಿವಾರ್ಯ. ಶ್ರಾವಕ ವ್ರತ ಸ್ವೀಕರಿಸಿದವರಗೆ ಇದು ಅತ್ಯಗತ್ಯ. ಅಲ್ಲದೆ ಜೈನಧರ್ಮದ ಒಳಹೊಕು ನೋಡಿದರೆ ಒಂದು ವಿಶಿಷ್ಟ ವಿಶ್ವವೇ ನಮಗೆ ಗೋಚರಿಸುತ್ತದೆ. ಆತ್ಮ ಅರ್ಹತ್ ಪದವಿಯನ್ನು ಗಳಿ ಸುವ ಒಂದು ಸಾಹಸಯಾತ್ರೆ ಇದೆ. ಅದು ನಾನಾ ಭವಗಳಲ್ಲಿ, ನಾನಾ ಯೋನಿಗಳಲ್ಲಿ ಸಂಚರಿಸಿ, ಚತುರ್ಗತಿಗಳಲ್ಲಿ ಪರ್ಯಟನ ಗೈದು, ನಡೆದಂತೆಲ್ಲಾ ಪರಿಷ್ಕಾರಗೊಳ್ಳುತ್ತಾ, ಪಾಪಪುಣ್ಯಗಳ ಲೇಪವಿಲ್ಲದೆ, ಪರಂಜ್ಯೋತಿ ಸ್ವರೂಪವಾಗಿ ಅರ್ಹಂತನೆನಿಸಬೇಕಾ ದರೆ ಆ ಅದ್ಭುತ ಯಾತ್ರೆ ಅಗಾಧವಾದುದೆಂದು ವ್ಯಕ್ತವಾಗದಿರದು. ವೀರಶೈವರಲ್ಲಿರುವ ಷಟ್ಸ್ಥಲದ ಕಲ್ಪನೆಯೂ ಅಷ್ಟೆ. ಆತನು ಭಕ್ತಸ್ಥಲರಿಂದ ಐಕ್ತಸ್ಥಲಕ್ಕೆ ಮಜಲು ಮಜಲಾಗಿ ಹತ್ತಿದ ವಿಜಯಯಾತ್ರೆ ಸತ್ಯ ಸ್ವರೂಪ. ಬೌದ್ಧರ ಅಷ್ಟಾವರಣ ಷಟ್ಚಕ್ರಗಳ ಕಲ್ಪ ನೆಯು ಇದೇ ಸಿದ್ಧಿಗಾಗಿ.

ನಮ್ಮ ದೇಶದ ರಾಜರುಗಳಲ್ಲೂ ಈ ಪ್ರವಾಸ ಒಂದು ಪರಿಪಾಠವಾಗಿತ್ತು. ಯಾವನೇ ರಾಜನಾಗಲೀ ಅಧಿಕಾರ ಸ್ವೀಕರಿಸಿದ ಕೂಡಲೇ ಜೈತ್ರಯಾತ್ರೆ ಹೋಗಬೇಕಿತ್ತು. ಅಶ್ವಮೇಧವೇ ಮೊದಲಾದ ಯಾಗಗಳಲ್ಲಂತೂ ಈ ಯಾತ್ರೆ ಒಂದು ವಿಜಯಸೂಚಕ. ಆದರೆ ಈ ರಾಜರುಗಳು ಆಚರಿಸಿದ ಜೈತ್ರಯಾತ್ರೆಗಳಾಗಲೀ, ದಂಡಯಾತ್ರೆಗಳಾಗಲೀ ಭರತಖಂಡದ ವಲಯಗಳಲ್ಲೇ ವಿನಾ ಬೇರೆ ನಾಡನ್ನೇ ಕಂಡರಿಯವು. ಅಂತಹ ಧರ್ಮ ಬುದ್ಧಿ ಇವರದ್ದು! ತಮ್ಮ ಯೋಗ್ಯತೆಯ ಇತಿಮಿಗಳನ್ನೆಂದಿಗೂ ಅತಿಕ್ರಮಿಸಿದವ ರಲ್ಲ ಎಂಬುದು ಗಮನಾರ್ಹವಾದ ವಿಚಾರ. ಪರಕೀಯರಂತೂ ಅನಾದಿ ಕಾಲದಿಂದಲೂ ಧಾಳಿ ನಡೆಸಿದ್ದಾರೆ; ಇಲ್ಲವೇ ನಮ್ಮ ಲ್ಲಿಗೆ ಯಾತ್ರೆ ಬಂದದ್ದಾರೆ. ಆರ್ಯರಿಂದ ಆರಂಭವಾದದ್ದು ಇಂದು ಚೀಣಿಯರವರೆಗೂ ಇವರ ಹಾವಳಿ ನಮಗೆ ತಪ್ಪಿಲ್ಲ! ದಾಳಿಕಾರರೇ ಅಲ್ಲದೆ ಹಲವಾರು ಧರ್ಮಕಾಂಕ್ಷಿಗಳೂ, ರಾಜಕಾರಣಿಗಳೂ, ಮತಪ್ರಚಾರಕರು, ವಣಿಗ್ವರರೂ ಆಗಮಿಸಿದ್ದಾರೆ. ನಮ್ಮ ಪ್ರಾಚೀನ ಭಾರತೇತಿಹಾಸದ ಹೊತ್ತಗೆಯನ್ನು ತೆರೆದು ನೊಡಿದರೆ ಕ್ರಿ.ಪೂ. ಐದನೇ ಶತಮಾನದಿಂದೀಚೆಗೆ ಸುಮಾರು ಇನ್ನೂರಕ್ಕಿಂತಲೂಹೆಚ್ಚು ಜನ ಪ್ರವಾಸಿಗರು ನಮ್ಮ ದೇಶಕ್ಕೆ ಬಂದು ಹೋಗಿರುವುದು ಕಂಡು ಬರುತ್ತದೆ. ಈ ಪ್ರವಾಸಿಗಳಲ್ಲಿ ಅನೇ ಕರು ನಮ್ಮ ದೇಶಕ್ಕೆ ಬಂದು ಹೋಗಿರುವುದೂ ಕಂಡು ಬರುತ್ತದೆ. ಈ ಪ್ರವಾಸಿಗಳಲ್ಲಿ ಅನೇಕರು ತಮ್ಮ ತಮ್ಮ ಅನುಭವಗಳನ್ನು ಬರೆದಿಟ್ಟು ಹೊಗಿದ್ದರೆ. ಇವೇ ಪ್ರವಾಸ ಸಹಿತ್ಯದ ರೇಖೆ (Travilogue) ಗಳು.

ಇವರ ಪ್ರವಾಸ ಸಾಹಿತ್ಯವನ್ನು ಸ್ಥೂಲವಾಗಿ ಐದು ಭಾಗಗಳನ್ನಾಗಿ ಮಾಡಬಹುದು – (೧) ತೀರ್ಥಯಾತ್ರಾ ಪ್ರವಾಸ ಸಾಹಿತ್ಯ (Piligrimage). (೨) ಸಾಂಸ್ಕೃತಿಕ ಪ್ರವಾಸ ಸಾಹಿತ್ಯ (Cultural), (೩) ಶೈಕ್ಷಣಿಕ ಪ್ರವಾಸ ಸಾಹಿತ್ಯ (Educationall),(೪) ವ್ಯಾವಹಾರಿಕ ಪ್ರವಾಸ ಸಾಹಿತ್ಯ (Commercial) (೫) ಪ್ರವಾಸಪ್ರೇಮಿ ಪ್ರವಾಸ ಸಾಹಿತ್ಯ (Wanderlusts). ಚಾರಿತ್ರಿಕ ಹಿನ್ನಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹುಡುಕ ಹೊರಟರೆ ನಮಗೆ ಮೊದಲು ಸಿಕ್ಕುವ ಪ್ರವಾಸಿಗಳು ಗ್ರೀಸಿನ ಹೆರೋ ಡೋಟಸ್ ಮತ್ತು ಟೆಸಿಯಾಸ್. ಅಲೆಗ್ಸಾಂಡರ್ ಭಾರತಕ್ಕೆ ದಂಡೆತ್ತಿ ಬಂದು ತನ್ನ ತಾಯ್ನಾಡಿಗೆ ಹಿಂದಿರುಗುವ ವೇಳೆ ತನ್ನ ಪ್ರತಿನಿಧಿಯಾಗಿ ಸೆಲ್ಯೂಕಸನನ್ನು ನೇಮಿಸಿದನಷ್ಟೆ; ಆ ಸೆಲ್ಯೂಕಸ್, ಮೆಗಾಸ್ತನೀಸ್ ಎಂಬ ರಾಯಭಾರಿಯನ್ನು ಚಂದ್ರಗುಪ್ತನ ಆಸ್ಥಾನದಲ್ಲಿ ಬಿಟ್ಟಿದ್ದನು. ಆ ಎಗಾಸ್ತನೀಸ್ ತನಗೆ ತಿಳಿದ ಹಲವು ವಿಷಯಗಳನ್ನು ಬರೆದಿದ್ದಾನೆ. ಇಂದಿಗೂ ಇತಿಹಾಸ ರಚನೆಗೆ 'ಮೆಗಾಸ್ತನೀಸನ ಬರವಣಿಗೆಗಳು' ತುಂಬಾ ಸಹಾಯಕವಾಗಿವೆ.

ಮತ್ತೊಬ್ಬ ಗ್ರೀಸ್ ದೇಶದ ಪ್ರವಾಸಿ (ಹೆಸರು ಗೊತ್ತಿಲ್ಲ) 'ಎರಿತ್ರೀನ್ ಸಮುದ್ರ ಮಾರ್ಗದರ್ಶನ' ಎಂಬ ಗ್ರಂಥವನ್ನು ಬರೆದಿದ್ದಾನೆ. ಕ್ರಿ.ಶ. ೮೦ರಲ್ಲಿ ಭಾರತ ತೀತ ಪ್ರದೇಶಗಳಲ್ಲಿ ಅಲೆದು, ಹಲವಾರು ಬಂದರುಗಳ ಮತ್ತು ವ್ಯಾಪಾರ ವಸ್ತುಗಳ ನಗ್ಗೆ ಒಂದು ಕಿರು ಹೊತ್ತಿಗೆಯನ್ನು ರಚಿಸಿದ್ದಾನೆ. "ಇವನ ಗ್ರಂಥವಿಲ್ಲ ದಿದ್ದರೆ ಪ್ರಾಚೀನ ಭಾರತದ ವ್ಯಾಪಾರ ಮತ್ತು

ವಾಣಿಜ್ಯದ ಒಂದು ಪ್ರಮುಖ ದರ್ಶನ ನಮಗೆ ದೊರೆಯದೇ ಹೋಗುತ್ತಿತ್ತು. ಆದ್ದರಿಂದ ಇವನ ಗ್ರಂಥ ಅಪರಂಜಿಗೆ ಸಮ". ಎಂಬುದಾಗಿ ಶ್ರೀ ಹೆ.ಎಲ್. ನಾಗೇಗೌಡರು ಅಭಿಪ್ರಾಯ ಪಟ್ಟಿದ್ದಾರೆ. ಟಾಲೆಮಿ ಬಹು ಪ್ರಮುಖ ಪ್ರವಾಸಿ ನಮಗೆ ದೊರಕುತ್ತಾನೆ. ಇವನು ಭಾರತದ ಭೌಗೋಳಿಕಾಂಶಗಳ ಬಗ್ಗೆ ಹೆಚ್ಚು ಮಾಹಿತಿ ನೀಡಿದ್ದಾನೆ. ಅಲ್ಲದೆ ಇವನ ಬರಹ ಭಾಷಾಶಾಸ್ತ್ರ ದೃಷ್ಟಿಯಿಂದಲೂ ಪ್ರಾಮುಖ್ಯತೆ ಪಡೆದಿದೆ. ಏಕೆಂದರೆ ನಮ್ಮ ಕನ್ನಡನಾಡು ಮತ್ತು ದ್ರಾವಿಡ ನಾಡುಗಳ ಬಗ್ಗೆ ಹೆಚ್ಚು ವಿಷಯ ದೊರೆಯುತ್ತದೆ. ಈ ಗ್ರೀಕ್ ಪ್ರವಾಸಿಗಳನ್ನು ಸ್ಥೂಲವಾಗಿ ವ್ಯಾವಹಾರಿಕ ಪ್ರವಾಸಿಗಳು (Commercial Travellers) ಎಂದೂ, ಇವರ ಪ್ರವಾಸ ಸಾಹಿತ್ಯವನ್ನು ವ್ಯಾವಹಾರಿಕ ಎಂದೂ ಹೆಸರಿಸಿ ಕರೆಯಬಹುದು.

ಗ್ರೀಕ್ ಪ್ರವಾಸಿಗಳಂತೆ ಚೀಣೀಯರೂ ನಮ್ಮ ನಾಡಿಗೆ ಬಂದು ಹೋಗಿದ್ದಾರೆ. ಆದರೆ ಇವರ ಪ್ರವಾಸದ ಉದ್ದಿಶ್ಯದಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸವಿದೆ. ಗ್ರೀಕರಲ್ಲಿ ಹಲವರು ಬಂದದ್ದು ವ್ಯಾಪಾರೋದ್ಯಮಕ್ಕಾಗಿ. ಸಮುದ್ರ ಮಾರ್ಗಗಳನ್ನು ಹೊಸ ಹೊಸದಾಗಿ ಕಂಡುಹಿಡಿ ಯುವುದಕ್ಕಾಗಿ ಹಾಗೂ ರಾಯಭಾರಿಗಳಾಗಿ; ಆದರೆ ಚೀಣೀಯರು ಬಂದದ್ದು ಅಭ್ಯಸಕ್ಕಾಗಿ, ತತ್ವಶಾಸ್ತ್ರಾಧ್ಯನಕ್ಕಾಗಿ. ಆದ್ದರಿಂದ ಇವ ರದು ಶೈಕ್ಷಣಿಕ ಸಾಂಸ್ಕೃತಿಕ ಪ್ರವಾಸವೆನ್ನಬಹುದು.ವಿಶಿಷ್ಟ ತತ್ವಗಳ, ದಿವ್ಯ ದರ್ಶನಗಳ ತೌರಾದ ಭಾರತದಲ್ಲಿ ಅವರು ಅಭ್ಯರ್ಥಿಗ ಳಾಗಿ ಬಂದು ತಮಗೆ ತಿಳಿದ ಹಲವು ವಿಷಯಗಳನ್ನು ಬರೆದಿಟ್ಟು ಹೋಗಿದ್ದಾರೆ. ಅವರಲ್ಲಿ ಪ್ರಮುಖರಾದವರು ಐದನೇ ಶತಮಾ ನದಲ್ಲಿ ಬಂದ ಫಾಹಿಯಾನ್, ಏಳನೇ ಶತಮಾನದಲ್ಲಿ ಬಂದ ಹ್ಯೂಯೆನ್ತ್ಸಾಂಗ್ ಮತ್ತು ಈಪ್ಸಿಂಗರು. ಇವರು ಭಾರತದಲ್ಲಿ ಬಹು ದಿನಗಳ ತನಕ ನೆಲೆಸಿದ್ದು, ಸಂಸ್ಕೃತ ಕಲಿತು ಅನೇಕ ಭಾಗಗಳನ್ನು ಸುತ್ತಾಡಿ ತಮಗೆ ತಿಳಿದದ್ದನ್ನು ರಚಿಸಿದ್ದಾರೆ. ಇವರ ರಚನೆ ಗ್ರೀಕರ ರಚನೆಗಿಂತ ವಾಸ್ತವಾಂಶಗಳಿಂದ ಕುಡಿದೆ. ಆದರೆ ಹೆಚ್ಚು ಭಾಗ ಭೌದ್ಧಮತಕ್ಕೆ ಸಂಬಂಧಿಸಿರುವುದರಿಂದ ಇತರ ಲೌಕಿಕ ಹಾಗೂ ವ್ಯಾವಹಾರಿಕ ಸಂಗತಿಗಳು ಅಷ್ಟಾಗಿ ದೊರೆಯುವುದಿಲ್ಲ. ಬಹುದಿನಗಳಿಂದಲೂ ಭಾರತೀಯರೊಂದಿಗೆ ವ್ಯಾಪಾರೋದ್ಯಮದ ಸಂಪರ್ಕವನ್ನಿಟ್ಟುಕೊಂಡಿದ್ದ ಅರಬ್ಬೀ ವರ್ತಕರನ್ನು ಮೂರ ನೆಯ ಭಾರತ ಪ್ರವಾಸಿಗಳಾಗಿ ಪರಿಗಣಿಸಬಹುದು. ಸುಲೇಮಾನ್ ಮತ್ತು ಅಲ್‌ಮಸೂದಿ ಎಂಬುವರು ಬರೆದ ಪ್ರವಾಸ ಲೇಖ ನಗಳು ಬಹಳ ಉಪಯುಕ್ತವಾದವುಗಳು. ಹೊಸದಾಗಿ ಹುಟ್ಟಿಕೊಂಡ ಇಸ್ಲಾಂ ಧರ್ಮಪ್ರಸಾರಕ್ಕಾಗಿ, ಎಂಟನೆಯ ಶತಮಾನದಿಂ ದೀಚೆಗೆ ದಂಡಯಾತ್ರೆ ಮಾಡಿದ ಅನೇಕ ತುರುಕರನ್ನು ಕಾಣುತ್ತೇವೆ. ಘಜ್ನಿಯ ಸುಲ್ತಾನ್ ಮಹಮ್ಮದನ ಕಾಲದಲ್ಲಿ ಬಂದ ಅಲ್ಬೆ ರೂನಿಯು ಇಲ್ಲಿ ಸಂಸ್ಕೃತಾಭ್ಯಾಸ ಮಾಡಿ ಇಂದು ದೊಡ್ಡ ಗ್ರಂಥವನ್ನು ರಚಿಸಿದ್ದಾನೆ. "ಆದರೆ ಅವನ ಗ್ರಂಥದಲ್ಲಿ ಒಂದೆರಡು ದೊಡ್ಡ ದೋಷಗಳನ್ನು ಕಾಣಬಹುದು. ಒಂದನೆಯದು, ಅವನು ಅಂದಿನ ರಾಜಕೀಯ ಸ್ಥಿತಿಯನ್ನು ಹೇಳುವುದಿಲ್ಲ. ಹೇಳಿದರೂ ಬಹಳ ಕಡಿಮೆ. ಎರಡನೆಯದು ಅವನು ಹೇಳಿರುವುದೆಲ್ಲ ಇಂಡಿಯಾ ದೇಶದ ಸಾಹಿತ್ಯವನ್ನವಲಂಬಿಸಿದೆ.ಅಂದರೆ ಆತನು ತಾನು ಕಂಡದ್ದನ್ನು ಹೇಳದೆ ತಾನು ಓದಿದ್ದನ್ನು ಹೇಳಿದ್ದಾನೆ.ಹಾಗೆ ಮಾಡದೆ ಅಂದಿನ ಇಂಡಿಯಾದಲ್ಲಿ ತಾನೇನು ಕಂಡಿದ್ದೆಂಬುದನ್ನು ಹೇಳಿದ್ದರೆ, ಅವನ ಗ್ರಂಥ ಇತಿಹಾಸ ರಚನೆಯ ದೃಷ್ಟಿಯಿಂದ ಅತ್ಯಂತ ಅಮೂಲ್ಯ ಗ್ರಂಥವಾಗುತ್ತಿತ್ತು."[೧] ಎಂಬುದಾಗಿ ಶ್ರೀಯುತ ಹೆ.ಚ್. ಎಲ್. ನಾಗೇಗೌಡರು ಹೇಳುತ್ತಾರೆ. ಮುಂದೆ ಹದಿಮೂರನೇ ಶತಮಾನದತ್ತ ನಮಗೆ ಪ್ರಮುಖ ಪ್ರವಾಸಿಯೊಬ್ಬ ದೊರಕುತ್ತಾನೆ. ಅವನೇ ಮಾರ್ಕೊ ಪೋಲೋ. ೧೨೭೧ರಲ್ಲೆ ತನ್ನ ಚಿಕ್ಕಪ್ಪನೊಡನೆ ಇಟಲಿಯಿಂದ ಪ್ರವಾಸ ಹೊರಟು ತುರ್ಕಿ, ಇರಾಕ್, ಇರಾನ್, ಆಫ್ಘಾನಿಸ್ಥಾನ, ಟಿಬೆಟ್, ದಕ್ಷಿಣ ರಷ್ಯ, ಮಂಗೋಲಿಯ, ಚೀಣಾ, ಜಾವಾ, ಸುಮಾತ್ರ, ಸಿಲೋನ್, ಭಾರತ ಮುಂತಾದ ದೇಶಗಳಲ್ಲಿ ಹಾದು ಗೋಬಿ ಮರುಭೂಮಿಯ ಮಾರ್ಗವಾಗಿ ಇಪ್ಪತ್ತುನಾಲ್ಕು ವರ್ಷಗಳ ನಂತರ ತನ್ನ ಊರಾದ ವೆನಿಸಿಗೆ ಹಿಂದಿರುಗಿದ. ಇವನನ್ನು 'ಭೂಗೋಳದ ಪಿತಾಮಹಾ'ನೆಂದೂ ಕರೆಯುತ್ತಾರೆ.[೨] ಮಾರ್ಕೊ ಪೋಲೋನನ್ನು ನಾವು ಪ್ರವಾಸ ಪ್ರೇಮಿಗಳ (Wanderlusts) ಗುಂಪಿಗೆ ಸೇರಿಸಬಹುದು. 'ರಾಬಿನ್‌ಸನ್‌ಕ್ರೂಸೊ' ಕೂಡ ಅಷ್ಟೆ. ಆದರೆ ಅವನದು ಸಾಹಸ ಜೀವನ. 'ಗಲಿವರನ ದೇಶಸಂಚಾರ' ಮೊದಲಾದ ಕಟ್ಟು ಕಥೆಗಳಲ್ಲೂ ಸಾಹಸಪೂರ್ಣ ಪ್ರವಾಸ ಕ್ರೇಮಿಗಳನ್ನು ಕಾಣುತ್ತೇವೆ. ಮಾರ್ಕೊ ಪೋಲೋ ನಂತರ ನಮಗೆ ದೊರಕುವ ಪ್ರವಾಸಿ ಗ್ರಂಥವೆಂದರೆ ಇಬ್ನೆಬೂತತನದು. ಇವನು ತೊಗಲಕನ ಆಸ್ಥಾನದಲ್ಲಿ ಕೆಲವು ವರ್ಷಗಳವರೆಗಿದ್ದು, ಭಾರತವನ್ನೆಲ್ಲಾ ಸುಮಾರು ಇಪ್ಪತ್ತೈದು ವರ್ಷಗಳವರೆಗೆ ಸುತ್ತಾಡಿ ಉತ್ತಮ ಗ್ರಂಥವೊಂದರಲ್ಲಿ ತನ್ನ ಅನುಭವಗಳನ್ನು ಕೊರೆದು ಹೋಗಿದ್ದಾನೆ.

ವಿಜಯನಗರ ಸಾಮ್ರಾಜ್ಯದ ಬೃಹತ್ ವೈಭವವನ್ನು ಚಿತ್ರಿಸಿದ. ಸುಮಾರು ಹದಿನೈದನೆ ಯ ಶತಮಾನದಲ್ಲಿ ಆಗಮಿಸಿದ ಇಟಲಿಯ ನಿಕೋಲೋ ಕಾಂಟಿ, ಅಬ್ದುಲ್ ರಜಾಕ್, ರಷ್ಯಾದ ನಿಕೆಟಿನ್, ಪೋರ್ಚುಗಲ್‌ನ ಬಾರ್ಬೋಸಾ, ಪಾಯೆಸ್

ಮತ್ತು ನ್ಯೂನಿಜ್ ಮುಂತಾದವರು ಗಮನಾರ್ಹ ವ್ಯಕ್ತಿಗಳು. ಕರ್ನಾಟಕ ಸಾಮ್ರಾಜ್ಯ ರಚನೆಗೆ ಈ ಮಹನೀಯರ ಬರಹಗಳು ಉಪಯು ಕ್ತವಾಗಿವೆ.

---

[೧] 'ಪ್ರವಾಸಿ ಕಂಡ ಇಂಡಿಯಾ'– ಭಾಗ ೧, ಇದರ ಅಪ್ರಕಟಿತ ಮುನ್ನುಡಿಯಿಂದ.
[೨] ನೋಡಿ– 'ಮಾರ್ಕೊ ಪೋಲೋ ಪ್ರವಾಸ ಕಥನ'– ಶ್ರೀ ಹೆಎಲ್. ನಾಗೇಗೌಡ

ಸುಮಾರು ಹದಿನೇಳನೆಯ ಶತಮಾನದಲ್ಲಿ ಟಾವೆರ್ನಿಯರ್, ಬೇರ್ನಿಯರ್, ಥಾಮಸ್ ಬಾವ್ರೆ, ಪೆಟ್ರೋಡೆಲ್ಲಾ ವಿಲ್ಲೆ, ಮನೂಚಿ, ಥೇವ್ ನಾಟ್ ಮತ್ತು ಕರೇರಿ ಮೊದಲಾದ ಪ್ರವಾಸಿಗಳನ್ನೂ, ಹದಿನೆಂಟನೆಯ ಶತಮಾನದಲ್ಲಿ ಅಬ್ಬ ಡೂಬೆ ಎಂಬ ಪ್ರಸಿದ್ಧ ಪ್ರವಾಸಿಯನ್ನೂ ನಾವು ನೆನೆಯಬಹುದು. ಇವರೆಲ್ಲರ ಪ್ರವಾಸ ಲೇಖನಗಳು ಭಾರತ ಇತಿಹಾಸ ರಚನೆಗೆ ತುಂಬಾ ಸಹಕಾರಿಯಾಗಿವೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಾವು ಸ್ವಲ್ಪ ಅಡ್ಡಾಡಿದರೆ ಈ ರೀತಿಯ ಪ್ರವಾಸ ಲೇಖನದ ಅರವಂಟಿಕೆಗಳು ಸಿಗುತ್ತವೆ. ಈ ದಿಸೆಯಲ್ಲೂ ನಾವು ಸಾಕಷ್ಟು ಮುಂದುವರೆದಿದ್ದೇವೆಂದು ಧೈರ್ಯವಾಗಿ ಹೇಳಬಹುದು. ಹಲವರು ಹೇಳುವು ದುಂಟು ನಮ್ಮಲ್ಲಿ ಪ್ರವಾಸ ಸಾಹಿತ್ಯ ರಚನೆ ಇಲ್ಲವೆಂದು. ಆದರೆ ಹೆಚ್ಚಿನ ಸಂಖ್ಯೆಯಲಿಲ್ಲದಿದ್ದರೂ ಅತ್ಯುತ್ತಮವೂ ಪರಿಣಾಮಕಾ ರಿಯೂ ಆದ ರಚನೆ ಈ ಪ್ರಾಕಾರದಲ್ಲಿ ನಡೆದಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಕೇವಲ ಬೆರಳಿನಲ್ಲಿ ಎಣಿಸಬಹುದಾದ ಮೂರೇ ಮೂರು ಪ್ರವಾಸ ಗ್ರಂಥಗಳು ದೊರೆಯುತ್ತವೆ. ಇವು ಮೂರೂ ಕನ್ನಡ ಪ್ರವಾಸ ಸಾಹಿತ್ಯದ ತ್ರಿಕೂಟಗಳು. ಪ್ರಾಯಶಃ, ಅಸ್ವಾತಂತ್ರ್ಯದ ಬೀಡಾಗಿದ್ದ ಭಾರತೀಯರಿಗೆ ಪ್ರಯಾಣ ಸ್ವಾತಂ ತ್ರ್ಯ ಇರಲಿಲ್ಲವೋ ಅಥವಾ ಅಂದದ ಮೈಸೂರಲ್ಲಿ ಚೆಂದಾಗಿ ಕುಳಿತ ನಮ್ಮವರಿಗೆ ಬೇರೆಡೆಗೆ ಹೋಗಬೇಕೆಂಬ ಮನಬರಲಿಲ್ಲವೋ ಅಥವಾ ಹೋದರೂ ಬರೆದಿಡುವ ಹವ್ಯಾಸ ಅವರಲ್ಲಿಲ್ಲವೋ ತಿಳಿಯದು. ಅಂತೂ ಆಗಿನ ಪ್ರವಾಸ ಸಾಹಿತ್ಯದ ಬೆಳೆ ಹುಲುಸಾ ಗಿಲ್ಲ; ಶ್ರೀ ಸಿದ್ಧವ್ವನಹಳ್ಳಿ ಕೃಷ್ಣಶರ್ಮರ 'ವರ್ಧಾಯಾತ್ರೆ', ಶ್ರೀ ವಿ. ಸೀತಾರಾಮಯ್ಯನವರ 'ಪಂಪಾಯಾತ್ರೆ' ಮತ್ತು ಶ್ರೀ ಮಾಸ್ತಿ ನರಸಿಂಗರಾಯರ 'ಕನ್ನಡಯಾತ್ರೆ–ಭಾಗ ೧' ಇವು ಪ್ರಸಿದ್ಧವಾದವುಗಳು.

'ವರ್ಧಾಯಾತ್ರೆ' ನನ್ನ ದೃಷ್ಟಿಯಲ್ಲಿ ಕೇವಲ ಪ್ರವಾಸ ಲೇಖನವಷ್ಟೇ ಅಲ್ಲ, ಅದು ಕನ್ನಡ ಸಾಹಿತ್ಯದಲ್ಲಿನ ಅತ್ಯಮೂಲ್ಯ ಕೃತಿಗಳಲ್ಲಿ ಒಂದು. ಇಂತಹ 'ಪವಿತ್ರ ಯಾತ್ರೆಯ ತೀರ್ಥಸಾಹಿತ್ಯವನ್ನು ಪಡೆದ ಕನ್ನಡಿಗರು ಧನ್ಯರು. ಕನ್ನಡದ ಹಿರಿಯ ಕವಿ ಶ್ರೀ ಬೇಂದ್ರೆ ಯವರು 'ವಿಭೂತಿಯಿರದ ಸ್ಥಳವು ಯಾತ್ರೆಗೆ ಯೋಗ್ಯವಲ್ಲ. ದೋಷ ತಗ್ಗಿಸಿ ಗುಣ ಹಿಗ್ಗಿಸದ ಯಾತ್ರೆ ಯಾತ್ರೆಯಲ್ಲ. ಶರ್ಮರ 'ವರ್ಧಾಯಾತ್ರೆ'ಯ ಓದುಗರಲ್ಲಿಯೂ ಈ ಪರಿಣಾಮ ಮಾಡದೆ ಬಿಡದು' ಎಂದು ನುಡಿದಿದ್ದಾರೆ.[೩] ನಾಡಿನ ಪುಣ್ಯಜೀವಿಗಳಾದ ಶ್ರೀ ಸಿದ್ಧವ್ವನಹಳ್ಳಿ ಕೃಷ್ಣಶರ್ಮರು ಬಾಪೂಜಿಯವರೊಡನೆ ವರ್ಧಾದಲ್ಲಿ ಹಲವು ದಿನಗಳ ತನಕ ಇದ್ದು, ಅವರ ಶಿಷ್ಯಕೋಟಿಯಲ್ಲಿ ತಾವೂ ಒಬ್ಬರಾಗಿ ತಮ್ಮ ಬಾಳನ್ನು ಸಾರ್ಥಕಪಡಿಸಿಕೊಂಡಿದ್ದಾರೆ. ಆ ಪುಣ್ಯಾತ್ಮನ ಪವಿತ್ರ ಕ್ಷೇತ್ರದಲ್ಲಿ ನಡೆಯುತ್ತಿದ್ದ, ಆಚರಿಸುತ್ತಿದ್ದ, ಅನುಸರಿಸುತ್ತಿದ್ದ ನಿತ್ಯದ ನಿಯಮಗಳನ್ನು ಬಿತ್ತರಿಸಿದ್ದಾರೆ. ದೀನಬಂಧು ಆಂಡ್ರೂಸ್, ನೇಗಿಲಯೋಗಿ ಬುಲ್ಲನ್ (ಬುಳ್ಳೇಗೌಡ), ಮಗನವಾಡಿಯ 'ಮೂವಿಂಗ್ ಆಫೀಸ್' ಕುಮಾರಪ್ಪ, ಆಚಾರ್ಯ ಕೃಪಲಾನಿ, ಮಿರಾ ಬೆನ್, ಶಾಂತಾಬೆನ್, ಕಾಕ ಕಾಲೇಲಕರ್, ಮಹದೇವ ದೇಸಾಯಿ, ರಾಜಕುಮಾರಿ ಅಮೃತ್‌ಕೌರ್, ಜವಹರ್‌ಲಾಲ್ ನೆಹರು, ರಾಜೇಂದ್ರ ಪ್ರಸಾದ್, ಗಾಂಧೀಮತದ ಮಹಂತ ಜಮನ್‌ಲಾಲ್, ಡಾ॥ ಸುಶೀಲಾ ನಾಯರ್ ಮೊದಲಾದವರು; ಅಲ್ಲದೆ, ಬಾಪೂಜಿಯವರ ಪರ್ಣಕುಟಿ, ಬಜಾಜ ವಾಡಿಯ ಅಂಗಲೆ, ಮಗನವಾಡಿ ಮತ್ತು ಮಗನವಾಡಿಯ ಸಂಗ್ರಹಾಲಯ, ಜಮುನಾ ಕುಟೀರ, ಸೇಗಾಂವ್, ನಾಲವಾಡಿ ಮೊದಲಾದ ಪುಣ್ಯಸ್ಥಳಗಳ ದರ್ಶನವೂ ಲಭಿಸುತ್ತದೆ. ಬಾಪೂಜಿಯವರ ದಿನಚರಿ, ಅವರ ಶಿಷ್ಯ ಸಮೂಹದ ಆಚರಣೆ ಮತ್ತು ಸಾಮೂಹಿಕ ಪ್ರಾರ್ಥನೆ ಇತ್ಯಾದಿಗಳು ವರ್ಣನಾತೀತ. ಆಗಾಗ ನಡೆಯುತ್ತಿದ್ದ ವಿನೋದದ ನುಡಿಗಳಲ್ಲಿ ತಿಳಿ ಹಾಸ್ಯವಿದೆ; ಅದನ್ನು ತಮ್ಮದೇ ಆದ ಶೈಲಿಯನ್ನು ಸಂಪಾದಿಸಿ, ಸ್ಥಾಪಿಸಿರುವ ಶ್ರೀ ಶರ್ಮರ ನುಡಿಗಳಲ್ಲೇ ಕೇಳ ಬೇಕು. ಬಾಪೂಜಿಯವರು ಗಾಳಿ ಸಂಚಾರಕ್ಕೆ ಹೊರಟಾಗ ಶ್ರೀಮತಿ ಸುಶೀಲಾ ನಾಯರ್ ಅವರ ಹೆಗಲ ಮೇಲೆ ಕೈಯೂರಿ ನಡೆಯುತ್ತಿದ್ದ ಸಂಗತಿ ಮಹಾರಾಷ್ಟ್ರದ ಪತ್ರಿಕೆಯೊಂದರಲ್ಲಿ ಗೇಲಿಗೆ ಆಹಾರವಾದದ್ದನು ಶ್ರೀ ಶರ್ಮರು ನೊಂದು ನುಡಿದಿದ್ದಾರೆ. ಅಲ್ಲಿಯ ಶಿಕ್ಷಣ ವಿಧಾನದ ಬಗ್ಗೆ ಸಿದ್ಧವ್ವನಹಳ್ಳಿಯವರ ಒಂದು ಮಾತು– "ವರ್ಧಾ ಶಿಕ್ಷಣ ವಿಧಾನದಲ್ಲಿ ಏನೇನು ಅಡಗಿದೆಯೊ ಕಾಲವೇ ತಿಳಿಸಬೇಕು. ಆದರೆ ನಾವು ಕಲಿತ ವಿದ್ಯೆಗೆ ಜೀವನದ ಗಾವುದ ಗಾವುದ ದೂರವಿತ್ತೆಂಬುದು ಮಾತ್ರ ನನಗೆ ತಿಳಿದಿತ್ತು. ಅಂತೆಯೇ ಜೀವನದ ನಿಕಟ ಸಂಬಂಧವನ್ನು ಮನಸ್ಸಿನಲ್ಲಿಯೇ ಮೆಲಕು ಹಾಕುತ್ತಾ ಹಿಂತಿರುಗಿದೆ."[೪]

ಶ್ರೀಯುತ ವಿ.ಸೀ.ಅವರ 'ಪಂಪಾಯಾತ್ರೆ' ಕನ್ನಡ ಪ್ರವಾಸ ಸಾಹಿತ್ಯದಲ್ಲಿ ಬೇರೊಂದು ಮಜಲು. ಇಂದಿನ ಪ್ರಯಾಣ ಸೌಕರ್ಯ ಗಳಿಲ್ಲದ, ಸರಿಯಾದ ರಸ್ತೆ ಇಲ್ಲದ ಕಾಲದಲ್ಲಿ, ಕನ್ನಡ ಭಾಷೆ, ಕನ್ನಡ ಸಂಸ್ಕೃತಿ ಹಾಗೂ ಶಿಲ್ಪಶಾಸ್ತ್ರದ ಗಂಧವೇ ಇಲ್ಲದ ಮದ ರಾಸಿ 'ಗೈಡ್' ಇಲ್ಲದೇ ಇದ್ದ ಕಾಲದಲ್ಲಿ ವಿ.ಸೀ. ಅವರು ಪ್ರವಾಸ ಕೈಗೊಂಡಿದ್ದರು. ಅದು 'ಪಂಪಾಯಾತ್ರೆ' ಅವರ ಪ್ರವಾಸ

---

೩ 'ವರ್ಧಾಯಾತ್ರೆ'¯ ಮುನ್ನುಡಿ– ಪುಟ. ೬. ೪ 'ವರ್ಧಾಯಾತ್ರೆ' – ಪುಟ ೪೩

ತಮಾಷೆಯಿಂದಲೇ ಆರಂಭವಾಗುತ್ತದೆ. ಉದ್ದಕ್ಕೂ ಹಾಗೇ, ಅಲ್ಲಲ್ಲಿ ಶ್ರೀಯುತರ Running Commentary, ಕುಚೇಷ್ಟೆ ಮಾತುಗಳು ಕೇಳಿಸುತ್ತವೆ. ಕಮಲಾಪುರದಲ್ಲಿ ಅವರು ಒಂದು ರಾತ್ರಿ ಪಟ್ಟ ಅವ್ಯವಸ್ಥೆ ದೇವರಿಗೇ ಪ್ರೀತಿ! ಚೇಳುಗಳಿಗೆ ಹೆದರಿ ದ್ದನ್ನು ನೆನೆದರೆ ನಗು ಸೋಲುತ್ತೆ. ಶ್ರೀಯವರು ತಮ್ಮ ಇತರ ಜೊತೆ ಪ್ರವಾಸಿಗರೊಂದಿಗೆ ಹಂಪೆಯ ಹಲವು ಭಗ್ನಾವಶೇಷಗ ಳನ್ನು, ಅವುಗಳ ಮಹತ್ವ ಮಾಹಿತಿಗಳನ್ನೂ ಸದ್ಯದ ದುಃಸ್ಥಿತಿಯನ್ನೂ ನೊಂದು ನುಡಿಯುತ್ತಾರೆ. ಅನೇಕ ಮುರುಕು ದೇವಾಲ ಯಗಳನ್ನೂ, ಹರುಕು ವಿಗ್ರಹಗಳನ್ನು ನೋಡಿದ್ದಲ್ಲದೆ ರಾತ್ರಿ ಅವರ ಕಾಲಿನ ಜೋಡು ಹರಿದು, ಅವರ ಕೈಸೇರಿ ಕಡೆಗೆ ಹಾಳು ಹಂಪೆಯ ಪಾಳುಭೂಮಿ ಸೇರಿದ ಪ್ರಸಂಗ ತುಂಬಾ ಹಾಸ್ಯಪೂರ್ಣವಾಗಿದೆ. ಪಂಪಾ ಸರೋವರ, ಪಂಪಾ ಕ್ಷೇತ್ರದ ಪವಿತ್ರ ಸಂದರ್ಶನ ನಮಗೂ ಆಗುತ್ತದೆ.

ನಾನು ಮೆಚ್ಚಿದ ಮತ್ತೊಂದು ಪ್ರವಾಸ ಸಾಹಿತ್ಯ ಗ್ರಂಥ, ಶ್ರೀಯುತ ಮಾನ್ವಿ ನರಸಿಂಗರಾಯರ 'ಕನ್ನಡ ಯಾತ್ರೆ'. ಕವಿ ವರ ಬೇಂದ್ರೆಯವರ ಘನ ಅಧ್ಯಕ್ಷತೆಯಲ್ಲಿ ಶಿವಮೊಗ್ಗೆಯಲ್ಲಿ ನಡೆದ ಇಪ್ಪತ್ತೇಳನೆಯ ಸಾಹಿತ್ಯ ಸಮ್ಮೇಳನವೇ ಈ ಗ್ರಂಥದ ಮುಖ್ಯ ವಸ್ತು. ಶ್ರೀಯುತ ಮಾನ್ವಿಯವರು ತಮ್ಮ ಗೆಳೆಯರೊಂದಿಗೆ ಹೈದರಾಬಾದಿನಿಂದ ಹೊರಟು ಶಿವಮೊಗ್ಗೆ ತಲುಪಿ, ಅಲ್ಲಿನ ಎರಡು ಮೂರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಉಡುಪಿಯ ಶ್ರೀ ಕೃಷ್ಣದರ್ಶನವನ್ನು ಪಡೆದು ತೌರಿಗೆ ಹಿಂದಿರುಗಿದವರೆಗಿನ ತಮ್ಮ ಅನುಭವವನ್ನು ನಿಸ್ಸಂಕೋಚ ಬುದ್ಧಿಯಿಂದ ಬಿತ್ತರಿಸಿದ್ದಾರೆ; ಕನ್ನಡ ನುಡಿ, ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ತುಂಬಾ ಅಭಿಮಾ ನಿಗಳಾದ ಇವರು ಕನ್ನಡಮ್ಮನ ಬಗ್ಗೆ ಸದ್ಭಕ್ತಿಯನ್ನು ತಳೆದು 'ಕನ್ನಡ ಯಾತ್ರೆ' ಎಂದು ಹೆಸರಿಟ್ಟಿದ್ದಾರೆ ತಮ್ಮ ಈ ಕಿರು ಹೊತ್ತ ಗೆಗೆ. ಏಕೆಂದರೆ ನಾಡ ದೇವಿಯ ಸೇವೆಗಾಗಿ ನಾಡಿನ ಸೇವೆಗಾಗಿ ನಾಡಿನ ಭಕ್ತವೃಂದ ಸೇರುವ ಜಾಗ ಪವಿತ್ರ ಕ್ಷೇತ್ರವೆಂದೇ ಅವರ ಭಾವನೆ, ಅಲ್ಲದೆ ಕೈಕೊಳ್ಳುವ ಪ್ರವಾಸ ಒಂದು ಪವಿತ್ರತಮ ಯಾತ್ರೆ. ಶ್ರೀಯುತ ಮಾನ್ವಿಯವರು ನಿರ್ದಾಕ್ಷಿಣ್ಯ ಸ್ವಬಾವದ ವರು. ಶಿಮಮೊಗೆಗೆಯ ಸಮ್ಮೇಲನದ ವ್ಯವಸ್ಥಾಪಕರ ವ್ಯವಸ್ಥೆಯನ್ನು ಕಟುವಗಿ ಟೀಕಿಸಿದ್ದಾರೆ; ಪರಿಹಾರ ಸೂಚಿಸಿದ್ದಾರೆ. ಅವರ ಹಲವು ಮಾತುಗಳಲ್ಲಿ ಹಾಸ್ಯ ಕಂಡು ಬಂದರೂ ಆಂತರ್ಯದಲ್ಲಿ ಕಠೋರ ಸತ್ಯ ಅಡಗಿದೆ. ಅವಿ ಮಿಂಚಿನ ಛಾಟಿಯ ಏಟುಗಳ ಲ್ಲದೆ ಬೇರೆ ಅಲ್ಲ. ಶ್ರೀ ಡಿ.ಕೆ. ಭೀಮಸೇನರಾಯರು ಪುಸ್ತಕದ ಮುನ್ನುಡಿಯಲ್ಲಿ ಹೇಳಿರುವಂತೆ 'ಎಲ್ಲ ಕಾಲದಲ್ಲಿ ಇದನ್ನೋದಿ ಆನಂದಪಡಬಹುದಾಗಿದೆ.'

ಸ್ವಾತಂತ್ರಾನಂತರದಲ್ಲಿ ಪ್ರವಾಸ ಲೇಖನಗಳು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಸಿಕ್ಕುತ್ತವೆ. ಪ್ರಮುಖವಾಗಿ ಶ್ರೀ ಶಿವರಾಮ ಕಾರಂತರ 'ಅಬೂವಿನಿಂದ ಬರಾಮಕ್ಕೆ' ಮತ್ತು 'ಅಪೂರ್ವ ಪಶ್ಚಿಮ' ಶ್ರೇಷ್ಠ ಕೃತಿಗಳು. 'ಅಪೂರ್ವ ಪಶ್ಚಿಮ' ಕನ್ನಡ ಪ್ರವಾಸ ಸಾಹಿತ್ಯದ ಒಂದು ಮೈಲಿಗಲ್ಲು. ಡಾ॥ಜಿ. ಮರುಳಸಿದ್ಧಯ್ಯನವರ 'ಭಾರತ ಪ್ರವಾಸ ಚಿತ್ರಗಳು', ಶ್ರೀ ಮ.ನ. ಮೂರ್ತಿಯವರ 'ನಮ್ಮ ಪ್ರವಾಸ', ಶ್ರೀ ಗುಂಡ್ಮಿ ಚಂದ್ರಶೇಖರ ಐತಾಳರ 'ಸೌಂದರ್ಯದ ಸಾನಿಧ್ಯದಲ್ಲಿ' ಮತ್ತು ಶ್ರೀರಾಮಕೃಷ್ಣಾಶ್ರಮದ ಯತಿಗಳ ಪ್ರವಾಸ ಲೇಖನಗಳು, ಶ್ರೀ ಸೋಮನಾಥಾನಂದರ 'ಹೈಮಾಚಲ ಸಾನಿಧ್ಯದಲ್ಲಿ (ಹರಿದ್ವಾರದಿಂದ ಕೇದಾರ–ಬದರಿಗೆ) ಮತ್ತು ಶ್ರಿಸ್ವಾಮಿ ಜ್ಞಾನನಾಥಾನಂದರ 'ಕೈಲಾಸ–ಮನಸ ಸರೋವರ ಯಾತ್ರೆ' (ನೀಲಗಿರಿಯಿಂದ ಹಿಮಗಿರಿಯವರೆಗಿನ ಯಾತ್ರೆ) ಇವು ಸ್ವತಂತ್ರ ಸ್ವನುಭವದ ಕರತಿಗಳು. ಶ್ರೀಸ್ವಾಮಿ ವಿವೇಕಾನಂದರ 'ಕೊಲೊಂಬೊದಿಂದ ಅಲ್ಮೋರಕೆ' ಒಂದು ಭಾಷಾಂತರ ಗ್ರಂಥವೂ ಪ್ರಸಿದ್ಧ ವಿದೆ. ಶ್ರೀವಿವೇಕಾನಂದರ ಸಾಂಸ್ಕೃತಿಕ ದರ್ಶನ ದೇದೀಪ್ಯಮಾನವಾಗಿ ಬೆಳಗಿ ಜಗತ್ತಿನ ಕಣ್ತೆರಸಿದ ಲೇಖನಗಳು ವಿಫುಲವಾಗಿವೆ. ಚಿಕಾಗೋದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ 'ಸಮನ್ವಯ ತತ್ವ ಸಾರಿ' ಜನತೆಯನ್ನು ಜಾಗ್ರತಗೊಳಿಸಿದ ಸಿಂಹವಾಣಿ ಇಂದಿಗೂ ಎಲ್ಲರೆದೆಯ ಗಹ್ವರಗಲಲ್ಲೂ ಮಾರ್ದನಿಗುಡುತ್ತಿದೆ. ಶ್ರೀವೆಂಕಟಯ್ಯನವರ 'ಚಿನ್ನದ ಗಿರಿ ಯಾತ್ರೆ' ಮತ್ತೊಂದು ಪ್ರವಾಸ ಗ್ರಂಥ. ತಿರುಪತಿಯ ಯಾತ್ರೆಯ ವಿಷಯವೇ ಅದರ ವಸ್ತು. ಪ್ರವಾಸ ಸಾಹಿತಿಗಳನ್ನು ಸೃಷ್ಟಿಸಿದಂತೆ, ರೂಪಿಸಿದಂತೆ ವಿಜ್ಞಾನಿಗಳನ್ನೂ ಜಗತ್ತಿಗೆ ನೀಡಬಲ್ಲುದೆಂಬುದಕ್ಕೆ ಚಾರ್ಲ್ಸ್ ಡಾರ್ವಿನ್ ಕೈಗೊಂಡ 'ಬೀಗಲ್ ಪ್ರವಾಸ' ಉತ್ತಮ ನಿದರ್ಶನ. ಮಾನವನ ಮತಿ ವಿಕಾಸಕ್ಕೂ ಇದು ಹೇತುವಾಗುತ್ತದೆ. ಇಂತಹ ಪ್ರವಾಸ ಗಳಿಂದ ಹೊರಬಂದ ಸಾಹಿತ್ಯ ಇಟ್ಟು ಕಥೆಯೆನ್ನಿಸದೆ ಜೀವಂತ ಸಾಹಿತ್ಯವಾಗಿ ವಿಶ್ವ ಸೌಹಾರ್ದ ಸಾಧಕವೂ ಆಗುತ್ತದೆ. ಇಂತಹ ಅಮೂಲ್ಯ ಸಾಹಿತ್ಯ ಸೃಷ್ಟಿ ಕನ್ನಡದಲ್ಲೂ ಸತತವಾಗಿ ಸಾಗಿಬರಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

# ಕೆಲವರು ಕಿರು ವಚನಾರ್ತಿಯರು: ಒಂದು ಸಮೀಕ್ಷೆ[೧]

## ೧.ಪ್ರಸ್ತಾವನೆ

ಶತ ಶತಮಾನಗಳಿಂದಲೂ ಶೋಷಣೆಗೆ ಒಳಗಾದ ವ್ಯಕ್ತಿಗಳು ಇಬ್ಬರು: ಒಬ್ಬ ಶೂದ್ರ, ಮತ್ತೊಬ್ಬಳು ಸ್ತ್ರೀ. ಮೊದಲನೆಯವನಿಗೆ ಅಷ್ಟಿಷ್ಟು ಸಾಮಾಜಿಕ ರಿಯಾಯಿತಿ ಮತ್ತೆ ಅಲ್ಪ ಪ್ರಮಾಣದ ಬಡ್ತಿ ಸಿಕ್ಕಿರಬಹುದು; ಸಿಕ್ಕಿದೆ. ದಲಿತನನ್ನು ಉಳಿದ ಶೂದ್ರ ವರ್ಗ ತುಸು ಧಾರ್ಮಿಕವಲ್ಲದಿದ್ದರೂ ಸಾಮಾಜಿಕ ಲಾಭ ಪಡೆದಿದೆ. ಆದರೆ ಬಹುಕಾಲದವರೆಗೆ ದಲಿತ ಮಾತ್ರ ಶಿಷ್ಟರ ಕಾಲ್ತುಳಿತಕ್ಕೆ ಸಿಕ್ಕು ಪಾತಾಳ ಪದವಿ ಪಡೆದದ್ದುಂಟು. ಹೊಲಸು ತಿನ್ನುವ ಹಂದಿಯನ್ನು ವರಾಹ ಸ್ವಾಮಿ ಎಂದು ಪೂಜಿಸಿದ ಜನ, ವನ ಹಾಳು ಮಾಡುವ ಕೋತಿಯನ್ನು ಅಂಜನಾಸುತನೆಂದು ಗೌರವಿಸಿದ ಜನ, ವಿಷ ಸರ್ಪವನ್ನು ನಾಗರಾಜನೆಂದು ಹಾಲೆರೆದ ಜನ, ಎಂ ಜಲು ತಿನ್ನುವ ನಾಯಿಯನ್ನು ದತ್ತಾತ್ರೇಯನೆಂದು ಭಜಿಸಿದ ಜನ, ತನ್ನಂತೆಯೇ ಇರುವ ಮನುಷ್ಯನನ್ನು ಮನುಷ್ಯ ಎಂದು ಗುರುತಿಸಲಿಲ್ಲ. ಅವನೊಡನೆ ಮಾತನಾಡಿದರೆ, ಅವನನ್ನು ಮುಟ್ಟಿಸಿಕೊಂಡರೆ ಮೈಲಿಗೆ ಆಗುತ್ತೇವೆ ಎಂಬ ಭಾವನೆ ಬೆಳಸಿಕೊಂಡು ಅಂತಹ ದಲಿತನನ್ನು ತುಂಬಾ ದೂರದಲ್ಲಿಟ್ಟು ಅಸಭ್ಯ ರೀತಿಯಲ್ಲಿ ನಡೆಸಿಕೊಂಡು ಬಂದಿತು.

ಅಂಥದೇ ಮನ್ನಣೆ ಅಥವಾ ಅದಕ್ಕಿಂತಲೂ ಕ್ರೂರತರ ಅಪಚಾರ ಹೆಣ್ಣಿಗಾದದ್ದುಂಟು. ಹೆಣ್ಣು ಹುಟ್ಟಿದರೆ ಒಂದು ಹುಣ್ಣು ಹುಟ್ಟಿದ ಹಾಗೆ. ಯೋಗಿಗಳು ಅವಳನ್ನು ಮಾಯೆ ನೀ ದೂರವಿರು ಎಂದರು. ದರ್ಮಗಳು ಹೆಣ್ಣಿಗೆ ದೇವತಾರಾಧನೆಯ ಹಕ್ಕನ್ನಾಗಲಿ ಮೋಕ್ಷವೆಂಬ ಪರಮ ಪದವಿಯನ್ನಾಗಲಿ ಕೊಡಲಿಲ್ಲ. ಅವಳು ತುಲಸೀ ಕಟ್ಟೆಯನ್ನು ಸುತ್ತಬಹುದೇ ಹೊರತು, ದೇವರ ಕೋಣೆ ಯನ್ನು ಪ್ರವೇಶಿಸುವ ಅರ್ಹತೆ ಪಡೆದವಳಾಗಿರಲಿಲ್ಲ. ಅದರಿಂದ ಅವಳು ದೇವಸಾನಿಧ್ಯದಿಂದ ಬಹುದೂರ ಉಳಿದಳು ದಲಿತ ಅಥವಾ ಶೂದ್ರನಂತೆ. ದೈವ ದೂರಲಾದ ಹೆಣ್ಣು ದೈವ ಕೃಪೆಯಿಂದಲೂ ವಂಚಿತಳಾದಳು, ಸ್ವರ್ಗ, ಮೋಕ್ಷ ಮೊದಲಾದವು ಅವಳ ಪಾಲಿಗೆ ಮೊಲದ ಕೊಂಬಾದವು! ಒಂದು ಧರ್ಮ ಹೇಳುತ್ತೆ: ಒಂದು ಜನ್ಮದಲ್ಲಿ ಒಂದು ಜೀವ ಹೆನ್ಣಾಗಿ ಹುಟ್ಟಿದರೆ ಅದು ಎಷ್ಟು ಜನ್ಮಗಳನ್ನು ಕಳೆದರೂ ಹೆಣ್ಣಾಗಿಯೇ ಹುಟ್ಟುತ್ತದೆ. ಈ ಜನ್ಮದಲ್ಲೆ ಹೆಂಗಸು, ಮುಂದಿನ ಜನ್ಮದಲ್ಲಿ ನಾಯಿಯಾದರೆ ಹೆಣ್ಣು ನಾಯಿ; ಅದಕ್ಕೆ ಮೋಕ್ಷ ಇಲ್ಲ; ಅದರ ಮುಂದಿನ ಜನ್ಮದಲ್ಲಿ ಕತ್ತೆಯಾದರೆ ಹೆಣ್ಣು ಕತ್ತೆ; ಅದಕ್ಕೆ ಮೋಕ್ಷವೆಂಬುದಿಲ್ಲ. ಹೀಗೆ ಒಂದು ಜನ್ಮದಲ್ಲಿ ಪಾಪ ಮಾಡಿ ಹುಟ್ಟಿದ ಜೀವ ಜನ್ಮಾಂತರಕ್ಕೂ ಹೆಣ್ಣಾಗಿ, ಹೆಣವಾಗಿ ಮುಕ್ತಿ ಅಥವಾ ಮೋಕ್ಷದ ಬಗೆಗೆ ಕನಸನ್ನೂ ಕಾಣದೆ ಈ ಭವಸಾಗರದಲ್ಲಿ ತೊಳಲಿ ಬರಬೇಕು. ಇಂತಹ ಕಠೋರ ಕಟ್ಟಳೆ ಅವಳ ಪಾಲಿಗೆ ಬಂತು. ಮತ್ತೊಂದು ಧರ್ಮದಲ್ಲಿ ಸ್ವಲ್ಪ ರಿಯಾಯಿತಿ ಸಿಕ್ಕಿತು. ಅಂದರೆ ಒಂದು ಹೆಣ್ಣು ಜೀವ ಸತ್ತ ಮೇಲೆ ಮುಂದಿನ ಯಾವುದಾದರೂ ಒಂದು ಭವದಲ್ಲಿ ಗಂಡಾಗಿ ಹುಟ್ಟಿದರೆ ಆ ಗಂಡು ಚೇತನ ಸ್ವಯಂ ಸಾಧನೆ ಸಿದ್ಧಿಗಳಿಂದ ಮೋಕ್ಷ ಪಡೆಯಬಹುದು ಎಂಬ ಕನ್ಸೇಷನ್ ತೋರಿತು! ಇಂತಹ ಅನಿಷ್ಟ ವರ್ತನೆಗಳನ್ನೂ ಅಮಾನವೀಯ ಆಚರಣೆಗಳನ್ನೂ ಖಂಡಿಸಿ ಬಸವಣ್ಣ ದಲಿತನಿಗೆ, ಅಸ್ಪೃಶ್ಯತೆಗೆ ಕೊಟ್ಟಂತೆಯೇ ಹೆಣ್ಣಿಗೆ ವಿಶಿಷ್ಟ ಸ್ಥಾನ, ವಿನೂತನ ಮಾನ ದೊರಕಿಸಿಕೊಟ್ಟ. ಕೊಲುವವನೇ ಮಾದಿಗ, ಹೊಲಸು ತಿಂಬುವವನೇ ಹೊಲೆಯ, ಕುಲವೇನೋ, ಆವಂದಿರ ಕುಲವೇನೋ ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲ ಸಂಗನ ಶರಣರೇ ಕುಲ ಜರು' ಎಂದು ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ ಮೊದಲಾದವರನ್ನು ಬರಿಯ ಶರಣರೆನ್ನಲಿಲ್ಲ ಶರಣ ಶ್ರೇಷ್ಟರು ಎಂದು ಗೌರವಿಸಿದ; ಅವರನ್ನು ಹಿರಿಯರು ಎಂದು ಹೊಗಳಿ ಪೂಜಿಸಿದ. ಅದೇ ರೀತಿ 'ಹೆಣ್ಣು ಹೆಣ್ಣಲ್ಲ, ಹೆಣ್ಣು ಸಾಕ್ಷಾತ್ ಕಪಿಲ ಸಿದ್ಧ ಮಲ್ಲಿಕಾರ್ಜುನ' ಎಂದು ದೈವತ್ವವನ್ನು ಆರೋಪಿಸಿ ಹೆಣ್ಣನ್ನು ಪ್ರಾಮಜಲ ಮನಸ್ಸಿನಿಂದ ಆರಾಧಿಸಿತು ವೀರಶೈವ. ಅಷ್ಟೆ ಅಲ್ಲ ಗಂಡಿನ ಹಿರಿಮೆ, ಹೆಣ್ಣಿನ ಹೀನಾಯತನಗಲನ್ನು ದೂರಮಾಡಲೆಂದೇ ಹೆಣ್ಣಿಗೂ ದೀಕ್ಷೆ ಮೋಕ್ಷಗಳನ್ನು ಕರುಣಿಸಿತು. ಹೆಣ್ಣಿಗೂ ಲಿಂಗದೀಕ್ಷೆಕೊಟ್ಟು ಅವಳನ್ನ ದೈವ ಸಮೀಪಿಯನ್ನಾಗಿ ಮಾಡಿತು. ಇಷ್ಟಲಿಂಗ ಧಾರಣೆಯನ್ನು ಅಣ್ಣ ಆಚರಣೆಗೆ ತಂದಿದ್ದರ ಉದ್ದೇಶ ಹೆಣ್ಣಿಗೂ ದೈವ-ಧರ್ಮಗಳಲ್ಲಿ ಸಮಾನ ಹಕ್ಕಿದೆ ಎಂಬುದನ್ನು ಸ್ಪಷ್ಟೀಕರಿಸಲು. 'ಮೊಲೆ ಮೂಡಿ ಬಂದರೆ ಹೆಣ್ಣೆಂಬರು,

---

[೧] ದಿನಾಂಕ ೨೧–೮–೧೯೯೧ರಂದು ಬಸವ ಸಮಿತಿಯಲ್ಲಿ ಮಾಡಿದ ಲಿಂಗೈಕ್ಯೆ ಶರಣೆ ತೋಟಮ್ಮ ಸಂಗಣ್ಣ ಅಗಡಿ ಅವರ ಸ್ಮರಣೆಯ ದತ್ತಿ ಉಪನ್ಯಾಸ

ಗಡ್ಡ–ಮೀಸೆ ಬಂದರೆ ಗಂಡೆಂಬರು, ಇವೆರಡರ ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ ರಾಮನಾಥ ' ಎಂದು ಘೋಷಿಸಿ, ಪರಿಶುದ್ಧ ಪರಂಜ್ಯೋತಿ ಸ್ವರೂಪವಾದ ಆತ್ಮಕ್ಕೆ ಹೆಣ್ಣುತನ ಗಂಡುತನ ಇಲ್ಲ ಎಂಬುದನ್ನು ತೋರಿಸಿ ಸಮಾನತೆಯನ್ನು ಸಾರಿತು ವೀರಶೈವ. ಸಂಸ್ಕೃತವನ್ನು ಉಚ್ಚರಿಸುವ ಅಧಿಕಾರ ಸ್ತ್ರೀಗೂ ಇರಲಿಲ್ಲ, ಶೂದ್ರನಿಗೂ ಇರಲಿಲ್ಲ. ಹನ್ನೆರಡನೆಯ ಶತಮಾನದ ಶಿವಶರಣರು ಅದನ್ನು ಖಂಡಿಸಿದರು; ಸಕಲರಿಗೂ ಬಿನ್ನಹಕ್ಕೆ ಬಾಯಿ ಕೊಟ್ಟರು. ದೇವ ಭಾಷೆ ಬೇಡ ನಮ್ಮ ಮಾನವ ಭಾಷೆ ಸಾಕು. ಲಲಿತ ವಹ ಕನ್ನಡ ನುಡಿಯಲ್ಲಿ ಎಲ್ಲರೂ ತಮ್ಮ ಅಭಿವ್ಯಕ್ತಿಯನ್ನು ಸಾಧಿಸಿಕೊಂಡರು. ತಮ್ಮ ತಮ್ಮ ಅನುಭವ, ಅನುಭಾವಗಳನ್ನು ಮಾತಿನ ಮಾಧ್ಯಮದ ಮೂಲಕ ಅನುವದಿಸಿದರು. ವಚನಕಾರರಿತ್ತ ಆತ್ಮಪ್ರಜ್ಞೆ Self awareness, ಆತ್ಮ ಪ್ರತ್ಯಯ (Self confidence), ಪ್ರೇರಣೆ ಪ್ರೋತ್ಸಾಹಗಳಿಂದ ಸಾಮಾನ್ಯ ಸ್ತ್ರೀಯರೂ ಅಂದು ವಚನ ರಚನೆ ಮಾಡಿದರು. ಅದರಿಂಸಾಗಿ ಕನ್ನಡ ಸಾಹಿತ್ಯ ಶ್ರೀಮಂತವಾಯಿತು. ಹೊಸ ಆಯಾಮ ಹೊಂದಿ ನೈಜಾರ್ಥದಲ್ಲಿ ವೈಭವೀಕೃತವಾಯಿತು.

ವಿಶ್ವೇತಿಹಾಸದಲ್ಲಿ ಹೆಣ್ಣಿಗೆ ದೊರೆತ ವ್ಯಕ್ತಿ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೆ, ಹನ್ನೆರಡನೆಯ ಶತಮಾನದ ಶಿವ ಶರಣರು ಕೊಟ್ಟದ್ದು. ಅದೇ ಮೊದಲು ಅದೇ ಕೊನೆ. ಜಗತ್ತಿನಲ್ಲಿ ಅದಕ್ಕೆ ಹಿಂದೆ ಎಲ್ಲೂ ಯಾವ ರಾಷ್ಟ್ರದಲ್ಲೂ ಇರಲಿಲ್ಲ. ಅದಕ್ಕೆ ಪ್ರಸಿದ್ಧ ಐರಿಷ್ ನಾಟಕಕಾರ ಹೆನ್ರಿಕ್ ಇಬ್ಸನ್‌ನ ನಾಟಕಗಳೇ ಜೀವಂತ ಸಾಕ್ಷಿ! ಅವನ ನಂತರದಲ್ಲಿ ಪಾಶ್ಚಾತ್ಯರಲ್ಲಿನ ಸ್ತ್ರೀಯದು ಸ್ವಾತಂತ್ರ್ಯ ಅಲ್ಲ, ಅವಳ ಸ್ವೇಚ್ಛಾಚಾರ! ಹೆಣ್ಣು ಗಂಡಸಿನ ಜೊತೆಯಲ್ಲಿ ಸಮಾನ ಆಸನದಲ್ಲಿ ಕುಳಿತರೆ, ಅವನಂತೆ ಕುಡಿದರೆ, ಕುಣಿದರೆ, ಸ್ವಾತಂತ್ರ್ಯ ಪಡೆದಂತಲ್ಲ ಎಂಬುದನ್ನು ಅವರು ಇಮದಿಗೂ ಮನಗಣರು. ಸ್ವಾತಂತ್ರ್ಯದ ಅರ್ಥ ಸ್ವೇಚ್ಛಾಚಾರ ಅಲ್ಲ!

ಏನೇ ಇರಲಿ ಅಂದಿನ ಶಿವಶರಣರ ಅನ್ಯಾದೃಶ್ಯ ಕ್ರಾಂತಿ ಕಾಲದಲ್ಲಿ ನೂರಾರು ಜನ ವಚನಕಾರರು, ವಚನಕಾರ್ತಿಯರು ಪ್ರಕಾಶಕ್ಕೆ ಬಂದರು. ಅವರ ವಚನಗಳು ರಚನೆಗೊಂಡು ಹಲವು ಕಟ್ಟುಗಳಲ್ಲಿ ಉಳಿದು ಬಂದವು. ಅವುಗಳಲ್ಲಿ ಕೆಲವರು ಕಿರಿಯ ವಚನಕಾ ರ್ತಿಯರ ವಚನ ವೈಭವವನ್ನು ಗುರುತಿಸುವ ಪ್ರಾಮಾಣಿಕ ಪ್ರಯತ್ನ ಈ ಉಪನ್ಯಾಸದ ಮೂಲ ಉದ್ದೇಶ.

**೨. ವಚನಕಾರ್ತಿಯರು**

ವಚನಕಾರ್ತಿಯರ ಯಾದಿ ಬಹು ದೊಡ್ಡದು. ಮುಖ್ಯವಾಗಿ ಅಕ್ಕಮಹಾದೇವಿ, ಮುಕ್ತಾಯಕ್ಕ, ಸತ್ಯಕ್ಕ, ನೀಲಮ್ಮ, ಲಿಂಗಮ್ಮ, ಮೋಳಿಗೆ ಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಅಕ್ಕನಾಗಮ್ಮ, ಗಂಗಾಂಬಿಕೆ, ಬೊಂತಾದೇವಿ, ಗೊಗ್ಗವ್ವೆ, ಕದಿರ ರೆಮ್ಮವ್ವೆ, ಗನೇಶ ಮಸಣಯ್ಯಗಳ ಪುಣ್ಯಸ್ತ್ರೀ, ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ, ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ, ಹಾದರದ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ, ಕೊಂಡಿ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷಮ್ಮ, ಕಾಲಕಣ್ಣಿಯ ಕಾಯಮ್ಮ, ಕಾಟ ಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ, ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ, ಕೊಟ್ಟಣದ ಸೋಮಮ್ಮ, ಬಾಚಿ ಕಾಯಕದ ಬಸವಯ್ಯಗಲ ಪುಣ್ಯಸ್ತ್ರೀ ಕಾಳವ್ವ, ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ, ಬತ್ತಲೇಶ್ವ ರನ ಪುಣ್ಯಸ್ತ್ರೀ ಗುಡ್ಡವ್ವೆ, ಅಕಮ್ಮ, ಕದಿರ ಕಾಯಕದ ಕಾಳವ್ವೆ, ಕನ್ನಡಿ ಕಾಯಕದ ರೇವಮ್ಮ, ಸೂಳೆ ಸಂಕವ್ವೆ, ಬುದ್ದಯ್ಯಗಳ ಪುಣ್ಯಸ್ತ್ರೀ ಕಾಳವ್ವೆ, ಅಮುಗಿ ರಾಯಮ್ಮ–ಮೊದಲಾದ ಉಪಲಬ್ದ ವಚನಗಳ ವಚನಕಾರ್ತಿಯರು.

ಮತ್ತೆ, ನಿರಂಜನದ ಧವಳಾಯಿ, ಹುಗ್ಗಿಯ ದುಗ್ಗಳವ್ವ, ಸಾಯಿದೇವಿ! ನೇಮದ ವೀರಸಂಗವ್ವೆ, ದಂಡಿಗೆಯ ಗುಡ್ಡಾದೇವಿ! ದೇವ ಲಾಂಬಿಕೆ, ಕೇಳಿಕೆಯ (ನರ್ತನದ) ಮಹಾದೇವಿ, ಸೇವಕರ ಗೌರವ್ವೆ, ಹೂವಿನ ಅಲ್ಲಮದೇವಿ– ಇವರೇ ಮೊದಲಾದ ಅನುಪಲಬ್ದ ವಚನಗಳ ವಚನಕಾರ್ತಿಯರು.[೨]

ಇವರ

ರಚನೆಗಳ ಗಾತ್ರ ಪಾತ್ರಗಳನ್ನು ಆಧರಿಸಿ ಸ್ಥೂಲವಾಗಿ ಮೂರು ವರ್ಗಗಳ ವಚನಕಾರ್ತಿಯರೆಂದು ವಿಭಜಿಸಬಹುದು:

---

[೨] ವಚನಕಾರ್ತಿಯರಂತೆ, ಪ್ರಧಾನ ವಚನಕಾರರೂ ಏಳು ಜನ: ಅಲ್ಲಮಪ್ರಭು, ಬಸವಣ್ಣ, ಚನ್ನಬಸವಣ್ಣ, ಸಿದ್ಧರಾಮಣ್ಣ, ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯ ಮತ್ತು ಸೊಡ್ಡಳ ಬಾಚರಸ.

೧. ಮೊದಲನೆಯ ವರ್ಗದ ವಚಕಾರ್ತಿಯರು

೨. ಎರಡನೆಯ ವರ್ಗದ ವಚನಕಾರ್ತಿಯರು

೩. ಮೂರನೆಯ ವರ್ಗದ ವಚನಕಾರ್ತಿಯರು

ಅಕ್ಕ, ಮುಕ್ತಾಯಿ, ನೀಲಮ್ಮ, ಹದಪದ ಅಪ್ಪಣ್ಣಗಳ ಪುಣ್ಯಸ್ತ್ರೀ ಲೀಮಗಮ್ಮ, ಮೋಳಿಗೆ ಮಹಾದೇವಿ, ಅಮುಗಿ ರಾಯಮ್ಮ, ಅಕ್ಕಮ್ಮ- ಇವರು ಮೊದಲ ವರ್ಗದ ವಚನಕಾರ್ತಿಯರು.
ಆಯ್ದಕ್ಕಿ ಲಕ್ಕಮ್ಮ, ಅಕ್ಕನಾಗಮ್ಮ, ಸತ್ಯಕ್ಕ, ಗಂಗಾಂಬಿಕೆ, ಬೊಂತಾ ದೇವಿ ಗೊಗ್ಗವ್ವೆ, ಕದಿರ ರೆಮ್ಮವ್ವೆ, ಗಣೇಶ ಮಸಣಯ್ಯಗಳ ಪುಣ್ಯಸ್ತ್ರೀ, ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ- ಇವರು ಎರಡನೆಯ ವರ್ಗದ ವಚನಕಾರ್ತಿಯರು. ಉಳಿದವರು ಮೂರ ನೆಯ ವರ್ಗಕ್ಕೆ ಸೇರಿದವರು. ಪ್ರಸಕ್ತ ಸಂದಭ್ದ ಕಕ್ಷೆಯಲ್ಲಿ ಎರಡು ಮತ್ತು ಮೂರನೆಯ ವರ್ಗದ ವಚನಕಾರ್ತಿಯರು ಸೇರುತ್ತಾರೆ ಕೆಲವರನ್ನು ಕುರಿತು ಒಂದು ಹಕ್ಕಿನೋಟ ಹರಿಸೋಣ:

**೩. ಕೆಲವರು ವಚನಕಾರ್ತಿಯರು-೧**

**ಆಯ್ದಕ್ಕಿ ಲಕ್ಕಮ್ಮ**

ಮಾರಮ್ಮನ ಪುಣ್ಯಾಂಗನೆ, ಪತಿಭಕ್ತಿ ಪರಾಯಣೆ ಅಷ್ಟೇ ಪ್ರಮಾಣದ ಶಿವಜ್ಞಾನ ಸಂಪನ್ನೆ- ವಾಸ್ತವತೆಗೆ ಅಂಟಿಕೊಂಡ ವಿವೇಚನಾ ಪರ ವ್ಯಕ್ತಿ ಕೂಡ. ಮಾರಯ್ಯ ಮತ್ತು ಲಕ್ಕಮ್ಮರದು ಅನುಕೂಲ ದಾಂಪತ್ಯ. ಕಾಯಕ ಮತ್ತು ದಾಸೋಹಗಳಿರುವ ಪರ್ಯಾಯ ನಾಮಗಳೆಂದರೆ ಮಾರಯ್ಯ ಮತ್ತು ಲಕ್ಕಮ್ಮ! ಅಣ್ಣನ ಮಾಮನೆಯಂಗಳದಲ್ಲಿ ಚೆಲ್ಲಾಡಿದ ಅಕ್ಕಿ ಕಾಳನ್ನು ಆಯ್ದು ತರುವ ಕಾಯಕ ಮಾರಯ್ಯನದು. ಹಾಗೆ ಆಯದು ತಂದ ಅಕ್ಕಿಯನ್ನು ಹಸ ಮಾಡಿ ದಾಸೋಹ ನಡೆಸುವುದು ಲಕ್ಕಮ್ಮನ ದಿನಚರಿ.

ಅದೊಂದು ದಿನ ಅನುಭಾವ ಗೋಷ್ಠಿಯಲ್ಲಿ ಮಾರಯ್ಯ-
ಕಾಯಕದಲ್ಲಿ ನಿರತನಾದರೆ,
ಗುರುದರುಶನವಾದರೂ ಮರೆಯಬೇಕು
ಲಿಂಗ ಪೂಜೆಯಾದರೂ ಮರೆಯಬೇಕು
ಜಂಗಮ ಮುಂದಿದ್ದರೂ ಮರೆಯಬೇಕು
ಕಾಯಕವೆ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು

ಎಂದು ಕಾಯಕದ ಮಹತ್ವವನ್ನು ಎತ್ತಿ ಹಿಡಿದು ತನ್ನ ಕಾಯಕವನ್ನೇ ಮರೆತಿರುತ್ತಾನೆ. ಅತ್ತ ಮನೆಯಲ್ಲಿ ಬಹಳ ಹೊತ್ತು ಕಾಯು ತ್ತಾಳೆ ಲಕ್ಕಮ್ಮ. ಮಾರಯ್ಯ ಅಕ್ಕಿ ಆಯ್ದು ತರಲಿಲ್ಲ. ಜಂಗಮ ದಸೋಹಕ್ಕೆ ಸಮಯ ಮೀರುತ್ತಾ ಬಂತು. ಇದು ತಿಳಿದ ಕೂಡಲೆ ಅಲ್ಲಮಪ್ರಭುವಿನ ಅಧ್ಯಕ್ಷತೆಯಲ್ಲಿ ನಡೆಯುತ್ತದ್ದ ಅನುಭಾವ ಗೋಷ್ಠಿಯೆಡೆಗೆ ಬಂದು, ಎಲ್ಲರಿಗೂ ಭಕ್ತಿಪೂರ್ವಕವಾಗಿ ವಂದಿಸಿ, ಗಂಡನನ್ನು ಕುರಿತು, 'ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ' ಎಂದು ಎಚ್ಚರಿಸುತ್ತಾಳೆ. ಮಾರಯ್ಯ ಕೂಡಲೆ ಹೋಗಿ ಮಾಮನೆಯಂಗಳದಲ್ಲಿ ಚೆಲ್ಲಾಡಿದ್ದ ಅಕ್ಕಿಯನ್ನು ಆಯ್ದು ತರಲಿಲ್ಲ, ಬಾಚಿ ತರುತ್ತಾನೆ. ತಂದು ತನ್ನವಳ ಮುಂದೆ ಸುರಿಯುತ್ತಾನೆ. ಅದು ಕೆಟ್ಟ ಅನಿಸುತ್ತದೆ ಲಕ್ಕಮ್ಮನಿಗೆ. ಕಾರಣ ಅಂದು ತಂದಿದ್ದ ಅಕ್ಕಿಯ ಪ್ರಮಾಣ ಎಂದಿಗಿಂತ ಎರಡು ಪಟ್ಟು ಮೂರು ಪಟ್ಟು ಹೆಚ್ಚು ಇರುತ್ತದೆ ನೋಡಿ ಹೇಳುತ್ತಾಳೆ:

ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ ?
ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯ ?
ಈಸಕ್ಕಿಯಾಸೆ ನಿಮಗೇಕೆ ? ಈಶ್ವರನೊಪ್ಪ.
ಮಾರಯ್ಯಪ್ರಿಯ ಅಮಲೇಶ್ವರ ಲಿಂಗಕ್ಕೆ ದೂರ ಮಾರಯ್ಯ!

ಎಂದು, ಅಂತೆಯೇ ಅಂದಿನ ದಾಸೋಹಕ್ಕೆ ಅಗತ್ಯವಾದಷ್ಟು ಮಾತ್ರ ಇಟ್ಟುಕೊಂಡು, ಉಳಿದ ಅಕ್ಕಿಯನ್ನು 'ಅಲ್ಲಿಯೆ ಸುರಿದು ಬಾ ಮಾರಯ್ಯ' ಎಂದು ವಿವೇಕದ ಮಾತುಗಳನ್ನಾಡಿ ಕಳುಹಿಸುತ್ತಾಳೆ. ಅಂತೆಸಗಿ ಬಂದ ಮಾರಯ್ಯ ಕಾಯಕ, ದಾಸೋಹ, ಕ್ರೀ ಮೊದಲಾದವುಗಳಿಗಿಂತ ಅಲ್ಲಮ ಹೇಳಿದಂತೆ ಜ್ಞಾನ ದೊಡ್ಡದು. ಶಿವ ನ್ನರಿವ ಅರಿವು ಹಿರಿದು ಎಂದ ಪತ್ನಿಗೆ ಬೋಧಿಸತೊಡಗುತ್ತಾನೆ. ಲಕ್ಕಮ್ಮನಿಗೆ ರೇಗಿ ಹೋಗುತ್ತದೆ. ಹೇಳುತ್ತಾಳೆ: 'ಮಾರಯ್ಯ ನಾವು ಮಾಡಬೇಕಾದ ಕಾಯಕ ರಾಶಿ ಬಿದ್ದಿರುವಾಗ, ಕಾಣದ, ಕೇಳದ ಕೈವಲ್ಯ ಪದವಿಯ ಗೊಡವೆಯೇಕೆ? 'ದಾಸೋಹ' ಎಂಬ ನಮ್ಮ ಕರ್ತವ್ಯವನ್ನು ಬಿಟ್ಟು ಕೈಲಾಸವೆಂಬ ಬಿಸಿಲು–ಕುದುರೆಯ ಬೆನ್ನು ಹತ್ತುವುದೇಕೆ? ಇಷ್ಟಕ್ಕೂ ನಾವು ಕೊಟ್ಟು ಬಿಟ್ಟು ಪಡದುಕೊಳ್ಳಲು ಕೈಲಾಸವೆಂಬುದೇನು ಕೈಕೂಲಿಯೆ? ನಮಗೆ ಪರದ ಭ್ರಮೆ ಬೇಡ, ಇಹದ ಶಮೆ ಸಾಕು; ನಮ್ಮ ಕಾಯಕವಷ್ಟೆ ಸಾಕು' ಎಂದು.

ಮಾರಯ್ಯ ಪತ್ನಿಯ ವಿಚಾರಪರತೆಗೆ ಬೆರಗಾಗಿ ಬೆಡುತ್ತಾನೆ, 'ನೋಡು, ನಾನು ಕಾಲುಳ್ಳವನಾದರೂ ಕಣ್ಣಿಲ್ಲದ ಕುರುಡ! ನೀನು ಸತಿ, ನಾನು ಪತಿ. ನಾವಿಬ್ಬರೂ ಒಂದೇ ಆತ್ಮದಂತೆ ಬದುಕು ಮಾಡಿದವರು. ಆದ್ದರಿಂದ 'ಶಿವ'ದ ದರ್ಶನ ಮಾಡಿಸುವೆಯಾ'? ಎಂದು.

ಮಾರಯ್ಯನ ಮಾತು ಕೇಳಿ ಲಕ್ಕಮ್ಮನಿಗೆ ನಗೆ ಬರುತ್ತದೆ. ಹೇಳುತ್ತಾಳೆ: 'ಕೈದ (ಆಯುಧ) ಕೊಡಬಹುದಲ್ಲದೆ ಕಲಿತನವನ್ನು ಕೊಡಲು ಸಾಧ್ಯವೆ? ಹೆಣ್ಣ ಕೊಡಬಹುದಲ್ಲದೆ ಕೂಟಕ್ಕೊಳಗಾಗಲು ಸಾಧ್ಯವೆ? ಅದೇ ರೀತಿ 'ಶಿವ'ದ ಅರಿವು ಅನ್ಯರೀವ ವಸ್ತು ವಲ್ಲ. ಸಾಧಕ ತನಗೆ ತಾನೇ ಪಡೆದುಕೊಳ್ಳಬೇಕಾದ ಆಧ್ಯಾತ್ಮ ದುಡಿಮೆ! ಯಾವುದೂ ಕಟ್ಟಿದ ಗಡ್ಡವಾಗಬಾರದು, ಹುಟ್ಟಿದ ಮೀಸೆ ಯಾಗಬೇಕು! ಸ್ವಪ್ರಯತ್ನದಿಂದ ಸಕಲ ಸಿದ್ಧಿ ಸಾಧ್ಯ; ಪ್ರಯತ್ನಿಸು. ಒಂದರ್ಥದಲ್ಲಿ ನಿನಗೆ ಹೇಳುವುದು ಯುಕ್ತವೇ ಆಗಿದೆ. ಏಕೆಂ ದರೆ ಜೀವಂತ ಸಸ್ಯಕ್ಕೆ ನೀರೆರೆದರೆ ಆ ನೀರು ಜೀವರಸವಾಗಿ ಮೇಲೇರುತ್ತದೆ. ಸತ್ಫಲಕ್ಕೆ ಕಾರಣವಾಗುತ್ತದೆ. ಹಾಗಲ್ಲದೆ ಬುಡ ಒಣ ಗಿದ (ನಷ್ಟ ಮೂಲದ) ಕೊರಡಿಗೆ ನೀರೆರೆದರೆ ಪಟ್ಟ ಪ್ರಯತ್ನ ಫಲಕಾರಿಯಾಗುವುದಿಲ್ಲ. ಆದ್ದರಿಂದ ನಿನ್ನಲ್ಲಿನ್ನೂ ಯೌವನ ಉತ್ಸಾಹಗಳಿವೆ. ಈಗಿನಿಂದಲೆ 'ಶಿವ'ನನ್ನರಿಯುವ ಪ್ರಯತ್ನ ಮಾಡು. ಆದರೆ ಅದನ್ನು ತ್ರಿವಿಧ ದಾಸೋಹದ ಮೂಲಕವೆ ಅಂದರೆ ಗುರು, ಲಿಂಗ, ಜಂಗಮಕ್ಕೆ ಅನುಕ್ರಮವಾಗಿ, ತನು, ಮನ, ಧನಗಳನ್ನು ಅರ್ಪಿಸುವ ಮೂಲಕವೆ ಸಚ್ಚಿದಾನಂದ ಬ್ರಹ್ಮವನ್ನು ಸಾಧಿ ಸಿಕೋ. ಹೀಗೆ ಹೇಳಿದೆನೆಂದು ನಿನಗೆ ಬೇಸರ ಬರುವುದು ಬೇಡ. ನಾನು ನಿನ್ನ ಧರ್ಮಪತ್ನಿ.. ನೀನೆ ಹೇಳಿದಂತೆ ನೀ ಬೇರೆ ನಾ ಬೇರೆ ಅಲ್ಲ. 'ಆವ ಬೀಜವು ಬೀಳುವಲ್ಲಿ ಮೊಳೆಯ ಮುಖ ಹಿಂಚು ಮುಂಚುಂಟೆ? ಕೂಟಕ್ಕೆ ಸತಿ ಪತಿ ಎಂಬ ನಾಮವಲ್ಲದೆ, ಅರಿವಿಂಗೆ ಬೇರೊಂಡಲುಂಟೆ? ಜ್ಞಾನದ ತುರೀಯಸ್ತರದಲ್ಲಿ ಯಾವ ಬೇಧವೂ ಇಲ್ಲ. ಆದ್ದರಿಂದ ಮಾರಯ್ಯ ಕಾರ್ಯೋನ್ಮುಖ ನಾಗು. 'ಶಿವ' ಅಥವಾ 'ಶೂನ್ಯ'ದ ಸಂಪಾದನೆಯ ಸಂದರ್ಭದಲ್ಲಿ ನೀನು ಯಾರಿಗೂ ಎಂದಿಗೂ ಪರತಂತ್ರ ಜೀವಿಯಾಗಬೇಡ' ಎನ್ನುತ್ತಾಲೇ. ಲಕ್ಕಮ್ಮನ ಅನುಭಾವ ಬೋಧೆ ಅಣ್ಣನಿಗೂ ಮೆಚಾಗುತ್ತದೆ. ಅಲ್ಲಮನಿಗೂ ಮನವರಿಕೆಯಾಗುತ್ತದೆ. ಆಗ ಅಣ್ಣ–

ಮನೆ ನೋಡಾ ಬಡವರು, ಮನ ನೋಡಾ ಸಂಪನ್ನರು
ಧನ ನೋಡಾ ಬಡವರು, ಘನ ಮನ ಸಂಪನ್ನರು
ಕೂಡಲ ಸಂಗನ ಶರಣರು ಕರುಳಿಲ್ಲದ ಕಲಿಗಳು
ಅರಿಗೆ ಉಪಮಿಸಬಹುದು.

ಎಂದು ಮುಕ್ತಕಂಠದಿಂದ ಹೊಗಳುತ್ತಾನೆ. ಅಂದರೆ ಸತ್ಯ ಯಾವಾಗಲೂ ಕಟು, ಅದಕ್ಕೆ ದಾಕ್ಷಿಣ್ಯ ತಿಳಿದಿಲ್ಲ. ಕತ್ತೆಗೆ ಕಾಲು ತಾಗಿ ದರೂ ಕಣ್ಣಿಗೆ ಒತ್ತಿಕೊಳ್ಳಬೇಕೆಂಬ ಮೌಢ್ಯ ಅದಕ್ಕೆ ಗೊತ್ತಿಲ್ಲ. ಅದರದು 'ಕರುಳಿಲ್ಲದ ಕಲಿತನ!' ಈ ರೀತಿ ಕೈಹಿಡಿದ

ಗಂಡನಿಗೂ ಹಿತ ನುಡಿದು, ಹಿತವಳಾಗಿ ಕೈಹಿಡಿದು ಗಂಡನನ್ನು ನಡೆಸಿದ ಮಹಾಪ್ರಾಜ್ಞೆ ಲಕ್ಕಮ್ಮ. ಅವಳ ಇಪ್ಪತ್ತೈದು ವಚನಗಳು ಮಾತ್ರ ಸಿಕ್ಕಿವೆ. ಮಾರಯ್ಯ ಪ್ರಿಯ ಅಮರೇಶ್ವರ ಅವಳ ಅಂಕಿತ. ಇದು ಅಮರೇಶ್ವರ ಎಂತಲೂ ಇವೆ. ಬಹುಶಃ ಆಯ್ದಕ್ಕಿ ಮಾರಯ್ಯನ ಆರಾಧ್ಯದೈವ ಇಂದಿನ ರಾಯಚೂರು ಜಿಲ್ಲೆಯ ಲಿಂಗಸುಗೂರ ಸಮೀಪದಲ್ಲಿರುವ ಗುಡ್ಡದ ಓರೆಯಲ್ಲಿ ಹರಿಯುವ ಒಂದು ತೊರೆಯ ಮಧ್ಯದಲ್ಲಿರುವ ಒಂದು ಲಿಂಗು– ಇದನ್ನು ತೊರೆ ಪ್ರತಿಫಳಿಗೆಯೂ ತೊಳೆದು ಪವಿತ್ರಗೊಳಿಸುತ್ತಾ ಹೋಗುತ್ತದೆ. ಹಾಗೆ ಸತ್ಯಪಾವನವಾದ ಲಿಂಗ ಅಮಲಲಿಂಗ ಅದು ರೂಢಿಯಲ್ಲಿ ಅಮಲ>ಅಮರ ಆಗಿರಬಹುದು.[೩].

————————————————————————————————

[೩] ಗೂಳೂರು ಸಿದ್ಧವೀರಣ್ಣೊಡೆಯನ ಶೂನ್ಯ ಸಂಪಾದನೆಯನ್ನು ಸಂಪಾದಿಸಿದ್ದು ಪ್ರೊ. ಸಂ.ಶಿ. ಭೂಸನುರಮಠರವರು 'ಅಮ ರೇಶ್ವರ' ಎಂದರೆ, ಶಿವಶರಣೆಯರ ವಚನಗಳು, ಇಪ್ಪತ್ತೇಳು ಶಿವಶರಣೆಯರ ವಚನಗಳು ಗ್ರಂಥಗಳ ಸಂಪಾದಕರಾದ ಡಾ॥ ಆರ್. ಸಿ. ಹಿರೇಮಠರವರು 'ಅಮಲೇಶ್ವರ' ಎಂದಿದ್ದಾರೆ. ಓಲೆ ಕಟ್ಟುಗಳಲ್ಲಿ ಎರಡೂ ಪ್ರಯೋಗಗಳೂ ಸಿಗುತ್ತವೆ. ಆದರೆ ಮೇಲೆ ಹೇಳಿದಂತೆ 'ಅಮಲೇಶ್ವರ' ಸರಿ ಇದ್ದಿರಬಹುದು.

ಒಟ್ಟಿನಲ್ಲಿ ಗಂಡನ ಆರಾಧ್ಯ ದೈವದ ಅಂಕಿತವನ್ನೇ ಲಕ್ಕಮ್ಮ ಮಾರಯ್ಯ ಪ್ರಿಯ ಅಮಲೇಶ್ವರ ಎಂಬಂಕಿತವನ್ನಾಗಿ ಮಾಡಿಕೊಂಡಿದ್ದಾಳೆ.

**೨–೩. ಅಕ್ಕ ನಾಗಮಮ ಮತ್ತು ಗಂಗಾಂಬಿಕೆಯರು:**

ಅಣ್ಣನ ಮನೆಯ ಮೂರು ಸ್ತ್ರೀರತ್ನಗಳೆಂದರೆ ಅಕ್ಕನಾಗಮ್ಮ, ಗಂಗಮ್ಮ ಮತ್ತು ನೀಲಮ್ಮ. ನಾಗ್ಮ ಬಸವಣ್ಣನ ಅಕ್ಕ, ಗಂಗಮ್ಮ ನೀಲಮ್ಮ ಅವನ ಪತ್ನಿಯರು. ಆದರೆ ಎಲ್ಲರೂ ಅಣ್ಣನನ್ನು ತಮ್ಮನೆಂದೂ ಗಂಡನೆಂದೂ ಕಂಡು ಆದರಿಸಿದವರಲ್ಲ. ಸಾಕ್ಷಾತ್ ಗುರುವೆಂದು ಗುರುತಿಸಿ ಗೌರವಿಸಿದವರು. ಅಕ್ಕನಾಗಮ್ಮ 'ಬಸವಣ್ಣ ಪ್ರಿಯ ಚೆನ್ನಸಂಗಯ್ಯ' ಎಂಬ ಅಣ್ಣ ಬಸವಣ್ಣನ ಬಗೆಗೆ ಅಭಿಮಾನ ತುಂಬಿ ಅಂಕಿವಿರಿಸಿಕೊಂಡಿದ್ದರೆ, ಗಂಗಮ್ಮ ಅಣ್ಣ ಅಂಕಿತವನ್ನೇ ಬಿಸ್ತರಿಸಿ 'ಗಂಗಾಪ್ರಿಯ ಕೂಡಲಸಂಗಮದೇವ' ಎಂದಿಟ್ಟುಕೊಂಡಳು. ನೀಲಮ್ಮ ಅಣ್ಣನ ಅಂಕಿತವನ್ನು ಮೊಟಕುಗೊಳಿಸಿ 'ಸಂಗಯ್ಯ' ಎಂದಷ್ಟೆ ಇಟ್ಟುಕೊಂಡಳು. ಈ ಮೂವರೂ ಅಣ್ಣನ ಮನವನ್ನು ತುಂಬಿದರು. ಮನೆಯನ್ನು ತುಂಬಿದರು. ಬಸವನನ್ನು ಬಸವಣ್ಣನನ್ನಾಗಿ ರೂಪಿಸಿದರು.

ನಾಗಮ್ಮನ ವಚನಗಳು ಕೇವಲ ಹನ್ನೆರಡು ಸಿಕ್ಕಿವೆ. ಒಂದೊಂದೂ ಅಣಿಮುತ್ತು, ಆರಂಭದಲ್ಲಿ. . .

ಶ್ರೀ ಗುರುವೆ ತಾಯಿ ತಂದೆಯಾಗಿ, ಲಿಂಗವೆ ಪತಿಯಾಗಿ
ಜಂಗಮೆ ಅತ್ತೆ–ಮಾವಂದಿರಾಗಿ, ಶಿವಭಕ್ತರೆ ಬಾಂದವರಾಗಿ
ಸತ್ಯಸದಾಚಾರವೆಂಬ ಮನೆಗೆ ಕಳುಹಿದರಾಗಿ
ಶರಣಸತಿ ಎಂಬ ನಾಮ ನಿಜವಾಯಿತ್ತು
ಅದರಂತೆ ಇರುವೆ ಹಿಂದು ಮುಂದುವರೆಯದೆ ನಡೆವೆ,
ಮನಕ್ಕೆ ಮನ ಸಾಕ್ಷಿಯಾಗಿ ಮಾಡುವೆ,
ಬಸವಣ್ಣಪ್ರಿಯ ಚೆನ್ನಸಂಗಯ್ಯ ನಿಮ್ಮಡಿಗಳಿಗೆ!

ಗುರುಲಿಂಗ, ಜಂಗಮ, ಭಕ್ತ, ಸದಾಚಾರಗಳನ್ನು ಸಾಂಕೇತಿಸಿಕೊಂಡು ಸಾಕ್ಷಾತ್ ಶರಣ ಸತಿ, ಲಿಂಗಪತಿ ಆದ ಅಕ್ಕ ನಾಗಮ್ಮ ದಿಟ್ಟೆ, ಧೀರೆ, ತನ್ನ ಆಚರಣೆ ಅನುಷ್ಠಾನಗಳಲ್ಲಿ ತುಂಬು ವಿಶ್ವಾಸವುಳ್ಳವಳು. ಆದರೆ ಅನ್ನ ಲಿಂಗದೊಳಗಾದನೆಂಬ ಸುದ್ದಿ ತಿಳಿಯುತ್ತಲೆ ಕ್ಷಣಕಾಲ ಅಧೀರೆಯಾಗಿ–

ಅಯ್ಯಾ, ನಾನಧವೆ,
ಅಯ್ಯಯ್ಯಾ ಕೈಯ ಕೋಲ ಕೊಂಬರೆ ?
ಅಯ್ಯಾ, ಎಳೆಗರುವಿನ ಎಳೆಗಂತಿಯಳೆದೊಯ್ದರೆ ಭಕ್ತರು?
ಅಯ್ಯೋ ಅಯ್ಯೋ ಎನಲೊಯ್ವರೆ, ಬಸವಣ್ಣ ಪ್ರಿಯ
ಚೆನ್ನಸಂಗಯ್ಯ ?

ಎಂದು ಹಲಬುತ್ತಾಳೆ. ತಾನು ವಿಧವೆ ತನಗಾರು ಗತಿ ಇಲ್ಲ. ಕುರುಡನ ಕೈಕೋಲನ್ನು ಕಿತ್ತುಕೊಂಡಂತಾಯಿತು. ಅಣ್ಣ ದೂರ ನಾದದ್ದು ಎಂದು ನೆನೆನೆನೆದು ದುಃಖಿಸುತ್ತಾಳೆ. ಇಂತಹ ಭಾವ ಭರಿತ ಶೋಕಗೀತ (Elegy) ಗಳನ್ನಿತ್ತ ಅಕ್ಕ ಭಕ್ತಿ ಭಾಂಡಾರಿ ಬಸವಣ್ಣನಂತಹ ತಮ್ಮನನ್ನು, ಮಹಾಜ್ಞಾನಿ ಚೆನ್ನಬಸವಣ್ಣನಂತಹ ಮಗನನ್ನು ಲೋಕಕ್ಕೆ ಕೊಟ್ಟ ಪುಣ್ಯವನಿತೆ. ಬಸವಣ್ಣನ ಪುಣ್ಯಾಂಗನೆ ಗಂಗಾಂಬಿಕೆ. ಇವಳು ತುಂಬು ಗಂಭೀರೆ. ನೀಲಮ್ಮನಂತೆ ಭಾವುಕಳಲ್ಲ. ಇವಳೆನ್ನುವ ವಚನಗಳು ಎಂಟು ಮಾತ್ರ ಉಪಲಬ್ಧವಿವೆ. ಇವಳ ಒಂದು ವಚನದಿಂದ ಇವಳು ಅಪುತ್ರವತಿ, ನೀಲಮ್ಮ ಪುತ್ರವತಿಯಾದರೂ ಪ್ರಯೋಜನವಿಲ್ಲ. ಕಾರಣ ಅವಳ ಕಂದಮ್ಮ 'ಬಾಲಸಂಗ' ಮಗುವಿದ್ದಾಗಲೇ ಮಡಿದ ಎಂಬ ಐತಿಹಾಸಿಕ ಅಂಶಗಳು ದೊರೆಯುತ್ತವೆ. ಆ ವಚನ ಹೀಗಿದೆ:

ಅವಳ ಕಂದ ಬಾಲಸಂಗ, ನಿನ್ನ ಕಂದ ಚೆನ್ನಲಿಂಗ
ಎಂದು ಹೇಳಿದರಮ್ಮ ಎನ್ನ ಒಡೆಯರು
ಫಲವಿಲ್ಲದ ಕಂದನಿರ್ಪನವಳಿಗೆ
ಎನಗೆ ಫಲವಿಲ್ಲ, ಕಂದನಿಲ್ಲ
ಇದೇನೊ ದುಃಖ ದಂದುಗ
ಗಂಗಾಪ್ರಿಯ ಕೂಡಲ ಸಂಗಮದೇವಾ?

ಈ ರೀತಿ ನಾಟಕೀಯವಾಗಿ ಅಭಿವ್ಯಕ್ತಿಗೊಳ್ಳುವ ಈ ಕಿರುವಚನದಲ್ಲಿ ಅಪುತ್ರವತಿಯೆಂಬ ನೋವಿಗಿಂತ, ಬದುಕನ್ನು ಬಂದಂತೆ ಸ್ವೀಕರಿಸುವ ಸಮಾಧಾನತ್ವ ಅಡಗಿದೆ.

**೪. ಸತ್ಯಕ್ಕ**

ಶಿವಶರಣೆ, ವಚನಕಾರ್ತಿ ಸತ್ಯಕ್ಕ ಹುಟ್ಟಿದ್ದು ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪದ ಸಮೀಪದ ಹಿರೇ ಜಂಬೂರು ಗ್ರಾಮದಲ್ಲಿ. ಇದರ ಸನಿಹದಲ್ಲೇ ಅಕ್ಕನ ಉಡುತಡಿ ಮತ್ತು ಪ್ರಭುದೇವರ ಬಳ್ಳಿಗಾವೆಗಳಿವೆ. ಇಂತಹ ಶರಣಬೀಡಿನಲ್ಲಿ ಜನ್ಮ ತೆದ ಈಕೆಯದು ಅವರಂತೆಯೇ ಅವತಂತ್ರ ಧೀರ ಮನೋವೃತ್ತಿ. ಅದರಿಂದಾಗಿ ಹೀಗೆ ಹೇಳುತ್ತಾಳೆ.

ಲಂಚ ವಂಚನಕ್ಕೆ ಕೈಯಾನದ ಭಾಷೆ
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದಡೆ,
ಕೈಮುಷ್ಟಿ ಎತ್ತಿದೆನಾದಡೆ ಅಯ್ಯಾ, ನಿಮ್ಮಾಣೆ
ನೀವಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯಾ
ಶಂಭುಜಕ್ಕೇಶ್ವರದೇವಯ್ಯಾ ನಿಮ್ಮಾಣೆ.

ಇಂತಹ ನಿಲುವುಳ್ಳ ಈಕೆ ತನ್ನ ಭಾವ ಭಾಷೆಗಳಿಂದಾಗಿ ಓದುಗರಿಗೆ ಬಹುಬೇಗ ಆತ್ಮೀಯಳಾಗಿಬಿಡುತ್ತಾಳೆ. ವಿಪ್ರಲಂಬ ಶೃಂಗಾರದ ಈ ವಚನ ನೋಡಿ.

ಇನಿಯಂಗೆ ತವಕವಿಲ್ಲ. ಎನಗೆ ಸೈರಣೆಯಿಲ್ಲ
ಮನದಿಚ್ಛೆಯನರಿವ ಸಖಿಯರಿಲ್ಲ ಇನ್ನೇವೆನವ್ವಾ?
ಮನುಮಥವೈರಿಯ ಅನುಭಾವದಲ್ಲಿ ಎನ್ನ ಮನ ಸಿಲುಕಿ ಬಿಡದು.
ಇನ್ನೇನ ಮಾಡುವೆನೆಲೆ ಕರುಣವಿಲ್ಲದ ತಾಯೆ ?
ದಿನ ವೃಥಾ ಹೋಯಿತ್ತಾಗಿ ಯೌವನ ಬೇಸರವಾಗದ ಮುನ್ನ
ಪಿನಾಕಿಯ ನೆರಹವ್ವಾ ಶಂಭು ಜಕ್ಕೇಶ್ವರನ!

ಇಂತಹ ಶೃಂಗಾರ ಪ್ರತಿಮೆಯ ಮೂಲಕ ಅನುಭಾವವನ್ನು ಬೆಸೆಯುವ ಸಿದ್ದಿ ಸತ್ಯಕ್ಕನ ಸಿದ್ಧ ಹಸ್ತಕ್ಕೆ ತಿಳಿದಿದೆ. 'ಮೊಲೆ ಮೂಡಿ ಬಂದರೆ ಹೆಣ್ಣೆಂಬರು. . .' ಎಂದು ಆರಂಭವಾಗುವ ಜೇಡರ ದಾಸಿಮಾರ್ಯನ ವಚನವನ್ನು ಬೇರೊಂದು ದೃಷ್ಟಿಕೋನದಲ್ಲಿ ನೋಡಿದ ಸತ್ಯಕ್ಕ–

ಮೊಲೆ ಮೂಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ.
ಕಾಸೆ ಮೀಸೆ ಕಠಾರವಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ
ಅದು ಜನದ ಹಾಹೆ: ಬಲ್ಲವರ ನೀತಿಯಲ್ಲ
ಏತರ ಹೆಣ್ಣಾದರೂ ಮಧುರವೆ ಕಾರಣ
ಅಂದವಿಲ್ಲದ ಕುಸುಮಕ್ಕೆ ವಾಶನೆಯೆ ಕಾರಣ
ಇದರಂದವ ನೀನೆ ಬಲ್ಲೆ ಶಂಭು ಜಕ್ಕೇಶ್ವರಾ.

ಹೀಗೆ ನುಡಿದಿದ್ದಾಳೆ. ದೇಹ ರಚನೆಯನ್ನು ಮೂಲಾಧಾರವಾಗಿಟ್ಟುಕೊಂಡು ಗಂಡು ಹೆಣ್ಣು ನಿಜ. ಆದರೆ ಅದೇ ಆಧಾರದ ಮೇಲೆ ಭೇದ ಭಾವ ಸಲ್ಲ. ಜ್ಞಾನ ಗಂಡಸಿನ ಗುತ್ತಿಗೆ ಅಲ್ಲ. ಬುಧ್ಧಿವಂತಳಿಗೂ ಅದರ ಮೇಲೆ ಅಧಿಕಾರ ಇದೆ. ಹಣ್ಣು ಮಾವು ಹಲಸು ಯಾವುದೇ ಇರಬಹುದು! ಅದರ ಸವಿ ಮುಖ್ಯ. ಆದ್ದರಿಂದ ಜ್ಞಾನಕ್ಕೆ ಲಿಂಗ ವಿಲ್ಲ, ಅನುಭಾವಕ್ಕೆ ಜಾತಿ ಇಲ್ಲ ಎಂದು ಸ್ಪಷ್ಟೀಕರಿಸುತ್ತಾಳೆ ಸತ್ಯಕ್ಕ ಗಣಾಚಾರ ಶರಣೆ! ಈ ಮಹಾಜ್ಞಾನಿಯ ವಚಗಳು ಇಪ್ಪತ್ತೆಂಟು ಮಾತ್ರ ಲಬ್ದವಾಗಿವೆ. ಆದರೆ ಅಂಕಿತದ ಬಗೆಗೆ ನಮ್ಮ ಸಂದೇಹ ಇದ್ದೇ ಇದೆ. ಜಂಬೂರಲ್ಲಿ ಜಂಬುಕೇಶ್ವರ ದೇಗುಲವಿದೆ. ಇದೇ ಅವಳ ವಚನಗಳ ಅಂಕಿತವಾಗಿದ್ದಿರಬ ಹುದು. ಶಂಬುಜಕ್ಕೇಶ್ವರಕ್ಕೆ ಬದಲು ಜಂಬುಕೇಶ್ವ ಇದ್ದಿರಬಹುದು. ಇದು ಒಂದು ಊಹೆ ಮಾತ್ರ. ಆದರೆ ಊಹೆ ಕುರುಡಲ್ಲ ಎಂಬ ಇಂಗಿತವನ್ನು ಮುಂದುವರಿಸುವೆ.

**ವಚನಕಾರ್ತಿಯರು– ೨:**

**(೫) ಬೊಂತಾದೇವಿ:**

ಈಕೆ ಕಾಶ್ಮೀರದವಳು. ಇವಳ ಮೊದಲ ಹೆಸರು ನಿಜದೇವಿ. ಕಾಶ್ಮೀರ ದೇಶದ ಮಾಂಡವ್ಯಪುರದರಸು ಮಹಾದೇವ ಭೂಪಾಲನ (ಮೋಳಿಗೆ ಮಾರಯ್ಯನ) ಚಿಕ್ಕ ತಂಗಿ. ಬಸವಣ್ಣನ ವ್ಯಕ್ತಿತ್ವದಿಂದ ಆಕರ್ಷಿತಳಾಗಿ ಅಣ್ಣ ಮೋಳಿಗೆ ಮಾರಯ್ಯ ಮತ್ತು ಅತ್ತಿಗೆ ಮಹಾದೇವಿಯರಂತೆ ಕಲ್ಯಾಣಕ್ಕೆ ಬಂದು ಅನುಭವ ಮಂಟಪದ ಸದಸ್ಯೆಯಾದವಳು. ಇದಿಷ್ಟಕ್ಕೂ ಇತಿಹಾಸದ ಆಧಾರವಿಲ್ಲ. ಬರಿಯ ಐತಿಹ್ಯ ಅಷ್ಟೆ.

ನಿಜದೇವಿ ಬೊಂತಾದೇವಿಯಾಗುವುದಕ್ಕೆ ಒಂದು ದಂತಕಥೆ ಇದೆ: ಒಮ್ಮೆ ಬಳಿಯಲ್ಲಿ ನಡುಗುತ್ತಿದ್ದ ಓರ್ವ ವೃದ್ಧೆಗೆ ನಿಜದೇವಿ ತನ್ನ ಮೈಮೇಲಿನ ಸೀರೆಯನ್ನು ಬಿಚ್ಚಿಕೊಟ್ಟು ತಾನು ಬತ್ತಲೆ ನಿಂತಳಂತೆ. ಅದನ್ನು ಕಂಡ ಯಾರೋ ಒಂದು ಕವುದಿಯನ್ನು ಕೊಟ್ಟರಂತೆ. ಅದನ್ನೇ ಹೊದೆದು ನಿಜದೇವಿ ಕಲ್ಯಾಣಕ್ಕೆ ಬಂದಳಂತೆ ಕವುದಿ ಹೊದೆದಿದ್ದ ಅವಳನ್ನು 'ಬೊಂತಾದೇವಿ' ಎಂದು ಕರೆದರಂತೆ. ಕಥೆ ಏನೇ ಹೇಳಲಿ, ಬೊಂತಾದೇವಿ ಓರ್ವ ಗಣನೀಯ ವಚನಕಾರ್ತಿ. ಸಿಕ್ಕಿರುವ ಇವಳ ವಚನಗಳು ಐದು ಮಾತ್ರ. ಅಂಕಿತ ಬಿಡಾಡಿ. ಅಂದರೆ ಸರ್ವತಂತ್ರ ಸ್ವತಂತ್ರ ಮನೋವೃತಿಯ ವ್ಯಕ್ತಿ ಎಂದೊ ಒಂದೆಡೆ ಹೇಳುತ್ತಾಳೆ.

ಊರ ಒಳಗಣ ಬಯಲು. ಊರ ಹೊರಗಣ ಬಯಲೆಂದುಂಟೆ?
ಊರೊಳಗೆ ಬ್ರಾಹ್ಮಣ–ಬಯಲು, ಊರ ಹೊರಗೆ ಹೊಲೆ–ಬಯಲೆಂದುಂಟೆ!
ಎಲ್ಲಿ ನೋಡಿದಡೆ ಬಯಲೊಂದೆ,
ಭಿತ್ತಿಯಿಂದ ಒಳ ಹೊರಗೆಂಬ ನಾಮವೈಸೆ!

ಎಲ್ಲಿ ನೋಡಿದಡೆ ಕರೆದಡೆ ಓ ಎಂಬಾತನೆ ಬಿಡಾಡಿ! ಆತ್ಮಜ್ಞಾನಕ್ಕೆ ಹೊಲೆಯ, ಹಾರುವ ಎಂಬ ಬೇಧ ಗೊತ್ತಿಲ್ಲ

ಎಂಂಶವನ್ನು ತುಂಬಾ ಸ್ಪಷ್ಟಪಡಿಸಿದ್ದಾಳೆ ಬೊಂತಾದೇವಿ. ಅಂತೆಯೇ ದೇವರು ಬಹು ದೂರನಲ್ಲ; ಭಕ್ತಿಗೆ ತೀರಾ ಸಮೀಪದವನು ಎಂಬುದನ್ನು ಸರಳವಾಗಿ, ಆದರೆ ಪರಿಣಾಮಕಾರಿಯಾಗಿ ನಿರೂಪಿಸಿದ್ದಾಳೆ.

**೬. ಗೊಗ್ಗವ್ವೆ:**

ಗೊಗ್ಗವ್ವೆ ನಿಜಕ್ಕೂ ಪ್ರಜ್ಞಾವಂತ ವಚನಕಾರ್ತಿ 'ನಾಸ್ತಿನಾಥಾ' ಎಂಬ ಇವಳ ವಚನಾಂಕಿತ ಇವಳ ಮನೋಧರ್ಮವನ್ನು ಸೂಚಿ ಸುತ್ತದೆ. ಸಿಕ್ಕಿರುವ ಆರೇ ಆರು ವಚನಗಳಲ್ಲಿ ತನ್ನ ದಿಟ್ಟತನ ಪ್ರಕಟಿಸಿದ್ದಾಳೆ. 'ಮೊಲೆ ಮೂಡಿ ಬಂದರೆ. . .' ಎಂಬ ಜೇಡರ ದಾಸಿಯ ವಚನವನ್ನೇ. . .'ಮೊಲೆ ಮೂಡಿ ಬಂದಡೆ ಹೆಣ್ಣೆಂಬರು. ಮೀಸೆ ಕಾಸೆ ಬಂದಡೆ ಗಂಡೆಂಬರು. ಈ ಉಭಯದ ಜ್ಞಾನ ಹೆಣ್ಣೋ ಗಂಡೋ ನಾಸ್ತಿನಾಥಾ/ – ಎಂದು ಪ್ರಶ್ನಿಸುತ್ತಾಳೆ. ಜೇಡರ ದಾಸಿ 'ಆತ್ಮ'ನಿಗೆ ಹೆಣ್ಣುತನ ಗಂಡುತನ ಇಲ್ಲ ಎಂದರೆ, ಸತ್ಯಕ್ಕೆ ಅನುಭಾವಕ್ಕೆ ಅಬೇಧ ತಿಳಿದಿಲ್ಲ ಎಂದರೆ ಗೊಗ್ಗವ್ವೆ 'ಜ್ಞಾನ'ವೂ ಅಂಥ ಅನ್ಯಾಶ್ರಯ ನಿರಪೇಕ್ಷಿ ಎಂಬುದನ್ನು ತಿಳಿಸುತ್ತಾಳೆ.

**೭–೮–೯. ರೆಮ್ಮವ್ವೆ, ಕದಿರ (ರಾಟಿ) ಮತ್ತು ಕದಿರ ಕಾಯಕದ ಕಾಳವ್ವೆ: ಈ ಮೂರು ಹೆಸರುಗಳು ತುಸು ವಿಚಾರಣೀಯ.** ಮೊದಲ ರೆಮ್ಮವ್ವೆ ದಾನಚಿಂತಾಮಣಿ; ಯಾದಗಿರಿ ತಾಲ್ಲೂಕಿನ ಏಲೇರಿಯವಳು. ಇವಳ ಇಪ್ಪತ್ತುಮೂರು ವಚನಗಳು ಶಿವಾನು ಭವ ಗ್ರಂಥಮಾಲೆಯಿಂದ ಪ್ರಕಟವಾಗಿವೆ ಎಂದು ಫ.ಗು. ಹಳಕಟ್ಟಿಯವರು ತಿಳಿಸುತ್ತಾರೆ. ಆದರೆ ಗ್ರಂಥ ಉಪಲಬ್ದವಿಲ್ಲ. ಇವಳ ವಚನಾಂಕಿತ 'ಏಲೇಶ್ವರ ಲಿಂಗ'.

ಎರಡನೆಯ ರಾಟಿ ರೆಮ್ಮವ್ವೆ ಕೇವಲ ನಾಲ್ಕು ವಚನಗಳ ಒಡತಿ. ಇವಳ ವಚನಾಂಕಿತ 'ಕದಿರರೆಮ್ಮಿಯೊಡೆಯ ಗುಮ್ಮೇಶ್ವರ ಇದೇ ಅಂಕಿತವಿಟ್ಟುಕೊಂಡು ಕದಿರ ಕಾಯಕದ ಕಾಳವ್ವೆ 'ಕದಿರು ಮುರಿಯೆ ಏನೂ ಇಲ್ಲ. ವ್ರತಹೀನನ ನೆರೆಯಲಿಲ್ಲ ಗುಮ್ಮೇಶ್ವರಾ' ಎಂಬ ಎರಡೇ ಎರಡು ಸಾಲಿನ ಒಂದು ವಚನದ ಒಡತಿ. ಬಹುಶಃ ಇವಳು 'ಗುಮ್ಮೇಶ್ವರಾ' ಎಂಬ ಅಂಕಿತವಿಟ್ಟುಕೊಂಡಿರುವುದ ರಿಂದ ರಾಟಿ ರೆಮ್ಮವ್ವೆಯಿಂದ ಪ್ರಭಾತಳಾಗಿರಬಹುದು. ಅಂತೆಯೇ ರಾಟಿ ರೆಮ್ಮವ್ವೆ ಅಂಜದೆ ಅಳುಕದೆ ನಿರ್ಬಿಡೆಯಿಂದ ಹೇಳುವ ಆಧ್ಯಾತ್ಮ ಪರವಾದ ಸ್ತ್ರೀ–ಪುರುಷ ಸಂಭೋಗ ಸಂಕೇತದ ಈ ವಚನ ನೋಡಿ:

ಎಲ್ಲರ ಹೆಂಡಿರು ತೊಳಸಿಕ್ಕುವರು
ಎನ್ನ ಗಂಡಂಗೆ ತೊಳಸುವುದಿಲ್ಲ.
ಎಲ್ಲರ ಗಂಡಂದಿರಿಗೆ ಬಸಿವರು;
ಎನ್ನ ಗಂಡಂಗೆ ಬಸಿವುದಿಲ್ಲ
ಎಲ್ಲರ ಗಂಡಂದಿರಿಗೆ ಬೀಜವುಂಟು;
ಎನ್ನ ಗಂಡಂಗೆ ಅಂಡದ ಬೀಜವಿಲ್ಲ.
ಎಲ್ಲರ ಗಂಡಂದಿರು ಮೇಲೆ;
ಎನ್ನ ಗಂಡ ಕೆಳಗೆ, ನಾಮೇಲೆ.
ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ!

ಇಂತಹ ನಿರ್ಭೀತ ಅಭಿವ್ಯಕ್ತಿ ಇಂದಿನ ನವ್ಯ ಕವಿಗಳಿಗೂ ಅಸಾಧ್ಯವಾಗಿ ತೋರಬಹುದು. ಆದರೆ ಈ ಲೈಂಗಿಕ ಪ್ರತಿಮೆಯ ಹಿನ್ನಲೆಯಲ್ಲಿ ಆಧ್ಯಾತ್ಮದ ಲಿಂಗಾಂಗ ಸಾಮರಸ್ಯದ ಸೆಲೆ ಅಡಗಿದೆ ಎಂಬುದನ್ನು ಮರೆಯಬಾರದು. ಅದನ್ನು ತೋರಿ ಕೊಟ್ಟವನು ಅನೇಕ ಬೆಡಗಿನ ವಚನಗಳಿಗೆ ಟೀಕು ಬರೆದ ಸಿಂಗಳದ ಸಿದ್ದ ಬಸವರಾಜ. ಆತ ಹೀಗೆ ವ್ಯಾಖ್ಯಾನಿಸಿದ್ದಾನೆ ಮೇಲಿನ ರೆಮ್ಮವ್ವೆಯ ವಚನವನ್ನು.

"ಸಾಕಾರಾವಾದ ಲಿಂಗಕ್ಕೆ ಸತಿಯನ್ನಿಸಿಕೊಂಬ ದ್ವೈತಿಗಳು ಭಿನ್ನ ಕ್ರೀಗಳ ಮಾಡಿ ಫಲ ಪದಂಗಳ ಪಡೆದು ಭೋಗಿಸಿ, ಭವಹೇತುವಾಗಿ ಜನನಕ್ಕೆ ಬಂದು ಭಿನ್ನವಿಟ್ಟು ಪದಾರ್ಥಂಗಳ ಲಿಂಗಕ್ಕರ್ಪಿಸಿ ಭೋಗಿಸುತ್ತಿಹರು. ಮಹಾಘನ ಲಿಂಗವ ಸರ್ವಾಂಗದಲ್ಲಿ ಸಂಬಂಧವ ಮಾಡಿಕೊಂಡಿರ್ಪ ಶರಣ ಸತಿಯು ಸಕಲ ಪದಾರ್ಥಗಳ ಅಭಿನ್ನ ಭಾವದಿಂ ಲಿಂಗಕ್ಕರ್ಪಿಸಿ ಲಿಂಗ ಭೋಗೋಪಭೋಗಿಯಾಗಿಹಳಲ್ಲದೆ ಭೇದ ಭಾವದಿಂ ಜನನಕ್ಕೆ ಬರಲಿಲ್ಲವೆಂಬುದೀಗ ಎಲ್ಲರ ಹೆಂಡತಿಯರು ತೊಳಸಿಕ್ಕುವರು, ಎನ್ನ ಗಂಡಂಗೆ ತೊಳಸುವುದಿಲ್ಲವೆಂಬ ಶಬ್ದಕ್ಕರ್ಥ. ಮಹಾಶಕ್ತಿಯ ವಲ್ಲಭರಾದ ಭಿನ್ನ ಜ್ಞಾನಿಗಳೆಲ್ಲರು

ದೇಹೇಂದ್ರಿಯ ವಿಷಯ ರಸಂಗಳ ನಿವೃತ್ತಿಯ ಮಾಡಬೇಕೆನ್ನುತ್ತಿಹರು ಸರ್ವಾಂಗಲಿಂಗ ಸಂಬಂಧಿಯಾಗಿರ್ಪ ಶರಣ ಸಮಿತಿಯ ದೇಹೇಂದ್ರಿಯ ವಿಷಯ ರಸಂಗಳ ನಿವೃತ್ತಿ ಮಡಿ ಕಳೆಯಲಿಲ್ಲವೆಂಬುದೀಗ, ಎಲ್ಲರ ಗಂಡಂದಿರು ಬಸಿವರು ಎನ್ನ ಗಂಡಂಗೆ ಬಸಿವುದಿಲ್ಲವೆಂಬ ಶಬ್ದಕರ್ಥ, ಮಹಾಶಕ್ತಿಯ ವಲ್ಲಭರಾದ ದ್ವೈತಿಗಳೆಲ್ಲಕ್ಕೂ ತಾನೆಂಬ ಅಹಂಕಾರವು ಉಂಟಾಗಿರುತ್ತಿಹುದು ಶರಣ ಸತಿಗೆ ಚೈತನ್ಯ ಸ್ವರೂಪವಾದ – ಮಹಾಘನಲಿಂಗವೆಂಬ ಪತಿಗೆ ಜನನಕ್ಕೆ ಕಾರಣವಾದ ಅಹಂಕಾರ ನಾಸತಿಯಾಯಿತ್ತೆಂಬುದೀಗ, ಎಲ್ಲರ ಗಂಡಂದಿರಿಗೆ ಬೀಜವುಂಟು– ಎನ್ನ ಗಂಡಂಗೆ ಅಂಡ ಬೀಜವಿಲ್ಲವೆಂಬ ಶಬ್ದಕ್ಕರ್ಥ. ಮಾಯಾಶಕ್ತಿಯ ವಲ್ಲಭರಾದ ಖಂಡಿತ ಜ್ಞಾನಿಗಳೆಲ್ಲರು ಲಿಂಗಕ್ಕೆ ಸರ್ವ ಕ್ರಿಯೊಪಚಾರಂಗಳ ಮಾಡಿ ಫಲಭೋಗ ಪ್ರಾಪ್ತಿಯನೆಯ್ದಿ ಸ್ವರ್ಗದಲಿ ತೇಜಿಷ್ಠರಾಗಿಹರು. ಶರಣ ಸತಿಗೆ ವಲ್ಲಭನಾಗಿರ್ಪ ಮಹಾಘನಲಿಂಗವು ಚತುರ್ವಿದ ಪಲಂಗಳ ಮುಟ್ಟದೆ ಶರಣನ ಸರ್ವಾಂಗದಲ್ಲಿ ಸಂಬಂಧವಾಗುತ್ತಿರಲು ಆ ಲಿಂಗಕ್ಕೆ ಶರಣನೆ ಅಧಿಷ್ಠಾಯಕನಾಗಿ ಸಮರಸಭಾವದಿಂದ ಇರುತ್ತಿಹನೆಂಬುದೀಗ, ಎಲ್ಲರ ಗಂಡಂದಿರು ಮೇಲೆ, ಎನ್ನ ಗಂಡ ಕೆಳಗೆ ನಾ ಮೇಲೆ ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ ಎಂಬ ಶಬ್ದಕ್ಕರ್ಥ." ಈ ಬಗೆಯ ಅಲೌಕಿಕಾನುಭವವನ್ನು ಲೋಕಾನುಭವದ ಮೂಲಕ ಅಭಿವ್ಯಕ್ತಿಸುವ ಸಾಮರ್ಥ್ಯ ರೆಮ್ಮವ್ವೆಯದು.

೧೦) ಮುಂದೆ ಕೆಲವರು ಪುಣ್ಯಸ್ತ್ರೀ ವಚನಕಾರ್ತಿಯರು ಸಿಗುತ್ತಾರೆ. ಇವರು ತಮ್ಮ ಗಂಡಂದಿರ ಹಾದಿಯಲ್ಲೇ ನಡೆದು 'ಶಿವ'ಪದವಿಗೇರಿದವರು. 'ಶಿವ' ಆದವರು. ಇವರಲ್ಲಿ ಗನೇಶ ಮಸಣಯ್ಯಗಳ ಪುಣ್ಯಸ್ತ್ರೀ ಒಬ್ಬಳು. ಇವಳ ಹೆಸರು ಗೊತ್ತಿಲ್ಲ. ಆದರೆ ಮಸಣಯ್ಯಪ್ರಿಯ ನಂಜೇಶ್ವರಾ ಎಂಬ ಅಂಕಿತದ ಒಂಬತ್ತು ವಚನಗಳು ಸಿಗುತ್ತವೆ. ಇವಳು ತುಂಬು ಅನುಭಾವಿ; ಅಷ್ಟೇ ಪ್ರಮಾಣದ ಶಿವಜ್ಞಾನಿ. ಒಂದು ವಚನದಲ್ಲಿ ಹೀಗೆ ಹೇಳಿದ್ದಾಳೆ:

ಅಂಗದ ಮೇಲಣ ಲಿಂಗವು ಲಿಂಗವಲ್ಲ,
ಮನದ ಮೇಲಣ ಲಿಂಗವು ಲಿಂಗವಲ್ಲ,
ಭಾವದ ಮೇಲಣ ಲಿಂಗವು ಲಿಂಗವಲ್ಲ
ಅಂಗದ ಮೇಲಣ ಲಿಂಗ ವ್ಯವಹಾರ
ಮನದ ಮೇಲಣ ಲಿಂಗ ಸಂಕಲ್ಪ,
ಭಾವದ ಮೇಲಣ ಲಿಂಗ ಭ್ರಾಂತುತ್ವ,
ಆಳಿನ ಆಳು ಅರಸಪ್ಪನೆ ಆಳನಾಳವನರಸಲ್ಲದೆ?
ಅಂಗ ಪ್ರಾಣ ಭಾವಂಗಳನೊಳಕೊಂಡಿರ್ಪುದೆ ಲಿಂಗ ಕಾಣಾ,
ಮಸಣಯ್ಯ ಪ್ರಿಯ ಗಜೇಶ್ವರಾ

ಈ ವಚನಕಾರ್ತಿಯ ಲಿಂಗದ ಬಗೆಗಿನ ಭೂಮ ಕಲ್ಪನೆ ಅಪೂರ್ವ ಅಮೋಘ, ಅಂಗ, ಮನ, ಭಾವದ ಮೇಲಲ್ಲ ಲಿಂಗವಿರುವುದು. ಅವೆಲ್ಲವನ್ನೂ ತನ್ನಲ್ಲಿ ಗರ್ಭೀಕರಿಸಿಕೊಂಡು ಮೆರೆವುದು ಲಿಂಗ. ಇ ಅನುಭಾವವನ್ನು 'ಆಳಿನ ಆಳು ಅರಸನಪ್ಪನೆ, ಆಳನಾಳುವವ ಅರಸನಲ್ಲದೆ?' ಎಂಬ ಲೌಕಿಕ ದೃಷ್ಟಾಂತವಿತ್ತು ಆದ್ಯಾತ್ಮ ತತ್ವವನ್ನು ಪುಷ್ಟೀಕರಿಸಿ ದ್ದಾಳೆ.

**೧೧. ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ :** ಖಂಡಿತವಾದಿ ಉರಿಲಿಂಗಪೆದ್ದಿಯ ಪುಣ್ಯಾಂಗನೆ ಕಾಳವ್ವೆ. ನಿಜಭಕ್ತನ ನಿಲವನ್ನು ನಿರ್ದೇಶಿಸುತ್ತಾ ಡಾಂಭಿಕ ಭಕ್ತನನ್ನು ಶಪಿಸುತ್ತಾಳೆ. ಕೇಳಿ–
ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೆ?
ಹುಸಿದು ತಂದು ಮಾಡುವಾತ ಭಕ್ತನೆ?
ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ?
ನಿಂದಯಾ ಶಿವಭಕ್ತಾ ನಾಂ ಕೋಟಿ ಜನ್ಮನಿ ಸೂಕರಃ ।
ಸಪ್ತ ಜನ್ಮನಿ ಕುಷ್ಠೀಸನ್ ದಾಸೀ ಗರ್ಭೇಷು ಜಾಯತೇ ॥
ಎಂದುದಾಗಿ,
ತನ್ನ ಪ್ರಾಣದ ಮೇಲೆ ಬಂದರೂ ಬರಲಿ. ಇವರ ಬಿಡಬೇಕು.
ಬಿಡದಿರಲು ಉರಿಲಿಂಗಪೆದ್ದಿಗಳರಸನೊಲ್ಲನವ್ವಾ

ತೂಬರೆ ಕಡ್ಡಿ ಕೊಳ್ಳಿ ಆಗುವುದಿಲ್ಲ. ಆದರೂ ಅದು ಉರಿ ಆರಿಸುವವರೆಗೂ ಚಟ ಚಟ ಸಿಡಿಯುತ್ತಲೇ ಇರುತ್ತದೆ. ಅದರ ಜೊತೆ ಯಲ್ಲಿ ಉರಿಯುವ ಬೇರೆ ಕಟ್ಟಿಗೆ ಇಟ್ಟಿದ್ದರೂ ಅದನ್ನು ಉರಿಯಗೊಡುವುದಿಲ್ಲ. ಹಾಗೆ ಸದಾ ಚಡಬಡಿಸುತ್ತಾ, ತಾನೂ ಬದುಕದ ಅನ್ಯರಿಗೂ ಬದುಕು ಕೊಡದ ಪೀಡೆ ಭಕ್ತನಾಗಲು ಸಾಧ್ಯವೆ! ಸುಳ್ಳು ಹೇಳಿ ಬದುಕುವವ, ಭಕ್ತರ ಉಲವನ್ನೆತ್ತಿ ಬಯ್ಯುವವ ಭಕ್ತ ನಾಗಲಾರ. ಅಂಥವನು ಕೋಟಿ ಜನ್ಮಗಳು ಹಂದಿಯಾಗಿ, ಏಳು ಜನ್ಮಗಳು ಕುಷ್ಠ ರೋಗಿಯಾಗಿ ದಾಸೀ ಹೊಟ್ಟೆಯಲ್ಲಿ ಹುಟ್ಟು ತ್ತಾನೆ– ಎಂದಿದ್ದಾಳೆ. ಇಲ್ಲಿ ತೂಬರೆಯ ಕೊರ್ಲಲಿಯ ಉಪಮೆ ಔಚಿತ್ಯಪೂರ್ಣ. 'ಉರಿಲಿಂಗ ಪೆದ್ದಿಗಳರಸ' ಎಂಬ ಅಂಕಿತದ ಇವಳ ಹದಿಮೂರು ವಚನಗಳು ಸಿಕ್ಕಿವೆ.

**೫. ಕಿರು ವಚನಕಾರ್ತಿಯರು– ೩**

ಇತರ ಪುಣ್ಯಸ್ತ್ರೀಯರು, ಸ್ವತಂತ್ರಕಾಯಕ ನಿಷ್ಠೆಯರು ಅನೇಕರು ಸಿಗುತ್ತಾರೆ. ಅವರ ವಚನಗಳು ಸಂಖ್ಯೆಯಲ್ಲೂ ಕಿರಿಯವು, ಸತ್ವದಲ್ಲೂ ಕಿರಿಯವು.

ಉದಾಹರಣೆಗೆ:

| **ವಚನಕಾರ್ತಿ** | **ಅಂಕಿತ** | **ವಸ್ತು** |
|---|---|---|
| ೧ ರೇವಣಸಿದ್ದಯ್ಯಗಳ ಪುಣ್ಯಸ್ತ್ರೀ ರೇಕಮ್ಮ | ಶ್ರೀ ಗುರುಸಿದ್ಧೇಶ್ವರ | ವ್ರತ |
| ೨.ಎಡಮತದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ | ನಿಜಗುಣೇಶ್ವರ | ವ್ರತ |
| ೩. [೪]ಹಾದರರದ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ | ಗಂಗೇಶ್ವರಲಿಂಗ | ವ್ರತ |
| ೪. ಕೊಂಡ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ | ಅಗಜೇಶ್ವರ ಲಿಂಗ | ವ್ರತ |
| ೫. ಕಾಟ ಕೂಟಯ್ಯ ಪುಣ್ಯಸ್ತ್ರೀ ರೇಚವ್ವೆ | ನಿಜಶಾಂತೇಶ್ವರಾ | ವ್ರತ |
| ೬. ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ | ಕುಂಭೇಶ್ವರಾ | ವ್ರತ |
| ೭. ಚಾಚಿ ಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ | ಕರ್ಮಹರ ಕಾಳೇಶ್ವರಾ | ವ್ರತ |
| ೮. ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ | ಗುರುಶಾಂತೇಶ್ವರಾ | ವ್ರತ |
| ೯. ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ | ನಿಂಬೇಶ್ವರಾ | ವ್ರತ |
| ೧೦. ಸಿದ್ಧ ಬದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ | ಭೀಮೇಶ್ವರಾ | ವ್ರತ |
| ೧೧. [೫] ಸೂಳೆ ಸಂಕವ್ವೆ | ನಿರ್ಲಜ್ಜೇಶ್ವರಾ[೫] | ವ್ರತ |

---

[೪] ಇದು ಹಾದರರದ ಕಾಯಕ ಇದ್ದಿರಲಾರದು. ಹಾದರವೂ ಒಂದು ಕಾಯಕದ ಅರ್ಥ ತುಂಬುವುದಾದರೆ ಕಳ್ಳತನವೂ ಕಾಯಕವೇ ಆದೀತು. ಬಹುಶಃ ಇದು ಹರದ (ವ್ಯಾಪಾರಿ) ಕಾಯಕದ ಮಾರಯ್ಯ ಇದ್ದಿರಬೇಕು. ಅಥವಾ ಹಾದರರದ ಮಿಂಡ, ಅನ್ಯರಿಗೆ ಸೆರಗು ಹಾಸಿ ಬದಕು ನಡೆಸುತ್ತಿದ್ದ ಸೂಳೆ ಇವರೆಲ್ಲರೂ ತಮ್ಮ ತಮ್ಮ ಪೂರ್ವಾಶ್ರಮಗಳಲ್ಲಿ ಆಯಾ ವೃತ್ತಿಯಲ್ಲಿದ್ದಿರಬಹುದು. ಅಣ್ಣನ ಪ್ರಭಾವದಿಂದ ಶರಣ ಧರ್ಮವನ್ನು ಸ್ವೀಕರಿಸಿದ ಮೇಲೆ ಸಾತ್ವಿಕರೂ ಗರತಿಯರೂ ಆಗಿರಬೇಕು. ಆದರೂ ವ್ಯಕ್ತಿಯನ್ನು ಗುರುತಿಸುವ ಶಬ್ದ ಹಾಗೆಯೇ ಉಳಿದುಬಂದಿರಬೇಕು.
[೫] ನೋಡಿ ಇದೇ ಪಟ್ಟಿಯ ಮೂರನೆಯ ವಚನಕಾರ್ತಿಗೆ ಕೊಟ್ಟ ಅಡಿಟಿಪ್ಪಣಿ

| | | |
|---|---|---|
| ೧೨. ಕನ್ನಡಿ ಕಾಯಕದ ರೇವಮ್ಮ | ಸದ್ಗುರುಲಿಂಗ ನಿರಂಗಲಿಂಗ | ವ್ರತ |
| ೧೩. [೬]ಕೊಟ್ಟಣದ ಸೋಮಮ್ಮ | [೬]ನಿರ್ಲಜ್ಜೇಶ್ವರಾ | ವ್ರತ |
| ೧೪ ಕಾಲಕಣ್ಣಿಯ ಕಾಮಮ್ಮ | ನಿರ್ಭೀತ ನಿಜಲಿಂಗ | ವ್ರತ |
| ೧೫. ಅಕ್ಕಮ್ಮ | ಆಚಾರವೆ ಪ್ರಾಣವಾದ ರಾಮೇಶ್ವರಲಿಂಗ | ವ್ರತ |

೧೩. ಕಿರು ವಚನಕಾರ್ತಿಯರ ವಚನಗಳಲ್ಲಿ ಕಾವ್ಯ ಸೌಂದರ್ಯ 'ಕಾವ್ಯ ಯಾವಾಗಲೂ ಕವಿ ಚೇತನ ಮತ್ತು ಋಷಿಚೇತನಗಳ ಸಹಯೋಗದಿಂದ ಆದದ್ದು. ಕವಿ ಚೇತನ ಸೌಂದರ್ಯದ ಸೀಮೆಯಲ್ಲಿ ವಸಂತ ವಿಹಾರ ಕೈಕೊಂಡರೆ

ಋಷಿ ಚೇತನ ಸತ್ಯ ಶಾಶ್ವತ ನಿತ್ಯ ಪರಿಪೂರ್ಣವಾದ ಆಧ್ಯಾತ್ಮ ವಲಯದಲ್ಲಿ ವಿಹರಿಸಿ, ವಿಶ್ರಾಂತಿಪಡೆಯುತ್ತದೆ. ಆಧ್ಯಾತ್ಮ ಲೋಕದ ಆತ್ಮಾನಂದ ಅಥವಾ ಬ್ರಹ್ಮಾನಂದವು ಕಲಾಲೋಕದ ಕಾವ್ಯಾನಂದಕ್ಕಿಂತಲೂ ಮಿಗಿಲಾದದ್ದು, ಬಹು ಮೌಲ್ಯವುಳ್ಳದ್ದು. ಇದು ಶಬ್ದಾರ್ಥ ಸಂಜನಿತ. ಅದು ನಾದಬಿಂದು ಕಳಾತೀತ; ಇದು ಸಹೃದಯ ಹರದಯಾಹ್ಲಾದಕಾರಿಣಿ, ಅಪರೋಕ್ಷಜ್ಞಾನಿಗಳ ಆತ್ಮಾನಂದ ಬೋಧಿನಿ. ಕಾವ್ಯಾನಂದವನ್ನು 'ಸಕಲ ಪ್ರಯೋಜನ ಮೌಲಿಭೂತಾಮ್' ಎಂತಲೂ, 'ಬ್ರಹ್ಮಾನಂದ ಸಹೋದರ' ಎಂತಲೂ ಕರೆದರು. ನಿಜ, ಕಾವ್ಯಾನಂದ ಬ್ರಹ್ಮಾನಂದ ಸಹೋದರ; ನಿಜ. ಆದರೆ ಬ್ರಹ್ಮಾನಂದ ಅಲ್ಲ. ಬ್ರಹ್ಮಾನಂದವೇ ಬೇರೆ. ಅದು ಕಾವ್ಯಾನಂದದ ಹಿರಿಯ ಅಣ್ಣ. ಅದರ ಸ್ಥಾನ 'ಓಂಕಾರ ಶಂಖನಾದಕ್ಕಿಂತ ಕಿಂಚದೂಬ'ವಾದದ್ದು. ಅದರದು ಮೊದಲ ದರ್ಜೆ ತುರಿಯಸ್ತರ; ಮಹೋನ್ನತಿಯ ಮಜಲು. ಆ ಮಜಲನ್ನೇರಲು ಅನೇಕ ಧಮ್ಮಗಳು ಶ್ರಮಿಸಿವೆ. ಅವುಗಳಲ್ಲಿ ವೀರಶೈವವೂ ಒಂದು,' ಈ ರೀತಿಯ ಕಾವ್ಯಸೌಂದರ್ಯಕ್ಕೆ ಆತ್ಮ ಸೌಂದರ್ಯಗಳೆರಡನ್ನೂ ಮೆರೆದ ವಚನ ಸಾಹಿತ್ಯದ ವಿನೂತನ ಸೃಷ್ಟಿ. ಈ ದಿಸೆಯಲ್ಲಿ ಕಿರುವಚನಕಾರ್ತಿಯರೂ ತಮ್ಮ ಅಳಿಲು ಸೇವೆ ಸಲ್ಲಿಸಿದ್ದಾರೆ. ಇದುವರೆಗೂ ಅವರ ರಚನೆಗಲಲಿನ ಆತ್ಮ ಸೌಂದರ್ಯವನ್ನು ಗುರುತಿಸಿದ ನಾವು, ಅವುಗಳಲ್ಲಿ ಕಾಣಸಿಗುವ ಕಾವ್ಯ ಸೌಂದರ್ಯವನ್ನು ಹೆಕ್ಕಿ ನೋಡೋಣ.

ಭಾವ, ಭಾಷೆ, ಬಂಧ (ಛಂದಸು) ಈ ಮೂರೂ ಸೇರಿ ಆದದ್ದು ಕಾವ್ಯ. ಅದು ಅಲಮಕರ ಭೂಯಿಷ್ಠವಾದದ್ದು. ಅಲಂಕಾರ ಎಂದರೆ 'ಸೌಂದರ್ಯಮಲಂಕಾರಃ' ಆದ್ದರಿಂದ ಕಾವ್ಯದ ಕಾಂತಿಯನ್ನು ಹೆಚ್ಚಿಸುವ ಎಲ್ಲ ಧರ್ಮಗಳೂ ಅಥವಾ ಅಂಶಗಳೂ ಅಲಂಕಾರಗಳೇ. ಅವುಗಳಿಂದ ಕಾವ್ಯದ ಕಮನೀಯತೆ ಹೆಚ್ಚುತ್ತದೆ. ಅದಿಲ್ಲದಿದ್ದರೆ ಕಾವ್ಯ ಎನ್ನುವುದು ಬತ್ತಲೆ ನಿಂತ ಹೆಣ್ಣಿನಂತೆ ಅನಾಕರ್ಷಕ! ಕಿರು ವಚನಕಾರ್ತಿಯರ ವಚನೋದ್ಯಾನದಲ್ಲಿ ಅಂತಹ ಹಲವು ಸೌಂದರ್ಯದ ತಂಗುದಾಣಗಲಿವೆ. ಕವಿ ಮನ ದಲ್ಲಿ ಮಿಡಿದ ತೀವ್ರ ಭಾವಗಳು ಔಚಿತ್ಯಪೂರ್ಣವಾದ ಭಾಷೆಯ ಮೂಲಕ ಸಮರ್ಥ ರೀತಿಯಲ್ಲಿ ತಮ್ಮ ಅಭಿವ್ಯಕ್ತಿಯನ್ನು ಸಾಧಿಸಿಕೊಂಡಿವೆ. ಅವರ ಆಂತರ್ಯದ ಭಾವಕ್ಕೆ ಕಸುವುಳ್ಳ ಕನ್ನಡ ಭಾಷೆ ದಾಸನಾಗಿ ದುಡಿದಿದೆ. ಅದರ ಬನಿಯ ಹೆಪ್ಪು ಒಡೆಯದಂತೆ ವಚನಕಾರರು ಎಚ್ಚರವಹಿಸಿ ಶ್ರೇಷ್ಠ, ಸಮರ್ಥ ಹಾಗೂ ಪರಿಣಾಮಕಾರೀ ಸಂವಹನ ಕ್ರಿಯೆಯನ್ನು ನಡೆಸಿದ್ದಾರೆ. ವಚನ ರಚನೆಗಳ ಮೂಲಕ ಇಲ್ಲಿ ಭಾವಗಿತಗಳಿವೆ, ಭಕ್ತಿಗಿತಗಳಿವೆ.ಉಪಮಾ ರೂಪಕ ದೀಪಕ ದೃಷ್ಟಾಂತಾದಿ ಅಲಂಕಾರಗಳಿವೆ. ಧ್ವನಿ ಇದೆ, ದರ್ಶನ ಇದೆ. ರಸದ ಬುಗ್ಗೆಗಳೂ ಅಲ್ಲಲ್ಲಿ ಪುಟಿಯುತ್ತವೆ. ಆ ಕ್ಷೇತ್ರದ ಒಳಹೊಕ್ಕಾಗ ಏನೆಲ್ಲ ಕಾಣಿಸಿಕೊಂಡು ಓದುಗನನ್ನು ಚೇತೋಹಾರಿಯನ್ನಾಗಿಸುತ್ತವೆ. ವಚನಗಳು ಶುದ್ಧ ಗದ್ಯ ಪ್ರಕಾರಕ್ಕೆ ಸೇರುತ್ತವೆಯಾದರೂ ಅವುಗಳಲ್ಲಿನ ಓಘ, ಓಜಸ್ಸು ಭಾವಗೀತೆಗಳಿಗಿಂತ ಕಡಿಮೆಯೇನಿಲ್ಲ. ಭಾವಾಂಶ (The Emotional Element) ಚಿಂತನಾಂಶ (The Thought Element) ಕಲ್ಪನಾಂಶ (The Element of Imagination) ರೂಪಾಂಶ (The technical Element)– ಇವುಗಳ ವೈಭವ. ತಮ್ಮದಾದ ನಾದಾಂಶದ ವೈಖರಿ, ವಿಶಿಷ್ಟವಾದ ಅರ್ಥಸ್ಫುರಣ ಇವುಗಳಿಂದ ಅವು ವಿಜೃಂಭಿಸಿವೆ. ಕಾವ್ಯಸ್ಫೂರ್ತಿ, ಉಜ್ವಲ ಪ್ರತಿಭೆ, ದ್ಯುತಿವಡೆದ ದರ್ಶನ, ಔಚಿತ್ಯವರಿತು ಪ್ರಯೋಗಗೊಂಡ ಅಲಂಕಾರಗಳು. ಅರ್ಥಪೂರ್ಣ ಧ್ವನಿ, ಅನ್ಯಾದೃಶ ರಸೋತ್ಕರ್ಷ ಸನ್ನಿವೇಶ ನಿರ್ಮಾಣ– ಇವುಗಳಿಂದ ವಚನಕಾರರು ತಮ್ಮ ಕಾವ್ಯಕೋಶವನ್ನು ತುಂಬಿಕೊಟ್ಟರು. ಇಂತಹ ರೂಪವೈಭವದ ವಚನಕ್ಕೆ ಒಂದು ಸ್ವರೂಪ ಸೌಂದರ್ಯವೂ ಒದಗಿಬಂತು. ಅದು ಸ್ಥೂಲವಗಿ ಎರಡು ಮಜಲುಗಳಲ್ಲಿ

---

[೬] ನಿರ್ಲಜ್ಜೇಶ್ವರಾ ಎಂಬುದು ಸೂಳೆ ಸಂಕವ್ವೆಗೂ ಇದೆ. ಕೊಟ್ಟಣದ ಸೋಮಮ್ಮನಿಗೂ ಇದೆ. ಆದರೆ ಇದು ಮೊಟ್ಟೆ ಸಂಕವ್ವೆ ಯದೇ ಹೊರತು ಸೋಮವ್ವೆಯದಾಗಿರಲಾರದು. ಕಾರಣ ಅವಳ ಮೊದಲ ಕಾಯಕ ಸೂಳೆತನ. ಅಂದು ಆಗಿದ್ದ ಸೂಳೆ ಇಂದು ಶರಣೆ, ವಚನಕಾರ್ತಿ; ಆದರೂ ಹಳೆಯ ದೌರ್ಬಲ್ಯವನ್ನು ಹೇಳಿಕೊಳ್ಳುವುದರಲ್ಲಿ ಅಂಜಿಕೆ ಇಲ್ಲ. ಆತ್ಮವಂಚನೆ ಇಲ್ಲವೇ ಇಲ್ಲ.

ವಿಕಾಸಗೊಂಡಿರುವುದನ್ನು ಕಾಣುತ್ತೇವೆ: ಒಂದು ಭಾವಗೀತ, ಮತ್ತೊಂದು ಬೆಡಗು, ಒಂದು ಸರಳ ಮತ್ತೊಂದು ಸಂಕೀರ್ಣ. ಅದು ರಮ್ಯ ರಚನೆ, ಇದು ನವ್ಯ ವಿವೇಚನೆ; ಅದು ಶ್ರೀಸಾಮಾನ್ಯರಿಗಾಗಿ–ಶ್ರೀಮಂತರಿಗಾಗಿ! ಒಟ್ಟಿನಲ್ಲಿ ವಚನಕಾರರು ಸಾಮನ್ಯ ನಿಗೂ ಅರ್ಥವಾಗುವಂತಹ ಸರಳ ಸುಂದರ ಭಾವವಚನಗಳನ್ನು (ಭಾವ ಗೀತಾತ್ಮಕ ವಚನಗಳನ್ನು) ರಚಿಸಿದ್ದಾರೆ. ಪ್ರಕಾಂಡ ಪಂಡಿತರ ಬುದ್ಧಿ ಭಾವಗಳಿಗೆ ಆಹಾರವಾಗುವಂತಹ ಗಹನ ಗಂಭೀರ ಒಗಟೆಯ ರೂಪದ ಬೆಡಚನಗಳನ್ನು (ಬೆಡಗಿನ ವಚನಗ ಳನ್ನು) ರಚಿಸಿದ್ದಾರೆ. ಆದರೆ ಎರೂ ರೂಪದ ವಚನಗಳಲ್ಲಿ ಭಾವದ ಅಭಾವವಿಲ್ಲ. ಕಾವ್ಯಾಂಶದ

ಕೊರತೆಯಿಲ್ಲ, ಅಭಿವ್ಯಕ್ತಿಗೆ ಬಾಧೆಯಿಲ್ಲ. ಹಲವು ವಚನಗಳು ಆಧ್ಯಾತ್ಮ ಭೂಯಿಷ್ಠವಾದರೂ ಅವು ತಮ್ಮ ಆತ್ಮ ಸೌಂದರ್ಯದ ಮೂಲಕ ಕಾವ್ಯ ಸೌಂದ ರ್ಯವನ್ನು ಹೆಚ್ಚಿಸಿವೆ. ಜೀವ ಶಿವ ಆಗುವ ಸಾಧನೆ ಸಿದ್ಧಿಗಳ ಸಂದರ್ಭದಲ್ಲಿ ತನಗೆ ಹೆಂಡತಿಯಾದ ಲಕ್ಷಮ್ಮ ನೆರವಾಗಬೇಕೆಂದು ಆಯ್ದಕ್ಕಿ ಮಾರಯ್ಯ ಕೇಳಿಕೊಂಡಾಗ ಆಕೆ ಹೇಳುತ್ತಾಳೆ: ಆತ್ಮ, ಸಾಧನೆ ವ್ಯಕ್ತಿಗತ: ಸಮೂಹಿಕ ಕ್ರಿಯೆ (collective effort) ಅಲ್ಲ ಎಂದು ತಿಳಿಸುವ ಸಂದರ್ಬದಲ್ಲಿ ಈ ವಚನ ಹೇಳುತ್ತಾಳೆ. ಕೇಳಿ–

ಕೈದ ಕೊಡುವರಲ್ಲದೆ ಕಲಿತನವ ಕೊಡುವರುಂಟೆ ಮಾರಯ್ಯಾ?<br>
ಹೆಣ್ಣ ಕೊಡುವರಲ್ಲದೆ ಕೂಟಕೊಳಗಾದವರುಂಟೆ ಮಾರಯ್ಯಾ?<br>
ಕಳುವ ಚೋರಂಗೆ ಬಡವರೆಂದು ದಯೆಯುಂಟೆ ಮಾರಯ್ಯಾ?<br>
ಮನವನೊರೆದು ಭಕ್ತಿಯ ನೋಡಿಹೆನೆಂಬವಂಗೆ<br>
ಎಮ್ಮಲ್ಲಿ ಗುಣ ಸಂಪಾದಿಸಲಿಲ್ಲ ಮಾರಯ್ಯಾ!<br>
ಶೂಲವನೇರಿ ಸಂದಲ್ಲಿ ಮತ್ತಿನ್ನು ಸಾವಿಂಗೆ ಹಂಗುಪಡಲೇಕೆ?<br>
ಮಾರಯ್ಯಪ್ರಿಯ ಅಮಲೇಶ್ವರ ಲಿಂಗಾ, ನೀನೇ ಬಲ್ಲೆ.

ಶಿವಜ್ಞಾನಿಗೆ ಅನ್ಯರ ಹಂಗು ಬೇಡ ಎಂಬುದನ್ನು ಕೈದ (ಆಯುಧ) ಕೊಡಬಹುದಲ್ಲದೆ ಕಲಿತನವ ಕೊಡಲುಂಟೆ, ಹೆಣ್ಣು ಕೊಡಬಹುದು ಕೂಟದಲ್ಲಿ ಪಾಲ್ಗೊಳ್ಳಲು ಬಪ್ಪಡೆ– ಇತ್ಯಾದಿ ಸಹಜ ಸುಂದರ ಹಾಗೂ ಪರಿಣಾಮಕಾರಿ ಧೃಷ್ಟಾಂತಗಳಿಂದ 'ಶಿವ'ದ ನೆಲೆಯನ್ನು ಸಾಧಕ ತನ್ನ ಸ್ವಸಾಮರ್ಥ್ಯದಿಂದ ಸ್ವಪ್ರತಿಭೆಯಿಂದ ಸಾಧಿಸಿಕೊಳ್ಳಬೇಕು ಎಂಬುದನ್ನು ಕಾವ್ಯಮಯ ಶೈಲಿಯಲ್ಲಿ ಅಭಿವ್ಯಕ್ತಿಸಿದೆ.

ಭಕ್ತಿಯ ಭರದಲ್ಲಿ ವ್ಯಾಜನಿಂದೆಗೈವ ಸತ್ಯಕ್ಕನ ಮಾತುಗಳನ್ನು ಕೇಳಿ–<br>
ದೇವರ ದೇವ ನೀನೆಂದೆನಿಸಿಕೊಂಡೆ<br>
ಬಾಣನ ಬಾಗಿಲ ಕಾಯ್ವರೇನಯ್ಯಾ?<br>
ನಿತ್ಯ ತೃಪ್ತ ನೀನೆಂದೆನಿಸಿಕೊಂಡೆ<br>
ಚೆನ್ನ ಮನೆಯಲುಂಬರೇನಯ್ಯಾ?<br>
ಕರುಣಾಕರ ನೀನೆಂದೆನಿಸಿಕೊಂಡೆ<br>
ಸಿರಿಯಾಳನ ಮಗನ ಬೇಡುವರೇನಯ್ಯಾ?<br>
ನಿಮ್ಮ ಮಹಿಮೆಯ ನೀವೇ ಬಲ್ಲಿರಿ<br>
ಎನ್ನನುದ್ಧರಿಸಯ್ಯಾ ಶಂಭು ಜಕ್ಕೇಶ್ವರಾ

ಶಂಭು ಜಕ್ಕೇಶ್ವರ ದೇವರದೇವ ಆದರೆ ಬಾಣನ ಮನೆಯನು ಕಾಯ್ದು; ನಿತ್ಯತೃಪ್ತ. ಆದರೆ ಮದಾರ ಚೆನ್ನಯ್ಯನ ಮನೆಯಲ್ಲಿ ಅಂಬಲಿ ಬೇಡಿ ಪಡೆದ: ಕರುಣಾ ಸಮುದ್ರ. ಆದರೆ ಸಿರಿಯಾಳನ ಮಗ ಚೀಲಾಳನನ್ನು ಕಡಿಕಡಿದು ಕಬಳಿಸುವ ಕಟುಕನಾದ. ಈ ವಿರೋಧಾಭಾಸಗಳ ಹಿನ್ನಲೆಯಲ್ಲಿ ಸತ್ಯೆಕ್ಕನ ಪ್ರಾಂಜಲ ಭಕ್ತಿಯ ನೈಜ ಸ್ವರೂಪವನ್ನು ಗುರುತಿಸಬಹುದು. 'ಲಂಚವಂಚನಕ್ಕೆ ಕೈಯಾನದ ಭಾಷೆ' ಎಂಬಲ್ಲಿನ ಹಾಗೂ ಥಳಥಳಿಸಿ ಬೆಳಬೆಳಗಿ ಹೊಳೆವುತ್ತ ನಿಶ್ಯಬ್ದ ಬೆಹ್ಮವಾಗಿರ್ದನಯ್ಯಾ ಎಂಬಲ್ಲಿ ಪ್ರಾಸ ಪೂರ್ಣ ಭಾಷೆಯ ಬಳಕೆ ಮತ್ತು ಓಘವನ್ನು ಗುರುತಿಸಬಹುದು. ಅಂತೆಯೇ ಐಕ್ಯಸ್ಥಲದ ಐಕ್ಯನ ಸ್ಥಿತಿ ಹೇಗಿರುತ್ತದೆಂದರೆ–

ಉದಕದೊಳಗಣ ಕಿಚ್ಚಿನಂತೆ<br>
ವಾಯ ನುಂಗಿದ ಪರಿಮಳದಂತೆ<br>
ಉರಿಯೊಳಡಗಿದ ಕರ್ಪೂರದಂತೆ<br>
ಭಾವ ನಾಟಿದ ಬಯಲಿನಂತೆ<br>
ಅರಿವು ನುಂಗಿದ ಮರಹಿನಂತೆ

ಪುಂಖಾನುಪುಂಖವಾಗಿ ನೆರೆಯುವ ಉಪಮೆಗಳು ಎಷ್ಟು ಸರಳ. ಎಷ್ಟು ಸಹಜ. ಆದರೆ ಎಷ್ಟು ಪರಿಣಾಮಾರಿ. ಇದಕ್ಕಿಂತಲೂ ಸರಳವಾಗಿ ಲಿಂಗಾಂಗ ಸಾಮರಸ್ಯದ ಸಹಜಾನುಭವವನ್ನು ಅಭಿವ್ಯಕ್ತಿಸಲು ಸಾಧ್ಯವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಹೇಳಿಕೊಂಡಿದ್ದಾಳೆ ಸತ್ಯಕ್ಕ.

ಇದೇ ರೀತಿ ಗೊಗ್ಗವ್ವೆಯ ಉಪಮೆಗಳನ್ನು ನೋಡಿ– 'ಮಾರುತದಲ್ಲಿ ಬೆರೆದ ಗಂಧದಂತೆ, ಸುರತದಲ್ಲಿ ಬೆರೆದ ಸುಖದಂತೆ, ಮಚ್ಚಿನಲ್ಲಿ (ಸಲುಗೆಯಿಂದ) ಕೊಡುವ ಉಚಿತದಂತೆ, ಈ ಸಹಜಾಭಿವ್ಯಕ್ತಿ ವಚನಕಾರರಿಗೆ ಮಾತ್ರ ಮೀಸಲೊ ಎನ್ನುವಷ್ಟು ಸುಂದರ!

ಅಕ್ಕನಾಗಮ್ಮನ ಈ ಶೋಕಗೀತೆ (Elegy) ನೋಡಿ–

ಭಕ್ತಿಯ ತವನಿಧಿಯೆ ಬಸವಾ
ಮುಕ್ತಿಯ ಮೂರುತಿಯೆ ಬಸವಾ
ಲಿಂಗ ಜಂಗಮದ ಚೈತನ್ಯವೆ ಬಸವಾ
ನಿಮ್ಮನಗಲಿಯಾನೆಂತು ಸೈರಿಸುವೆನು, ಎಲೆ ಅಯ್ಯಾ ಬಸವಾ?
ಎಲೆ ಪರಮ ಗುರು ಬಸವಾ
ಆಹಾ! ಎನ್ನಂತರಂಗದ ಜ್ಯೋತಿಯೆ ಬಸವಾ
ನಿಮ್ಮ ಒಕ್ಕಮಿಕ್ಕ ಶೇಷಪ್ರಸಾದವನಿಕ್ಕಿ
ಎನ್ನ ಪಾವನವ ಮಾಡಿ ಉಳುಹಿದೆಯಲ್ಲಾ ಬಸವಲಿಂಗವೆ!
ಎನಗಿನ್ನಾರು ಗತಿ ಮತಿ ಹೇಳಯ್ಯಾ ಬಸವಣ್ಣಾ ನೀನಲ್ಲದೆ!
ಬಸವಣ್ಣ ಪ್ರಿಯ ಚೆನ್ನಸಂಗಯ್ಯಾ
ನೀವಗಲಿದಡೆ ಎನ್ನ ಪ್ರಾಣ ನಿಮ್ಮೊಳಗಗಲಬಲ್ಲುದೆ ಬಸವಾ?

ಎಂತಹ ಆರ್ತತೆ! ಎಂತಹ ತೀವ್ರತೆ! ಎಂತಹ ಸಂವೇದನೆ! ಇಲ್ಲಿ ಬಳಕೆಯಾದ ಭಾಷೆಯಲ್ಲಿ ಎಂತಹ ಸಿದ್ದಿ ಇದೆ! ಶೈಲಿ ಶಾಸ್ತ್ರ ಜ್ಞನಿಗೆ ಈ ವಚನ ಹೆಜ್ಜೇನು. ಶೈಲಿಯ ಸಮಾನಾಂತರತೆ (Parallism) ಯನ್ನು ಗುರುತಿಸಿ ಆನಂದಿಸದಿರನು. ಮತ್ತೊಂದು ವಚನ: ಗಣೇಶ ಮಸಣಯ್ಯಗಳ ಪುಣ್ಯಸ್ತ್ರೀ ಹಾಡಿದ್ದಾಳೆ:

ಹೊನ್ನ ಬಿಟ್ಟು ಲಿಂಗವನೊಲಿಸಬೇಕೆಂಬರು
ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ದುವೆ !
ಹೆಣ್ಣಬಿಟ್ಟು ಲಿಂಗವನೊಲಿಸಬೇಕೆಂಬರು
ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ದವೆ !
ಮಣ್ಣಬಿಟ್ಟು ಲಿಂಗವನೊಲಿಸಬೇಕೆಂಬರು
ಮಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ದವೆ !
ಅಂಗವ ಬಿಟ್ಟು ಲಿಂಗವನೊಲಿಸಬೇಕೆಂಬರು
ಅಂಗಕ್ಕೆಯೂ ಲಿಂಗಕ್ಕೆಯೂ ವಿರುದ್ದವೆ !
ಇಂದ್ರಿಯಂಗಳ ಬಿಟ್ಟು ಲಿಂಗವನೊಲಿಸಬೇಕೆಂಬರು
ಇಂದ್ರಿಯಗಳಿಗೂ ಲಿಂಗಕ್ಕೆಯೂ ವಿರುದ್ದವೆ !
ಜಗವಬಿಟ್ಟು ಲಿಂಗವನೊಲಿಸಬೇಕೆಂಬರು
ಜಗಕೆಯೂ ಲಿಂಗಕ್ಕೆಯೂ ವಿರುದ್ದವೆ !
ಇದು ಕಾರಣ, ಪರಂಜ್ಯೋತಿ ಪರಮ ಕರುಣಿ
ಪರಮ ಶಾಂತನೆಂಬ ಲಿಂಗವು
ಕೋಪದ ಮುನಿಸನರಿದಡೆ ಕಾಣಬಹುದು. ಮರೆದೆಡೆ ಕಾಣಬಾರದು,
ಅರಿವಿಂದ ಕಂಡೊದಗಿದ ಸುಖವು ಮಸಣಯ್ಯ ಪ್ರಿಯ ಗಜೇಶ್ವರಾ !

‘ನನ್ನ ಬಿಟ್ಟು ದೇವರಿಲ್ಲ, ಮಣ್ಣು ಬಿಟ್ಟು ಮಡಕೆ ಇಲ್ಲ’ ಎಂದಂತೆ ಜಗತ್ತನ್ನು ಬಿಟ್ಟು ಜೀವನೂ ಇಲ್ಲ, ದೇವನೂ ಇಲ್ಲ. ಇಲ್ಲಿ ಬದುಕು ತುಂಬಾ ಪ್ರಸ್ತುತ. ಮಣ್ಣಿನ ಮೋಹ ಜೀವನಿಗೆಂತೊ ದೇವನಿಗೂ ಅಂತೆ ಇದೆ. ಇಂತಹ ಜೀವನದ ಚಿಗುಟತನವನ್ನೂ, ಅಲ್ಲಿ ಅರಿವು ಅಥವಾ ಜ್ಞಾನದ ಹಿರಿತನವನ್ನೂ ಹೇಗೆ ವಚನಕಾರ್ತಿ ತರ್ಕಬದ್ಧವಾಗಿ ವಾದಸರಣಿಯಲ್ಲಿ ಮಾತು ಪೋಣಿಸಿ ಪರಿಣಾಮಿಸಿದ್ದಾಳೆ ಎಂಬುದನ್ನು ಇಲ್ಲಿ ಗಮನಿಸಬಹುದು.

ಉಂಡೊಡೆಯರಲ್ಲಿ ಕೊಂಬ ಪ್ರಸಾದ ಕಾರಿದ ಕೂಳು.
ಸಣ್ಣವರಲ್ಲಿ ಕೊಂಬ ಪ್ರಸಾದ ಸಂತೆಯ ಸೂಳೆಯ ಎಂಜಲು
ಅಳಿಯನಲ್ಲಿ ಕೊಂಬ ಪ್ರಸಾದ ಅಮೇಧ್ಯ
ಮಕ್ಕಳಲ್ಲಿ ಕೊಂಬ ಪ್ರಸಾದ ಗೋಮಾಂಸ
ತಮ್ಮನಲ್ಲಿ ಕೊಂಬ ಪ್ರಸಾದ ಸಿಂಗಿ
ನಂಟರಲ್ಲಿ ಕೊಂಬ ಪ್ರಸಾದ ನರಮಾಂಸ
ವಂದಿಸಿ, ನಿಂದಿಸಿ ಕೊಂಬ ಪ್ರಸಾದವ
ಉರಿಲಿಂಗ ಪೆದ್ದಿಗಳರಸನೊಲ್ಲನವ್ವಾ

ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆಯ ಈ ವಚನದಲ್ಲಿ ಸರ್ವಜ್ಞನ ‘ಹಂಗಿನರಮನೆಗಿಂತ ವಿಂಗಡದ ಗುಡಿಲೇಸು’ ಭಂಗಪ ಟ್ಟುಂಬ ಬಿಸಿ ಅನ್ನಕ್ಕಿಂತಲೂ ತಣಗಳನ್ನವೆ ಲೇಸು’ ಎಂಬ ಸ್ವಾಭಿಮಾನದ ಸ್ವಯಂತೃಪ್ತಿಯ ಧ್ವನಿ ಇದೆ. ಇಂತಹ ನೀತಿ, ಆಧ್ಯಾತ್ಮ, ಕಮನೀಯ ಕಾವ್ಯಾಂಶ–ಇವುಗಳಿಂದ ಶರಣ ಅಥವಾ ಶರಣೆ ತಪಿ ನಡೆದರೆ ‘ಕಾದ ಕತ್ತಿಯಲ್ಲಿ ಕಿವಿ ಮೂಗ ಕೊಯ್ವರಯ್ಯ’ ಎಂಬ ಪರಿಣಾಮಕಾರಿ ಭಾಷೆಯ ದುಡಿಮೆ, ಉಪಮೆ, ರೂಪಕಗಳು, ದೃಷ್ಟಾಂತಗಳು ಇವೇ ಮೊದಲಾದವುಗಳಿಂದ ಕಿರು ವಚ ನಕಾರ್ತಿಯರ ಅಭಿವ್ಯಕ್ತಿ ಅನನ್ಯವೊ ಎಂಬಂತೆ ಭಾಸವಾಗುತ್ತದೆ. ಪಂಡಿತ ವರ್ಗವನ್ನು ತೃಪ್ತಿಪಡಿಸಲು , ಬುದ್ಧಿ ಕಸರತ್ತಿನ ಬೆಡ–ಚನಗಳನ್ನು (ಬೆಡಗಿನ ವಚನಗಳನ್ನು) ಕಿರು ವಚನಕಾರ್ತಿಯರು ಕೊಟ್ಟಿದ್ದಾರೆ. ಇದಕ್ಕಿಈ ಹಿಂದೆ ಗಮನಿಸಿದ ಕದಿರ ಕಾಯಕದ ರೆಮ್ಮವ್ವೆಯ ‘ಎಲ್ಲರ ಹೆಂಡಿರು ತೊಳಸಿಕ್ಕುವರು. . .’ ಎಂಬ ವಚನ ನಿದರ್ಶನ.[೭]

**೭. ಉಪಸಂಹಾರ**

ಈ ಸುಧೀರ್ಘ ಉಪನ್ಯಾಸದ ಅಂತ್ಯದಲ್ಲಿ ನಾವು ನಡೆದು ಬಂದ ದಾರಿಯನ್ನು ಒಮ್ಮೆ ಹಿಂತಿರುಗಿ ನೋಡಲಿಚ್ಛಿಸುತ್ತೇನೆ. ಈವರೆಗೆ ನಾವು ಸುಮಾರು ಇಪ್ಪತ್ತೈದು ಜನ ಕಿರಿಯ ವಚನಕಾರ್ತಿಯರ ಕೂಡೆ ಸಂಭಾಷಿಸಿದೆವು. ಅವರು ಪತಿಹಿತವರು, ಕಾಯಕ ನಿಷ್ಠೆ ಉಳ್ಳವರು, ಶಿವವನ್ನು ಸಾಧಿಸಿದ ಶುದ್ಧ ಚೇತನರು. ಇಹದಲ್ಲೇ ಇದ್ದು ಪರವನ್ನು ಸಿದ್ಧಿಸಿಕೊಂಡ ಸಿದ್ಧ ಜೀವರು ! ತಾವು ಮಹಾಜ್ಞಾನಿಗಳೇ ಇದ್ದರೂ ತಮ್ಮ ತಮ್ಮ ಪತಿಗಳನ್ನು ಓಲೈಸಿಕೊಂಡೇ ಬೆಳೆದವರು. ಅವರಿಗೆ ನೆರಳಾಗಿ ಅಲ್ಲ. ಹೊರೆ ಯಾಗಿ ಅಲ್ಲ, ಬೆಳಕಾಗಿ ಆಯ್ದಕ್ಕಿ ಲಕ್ಕಮ್ಮ ಅಂಥವಳು. ಮೋಳಿಗೆ ಮಹಾದೇವಿ ಅಂಥವಳು, ನೀಲಮ್ಮ, ಗಂಗಮ್ಮ, ಕಾಳವ್ವೆ ಅಂಥವರು. ಅವರ ಆದರ್ಶ ಅನುಕರಣೀಯ, ಅನುಷ್ಠಾನ ಯೋಗ್ಯ. ತಮ್ಮ ವಚನಾಭಿವ್ಯಕ್ತಿಯಲ್ಲಿ ತಮ್ಮ ಗಂಡನನ್ನಾಗಲಿ, ಅವನ ವಚನ ರಚನೆಯ ಅಂಕಿತವನ್ನಾಗಲಿ ಮರೆತವರಲ್ಲ, ತಿರಸ್ಕರಿಸಿದವರಲ್ಲ, ಜಡೆಯಂತೆ ಒಡ ಬೆರೆತು ಬದುಕಿದವರು. ಅವರ ಕಾಯಕ ನಿಷ್ಠೆ ಅನ್ಯಾದೃಶ. ಸ್ವತಂತ್ರವಾಗಿ ಅನ್ಯರಿಗೆ ಹಂಗಾಗದೆ ತಮ್ಮ ಕಾಯಕದ ಮೂಲಕವೇ ತಾವು ಬದುಕಿ ಅನ್ಯರಿಗೆ ಬದುಕುಕೊಟ್ಟವರು. ಆ ದಿಸೆಯಲ್ಲಿ ಬಹುದೂರವಾಗಿ ‘ಶಿವ’ಆದವರು ‘ಶೂನ್ಯ’ ಸಾಧಿಸಿದವರು. ಅಂತೆಯೆ ಸಾಮಾಜಿಕ ಸಾಂಸ್ಕೃತಿಕ ಆಂದೋಲನಕ್ಕೆ ವೈಚಾರಿಕತೆಯ ಹಿನ್ನೆಲೆಯನ್ನು ಒದಗಿಸಿಕೊಟ್ಟವರು. ‘ಹದ ಮಣ್ಣಲ್ಲದೆ ಮಡಕೆಯಾಗದು’ ಇದು ಕುಂಬಾರ ಗುಂಡಯ್ಯನ ಪುಣ್ಯಸ್ತ್ರೀಯ ಸಹಜಾನುಭವ. ‘ಹದ ತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಲ್ಲ’ – ಇದು ಕೊಟ್ಟಣ ಕುಟ್ಟುವ ಕಾಯಕದ ಸೋಮವ್ವೆಯ ಅಂಬೋಣ. ‘ಕೈ ತಪ್ಪಿ ಕೆತ್ತಲು ಕಾಲಿಗೆ ಮೂಲ’– ಇದು ಬಾಚಿ ಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕೊಡುವ ಎಚ್ಚರ. ಇಂಥೆಡೆಗಳಲ್ಲಿ ಕಾವ್ಯಾಂಶಕ್ಕಾಗಲಿ, ತತ್ತ್ವ ಬೋಧೆಗಾಗಲಿ, ಜೀವನ ದರ್ಶನಕ್ಕಾಗಲಿ ಅವರು ಹುಡುಕಾಡುವುದಿಲ್ಲ. ನಾವು ತಡಕಾಡಬೇಕಿಲ್ಲ. ಅಂತಹ ಸಹಜಾಭಿ ವ್ಯಕ್ತಿಗಳು ತೋರಿರುವ

---

[೭] ಪೂರ್ವೋಕ್ತ.

ವಚನಕಾರ್ತಿಯರ ಸಂಖ್ಯೆ ಬಹಳವಿಲ್ಲ. ಸಾಹಿತ್ಯಿಕವಾಗಿ ಅಕ್ಕಮಹಾದೇವಿ ಇತರ ಯಾವುದೇ ಶ್ರೇಷ್ಠ ವಚನಕಾರನ ಮಟ್ಟಕ್ಕೂ ಬರುತ್ತಾಳೆ. ಬೌದ್ಧಿಕ ಪ್ರಖರತೆಯಲ್ಲಿ ಮುಕ್ತಾಯಕ್ಕ ಇತರರ ಆಲೋಚನೆಯ ಮಟ್ಟಕ್ಕೆ ಏರಬಲ್ಲಳು. ಸ್ತ್ರೀ ಸಹಜವಾದ ಆವೇಶ ಪ್ರಿಯತೆ ನೀಲಲೋಚನೆಯಲ್ಲಿ ಕಾಣುತ್ತದೆ. ಲಿಂಗಮ್ಮ, ಸತ್ಯಕ್ಕರಲ್ಲಿ ಕೆಲವು ಒಳ್ಳೆಯ ವಚನಗಳು ಸಿಕ್ಕುತ್ತವೆ. ರಾಯಮ್ಮನ ಮಾತಿನ ಕ್ರೌರ್ಯ ನಮಗೆ ಪ್ರಿಯವಾಗುತ್ತದೆ. ಇಷ್ಟು ಬಿಟ್ಟರೆ ಉಳಿದ ವಚನಕಾರ್ತಿಯರು ಬಹುಮಟ್ಟಿಗೆ ಸಪ್ಪೆಯಾಗಿ ಕಾಣುತ್ತಾರೆ. 'ಇದಕ್ಕೆ ಕಾರಣ ಅವರೂ ಪುರುಷರಂತೆಯೇ ಆಧ್ಯಾತ್ಮದ ವಿಷಯ ಮಾತಾಡಲು ಆರಂಭಿಸಿದ್ದು. . .ಗಂಡಸರಂತೆಯೇ ಅವರೂ ಸಾಧಕಿ ಯರಾದರು. ಅವರಿಗೂ ಆಧ್ಯಾತ್ಮ ಸಾಧನೆಯಲ್ಲಿ ಅವಕಾಶ ದೊರೆಯಿತು. ಇದೆಲ್ಲ ಸರಿಯೇ, ಆ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ಅವರೂ ಹೆಣ್ಣಾಗಿ ತಮ್ಮ ಸಮಸ್ಯೆಗಳನ್ನಾಗಲಿ, ಭಾವನೆಗಳನ್ನಾಗಲಿ ತಮಗೆ ದೊರೆತ ಬಿಡುಗಡೆಯನ್ನಾಗಲಿ ಅಭಿವ್ಯಕ್ತಗೊ ಳಿಸಲು ಪ್ರಯತ್ನಿಸಲಿಲ್ಲ. ಭಾಷೆ, ಅಭಿವ್ಯಕ್ತಿ, ತೂಪಕಗಳು, ಆಲೋಚನಾ ವಿಕಾಸ ಇಲ್ಲೆಲ್ಲ ವಚನಕಾರರು ಅವರಿಗೆ ಮಾದರಿಯಾದರು. ಅವರನ್ನು ಅನುಕರಿಸಿ ಅವರಂತೆ ಮಾತನಾಡುವುದೇ ವಚನಕಾರ್ತಿಯರಿಗೆ ಪ್ರಿಯವಾಯಿತು. ಅವರಿಗೆ ನಿಕಟ ಸಂಪರ್ಕ ವಿದ್ದ ಕ್ಷೇತ್ರದ ಅನುಭಾವಗಳತ್ತ ಮನಸ್ಸು ಕೊಟ್ಟಿದ್ದರೆ ಬಹುಶಃ ಇನ್ನೂ ಉತ್ಕೃಷ್ಟವಾದ ಸಾಹಿತ್ಯ ಅವರಿಂದ ಲಭ್ಯವಾಗುತ್ತಿತ್ತು.'[೮] ಡಾ॥ ಮೂರ್ತಿಯವರ ಈ ಹೇಳಿಕೆ ಅರ್ಧಸತ್ಯ. ಅಲ್ಲದೆ, ಇಪ್ಪತ್ತನೆಯ ಶತಮಾನದ ವೇದಿಕೆಯ ಮೇಲೆ ನಿಂತು ಹನ್ನೆರಡನೆಯ ಶತಮಾನದ ಲೇಖಕಿಗೆ ನಿರ್ದೇಶನ ನೀಡುವುದು ಸೂಕ್ತ ಅನ್ನಿಸುವುದಿಲ್ಲ.

ಏನೇ ಇರಲಿ, ಒಂದೇ ಒಂದು ಯುಗದ ಅವಧಿಯಲ್ಲಿ ಇಷ್ಟು ಜನ– ಎಲ್ಲರೂ ಪ್ರಬುದ್ಧೆಯರಲ್ಲದಿದ್ದರೂ ಕೆಲವರಾದರೂ ವಿಚಾ ರವಂತ ವಚನಕಾರ್ತಿಯರನ್ನು ಕಂಡ ಸುಯೋಗ ಕನ್ನಡದ್ದು, ಕರ್ನಾಟಕದ್ದು. ಅಂತೆಯೇ ವಿಷಾದದ ಸಂಗತಿ ಎಂದರೆ ಹನ್ನೆರ ಡನೆಯ ಶತಮಾನ ಆದಮೇಲೆ ಸುಮಾರು ಎಂಟು ನೂರು ವರ್ಷಗಳ ಸುದೀರ್ಘ ಅವಧಿಯಲ್ಲಿ ಒಬ್ಬಳೂ ವಚನಕಾರ್ತಿ ಯಾಗಲಿ ಕವಯಿತ್ರಿಯಾಗಲಿ ಸುಳಿಯದಿರುವುದು ಬಹು ದೊಡ್ಡ ದುರಂತ ! ಈ ಶೂನ್ಯತೆಗೆ ಕಾರಣ ಅಣ್ಣನ ಯುಗದಲ್ಲಿದ್ದ ಸ್ವಾತಂತ್ರ್ಯವನ್ನು ಸ್ತ್ರೀ ಕಳೆದುಕೊಂಡಿದ್ದು ಎನ್ನಿಸುತ್ತದೆ. ಕ್ರಾಂ ತಿಕಾರಿ ಕನಸುಗಳನ್ನು ಮುಂದಿಟ್ಟುಕೊಂಡು ಸಿಡಿದೆದ್ದ ವೀರಶೈವ ಮತ್ತೆ ಸಂಪ್ರದಾ ಯದ ಸಂಕೋಲೆಯಲ್ಲಿ ಸ್ಥಗಿತವಾದದ್ದು, ಪುರೋಹಿತ ಷಾಹಿಯ ದುರಾಕ್ರಮಣ ಎನ್ನದೆ ವಿಧಿಯಿಲ್ಲ. ಅಂತೂ ವೀರಶೈವ ಮತ್ತೆ ಹತ್ತರಲ್ಲಿ ಹನ್ನೊಂದಾಯಿತು ಎಂಬುದು ವಿಷಾದನೀಯ ಸಂಗತಿ.

---

[೮] ಡಾ.ಎಂ ಚಿದಾನಂದಮೂರ್ತಿ, ವಚನ ಸಾಹಿತ್ಯ, ಪು. ೧೫೩ (೧೯೭೫)

## ಗ್ರಂಥಋಣ


೧.ಡಾ. ಎಂ. ಚಿದಾನಂದ ಮೂರ್ತಿ, ವಚನ ಸಾಹಿತ್ಯ (೧೯೭೫)
೨. ಶೂನ್ಯ ಸಂಪಾದನೆಗೊಂದು ಮುನ್ನುಡಿ, ಡಾ.ಸಾ.ಶಿ. ಮರುಳಯ್ಯ
೩.ಬಸವ ಯುಗದ ಶಿವ ಶರಣೆಯರು– ಸೌ. ಲಲ್ಲೇಶ್ವರಿ ಶಂ. ಮೂಗಿ
೪.ಕನ್ನಡ ಸಾಹಿತ್ಯ ಚರಿತ್ರೆ (ನಾಲ್ಕನೆಯ ಸಂಪುಟ)– ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
೫.ಶಿವ ಶರಣೆಯರ ವಚನಗಳು (ಸಮಗ್ರ ಸಂಪುಟ)– ಸಂ.ಡಾ.ಆರ್.ಸಿ. ಹಿರೇಮಠ
೬.ಅಭಿವ್ಯಕ್ತಿ– ಡಾ.ಸಾ.ಶಿ. ಮರುಳಯ್ಯ